


ರಾಸಿದರ್ಶನ

ಅಭಿನಂದನ ಗ್ರಂಥ

ರಾಸದರ್ಶನ

ಸಮೇತನಹಳ್ಳಿ ರಾಮರಾಯರ ಅಭಿನಂದನ ಗ್ರಂಥ

ಜನನ ನಿಧನ 15-10-1999

ಸಂಪಾದಕರು

ಪ್ರೊ|| ಜಿ. ಅಶ್ವತ್ಥನಾರಾಯಣ

ಪ್ರೊ|| ಎಸ್. ಶ್ರೀನಿವಾಸನ್

ಭಾರತಿ ಕಾಸರಗೋಡ್

ಪ್ರಕಾಶಕರು

ರಾಸ ಪ್ರಕಾಶನ

'ಕೋಟೆಮನೆ', ಗೋಕುಲ, ಮೈಸೂರು ೫೭೦ ೦೦೨

RASADARSHANA—a felicitation volume presented to Sri Samethanahalli Rama Rao by Samethanahalli Rama Rao Abhinanadana Samithi, Bangalore; Published by Rasa Prakashana, 518, Kotemane, 4th Main Road, Gokula Third Stage, Mysore 2; 1998 ; demy octavo Pages : xvi + 380; Price Rs. 200

ಪ್ರಕಟಣೆ : ೧೯೯೮

ಬೆಲೆ : ಎರಡು ನೂರು ರೂಪಾಯಿಗಳು

2017ರಲ್ಲಿ ವಿಳಾಸ
ಭಾರತೀ [illegible]
G-5 ಶ್ರೀನಿಧಿ ಫ್ಲಾಟ್ ನಂ 1 ರವಿನಗರ
ಇಟ್ಟಮಡು ಬನಶಂಕರಿ 3ನೇ ಹಂತ
ಬೆಂಗಳೂರು 560085

ಪ್ರಕಾಶಕರು

ರಾಸ ಪ್ರಕಾಶನ/ ೫೧೮, 'ಕೋಟೆಮನೆ' ೪ನೆಯ ಮುಖ್ಯರಸ್ತೆ
ಗೋಕುಲ ಮೂರನೆಯ ಹಂತ, ಮೈಸೂರು–೫೭೦ ೦೦೨

(ಮೊ) 9886387923
ಮನೆ 30611107

ಮುದ್ರಕರು

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು 14

ಅರ್ಪಣೆ

ಕನ್ನಡ ಸಾಹಿತಿಗಳೂ 'ಶಾಕುಂತಲಾ' ಮಹಾಕಾವ್ಯಕರ್ತೃಗಳೂ
ಕಳೆದ ಅರುವತ್ತು ವರ್ಷಗಳಿಂದಲೂ ನಾಡು ನುಡಿ ಸೇವೆಯಲ್ಲಿ
ನಿರತರಾದ

ಶ್ರೀ ಸನೋತಸಹಳ್ಳಿ ರಾಮರಾಯರಿಗೆ

ಅವರ ಎಂಬತ್ತನೆಯ ವರ್ಷದ ಹುಟ್ಟುಹಬ್ಬದ
ಸಂದರ್ಭದಲ್ಲಿ
ಮಿತ್ರರೂ ಅಭಿಮಾನಿಗಳೂ ಅರ್ಪಿಸಿದ ಅಭಿನಂದನಾ ಗ್ರಂಥ

ಸಮೇತನಹಳ್ಳಿ ರಾಮರಾವ್ ಅಭಿನಂದನಾ ಸಮಿತಿ

ಬೆಂಗಳೂರು

ಗೌರವಾಧ್ಯಕ್ಷರು

ಶ್ರೀ ನಿಟ್ಟೂರು ಶ್ರೀನಿವಾಸರಾವ್

ಕರ್ಣಾಟಕದ ಮಾಜಿ ಮುಖ್ಯ ನ್ಯಾಯಾಧೀಶರು

ಕಾರ್ಯಾಧ್ಯಕ್ಷರು

ಪದ್ಮಭೂಷಣ ಡಾ॥ ವಿ. ದೊರೆಸ್ವಾಮಿ ಅಯ್ಯಂಗಾರ್

ಪ್ರಖ್ಯಾತ ವೈಣಿಕ ವಿದ್ವಾಂಸರು

ಉಪಾಧ್ಯಕ್ಷರು

ಶ್ರೀ ಜಿ. ನಾರಾಯಣ

ಬೆಂಗಳೂರಿನ ಮಾಜಿ ಮೇಯರ್ ಮತ್ತು ಕನ್ನಡ ಪ್ರಾಧಿಕಾರದ ಅಧ್ಯಕ್ಷರು

ಸದಸ್ಯರುಗಳು

ಸರ್ವಶ್ರೀ/ಶ್ರೀಮತಿ

ವಿದ್ವಾನ್ ಎನ್. ರಂಗನಾಥಶರ್ಮಾ
ಎನ್. ಬಸವಾರಾಧ್ಯ
ವಿದ್ವಾನ್ ತಾಳ್ತಜೆ ಕೇಶವಭಟ್ಟ
ವಿದುಷಿ ತಿರುಮಲೆ ಶಾರದಾ
ಸಿ. ಕೆ. ನಾಗರಾಜರಾವ್
ಡಿ. ನಂ. ಶೇಷಾದ್ರಿ
ಗುರುಡನಗಿರಿ ನಾಗರಾಜ್
ವಿದುಷಿ ಶಕುಂತಲಾಬಾಯಿ ಪಾಂಡುರಂಗರಾವ್
ಎಸ್. ಹರ್ಷವರ್ಧನ
ಅರುಣ ಹರ್ಷವರ್ಧನ
ಕೆ. ಗೋಪಿನಾಥಶರ್ಮ
ಇಂದಿರಾ ಗೋಪೀನಾಥಶರ್ಮ
ರಂಗರಾವ್ ಕಾಸರಗೋಡ್
ಎಸ್. ವಿಷ್ಣುವರ್ಧನರಾವ್
ನಂ. ನಾಗಲಕ್ಷ್ಮಿ

ಗ್ರಂಥಸಂಪಾದಕ ಸಮಿತಿ

ಪ್ರೊ॥ ಜಿ. ಅಶ್ವತ್ಥನಾರಾಯಣ

ಪ್ರೊ॥ ಎಸ್. ಶ್ರೀನಿವಾಸನ್

ಭಾರತಿ ಕಾಸರಗೋಡ್

ಗೌರವಾಧ್ಯಕ್ಷರ ಹಾರೈಕೆ

ಸನ್ಮಾನ್ಯ ಮಿತ್ರರಾದ ಸಮೇತನಹಳ್ಳಿ ರಾಮರಾಯರಿಗೆ ಎಂಭತ್ತು ವರ್ಷ ತುಂಬುವ ಶುಭಸನ್ನಿವೇಶದಲ್ಲಿ ಅವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಏರ್ಪಡಿಸ ತೊಡಗಿರುವುದು ಅತ್ಯಂತ ಉಚಿತವೇ ಆಗಿದೆ. ಅವರದು ಎಲ್ಲಾ ದೃಷ್ಟಿಯಿಂದಲೂ ಸಾರ್ಥಕ ಜೀವನ. ಅದರಲ್ಲೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರಿಂದ ಲಭಿಸಿದ ಕೊಡುಗೆ ಮಹತ್ತರವಾದುದು. ಬಾಲ್ಯದಿಂದ ಅವರ ಒಲವು ನೈಜವಾಗಿ ಸಾಹಿತ್ಯಕ್ಷೇತ್ರದ ಮೇಲೆಯೇ ಹುಟ್ಟಿಬೆಳೆದು ಬಂದಿದೆ. ಅವರ ಕನ್ನಡ ಸಾಹಿತ್ಯ ಪ್ರೇಮ, ಅವರು ಕಾಲೇಜಿನಲ್ಲಿ ಸಾಹಿತ್ಯ ಅಭ್ಯಸಿಸಿ ಪದವಿ ಪಡೆಯಬೇಕೆಂಬ ಆಸೆಯನ್ನು ಸ್ವಾಭಾವಿಕವಾಗಿ ಹುಟ್ಟಿಸಿತು. ಆದರೆ ಅವರ ಕೌಟುಂಬಿಕ ಪರಿಸ್ಥಿತಿಯ ಕಾರಣದಿಂದ ಸಾಧ್ಯವಾಗಲಿಲ್ಲ. ಆದರೂ ಅವರು ನಮ್ಮ ಪ್ರಾಚೀನ ಸಾಹಿತ್ಯವನ್ನೂ ಪ್ರಚಲಿತ ಸಾಹಿತ್ಯವನ್ನೂ ಅದರ ಅಂಗಗಳಾದ ವ್ಯಾಕರಣ, ಛಂದಸ್ಸು ಅಲಂಕಾರ ಮುಂತಾದ ಶಾಸ್ತ್ರಗಳನ್ನು ಅಭ್ಯಸಿಸಿ ಅವುಗಳಲ್ಲಿ ಪಾರಂಗತರಾದರು. ಕಾವ್ಯ ಮೊದಲುಗೊಂಡು ವಿವಿಧ ಪ್ರಕಾರಗಳ ಗ್ರಂಥರಚನೆ ಮಾಡ ತೊಡಗಿದರು. ಇವೆಲ್ಲಾ ಅತ್ಯುತ್ತಮ ಗುಣಮಟ್ಟದ್ದಾಗಿದ್ದು ಜನರ ಮನ್ನಣೆಗೂ ವಿದ್ವಾಂಸರ ಹಾಗೂ ಹಿರಿಯ ಸಾಹಿತಿಗಳ ಪ್ರಶಂಸೆಗೂ ಪಾತ್ರವಾದುದಲ್ಲದೆ, ಇವುಗಳಲ್ಲಿ ಕೆಲವು ಶಾಲಾಮಟ್ಟದಲ್ಲಿ ಅಲ್ಲದೆ ಕಾಲೇಜು ಮಟ್ಟದಲ್ಲಿಯೂ ಪಠ್ಯಪುಸ್ತಕಗಳಾಗಿ ಗೊತ್ತಾದುವು. ಸಣ್ಣಕತೆ, ಕಾದಂಬರಿ, ನಾಟಕ, ಜೀವನಚರಿತ್ರೆ, ಇತರ ಭಾಷೆಗಳ ಗ್ರಂಥಗಳ ಅನುವಾದ ಈ ಮತ್ತು ಇತರ ಪ್ರಕಾರಗಳಲ್ಲಿ ಅತ್ಯುತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರ ಕೆಲವು ಕಾದಂಬರಿಗಳು ಮತ್ತು ಸಣ್ಣ ಕತೆಗಳ ವಸ್ತು ಅವರ ಆಧುನಿಕ ಸಮಾಜಕ್ಕೆ ಸಂಬಂಧಪಟ್ಟ ಅನುಭವದಿಂದ ಲಭ್ಯವಾದದ್ದಾದರೂ ಅವರ ಹಲವಾರು ಕಾದಂಬರಿಗಳು ಮತ್ತು ನಾಟಕಗಳು ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟವಾಗಿವೆ. ಇವೆಲ್ಲ ಸಮಗ್ರವಾದ ಮತ್ತು ಆಳವಾದ ಅಧ್ಯಯನದ ಫಲ. ಮತ್ತು ಕೆಲವು, ಅವುಗಳಿಗೆ ಸಂಬಂಧಪಟ್ಟ ಐತಿಹಾಸಿಕ ಸ್ಥಳಗಳಿಗೆ ಹೋಗಿ ಪ್ರತ್ಯಕ್ಷವಾಗಿ ಪರಿಶೀಲನೆಯನಂತರ ರಚಿತವಾದುವು. ಇದು ಅವರ ಶ್ರದ್ಧೆ, ಪಾಂಡಿತ್ಯ ಮತ್ತು ಕೈಗೊಂಡ ಕಾರ್ಯದಲ್ಲಿನ ತನ್ಮಯತೆಯನ್ನು ತೋರಿಸುತ್ತದೆ.

ಇದೇ ಸಂದರ್ಭದಲ್ಲಿ ಅವರ ಆತ್ಮವೃತ್ತಾಂತವನ್ನು ನಿರೂಪಿಸುವ ಕೋಟೆಮನೆಯನ್ನು ಕುರಿತು ಎರಡು ಮಾತು ಹೇಳಬೇಕು. ಅವರ ಕುಟುಂಬಕ್ಕೆ ಸೇರಿದವರು ಮತ್ತು ಇತರರು, ಇವರುಗಳ ಮತ್ತು ಇವರುಗಳಿಗೆ ಸಂಬಂಧಪಟ್ಟ ಸನ್ನಿವೇಶಗಳಲ್ಲಿ ಕೆಲವುಗಳನ್ನು ಕುರಿತು ಭಾವನಾತ್ಮಕವಾಗಿ ಬರೆದಿರುವುದು ಸಹಜ. ಆದರೆ ಯಾವ ಸಂದರ್ಭದಲ್ಲಿಯೂ ಅವರು ಸತ್ಯದ ಹಾದಿಯನ್ನು ಅತಿಕ್ರಮಿಸಿಲ್ಲ. ಉದ್ದಕ್ಕೂ

ವಸ್ತುನಿಷ್ಠತೆಯೇ ಕಾಣಬರುತ್ತದೆ. ಇದರಿಂದ ಅವರ ಘನವ್ಯಕ್ತಿತ್ವದ ನೇರ ಪರಿಚಯವೂ ಒದಗುತ್ತದೆ. ಅವರ ಕುಟುಂಬವು ಅನುಕೂಲಸ್ಥ ಪರಂಪರೆಗೆ ಸೇರಿದ್ದರೂ ಅವರ ಬಾಲ್ಯದ ಕಾಲಕ್ಕೆ ತೀರಾ ಕಷ್ಟದ ಸ್ಥಿತಿಯಲ್ಲಿದ್ದು ಇವರು ಅನೇಕ ಎಡರು ತೊಡರುಗಳ ಮಧ್ಯೆ ಬೆಳೆದು ಬಂದರು. ಅಷ್ಟೇ ಅಲ್ಲದೆ, ಚಿಕ್ಕವಯಸ್ಸಿನಲ್ಲೇ ಸಂಸಾರ ನಡೆಸುವ ಜವಾಬ್ದಾರಿಯನ್ನೂ ನಿರ್ವಹಿಸಬೇಕಾಗಿಬಂತು. ಇದೆಲ್ಲವನ್ನು ಇವರು ಅತ್ಯಂತ ಕರ್ತವ್ಯನಿಷ್ಠರಾಗಿ ಎದುರಿಸಿದರು. ಕೆಲವು ಸಣ್ಣಪುಟ್ಟ ನೌಕರಿಗಳಲ್ಲಿದ್ದ ಮೇಲೆ ಸರಕಾರದ ಆರೋಗ್ಯ ಇಲಾಖೆಗೆ ಸೇರಿ ಅಲ್ಲಿ ಅತ್ಯಂತ ಪ್ರಾಮಾಣಿಕತೆಯಿಂದಲೂ, ದಕ್ಷತೆಯಿಂದಲೂ ಶ್ರದ್ಧೆಯಿಂದಲೂ ತಮ್ಮ ಕರ್ತವ್ಯವನ್ನು ಪಾಲಿಸಿ ಸಹೋದ್ಯೋಗಿಗಳ ಹಾಗೂ ಜನತೆಯ ಗೌರವಾದರಗಳನ್ನು ಸಂಪಾದಿಸಿದರು. ಇದೆಲ್ಲದರ ಮಧ್ಯೆ ಅವರ ಸಾಹಿತ್ಯಾಭ್ಯಾಸ ಮತ್ತು ಗ್ರಂಥ ರಚನೆ ತಡೆಯಿಲ್ಲದೆ ಮುಂದುವರೆಯಿತು. ಅವರ ಸಾಂಸಾರಿಕ ಜೀವನ ಮತ್ತು ಸಾಮಾಜಿಕ ಜೀವನ ಅತ್ಯಂತ ವಿಹಿತವಾಗಿಯೇ ನಡೆದುಕೊಂಡು ಬಂದಿದೆ. ಇದೆಲ್ಲಕ್ಕೂ ಅವರು ತಮ್ಮ ಅನುಭವದಿಂದ, ವಿಚಾರದಿಂದ, ಕೆಲವು ಜೀವನ ಮೌಲ್ಯಗಳನ್ನು ಕಂಡುಕೊಂಡು ಅವುಗಳನ್ನೇ ಅನುಸರಿಸಿಕೊಂಡು ಬಂದಿರುವುದು ಕಾರಣ.

ಇಂತಹ ಉದಾತ್ತಚರಿತರಾದ ವ್ಯಕ್ತಿಯ ಸಂಪರ್ಕ, ಸ್ನೇಹ ನನಗೆ ದೊರೆತದ್ದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. ನನ್ನ ಆಪ್ತಮಿತ್ರರಾದ ದಿವಂಗತ ತಗಡೂರು ರಾಮಚಂದ್ರರಾಯರ ಸನ್ಮಾನ ಸಮಾರಂಭದಲ್ಲಿ ರಾಯರೊಡನೆ ಕೆಲವು ಕಾಲ ಕಳೆಯಲು ನನಗೆ ಅವಕಾಶ ದೊರೆಯಿತು. ಅದೇ ಸಂದರ್ಭದಲ್ಲಿ ರಾಯರೇ ರಚಿಸಿದ 'ಅಳಿಲುಸೇವೆ' (ತಗಡೂರರ ಆತ್ಮಕಥೆ) ಪ್ರಕಟವಾಯಿತು. ಈಗ ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಪೌರ ಮತ್ತು ಸಾಮಾಜಿಕ ಪ್ರಗತಿ ಸಂಸ್ಥೆ ರಾಯರಿಗೆ ಸನ್ಮಾನ ಮಾಡಿದಾಗ ಆ ಸಮಾರಂಭದಲ್ಲಿ ನಾನು ಭಾಗವಹಿಸಿದುದು ನನಗೆ ಬಹು ಹೆಮ್ಮೆಯ ವಿಷಯ.

ರಾಯರು ಇಂದೂ ಸಾಹಿತ್ಯಾಭ್ಯಾಸದಲ್ಲಿಯೂ ಸಾಹಿತ್ಯರಚನೆಯಲ್ಲಿಯೂ ಸದಾ ನಿರತರಾಗಿರುತ್ತಾರೆ. ಇನ್ನೂ ಬಹುಕಾಲ ಅವರ ಸೇವೆ ನಾಡಿಗೆ ದೊರಕುತ್ತಾ ಬರಲಿ ಹಾಗೂ ಅವರಿಗೂ ಅವರ ಕುಟುಂಬವರ್ಗಕ್ಕೂ ಸರ್ವವಿಧದ ಸನ್ಮಂಗಳವೂ ಲಭಿಸಲಿ ಎಂದು ಮನಸಾರೆ ಹಾರೈಸುತ್ತೇನೆ.

ನಿಟ್ಟೂರು ಶ್ರೀನಿವಾಸರಾವ್

ಅಕ್ಟೋಬರು, ೧೯೮೭ — ಗೌರವಾಧ್ಯಕ್ಷರು

ಕಾರ್ಯಾಧ್ಯಕ್ಷರ ಅರಿಕೆ

ಹಿರಿಯ ಸಾಹಿತಿ

ಶ್ರೀಯುತ ಸಮೇತನಹಳ್ಳಿ ರಾಮರಾಯರ ಮುಖತಃ ಪರಿಚಯ ನನಗಿರಲಿಲ್ಲ. ಆದರೆ ಚೆಲುವರಾಯ ಸ್ವಾಮಿಗಳ ಮುಖಾಂತರ ಅವರ ವಿಷಯವಾಗಿ ಬಹಳವಾಗಿ ಕೇಳಿದೆ. ಶ್ರೀ ರಾಮರಾಯರ ವ್ಯಕ್ತಿತ್ವ ಮತ್ತು ಬರವಣಿಗೆಯ ಬಗ್ಗೆ ನಮ್ಮ ತಂದೆಯ ಮಿತ್ರರಾದ ಚೆಲುವರಾಯ ಸ್ವಾಮಿಗಳಿಗೆ ಬಹಳ ಮೆಚ್ಚುಗೆ. ನಾವಿಬ್ಬರೂ ಭೇಟಿಯಾದಾಗ ಅನೇಕ ಬಾರಿ ಈ ಪ್ರಸ್ತಾಪ ಸುಳಿಯುತ್ತಿತ್ತು. ಶ್ರೀ ರಾಮರಾಯರ ಬಗ್ಗೆ ಅವರು ಬಹಳ ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದರು. ಹೀಗೆ ನನ್ನದು ರಾಯರೆದು ಒಂದು ರೀತಿಯ ಪರೋಕ್ಷ ಪರಿಚಯ.

ಶ್ರೀಯುತರ ಬಗ್ಗೆ ನನಗೆ ಹೆಚ್ಚಿನ ಸಮಾಚಾರಗಳು ತಿಳಿದದ್ದು ಇತ್ತೀಚೆಗೆ. ನಾಲ್ಕೈದು ವರ್ಷಗಳಿಂದ ಶ್ರೀ ರಾಮರಾಯರ ಮಗಳು ಶ್ರೀಮತಿ ಭಾರತಿ ಕಾಸರಗೋಡ್ ನನ್ನ ಜೀವನ ಚರಿತ್ರೆಯನ್ನು ನಿರೂಪಿಸುವ ಕಾಲದಲ್ಲಿ ಪ್ರಾಸಂಗಿಕವಾಗಿ ಶ್ರೀ ರಾಮರಾಯರ ವಿಷಯಗಳೂ ತಿಳಿದುಬರುತ್ತಿದ್ದವು.

ಈ ಮಧ್ಯೆ ರಾಮರಾಯರು ಬಹಳ ವಿಶ್ವಾಸದಿಂದ ಅವರ ಆತ್ಮಕಥೆ 'ಕೋಟೆಮನೆ' ಮತ್ತು ಧಾರ್ಮಿಕ ಕಾದಂಬರಿ 'ಶ್ರೀ ಕೃಷ್ಣದರ್ಶನ' ಪುಸ್ತಕಗಳನ್ನು ನನಗೆ ಕಳಿಸಿಕೊಟ್ಟರು. ಇವೆರಡೂ ಪುಸ್ತಕಗಳನ್ನು ನಾನು ಸಾವಧಾನವಾಗಿ ಓದಿಕೊಂಡಿದ್ದೇನೆ ; ತೃಪ್ತಿ–ಆನಂದಗಳನ್ನು ಪಟ್ಟಿದ್ದೇನೆ.

'ಕೋಟೆಮನೆ' ಯನ್ನು ಓದಿದಾಗ, ರಾಮರಾಯರ ವ್ಯಕ್ತಿತ್ವದ ಅನೇಕ ಮುಖಗಳು ನನಗೆ ಕಂಡುಬಂದವು. ಜೀವನದಲ್ಲಿ ಎಂತೆಂತಹ ಕಷ್ಟ ಕೋಟಲೆಗಳನ್ನನುಭವಿಸಿ ಅವರು ಮುಂದೆ ಬಂದರು, ಸ್ವಂತ ವ್ಯವಸಾಯದಿಂದ ಸಾಹಿತ್ಯ ಕ್ಷೇತ್ರದಲ್ಲಿ ಎಂತಹ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡರು ಇವೆಲ್ಲ ವಿಷಯಗಳು ವಿಶದವಾಗಿ ನನಗೆ ತಿಳಿದು ಬಂದು, ಅವರ ವ್ಯಕ್ತಿತ್ವದ ಬಗ್ಗೆ ನನಗಿದ್ದ ಗೌರವ ಇಮ್ಮಡಿಯಾಯಿತು.

ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಅವರ ಮೊಮ್ಮಗನ ಮದುವೆಯಲ್ಲಿ ಶ್ರೀ ರಾಮರಾಯರನ್ನು ಭೇಟಿಯಾಗಿ ಅವರೊಂದಿಗೆ ಸಾಕಷ್ಟು ಹೊತ್ತು ಸಂತೋಷದ ಮಾತುಕತೆಗಳಲ್ಲಿ ಭಾಗಿಯಾಗುವ ಸದವಕಾಶ ನನಗೆ ಲಭಿಸಿತು. ಈ ಸಂದರ್ಭದಲ್ಲಿ ನನಗೆ ಅವರ ವ್ಯಕ್ತಿತ್ವ ನಿಚ್ಚಳವಾಗಿ ಕಂಡಿತು. ಅವರು ಸತ್ಯಸಂಧರು, ಶುದ್ಧಮನಸ್ಕರು ಮತ್ತು ನೇರವಾದ ನಡೆ–ನುಡಿಯುಳ್ಳವರು ಎಂಬುದು ಖಚಿತವಾಯಿತು.

ಶ್ರೀಯುತರು ತಮ್ಮ ಎಂಬತ್ತನೇ ವಯಸ್ಸಿಗೆ ಕಾಲಿಡುವ ಸಂದರ್ಭದಲ್ಲಿ ಅವರ

ಗೌರವಾರ್ಥ ಈ ಸಂಭಾವನಾಗ್ರಂಥ ಬಿಡುಗಡೆಯಾಗುತ್ತಿರುವುದು ನನಗೆ ಬಹಳ ಸಂತೋಷದ ಸಂಗತಿ. ಕನ್ನಡ ಸಾಹಿತ್ಯ ಲೋಕಕ್ಕೆ ಇದೊಂದು ಅತ್ಯಂತ ಔಚಿತ್ಯಪೂರ್ಣವಾದ ಕೊಡುಗೆ.

ಈ ಗ್ರಂಥದಲ್ಲಿ ಅನೇಕ ಹಿರಿಯ ಸಾಹಿತಿಗಳು, ವಿದ್ವಾಂಸರು, ರಾಯರ ಆತ್ಮೀಯರು ಮತ್ತು ಬಂಧುಗಳು ರಾಯರ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಈ ಹಿರಿಯ ಸಾಹಿತಿ ಎಷ್ಟೊಂದು ಜನರ ಅಭಿಮಾನವನ್ನು ಗಳಿಸಿಕೊಂಡಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅಷ್ಟೇ ಅಲ್ಲ, ಅವರ ವಿಶಿಷ್ಟ ವ್ಯಕ್ತಿತ್ವಕ್ಕೆ ಈ ಲೇಖನಗಳು ಕನ್ನಡಿ ಹಿಡಿದಂತಿವೆ.

ಈ ಗ್ರಂಥವನ್ನು ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಂಡು ಓದಿ, ಅಲ್ಲಿಯ ಸವಿಯನ್ನು, ಸ್ವಾರಸ್ಯವನ್ನು ಪರಿಗ್ರಹಿಸಿ ಸಂತೋಷಪಡುವಂತಾಗಬೇಕು. ಆಗಲೇ ಈ ಗ್ರಂಥವು ಬಿಡುಗಡೆಯಾದ ಉದ್ದೇಶವು ಸಾರ್ಥಕವಾಗುವುದು. ಈ ಅಭಿನಂದನಾ ಗ್ರಂಥವು ಹೊರಬರಲು ಶ್ರೀ ರಾಮರಾಯರ ಮಗಳು ಭಾರತಿ ಮತ್ತು ಸಂಪಾದಕಸಮಿತಿಯ ಮಿತ್ರರು ಪಟ್ಟಿರುವ ಶ್ರಮವನ್ನು ನಾನು ಊಹಿಸಬಲ್ಲೆ.

ಶ್ರೀ ರಾಮರಾಯರ ದೀರ್ಘಕಾಲದ ಸಾಹಿತ್ಯ ಸೇವೆಯನ್ನು ಸ್ಮರಿಸಿ, ಕೃತಜ್ಞತೆ ಸೂಚಿಸುವ ಸಲುವಾಗಿ ಈ ಸಂಭಾವನಾಗ್ರಂಥ ಸಿದ್ಧಪಡಿಸಿ ಅವರಿಗೆ ಅರ್ಪಿಸಿದೆ.ರಾಯರು ಇನ್ನಷ್ಟು ದೀರ್ಘಕಾಲ ಈ ಸಾಹಿತ್ಯ ಸೇವೆಯನ್ನು ಸಲ್ಲಿಸಲಿ, ಇದಕ್ಕೆ ಪೂರಕವಾಗಿ ಪೂರ್ಣಾಯುಸ್ಸು, ಅತ್ಯುತ್ತಮ ಆರೋಗ್ಯಗಳನ್ನು ಭಗವಂತನು ಅವರಿಗೆ ಕರುಣಿಸಲಿ ಎಂದು ನಾನು ಅಭಿನಂದನ ಸಮಿತಿಯ ಪರವಾಗಿ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ವಿ. ದೊರೆಸ್ವಾಮಿ ಅಯ್ಯಂಗಾರ್

ಸೆಪ್ಟೆಂಬರು, ೧೯೯೭ — ಕಾರ್ಯಾಧ್ಯಕ್ಷರು

ಉಪಾಧ್ಯಕ್ಷರ ಮುನ್ನುಡಿ

ಎಲೆಮರೆಯ ಪಕ್ವ ಫಲ

ಶ್ರೀ ಸಮೇತನಹಳ್ಳಿ ರಾಮರಾಯರನ್ನು ಪ್ರತ್ಯಕ್ಷವಾಗಿ ನೋಡಿದವರ ಸಂಖ್ಯೆ ಕಡಿಮೆಯಿರಬಹುದು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಅವರ ಹೆಸರನ್ನು ಕೇಳಿಬಲ್ಲವರ ಸಂಖ್ಯೆ ಸಾಕಷ್ಟು ದೊಡ್ಡದಾಗಿಯೇ ಇದೆ. ರಾಮರಾಯರು ಹುಟ್ಟಿದ್ದು ೧೯೧೭ರಲ್ಲಿ (೨೪-೧೧-೧೯೧೭) ಬೆಂಗಳೂರು ಜಿಲ್ಲೆಯ ಸಮೇತನಹಳ್ಳಿಯಲ್ಲಿ. ೧೯೧೭ ಇತಿಹಾಸ ಪ್ರಸಿದ್ಧವಾದ ವರ್ಷ. ರಷ್ಯಾದಲ್ಲಿ ಮಹಾಕ್ರಾಂತಿ ಆದುದು ಅದೇ ವರ್ಷ. ರಾಮರಾಯರನ್ನು ನಾನು ಮೊದಲು ನೋಡಿದ್ದು ಮಂಡ್ಯದಲ್ಲಿ. ಅವರು ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಹೆಲ್ತ್ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಗ. ಅದಕ್ಕೆ ಮೊದಲು ಅವರು ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದರು.

೧೯೬೯ರಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದಾಗ ಅದೇ ಮೊದಲ ಬಾರಿಗೆ ಪರಿಷತ್ತಿನ ಜಿಲ್ಲಾ ಸಮಿತಿಗಳನ್ನು ರಚಿಸಿಲಾಯಿತು. ಆ ವೇಳೆಗಾಗಲೆ ರಾಮರಾಯರು ಕವಿಗಳು, ಸಾಹಿತಿಗಳೆಂದು ಹೆಸರು ಪಡೆದಿದ್ದರು. ಆ ಕಾರಣದಿಂದ ಅವರನ್ನು ಮಂಡ್ಯ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ನಾಮಕರಣ ಮಾಡಲಾಯಿತು. ೧೯೭೦ ರಿಂದ ೧೯೭೩ರವರೆಗೆ ಅವರು ಅಧ್ಯಕ್ಷರಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಮಂಡ್ಯಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಸಿಕೊಟ್ಟು ಅಲ್ಲಿನ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು.

೧೯೭೩ರಲ್ಲಿ ಸರ್ಕಾರಿ ಸೇವೆಯಿಂದ ಅವರು ನಿವೃತ್ತರಾದ ಮೇಲೆ ಮಂಡ್ಯ ಬಿಟ್ಟು ಮೈಸೂರು ಸೇರಿದರು. ಸರ್ಕಾರಿ ಸೇವೆಯಲ್ಲಿದ್ದಾಗಲೂ, ನಿವೃತ್ತಿಯಾದ ನಂತರವೂ ಸಾಹಿತ್ಯ ಸೇವೆಯನ್ನು ಅವರು ಮುಂದುವರಿಸಿಕೊಂಡೇ ಬಂದರು. ಅವರು ಸಾಹಿತ್ಯದ ಯಾವುದೇ ಒಂದು ಪ್ರಕಾರಕ್ಕೆ ಅಂಟಿಕೊಂಡು ಬರೆದವರಲ್ಲ. ಅವರ ಪ್ರಕಟಿತ ಕೃತಿಗಳಲ್ಲಿ ನಾಟಕ, ಮಹಾಕಾವ್ಯ, ಏಕಾಂಕ ನಾಟಕಗಳು, ಗೀತ ನಾಟಕಗಳು, ಸಣ್ಣಕತೆಗಳು, ಶಬ್ದ ಚಿತ್ರಗಳು, ಅನುವಾದಗಳು, ಕವನ ಸಂಕಲನಗಳು, ಜೀವನ ಚರಿತ್ರೆಗಳೂ ಸೇರಿವೆ. ಈ ಎಲ್ಲ ಪ್ರಕಟಿತ ಕೃತಿಗಳ ಒಟ್ಟು ಪುಟ ಸಂಖ್ಯೆ ಏಳು ಸಾವಿರಕ್ಕೂ ಮೀರಿದೆ. ಅಪ್ರಕಟಿತ ಕೃತಿಗಳ ಪುಟ ಸಂಖ್ಯೆ ಸುಮಾರು ೧೫೦೦ ರಷ್ಟಿದೆ. ಐತಿಹಾಸಿಕ ವಸ್ತುವಿನ ಕೃತಿ ರಚನೆಯೆಂದರೆ ರಾಮರಾಯರಿಗೆ ತುಂಬ ಪ್ರಿಯವಾದುದು.

ಇವರ ಕೆಲವು ಪುಸ್ತಕಗಳು ಪ್ರಾಥಮಿಕ ಹಂತದಿಂದ ಹಿಡಿದು ಕೆಲವು ಪದವಿ ಪರೀಕ್ಷೆಯವರೆಗೂ ಎಲ್ಲ ಹಂತಗಳಲ್ಲಿಯೂ ಅಂಗೀಕಾರ ಪಡೆದು ಪಠ್ಯ ಪುಸ್ತಕಗಳಾಗಿವೆ. ಇವರು ಬರೆದ 'ಶಾಕುಂತಲಾ' ಮಹಾಕಾವ್ಯ ವಿದ್ವಜ್ಜನರ ಮನ್ನಣೆಗೆ ಪಾತ್ರವಾಯಿತು. ಈ ಕೃತಿ ಕನ್ನಡ ಕಾವ್ಯ ಪ್ರಪಂಚಕ್ಕೆ ಒಂದು ಅಪೂರ್ವ ಕಾಣಿಕೆ ಆಯಿತು. ಇದರಿಂದ ಈ

ಕಾವ್ಯಕ್ಕೆ ಕರ್ನಾಟಕ ಸರ್ಕಾರದಿಂದ ಪ್ರಥಮ ಬಹುಮಾನ ದೊರೆಯಿತು. ಕನ್ನಡ ಸಾಹಿತ್ಯ ಪರಿಷತ್ತು, ಸರ್. ಎಂ. ವಿಶ್ವೇಶ್ವರಯ್ಯ ಪ್ರತಿಷ್ಠಾನ ಮುಂತಾದ ಸಂಸ್ಥೆಗಳು ಇವರ ಕೆಲವು ಕೃತಿಗಳಿಗೆ ಬಹುಮಾನ ನೀಡಿವೆ. ಕೆಲವು ಪ್ರಮುಖ ಸಂಸ್ಥೆಗಳು ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಸನ್ಮಾನ ಸಮಾರಂಭಗಳನ್ನು ಏರ್ಪಡಿಸಿ ಗೌರವಿಸಿವೆ. ೧೯೭೬ ರಿಂದ ರಾಜ್ಯ ಸರ್ಕಾರ ಇವರಿಗೆ ತಿಂಗಳಿಗೆ ೫೦೦ ರೂ. ನಂತೆ ಗೌರವ ವೇತನ ನೀಡುತ್ತಿದೆ.

ಶ್ರೀ ಸಮೇತನಹಳ್ಳಿ ರಾಮರಾಯರದು ಸಾತ್ವಿಕ ಸ್ವಭಾವ. ಯಾರನ್ನೂ ನಿಂದಿಸುವವರಲ್ಲ, ಯಾರನ್ನೂ ಎತ್ತಿ ಮೆರೆಸುವವರಲ್ಲ. ಯಾರ ಹಿಂಬಾಲಕರೂ ಅಲ್ಲ. ಹಾಗೆಯೆ ಯಾರ ಹಂಗನ್ನೂ ಬಯಸುವವರಲ್ಲ. ಸುಖ ಬಂದಾಗ ಮೆರೆದವರಲ್ಲ. ಕಷ್ಟ ಬಂದಾಗ ಕೈಕಟ್ಟಿ ಕೂತವರಲ್ಲ. ಮನುಷ್ಯ ಶಕ್ತಿಗೆ ಮೀರಿದ ಶಕ್ತಿಯೊಂದಿದೆ. ಅದು ಜಗತ್ತನ್ನು ಕಾಪಾಡುತ್ತಿದೆ, ಅದೇ ದೈವಶಕ್ತಿ. ಆ ಶಕ್ತಿಯನ್ನು ಸಾಕ್ಷಿಯಾಗಿಟ್ಟುಕೊಂಡು ತಮಗೆ ಸರಿ ಕಂಡದ್ದನ್ನು ತಮ್ಮ ಪಾಡಿಗೆ ಮಾಡಿಕೊಂಡು ಹೋಗುವ ರಾಮರಾಯರಿಗೆ ಈ ವರ್ಷದ ನವೆಂಬರ್ ವೇಳೆಗೆ ಎಂಬತ್ತು ವರ್ಷ ತುಂಬುತ್ತದೆ. ಅವರು ಎಂಬತ್ತಲ್ಲ, ತೊಂಬತ್ತಲ್ಲ ನೂರ್ಕಾಲ ಆರೋಗ್ಯದಿಂದ ಬಾಳಿ ಈ ನಾಡು ನುಡಿಗೆ ಇನ್ನೂ ಹೆಚ್ಚು ಸೇವೆ ಸಲ್ಲಿಸುವಂತಾಗಲಿ ಎಂದು ಹಾರೈಸುತ್ತೇನೆ. ಅವರಿಗೆ ನಮ್ಮ ಕೃತಜ್ಞತೆಯ ಕುರುಹಾಗಿ ಈ ಮಟ್ಟದಲ್ಲಿ ಅಭಿನಂದನ ಗ್ರಂಥವನ್ನು ಅರ್ಪಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಜಿ. ನಾರಾಯಣ

ಸೆಪ್ಟೆಂಬರು, ೧೯೮೭ **ಉಪಾಧ್ಯಕ್ಷರು**

ಸಂಪಾದಕರ ನುಡಿ

ನಮ್ಮ ನಾಡಿನಲ್ಲಿರುವ ಸಾಹಿತಿಗಳಲ್ಲಿ ಕೆಲವರು ಸಿದ್ಧಿಗಿಂತ ಹೆಚ್ಚಾಗಿ ಪ್ರಸಿದ್ಧಿ ಪಡೆದವರಿದ್ದರೆ ಮತ್ತೆ ಕೆಲವರು ಪ್ರಸಿದ್ಧಿಗಿಂತ ಹೆಚ್ಚಾಗಿ ಸಿದ್ಧಿ ಪಡೆದವರಿದ್ದಾರೆ. ಸಿದ್ಧಿ ಪ್ರಸಿದ್ಧಿಗಳೆರಡನ್ನು ಸಮಾನವಾಗಿ ಪಡೆದವರಿದ್ದಾರೆ. ಶ್ರೀ ಸಮೇತನಹಳ್ಳಿ ರಾಮರಾಯರು ಪ್ರಸಿದ್ಧಿಗಿಂತ ಹೆಚ್ಚು ಸಿದ್ಧಿಪಡೆದ ಪ್ರತಿಭಾನ್ವಿತ ಸಾಹಿತಿಗಳಾಗಿದ್ದಾರೆ. ಮನೆತನದ ಪರಂಪರೆಯಿಂದಾಗಲಿ, ಪಾಂಡಿತ್ಯ ವಲಯದ ಪ್ರಭಾವದಿಂದಾಗಲಿ ರೂಪುಗೊಂಡ ಸಾಹಿತಿಗಳು ಅವರಲ್ಲ. ಸ್ವಯಂಕೃಷಿಯಿಂದ ಸಾಮಾನ್ಯ ಮಧ್ಯಮವರ್ಗದ ಬದುಕಿನ ಬವಣೆಗಳ ಕಾಸಾರದಿಂದಲೇ ಮೂಡಿಬಂದ ಸಾಹಿತ್ಯ ಕಮಲ ಅವರು. ಅವರ ಕೋಟೆಮನೆ ಕೃತಿ ಅವರ ಸಾಹಿತಿಯಾಗಿ ರೂಪುಗೊಂಡ ಕಥೆಯನ್ನು ಹೇಳುತ್ತದೆ. ಮೊದಲಿನಿಂದಲೂ ಸ್ವಯಂಸ್ಫೂರ್ತಿಯಿಂದ ಲಕ್ಷ್ಮೀಶ, ಕುಮಾರವ್ಯಾಸರಂಥ ಕವಿಗಳ ಕಾವ್ಯಗಳಿಂದ ಪ್ರೇರಣೆ ಪಡೆದು ಸಾಹಿತ್ಯಕ್ಷೇತ್ರಕ್ಕೆ ಕವಿಗಳಾಗಿ ಕಾಲಿಟ್ಟ ಅವರು ಕತೆಗಾರರಾಗಿ ಕಾದಂಬರಿಕಾರರಾಗಿ ನಾಟಕಕಾರರಾಗಿ ಅನುವಾದಕರಾಗಿ ಸಾಹಿತ್ಯಿಕ ಸಮಾವೇಶಗಳ ಸಂಘಟಿತರಾಗಿ ಮಹಾಕಾವ್ಯದ ಕರ್ತೃವಾಗಿ ಕನ್ನಡಕ್ಕೆ ಸಾಕಷ್ಟು ಸೇವೆಯನ್ನು ಯಾವುದೇ ಪಂಥ ಪಂಗಡಗಳಿಗೆ ಸೇರದೆ ಒಂಟಿಸಲಗವಾಗಿ ಎಲೆಮರೆಯಕಾಯಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ೩೦ಕ್ಕೂ ಹೆಚ್ಚಿನ ಕೃತಿಗಳು ಪ್ರಕಟವಾಗಿದ್ದರೂ ಇನ್ನೂ ಅನೇಕ ಕೃತಿಗಳು ಪತ್ರಿಕಾ ಲೇಖನ ರೂಪದಲ್ಲಿ ಹಸ್ತಪ್ರತಿ ರೂಪದಲ್ಲಿ ಅಚ್ಚಿಗಾಗಿ ಕಾದಿವೆ. ಕಳೆದ ೬೦ ವರ್ಷಗಳಲ್ಲಿ ಅವರು ರಚಿಸಿರುವ ಸಾಹಿತ್ಯ, ಗಾತ್ರಕ್ಕಿಂತಲೂ ಗುಣಮಟ್ಟದಲ್ಲಿ ಕನ್ನಡಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ. ಅವರ ಕೃತಿಗಳ ಪೈಕಿ ಶಾಕುಂತಲಾ ಮಹಾಕಾವ್ಯ ೨೦ನೇ ಶತಮಾನದ ಕನ್ನಡದ ಮಹಾಕಾವ್ಯಗಳಲ್ಲಿ ವಿನೂತನವಸ್ತು–ಶೈಲಿ ಹೊಂದಿದ ಮಹಾಭಾರತದ ಉಪಾಖ್ಯಾನವನ್ನು ಆಧರಿಸಿದ ಕೃತಿಯಾಗಿದೆ. ಶ್ರೀಕೃಷ್ಣದರ್ಶನ ಮಹಾಕಾದಂಬರಿ ಕನ್ನಡದ ಗದ್ಯ ಮಹಾಕಾವ್ಯವೆನ್ನಬಹುದಾದ ಕೃತಿಯಾಗಿದೆ. ಕನ್ನಡದಲ್ಲಿ ಬಂದಿರುವ ಶ್ರೀಕೃಷ್ಣ ಸಾಹಿತ್ಯ ಕೃತಿಗಳಲ್ಲಿ ವಿಶಿಷ್ಟವಾಗಿದೆ. ಕತೆ, ಕವಿತೆ, ಪ್ರಬಂಧ ಮೊದಲಾದ ಸಾಹಿತ್ಯಿಕ ರಚನೆಗಳನ್ನು ರಾಮರಾಯರು ಮಾಡಿದ್ದಾರೆ. ಐತಿಹಾಸಿಕ ನಾಟಕಗಳನ್ನು ಐತಿಹಾಸಿಕ ಕಾದಂಬರಿಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ. ಅವರ ತಲಕಾಡುಗೊಂಡ, ಸವತಿಗಂಧವಾರಣೆ, ಯದುವೊಡೆಯ, ದ್ರೋಹಾಡಂಬರ ಮೊದಲಾದವು ನಾಡಿನ ವಿಮರ್ಶಕರ ಮನ್ನಣೆಗಳಿಸಿವೆ. ಹೀಗೆ ಸದ್ದಿಲ್ಲದೆ ಸಾಹಿತ್ಯ ಕಾಯಕ ಮಾಡುತ್ತಿರುವ ಸಮೇತನಹಳ್ಳಿ ರಾಮರಾಯರ ಸಾಹಿತ್ಯ ಸೇವೆಯ ಸಮಗ್ರ ನೋಟವನ್ನು–ನಾಡಿನ ಜನತೆಗೆ ಈ ತಲೆಮಾರಿನವರಿಗೆ ಮಾಡಿಕೊಡಬೇಕು. ಸ್ವಾತಂತ್ರ್ಯಪೂರ್ವದಲ್ಲಿ ನವೋದಯ ಕಾಲದಿಂದಲೂ ನವ್ಯ, ದಲಿತ, ಬಂಡಾಯ ಸಾಹಿತ್ಯದ ಯುಗದಲ್ಲಿ ನಿರಂತರವಾಗಿ ಸಾಹಿತ್ಯ ಸೇವೆ ಸಲ್ಲಿಸುತ್ತಿರುವ ನಾಡಿನ ಸಾಹಿತಿಗಳ ಸೇವೆಯನ್ನು ನಾಡಿನ

ಯುವಜನ ಗಮನಿಸಬೇಕು ಎಂಬ ಹೆಬ್ಬಯಕೆಯಿಂದ ಸಮೇತನಹಳ್ಳಿ ರಾಮರಾಯರಿಗೆ ಈ ವರ್ಷ ೧೯೭೭ರ ನವೆಂಬರ್‌ಗೆ ಎಂಬತ್ತು ವರ್ಷಗಳು ತುಂಬುವ ಸುಸಂದರ್ಭದಲ್ಲಿ ಅವರಿಗೆ ಒಂದು ಅಭಿನಂದನ ಗ್ರಂಥವನ್ನು ಅರ್ಪಿಸಬೇಕು, ಅದಕ್ಕಾಗಿ ಸಮಾರಂಭ ಏರ್ಪಡಿಸಬೇಕು ಎಂದು ರಾಮರಾಯರ ಅಭಿಮಾನಿಗಳು ಮಿತ್ರರು ಬಂಧು ಬಾಂಧವರು ಅಪೇಕ್ಷಿಸಿದರು. ಇದಕ್ಕಾಗಿ ಆತ್ಮೀಯರು, ಸಾರ್ವಜನಿಕಗಣ್ಯರು, ಮಿತ್ರರು ಕುಟುಂಬ ವರ್ಗದವರನ್ನೂ ಒಳಗೊಂಡು ಅಭಿನಂದನ ಸಮಿತಿ ರೂಪುಗೊಂಡಿತು. ಈ ಸಂದರ್ಭದಲ್ಲಿ ಅಭಿನಂದನಗ್ರಂಥ–**'ರಾಸದರ್ಶನ'** ಹೊರತರಲು ಸಂಪಾದಕ ಸಮಿತಿಯನ್ನು ರಚಿಸಲಾಯಿತು.ಈ ಸಮಿತಿಯು ಸಭೆ ಸೇರಿ ಚರ್ಚಿಸಿ ಅಭಿನಂದನಗ್ರಂಥದ ರೂಪರೇಷೆಗಳನ್ನು ನಿರ್ಧರಿಸಿತು. ಆ ಮೇರೆಗೆ ಗ್ರಂಥದಲ್ಲಿ ರಾಮರಾಯರ ಕೊಡುಗೆ ಮುಂದಿನ ತಲೆಮಾರಿಗೆ ಒಂದೆಡೆ ದೊರಕುವ ದೃಷ್ಟಿಯಿಂದ ಅವರ ಸಮಗ್ರ ಕೃತಿಗಳ ಪರಿಚಯಾತ್ಮಕ ಲೇಖನಗಳನ್ನು ಒಳಗೊಂಡ **'ಕೃತಿದರ್ಶನ'**, ಅವರ ವ್ಯಕ್ತಿತ್ವ ಪ್ರತಿಭೆ ಪಾಂಡಿತ್ಯ ಸ್ನೇಹಪರತೆಯನ್ನು ಪ್ರತಿಬಿಂಬಿಸುವ ಲೇಖನಗಳ **'ವ್ಯಕ್ತಿದರ್ಶನ'**, ಲೇಖಕರ ಅಂತರಂಗದ ಅಭಿವ್ಯಕ್ತಿಯ ಸ್ವರೂಪ ಹಿನ್ನೆಲೆ ತಿಳಿಸುವ **'ಆತ್ಮದರ್ಶನ'** ಮತ್ತು ಇತರ ಅನುಭವಗಳು ಪೂರಕಲೇಖನಗಳು ಇರಲು ನಿರ್ಧರಿಸಿತು.

ನಮ್ಮ ಕೋರಿಕೆ ಮನ್ನಿಸಿ ನಾಡಿನ ಪ್ರಖ್ಯಾತ ವಿದ್ವಾಂಸರು, ಸಮೇತನಹಳ್ಳಿ ರಾಮರಾಯರ ಅಭಿಮಾನಿಗಳು, ಆತ್ಮೀಯ ಕುಟುಂಬವರ್ಗದವರು ಲೇಖನಗಳನ್ನೂ ಚಿತ್ರಗಳನ್ನೂ ಅತ್ಯಲ್ಪ ಕಾಲದಲ್ಲಿ ನೀಡಿದ್ದಾರೆ.ಅವರಿಗೆಲ್ಲಾ ನಾವು ಆಭಾರಿಗಳು. ಸಕಾಲಕ್ಕೆ ತುಂಬ ಅಂದವಾಗಿ ಅಚ್ಚು ಮಾಡಿಕೊಟ್ಟ ಮೈಸೂರಿನ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ಸಿನ ಶ್ರೀಗಳಾದ ರಾ. ವೆಂ. ಶ್ರೀನಿವಾಸಮೂರ್ತಿ ಮತ್ತು ಅವರ ಪುತ್ರರಾದ ಶ್ರೀ ಮೋಹನ್ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕರಾದ ಶ್ರೀ ಎಸ್. ರಾಮಪ್ರಸಾದ್ ರವರು ಮುಖಪುಟದ ಛಾಯಾಚಿತ್ರವನ್ನು ತುಂಬ ವಿಶ್ವಾಸ ಮತ್ತು ಪ್ರೇಮಗಳಿಂದ ತೆಗೆದುಕೊಟ್ಟು ಈ ಕಾರ್ಯಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಅವರಿಗೆ ನಾವು ನಮ್ಮ ತುಂಬಿದ ಕೃತಜ್ಞತೆಯ ವಂದನೆಗಳನ್ನು ಅರ್ಪಿಸುತ್ತೇವೆ. ಹಲವಾರು ವಿಧಗಳಲ್ಲಿ ಸಹಕಾರ, ಸೌಲಭ್ಯಗಳನ್ನಿತ್ತ ರಾಸ ಅವರ ಕುಟುಂಬವರ್ಗಕ್ಕೆ ನಾವು ಋಣಿಗಳಾಗಿದ್ದೇವೆ. ಕೊನೆಯದಾಗಿ ನಮಗೆ ಅಭಿನಂದನ ಸಮಿತಿಯವರು ಈ ಗ್ರಂಥ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಸೂಚಿಸಿ ಆ ಮೂಲಕ ರಾಮರಾಯರ ಸಾಹಿತ್ಯ ಸೇವೆಯನ್ನೂ ವ್ಯಕ್ತಿತ್ವದ ಪರಿಚಯವನ್ನೂ ನಾಡಿಗೆ ನೀಡಲು ಅವಕಾಶ ನೀಡಿದ್ದಕ್ಕೆ ಆಭಾರಿಗಳಾಗಿದ್ದೇವೆ. ನಾಡಿನ ಜನತೆ ಈ ಗ್ರಂಥವನ್ನು ಸಂತೋಷದಿಂದ ಸ್ವಾಗತಿಸುತ್ತಾರೆ ಎಂದು ನಂಬಿದ್ದೇವೆ.

ಜಿ. ಅಶ್ವತ್ಥ ನಾರಾಯಣ
ಎಸ್. ಶ್ರೀನಿವಾಸನ್
ಭಾರತಿ ಕಾಸರಗೋಡ್

೧೫, ಜನವರಿ ೧೯೭೮
ಬೆಂಗಳೂರು

ಪರಿವಿಡಿ

ಆತ್ಮದರ್ಶನ

ವ್ಯಕ್ತಿದರ್ಶನ


ಕೃತಿದರ್ಶನ

ಅನುಬಂಧಗಳು







ಪತ್ನಿ ಪಂಕಜಾಕ್ಷಮ್ಮನವರೊಂದಿಗೆ



ಪ್ರೌಢಶಾಲಾ ವಿದ್ಯಾರ್ಥಿ




ಮಕ್ಕಳು : (ಬಲದಿಂದ) ಇಂದಿರಾ ದೇವಿ, ಹರ್ಷವರ್ಧನ, ಭಾರತೀದೇವಿ ಮತ್ತು ವಿಷ್ಣುವರ್ಧನ



ಉತ್ತರಭಾರತ ಪ್ರವಾಸದಲ್ಲಿ
ಕೋನಾರ್ಕದಲ್ಲಿ ಪತ್ನಿಯೊಂದಿಗೆ




ಕಿರಿಯ ಮಗಳು ಭಾರತೀದೇವಿಯನ್ನು ರಂಗರಾವ್ ಕಾಸರಗೋಡ್
ಅವರಿಗೆ ಕನ್ಯಾದಾನ



ವಿಷ್ಣುಪೂಜಾ ನಿರತ




ಎಪ್ಪತ್ತನೆಯ ವರುಷದಲ್ಲಿ ಸಂಬಂಧಿಗಳಿಂದ ಭೀಮರಥಿ ಅಭಿಷೇಕ




ಸಮೇತನಹಳ್ಳಿಯ ಕೋಟೆಮನೆ




ಮೈಸೂರಿನ ಗೋಕುಲದ ಕೋಟೆಮನೆಯ
ಪ್ರವೇಶೋತ್ಸವ




ಗೋವೆಯಲ್ಲಿ ಮೊಮ್ಮಕ್ಕಳು ಯಶು ಮತ್ತು ತೇಜು
ಅವರೊಡನೆ




ತಗಡೂರು ರಾಮಚಂದ್ರರಾಯರ 'ಕರ್ಮಯೋಗಿ' ಗ್ರಂಥರಚನೆಯಾದಾಗ
ಶ್ರೀ ಜಿ. ರಾಮಚಂದ್ರನ್ ಅವರಿಂದ ಸನ್ಮಾನ



ಹೊಸಕೋಟೆ ತಾಲ್ಲೂಕು ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ವಹಿಸಿದಾಗ
ಮಂತ್ರಿ ಶ್ರೀ ಬಿ. ಎನ್. ಬಚ್ಚೇಗೌಡರೊಡನೆ




ಕನ್ನಡ ಸಾಹಿತ್ಯ ಪರಿಷದಧ್ಯಕ್ಷರಾದ ಡಾ. ಸಾ. ಶಿ. ಮರುಳಯ್ಯನವರಿಂದ
ಮೈಸೂರಿನ ತಮ್ಮ ಕೋಟೆಮನೆಯಲ್ಲಿ ಸನ್ಮಾನ



ವಿದುಷಿ ಶಕುಂತಲಾಬಾಯಿ ಪಾಂಡುರಂಗರಾಯರಿಂದ 'ಶಾಕುಂತಲಾ' ಮಹಾಕಾವ್ಯ ವಾಚನದ ಧ್ವನಿಮುದ್ರಣ



ಭೋಜನ : (ಎಡದಿಂದ) ಸೊಸೆ ಅರುಣ, ಮಗ ಹರ್ಷ, ಮೊಮ್ಮಕ್ಕಳು ರವಿ ಮತ್ತು ಯಶು



ಸಾಹಿತ್ಯ ರಚನೆ



ಸಮೇತನಹಳ್ಳಿಯಲ್ಲಿ ಕುಲದೇವತೆ ಬನಶಂಕರೀ ಪೂಜೆ



ಕರ್ನಾಟಕ ಲೇಖಕ ಸಂಘದವರು ಭಾರತದ ಮುಖ್ಯ ನ್ಯಾಯಾಧೀಶ (ನಿವೃತ್ತ) ಶ್ರೀ ಇ. ಎಸ್. ವೆಂಕಟರಾಮಯ್ಯ ಮತ್ತು ಕರ್ನಾಟಕದ ಮುಖ್ಯ ನ್ಯಾಯಾಧೀಶ (ನಿವೃತ್ತ) ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರುಗಳ ನೇತೃತ್ವದಲ್ಲಿ ಮಾಡಿದ ಸನ್ಮಾನ

ಆತ್ಮದರ್ಶನ

ನನ್ನ ಸಾಹಿತ್ಯೋಪಾಸನೆ

ಸನೋತನಹಳ್ಳಿ ರಾಮರಾಯ

ಅಗ್ನಿಮಂಥನ

ಈ ಲೇಖನದ ಆವಶ್ಯಕತೆ ನನಗೇನೂ ಕಂಡು ಬರಲಿಲ್ಲವಾದರೂ ಇಬ್ಬರೊ ಪ್ರಿಯಮಿತ್ರರಾದ ಪ್ರೊ॥ ಜಿ. ಅಶ್ವತ್ಥನಾರಾಯಣ ಮತ್ತು ಪ್ರೊ॥ ಎಸ್. ಶ್ರೀನಿವಾಸನ್ ರವರು ಇದರ ಆವಶ್ಯಕತೆಯನ್ನು ಒತ್ತಿ ಹೇಳಿದಾಗ. ನಾನು ಒಪ್ಪಿಕೊಳ್ಳಬೇಕಾಯಿತು. ಅವರ ನಿಲುವು ಇಷ್ಟು : ಒಂದು ಸಂಭಾವನಾಗ್ರಂಥ ಎಂದಮೇಲೆ ಗ್ರಂಥವ್ಯಕ್ತಿಯನ್ನು ಕುರಿತ ಲೇಖನ ಜೀವನದ ಪರಿಚಯ ಮತ್ತು ಸಾಹಿತ್ಯ ಪ್ರೇರಣೆಗಳ ಸಮಗ್ರವಸ್ತು ಅದರಲ್ಲಿರಬೇಕಾದುದು ಅಗತ್ಯ ಎಂಬುದು. "ನನ್ನ ಬಾಳಿನ ಕತೆಯನ್ನು ಕುರಿತ ವಿಸ್ತೃತ 'ಕೋಟೆಮನೆ' ಇದೆಯಲ್ಲಾ" ಎಂದು ಅಂದಾಗ, ಅದರ ಒಂದು ಸಂಕ್ಷಿಪ್ತ ರೂಪದ ಅಗತ್ಯ ವನ್ನು ಎತ್ತಿ ಹಿಡಿದರು. ಸಂಕ್ಷಿಪ್ತವಾದರೂ ಅದರ ನೈಜ ರೂಪ ಪಡಿಮೂಡಬೇಕಾದರೆ, ಅದು ಲೇಖಕನ ಕೈಯಿಂದಲೇ ಹೊರಬರಬೇಕಾದುದು ಅಗತ್ಯವೆಂಬುದನ್ನೂ ಬಿಡಿಸಿ ಹೇಳಿದರು. ನಾನು ಒಪ್ಪಲೇ ಬೇಕಾಯಿತು.

ಇದರ ಒಂದನೆಯ ಭಾಗವಾದ 'ಅಗ್ನಿಮಂಥನ'ದಲ್ಲಿ ನನ್ನ ವೈಯಕ್ತಿಕ ಜೀವನದ ಒಂದು ಪಕ್ಷಿನೋಟವನ್ನೂ, ಎರಡನೆಯ ಭಾಗವಾದ 'ರಸೋತ್ಸಾಹ'ದಲ್ಲಿ ನನ್ನ ಸಾಹಿತ್ಯ ಪ್ರೇರಣೆಯ ಕಥನವನ್ನೂ ಕುರಿತು ಹೇಳಿದ್ದೇನೆ. ಈ ಎರಡು ಪ್ರಕಾರಗಳನ್ನು ಹೀಗೆ ಬೇರೆ ಬೇರೆಯಾಗಿ ವಿಂಗಡಿಸಿಕೊಂಡೆನಾದುದರಿಂದ, ಕೆಲವು ಸನ್ನಿವೇಶಗಳ ಪುನರುಕ್ತಿ ಅನಿವಾರ್ಯವಾದುದಾಯಿತು.

ನಾನು ನನ್ನ ಜೀವನದ ಉದ್ದಕ್ಕೂ ಉಂಡದ್ದು ಉಟ್ಟದ್ದು, ಹಾಸಿದುದು ಹೊದೆ ದುದು ಕಷ್ಟ ಕಾರ್ಪಣ್ಯಗಳೇ ಆದುವು. ಆದುದರಿಂದ ಸಹಜವಾಗಿ ನನ್ನ ಈ ನಿರೂಪ ಣೆಯೂ ಕೂಡ ಅದನ್ನೇ ಒಳಗೊಂಡಿರುತ್ತದೆಂಬುದನ್ನು ಮೊದಲೇ ಅರಿಕೆಮಾಡಿಕೊಳ್ಳ ಬಯಸುತ್ತೇನೆ. ಸ್ಫಟಿಕದಂತೆ ಹೊಳೆ ಹೊಳೆವ ತಿಳಿನೀರಿನ ಕೊಳದಲ್ಲಿ ಒಂದು ಹಿಡಿಯ ಗಾತ್ರದ ಕಲ್ಲನ್ನು ಎತ್ತಿ ಹಾಕಿದರೂ ಸಾಕು, ನೀರು ಅಲ್ಲಕಲ್ಲೋಲವಾಗಿ, ಆ ಕೇಂದ್ರದಿಂದ ಹೊರಟ ವರ್ತುಲದಲೆಗಳು ಬಹುಕಾಲ, ತನಗಾದ ಆಘಾತದ ಪರಿಯನ್ನು ಬಿತ್ತರಿಸು ತ್ತಿರುತ್ತದೆ. ನನ್ನ ಮನಸ್ಸಿನ ತಿಳಿ ಇಂಥದು. ಇಂತಹ ಸಹಜಕ್ರಿಯೆಯನ್ನು ನನ್ನ ಹತೋಟಿಯೊಳಕ್ಕೆ ತಂದುಕೊಳ್ಳಬೇಕೆಂಬ ನನ್ನ ದೃಢ ಸಂಕಲ್ಪ ಸಲಸಲವೂ ಸೋಲನ್ನು ಅನುಭವಿಸಿತೆಂಬುದನ್ನು ಇಲ್ಲಿ ಬಿಚ್ಚುಮನಸ್ಸಿನಿಂದ ನಿರವಿಸಬಯಸುತ್ತೇನೆ. ಇದ

ರಿಂದಾಗಿ ನಿದ್ದೆಯಿಲ್ಲದ ರಾತ್ರಿಗಳು, ಅನ್ನಸೇರದ ಹಗಲುಗಳ ಸಂಖ್ಯೆ, ಬಾಂದಳದ ತಾರೆಗಳಂತೆ ಅಗಣಿತವಾದವುಗಳು. ಇವುಗಳಲ್ಲಿ ಲೇಶವಾದರೂ ಉತ್ಪ್ರೇಕ್ಷೆ ಇರುವುದಿಲ್ಲ. ನನ್ನ ಈ ನವಿರು ಮನಸ್ಸಿನಿಂದಾಗಿ, ನನ್ನ ಸಂಕಷ್ಟಗಳನ್ನು ಮತ್ತು ನರಳುವಿಕೆಗಳನ್ನು ನಾನೇ ತಂದುಕೊಂಡೆನೇ ಎಂಬ ಬೇಗುದಿ ಕೂಡ ನನ್ನನ್ನು ಕಾಡುತ್ತದೆ.

ನೋವುಗಳ ಈ ಮಲಿನ, ಈ ಕೆಸರು, ಭಗವಂತನ ದೃಷ್ಟಿಯಿಂದ ನನ್ನಲ್ಲಿರ ಬೇಕಾದುದು ಅಗತ್ಯವಾಯಿತೇನೋ ! ಕೆಸರು ಒಸರುಗಳನ್ನು ಉಂಡೇ ಕಮಲದ ಬಳ್ಳಿ ಸಹಸ್ರದಲದ ಕೆಂದಾವರೆಯಾಗಿ ಅರಳೀತು. ಕೊಳೆ ಕಸಗಳಿಂದ ಕೂಡಿದ ಗೊಬ್ಬರವನ್ನು ಉಂಡೇ ಗಿಡಮರಗಳು ತೋರತರವಾಗಿ ಬೆಳೆದು, ಹಸಿರನ್ನು ತುಂಬಿಕೊಂಡು, ರಸ ಭರಿತವಾದ ಹಣ್ಣುಗಳನ್ನು ಕೊಡುತ್ತವೆ. ಅವುಗಳಿಲ್ಲದೆ ತಾವರೆ ಹೊರವಾಗಿ ಬೆಳೆಯುವು ದಿಲ್ಲ ; ಗಿಡಮರಗಳ ಬೆಳೆವಣಿಗೆ ಕುಂಠಿತಗೊಳ್ಳುತ್ತದೆ ; ಕೊಂಬೆ ರೆಂಬೆಗಳು ತಮ್ಮ ಸತ್ತ್ವ ಹೀನತೆಯಿಂದ ಮುರುಟಿ ರೋಗಗ್ರಸ್ತವಾಗಿ, ಪೇಲವಗೊಂಡು, ಬಾಡಿಹೋಗುತ್ತವೆ. ಸಾಹಿತ್ಯ ಕೃತಿಗಳೆಂಬ ಹೂ ಹಣ್ಣುಗಳ ಸಮಾರಾಧನೆಯ ವಸಂತೋತ್ಸವಕ್ಕೆ ನನ್ನ ನಿರಂತರವಾದ, ಮುರಿಯದ, ಮುಗಿಯದ, ನೋವೆಂಬ ಗೋಡು ಗೊಬ್ಬರಗಳು ಅವಶ್ಯಕ ವಾದುವೇನೋ. ನಾನು ಹೀಗೆ ಯೋಚಿಸಿದಾಗ, ನನ್ನ ಮನಸ್ಸು ಹಗುರಗೊಳ್ಳುತ್ತದೆ. ಆಗ ಧನ್ಯತೆಯೆಂದೆಂಬ ಹಾಲಿನ ಒಂದು ಹೊಸ ಉಕ್ಕು ಉಕ್ಕಿ ತಳದಲ್ಲಿ ಉರಿಯುವ ತನಿಗೆಂಡವನ್ನೂ ಆರಿಸುತ್ತದೆ.

ನನ್ನ ಸಾಹಿತ್ಯ ಸೃಷ್ಟಿಯ ಉಗಮ ಯಾವ ಮಾನಸಿಕ ಸ್ಥಿತಿಯ ಹಿನ್ನೆಲೆಯಲ್ಲಿ ಆಯಿತು ಎಂಬ ಮಾತು ಬಂದಾಗ, ನಾನು ಸತ್ಯವನ್ನು ಮರೆಮಾಚಬಾರದು. ನನ್ನ ಅತಿ ಹತ್ತಿರದವರ ಮನೋಧರ್ಮ, ಅವರುಗಳು ತಮ್ಮ ತಮ್ಮ ಜೀವನದಲ್ಲಿ ಅನುಸರಿಸಿದ ರೀತಿ ನೀತಿಗಳು ಕೆಲವು ನೇರವಾಗಿಯೋ, ಮತ್ತೆ ಕೆಲವು ಅಪರೋಕ್ಷವಾಗಿಯೋ, ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿವೆ. ನನ್ನ ಈ ಮನಸ್ಸಿನ ಈ ಮಾಟಗಳು ನನ್ನ ಪ್ರಚೋದನ ಶಕ್ತಿಯನ್ನು ನಿಯಂತ್ರಿಸಿದುವು. ಅವರುಗಳು ಹೆತ್ತ ತಂದೆ ತಾಯಿಗಳಾಗಿರಬಹುದು, ತಂಗಿ ತಮ್ಮಂದಿರುಗಳಾಗಿರಬಹುದು, ನೆರೆಯವ ರಾಗಿರಬಹುದು, ಅಥವಾ ನನ್ನ ಸಂಪರ್ಕದಲ್ಲಿ ಬದುಕಿದ ಮಿತ್ರರೋ ಸಹೋದ್ಯೋಗಿ ಗಳೋ ಆಗಿರಬಹುದು. ಅವರುಗಳ ವಿಗಡತನಗಳ ಒತ್ತಡವನ್ನು, ಪ್ರೇಮ ಸೌಹಾರ್ದ ಗಳ ಬಾಂಧವ್ಯವನ್ನು, ಯಾವುದೇ ಕಾರಣದಿಂದ ಅಥವಾ ನೆಪದಿಂದ ಬಯಲ್ಗಿಡುವುದಾ ದರೆ, ನಾನು ಸತ್ಯವನ್ನೇ ಮರೆಮಾಚುವ ದೊಡ್ಡ ತಪ್ಪಿಗೆ ಗುರಿಯಾದೇನು. ಯಾವುದೇ ನಿಕಟವಾದ ಸಂಬಂಧ ಅಥವಾ ದಾಕ್ಷಿಣ್ಯ ಸತ್ಯಕ್ಕಿಂತ ಹಿರಿದಾದುದೇನಾಗುವುದಿಲ್ಲ. ಋತ ವನ್ನು (ವಿಶ್ವನಿಯಮ) ಗೌರವಿಸಬೇಕಾದ ಯಾವನೇ ಒಬ್ಬ ಲೇಖಕ, ಈ ಪ್ರಾಪಂಚಿಕ ಬಂಧಗಳಿಂದ ಕಟ್ಟುವಡೆಯಬಾರದು. ಆದ್ದರಿಂದ ನಾನು ನನ್ನ ಮಾನಸಿಕ ತುಮುಲಕ್ಕೆ, ದಳ್ಳುರಿಗೆ, ಕಾರಣವಾದುದೆಲ್ಲವನ್ನೂ ಇಲ್ಲಿ ಪಡಿಮೂಡಿಸುವುದಾದರೆ, ಅವುಗಳನ್ನು ಯಾವುದೇ ವಿನಾಯಿತಿಗೆ ಒಳಪಡಿಸಬೇಕಾದುದು ಅನಾವಶ್ಯಕವಾದುದು.

ನನಗೀಗ ಎಂಬತ್ತನೆಯ ವರುಷ ನಡೆಯುತ್ತಿದೆ. ಅಷ್ಟು ಹಿಂದೆ ಹುಟ್ಟಿದ, ಮತ್ತು ಬಾಲ್ಯ ಯೌವನಗಳನ್ನು ಬದುಕಿದ, ನನ್ನ ಹಳ್ಳಿಯಾದ ಸಮೇತನಹಳ್ಳಿಯ ಪರಿಸರಣ ವೆಂಥದು, ಸಮಾಜದ ಕಟ್ಟುನಿಟ್ಟುಗಳೇನು ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಬೇಕಾದುದು ಅಗತ್ಯವಾದುದು. ಜಾತಿಯ ಕಟ್ಟುಪಾಡುಗಳು ಬಿಗಿ, ಬಹು ಬಿಗಿಯಾಗಿದ್ದ ಕಾಲ ಅದು. ನನ್ನ ಪೂರ್ವಜರು ಏಳು ತಲೆಮಾರುಗಳಿಂದ ಅಲ್ಲಿ ಬಾಳಿದವರು. ಅದೇ ಮಾಧ್ವಬ್ರಾಹ್ಮಣರ ಕಾಶ್ಯಪ ವಂಶವಾಗಿದ್ದಿತು. ಇದು ಐದಾರು ಮನೆಗಳಾಗಿ ಬೆಳೆದು ಬಾಳುತ್ತಿದ್ದಿತು. ಇವರುಗಳಲ್ಲದೆ ಒಕ್ಕಲಿಗ, ಕುರುಬ, ವೀರಶೈವ ಅಥವಾ ಲಿಂಗಾಯಿತ, ವಾಜ, ರೆಡ್ಡಿ, ಅಗಸ, ಹರಿಜನ ಮುಂತಾದ ಸುಮಾರು ಐವತ್ತು ಕುಟುಂಬಗಳಿದ್ದುವಷ್ಟೆ. ಈ ಹರಿಜನರನ್ನು ಸೋಕಿದರೂ ಬ್ರಾಹ್ಮಣನು ಸ್ನಾನ ಮಾಡುತ್ತಿದ್ದನು. ಇವರ ಕೇರಿಗೆ ಬ್ರಾಹ್ಮಣರು ಹೋಗಬಾರದಿತ್ತು. ಈ ಊರಿನಲ್ಲಿ ಪ್ರಧಾನವಾದ ಜಾತಿಯೆಂದರೆ ಕುರುಬಗೌಡರೇ ಆಗಿದ್ದರು.

ಇವರುಗಳೆಲ್ಲರಲ್ಲಿಯೂ ಬ್ರಾಹ್ಮಣರೇ ಅಗ್ರಗಣ್ಯರಾಗಿ, ಊರಿನ ಬಹುಭಾಗದ ನೆಲಕ್ಕೆ ಒಡೆಯರಾಗಿದ್ದರು. ಭೂಮಿಯ ಒಡೆತನದ ಮಾತು ಬಂದಾಗ ಹೇಳುವುದಾದರೆ, ನಾನು ಹುಟ್ಟಿದಾಗ ನಮ್ಮ 'ಕೋಟೆಮನೆ' ಕನಿಷ್ಠದಲ್ಲಿ ಕನಿಷ್ಠವಾದುದಾಗಿದ್ದಿತು. ಈ ಹಳ್ಳಿಗೆ ಎರಡು ಕೆರೆಗಳಿವೆ. ಇವು ಬೆಳುದಿಂಗಳಿಗೆ ಒಣಗಿ ಹೋಗುವಂತಹವು. ಆದಕಾರಣ ಕುಡಿಯುವ ಸಿಹಿನೀರಿಗೆ, ಸ್ನಾನಾದಿ ಬಳಕೆಯ ಉಪ್ಪುನೀರಿಗೆ ಪರದಾಟ ತಪ್ಪಿರಲಿಲ್ಲ. ಊರಿನ ಪಕ್ಕದಲ್ಲಿ ದಟ್ಟವಾದ ಆಲ, ಅತ್ತಿ, ಹೊಂಗೆ, ಬೇವು, ನೇರಿಳೆ, ಮಾವು, ಅರಳಿ, ಬಸುರಿ ಮುಂತಾದವುಗಳ ಎರಡು ತೋಪುಗಳಿದ್ದುವು. ಕೆರೆಯ ಅಚ್ಚುಕಟ್ಟಿನ ಕಡೆಗೆ ಕಟ್ಟೆಯ ಮೇಲೆ ಉದ್ದಕ್ಕೂ ಬೆಳೆದಿದ್ದ ಹೊಂಗೆಯ ಮರಗಳ ಸಾಲು ಒತ್ತಾಗಿ ಬೆಳೆದಿದ್ದಿತು. ಈ ಗಿಡ ಮರಗಳ ಒತ್ತು ಹಸಿರು, ಹೊಂಗೆಯ ಚಿಗುರು, ಅವು ದಟ್ಟವಾಗಿ ಉದುರಿಸುತ್ತಿದ್ದ ಹೂ ಗೆಜ್ಜೆಗಳ ಇಂಪುಗಳು ನನ್ನನ್ನು ಆಕರ್ಷಿಸಿದ್ದುವು. ಈ ಸಮೇತನಹಳ್ಳಿ ಬೆಂಗಳೂರಿನ ಪೂರ್ವಕ್ಕೆ ಹದಿನೈದು ಮೈಲುಗಳ ದೂರದಲ್ಲಿ, ದಕ್ಷಿಣ ಪಿನಾಕಿನೀ ನದಿಯ ದಂಡೆಯ ಮೇಲೆ ಇದೆ. ಈ ನಟಿಯಲ್ಲಿ ಮಳೆಗಾಲದಲ್ಲಿ ಮಾತ್ರ ಸ್ವಲ್ಪ ನೀರಿರುತ್ತದೆ ; ಮಿಕ್ಕಂತೆ ಒಣಗಿರುತ್ತದೆ.

ನಾನು ಹುಟ್ಟಿದುದು ಸಮೇತನಹಳ್ಳಿಯಲ್ಲಿಯೇ. ನನ್ನ ತಂದೆಯ ವಂಶಪಾರಂಪರ್ಯವಾಗಿ ಬಂದ ಊರೂ, ಮತ್ತು ನನ್ನ ತಾಯಿಯ ತೌರು ಬಾಳುತ್ತಿದ್ದ ಊರೂ ಅದೇ ಆಗಿದ್ದಿತು. ನನ್ನ ತಂದೆಯ ಹೆಸರು ಶ್ರೀನಿವಾಸರಾವ್. ನನ್ನ ತಾಯಿಯ ಹೆಸರು ರುಕ್ಮಿಣಿಯಮ್ಮ. ನನ್ನ ತಂದೆಯವರದು ಕಡು ಬಡತನದ ಬದುಕು. ತಿನ್ನಲು ಬಾಯಿಯನ್ನು ತೆರೆಯುವುದಕ್ಕೆ ರಾತ್ರಿಗೆ ಹೇಗೆ, ಬೆಳಿಗ್ಗೆಗೆ ಹೇಗೆ ಎಂಬ ಎದೆಗುದಿ ಅಲ್ಲಿ ಯಾವಾಗಲೂ ನೆಲೆಸಿದ್ದಿತು. ತಂದೆಯಾಗಲಿ, ತಾಯಿಯಾಗಲಿ ಉಡುತ್ತಿದ್ದ, ತೊಡುತ್ತಿದ್ದ ಬಟ್ಟೆಗಳಾದರೂ, ಹರಿದ ಕಡೆ ಗಂಟುಗಳನ್ನು ಹಾಕಿರುತ್ತಿದ್ದ ಕಂತೆಗಳು. ಏಕೆಂದರೆ ಹಿಂಜಿಕೊಳ್ಳುತ್ತಿದ್ದ ಆ ಬಟ್ಟೆಗಳನ್ನು ಹೊಲಿಯಲಾಗುತ್ತಿರಲಿಲ್ಲ. ಜೂಲು ಜೂಲುಗಳಾಗಿ ಓಲಾಡು

ತ್ತಿದ್ದ ಅವುಗಳ ಕೊನೆಗಳನ್ನು ನಯವಾಗಿ ಹಿಡಿದು ಗಂಟನ್ನೇ ಹಾಕಬೇಕಾಗಿದ್ದಿತು. ನನ್ನ ತಂದೆ ತನ್ನದೇ ಆದ ಒಂದು ಗುಡಿಸಿಲನ್ನೂ ಹಾಕಿಕೊಳ್ಳಲಿಲ್ಲ. ಹತ್ತಾರು ವರುಷಗಳ ಕಾಲ ಪರರವರು ಕೊಟ್ಟಿದ್ದ ಗುಡಿಸಿಲಿನಲ್ಲಿಯೇ ಬದುಕಿದರು. ಮಕ್ಕಳು ಮರಿ ಅಲ್ಲಿಯೇ ಯಥೇಚ್ಛವಾಗಿ ಆದುವು.

ನನ್ನ ತಂದೆಗೆ ಊರಿನ ನಾಲ್ವರ ಸಮ ಬದುಕಬೇಕೆಂಬ ಉತ್ಸಾಹದ ಒಂದು ಎಳೆಯಾದರೂ ಇರಲಿಲ್ಲ. ಅವರಿಗೆ ಪಿತ್ರಾರ್ಜಿತವಾದ ಸ್ವಲ್ಪ ಆಸ್ತಿ ಬಂದಿದ್ದುದೇನೋ ಉಂಟು. ಅವರಿಗೆ ಅದನ್ನು ರೂಢಿಸಿಕೊಂಡು ತನ್ನ ಬದುಕನ್ನು ನೆಮ್ಮದಿಗೊಳಿಸಿಕೊಳ್ಳಬೇಕೆಂಬ ಶ್ರದ್ಧೆ ಎಂದೂ ಇರಲಿಲ್ಲ. ಸರಕಾರದ ಸಹಾಯಧನದ ಒಂದು ಶಾಲೆಯನ್ನು ಪಕ್ಕದ ಬೋದನ ಹೊಸಹಳ್ಳಿಯಲ್ಲಿ ನಾನು ಹುಟ್ಟಿದ ಐದು ವರುಷಗಳ ಮೇಲೆ ಹಿಡಿದರಾದರೂ, ಅದರ ಆದಾಯ ಏಳು ರೂಪಾಯಿಗಳು ಯಾವುದಕ್ಕೂ ನಿಲುಕುತ್ತಿರಲಿಲ್ಲ. ವರುಷಕ್ಕೋ ಎರಡು ವರುಷಕ್ಕೋ ಸರಿಯಾದ ಮಳೆ ಆದಾಗ ಬೆಳೆ ಬಂದು, ರೈತನು ತಿಂದು ಉಳಿದ ಸ್ವಲ್ಪಭಾಗದ ರಾಗಿ ಮತ್ತು ನೆಲ್ಲುಗಳು ಬರುತ್ತಿದ್ದುವು. ಆದರೆ ನನ್ನ ತಾಯಿಗೆ ಮನೆಯ ದವಸವನ್ನು ಕಳ್ಳತನದಿಂದ ಆರಕ್ಕೆ ಮೂರಾಗಿ ಮಾರಾಟ ಮಾಡಿ, ಸ್ವಲ್ಪ ಕಾಸನ್ನು ಮಾಡಿಕೊಳ್ಳುವ ಒಂದು ಚಟ ಇದ್ದಿತು. ಆದ್ದರಿಂದ ಮನೆಯ ಕಣಜ ಬಹು ಬೇಗ ಬರಿದಾಗಿ ಬಿಡುತ್ತಿದ್ದಿತು.

ನನ್ನ ತಾಯಿಯ ತಂದೆ ವೆಂಕಟಕೃಷ್ಣಯ್ಯನ ಬದುಕು ಇದಕ್ಕಿಂತಲೂ ಹೀನವಾದುದು. ಆತನು ಪಕ್ಕದ ಹೆಮ್ಮಂಡಹಳ್ಳಿಯ ಶಾನುಭೋಗನಾಗಿದ್ದರೂ ಬಂದ ಕಂದಾಯವನ್ನು ಖಜಾನೆಗೆ ಸರಿಯಾಗಿ ಕಟ್ಟುತ್ತಿರಲಿಲ್ಲ. ಸರಕಾರದ ಹಣವನ್ನು ದಸ್ತು ಮಾಡುತ್ತಿದ್ದನು. ಸರಕಾರ ನೋಡಿ ನೋಡಿ ಸಾಕಾಗಿ, ಅವನ ದಸ್ತರವನ್ನು ಕಿತ್ತುಕೊಂಡು, ಅವನನ್ನು ದೂರಕ್ಕೆ ಸಾಗ ಹಾಕಿತು.

ನನ್ನ ಈ ತಾತನ ಹೆಂಡತಿ ಜಾನಕಮ್ಮ* ಭಿಕ್ಷೆಯನ್ನು ಬೇಡಿಯೋ, ಸುಗ್ಗಿಯ ಕಾಲದಲ್ಲಿ ರೈತರು ಕಳದಿಂದ ದವಸವನ್ನು ಮನೆಗೆ ಸಾಗಿಸುವಾಗ, ಅಲ್ಲಿ ಕುಳಿತು, ಅವರು ಇವಳು ಚಾಚಿದ ಸೆರಗಿಗೆ ಹಾಕಿದ ಬೊಗಸೆ ಬೊಗಸೆಗಳ ಕಾಳನ್ನು ಸಂಗ್ರಹಿಸಿಯೋ, ರೈತರು ಹೊಲದ ಪೈರನ್ನು ಸಾಗಿಸಿಯಾದ ಮೇಲೆ, ಅಲ್ಲಿ ಬಿದ್ದಿರುತ್ತಿದ್ದ ತೆನೆಯ ತುಣುಕುಗಳನ್ನು ಆಕ್ಕಲು ಆಯ್ದುಕೊಂಡೋ ನಾಲ್ಕು ಪಾವು ದವಸವನ್ನು ಕೂಡಿಸಿಕೊಳ್ಳುತ್ತಿದ್ದಳು. ಸುತ್ತಣ ಗ್ರಾಮಗಳಲ್ಲಿ ಸತ್ತವರ ದಿವಸ ವಾರಗಳಿಗೆ ಮತ್ತು ಮದುವೆಗಳಿಗೆ ಹೋಗಿ, ಬ್ರಾಹ್ಮಣಿತಿ ಎಂದು ಅವರು ಕೊಡುತ್ತಿದ್ದ ಪಡಿಪಾವುಗಳ ಅಕ್ಕಿ ಮತ್ತು ರಾಗಿಯ ಹಿಟ್ಟುಗಳನ್ನೂ, ಮೂರುಕಾಸಿನ ದಕ್ಷಿಣೆಯನ್ನೂ ತರುತ್ತಿದ್ದಳು. ನಮ್ಮ ಈ ಮಾತಾಮಹರು ಮಧ್ಯಾಹ್ನ ಒಂದೊಮ್ಮೆ, ರಾತ್ರಿಯೊಮ್ಮೆ ಕಳ್ಳನಂತೆ ಬಂದು, ಅವುಗಳ

---

* ನಮ್ಮ ಈ ಜಾನಜ್ಜಿಯ ಬಾಳಿನ ಬವಣೆ ಮತ್ತು ನಿಷ್ಠೆಗಳನ್ನೇ ವಸ್ತುವನ್ನಾಗಿಸಿಕೊಂಡು 'ಬಾಳ ಚೆಲುವು' ಎಂಬ ಒಂದು ಕಿರು ಕಾದಂಬರಿಯನ್ನು ೧೯೫೦ರಲ್ಲಿಯೇ ಬರೆದಿರುವೆನಾದರೂ ಅದನ್ನು ನಾನು ಪ್ರಕಟಿಸಲಿಲ್ಲ.

ಪಕ್ವಾನ್ನವನ್ನುಂಡು ತನ್ನ ವಿಲಾಸಿನಿಯ ಮನೆಗೆ ನೆಮ್ಮದಿಯಾಗಿ ಹೋಗಿಬಿಡುತ್ತಿದ್ದರು. ಇಲ್ಲಿ ನಮ್ಮ ಕೋಟೆಮನೆಯಲ್ಲಿ ಮಕ್ಕಳು ಒಪ್ಪೊತ್ತು. ಎರಡು ಹೊತ್ತು ಉಪವಾಸದ ಹರಿವಾಸರವನ್ನು ಮಾಡಿದಾಗ, ನನ್ನ ಈ ಅಜ್ಜಿ ಮಕ್ಕಳ ಈ ಸಂಕಟವನ್ನು ನೋಡಲಾರದೆ ತನ್ನ ಗುಡಿಸಿಲಿನಿಂದ ತನ್ನ ಭಿಕ್ಷೆಯ ಪಾವು ಅರೆಪಾವನ್ನು ತಂದುಕೊಟ್ಟಾಗ ನನ್ನ ತಾಯಿ ಅದರಿಂದ ಅಂಬಲಿಯನ್ನು ಮಾಡಿಕೊಡುತ್ತಿದ್ದುದು ನನಗೆ ಈಗಲೂ ಚೆನ್ನಾಗಿ ನೆನಪಿದೆ.

ನಮ್ಮ ಕೋಟೆಮನೆಯು ಈ ಕಡು ಬಡತನಕ್ಕೆ ನನ್ನ ಪಿತಾಮಹ ವೆಂಕಟರಾಯಪ್ಪನವರು ಬಲವಾದ ಅಸ್ತಿಭಾರವನ್ನು ಹಾಕಿದ್ದರು. ಈತ ಯಾವುದೇ ವೃತ್ತಿಯನ್ನೂ ಮಾಡಲಿಲ್ಲ. ಇದ್ದ ಅಷ್ಟೋ ಇಷ್ಟೋ ಹೊಲಗದ್ದೆಗಳನ್ನು ರೈತರಿಗೆ ವಾರಕ್ಕೆ ಕೊಟ್ಟು, ಅವುಗಳಿಂದ ಬಂದ ನಾಲ್ಕು ಕಾಳಿನಲ್ಲಿಯೇ ಪ್ರತಿಯೊಂದನ್ನೂ ಹೊಂಚಿಕೊಳ್ಳುತ್ತ ಬದುಕಿದರು. ಇವರು ಊರಿನ ನಡುವಣ ಮನೆಯ ಸಮೀಪದ ಅರಳಿಮರದ ರಚ್ಚೆಯ ಮೇಲೆ ಕುಳಿತು, ಮಡಿಸಿದ ಮೊಳ ಕಾಲುಗಳಿಗೂ ಬೆನ್ನಿಗೂ ಒಂದು ಹಳೆಯ ಬಟ್ಟೆಯನ್ನು ಕಟ್ಟಿ, ಹಿಂದಕ್ಕೂ ಮುಂದಕ್ಕೂ ತೂಗಿಕೊಳ್ಳುತ್ತ ಕಾಲವನ್ನು ಕಳೆದವರು.

ನನ್ನ ಈ ತಾತ ವೆಂಕಟರಾಯಪ್ಪ ತನ್ನ ಹಿಡಿಯ ಅನ್ನಕ್ಕಾಗಿ ತಮ್ಮನ ಮಗನ ಮನೆಯನ್ನು ಸೇರಿಕೊಂಡು ಇದ್ದ ಒಬ್ಬನೇ ಮಗನನ್ನು ಬೀದಿಗೆ ಹಾಕುವಷ್ಟರ ಮಟ್ಟಿಗೆ ನಿರ್ದಯನಾಗಿ ಬದುಕಿದನು. ಈತನ ಬಾಳು ಎಷ್ಟು ಹೀನವಾದುದೆಂದರೆ, ಇದ್ದ ಒಬ್ಬಳೇ ಮಗಳಿಗೆ ಒಂದು ಬೊಟ್ಟು ಅರಿಶಿನ ಕುಂಕುಮವನ್ನು ಕೊಡಲಾಗುತ್ತಿರಲಿಲ್ಲ. ಸರಿಯ ದಾಯಾದಿಗಳ ನೆರೆಯಲ್ಲಿ ಬದುಕುತ್ತಿದ್ದ ಈ ಮಗಳು, ತೌರಿಲ್ಲದ ತನ್ನನ್ನು ಆಡಿಕೊಂಡು ನಕ್ಕಾರು ಎಂದು ಮಾನಕ್ಕೆ ಅಂಜಿ, ವರುಷಕ್ಕೋ ಎರಡು ವರುಷಕ್ಕೋ ಒಮ್ಮೆ ಕಾಡನೂರಿನ ತನ್ನ ಮನೆಯಿಂದ ಹತ್ತು ರೂಪಾಯಿಗಳನ್ನು ತಂದು, ತೌರಿನಲ್ಲಿ ನಾಲ್ಕು ದಿವಸಗಳ ಕಾಲ ಹಿಟ್ಟನ್ನೋ ಸೊಪ್ಪನ್ನೋ ತಿಂದು, ತಂದ ಕಾಸಿನಿಂದ ಒಂದು ಬಣ್ಣದ ಸೀರೆಯನ್ನು, ಅರಿಶಿನ ಕುಂಕುಮ ಹೂಗಳನ್ನು ತರಿಸಿಕೊಂಡು ತೌರಿನ ಗಂಟನ್ನು ಹೊತ್ತು ಹಿಂದಿರುಗುತ್ತಿದ್ದಳು.

ಸಮೇತನಹಳ್ಳಿ, ತಿರುಮಲಶೆಟ್ಟಿ ಹಳ್ಳಿ ಮತ್ತು ನಾಗನಾಯ್ಕನ ಕೋಟೆಗಳು ನೆರೆಯ ಗ್ರಾಮಗಳಾಗಿವೆ. ಇವುಗಳ ಶಾನುಭೋಗಿಕೆ ನಮ್ಮ ವಂಶದ ಹಿರಿಯ ತಲೆಮಾರಿನ ಕೃಷ್ಣಪ್ಪ ಎಂಬುವರದು. ಇವರು ಕೋಲಾರದ ಬಳಿಯ ನರಸಾಪುರಕ್ಕೆ ವಲಸೆ ಹೋದ ಮೇಲೆ, ಆ ವೃತ್ತಿ ನನ್ನ ತಾತ ವೆಂಕಟರಾಯಪ್ಪನವರ ತಂದೆ ನಂಜಪ್ಪನವರಿಗೆ ಬರಬೇಕಾಗಿತ್ತು. ನನ್ನ ಮುತ್ತಾತ ಈ ನಂಜಪ್ಪ ಸಮೇತನಹಳ್ಳಿಯಲ್ಲಿ ತಮ್ಮ ಆಸ್ತಿಯನ್ನು ರೂಢಿಸಿಕೊಂಡು, ದನಕರು ಮುಂತಾದವುಗಳಿಂದ ಸ್ವಲ್ಪ ನೇರವಾಗಿ ಬದುಕುತ್ತಿದ್ದರಾದುದರಿಂದ, ಈ ಶಾನುಭೋಗಿಕೆಯನ್ನು ತುಚ್ಛೀಕರಿಸಿಬಿಟ್ಟರು. ಆಗ ಅದನ್ನು ಕಿರಿಯ ಮನೆತನದವರು ತಮ್ಮದನ್ನಾಗಿಸಿಕೊಂಡರು. ಈ ವೃತ್ತಿ ವಂಶಪಾರಂಪರ್ಯವಾಗಿ ಹಿರಿಯ ತಲೆಮಾರಿಗೇ ಬರತಕ್ಕನಾದುದು. ತನ್ನ ತಂದೆ ನಂಜಪ್ಪ ಬೇಡವೆಂದುದನ್ನು

ಮಗ ವೆಂಕಟರಾಯಪ್ಪ ಸ್ವಲ್ಪ ಪ್ರಯತ್ನ ಪಟ್ಟಿದ್ದಿದ್ದರೆ ತಾನು ಪಡೆಯಬಹುದಾಗಿದ್ದಿತು. ಹಾಗೆ ಪಡೆಯಲು ನನ್ನ ತಾತ ವೆಂಕಟರಾಯಪ್ಪ ಮೈಯನ್ನು ಸ್ವಲ್ಪ ಅಲ್ಲಾಡಿಸಬೇಕಾಗಿದ್ದಿತು. ಹಾಗೆ ಮೈಯನ್ನು ಕದಲಿಸಿ ಆಯಾಸಗೊಳ್ಳುವುದು ನನ್ನ ತಾತನಿಗೆ ಇಷ್ಟವಾಗಲಿಲ್ಲ. ಕಿರಿಯ ಮನೆತನದವರು ಈ ಮೂರೂ ಗ್ರಾಮಗಳ ಶಾನುಭೋಗಿಕೆ ಹುದ್ದೆಯನ್ನು ಸಂಪಾದಿಸಿಕೊಂಡರು. ಹೀಗೆ ನನ್ನ ತಾತನ ಮತ್ತು ತಂದೆಯ ಎರಡೂ ತಲೆಮಾರುಗಳ ಸೋಂಬತನ ಸಮೇತನಹಳ್ಳಿಯ ಕೋಟೆಮನೆಯನ್ನು ದಟ್ಟದಾರಿದ್ರ್ಯಕ್ಕೆ ನೂಕಿದ್ದಿತು. ಈ ಶಾನುಭೋಗಿಕೆಗಳನ್ನು ಪಡೆದವರು ಶ್ರೀಮಂತರೇ ಆದರು.

ನನ್ನ ಮಾತಾಮಹ ವೆಂಕಟಕೃಷ್ಣಯ್ಯ ಹೆಮ್ಮೆಂಡಹಳ್ಳಿಯ ಶಾನುಭೋಗಿಕೆಯನ್ನು ಹೇಗೆ ಕಳೆದುಕೊಂಡನು ಎಂಬುದನ್ನು ಹಿಂದೆ ಹೇಳಿದ್ದೇನೆ. ನನ್ನ ಈ ತಾತನಿಗೆ ನನ್ನ ತಾಯಿ ಒಬ್ಬಳೇ ಮಗಳಾದುದರಿಂದ, ದೌಹಿತ್ರ ಸಂಬಂಧದಿಂದ ಅದು ನನಗೆ ಬರಬೇಕಾಗಿದ್ದಿತೆಂದು ಜನ ಅಂದುಕೊಂಡರು. ಸಮೇತನಹಳ್ಳಿಯ ಅದೇ ಕಿರಿಯ ವಂಶದವರು ಸರಕಾರದ ಆ ಮಟ್ಟದಲ್ಲಿ ಮಾಡಬೇಕಾದುದನ್ನು ಮಾಡಿದುದರಿಂದ, ಸರಕಾರ ಇದರ ದಸ್ತುರವನ್ನೂ ಅವರಿಗೇ ಕೊಡಿಸಿತು. ಅವರು ಬದುಕಿದರು. ಈ ನಾಲ್ಕೂ ಗ್ರಾಮಗಳ ಈ ಶಾನುಭೋಗಿಕೆಗಳನ್ನು ಸ್ವಲ್ಪ ಪ್ರಯತ್ನಪಟ್ಟು ಸಾಧಿಸಿಕೊಂಡಿದ್ದರೆ, ಕೋಟೆಮನೆ ಅನ್ನ ಅನ್ನವೋ, ನೀರು ನೀರೋ ಎಂದು ಗೋಳಿಡುವ ರಿಕ್ತತನಕ್ಕೆ ಇಳಿಯಬೇಕಾಗಿರಲಿಲ್ಲ.

ನನ್ನ ಬಾಲ್ಯದ ಹಸಿದ ಹೊಟ್ಟೆಯ ಹತ್ತು ವರುಷಗಳನ್ನು ಸಮೇತನಹಳ್ಳಿಯಲ್ಲಿಯೇ ಬದುಕಿದೆನು. ನನ್ನ ತಂದೆ ತಾನು ನಡೆಸುತ್ತಿದ್ದ ಗ್ರ್ಯಾಂಟ್‌ಸ್ಕೂಲು ಪಕ್ಕದ ಬೋದನಹೊಸಹಳ್ಳಿಯಲ್ಲಿದ್ದುದರಿಂದ ನಾನು ಬೆಳಿಗ್ಗೆ ಮತ್ತು ಮಧ್ಯಾಹ್ನ ಅಲ್ಲಿಗೇ ಹೋಗಿ, ನನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದೆನು.

ನನ್ನ ತಂದೆ ನನಗೆ ಹೇಗಾದರೂ ಮಾಡಿ ಒಂದು ಕನ್ನಡ ಲೋಯರ್ ಸೆಕಂಡರಿ ಪರೀಕ್ಷೆಯನ್ನು ಮಾಡಿಸಿ, ಸರ್ಕಾರಿ ಪ್ರಾಥಮಿಕ ಶಾಲೆಯ ಉಪಾಧ್ಯಾಯನನ್ನಾಗಿ ಮಾಡುವ ಒಂದು ಮಹತ್ತರವಾದ ಆಸೆಯನ್ನು ಮೈಗೂಡಿಸಿಕೊಂಡಿದ್ದರು. ಇದು ಆಗ ರಾಜ್ಯಮಟ್ಟದ ಪರೀಕ್ಷೆಯಾಗಿದ್ದಿತು. ಆ ಸೌಲಭ್ಯವಿರುವ ಶಾಲೆ ನನ್ನ ಹಳ್ಳಿಗೆ ಅತಿ ಹತ್ತಿರದ್ದೆಂದರೆ ಐದು ಮೈಲಿ ದೂರದ ಒಂದು ಹೂಡಿಗ್ರಾಮ. ಅದು ತಪ್ಪಿದರೆ, ಎಂಟು ಮೈಲಿ ದೂರದ ತಾಲ್ಲೂಕು ಕೇಂದ್ರವಾದ ಹೊಸಕೋಟೆ ಇನ್ನೊಂದಾಗಿದ್ದಿತು. ನನ್ನನ್ನು ಅಲ್ಲಿರಿಸಿ ಓದಿಸುವುದು ನನ್ನ ತಂದೆಯವರಿಗೆ ಚಂದ್ರನನ್ನು ಎಟುಕಿಸುವಷ್ಟೇ ಅಸಾಧ್ಯವಾದುದಾಗಿದ್ದಿತು.

ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ದೊಡ್ಡ ಗ್ರಾಮವಾದ ಕಾಡನೂರಿನಲ್ಲಿ ಬರಿಯ ಕನ್ನಡ ಲೋಯರ್ ಸೆಕಂಡರಿ ಮಾತ್ರ ಇದ್ದಿತು. ಪ್ರಾಥಮಿಕದ ನಾಲ್ಕು ವರುಷಗಳು ಕಳೆದ ಮೇಲೆ ಮತ್ತೆ ಎರಡು ವರುಷಗಳ ಓದನ್ನು ಮುಗಿಸಿದ್ದರೆ, ನಾನು ಅವರೆಣಿಕೆಯ ಕನ್ನಡ ಲೋಯರ್ ಸೆಕಂಡರಿಯನ್ನು ಮಾಡಿಕೊಳ್ಳಬಹುದಾಗಿದ್ದಿತು. ಕಾಡನೂರಿ

ನಲ್ಲಿ ನನ್ನ ತಂದೆಯು ಅತಿ ಹತ್ತಿರದ ಸಂಬಂಧಿಯೊಬ್ಬನು ಇದ್ದುದರಿಂದ ಅವನ ಮನೆಯಲ್ಲಿ ನನ್ನನ್ನು ಬಿಟ್ಟರು.

ಇಲ್ಲಿ ನಾನು ಶಾಲೆಗೆ ಹೋಗುತ್ತಿದ್ದೆನಾದರೂ ಕಲಿತುದು ಏನೇನೂ ಇಲ್ಲ. ಆದರೆ ಮನೆಯಲ್ಲಿ ಗಾಣದೆತ್ತಿನಂತೆ, ಮನೆಯ ತೊತ್ತಿನಂತೆ, ಹಗಲಿರುಳೂ ದುಡಿದರೆ ಎರಡು ಹೊತ್ತಿನ ಹಿಟ್ಟು ಸಿಗುತ್ತಿದ್ದಿತು. ಇಲ್ಲಿ ನಾನು ಮಾಡದಿದ್ದ ಕೆಲಸವಿಲ್ಲ. ನಸುಗತ್ತಲಿನಲ್ಲಿ ಎದ್ದು ಮುಸುರೆಯ ಮಸಿಪಾತ್ರೆಗಳನ್ನು ಅಂಗೈಯಿಂದ ತಿಕ್ಕಿ ತಿಕ್ಕಿ ತೊಳೆಯುವುದರಿಂದ ಹಿಡಿದು, ಭತ್ತವನ್ನು ಕುಟ್ಟುವುದು, ರಾಗಿ ಬೀಸುವುದು, ಎಂಟು ಹತ್ತು ಆಳುದ್ದದ ದೇವಸ್ಥಾನದ ಬಾವಿಯಿಂದ ನೀರು ಸೇದಿ ತಂದು ತುಂಬುವುದು, ಭಾನುವಾರ ಮತ್ತು ರಜಾ ದಿನಗಳಲ್ಲಿ ನೀರಿನ ಒಲೆಗಾಗಿ ದೂರದ ಹಿಪ್ಪೆಯ ತೋಪಿನಿಂದ ಉದಿರಿರುತ್ತಿದ್ದ ತರಗೆಲೆಯನ್ನು ತರುವುದರ ವರೆಗಿನ ನನ್ನ ದುಡಿಮೆಯಿಂದ, ಮೂಳೆಗಳು ಲಟಲಟನೆ ಮುರಿಯುವ ಯಾತನೆಯನ್ನು ಕೊಡುತ್ತಿದ್ದುವು. ಎಣ್ಣೆ ಇಲ್ಲದ ತಲೆ ಬೂದು ಬಣ್ಣಕ್ಕೆ ತಿರುಗಿ ಜಡೆಗಳನ್ನು ಹೆಣೆದುಕೊಂಡಿದ್ದಿತು. ಹಿಂಬದಿಯ ಉದ್ದನೆಯ ಕೂದಲನ್ನು ಸ್ವಲ್ಪ ಹಿಡಿದು ಒದರಿದರೂ ಸಾಕು, ಕರಿಯ ದಪ್ಪ ದಪ್ಪ ಹೇನುಗಳು ಭುಜದ ಮೇಲೆ ತಪತಪನೆ ಉದಿರುತ್ತಿದ್ದುವು. ಈ ಯಾತನೆಗಳನ್ನು ತಾಳಲಾರದೆ, ಒಮ್ಮೊಮ್ಮೆ ಮರೆ ಮರೆಯಲ್ಲಿ ಅಳುತ್ತಿದ್ದೆನು. ನಾನು ಅತ್ತುದು ಗೊತ್ತಾದರೆ ಬಯ್ಗುಳಗಳು, ಹೊಡೆತಗಳು ತಪ್ಪುತ್ತಿರಲಿಲ್ಲ.

ಶರನ್ನವರಾತ್ರಿಯ ಹತ್ತು ದಿನಗಳ ರಜೆಯಲ್ಲಿ ತಂದೆ ಬಂದು ನನ್ನನ್ನು ಊರಿಗೆ ಕರೆದುಕೊಂಡು ಹೋದಾಗ, ನನ್ನ ಬವಣೆಗಳನ್ನು ಹೇಳಿಕೊಂಡು ಅತ್ತೆನು. ತಾಯಿ ಕರಗಿದಳಾದರೂ, ತಂದೆಯ ಕಲ್ಲುಮನಸ್ಸು ಅದಕ್ಕೆ ಗಮನವನ್ನು ಕೊಡಲಿಲ್ಲ. ಮತ್ತೆ ಕರೆದುಕೊಂಡು ಹೋಗಿ, ಆ ನರಕಕ್ಕೆ ನಿಷ್ಕರುಣೆಯಾಗಿ ದೂಡಿ ಬಂದರು. ನಮ್ಮ ಮೇಷ್ಟ್ರು ಸುಬ್ಬರಾಯರು ಒಂದು ಸಾರಿ ಬೆಂಗಳೂರಿನಲ್ಲಿ ನನ್ನ ತಂದೆಗೆ ಸಿಕ್ಕಿದಾಗ ನನ್ನ ಕ್ಷೇಮ ಸಮಾಚಾರವನ್ನು ಕೇಳಿದರಂತೆ. ಅದಕ್ಕೆ ಅವರು ಕೋಪಗೊಂಡು "ಲೇ ಶೀನ, ನಿನ್ನ ಮಗುವು ಬದುಕಬೇಕು ಎಂಬುದಿದ್ದರೆ, ಅವನನ್ನು ಮೊದಲು ಕರೆದುಕೊಂಡು ಬಂದು ಬಿಡು" ಎಂದು ಅಂದರು. ಆಗ ನನ್ನ ತಂದೆಗೆ ಸ್ವಲ್ಪ ಕರುಣೆಮೂಡಿ, ಶಾಲೆಯ ವರ್ಷಾಂತ್ಯದ ದಿನಗಳಲ್ಲಿ ಕರೆದುಕೊಂಡು ಸಮೇತನಹಳ್ಳಿಗೆ ಬಂದು ಬಿಟ್ಟರು.

ನಾನು ಕನ್ನಡ ಲೋಯರ್ ಸೆಕಂಡರಿಯನ್ನು ಮಾಡಬೇಕೆಂಬ ಅವರ ಧೀರ ಸಂಕಲ್ಪ ಮುಂದೂಡಲಿಲ್ಲ. ಕೋಲಾರದ ಬಳಿಯ ನರಸಾಪುರದಲ್ಲಿ ಅವರಿಗೆ ತನ್ನತಾಯಿ ಚೆನ್ನಮ್ಮನಿಗೆ ತಂಗಿಯ ವರಿಸೆಯಲ್ಲಿದ್ದ ಆಲಮೇಲಮ್ಮ ಎಂಬಾಕೆ ಇದ್ದರು. ಅಲ್ಲಿಗೆ ಹೋಗಿ ಆಕೆಯನ್ನು ಕಾಡಿ ಬೇಡಿದರು. ಆಕೆ ವಿಧವೆ ; ಮನೆಯ ಯಜಮಾನಿ ; ನನ್ನನ್ನು ಒಂದು ವರಷಕಾಲ ಇರಿಸಿಕೊಳ್ಳಲು ಒಪ್ಪಿದರು. ಆ ಮನೆಯ ಅಳಿಯ ಕುರ್ಕಿ ಕೃಷ್ಣಪ್ಪ ಆತನ ಮಗಳು ಕಾವೇರಮ್ಮ—ಈಕೆ ಅಲಮೇಲಜ್ಜಿಯ ಮಗಳ ಮಗಳು—ಪುಟ್ಟಕ್ಕ ಇವರುಗಳು ನನ್ನನ್ನು ಮಾನವ ಸಂಬಂಧದ ಪ್ರೇಮದಿಂದ ನಡೆಯಿಸಿಕೊಂಡರು.

ನನ್ನನ್ನು ಅವರೆಲ್ಲರೂ ಮನೆಯ ಮಗನೆಂದೇ ಕಂಡರು.

ಈ ನರಸಾಪುರದಲ್ಲಿ ಲೋಯರ್ ಸೆಕಂಡರಿ ಹಂತದ ವಿದ್ಯಾಭ್ಯಾಸ ಇದ್ದಿತಾದರೂ ಅದರೊಡನೆ ಎರಡು ವರುಷಗಳ ಮಾಧ್ಯಮಿಕ ಇಂಗ್ಲಿಷ್ ಕಲಿಕೆಯೂ ಇದ್ದಿತು. ಈ ಹಿಂದೆ ನಾನು ಕಾಡನೂರಿನಲ್ಲಿ ಕನ್ನಡ ಲೋಯರ್ ಸೆಕಂಡರಿ ಪರೀಕ್ಷೆಯ ಹಿಂದಣ ಹಂತವನ್ನು ಪೂರೈಸಿದ್ದೆನಾದರೂ, ಈ ಶಾಲೆಗೆ ಬೇಕಾದ ಮೊದಲ ವರುಷದ ಇಂಗ್ಲಿಷನ್ನು ನಾನು ಅಧಿಕೃತವಾಗಿ ಮುಗಿಸಿರಲಿಲ್ಲ. ಆದರೆ ನನ್ನ ತಂದೆಯ ಅಕ್ಕ ಶಂಕರಮ್ಮನ ಎರಡನೆಯ ಮಗ ರಾಮಚಂದ್ರಬಾವ ಸಮೇತನಹಳ್ಳಿಯಲ್ಲಿ ನಮ್ಮ ಮನೆಯಲ್ಲಿಯೇ ಕೆಲವು ದಿವಸ ಇದ್ದುದರಿಂದ, ಇಂಗ್ಲಿಷ್‌ನ ಬಾಲಬೋಧೆಯನ್ನು ನನಗೆ ಹೇಳಿಕೊಟ್ಟಿದ್ದನು. ಅದು ಈಗ ನನ್ನ ನೆರವಿಗೆ ಬಂದಿತು. ಈ **In complete middle School** ನ ಕೊನೆಯ ಪರೀಕ್ಷೆಯ ಹಂತಕ್ಕೆ ಸೇರಬೇಕಾಗಿದ್ದರೆ, ಈ ಇಂಗ್ಲಿಷ್ ಕಲಿಕೆ ಸಾಕಾಗಿದ್ದಿತು. ನನ್ನನ್ನು ಪರೀಕ್ಷಿಸಿದ ಮುಖ್ಯೋಪಾಧ್ಯಾಯರಾದ ಶ್ರೀ ಪಾಪಾಶಾಸ್ತ್ರಿಗಳು ನನ್ನ ಅರ್ಹತೆಯನ್ನು ಕಂಡರು ; ಪರೀಕ್ಷೆಯ ಕೊನೆಯ ತರಗತಿಗೆ ಸೇರಿಸಿಕೊಂಡರು. ವರುಷಾಂತ್ಯದಲ್ಲಿ ಎಂಟು ಮೈಲಿ ದೂರದಲ್ಲಿದ್ದ ಕೋಲಾರಕ್ಕೆ ಹೋಗಿ, ನಾಲ್ಕೈದು ದಿನಗಳ ಪರೀಕ್ಷೆಯಲ್ಲಿ ಬರೆದು ಬಂದೆನು. ಫಲಿತಾಂಶ ಬಂದಾಗ ನಾನು ತೇರ್ಗಡೆಯಾಗಿದ್ದೆನು. ನನಗೀಗ ಹದಿಮೂರು ವರುಷಗಳು ತುಂಬಿದ್ದವು.

ಯಾವನೇ ಹುಡುಗ ಇಂಗ್ಲಿಷ್ ಲೋಯರ್ ಸೆಕಂಡರಿ ಮಾಡಿದವನು, ಕನ್ನಡ ಲೋಯರ್ ಸೆಕಂಡರಿ ಮಾಡಿದವನಿಗಿಂತ ಹೆಚ್ಚು ಗೌರವಾನ್ವಿತನಾಗಿದ್ದನು. ಉಪಾಧ್ಯಾಯ ವೃತ್ತಿಗೆ ಅರ್ಜಿಯನ್ನು ಬರೆದುಕೊಂಡಾಗ, ಈ ಅಭ್ಯರ್ಥಿಗೆ ಹೆಚ್ಚು ಪುರಸ್ಕಾರ ಸಿಗುತ್ತಿದ್ದಿತು. ಆದ್ದರಿಂದ ಏನಾದರೂ ಶತಪ್ರಯ್ನದಿಂದ, ಇಂಗ್ಲಿಷು ಮಾತ್ರದ ಮತ್ತೆರಡು ವರುಷಗಳನ್ನು ಮುಗಿಸಬೇಕೆಂಬ ಮಹೋದ್ದೇಶದಿಂದ, ನನ್ನ ತಂದೆ ತನ್ನ **Grant in aid** ಶಾಲೆಯ ಕೆಲಸವನ್ನು ಬಿಡುವ ಅವಿವೇಕದಿಂದ ತುಂಬಿ, ಬೆಂಗಳೂರಿನ ಮಾವಳ್ಳಿಯಲ್ಲಿ ಅಂಗಡಿಯಾಗಿದ್ದ ತಿಂಗಳಿಗೆ ಎರಡು ರೂಪಾಯಿಗಳ ಬಾಡಿಗೆಯ ಕೊಠಡಿಯೊಂದನ್ನು ಹಿಡಿದರು. ತನ್ನ ಶಾಲೆಯನ್ನು ಮಾವ ವೆಂಕಟಕೃಷ್ಣಯ್ಯನಿಗೆ ವಹಿಸಿ, ವಿಶ್ವೇಶ್ವರಪುರದ ಇಂಗ್ಲಿಷ್ ಮಾಧ್ಯಮಿಕ ಶಾಲೆಯಲ್ಲಿ ಮೂರನೆಯ ತರಗತಿಗೆ ಇಂಗ್ಲಿಷಿಗೆ ಮಾತ್ರ ಸೇರಿಸಿದರು.

ಬರುತ್ತಿದ್ದ ಏಳು ರೂಪಾಯಿಗಳ ವರಮಾನವೂ ನಿಂತು ಹೋಗಿ, ಬೆಂಗಳೂರಿನಲ್ಲಿ ಎರಡು ಜೀವಗಳ ನಿರ್ವಹಣೆ ಬೇರೆ ಆಗಬೇಕಾಗಿದ್ದಿತು. ಇನ್ನು ಹಳ್ಳಿಯಲ್ಲಿ ನನ್ನ ತಾಯಿ ಮತ್ತು ಇವರ ಮಕ್ಕಳು ಪಾಡು ಯಾವ ನಾಯಿಯ ಪಾಡಾಗಬೇಡ ! ನನ್ನ ತಂದೆಗೆ ಆಗ ನಲವತ್ತೈದರ ಪ್ರಾಯ. ಬೆಂಗಳೂರಿನಂತಹ ದೊಡ್ಡಪಟ್ಟಣದಲ್ಲಿ ಏನಾದರೂ ಮಾಡಿ ಎರಡು ಕಾಸನ್ನು ತರಬಹುದಾಗಿದ್ದಿತು. ಏನೂ ಮಾಡಲಿಲ್ಲ. ಒಂದೆರಡು ದಿವಸ ಕೋಟೆ ಆಂಜನೇಯ ಸ್ವಾಮಿಯ ದೇವಸ್ಥಾನದಲ್ಲಿ ಕುಳಿತು ಬರುವ ಭಕ್ತಾದಿಗಳ ಮುಂದೆ ಕೈಯನ್ನೊಡ್ಡಿದರು ; ಎರಡು ಆಣೆಗಳನ್ನೂ ತಂದರು. ಬಹಳ ಹೊತ್ತು ಕುಳಿತರೆ ಮೈಕೈ

ನೋಯುತ್ತದೆ ಎಂದು ಅದನ್ನು ಬಿಟ್ಟರು. ಅವರಿಗೆ ಕೆಲಸವನ್ನು ಹುಡುಕುವ ಛಾತಿಯಾಗಲಿ, ದುಡಿಯುವ ಲವಲವಿಕೆಯಾಗಲಿ ಇರಲಿಲ್ಲ. ಆ ವರುಷ ಸ್ವಲ್ಪ ಬೆಳೆ ಬಂದಿದ್ದುದರಿಂದ, ವಾರಕ್ಕೊಮ್ಮೆ ಹದಿನೈದು ಮೈಲುಗಳ ದೂರವನ್ನು ನಡೆದು ಹೋಗಿ, ವಾರಕ್ಕೆ ಬೇಕಾದ ರಾಗಿಯ ಹಿಟ್ಟು ಅಕ್ಕಿಗಳನ್ನು ತಲೆಯ ಮೇಲೆ ಹೊತ್ತೋ ಅಥವಾ ಮೂರು ಆಣೆಗಳನ್ನು ಕೊಟ್ಟು ರೈಲಿನಲ್ಲಿಯೋ ತರುತ್ತಿದ್ದರು.

ಮೂರು–ನಾಲ್ಕು ತಿಂಗಳುಗಳು ಹೀಗೆ ನಡೆಯುವ ವೇಳೆಗೆ, ವರುಷಾರ್ಧದ ಪರೀಕ್ಷೆ ಬಂದಿತು. ಈ ವೇಳೆಗೆ ಅವರಿಗೆ ಈ ಪಟ್ಟಣದ ಜೀವನ ಸಾಕುಸಾಕಾಗಿಹೋಗಿದ್ದಿತು. ದೀರ್ಘವಾದ ಪರ್ಯಾಲೋಚನೆಯ ನಂತರ ಅವರು ಬೆಂಗಳೂರನ್ನು ಬಿಟ್ಟು ಹಳ್ಳಿಗೆ ಹಿಂದಿರುಗಿ ಹೋಗಿ ತನ್ನ ಶಾಲೆಯ ಕೆಲಸವನ್ನು ವಹಿಸಿಕೊಳ್ಳುವುದೆಂದೂ, ನನ್ನನ್ನು ರೈಲು ನಿಲ್ದಾಣಕ್ಕೆ ಹತ್ತಿರವಾಗಿದ್ದ ಬಳೇಪೇಟೆಯ ಆರ್ಯವಿದ್ಯಾಶಾಲೆಗೆ ಸೇರಿಸಿ ಪ್ರತಿನಿತ್ಯ ಹಳ್ಳಿಯಿಂದ ರೈಲಿನಲ್ಲಿ ಹೋಗಿ ಬರುವುದೆಂದೂ ತೀರ್ಮಾನಿಸಿದರು. ಇದು ಸ್ವಲ್ಪ ಹೆಚ್ಚಿನ ವಿವೇಕ ಆಯಿತು. ರೈಲಿನಲ್ಲಿ ಪ್ರಯಾಣ ಮಾಡುವ ವಿದ್ಯಾರ್ಥಿಗಳಿಗೆ ವೈಟ್‌ಫೀಲ್ಡ್ ರೈಲು ನಿಲ್ದಾಣದಿಂದ ಒಂದು ತಿಂಗಳ ಗಡುವಿನ ದರ ಎರಡು ರೂಪಾಯಿ ಹತ್ತು ಆಣೆಗಳಾಗಿದ್ದುವು. ಬರುವ ಏಳು ರೂಪಾಯಿಗಳಲ್ಲಿ ಈ ವೆಚ್ಚವನ್ನು ತೆಗೆದರೆ, ನಾಲ್ಕು ರೂಪಾಯಿ ಆರು ಆಣೆಗಳನ್ನು ತನ್ನ ಸಂಸಾರಕ್ಕಾಗಿ ಉಪಯೋಗಿಸಬಹುದಾಗಿದ್ದಿತು. ಬೆಂಗಳೂರಿನಲ್ಲಿ ಇದ್ದ ಮೂರು–ನಾಲ್ಕು ತಿಂಗಳುಗಳ ಕಾಲ ಮನೆಯ ವೆಚ್ಚಕ್ಕೆ ಇದೂ ಇಲ್ಲವಾಗಿದ್ದಿತು.

ಸೇರಿದಾಗಿನಿಂದ ಮಾವಳ್ಳಿಯ ಕೊಠಡಿಯ ಯಜಮಾನನಿಗೆ ತಂದೆ ಬಾಡಿಗೆಯನ್ನು ಕೊಟ್ಟಿರಲಿಲ್ಲ. ಅದು ಎಂಟು ರೂಪಾಯಿಗಳೋ ಏನೋ ಆಗಿತ್ತು. ತಂದೆ ನನ್ನನ್ನು ಒಂದು ದಿನ ಅರ್ಧರಾತ್ರಿಯಲ್ಲಿ ಎಬ್ಬಿಸಿದರು. 'ಏಳು ಊರಿಗೆ ಹೋಗೋಣ' ಎಂದರು. ನಾನು ಎದ್ದೆನು. ಇದ್ದ ಒಂದೆರಡು ಅರಿವೆಗಳನ್ನು ಹೆಗಲ ಮೇಲೆ ಹಾಕಿಕೊಂಡರು. ಒಂದೆರಡು ನೀರು ಕುಡಿಯುವ ಲೋಟಗಳನ್ನು ಕೈಯಲ್ಲಿ ಹಿಡಿದುಕೊಂಡರು. ಬಳಸುತ್ತಿದ್ದ ನಾಲ್ಕಾರು ಮಡಿಕೆಗಳನ್ನು ಅಲ್ಲಿಯೇ ಬಿಟ್ಟು, ಬಾಗಿಲಿನ ಹಲಗೆಗಳನ್ನು ದಾಲವಂದ್ರದ ಕಾಲುವೆಗಳಿಗೆ ಕೂಡಿಸಿದರು. ಇಬ್ಬರೂ ಹೊರಕ್ಕೆ ನಡೆದೆವು. ಸ್ವಲ್ಪ ದೂರ ಮಾವಳ್ಳಿಯ ವರ್ತುಲದವರೆಗೆ ನಡೆವ ವೇಳೆಗೆ, ಅವೇಳೆ ಹೊತ್ತಿನಲ್ಲಿ ಸಂಚರಿಸುತ್ತಿರುವ ನಮ್ಮನ್ನು ಪೋಲೀಸಿನವರು ಹಿಡಿದುಕೊಂಡು ಹೋದಾರೆಂಬ ಭಯ ಅವರನ್ನು ಕಾಡಿತು. ಬೆಳಕು ಹರಿಯುವವರೆಗೆ ನಮ್ಮ ಶಾಲೆಯ ಮರೆಯಲ್ಲಿ ಅಡಗಿ ಕುಳಿತೆವು. ಆಮೇಲೆ ನಡೆದು ನಮ್ಮ ಹಳ್ಳಿಯನ್ನು ಸೇರಿದೆವು.

ದಸರೆಯ ರಜ ಕಳೆದ ಮೇಲೆ ನಾನು ಬಳೇಪೇಟೆಯ ಆರ್ಯವಿದ್ಯಾಶಾಲೆಯನ್ನು ಸೇರಿದೆನು. ಪ್ರತಿನಿತ್ಯ ಹಳ್ಳಿಯಿಂದ ಮೂರು ಮೈಲು ದೂರದ ವೈಟ್‌ಫೀಲ್ಡ್ ನಿಲ್ದಾಣಕ್ಕೆ ನಡೆದು ಹೋಗಿ ರೈಲನ್ನು ಹಿಡಿಯುತ್ತಿದ್ದೆನು. ತಾಯಿ ನನಗೆ ಮಧ್ಯಾಹ್ನದ ತಿಂಡಿಗೆಂದು ರಾಗಿಯ ರೊಟ್ಟಿಯನ್ನೋ, ಅಕ್ಕಿ ಇದ್ದ ದಿವಸ ಹುಣಿಸೆಯ ಗೊಜ್ಜಿನಲ್ಲಿ ಕಲಸಿದ

ಅನ್ನವನ್ನೋ, ಒಂದು ಚಿಕ್ಕ ಅಲ್ಯೂಮಿನಿಯಂ ತಂಬಿಗೆಯಲ್ಲಿ ಹಾಕುತ್ತಿದ್ದಳು. ಅದನ್ನು ಕೈಯಲ್ಲಿ ಹಿಡಿದುಕೊಂಡು ಹೋಗಲನುಕೂಲವಾಗುವಂತೆ, ತಂದೆ ಒಂದು ಹಳೆಯ ಬಟ್ಟೆಯ ಚೌಕವನ್ನು ಹಾಸಿ, ಅದರ ನಡುವೆ ಆ ತಂಬಿಗೆಯನ್ನಿರಿಸಿ, ಚೌಕದ ನಾಲ್ಕೂ ಕೊನೆಗಳನ್ನು ಸೇರಿಸಿ ಒಂದು ಕುಣಿಕೆಯನ್ನು ಹಾಕಿಕೊಡುತ್ತಿದ್ದರು. ನಾನು ಅದನ್ನು ಕೈಯಲ್ಲಿ ಹಿಡಿದು ತೂಗುಬಿಟ್ಟು ತೆಗೆದುಕೊಂಡು ಹೋಗುತ್ತಿದ್ದೆನು. ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಅದನ್ನು ತಿಂದುಕೊಳ್ಳುತ್ತಿದ್ದೆನು ; ನಲ್ಲಿಯಲ್ಲಿಯ ನೀರನ್ನೂ ಕುಡಿಯುತ್ತಿದ್ದೆನು.

ಅದು ಸ್ವಾತಂತ್ರ್ಯ ಚಳುವಳಿ ಆರಂಭವಾಗಿದ್ದ ಕಾಲ. ಎಲ್ಲೆಲ್ಲಿಯೂ ದೇಶಭಕ್ತಿ ತುಂಬಿ ತುಳುಕಾಡಿದ್ದಿತು. ನಮ್ಮ ಆರ್ಯ ವಿದ್ಯಾಶಾಲೆ ಖಾಸಗಿಯಾಗಿದ್ದುದರಿಂದ, ಉಪಾಧ್ಯಾಯರುಗಳೆಲ್ಲರೂ ಶುದ್ಧ ಖಾದಿಯನ್ನೇ ಹಾಕುತ್ತಿದ್ದರು ; ಬಿಳಿಯ ಖಾದಿಯ ಟೋಪಿಗಳನ್ನೇ ಧರಿಸುತ್ತಿದ್ದರು. ವಿದ್ಯಾರ್ಥಿಗಳು ಕನಿಷ್ಠಪಕ್ಷ ಖಾದಿ ಟೋಪಿಯನ್ನಾದರೂ ಹಾಕಲೇಬೇಕೆಂಬ ಕಡ್ಡಾಯ ಆ ಶಾಲೆಯಲ್ಲಿ ಇದ್ದಿತು. ನಾನು ಶಾಲೆಗೆ ಸೇರಿದ ತಕ್ಷಣ ಎರಡು ಆಣೆ—ಈಗಿನ ಹನ್ನೆರಡು ಪೈಸೆಗಳನ್ನು ಕೊಟ್ಟು ಆ ಟೋಪಿಯನ್ನು ತೆಗೆದುಕೊಳ್ಳಲು ಆಗಲಿಲ್ಲ. ಉಪಾಧ್ಯಾಯರುಗಳಿಂದ ಅನೇಕ ಎಚ್ಚರಿಕೆಗಳನ್ನು ತೆಗೆದುಕೊಂಡ ಮೇಲೆ ಕೋಟೆ ಪ್ರದೇಶದಲ್ಲಿದ್ದ ಖಾದಿ ಭಂಡಾರಕ್ಕೆ ಹೋಗಿ, ಆ ಟೋಪಿಯನ್ನು ತಂದು ಹಾಕಿಕೊಂಡೆನು.

ಶಾಲೆಯಲ್ಲಿ ಪಾಠವನ್ನು ಕೇಳುತ್ತ ತಕಲಿಯಿಂದ ನೂಲನ್ನು ತೆಗೆಯಬಹುದೆಂಬ ಅನುಮತಿ ಇದ್ದಿತು. ನನ್ನ ಓರಗೆಯವರು ಕೆಲವರು ಹಾಗೆ ಮಾಡುತ್ತಿದ್ದುದೂ ಉಂಟು. ಹಾಗೆ ಮಾಡುವ ಆಸೆ ನನಗೂ ಇದ್ದಿತಾದರೂ, ನನಗೆ ತಕಲಿಯನ್ನು ಕೊಳ್ಳುವ ಒಂದು ಆಣೆಯನ್ನು ಹೊಂಚಿಕೊಡಲು ನನ್ನ ತಂದೆಯಿಂದ ಆಗಲಿಲ್ಲ. ನನ್ನ ಈ ಆಸೆಯನ್ನು ನಾನು ದಮನ ಮಾಡಿಕೊಳ್ಳಬೇಕಾಯಿತು. ವರುಷದ ಕೊನೆಯಲ್ಲಿ ನಾನು ನನ್ನ ಇಂಗ್ಲಿಷ್ ಭಾಷೆಯ ಎರಡು ಪ್ರಶ್ನಪತ್ರಿಕೆಗಳಿಗೆ ಮಾತ್ರ ಉತ್ತರವನ್ನು ಬರೆದು ಪರೀಕ್ಷೆಯನ್ನು ಕೊಟ್ಟೆನು.

ನನ್ನ ತಂದೆಯನ್ನು ಅರ್ಥಾತ್ ಬೀದಿಗೆ ನೂಕಿ, ನನ್ನ ತಂದೆಯೇ ದುಡಿದು ಕಟ್ಟಿದ್ದ ಮನೆಯನ್ನು ತಾನು ಆಕ್ರಮಿಸಿಕೊಂಡಿದ್ದ*, ನನ್ನ ಚಿಕ್ಕ ತಾತ ರಾಮಪ್ಪನ ಮಗ ಕಪಿನಯ್ಯ ಈ ರಜದ ದಿನಗಳಲ್ಲಿ ತನ್ನ ಅಕ್ಕ ತುಳಶಮ್ಮನ ಮಗಳಿಗೆ ಮದುವೆಯನ್ನು ಮಾಡಿದನು. ಆ ಮದುವೆಯ ಸಮಾರಂಭದ ನಡುವೆ ನನ್ನ ತಂದೆ ನನ್ನ ಉಪನಯನವನ್ನೂ ಮಾಡಿದರು. ತನ್ನ ತಮ್ಮ ಕಪಿನಯ್ಯನೂ ಅವನ ಅಕ್ಕ ಭಾವಂದಿರುಗಳೆಲ್ಲರೂ ತನ್ನ ಬದುಕನ್ನು ಹೀಗೆ ಬನ್ನಂಗಗೊಳಿಸಿದರಲ್ಲ ಎಂಬ ರೊಚ್ಚು ಮತ್ತು ತಾನೂ ಸರಿಯಾಗಿ

---

* ಈ ಘಟನೆ ನನ್ನ ಪೀಳಿಗೆಯಲ್ಲಿ ನನಗೂ ಅನ್ವಯಿಸಿ, ಆಮೇಲೆ ನನ್ನ ಮಗನಿಗೂ ಹೇಗೆ ಪುನರಾವರ್ತನೆಗೊಂಡಿತು ಎಂಬುದನ್ನು ಮುಂದಿನ ಪುಟಗಳಲ್ಲಿ ಕಾಣೋಣ.

ನಿಲ್ಲಬೇಕೆಂಬ ಅಭಿಮಾನ ರವೆಯಷ್ಟಾದರೂ ಇಲ್ಲದ ತಂದೆ, ಆ ಮದುವೆಯಲ್ಲಿ ನನ್ನ ಉಪನಯನವನ್ನೂ ಮಾಡಿದುದರಲ್ಲಿ ಅವರಿಗೆ ನಾಚಿಕೆಯೇನೂ ಆಗಲಿಲ್ಲ.

ನನ್ನ ಮಾತಾಮಹ ವೆಂಕಟಕೃಷ್ಣಯ್ಯನ ಭಂಡತನದ ಬದುಕು ಎಂತಹುದು ಎಂಬುದಕ್ಕೆ ಇಲ್ಲಿ ನಡೆದ ಒಂದು ಘಟನೆಯನ್ನು ನಾನು ನೆನಪಿಗೆ ತಂದುಕೊಳ್ಳಬಯಸುತ್ತೇನೆ. ನನ್ನ ಈ ತಾತ ತನ್ನ ಗುಡಿಸಲನ್ನು ಬಿಟ್ಟು ಯಾವಾಗಲೂ ತಾನು ಮಡಗಿಕೊಂಡಿದ್ದ ಗಂಡಸತ್ತ ವಾಜರ ಹೆಂಗಸಿನ ಮನೆಯಲ್ಲಿಯೇ ಇರುತ್ತಿದ್ದನೆಂಬುದನ್ನೂ, ನಮ್ಮ ಜಾನಜ್ಜಿ ತಾನು ತಿರಿದು ತಂದ ಕಾಳಿನಿಂದ ಬೇಯಿಸಿದ ರಾಗಿಯ ಹಿಟ್ಟಿಗಾಗಿ ಮತ್ತು ಬಾಯಿ ತುಂಬುವಷ್ಟು ಅನ್ನಕ್ಕಾಗಿ ಮಾತ್ರ ಎರಡು ಹೊತ್ತು ಹತ್ತು ನಿಮಿಷಗಳ ಕಾಲ ಮಾತ್ರ ಅಲ್ಲಿಗೆ ಹೋಗುತ್ತಿದ್ದನೆಂಬುದನ್ನು ಹಿಂದೆ ಹೇಳಿದ್ದೇನೆ.

ಸಾಧಾರಣವಾಗಿ ಬ್ರಾಹ್ಮಣರ ಕುಲದಲ್ಲಿ ಒಬ್ಬ ಗಂಡುಮಗನಿಗೆ ಉಪನಯನವಾಗುತ್ತದೆ ಎಂದಾಗ ಆ ವಟುವಿನ ತಾಯಿಯ ತೌರಿನವರು ಮಗಳಿಗೆ ಸೀರೆ, ರವಿಕೆಗಳನ್ನು ಅಳಿಯನಿಗೆ ಧೋತರದ ಜತೆಯನ್ನು, ವಟುವಿಗೆ ಕೋಟು, ಷರಟು, ಬಾಸಿಂಗವನ್ನು ಕಟ್ಟಲು ಟೋಪಿ, ಪಂಚೆ ಮುಂತಾದ ವಸ್ತ್ರಗಳನ್ನೂ, ಸಂಧ್ಯಾವಂದನೆಗೆಂದು ತಟ್ಟೆ, ಪಂಚಪಾತ್ರೆ, ಉದ್ಧರಣೆ ಅರ್ಘ್ಯ ಪಾತ್ರೆಗಳನ್ನು ಕೊಡಬೇಕಾದುದು ಒಂದು ಸಂಪ್ರದಾಯವಾಗಿದೆ. ಅನುಕೂಲವಿರುವವರು ತಮ್ಮ ಅಂತಸ್ತಿಗೆ ತಕ್ಕಂತೆ ಬೆಳ್ಳಿ ಮತ್ತು ಜರತಾರಿಗಳನ್ನೇ ತರುತ್ತಾರೆ. ನನ್ನ ಈ ತಾತ ವೆಂಕಟಕೃಷ್ಣಯ್ಯ ಇವಾವುದನ್ನೂ ಮನಸ್ಸಿಗೆ ಹಚ್ಚಿಕೊಂಡವನಲ್ಲ. ಹೆಣ್ಣುಮಗಳು ತೌರಿನಿಂದ ಬಂದ ಹೊಸ ಸೀರೆಯನ್ನುಟ್ಟು ಮಗನಿಗೆ ಬ್ರಹ್ಮೋಪದೇಶವನ್ನು ಮಾಡಿಸುವುದು ಪದ್ಧತಿಯಾಗಿದೆ. ವೆಂಕಟಕೃಷ್ಣಯ್ಯನ ಈ ಚರ್ಯೆಯನ್ನು ಎಲ್ಲರೂ ನಿರೀಕ್ಷಿಸಿದುದೇ ಆಗಿದ್ದುದರಿಂದ ಅದನ್ನು ಬಿಟ್ಟು ಕಳೆಯೋಣ. ಅವರಿವರಲ್ಲಿ ಬೇಡಿ ತಂದಿದ್ದ ನಾಲ್ಕು ಕಾಸುಗಳಲ್ಲಿ ನನ್ನ ತಂದೆಯೇ ನನಗೊಂದು ಕೋಟನ್ನೂ ಒಂದು ಪಂಚೆ, ಒಂದು ಟೋಪಿಯನ್ನೂ ತಂದಿದ್ದರು. ಈ ಪಂಚೆಯನ್ನು ಅರಿಶಿನದ ನೀರಿನಲ್ಲಿ ನೆನೆಯಿಸಿ, ಒಣಗಿಸಿ ನನಗೆ ಉಡಿಸಿದ್ದರು.

ಬ್ರಹ್ಮೋಪದೇಶವಾಗಿ ಅನಂತರದ ನಾಗೋಲೆಯ ಸಂದರ್ಭದಲ್ಲಿ ನನ್ನ ಈ ತಾತ ವೆಂಕಟಕೃಷ್ಣಯ್ಯ ತನ್ನ ಸೂಳೆಯ ಮನೆಯ ಕಡೆಯಿಂದ ಮದುವೆಗೆಂದು ಬಂದಿದ್ದ ವಾಲಗದವರಿಂದ ನಾಗಸ್ವರವನ್ನು ನುಡಿಸಿಸುತ್ತ ನಡು ಬೀದಿಯಲ್ಲಿ ಹಿಂದೆ ಮೆರವಣಿಗೆಯಲ್ಲಿ ಬರುತ್ತಿದ್ದ ಆಕೆ ಮತ್ತು ಆಕೆಯ ಮನೆಯ ಕಡೆಯವರ ನಾಲ್ಕು ಜನರ ಮುಂದೆ ತಾನು ಠೀವಿಯಿಂದ ನಡೆದು ಬರುತ್ತಿದ್ದಾನೆ. ಹಿಂದೆ ಬರುತ್ತಿದ್ದ ಆ ಅಕ್ಕಸಾಲಿಗರ ಹೆಂಗಸರು ಕೈಯಲ್ಲಿ ಒಂದೆರಡು ತಟ್ಟೆಗಳನ್ನು ಹಿಡಿದಿದ್ದಾರೆ. ಬೀದಿಯ ಈ ವಿಧದ ಮೆರವಣಿಗೆಯಲ್ಲಿ ಬಂದ ಇವರು ಹಸೆಯ ಮುಂದಕ್ಕೆ ಬಂದು ಆ ತಟ್ಟೆಗಳನ್ನು ವಟುವಿನ ಮುಂದೆ ಇರಿಸಿದರು.

ಆ ಎರಡೂ ತಟ್ಟೆಗಳಲ್ಲಿ ಇದ್ದುವಾದರೂ ಏನು ? ಒಂದರಲ್ಲಿ ಎಂಟು ಆಣೆಯ ಗಿಲೀಟು ಅಂಚಿನ ನಾರಿನ ಮೂರು ಮೊಳದ ಒಂದು ಕೆಂಪು ಕೈಚೌಕ, ಇನ್ನೊಂದರಲ್ಲಿ

ವೀಳೆಯದೆಲೆಯಲ್ಲಿ ಸುತ್ತಿ ಅಂಚಿಯ ಕಡ್ಡಿಗಳನ್ನು ಚುಚ್ಚಿ ಬಿಗಿಗೊಳಿಸಿದ್ದ ಹತ್ತು ಅಡಕೆಯ ಪಟ್ಟಿಗಳು, ಒಂದು ಮೊಳದಷ್ಟರ ಮಲ್ಲಿಗೆಯ ಸರ, ಒಂದು ಚಿಪ್ಪು ಬಾಳೆಯ ಹಣ್ಣು—ಇವಿಷ್ಟು ಮಾತ್ರ. ಶುಭ್ರವಾದ ಕೋಟು ರುಮಾಲೆಗಳನ್ನು ಧರಿಸಿದ್ದ ಈ ತಾತ ಜರ್ಬಿನಿಂದ ನಿಂತು, ಪುರೋಹಿತರಿಗೆ ಆ ತಟ್ಟೆಗಳತ್ತ ಕೈಬೀಸಿ, ಮೊಮ್ಮಗನಿಗೆ ಓದಿಸಿ ಕೊಡಲು ಅಪ್ಪಣೆ ಮಾಡಿದರು. ಪುರೋಹಿತ ಸ್ವಾಮಿರಾಯಾಚಾರ್ಯರು ಆ ಕರ ವಸ್ತ್ರದ ತಟ್ಟೆಯನ್ನು ಎತ್ತಿ ಹಿಡಿದು, ವಸ್ತ್ರಕ್ಕೆ ಅರಿಶಿನ ಕುಂಕುಮಗಳನ್ನು ಹಚ್ಚಿ, ಶುಭ ಸೂಕ್ತವನ್ನು ಪಠಿಸಿ, ಏರುದನಿಯಲ್ಲಿ “ಹೆಮ್ಮಂಡಹಳ್ಳಿ ಶಾನುಭೋಗ್ ಶ್ರೀ ಶ್ರೀ ವೆಂಕಟ ಕೃಷ್ಣಯ್ಯನವರು ಮೊಮ್ಮಗನಿಗೆ ಆಶೀರ್ವಾದ ಮಾಡಿಕೊಟ್ಟಂಥಾ ಲಕ್ಷವರಹಗಳು ಮತ್ತು ಪಟ್ಟವಾಳಿ ಉಡಿಗೆ ತೊಡಿಗೆಗಳು !” ಎಂದು ಉದ್ಘೋಷಿಸಿ ನನ್ನ ಕೈಗೆ ಕೊಟ್ಟರು. ನಾನು ತೆಗೆದುಕೊಂಡೆನು. ಈ ಓದಿಸೋಣ ಮುಗಿವವರೆಗೆ ಆ ವಾಜರ ವಿಧವೆಯೂ, ಅವಳ ಸಂಗಡಿಗರೂ ನನ್ನ ತಾತನ ಪಕ್ಕದ ಅಷ್ಟು ದೂರದಲ್ಲಿ, ಅದು ತಮ್ಮದು ಎಂಬ ಹೆಮ್ಮೆಯನ್ನು ಮೈಯಲ್ಲಿ ತುಂಬಿಕೊಂಡೆ ನಿಂತರು.

ಪಾಪ, ನನ್ನ ಅಜ್ಜಿ ಜಾನಮ್ಮ, ವೆಂಕಟಕೃಷ್ಣಯ್ಯನ ಅರ್ಧಾಂಗಿ, ಗಂಡನನ್ನು ದೇವರಂತೆ ಕಂಡು ಅವನನ್ನು ಸೇವಿಸುತ್ತಿದ್ದ ಕೈ ಹಿಡಿದ ಹೆಂಡತಿ, ಮುಖದ ತುಂಬ, ಕೈ ಕಾಲುಗಳ ತುಂಬ ಅರಿಶಿನವನ್ನು ಹಚ್ಚಿ, ಕುಂಕುಮವನ್ನಿಟ್ಟು, ಬಾಚಿದ ತಲೆಯ ಗಂಟಿಗೆ ಹೂವಿನ ಹಾರದ ತುಣುಕೊಂದನ್ನು ಮುಡಿದು, ನನ್ನ ಹಿಂದೆಯೇ ಕುಳಿತಿದ್ದ ಮುಪ್ಪಿನ ಮುತ್ತೈದೆ ಜಾನಜ್ಜಿ, ಇದನ್ನೆಲ್ಲ ನಿರ್ಲಿಪ್ತ ಭಾವದಿಂದ ನೋಡಿದಳು. ತನ್ನನ್ನು ಕಡೆಗಣಿಸಿ ತನ್ನ ಸೂಳೆಯೊಡನೆ ಮೆರವಣಿಗೆಯಲ್ಲಿ ಬಂದು, ತನ್ನ ಗಂಡ ಹೀಗೆ ಮಾಡಿದ್ದ ನಲ್ಲಾ ಎಂಬ ನವಿರು ನೋವಾದರೂ ಅವಳ ಮುಖದ ಮೇಲೆ ಸುಳಿಯಲಿಲ್ಲ ; ಅದು ತನಗಾದ ಅವಮಾನವೆಂದೆಂಬ ಸುಳಿವಿನ ಎಳೆಯಾದರೂ ಅವಳಲ್ಲಿ ಕಾಣಲಿಲ್ಲ. ತನ್ನ ತೌರಿನ ಕಡೆಯ ತಂದೆ ಒಂದು ನೂಲಿನ ಎಳೆಯನ್ನಾದರೂ ಕಾಣಿಸಲಿಲ್ಲವಲ್ಲ ಎಂಬ ಬೇವು ನನ್ನ ತಾಯಿಯಲ್ಲಿಯೂ ಕಾಣಿಸಲಿಲ್ಲ. ಅದನ್ನು ಅವಳು ಎಂದೂ ನಿರೀಕ್ಷಿಸಿರಲಿಲ್ಲ ವಾಗಿ, ಆ ಬೇಗುದಿ ಅವಳನ್ನು ಕಾಡಲಿಲ್ಲ. ನನ್ನ ತಾತನ ಈ ಮಾನಗೇಡಿ ನಡತೆ ಯಾವ ಮಟ್ಟದ್ದು, ನಾನು ಹುಟ್ಟಿದುದು ಎಂತಹ ವಾತಾವರಣದಲ್ಲಿ ಎಂಬುದನ್ನು ನಿರವಿಸಲು ಈ ಒಂದು ಸಂದರ್ಭವನ್ನು ಮಾತ್ರ ಕುರಿತು ಇಲ್ಲಿ ಹೇಳಿದ್ದೇನೆ. ಕೆಲವು ದಿನಗಳ ಮೇಲೆ ಬೆಂಗಳೂರಿಗೆ ಹೋಗಿ ನನ್ನ ಪರೀಕ್ಷೆಯ ಫಲಿತಾಂಶವನ್ನು ನೋಡಿದಾಗ ನಾನು ತೇರ್ಗಡೆ ಯಾಗಿದ್ದೆನು.

ರೈಲಿನ ನಿತ್ಯದ ಸಂಚಾರ ಅಲ್ಲಿಗೆ ನಿಂತು ಹೋಯಿತು. ಆಮೇಲೆ ಇಂಗ್ಲಿಷ್ ಲೋಯರ್ ಸೆಕಂಡರಿಯ ನಾಲ್ಕನೆಯ ವರುಷದ ಇಂಗ್ಲಿಷು ಭಾಷೆಯನ್ನು ಮಾತ್ರ ಸಮೇತನಹಳ್ಳಿಗೆ ನಾಲ್ಕೈದು ಮೈಲಿಗಳ ದೂರದಲ್ಲಿರುವ ಹೂಡಿಯಲ್ಲಿದ್ದುಕೊಂಡು ಮುಗಿಸುವುದೆಂದಾಯಿತು. ನನ್ನೊಡನೆ ಇನ್ನೂ ಇಬ್ಬರು ಹುಡುಗರು ಸೇರಿಕೊಂಡರು. ಮೂವರೂ ಅಲ್ಲಿ ಅಡುಗೆ ಮಾಡಿಕೊಂಡೆವು. ಅಲ್ಲಿ ರಾಜ್ಯಮಟ್ಟದ ಇಂಗ್ಲಿಷ್ ಲೋಯರ್

ಸೆಕೆಂಡರಿಯಲ್ಲಿ ನಾನು ತೇರ್ಗಡೆಯಾಗಿ, ಪ್ರಾಥಮಿಕ ಶಾಲೆಯ ಉಪಾಧ್ಯಾಯನಾಗಲು ಹೆಚ್ಚು ಅರ್ಹನಾದುದರಿಂದ, ನನ್ನ ತಂದೆಯ ಮಹತ್ವಾಕಾಂಕ್ಷೆ ಈಡೇರಿದಂತಾಯಿತು. ಇದರಿಂದ ತನ್ನ ಜೀವನದ ಗುರಿ ಮುಟ್ಟಿತೆಂದು ನನ್ನ ತಂದೆ ಒಂದು ದಿವ್ಯವಾದ ನೆಮ್ಮದಿಯನ್ನು ತಂದುಕೊಂಡರು.

ನನ್ನ ತಂದೆಗೀಗ ನಲವತ್ತೇಳರ ವಯಸ್ಸು ; ನನಗೆ ಹದಿನೈದರ ಹರೆಯ. ಈಗ ನನ್ನ ತಂದೆ ಮಾನಸಿಕವಾಗಿ ಮುದಿತನವನ್ನು ತಂದು ಕೊಂಡರು. ತನ್ನ ಈ ಮುಪ್ಪಿನಲ್ಲಿ ಪ್ರಾಯಕ್ಕೆ ಬಂದಿರುವ ಹಿರಿಯ ಮಗನು ತನ್ನ ಕೈಯ ಕೆಲಸವನ್ನು ಕಿತ್ತುಕೊಂಡು, ತನ್ನನ್ನು ಪೋಷಣೆ ಮಾಡುವುದು, ತನ್ನ ಮಕ್ಕಳೆಲ್ಲರನ್ನೂ ಸಾಕುವುದು ನನ್ನ ಕರ್ತವ್ಯವೆಂದು ನಿರ್ಧರಿಸಿಬಿಟ್ಟರು. ತಾನು ನಡೆಸುತ್ತಿದ್ದ Grant in aid ಶಾಲೆಯನ್ನು ನನ್ನ ಹೆಸರಿಗೆ ಮಾಡಿಸಿ, ತಾನು ಹಾಯಾಗಿ ಇರುವುದಾಗಿ ಹೇಳಿದರು. ನಾನು ಇದನ್ನು ಒಪ್ಪಲಿಲ್ಲ. ನನ್ನ ಮುಂದಿನ ವಿದ್ಯಾಭ್ಯಾಸ ಅಸಾಧ್ಯವೆಂದೇ ನಾನು ನಿರ್ಧರಿಸಿದೆನಾದರೂ, ಮನೆಯ ಹಿರಿಯ ಮಗನಾಗಿ ಆ ಕೋಟೆ ಮನೆಯನ್ನು ನಡೆಸುವುದು ನನ್ನದೇ ಹೊಣೆಗಾರಿಕೆಯೆಂಬುದನ್ನು ಹೆಗಲ ಮೇಲಕ್ಕೆ ಹೇರಿಕೊಂಡೆನು.

ಹದಿನೈದರ ಹರೆಯದ ಹುಡುಗ ನಾನು ತಂದೆ ತಾಯಿಗಳಿಗೆ, ತಂಗಿ ತಮ್ಮಂದಿರುಗಳಿಗೆ ಬಾಯಿತುಂಬ ಹಿಟ್ಟನ್ನಾದರೂ ಒದಗಿಸುವ ಸಂಕಲ್ಪದಿಂದ ಬೆಂಗಳೂರಿಗೆ ಹೋದೆನು. ಅಲ್ಲಿನ ಅವಿನ್ಯೂ ರಸ್ತೆಯ ಒಬ್ಬ ಅಯ್ಯಂಗಾರ್ಯರ ರೊಟ್ಟಿಯ ಅಂಗಡಿಯಲ್ಲಿ, ಊಟ ಹಾಕಿ ತಿಂಗಳೊಂದಕ್ಕೆ ಐದು ರೂಪಾಯಿನ ವೇತನದ ಮೇಲೆ ಕೆಲಸಕ್ಕೆ ಸೇರಿಕೊಂಡೆನು. ನಾಲ್ಕೈದು ತಿಂಗಳಾದರೂ ಈ ಅಯ್ಯಂಗಾರ್ ನನಗೆ ಮೂರು ಕಾಸನ್ನೂ ಕೊಡಲಿಲ್ಲ. ಉಂಡದ್ದು ಮಾತ್ರ ಲಾಭವಾಯಿತು. ಅದನ್ನು ಬಿಟ್ಟೆನು. ಬಳೇಪೇಟೆಯ ಕೊಟ್ಟಿಗೆಗಲ್ಲಿಯ ಒಂದು ಉಡುಪಿಯವರ ಕಾಫಿಕ್ಲಬ್ಬಿನಲ್ಲಿ ಸೇರಿಕೊಂಡೆನು. ನನ್ನ ಊಟ ತಿಂಡಿ ಕಳೆದು ಹೋಗುತ್ತಿದ್ದುದರಿಂದ, ಬಂದ ಹಣವನ್ನು ತಂದೆಗೆ ಕಳಿಸಿದೆನು.

ತಂದೆ ಹೆರವರ ಅಂಗಳದ ಗುಡಿಸಿಲಿನಲ್ಲಿ ಇದ್ದರು ಎಂದು ಹೇಳಿದ್ದೇನೆ. ಈಗ ಹದಿನಾಲ್ಕು ವರುಷಗಳ ಮೇಲೆ ಕೋಟೆಯ ನಮ್ಮ ನಿವೇಶನದಲ್ಲಿ ಎತ್ತರದ ಗೋಡೆಯ, ಹುಲ್ಲಿನ ಚಾವಣಿಯ, ಒಂದು ಮನೆಯನ್ನು ಕಟ್ಟಲು, ತಾವೇ ಮಣ್ಣು ಕಲಸಿ ಗೋಡೆಯನ್ನು ಎಬ್ಬಿಸಿದ್ದರು. ಅದರ ಚಾವಣಿಗೆ ಬೇಕಾದ ಬಿದಿರು, ತಲೆ ಮರ, ಹೆಗ್ಗವರು ಮುಂತಾದುವುಗಳನ್ನು ಕೊಳ್ಳಲಾರದೆ, ಆ ಗೋಡೆ ಹಾಗೆಯೇ ಪಾಳಿನಂತೆ ಬಿದ್ದಿದ್ದಿತು. ನಾನು ನನ್ನ ತಂದೆಗೆ ಹಣವನ್ನು ಕೊಡುವಾಗ, ಅದರಲ್ಲಿ ಸ್ವಲ್ಪವನ್ನು ಮನೆಯ ಚಾವಣಿಗಾಗಿ ಉಪಯೋಗಿಸಿಕೊಂಡು, ಉಳಿದುದನ್ನು ನನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಕೂಡಿಡಬೇಕೆಂದು ಕಟ್ಟುಪಾಡು ಮಾಡಿದ್ದೆನು. ತಂದೆ ಹಾಗೆ ಮಾಡಲಿಲ್ಲ. ನನ್ನ ಹಣವೆಲ್ಲವನ್ನೂ ತನ್ನ ಸಂಸಾರದ ಬಾಯಿಗಳನ್ನು ತುಂಬಲು ಬಳಸಿಬಿಟ್ಟಿದ್ದರು. ನನಗೆ ಇದರಿಂದ ತುಂಬ ನಿರಾಸೆಯೂ ಸಂಕಟವೂ ಆಯಿತು. ನನ್ನ ಎರಡು ವರುಷಗಳ ದುಡಿಮೆ ಹೀಗೆ

ಕೋಟೆಮನೆಯ ಬಾಯಿಗಳನ್ನು ತುಂಬಲು ಮೈಮುಚ್ಚಲು ವ್ಯಯವಾಯಿತು.

ಆದರೆ ಪ್ರೌಢ ಶಾಲೆಯಲ್ಲಿ ಓದುವ ನನ್ನ ಸಂಕಲ್ಪ ಬೆಂಗಳೂರನ್ನು ಸೇರಿದ ಮೇಲೆ ಮತ್ತೆ ದೃಢಗೊಂಡಿತು. ನಮ್ಮ ದಾಯಾದಿ ಹುಡುಗರಿಬ್ಬರೊಡನೆ ಸೇರಿಕೊಂಡು ಅಡುಗೆ ಮಾಡಿಕೊಂಡು ಹೈಸ್ಕೂಲಿನಲ್ಲಿ ಓದುವುದೆಂದು ನಿರ್ಧರವಾಯಿತು. ಯಲಹಂಕ ಬಾಗಿಲ ಬಳಿಯ ಲಂಡನ್ ಮಿಷನ್ ಹೈಸ್ಕೂಲನ್ನು ಸೇರಿದೆನು. ಇದು ಆಮೇಲೆ ಸರ ಕಾರದ ಸೆಂಟ್ರಲ್ ಹೈಸ್ಕೂಲ್ ಎಂದಾಯಿತು. ಈ ವ್ಯವಸ್ಥೆ ಒಂದೆರಡು ತಿಂಗಳು ಕಳೆಯಿ ತಪ್ಪೆ. ಮನೆಯನ್ನು ಕೊಟ್ಟಿದ್ದವರು ಪಕ್ಕದ ಹಳ್ಳಿಯವರಾದುದರಿಂದ, ಅವರು ಇಲ್ಲಿ ಯಾವಾಗಲೂ ಒಬ್ಬರೋ ಇಬ್ಬರೋ ಇದ್ದೇ ಇರುತ್ತಿದ್ದರು. ಅವರ ವೆಚ್ಚವನ್ನು ಭರಿಸುವುದು ನನಗೆ ಅಸಾಧ್ಯವೆಂದಾಗ, ಆ ವ್ಯವಸ್ಥೆಯನ್ನು ತ್ಯಜಿಸಿದೆನು. ವಿಶ್ವೇಶ್ವರಪುರದ ನಾಲ್ಕು ಮನೆಗಳನ್ನು ರಾತ್ರಿಯ ಕಾಲತಿರುಗಿ, ಭಿಕ್ಷೆ ಬೇಡಿದೆನು ; ತಂದುದನ್ನು ಬೀದಿಯ ಬೆಳಕಿನಲ್ಲಿ ಉಂಡು ಬೆಳಿಗ್ಗೆಗೂ ಅದನ್ನೇ ಉಳಿಸಿಕೊಳ್ಳುತ್ತಿದ್ದೆನು. ಒಂದು ತಿಂಗಳು ಕಳೆದ ಮೇಲೆ ಆ ಮನೆಯನ್ನು ಬಿಟ್ಟು. ಬಳೇ ಪೇಟೆಯ ಶ್ರೀನಿವಾಸ ಮಂದಿರದ ರಸ್ತೆಯ ಚಿಕ್ಕಗರಡಿಯ ಪಕ್ಕದ ಸ್ನೇಹಿತರೊಬ್ಬರ ಕೊಠಡಿಗೆ ಹೋದೆನು. 'ಭವತಿ ಭಿಕ್ಷಾಂದೇಹಿ' ಎಂಬ ನನ್ನ ಮಂತ್ರದ ಜಪ ನಡೆದೇ ನಡೆದಿತ್ತು. ಬೆಂಗಳೂರಿನ ಒಂದಿಬ್ಬರು ಗಣ್ಯರು ತಿಂಗಳೊಂದಕ್ಕೆ ಎಂಟೆಂಟು ಆಣೆಗಳನ್ನು ಕೊಡುತ್ತಿದ್ದರು, ಅದನ್ನು ಕೊಠಡಿಯ ಬಾಡಿಗೆ ಕಾಗದ ಕಡ್ಡಿಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದೆನು. ಮೊದಲ ನಾಲ್ಕುತಿಂಗಳು ಕಟ್ಟ ಬೇಕಾಗಿದ್ದ ಮೂರು ರೂಪಾಯಿಗಳ ಶಾಲಾ ಶುಲ್ಕವನ್ನು ತಂದೆ ಬಹು ಕಷ್ಟದಿಂದ ಹೊಂಚಿಕೊಡುತ್ತಿದ್ದರು. ಆ ವರುಷ ನಾನು ಅರ್ಧ ಉಚಿತದ ವಿದ್ಯಾರ್ಥಿಯಾದುದರಿಂದ ಮುಂದಿನ ನಾಲ್ಕು ತಿಂಗಳ ಶುಲ್ಕವನ್ನು ಕೊಡಬೇಕಾಗಲಿಲ್ಲ.

ಎರಡನೆಯ ವರುಷದ ಐದನೆಯ ಫಾರಂಗೆ ಬರುವ ವೇಳೆಗೆ ನನಗೆ ಬಳೇಪೇಟೆಯ ಬಂಡಿ ಶೇಷಮ್ಮನ ಛತ್ರದ–ಇದನ್ನು ಕಮಲಾ ಛತ್ರ ಎಂದೂ ಕರೆಯುತ್ತಾರೆ–ವಿದ್ಯಾರ್ಥಿ ವಸತಿಯಲ್ಲಿ ಉಚಿತವಾದ ಜಾಗ ಸಿಕ್ಕಿತು. ನನ್ನ ಭಿಕ್ಷಾವೃತ್ತಿಯನ್ನು ಕಂಡ ಅಲ್ಲಿನ ಹಿರಿಯ ವಿದ್ಯಾರ್ಥಿಗಳು ನನ್ನ ಭಿಕ್ಷಾಟನೆಯನ್ನು ತಪ್ಪಿಸಿ, ತಾವು ಹೋಟಲಿನಿಂದ ತರುತ್ತಿದ್ದ ಅನ್ನದಲ್ಲಿ ನನಗೂ ಅಷ್ಟನ್ನು ಕೊಟ್ಟು ಉಪಕರಿಸಿದರು.

ನಾನು ಪ್ರೌಢಶಾಲೆಯ ಎರಡನೆಯ ತರಗತಿಯನ್ನು ಮುಗಿಸುತ್ತಿರುವಂತೆಯೇ, ತಂದೆ, ತನ್ನ ಒಬ್ಬಳೇ ಹೆಣ್ಣು ಮಗಳು ಲಕ್ಷ್ಮೀದೇವಮ್ಮನಿಗೆ ಮದುವೆಯನ್ನು ಮಾಡಿ ದರು. ವರನ ಕಡೆಯವರು ಪ್ರತಿಯೊಂದನ್ನೂ ತಂದು ಈ ಕೆಲಸವನ್ನು ನೆರವೇರಿಸಿ ಕೊಂಡಿದ್ದರು. ತಂದೆ ಅಳಿಯನಿಗೆ ವರೋಪಚಾರಕ್ಕಾಗಿ ಒಂದೇ ಒಂದು ನೂಲಿನ ದಾರ ವನ್ನಾದರೂ ತರಲಿಲ್ಲ. ಏನೋ ಪಾಡುಪಟ್ಟು ಮನೆಯಿಂದ ಹೊರಕ್ಕೆ ಹೋಗುವ ಹೆಣ್ಣು ಮಗಳಿಗೆ ಎರಡು ರೂಪಾಯಿನ ಧಾರೆಯ ಒಂದು ಸಂಕಲಿಕೆಯನ್ನೇನೋ ತಂದರು. ಆದರೆ ಅದಕ್ಕೆ ತಕ್ಕ ನಾಲ್ಕು ಆಣೆಯ ರವಿಕೆಯನ್ನು ತರಲು ಏನೇ ಮಾಡಿದರೂ ಅವ ರಿಂದ ಆಗಲಿಲ್ಲ. ಇವರ ಪರಿಭವವನ್ನು ಕಂಡ ಒಬ್ಬ ರೆಡ್ಡಿಗಿತಿ ತಾನು ಹೊಲಿಸಿಕೊಂಡಿದ್ದ

ಬಿಳಿಯ ರವಿಕೆಯನ್ನು ಕೊಟ್ಟಳು. ಮದುವೆ ಹೀಗೆ ನಡೆಯಿತು.

ಕೊನೆಯ ವರುಷವಾದ ಆರನೆಯ ಫಾರಂಗೆ ಬಂದಾಗ, ಅದೇ ಕಮಲಾಛತ್ರದ ನನ್ನ ಕೊಠಡಿಯ ಸಹವಾಸಿ ಹೋಳೂರು ಚಂದ್ರಶೇಖರ ನನ್ನ ಊಟದ ಕಷ್ಟವನ್ನು ತಾವು ವಹಿಸಿಕೊಂಡು ಪರೋಪಕಾರ ಮಾಡಿದರು. ಮೊದಲ ನಾಲ್ಕು ತಿಂಗಳ ಶಾಲಾ ಶುಲ್ಕವನ್ನು ಕೊಡುವಾಗ, ನನ್ನ ಪಾಡು ಬೀದಿಯ ನಾಯಿಯ ಪಾಡಾಗುತ್ತಿದ್ದಿತು. ಅನೇಕ ಸಾರಿ ಗೆಳೆಯರು ನನ್ನ ವ್ಯಾಸಂಗಕ್ಕೆಂದು ಕೊಟ್ಟಿದ್ದ ಪುಸ್ತಕ, ನರಸಾಪುರದ ಅಲ ಮೇಲಜ್ಜಿ ನನಗೆ ತರಿಸಿಕೊಟ್ಟಿದ್ದ ಬೆಳ್ಳಿಯ ಉಡಿದಾರ ಇವುಗಳನ್ನು ಮಾರಿ ಶುಲ್ಕವನ್ನು ತುಂಬುತ್ತಿದ್ದೆನು. ತಂದೆಯೂ ಒಮ್ಮೊಮ್ಮೆ ಕಡು ಕಷ್ಟದಿಂದ ಇದಕ್ಕಾಗಿ ಕೊಡುತ್ತಿದ್ದರು. ಶಾಲೆ ಈಗ ನನ್ನನ್ನು ಉಚಿತ ವಿದ್ಯಾರ್ಥಿಯೆಂದು ಘೋಷಿಸಿದುದರಿಂದ, ವರುಷದ ಕೊನೆ ಯಲ್ಲಿ ಮೊದಲ ನಾಲ್ಕು ತಿಂಗಳು ಕಟ್ಟಿದ್ದ ಹಣವನ್ನು ಹಿಂದಿರುಗಿಸುತ್ತಿದ್ದರು. ನಾನು ಈ ಎರಡೂ ವರುಷಗಳೂ ಅದನ್ನು ಮುಡುಪಾಗಿ ತೆಗೆದುಕೊಡು ಹೋಗಿ, ಜಮೀನಿನ ಕಂದಾಯವನ್ನು ಕಟ್ಟಿ ಹರಾಜಾಗುವುದನ್ನು ತಪ್ಪಿಸುತ್ತಿದ್ದೆನು. ಈ ಬವಣೆ, ಬೇಗುದಿ, ತಳಮಳಗಳಲ್ಲಿಯೂ ನಾನು ಒಂದು ವರುಷವೂ ಫೇಲಾಗದೆ, ಕೊನೆಯ ವರುಷದಲ್ಲಿ ಕಾಲೇಜಿನ ವ್ಯಾಸಂಗಕ್ಕೆ ಅರ್ಹತೆಯನ್ನು ಸಂಪಾದಿಸಿ ತೇರ್ಗಡೆಯಾದೆನು. ನನಗೀಗ ಇಪ್ಪತ್ತುವರುಷಗಳ ಪ್ರಾಯವಾಗಿದ್ದಿತು.

ಬೆಂಗಳೂರಿಗೆ ಹೋಗಿ ಪರೀಕ್ಷೆಯ ಫಲಿತಾಂಶವನ್ನು ನೋಡಿಕೊಂಡು ಬಂದ ನಾನು, ದಾರಿಯನ್ನು ನಡೆಯುವಾಗ, ನನ್ನ ಓದನ್ನು ಇಂಟರ್ ಮೀಡಿಯಟ್‌ನಲ್ಲಿ ಮುಂದುವರಿಸುವ ನಿರ್ಧಾರವನ್ನು ಮೈತುಂಬಿಕೊಂಡೇ ಮನೆಯನ್ನು ಮುಟ್ಟಿದೆನು. ನನ್ನ ಪ್ರಯತ್ನ ನನ್ನದೇ ಕೈಯಲ್ಲಿರುವಾಗ, ಹಿಂದಣಂತೆ ತಂದೆಯ ಯಾವುದೇ ನೆರ ವನ್ನು ಕೇಳದೆಯೇ ಅಧ್ಯಯನವನ್ನು ಮುಂದುವರಿಸುವ ಕೆಚ್ಚು ನನ್ನಲ್ಲಿದ್ದಿತು. ವಸತಿಗೆ ನನ್ನ ಹಿಂದಣ ಕಮಲಾಛತ್ರ ಇದ್ದೇ ಇದ್ದಿತು. ಇನ್ನು ತುತ್ತಿನ ಕೂಳು. ಅದಕ್ಕೂ ವಿಶ್ವೇ ಶ್ವರ ಪುರದ ಬ್ರಾಹ್ಮಣರ ಮನೆಗಳು ಇದ್ದೇ ಇದ್ದುವು. ಭಿಕ್ಷಾಟನೆಯ ಮಂತ್ರ ನನಗೆ ಸಿದ್ಧಿಸಿದ್ದಿತು.

ಆದರೆ ತಂದೆಯ ಹಠಮಾರಿತನ ನನ್ನನ್ನು ಬಗ್ಗಿಸಿತು. ನನ್ನ ಕರ್ತವ್ಯದ ಕಡೆ ಮನಸ್ಸು ತೆರೆಯಿತು. ಜೂಲು ಪಾಲುಗಳನ್ನು ಸುತ್ತಿಕೊಂಡು ಓಡಿಯಾಡುತ್ತಿದ್ದ ತಂದೆ ತಾಯಂದಿರಿಗೆ, ತಂಗಿ ತಮ್ಮಂದಿರಿಗೆ ಒಂದೊಂದು ಅರಿವೆಯನ್ನು ಕೊಡಬೇಕಾಗಿದ್ದುದು, ಊಟದ ಕೊನೆಯಲ್ಲಿ ಅರೆಹೊಟ್ಟೆಯಲ್ಲಿದ್ದ ತಮ್ಮಂದಿರು ಎಲೆಯ ಮೇಗಣ ಸಾರಿನ ತೇವವನ್ನು ನೆಕ್ಕುತ್ತ ಕುಳಿತಿರುತ್ತಿದ್ದ ಅವರಿಗೆ ಬಾಯಿತುಂಬ ತುತ್ತು ಹಿಟ್ಟನ್ನು ಕೊಡ ಬೇಕಾಗಿದ್ದುದು ನನ್ನ ಕರ್ತವ್ಯವಾಗಿದ್ದಿತು. ಈಗ ನಾನು ಓದನ್ನು ಮುಂದುವರಿಸುವ ವಿಷಯದಲ್ಲಿ ಒಂದೆರಡು ದಿವಸಗಳ ಕಾಲ ನನಗೂ ತಂದೆಗೂ ನಿತ್ಯ ರಾದ್ಧಾಂತಗಳೇ ನಡೆ ದುವು. ಕಡೆಗೆ ಆತನ ಹಠವೇ ಗೆದ್ದಿತು. ಮಣಿದೆನು. ಮುಂದೆ ಓದನ್ನು ಮುಂದುವರಿಸುವ ನನ್ನ ನಿರ್ಧಾರವನ್ನು ಗಾಳಿಗೆ ತೂರಿಬಿಟ್ಟು, ತಂದೆಯ ದೊಡ್ಡ ಸಂಸಾರದ ಹೊರೆಯನ್ನು

ಹೆಗಲಿಗೇರಿಸಿಕೊಂಡೆನು. ಈ ವೇಳೆಗೆ ತಂದೆ ಇದ್ದ ಗ್ರಾಂಟ್‌ಸ್ಕೂಲ್ ಮೇಷ್ಟರ ಕೆಲಸ ವನ್ನೂ ಕಳೆದುಕೊಂಡು ಒಂದು ಸೆಮ್ಮದಿಯ ಉಸಿರನ್ನು ಬಿಟ್ಟರು.

ನನ್ನ ತಂಗಿ ಲಕ್ಷ್ಮಿದೇವಮ್ಮ ಈಗ ಪ್ರೈನೆರೆದು ಒಂದೆರಡು ವರುಷಗಳೇ ಆಗಿ ದ್ದರೂ, ತಂದೆ ನಿಷೇಕಪ್ರಸ್ತವನ್ನು ಮಾಡಿಕೊಡುವ ವಿಷಯವನ್ನು ತಲೆಗೇ ಹಾಕಿಕೊಂಡಿ ರಲಿಲ್ಲ. ವರನ ಕಡೆಯವರ ಒತ್ತಾಯ ನನ್ನ ತಂದೆಯನ್ನು ರಪೆಯಷ್ಟಾದರೂ ಅಳ್ಳಾಡಿ ಸಿರಲಿಲ್ಲ. ಮನೆಯ ಮಾನ ಬೆಳೆದು ನಿಂತ ಮಗನಾದ ನನ್ನನ್ನು ಅವಲಂಬಿಸಿದ್ದಿತು. ನನ್ನ ತಲೆಯನ್ನೇ ಕುದುವು ಇಟ್ಟು ಆ ಮಗಳನ್ನು ಮನೆಗೆ ಕಳಿಸಿದೆನು.

ಅರೆಹಳ್ಳಿಯ ಸಾಹುಕಾರನು ನನ್ನ ತಂದೆಗೆ ಕೊಟ್ಟಿದ್ದ ಸಾಲಕ್ಕಾಗಿ ದಾವೆಯನ್ನು ಹಾಕಿ ಜಮೀನುಗಳು ಹರಾಜಾಗಿ ಹೋಗುವ ಹಂತಕ್ಕೆ ಬಂದು ಮುಟ್ಟಿದ್ದಿತು. ಅದನ್ನು ತೀರಿಸಿ ಹಿರಿಯರ ಆಸ್ತಿಯನ್ನು ಕೋಟೆಮನೆಯ ಆಸ್ತಿಯನ್ನು ಉಳಿಸಿರಿಸಿದೆನು. ಇಂತಹ ಆಸ್ತಿಯನ್ನು ನಾನು ಮುಂದೆ ನನ್ನ ಭಾಗವನ್ನು ನಾನು ತೆಗೆದುಕೊಳ್ಳಲು ನ್ಯಾಯಾಲಯ ದಲ್ಲಿ ನಾಲ್ಕಾರು ವರುಷಗಳ ಕಾಲ ಹೋರಾಡಬೇಕಾದುದು ನನ್ನ ಹಣೆಯ ಬರೆಹ ವಾಯಿತು. ಇದರ ದುರಭಿಸಂಧಿಗಳು, ಕುತಂತ್ರಗಳು ನನ್ನನ್ನು ಈಗಲೂ ಕಾಡುತ್ತಿರು ವುದು ನನ್ನ ಜೀವನದ ಒಂದು ದೊಡ್ಡ ದುರಂತವೇ ಆಗಿದೆ.

ಅಲ್ಲಿ ಇಲ್ಲಿ ಹೇಗೆ ಹೇಗೆಯೋ ದುಡಿದು ಮನೆಗೆ ನಾಲ್ಕು ಕಾಸನ್ನು ತರುತ್ತಿದ್ದೆನು. ನಾನು ಮನೆಗೆ ಏನೆಷ್ಟನ್ನೇ ಹೆಗಲು ಮುರಿಯುವಂತೆ ತಂದರೂ, ಅದು ಮೂರೇ ದಿನ ಗಳಲ್ಲಿ ಮಾಯವಾಗಿ ಬಿಡುತ್ತಿದ್ದಿತು. ಮನೆಗೆ ಸುಗ್ಗಿಯಲ್ಲಿ ಅಷ್ಟೋ ಇಷ್ಟೋ ಕಾಳೂ ಕೂಡ ಬರುತ್ತಿದ್ದಿತು. ಎಷ್ಟೇ ಬಂದರೂ ಅದು ಮೂರು–ನಾಲ್ಕು ತಿಂಗಳುಗಳಲ್ಲಿ ಬರಿ ದಾಗಿ ಬಿಡುತ್ತಿದ್ದಿತು. ಮನೆಯ ದವಸವನ್ನು ಸಂದುಗೊಂದುಗಳಲ್ಲಿ ಮಾರಾಟ ಮಾಡಿ ಬಿಡುವ ಕೆಟ್ಟ ಚಾಳಿಯನ್ನು ಮೈಗೂಡಿಸಿಕೊಂಡಿದ್ದ ನನ್ನ ತಾಯಿಯ ಈ ಮನೆಹಾಳು ತನದ ಬೇಗೆ, ನನಗೆ ಈಗ ಚೆನ್ನಾಗಿ ತಟ್ಟಿತು. ತಾನು ಹೀಗೆ ಪೋಲು ಮಾಡಿದರೆ ಮಕ್ಕಳು ಉಪವಾಸಕ್ಕೆ ಬೀಳುವುದನ್ನು ಆಕೆ ಕಣ್ಣಾರೆ ಕಂಡಿದ್ದಳು. ಆದರೂ ಅದು ಆಕೆಯ ಮನ ಸ್ಸನ್ನು ಕರಗಿಸಲಿಲ್ಲ.

ಈ ವೇಳೆಗೆ ತನ್ನ ಗಂಡನ ಮನೆಯನ್ನು ಸೇರಿದ್ದ ಹೆಣ್ಣುಮಗಳನ್ನು ಹೆಚ್ಚೂ ಕಡಿಮೆ ಪ್ರತಿ ಹೆರಿಗೆಗೂ ಕರೆತರುತ್ತಿದ್ದರು. ಬಂದ ತಂಗಿಯಾದವಳು ಒಂದೋ ಎರಡೋ ಮಕ್ಕಳನ್ನೂ ಕರೆದು ತರುತ್ತಿದ್ದಳು ; ಬಂದವಳು ಆರು ತಿಂಗಳು–ಎಂಟು ತಿಂಗಳು ಇರು ತ್ತಿದ್ದಳು. ಅವಳು ಹೋಗುವಾಗ ತೌರಿನ ಹೊಸಬಣ್ಣದ ಜತೆಗೆ, ನನ್ನ ತಾಯಿ ತಾನು ಉಡುತ್ತಿದ್ದ ಒಂದೇ ಒಂದು ಗಟ್ಟಿಸೀರೆಯನ್ನು ಕೂಡ ಮಗಳಿಗೆ ಕೊಟ್ಟು ಅವಳು ಉಟ್ಟು ಹರಿದು ಹಾಕಿದ್ದ ಹಳೆಯ ಸೀರೆಯನ್ನು ತಾನು ಉಡುತ್ತಿದ್ದಳು. ಇಲ್ಲಿ ನಾನು ಹಣ್ಣಾಗಿ ಹೋಗುತ್ತಿದ್ದೆನು. ತಂದೆಯ ಹೊಣೆಗೇಡಿತನ ಮತ್ತು ತಾಯಿಯ ದುಂದು ರಾಳಿತನಗಳು ಹೀಗೆ ಮುಂದುವರಿದಿರುವಾಗ ಕೋಟೆಮನೆ ಹೇಗೆ ಉದ್ಧಾರವಾದೀತು ? ಇಕ್ಕುಳದ ಹಿಡಿತದ ಈ ಬಲವಾದ ನೋವು ನನ್ನನ್ನು ಹಗಲಿರುಳೂ ಕಾಡಿದ್ದಿತು. ಆದರೂ

ಕೋಟೆಮನೆ ನನ್ನದು ಎಂಬ ಅಭಿಮಾನ ನನ್ನನ್ನು ಹೆಚ್ಚು ಹೆಚ್ಚಾಗಿ ತುಂಬಿಕೊಳ್ಳುತ್ತಲೇ ಬಂದಿತು.

ಏಳಲಾರದವನಿಗೆ ಏಳೂರ ಆರಂಬ ಎಂಬಂತೆ ನನ್ನ ತಂದೆ ಈಗ ನನಗೆ ಮದುವೆಯನ್ನು ಮಾಡುವ ಯೋಚನೆಯನ್ನು ಮನಸ್ಸಿಗೆ ತಂದುಕೊಂಡರು. ನನ್ನ ಮನೆಯ ತಳವೇ ಭದ್ರವಾಗಿಲ್ಲದಿರುವಾಗ ನನಗೆ ಮದುವೆಯ ಯೋಚನೆಯಾದರೂ ಬಂದಿರಲಿಲ್ಲ. ಈ ವಿಷಯವಾಗಿ ದಿನ ಬೆಳಗಾದರೆ ತಂದೆ ಮಕ್ಕಳಿಗೆ ಹಣಾಹಣಿಯ ಜಗಳ ಆಗುತ್ತಿದ್ದಿತು. ಮಗನ ಮಾತು ತನ್ನ ಸಂಸಾರದ ಹಿತಕ್ಕಾಗಿಯೇ ಎಂಬುದನ್ನು ತಂದೆ ಯೋಚಿಸಲಿಲ್ಲ. ತನ್ನ ಕೈಯಲ್ಲಿ ಬಿಡಿಗಾಸು ಇಲ್ಲದಿದ್ದರೂ,ಅವರು ಮನೆಗೆ ಬಂದಿದ್ದ ಹೆಣ್ಣುಮಗಳ ಕಿವಿಯ ಓಲೆಗಳನ್ನು ಅಡವು ಇಟ್ಟು ಲಗ್ನಪತ್ರಿಕೆಯನ್ನು ಮಾಡಿಕೊಂಡು ಬಂದರು. ಸಿಟ್ಟು ಮತ್ತು ಸಂಕಟಗಳಿಂದ ನಾನು ತಲೆಯನ್ನು ಗೋಡೆಗೆ ಚಚ್ಚಿಕೊಳ್ಳುವುದಲ್ಲದೆ ಅನ್ಯಮಾರ್ಗವನ್ನು ಕಾಣದಾದೆನು.

ನನ್ನ ಮದುವೆ ಆನೆಕಲ್ಲಿನ ದಕ್ಷಿಣಕ್ಕೆ ಇರುವ ಮದರಾಸು ಪ್ರಾಂತ್ಯದ ಥಳಿಯಲ್ಲಿ ಆಯಿತು. ಅವರು ಸ್ಥಿತಿವಂತರಲ್ಲದಿದ್ದರೂ, ಹೆಣ್ಣಿನ ತಂದೆ ಉದ್ಯೋಗಶೀಲನಾದುದರಿಂದ ಆ ಮನೆಯಲ್ಲಿ ತಿನ್ನಲು ಉಣ್ಣಲು ಕೊರತೆ ಇಲ್ಲದೆ ಇದ್ದಿತು. ಆತನಿಗೆ ಒಂಬತ್ತು ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗನು ಮಾತ್ರ ಇದ್ದರು. ನನ್ನ ಹೆಂಡತಿ ಪಂಕಜಾಕ್ಷಿ ನಾಲ್ಕನೆಯವಳು. ಮದುವೆಯ ವೆಚ್ಚವನ್ನು ಹೊಂದಿಸಬೇಕಾದರೆ ನಾನು ಹೆಣವಾಗಿ ಹೋದೆನು.

ಮದುವೆ ಆದ ಮೇಲೆ ನನ್ನ ಹೆಂಡತಿಯ ಬಳಗದವರೊಬ್ಬರ ಪ್ರಭಾವದಿಂದ ನನಗೆ ಬೆಂಗಳೂರಿನ Air Raid Precautions ಕಛೇರಿಯಲ್ಲಿ ಒಂದು ಸಣ್ಣ ಹುದ್ದೆ ಸಿಕ್ಕಿತು. ಅಲ್ಲಿ ಒಂದಷ್ಟು ದಿನ ಇದ್ದ ಮೇಲೆ ಅತ್ತ ಕಡೆಯಿಂದ "ಹೆಣ್ಣನ್ನು ಕೊಟ್ಟು, ಕೆಲಸವನ್ನೂ ಕೊಡಿಸಿ ಅವನನ್ನು ಉದ್ಧಾರ ಮಾಡಿದೆವು" ಎಂಬ ಚುಚ್ಚು ಮಾತು ನನ್ನನ್ನು ಕೆರಳಿಸಿತು. ಅಲ್ಲಿನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು, ಸಮೇತನಹಳ್ಳಿಗೆ ಹಿಂದಿರುಗಿ, ಕಾಡುಗೋಡಿಯ ನೆಡುಗಿಡಗಳಲ್ಲಿ ಪಾಳೆಯವನ್ನು ಬಿಟ್ಟಿದ್ದ ಸೈನ್ಯದ ಕೋಠಿಯೊಂದರಲ್ಲಿ ದಿನಗೂಲಿಯ ಗುಮಾಸ್ತನಾಗಿ ಸೇರಿಕೊಂಡೆನು. ಅದು ಎರಡನೆಯ ಪ್ರಪಂಚಯುದ್ಧ ಬಿರುಸಿನಿಂದ ನಡೆಯುತ್ತಿದ್ದ ಕಾಲವಾಗಿದ್ದಿತು. ಮದುವೆ ಆದ ಮೂರು ವರುಷಗಳಾದ ಮೇಲೆ ನನ್ನ ಹೆಂಡತಿ ನಮ್ಮ 'ಕೋಟೆಮನೆ'ಯನ್ನು ಪ್ರವೇಶಿಸಿದಳು ; ನನ್ನ ತಮ್ಮಂದಿರನ್ನು ಮಕ್ಕಳಂತೆ ಮಡಿಲಿಗೆ ಹಾಕಿಕೊಂಡು ಸಲಹಿದಳು.

ನನ್ನ ಹೆಂಡತಿಯ ಕಡೆಯ ಬಳಗ ನಾನು ಬಡವ ಎಂಬ ಕಾರಣದಿಂದ, ತಮ್ಮ ನಡೆ ನುಡಿಯಲ್ಲಿ ದಂಭ ದರ್ಪಗಳನ್ನು ತೋರಿಸಿದರು. ನಾನು ಕೆರಳಿದೆನು. ದೊಡ್ಡ ಘರ್ಷಣೆಗಳೇ ನಡೆದು ಹೋದುವು. ಇವರುಗಳಿಂದಾದ ಈ ಅವಮಾನ ಮತ್ತು ತೇಜೋವಧೆಗಳು ನನ್ನನ್ನು ಬಹುವರುಷಗಳ ಕಾಲ, ಮುಂದೆ ಹಾಸನ ಮತ್ತು ರಾಮನಗರಗಳಲ್ಲಿಯೂ ಹಿಂಡಿ ಹಿಪ್ಪೆಯನ್ನಾಗಿ ಮಾಡಿದುವು. ಆದರೆ ಈಗ ನಾನು ರೂಢಿಸಿಕೊಂಡಿದ್ದ

ನನ್ನ ಸಾಹಿತ್ಯಾಭ್ಯಾಸ ನನ್ನ ಬದುಕಿಲ್ಲಿ ನೆಚ್ಚನ್ನೂ ನಂಟನ್ನೂ ಮೂಡಿಸಿದುವು. ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಬರುವಾಗ ನಡೆದ ಶಾಂತಿ ಪ್ರಸ್ತದಲ್ಲಿ ಅವರ ಮನೆಗೆ ಹೋಗಿದ್ದು ದೆಷ್ಟೋ ಅಷ್ಟೆ. ಆ ಮೇಲೆ ನಾನು ಅತ್ತ ತಲೆಯನ್ನು ಕೂಡ ಹಾಕಲಿಲ್ಲ.

ನಾನು ಪ್ರೌಢಶಾಲೆಯ ಎಸ್. ಎಸ್, ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಆದ ದಿನದಿಂದ, ಬದುಕನ್ನು ಭದ್ರಪಡಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಕೂಡಿ ಸರಕಾರದ ಕೆಲಸಕ್ಕಾಗಿ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೆನು. ಏಳು ವರುಷಗಳಾದ ಮೇಲೆ ನನ್ನ ಒಳ್ಳೆಯ ದಿನಗಳು ಆರಂಭವಾದುವು ಎಂದು ಕಾಣುತ್ತದೆ. ಮೈಸೂರು ಜನಾರೋಗ್ಯ ಇಲಾಖೆಯಲ್ಲಿ ಹೆಲ್ತ್ ಇನ್ಸ್ಪೆಕ್ಟರುಗಳ ತರಬೇತಿಯ ಎಂಟನೆಯ ಗುಂಪಿನಲ್ಲಿ ನನಗೆ ಜಾಗ ಸಿಕ್ಕಿತು. ಆರು ತಿಂಗಳ ಶಿಕ್ಷಣವನ್ನು ಮುಗಿಸಿದ ಮೇಲೆ ನನ್ನನ್ನು ಬೆಂಗಳೂರು ಪುರಸಭೆಗೆ ಕೆಲಸದ ಮೇಲೆ ಕಳುಹಿಸಿದರು ; ಸಂಬಳ ಇಪ್ಪತ್ತೈದು ರೂಪಾಯಿಗಳು. ಇದು ಸರಕಾರದ ಉದ್ಯೋಗ ; ನನ್ನ ಬದುಕನ್ನು ಗಟ್ಟಿಗೊಳಿಸಿದ ಉದ್ಯೋಗ ಎಂದುಕೊಂಡ ನಾನು ಭಕ್ತಿ ಮತ್ತು ಶ್ರದ್ಧೆಗಳಿಂದ ಈ ಕೆಲಸದಲ್ಲಿ ನಿರತನಾದೆನು.

ನಾನು ಬೆಂಗಳೂರಿನಲ್ಲಿ ನಡೆದ ಹೆಲ್ತ್ ಇನ್ಸ್ಪೆಕ್ಟರರ ಶಿಕ್ಷಣದ ತರಗತಿಯಲ್ಲಿ ಜಾಣನೆಂಬುದನ್ನು ಗುರುತಿಸಿಕೊಂಡಿದ್ದ ಆರೋಗ್ಯ ನಿರ್ದೇಶಕರ ಆಪ್ತ ಸಹಾಯಕ ಡಾ. ರಾಮಕೃಷ್ಣ ಅವರು ಇಲ್ಲಿರುವ ತನಕ ನನ್ನನ್ನು ಪ್ರೇಮದಿಂದ ನಡೆಯಿಸಿಕೊಂಡು, ನಾನು ವರ್ಗವನ್ನು ಕೇಳಿದಾಗಲೆಲ್ಲ ಕೇಳಿದ ಕಡೆಗೆ ಕೊಟ್ಟ ಪರಮೌದಾರ್ಯವನ್ನು ನಾನು ಇಲ್ಲಿ ತುಂಬಿದ ಕೃತಜ್ಞತೆಯಿಂದ ನೆನೆಯುತ್ತೇನೆ.

ನಾನು ಬೆಂಗಳೂರು ಪುರಸಭೆಗೆ ಹೋದ ಮೂರು ತಿಂಗಳಲ್ಲಿ ಆರೋಗ್ಯ ಇಲಾಖೆ ನಮ್ಮೂರಿನ ಹತ್ತಿರದ ಕಾಡುಗೋಡಿಯಲ್ಲಿ ಆರೋಗ್ಯ ಕೇಂದ್ರವೊಂದನ್ನು ತೆರೆಯಿತು. ನಾನು ಡಾ ॥ ರಾಮಕೃಷ್ಣ ಅವರನ್ನು ಅಲ್ಲಿಗೆ ವರ್ಗ ಕೇಳಿದೆನು. ಕೊಟ್ಟರು. ಆದರೆ ಅಲ್ಲಿ ಇದ್ದ ವೈದ್ಯಾಧಿಕಾರಿ ಕೆಡುಕ, ಹಿಂಸಕ ಮತ್ತು ಭ್ರಷ್ಟಾಚಾರದಲ್ಲಿ ನಿರತನಾದವನು. ಜನ ಅವನ ಮೇಲೆ ಸರ್ಕಾರಕ್ಕೆ ದೂರನ್ನು ಸಲ್ಲಿಸಿತು. ನಾನು ಸ್ಥಳೀಯನಾದುದರಿಂದ, ಅದಕ್ಕೆ ನಾನು ಕಾರಣ ಎಂದು, ಇಲಾಖೆಯ ನಿರ್ದೇಶಕರು ನನ್ನನ್ನು ಅಲೆಮಾರಿ ಜೀವನದ Bureau of Epidemiologyಗೆ ಕಳಿಸಿದರು. ಆ ಕಛೇರಿ ತಿಪಟೂರಿಗೆ ಇಲಿಗಳ ನಾಶಕ್ಕಾಗಿ ನನ್ನನ್ನು ಕಳಿಸಿತು. ಮೂರು ತಿಂಗಳ ಆ ಕೆಲಸವನ್ನು ನಿರ್ವಹಿಸಿ ಬಂದ ಮೇಲೆ, ಡಾ ॥ ರಾಮಕೃಷ್ಣ ಅವರನ್ನು ಕಂಡೆನು. ನನ್ನ ಕೋರಿಕೆಯಂತೆ ಮತ್ತೆ ಅವರು ನನ್ನನ್ನು ಬೆಂಗಳೂರು ಪುರಸಭೆಗೆ ಕಳುಹಿಸಿದರು.

ಅಲ್ಲಿ ಸ್ವಲ್ಪ ದಿವಸವಾದ ಮೇಲೆ, ನನ್ನ ಹೆಂಡತಿಯ ಕಡೆಯವರಿಂದಾದ ಅಪಪ್ರಚಾರದ ನೋವು ಹೆಚ್ಚಾಯಿತು. ಅವರ ಯಾರ ಕಣ್ಣಿಗೂ ಬೀಳದಂತೆ ದೂರ, ಬಹು ದೂರಕ್ಕೆ ಹೋಗುವುದೆಂದೆಣಿಸಿ, ಮತ್ತೆ ಡಾ ॥ ರಾಮಕೃಷ್ಣರವರನ್ನು ಹಾಸನಕ್ಕೆ ವರ್ಗ ಕೇಳಿದೆನು. ಅವರು ಹಾಕಿ ಕೊಟ್ಟರು. ಮಗಳು ಇಂದಿರೆಯನ್ನು, ವಿದ್ಯಾಭ್ಯಾಸಕ್ಕಾಗಿ

ತಮ್ಮಂದಿರಿಬ್ಬರನ್ನೂ ಕರೆದುಕೊಂಡು ಹೆಂಡತಿಯೊಡನೆ ಹಾಸನದ ಬೀರನಹಳ್ಳಿ ಬಡಾವಣೆಯಲ್ಲಿ ಸಂಸಾರವನ್ನು ಹೂಡಿದೆನು. ಇಲ್ಲಿಂದ ಮುಂದೆ ನಾನು ಎಂಟು ವರುಷಗಳ ಕಾಲ ಅನುಭವಿಸಿದ ಬಡತನದ ಬೇಗೆಯಿಂದ ಮತ್ತು ಹೆಂಡತಿಯ ಕಡೆಯವರು ಮಾಡಿದ್ದ ಅವಮಾನದಿಂದ ನಾನು ನೊಂದುದು ಬಹಳವಾಯಿತು. ಈ ಎರಡೆರೆ ದಳ್ಳುರಿಯಿಂದ ನಾನು ಹೇಗೆ ಪಾರಾಗಿ ಬಂದೆನೆಂಬುದು ನನಗೆ ಈಗಲೂ ಅಚ್ಚರಿಯನ್ನು ತರುತ್ತಿದೆ. ತಾಯಿ ಸರಸ್ವತಿ ನನ್ನನ್ನು ತನ್ನ ಶೀತಲವಾದ ಮಡಿಲಿಗೆ ಹಾಕಿಕೊಂಡು, ನನ್ನ ಹೃದಯದ ವ್ರಣಗಳನ್ನು ಕಳೆಯಲು ಯತ್ನಿಸಿದಳು. ಅವಳ ಆ ಅಮೃತ ಸ್ಪರ್ಶ ನನ್ನನ್ನು ಹೊಸ ಮನುಷ್ಯನನ್ನಾಗಿಸಿತು.

ಹಾಸನದಲ್ಲಿ ಮೂರು ವರುಷಗಳ ಕಾಲ ಇದ್ದೆನು. ಆಗ ಬೇಲೂರು ಹಳೇಬೀಡು ಶ್ರವಣಬೆಳುಗೊಳ ದೊಡ್ಡಗದ್ದವಳ್ಳಿ ಮುಂತಾದ ಕಡೆಗಳ ಹೊಯ್ಸಳ ಶಿಲ್ಪವನ್ನು ನೋಡಿದೆನು. ನನ್ನ ಸಾಹಿತ್ಯ ರಚನೆ ಇಲ್ಲಿ ಹೊಸ ತಿರುವನ್ನು ಕಂಡುಕೊಂಡಿತು. ಇಲ್ಲಿ ಬಹುಕಾಲ ಚೆನ್ನಾಗಿ ಕೆಲಸ ಮಾಡಿದ 'ಮಿತ್ರವೃಂದ'ವೆಂಬ ಸಂಸ್ಥೆಯ ಸಂಸ್ಥಾಪಕ ಸಂಚಾಲಕನಾಗಿ ಕೆಲಸ ಮಾಡಿದೆನು. ಇಲ್ಲಿ ನನ್ನ ಮೂರನೆಯ ಮಗು ಮಧುಸೂದನನು ಹುಟ್ಟಿದನು. ಇವನಿಗೂ ಮೊದಲು ಅದೇ ಹೆಸರಿನ ಮತ್ತೊಂದು ಮಗು ಹುಟ್ಟಿ ಒಂದೆರಡು ತಿಂಗಳಿನಲ್ಲಿಯೇ ಸತ್ತುಹೋಗಿತ್ತು. ಈಗ ಹುಟ್ಟಿದ ಎರಡನೆಯ ಮಧುಸೂದನನಾದರೂ ಅಷ್ಟೆ. ಎರಡು ವರುಷಗಳಿದ್ದು ಅಲ್ಲಿಯೇ ಮೃತಪಟ್ಟನು. ಅವನಿಗೆ ಬೀರನಹಳ್ಳಿಯ ಕೆರೆಯಂಗಳದಲ್ಲಿ ಸಂಸ್ಕಾರ ಮಾಡಿ ಕಣ್ಣೀರನ್ನು ಮಿಡಿದೆನು.

ನನ್ನ ನಾಲ್ಕನೆಯ ಮಗುವಾದ ಸುದರ್ಶನನು ಹುಟ್ಟಿದುದು ಇಲ್ಲಿಯೇ. ಅವನು ಹುಟ್ಟಿದ ಕೆಲವೇ ದಿನಗಳಲ್ಲಿ ಬೆಂಗಳೂರಿನ Bureau of Malariologyಗೆ ಹೋದೆನು. ಸಮೇತನಹಳ್ಳಿಯಲ್ಲಿಯೇ ಇದ್ದುಕೊಂಡು ಪ್ರತಿನಿತ್ಯ ಬೆಂಗಳೂರಿಗೆ ಹೋಗಿ ಬಂದೆನು. ಇದರಿಂದ ನಾನು ಅನುಭವಿಸಿದ ಹಲವಾರು ಮಾನಸಿಕ ಮತ್ತು ದೈಹಿಕ ಕಷ್ಟ ಪರಂಪರೆಗಳು ನನ್ನನ್ನು ಜಗಿದು ತಿಂದುವು. ಸರಿಯಾಗಿ ಕೂಳು ನೀರು ಇಲ್ಲದೆ ಶರೀರ ಜರ್ಝರಿತವಾದಾಗ ಬೆಂಗಳೂರಿನ ಸ್ನೇಹಿತರ ಕೊಠಡಿಯಲ್ಲಿದ್ದು ಒಂದು ವರುಷವನ್ನು ಕಳೆದೆನು. ಆಮೇಲೆ ರಾಮಕೃಷ್ಣ ಅವರನ್ನು ಕಂಡು ನನ್ನ ಸ್ಥಿತಿಯನ್ನು ಹೇಳಿದಾಗ ಅವರು "ರಾಮನಗರಕ್ಕೆ ಹೋಗಿ" ಎಂದರು. ಸಂತೋಷದಿಂದ ಒಪ್ಪಿದೆನು. ಇಂದಿರಾ ಮತ್ತು ಸುದರ್ಶನರೊಡನೆ ನಾವಿಬ್ಬರೂ ಆ ಊರಿನ ಅಗ್ರಹಾರದ ದೀಪವಿಲ್ಲದ, ಮಣ್ಣುನೆಲದ ಸಣ್ಣಮನೆಯನ್ನು ಹಿಡಿದು ಸಂಸಾರವನ್ನು ಹೂಡಿದೆವು.

ನಾನು ಸಮೇತನಹಳ್ಳಿ ಕೋಟೆಮನೆಯ ಚೊಚ್ಚಲ ಮಗನಾಗಿ ಈ ಹದಿಮೂರು ವರುಷಗಳ ಕಾಲ ಅದನ್ನು ನಿರ್ವಹಿಸಿದೆನು. ಈಗ ನನ್ನದೇ ಒಂದು ಸಂಸಾರ ಬೆಳೆದುದರಿಂದ ತಿಂಗಳೊಂದರ ನಲವತ್ತೈದು ರೂಪಾಯಿಗಳಲ್ಲಿ ನಾನು ಆರ್ಥಿಕವಾಗಿ ಯಾವುದೇ ನೆರವನ್ನು ನನ್ನ ತಂದೆಯ ಸಂಸಾರಕ್ಕಾಗಿ ಕೊಡಲಾರದಾದೆನು. ಆದರೆ ತಮ್ಮನೊಬ್ಬನು ಈಗ ಕೈಗೆ ಎದವಿ ಬಂದಿದ್ದುದರಿಂದ ಅವನು ನನ್ನ ತಂದೆಯ ಸಂಸಾರವನ್ನು ನನ್ನಂತೆಯೇ

ನೋಡಿಕೊಳ್ಳುವನೆಂಬ ನೆಮ್ಮದಿ ನನಗಾಗಿದ್ದಿತು. ಅವನು ಹಾಗೆ ನೋಡಿಕೊಂಡನು.

ರಾಮನಗರದಲ್ಲಿ ನಾನು ಎಂಟು ವರುಷಗಳ ಕಾಲ ನಿಂತೆನು. ಮೊದಲ ನಾಲ್ಕು ವರುಷಗಳ ಕಾಲ ನನ್ನ ಆರ್ಥಿಕಸ್ಥಿತಿ ಎಂದಿನಂತೆ ತುಂಬ ಹದಗೆಟ್ಟಿದ್ದಿತು. ದೇವರು ನನ್ನನ್ನು ಎಷ್ಟು ದಿನಗಳೆಂದು ತಾನೆ ಹೀಗೆ ಬಡತನದ ಕುಲುಮೆಯಲ್ಲಿಟ್ಟು ಬೇಯಿಸಿಯಾನು ? ಅವನು ಒಡ್ಡಿದ್ದ ಈ ಪರೀಕ್ಷೆಯಲ್ಲಿ–ಪರೀಕ್ಷೆ ಎನ್ನುವುದಕ್ಕಿಂತ ಶಿಕ್ಷಣ ಎಂದೆನ್ನಬಹುದೇನೋ–ನಾನು ತೇರ್ಗಡೆ ಹೊಂದಿದ ಮೇಲೆ, ನನ್ನ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಿಸಿತು. 'ಎಲೆಮರೆಯ ಹೂ' ಪ್ರೌಢಶಾಲೆಯ ಎರಡನೆಯ ತರಗತಿಗೆ ಪಠ್ಯಪುಸ್ತಕ ಆಯಿತು. ಒಂದೆರಡು ರಾಜ್ಯಮಟ್ಟದ ಬಹುಮಾನಗಳೂ ಬಂದುವು. ಆಗ ನನ್ನ ಕೈಗೆ ಒಂದು ಗಡಿಯಾರ ಬಂದಿತು. ಮಕ್ಕಳಿಗೆ, ಹೆಂಡತಿಗೆ, ನನಗೆ ಒಂದೆರಡು ಹೊಸ ಬಟ್ಟೆಗಳು ಬಂದುವು. ಹಾಸಲು ಹೊದೆಯಲು ಒಂದೆರಡು ಹಾಸಿಗೆ ದುಪ್ಪಟಿ ಮತ್ತು ಕಂಬಳಿಗಳೂ ಬಂದುವು.

ನಾನು ಈಗ ಸಮೇತನಹಳ್ಳಿಗೆ ಏನನ್ನೂ ಕಳುಹಿಸದೆ ಇದ್ದುದು ಒಂದಾದರೆ, ಮನೆಗೆ ಬಟ್ಟೆ ಬರೆ ಒಂದೆರಡು ಪಾತ್ರೆ ಪಡಗಗಳು ಬಂದುದು ನನ್ನ ತಂದೆ ತಾಯಿಗಳಿಗೂ ಕಣ್ಣು ಕುಕ್ಕುವಂತಾಯಿತು. ನಾನು ರಾಮನಗರದಲ್ಲಿ ಒಂದೆರಡು ತೀವ್ರತರವಾದ ರೋಗಗಳಿಗೆ ಒಳಗಾಗಿ ಸತ್ತು ಹುಟ್ಟಿದಂತಾಯಿತು. ಭಾರತಿ ಮತ್ತು ವಿಷ್ಣು ಅವರುಗಳು ಹುಟ್ಟಿದರು. ನಾನು ಯಾರನ್ನು ನಂಬಿ, ಯಾವ ಮನೆ ನನ್ನದು ಎಂದು ಪ್ರೀತಿಸಿ, ಹದಿಮೂರು ವರುಷಗಳ ಕಾಲ ದುಡಿದೆನೋ, ಆ ಮನೆ ಈಗ ನನ್ನನ್ನು ಕಡೆಗಣಿಸಿತು. ಹೆಂಡತಿಗೆ ಪ್ರತಿ ತಾಯಿಯಾಗಿ ಎರಡು ಸಾರಿಯೂ ದೀರ್ಘವಾದ ರಜೆ ಹಾಕಿ, ಬಾಣಂತಿಯ ಉಪಚಾರವನ್ನು ಮಾಡಿದೆನು. ನಾನು ಅಂತಹ ತೀವ್ರತರವಾದ ರೋಗಗಳಿಂದ ಪ್ರಜ್ಞೆ ಇಲ್ಲದೆ ಮಲಗಿದಾಗ, ನನ್ನ ಹೆಂಡತಿ ಅನಾಥಳಂತೆ ಮಕ್ಕಳನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಕಣ್ಣೀರನ್ನು ಕರೆಯುತ್ತಿದ್ದುದನ್ನು ಕಂಡು ನಾನು ಬಹುವಾಗಿ ಸಂಕಟಪಟ್ಟೆನು.ಆದರೆ ಇದರಿಂದ ನಾನೇನೂ ಧೃತಿಗೆಡಲಿಲ್ಲ. ನನ್ನ ಆರೋಗ್ಯಕೇಂದ್ರದ ವೈದ್ಯರು ಶ್ರದ್ಧೆಯಿಂದ ಮನೆಗೆ ಬಂದು, ಔಷಧೋಪಚಾರಗಳನ್ನು ನಡೆಯಿಸಿ, ನನ್ನ ಜೀವವನ್ನು ಉಳಿಸಿದರು. ದೇವನೊಡ್ಡಿದ ಈ ಪರೀಕ್ಷೆಯನ್ನು ಕೆಚ್ಚೆದೆಯಿಂದಲೇ ಎದುರಿಸಿ ಅವನ ಪ್ರೀತಿಗೆ ಪಾತ್ರನಾದೆನು.

ನಾನು ಒಬ್ಬ ಹೆಲ್ತ್ ಇನ್‌ಸ್ಪೆಕ್ಟರನಾಗಿ ಕ್ಷೇತ್ರದ ಕಾರ್ಯಕರ್ತನಾಗಿದ್ದರೂ ಕೂಡ ಅಲ್ಲಿನ ಅಧಿಕಾರಿಗಳು, ಮೀಸಲು ಹುದ್ದೆಯಲ್ಲಿದ್ದ ನನ್ನನ್ನು ಹೊರಕ್ಕೆ ಕಳುಹಿಸದೆ, ಕಛೇರಿಯಲ್ಲಿಯೇ ಉಳಿಸಿಕೊಂಡು, ವರದಿಗಳನ್ನು ತಯಾರಿಸುವುದು, ಅಂಕಿ ಅಂಶಗಳನ್ನು ಕೂಡಿಸಿ ವಿವರಿಸುವುದು ಮುಂತಾದ ಕೆಲಸಗಳಿಗೆ ನಿಯೋಜಿಸಿದ್ದರು. ನನ್ನ ಕೆಲಸ ಅವರುಗಳಿಗೆ ಮೆಚ್ಚುಗೆ ಆಯಿತೆಂದು ಕಾಣುತ್ತದೆ. ನಾನು ಅಲ್ಲಿದ್ದ ಕಾಲದಲ್ಲಿ ನಾಲ್ಕು ಜನ ಅಧಿಕಾರಿಗಳು ಬಂದು ಹೋದರು. ಬಂದವರೆಲ್ಲರೂ ನನ್ನ ಆವಶ್ಯಕತೆಯನ್ನು ನಿರ್ದೇಶಕರಲ್ಲಿಗೆ ಕೊಂಡೊಯ್ದು, ಎರಡು ಮೂರು ಸಾರಿ ಬೇರೆ ಕಡೆಗೆ ವರ್ಗವಾಗಿದ್ದ ನನ್ನನ್ನು

ಅಲ್ಲಿಯೇ ಉಳಿಸಿಕೊಳುತ್ತಿದ್ದರು.

ಅಂತಾರಾಷ್ಟ್ರೀಯ ಮಟ್ಟದ ಒಂದು ಆರೋಗ್ಯ ಸಮೀಕ್ಷೆ ಅಲ್ಲಿ ನಡೆಯಿತು. ಅದರ ಪೂರ್ವಭಾವಿ ಸಿದ್ಧತೆಗಳಲ್ಲಿ ನಾನು ತೊಡಗಿದ್ದುದರಿಂದ, ನನಗೆ ಮೇಲ್ದರ್ಜೆಯಾದ ಸೀನಿಯರ್ ಹೆಲ್ತ್‌ಇನ್‌ಸ್ಪೆಕ್ಟರ್ ಆಗಿ ಮೇಲಕ್ಕೇರಿದಾಗಲೂ ಕೂಡ ನನ್ನನ್ನು ಹೊರಕ್ಕೆ ಕಳಿಸದೆ, ಅಲ್ಲಿಯೇ ಉಳಿಸಿಕೊಳ್ಳಲಾಯಿತು.

ಇದರಿಂದ ಮತ್ತು ನನ್ನ ಇತರ ಪ್ರಾಮಾಣಿಕತನಗಳಿಂದಾಗಿ, ನನ್ನ ಸಹೋದ್ಯೋಗಿಗಳ ಮತ್ತು ಕಛೇರಿಯ ಸಿಬ್ಬಂದಿ ವರ್ಗದವರ ಕಣ್ಣುಗಳು ನನ್ನ ಮೇಲೆ ಕೆಂಡಗಳನ್ನು ಕಾರಿದುವು. ಅಲ್ಲಿದ್ದ ಉಚಿತ ವಸತಿ ಸೌಲಭ್ಯ, ನಾನು ಅಲ್ಲಿ ಎಲ್ಲರಿಗಿಂತ ಹೆಚ್ಚು ದಿನಗಳಿಂದ ಇದ್ದ ಅರ್ಹತೆಯನ್ನು ಪಡೆದಿದ್ದುದರಿಂದ, ಶ್ರೇಣಿಯಲ್ಲಿ ಮೊದಲಿಗನಾಗಿ ನನಗೆ ಅದು ಸಿಕ್ಕಿತು. ಅದು ಎಲ್ಲರ ಈರ್ಷ್ಯೆಯ ಅಗ್ನಿಗೆ ತುಪ್ಪವನ್ನು ಸುರಿದಂತಾಯಿತು. ನನಗೆ ಈ ಎಲ್ಲ ಜನ ಸೇರಿ ಕೊಟ್ಟ ದಿನನಿತ್ಯದ ಕಿರುಕುಳ ಅಧಿಕತರವಾಯಿತು. ಮೇಲಣ ವೈದ್ಯಾಧಿಕಾರಿಗಳು ನನಗೆ ಹೆಚ್ಚು ಆಪ್ತರಾದರೂ, ನಾನು ಯಾರ ಮೇಲೆಯೂ ದೂರನ್ನು ಹೇಳಲಿಲ್ಲ. ನಾನು ಎಷ್ಟೆಂದು ತಾನೆ ಹೇಳಬಹುದು ? ನನ್ನ ಮೇಲಣ ದ್ವೇಷ ಅವರುಗಳಲ್ಲಿ ಎಷ್ಟೆತ್ತರಕ್ಕೆ ಬೆಳೆದಿತ್ತು ಎಂದರೆ, ನನ್ನನ್ನು ಮೇಲಿನ ಹುದ್ದೆಗೆ ಏರಿಸಿ ನಿರ್ದೇಶನಾಲಯದಿಂದ ಹೊರಡಿಸಿದ್ದ ಅಣತಿಯನ್ನೇ ಹರಿದು ಹಾಕಿದ್ದರು. ನಾನು ಹೇಳದಿದ್ದರೂ, ಇದನ್ನು ಗಮನಿಸಿದ್ದ ವೈದ್ಯಾಧಿಕಾರಿ ಅವರುಗಳನ್ನು ಮುಖಭಂಗ ಮಾಡಿದರಾದರೂ, ಭಂಡಜನ ಸಬಕಾರವನ್ನು ಹಾಕಿ ಮುಖವನ್ನು ತೊಳೆದುಕೊಂಡರು.

ನನ್ನನ್ನು ಕುರಿತ ಅಸೂಯೆ ಅಂದಿನ ಆರೋಗ್ಯ ಇಲಾಖೆಯ ನಿರ್ದೇಶಕನನ್ನೂ ಬಿಡಲಿಲ್ಲ. ಅಂತರ ರಾಷ್ಟ್ರೀಯ ಮಟ್ಟದ ಆರೋಗ್ಯ ಸಮೀಕ್ಷೆ ಮುಗಿದ ಮೇಲೆ, ಎಂಟು ವರುಷಗಳಿಂದ ಒಂದೇ ಕಡೆ ಇದ್ದ ನನ್ನನ್ನು ಈಗ ಬೇರೆಯ ಕಡೆಗೆ ವರ್ಗ ಮಾಡಬೇಕಾಗಿ ಬಂದಾಗ, ಆ ನಿರ್ದೇಶಕನು ಕಾವೇರಿ ನದಿಯ ನಡುಗಡ್ಡೆಯಾದ ತಿಪ್ಪೂರಿಗೆ ಆಯ್ದು ಹಾಕಿದನು. ಈ ಅಣತಿಯನ್ನು ಹೊರಡಿಸಿ ರಾಮನಗರದಿಂದ ನನ್ನ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಈ ಕೇಡಿಗ ನಿರ್ದೇಶಕನು ನಿವೃತ್ತನಾಗಿ ಹೋದುದರಿಂದ, ನಾನು ಬಹಳ ಪ್ರಯತ್ನಪಟ್ಟು ಅದನ್ನು ವಜಾ ಮಾಡಿಸಿ ಮಧುಗಿರಿಗೆ ಹಾಕಿಸಿಕೊಂಡೆನು. ನಾನು ರಾಮನಗರದಿಂದ ಬಿಡುಗಡೆಯಾದ ಮೇಲೆ ತಿಪ್ಪೂರಿನ ಆರೋಗ್ಯ ಕೇಂದ್ರದಲ್ಲಿ ಕೆಲಸಕ್ಕೆ ಸೇರಿಕೊಂಡೆನಾದರೂ ರಜಕ್ಕೆ ಹಾಕಿದ್ದೆನು. ನನ್ನ ಈ ವರ್ಗಾವಣೆ ರದ್ದಾಗಿ ಮಧುಗಿರಿಗೆ ಆದುದು ಮೈಸೂರಿನ ಜಿಲ್ಲಾ ಆರೋಗ್ಯಾಧಿಕಾರಿಗೆ ಸಹಿಸಲಿಲ್ಲ. ಶೇಷಾದ್ರಿ ಭವನದಲ್ಲಿದ್ದ ಆ ಕಛೇರಿಯಲ್ಲಿ ಈ ಮದಾಂಧನು ಕುಣಿದ ರಾಕ್ಷಸ ನೃತ್ಯ ತುಂಬ ಭೀಕರವಾದುದು. ಇವನ ಈ ಪರಮ ದೌಷ್ಟ್ಯವನ್ನು ಸಹಿಸಿಕೊಳ್ಳಲೇ ಬೇಕಾಯಿತು. ಆಮೇಲೆ ತಿಪ್ಪೂರಿನ ವೈದ್ಯಾಧಿಕಾರಿಯಿಂದ ಬಿಡುಗಡೆಯನ್ನು ಪಡೆದು ಮಧುಗಿರಿಯ ಪುರಸಭೆಯ ಅಧ್ಯಕ್ಷರಲ್ಲಿ ಕೆಲಸಕ್ಕೆ ಸೇರಿಕೊಂಡೆನೆಂಬ ವರದಿಯನ್ನು ಒಪ್ಪಿಸಿದೆನು.

ನಾನು ಮಧುಗಿರಿಗೆ ಹೋಗುವ ಮುನ್ನ ಆರೋಗ್ಯ ನಿರ್ದೇಶನಾಲಯ ನನಗೆ

ಮೂರು ಸ್ಥಳಗಳನ್ನು ಹೇಳಿ ಆಯ್ಕೆಯನ್ನು ನನಗೇ ಬಿಟ್ಟುಕೊಟ್ಟಿತು. ನಾನು ಮಧು ಗಿರಿಯನ್ನು ಆಯ್ದುಕೊಂಡೆನು. ನಿರ್ದೇಶನಾಲಯದ ಈ ವಿಭಾಗದ ಮುಖ್ಯಸ್ಥನು ಮಧುಗಿರಿಯ ಪುರಸಭೆಯ ರಾಜಕೀಯವನ್ನು ಕುರಿತು ನನಗೆ ಎಚ್ಚರಿಕೆಯನ್ನು ಕೊಟ್ಟ ನಾದರೂ,ನಾನು ನನ್ನ ನಡತೆಯ ಮೇಲೆ ಭರವಸೆಯನ್ನಿಟ್ಟು ಅಲ್ಲಿಗೆ ಹೋದೆನು. ಅದು ಒಂದು ಮುಳ್ಳಿನ ಹಾಸಿಗೆಯಂತಾಯಿತು. ಅಲ್ಲಿಗೆ ಹೋಗುತ್ತಿದ್ದ ಯಾವನೇ ಆಡಳಿತಾಧಿ ಕಾರಿ ಆರು ತಿಂಗಳಿನ ಮೇಲೆ ಇರುತ್ತಿರಲಿಲ್ಲ.

ಎಲ್ಲ ಕಡೆಯಂತೆ ಅಲ್ಲಿಯೂ ಎರಡು ಬಣಗಳಿದ್ದುವು. ಅಧಿಕಾರಕ್ಕೆ ಬಂದಿದ್ದ ಬಣ ಪುರಸಭೆಯ ಖಜಾನೆಯನ್ನು ತಮ್ಮ ಸ್ವಂತ ಆಸ್ತಿಯೆಂದುಕೊಂಡು ರಂಗೋಲಿಯ ಕೆಳಗೆ ನುಗ್ಗುವ ಕೌಶಲ್ಯದಿಂದ ಹಂಚಿಕೊಳ್ಳತೊಡಗಿತ್ತು. ಅಲ್ಲಿ ಎರಡೂ ಬಣಗಳು ಪ್ರಯೋಗಿಸುತ್ತಿದ್ದ ಅಸ್ತ್ರಪ್ರತ್ಯಸ್ತ್ರಗಳ ಚಾತುರ್ಯ, ಶ್ರದ್ಧೆ ಮತ್ತು ಸಾಹಸಗಳು ವಿವಿಧ ರೀತಿಯವುಗಳು. ಇವುಗಳ ದಳ್ಳುರಿ ಅದರ ನೌಕರನಾದ ನನಗೆ ದೂರದಲ್ಲಿದ್ದರೂ ತಟ್ಟದಿರುತ್ತಿರಲಿಲ್ಲ. ಪೌರಕಾರ್ಮಿಕರ ಮೈಗಳ್ಳತನ, ತಮ್ಮ ವಿವಿಧ ರೀತಿಯ ಕೆಲಸಗಳಿ ಗಾಗಿ ಬರುತ್ತಿದ್ದ ವಿವಿಧ ಮನೋಧರ್ಮದ ಜನತೆಯ ನಿಯಮ ಬಾಹಿರವಾದ ನಡ ವಳಿಕೆಗಳು, ಗುತ್ತಿಗೆದಾರರು ಮತ್ತು ಕಕ್ಷಿಗಳು ನೋಟುಗಳ ಕಂತೆಗಳನ್ನು ಹಿಡಿದು ಒಡ್ಡು ತ್ತಿದ್ದ ಆಮಿಷಗಳ ಕಿರುಕುಳಗಳೇ ಮುಂತಾದವುಗಳ ದೆಸೆಯಿಂದ ಮನಸ್ಸು ಒಡೆದ ಕನ್ನಡಿ ಯಂತೆ ಛಿದ್ರಛಿದ್ರವಾಗಿ ಹೋಗುತ್ತಿದ್ದಿತು.

ಇಲ್ಲಿ ನಾನು ಆ ಪುರಸಭೆಯ ಎರಡೂ ಬಣಗಳ ಅಸಂತುಷ್ಟಿಯನ್ನು ಕಾಣಬೇಕಾ ಯಿತು. ಪುರಸಭೆಯ ನಿಯಮಗಳ ಪಾಲನೆ ಆಡಳಿತದ ಅಧ್ಯಕ್ಷರಿಗೆ ಮತ್ತು ಅವನ ಸಂಗ ಡಿಗರಿಗೆ ಬೇಕಾಗಿರಲಿಲ್ಲ. ಪ್ರತಿಯೊಂದನ್ನೂ ಅವರುಗಳ ಇಚ್ಛೆಗೆ ಅನುಗುಣವಾಗಿ ಹೊಂದಿಸಬೇಕಾಗಿದ್ದಿತು. ಅದು ಸಾಧ್ಯವಲ್ಲವಾಗಿ ನಾನು ಅವರಿಗೆ ಅಂತರ್ಯದಲ್ಲಿ ಬೇಡ ವಾದೆನು. ಇನ್ನು ಎದುರು ಪಕ್ಷದ ಮಾತು. ಈ ಪಕ್ಷದ ಸದಸ್ಯರು ತಮಗೆ ಬೇಕಾದವರ ಕೆಲಸಗಳನ್ನು ಮಾಡಿಕೊಡಲು ಹೇಳುತ್ತಿದ್ದರು. ನನ್ನ ಮೇಲಣ ಅಧಿಕಾರಿ ಅಧ್ಯಕ್ಷರಾಗಿ ದ್ದರು. ಅವರ ಅಪ್ಪಣೆಯನ್ನು ಮಾತ್ರ ನಾನು ಪಾಲಿಸಬೇಕಾಗಿದ್ದಿತು. ನನ್ನ ಕಡು ನಿಷ್ಠೆ ಎದುರು ಬಣದವರನ್ನು ಕೆರಳಿಸುವುದು ಸಹಜವೆ.

ಒಬ್ಬ ಅಧ್ಯಕ್ಷರು ಮೈಗಳ್ಳತನದ ಒಬ್ಬ ಆಡಳಿತಾಧಿಕಾರಿಯನ್ನು ಅವನು ಕೆಲಸ ಮಾಡದಂತೆ ಅವನ ಕೊಠಡಿಗೆ ಬೀಗವನ್ನು ಹಾಕಿಸಿಬಿಟ್ಟರು. ಪುರಸಭೆಯ ಮಾಸಿಕ ಸಭೆ ಗಳಿಗೆ ಶಾಂತಿಯನ್ನು ಕಾಪಿಡಲು ಪೋಲೀಸರು ಬರುವಂತಾಗಿದ್ದಿತು. ಇದರಿಂದ ನಾನು ಯಾವ ಶೂಲದ ಮೇಲೆ ಇದ್ದೆನು ಎಂಬುದು ಅರ್ಥವಾಗುತ್ತದೆ. ತನ್ನದಲ್ಲದ ನಿವೇಶನ ವನ್ನು ತನ್ನದು ಎಂದು ಹೇಳಿಕೊಳ್ಳುತ್ತಿದ್ದ ಒಬ್ಬ ಹಿಂದಣ ಪುರಸಭಾಧ್ಯಕ್ಷನು ನನ್ನ ಮೇಲೆ ಅತಿಕ್ರಮ ಪ್ರವೇಶದ ಕ್ರಿಮಿನಲ್ ದಾವೆಯನ್ನೂ ಹೂಡಿದನು. ಇನ್ನೊಬ್ಬ ಎದುರು ಪಕ್ಷದ ಪುಂಡಸದಸ್ಯ, ಅವನು ಹೇಳಿದ ನಿಯಮ ಬಾಹಿರವಾದ ಕೆಲಸವನ್ನು ನಾನು ಮಾಡಿಕೊಡಲಿಲ್ಲವೆಂದು ನನ್ನ ದಫೇದಾರನ ಮುಖಾಂತರ ಹೊಡೆಯಿಸುತ್ತೇನೆ

ಎಂದೂ ಹೇಳಿ ಕಳಿಸಿದನು. ಈ ಬೆಂಕಿಯ ಉರಿಯ ನಡುವೆ ನಾನು ಬದುಕಬೇಕಾಗಿದ್ದಿತು. ಇಂತಹ ಒಡೆದ ಮನಸ್ಸಿನಲ್ಲಿ ನನ್ನ ಸಾಹಿತ್ಯ ವ್ಯವಸಾಯ ಹೇಗೆ ತಾನೆ ನಡೆದೀತು ? ನನ್ನ ನಿಯಮ ಪಾಲನೆಗಳು, ಶುದ್ಧ ಹಸ್ತ ನನ್ನನ್ನು ಆ ಅಗ್ನಿಪರೀಕ್ಷೆಯಿಂದ ರಕ್ಷಿಸಿ ಸುಖವಾಗಿ ಹೊರಕ್ಕೆ ತಂದುವು. ನಾನು ಅಲ್ಲಿ ಮೂರು ವರುಷಗಳನ್ನು ಕಳೆದುದು ನನ್ನ ಒಂದು ದೊಡ್ಡ ಸಾಧನೆಯೇ ಆಯಿತು.

ಮಧುಗಿರಿಯನ್ನು ಬಿಡುವ ಸಂದರ್ಭದಲ್ಲಿ ಸಮೇತನಹಳ್ಳಿಗೆ ಹೋಗಿ ನನ್ನ ಹಿರಿಯ ಮಗಳು ಇಂದಿರೆಯ ಮದುವೆಯನ್ನು ಮಾಡಿದೆನು. ಈ ಮದುವೆಯನ್ನು ತಪ್ಪಿಸಲು ನನ್ನ ದಾಯಾದಿ ನೀಚರು ವಿಶ್ವಪ್ರಯತ್ನವನ್ನು ಮಾಡಿದರು. ಆದರೆ ಅವರು ಸಫಲರಾಗಲಿಲ್ಲ. ಇದು ನನ್ನ ಪುಣ್ಯ.

ಮಧುಗಿರಿಯನ್ನು ಬಿಟ್ಟಮೇಲೆ ನಾನು ಬಂದುದು ಪಾಂಡವಪುರಕ್ಕೆ ; ನನ್ನ ಇಲಾಖೆಯ ಆರೋಗ್ಯ ಸುಧಾರಣೆಯ ಕೆಲಸಕ್ಕೆ. ಇಲ್ಲಿ ಹಳ್ಳಿಗಳನ್ನು ತಿರುಗಾಡಿ ದುಡಿಯುವ ಕೆಲಸ ಮೈತುಂಬ ಇದ್ದಿತಾದರೂ ಮಧುಗಿರಿಯ ರಾಜಕೀಯದಂತೆ ಮನಸ್ಸು ಹೋಳು ಹೋಳಾಗಿ ಬಿಡುವ ಕಾರ್ಪಣ್ಯ ಇರಲಿಲ್ಲ. ಇಲ್ಲಿ ಇದ್ದ ಮೂರುವರ್ಷಗಳ ಕಾಲ ಮನಸ್ಸೂ ನೆಮ್ಮದಿಯನ್ನೇ ಕಂಡಿದ್ದಿತು. ಆದ್ದರಿಂದ ರಾಮನಗರದಲ್ಲಿ ಆರಂಭಿಸಿದ್ದ 'ಶಾಕುಂತಲಾ' ಪದ್ಯಕ್ಕೆ ಒಂದು ರೂಪವನ್ನು ಕೊಡಲೆಂದು ಕೈಗೆ ಎತ್ತಿಕೊಂಡಾಗ, ಅದು ಒಂದು ಮಹಾಛಂದಸ್ಸಿನ ಬೃಹತ್ಕಾವ್ಯವಾಗುವುದತ್ತರೆ ತಿರುಗಿ ಬಿಟ್ಟಿತು. ಆದರೆ ನನ್ನ ಈ ನೆಮ್ಮದಿ ಬಹಳ ಕಾಲ ನಿಲ್ಲಲಿಲ್ಲ. ನಮ್ಮ ಮನೆಯನ್ನು ತನ್ನ ಕುತಂತ್ರಗಳಿಂದ ಹೊಕ್ಕ ಕಾಡನೂರಿನವನೊಬ್ಬನು, ನನ್ನ ಮಗನು ಸುದರ್ಶನನ ಮೇಲೆ, ನನ್ನ ತಂದೆಯ ಕುಟುಂಬದ ಮೇಲೆ ನಡೆಸಿದ ಧಾಳಿಗಳು, ನಮ್ಮ ಮನೆಯನ್ನು ಒಡೆಯಲು ಅವನು ಮಾಡಿದ ಅಭಿಸಂಧಿಗಳು, ನಮ್ಮ ಕೋಟೆಮನೆಯನ್ನೇ ಆಕ್ರಮಿಸಿ ತನ್ನ ಸರ್ವಾಧಿಕಾರವನ್ನು ಸ್ಥಾಪಿಸಲು ಯತ್ನಿಸಿದ ಅವನ ಸಂಚುಗಳು ಮತ್ತು ದುರಾಕ್ರಮಣಗಳು ನನ್ನನ್ನು ದಿಕ್ಕುಗೆಡಿಸಿದುವು. ಎರಡು ವರುಷಗಳ ಕಾಲ ಅವ್ಯಾಹತವಾಗಿ ಮುಂದುವರಿದಿದ್ದ ಕಾವ್ಯ ರಚನೆ ನಿಂತು ಹೋಯಿತು. ಕಾಡಿನೂರಿನವನ ಈ ಕಿರುಕುಳಗಳು ಒಂದು ಕಡೆಯ ಹಿಂಸೆಯಾದರೆ, ಅದಕ್ಕಿಂತ ಹೆಚ್ಚಾಗಿ, ಕಾವ್ಯರಚನೆ ನಿಂತುಹೋದ ದುಗುಡ ಎರಡನೆಯದಾಯಿತು. ಇದಕ್ಕೆ ತಕ್ಕಮದ್ದೆಂದರೆ ತಾಳ್ಮೆಯೇ ಆಯಿತು. ನನ್ನ ಹಿರಿಯ ಮಗ ಸುದರ್ಶನನ ಉಪನಯನವನ್ನು ಇಲ್ಲಿ ಮಾಡಿದೆನು.

ಇಲ್ಲಿಂದ ನನಗೆ ಮೂರು ವರುಷಗಳ ಮೇಲೆ ವರ್ಗವಾದುದು ಮಂಡ್ಯದ Orientation Training Centre ಎಂಬುದಕ್ಕೆ. ಮಂಡ್ಯಕ್ಕೆ ಹೋಗಲು ನನಗೆ ಇಷ್ಟವಿರಲಿಲ್ಲ. ಕಾರಣ ನನ್ನ ವರಮಾನ ಮಂಡ್ಯದಲ್ಲಿ ಜೀವನವನ್ನು ಸಾಗಿಸುವಂತಹುದಾಗಿರಲಿಲ್ಲ. "ಬೇರೆ ಯಾವುದಾದರೂ ಹಳ್ಳಿಯ ಕಡೆ ಹಾಕಿ ಕೊಡಿ" ಎಂದು ಬೆಂಗಳೂರಿಗೆ ಹೋಗಿ ನಿರ್ದೇಶಕರನ್ನು ಕೇಳಿದೆನು. ಅವರು ಖಂಡ ತುಂಡಾಗುವಂತೆ "I want you there" ಎಂದು ಬಿಟ್ಟರು. ಮಂಡ್ಯಕ್ಕೆ ಹೋಗಿ ಕೆಲಸಕ್ಕೆ ಸೇರಿಕೊಂಡೆನು.

ಮಂಡ್ಯದಲ್ಲಿ ಮನೆ ಸಿಗುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಆದ್ದರಿಂದ ಪಾಂಡವಪುರದಲ್ಲಿದ್ದುಕೊಂಡೇ ಕೆಲವು ದಿವಸ ಮಂಡ್ಯಕ್ಕೆ ಹೋಗಿ ಬಂದೆನು. ಡಾ. ಅಚ್ಯುತನ್‌ರವರ ಪ್ರಭಾವದಿಂದ ಸರ್ಕಾರಿ ನೌಕರರ ವಸತಿಗೃಹಗಳಲ್ಲಿ ಒಂದು ನನಗೆ ಸಿಕ್ಕಿತು. ಕುಟುಂಬವನ್ನು ಮಂಡ್ಯಕ್ಕೆ ಸಾಗಿಸಿದೆನು.

ಮಂಡ್ಯಕ್ಕೆ ನಾನು ಇಷ್ಟವಿಲ್ಲದೆ ಹೋದೆನಾದರೂ, ಅದು ನನಗೆ ಮುಸುಕಿನೊಡನೆ ಬಂದ ಒಂದು ವರವೇ ಆಯಿತು. ನಾನು ಸನ್ನಿವೇಶವನ್ನು ಉಪಯೋಗಿಸಿಕೊಂಡು ಹಿರಿಯ ಮಗ ಸುದರ್ಶನನನ್ನು ಮಂಡ್ಯದ ಇಂಜಿನಿಯರಿಂಗ್ ಕಾಲೇಜಿಗೆ ಸೇರಿಸಿದೆನು. ಮನಸ್ಸು ಸ್ವಲ್ಪ ನೆಲೆ ನಿಂತಿತು ಎಂದಾಗ 'ಶಾಕುಂತಲಾ' ಮಹಾ ಕಾವ್ಯವನ್ನು ಕೈಗೆತ್ತಿ ಕೊಂಡು ಮುಗಿಸಿದೆನು.

ಮಂಡ್ಯದಲ್ಲಿನ Orientation Training Centreನಲ್ಲಿ ಮೂರು ವರುಷ ಗಳನ್ನು ಕಳೆದ ಮೇಲೆ, ನಂಜನಗೂಡು ತಾಲ್ಲೂಕಿನ ಹೊಸಕೋಟೆಗೆ ವರ್ಗವಾಯಿತು. ಮಿತ್ರರಾದ ಶ್ರೀ ಸಾಂಬಶಿವನ್ ಮತ್ತು ಶಾಸಕರಾಗಿದ್ದ ಶ್ರೀ ಗೌಡಗೆರೆ ನಾಗಪ್ಪನವರು ಗಳ ಸಹಾಯಹಸ್ತ ನನ್ನ ನೆರವಿಗೆ ಬಂದಿತು. ಶ್ರೀ ನಾಗಪ್ಪ ಬೆಂಗಳೂರಿನಲ್ಲಿ ಸಂಬಂಧ ಪಟ್ಟ ಮಂತ್ರಿಯ ಬಳಿ ಕುಳಿತು, ನನ್ನನ್ನು ಮಂಡ್ಯದ ಬಳಿಯ ಶಿವಳ್ಳಿಯ ಆರೋಗ್ಯ ಕೇಂದ್ರಕ್ಕೆ ವರ್ಗ ಮಾಡಿಸಿಕೊಂಡು ಬಂದರು. ಆಗ ನಾನು ಮಂಡ್ಯದ ನೌಕರರ ವಸತಿ ಗೃಹವನ್ನು ಬಿಟ್ಟು ಪಕ್ಕದ ಕಲ್ಲಹಳ್ಳಿಯಲ್ಲಿ ಮನೆಯನ್ನು ಹಿಡಿದೆನು. ಈ ಸಂದರ್ಭದಲ್ಲಿ ತಂದೆ ಬೆಂಗಳೂರಿನಲ್ಲಿ ಕಾಲವಾದರು. ಸಮೇತನಹಳ್ಳಿಗೆ ಹೋಗಿ ಉತ್ತರ ಕ್ರಿಯಾದಿ ಗಳನ್ನು ಮಾಡಿಬಂದೆನು. ಮಂಡ್ಯದಲ್ಲಿ ನಾನಿದ್ದ ಅವಧಿಯಲ್ಲಿ ನನ್ನ ಮಗಳು ಭಾರತಿ ಕಾಲೇಜಿನಲ್ಲಿ ಓದುತ್ತಿದ್ದಳು. ಅವಳಿಗೆ ಅಧ್ಯಾಪಕರಾಗಿದ್ದ ಪ್ರೊ. ಎಸ್. ಶ್ರೀನಿವಾಸನ್ ಮತ್ತು ಪ್ರೊ. ಜಿ. ಅಶ್ವತ್ಥನಾರಾಯಣ ಅವರುಗಳ ಸ್ನೇಹ ಸೌಭಾಗ್ಯ ನನಗೆ ದೊರಕಿತು. ಸಾಹಿತ್ಯ ಸಂವಾದಕ್ಕೆ ಎಡೆ ಸಿಕ್ಕಿತು.

ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಶ್ರೀ ಜಿ. ನಾರಾಯಣ ಅವರ ಅಧ್ಯ ಕ್ಷತೆಯಲ್ಲಿ ಹೆಚ್ಚಿನ ಕಸುವಿನಿಂದ ಗರಿಗಟ್ಟಿಕೊಂಡು ಬೃಹತ್ತಾಗಿ ಬೆಳೆಯಲಾರಂಭಿಸಿದಾಗ, ಅದರ ಕಾರ್ಯಕ್ಕಾಗಿ ಸಮಿತಿಯಲ್ಲಿ ಜಿಲ್ಲಾ ಪ್ರಾತಿನಿಧ್ಯವಿರಬೇಕೆಂಬ ದೃಷ್ಟಿಯಿಂದ, ಪ್ರತಿ ಜಿಲ್ಲೆಯಲ್ಲಿಯೂ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಲು ಹವಣಿಸ ಲಾಯಿತು. ಜಿ. ನಾರಾಯಣ ಅವರು ಮಂಡ್ಯ ಜಿಲ್ಲೆಗೆ ನಾನು ಚುನಾವಣೆಗೆ ನಿಲ್ಲಬೇಕೆಂದು ಹೇಳಿ ಕಳಿಸಿದರು. ನನಗೆ ಇಷ್ಟವಿಲ್ಲದುದನ್ನು ತಿಳಿಸಿದಾಗ, ನಾರಾಯಣ ಅವರು ಹಿಡಿದ ಪಟ್ಟನ್ನು ಬಿಡದೆ ಮತ್ತೆ ಹೇಳಿ ಕಳಿಸಿದರು. ಆಗ ಅವರ ಮಾತನ್ನು ತೆಗೆದು ಹಾಕುವ ಧೈರ್ಯ ನನಗೆ ಬರಲಿಲ್ಲ. ಒಪ್ಪಿದೆನು. ಚುನಾವಣೆಯಲ್ಲಿ ಒಮ್ಮತದಿಂದ ನಾನು ಆಯ್ಕೆ ಯಾದೆನು.

ಆಮೇಲೆ ಕೆಲವು ದಿವಸಗಳ ಅನಂತರ ಜಿಲ್ಲೆಯ ಆ ಕಾರ್ಯಕಾರಿ ಸಮಿತಿಯ ಸದಸ್ಯರೇ ಆಯಾ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗತಕ್ಕುದೆಂದು ತೀರ್ಮಾನ

ವಾಯಿತು. ಇದಂತೂ ನನಗೆ ಸುತರಾಂ ಇಷ್ಟವಿರಲಿಲ್ಲ. ಆದರೆ ಶ್ರೀ ನಾರಾಯಣ ಅವರ ಒತ್ತಾಯಕ್ಕೆ ನಾನು ಮತ್ತೆ ಮಣಿಯಲೇ ಬೇಕಾಯಿತು. ಶ್ರೀಗಳಾದ ಸಾಂಬಶಿವನ್, ಜಯಚಂದ್ರ, ಜಿ. ಅಶ್ವತ್ಥ ನಾರಾಯಣ, ಎಸ್. ಶ್ರೀನಿವಾಸನ್, ಕೆ. ಬೆಟ್ಟಶೆಟ್ಟಿ, ನಾರಾಯಣ ಮುಂತಾದವರ ದಿವ್ಯಸಹಕಾರದಿಂದ ಕೆಲಸ ನಡೆಯಿತು. ಸ್ವಲ್ಪ ಕಾಲಾ ನಂತರ ಮದ್ದೂರಿನಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ, ನಾನೇ ನಾಮಕರಣ ಮಾಡಿದ್ದ ಒಬ್ಬ ಸದಸ್ಯರು ನಡೆದುಕೊಂಡ ಅನುಚಿತವರ್ತನೆ ನನ್ನನ್ನು ಕಾಡಿಸಿತು. ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟೆನು. ಶ್ರೀ ನಾರಾಯಣ ಅವರು ಅದನ್ನು ಬಹುಕಾಲ ಅಂಗೀಕರಿಸಲಿಲ್ಲ. ಆ ಮೇಲೆ ಒಪ್ಪಿಕೊಂಡರು.

ಶಿವಳ್ಳಿಯ ಆರೋಗ್ಯಕೇಂದ್ರ ಇಡೀ ಮಂಡ್ಯ ತಾಲ್ಲೂಕಿನ ಆರೋಗ್ಯಕ್ರಮಗಳನ್ನು ಕೈಗೊಂಡಿದ್ದಿತು. ಗ್ರಾಮ ಮಟ್ಟದಲ್ಲಿ ಕೆಲಸ ಮಾಡಲು ಹತ್ತಾರು ನೌಕರರುಗಳೂ ಇದ್ದರು. ಇದರಿಂದ ಕೆಲಸವನ್ನು ತೆಗೆದುಕೊಳ್ಳುವ ಹೊಣೆ ನನ್ನ ಮೇಲೆ ಬಿದ್ದಿತು. ಇವ ರಲ್ಲಿ ಪುಂಡರು, ಪೋಕರಿಗಳು, ಮೈಗಳ್ಳರೂ ಇದ್ದರು ; ಕರ್ತವ್ಯನಿಷ್ಠರೂ ಇದ್ದರು. ಇವರಿಂದ ಬರುತ್ತಿದ್ದ ವರದಿಗಳಿಗೆ ಯಾವ ಆಧಾರವೂ ಇರುತ್ತಿರಲಿಲ್ಲ. ಇವರೆಲ್ಲರು ಗಳಿಂದಲೂ ಸರಿಯಾದ ದಸ್ತಾವೇಜುಗಳನ್ನು ಇರಿಸಿ, ಸುಧಾರಣೆಯನ್ನು ತರುವುದು ಅಷ್ಟೇನೂ ಸುಲಭವಾದುದಾಗಿರಲಿಲ್ಲ. ಸತತ ಪ್ರಯತ್ನಗಳಿಂದ ಸುಧಾರಣೆಗಳು ಫಲ ಕಾರಿಯಾದುವು.

ಸುದರ್ಶನ ಮತ್ತು ಭಾರತಿಯವರುಗಳ ಕಾಲೇಜು ವಿದ್ಯಾಭ್ಯಾಸದ ದೃಷ್ಟಿಯಿಂದ ನಾನು ನಿವೃತ್ತನಾಗುವ ಒಂದು ವರುಷದ ಮೊದಲೇ ನನ್ನ ಸಂಸಾರವನ್ನು ಮೈಸೂರಿನ ಸುಬ್ಬಯ್ಯ ರಸ್ತೆಯ ಮನೆಯೊಂದಕ್ಕೆ ಸಾಗಿಸಿಬಿಟ್ಟೆನು. ಪ್ರತಿದಿನವೂ ಅಲ್ಲಿಂದ ಮಂಡ್ಯಕ್ಕೆ ರೈಲಿನಲ್ಲಿ ಹೋಗಿ ಬರುತ್ತಿದ್ದೆನು.

ನನಗೆ ಶಿವಳ್ಳಿಯಲ್ಲಿಯೇ ನಿವೃತ್ತಿ ಆಯಿತು. ಈ ನಿವೃತ್ತಿಯನ್ನು ನಾನು ತುಂಬ ಸಂತೋಷದಿಂದ ಸ್ವಾಗತಿಸಿದೆನು. ನನ್ನ ಸಂಪೂರ್ಣವಾದ ಕಾಲವನ್ನು ನನ್ನ ಗ್ರಂಥರಚ ನೆಯ ಕೆಲಸಕ್ಕೆ ವಿನಿಯೋಗಿಸಬಹುದೆಂಬ ಸಂತೃಪ್ತಿ ನನ್ನಲ್ಲಿ ತುಂಬಿಕೊಂಡಿತು.

ನಾನು ನಿವೃತ್ತನಾದಂದಿನಿಂದ ಇಂದಿನವರೆಗೆ ಈ ಇಪ್ಪತ್ತುನಾಲ್ಕು ವರುಷಗಳ ಈ ಅಂತರದಲ್ಲಿ ನಿಂತು ಹಿಂದಣದರತ್ತ ಕಣ್ಣನ್ನು ಹಾಯಿಸಿದಾಗ, ಒಂದು ನೆಮ್ಮದಿಯ ಉಸಿರನ್ನು ಬಿಡುವಂತಾಗಿದೆ. ಈ ದಿನಗಳು ಸುಖವನ್ನೇ ಕಂಡುವೆಂದು ಹೇಳಬಹುದು.

ನಿವೃತ್ತಿಯ ಮೊದಲ ದಿನಗಳಲ್ಲಿ ಆರ್ಥಿಕವಾಗಿಯೂ ಮಾನಸಿಕವಾಗಿಯೂ ಹಲ ವಾರು ಕ್ಲೇಶಗಳೇನೋ ಮುತ್ತಿಬಂದುವು. ಜೀವವಿಮೆ ಮುಂತಾದ ಹಣಗಳು ಕೈಗೆ ಬಂದಾಗ, ಮೈಸೂರಿನ ಜಯನಗರದ ಐದನೆಯ ಮುಖ್ಯರಸ್ತೆಯಲ್ಲಿ ಒಂದು ಸಣ್ಣ ಮನೆ ಯನ್ನು ಕೊಂಡೆನು. ಕೈಬರಿದಾಯಿತು. ಮಕ್ಕಳೆಲ್ಲರೂ ಶಾಲೆ ಮತ್ತು ಕಾಲೇಜುಗಳಲ್ಲಿ ಓದುತ್ತಿದ್ದರು. ಈ ಮಹಾರಿಕ್ತತೆಯ ಜತೆಗೆ 'ಕೋಟೆಮನೆ'ಯ ಕೃತಘ್ನನೊಬ್ಬನು ಬಗೆದ ವಿಶ್ವಾಸದ್ರೋಹದ ವಿಷದಲಗಿನ ತಿವಿತಗಳು, ಜೀವನದ ಮೌಲ್ಯಗಳನ್ನು ಗಾಳಿಗೆ

ತೂರಿ ಸಮಾಜದ ಕಟ್ಟುಪಾಡುಗಳನ್ನು ಬಿಚ್ಚಿ ಬಯಲುಮಾಡಿ, ಮಾನ ಮರ್ಯಾದೆಗಳನ್ನು ಹಾಳ್ಗೆಡಿಸುತ್ತ ಬದುಕಿದ ಒಬ್ಬ ಸ್ವೈರತಮಳಾದ ಹೆಣ್ಣಿನ ದುಷ್ಪ್ರವೃತ್ತಿ ಮತ್ತು ಹೆಂಡತಿಯನ್ನು ಕಳೆದು ಕೊಂಡ ಅತೀವ ಸಂಕಟ. ಇವುಗಳು ನನ್ನನ್ನು ಒಂದೆರಡು ವರುಷಗಳ ಕಾಲ ಮಾನಸಿಕವಾಗಿ ತುಂಬ ಬಳಲಿಸಿದುವು.

ಈ ವೇಳೆಯಲ್ಲಿ ಸಮೇತನಹಳ್ಳಿಯ 'ಕೋಟೆಮನೆ' ನನ್ನ ಪಾಲಿಗೆ ಹಾವುಹೊಕ್ಕ ಮನೆಯಂತಾದ್ದರಿಂದ, ತಾಯಿ ಮೃತಪಟ್ಟಾಗಲೂ ನಾನು ಅಲ್ಲಿಗೆ ಹೋಗಲಾಗಲಿಲ್ಲ. ಉತ್ತರಕ್ರಿಯಾದಿಗಳನ್ನು ನಾನು ಒಂಟಿಯಾಗಿ ಮೈಸೂರಿನಲ್ಲಿಯೇ ಮಾಡಿದೆನು. ಆದರೆ ಆಕೆಗೆ ತಿಂಗಳು ತಿಂಗಳಿಗೆ ನನ್ನ ಕೈಲಾಗುವಷ್ಟು ಹಣವನ್ನು ಕಳಿಸಿದ್ದೆನು. ಇದು ನನಗೆ ನೆಮ್ಮದಿಯನ್ನು ಕೊಟ್ಟಿದ್ದಿತು.

ಜೀವನದ ಈ ಸಂಧ್ಯೆಯಲ್ಲಿ ಮತ್ತೆ ನಾನು ಅನುಭವಿಸಿದ ಯಾತನೆ ಅಪಮಾನ ಸಂಕಷ್ಟಗಳು ಹಿಂದಣದೆಲ್ಲವನ್ನೂ ಮೀರಿಸುವಂತಹವು. ಸಮೇತನಹಳ್ಳಿಯ 'ಕೋಟೆಮನೆ' ನನ್ನದು ಎಂಬ ತುಂಬಿದ ಅಭಿಮಾನ, ಪ್ರೇಮ ಮತ್ತು ಗೌರವಗಳಿಂದ ಕಂಡೆನು. ಅದರಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಕೈಯ ಹಾಲನ್ನು ಕುಡಿದು ನಾನೂ ಮತ್ತು ಅವಳೂ ತಿನ್ನಲೆಂದು ಎತ್ತಿದ ಕೈತುತ್ತನ್ನು ಉಂಡು ದೊಡ್ಡವರಾದವರು, ಅನಂತರ ನನ್ನ ಕಡುವಿರೋಧಿಗಳಾದುದು ನನ್ನ ಜೀವನದ ಒಂದು ದೊಡ್ಡ ದುರಂತವಾಗಿ ಹೋಯಿತು.

ಇತರರೂ ತಿಂದು ಉಳಿದ ಚೂರು ಪಾರು ನೆಲ ಇರುವುದರಿಂದ ಈಗಲೂ ನನ್ನ ಹಳ್ಳಿಗೆ ಹೋಗುತ್ತೇನೆ. ಊರ ಹೊರಗಣ ಅಥವಾ ನನ್ನ ಹೊಲದ ಬಳಿಯ ಒಂದು ಮುಳ್ಳುಜಾಲಿಯ ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತೇನೆ; ಹರಿವ ಕಾಲುವೆಯ ಅಥವಾ ಕೆರೆಯ ನೀರನ್ನು ಬೊಗಸೆದುಂಬ ಕುಡಿಯುತ್ತೇನೆ. ಆಗ ನಡೆದಾಡಿದ, ಆತ್ಮಾಭಿಮಾನದಿಂದ ಕಂಡ, ಕವನಗಳನ್ನು ಕಟ್ಟಿದ, ಮನೆ, ಹೊಲ, ಗದ್ದೆ ಬಯಲುಗಳನ್ನು ನೋಡಿದಾಗ ಹೃದಯ ತಲ್ಲಣಿಸುತ್ತದೆ. ಆಗ ಹೃದಯದಿಂದ ರಕ್ತವೇ ಸೋರಿ ಬರುವಂತಹ ಮೂಕ ಯಾತನೆಯಿಂದ ಮೈಸೂರಿಗೆ ಮರಳುತ್ತೇನೆ. ನಾನು ಮನೆಗೆ ಬಂದಾಗ ನನ್ನ ತಾಯಿ ಸಿರಿಯ ಸರಸ್ವತಿ ಬಾಗಿಲಿನಲ್ಲಿಯೇ ಕಾದಿರುತ್ತಾಳೆ; ತನ್ನ ತಣ್ಣನೆಯ ಮಡಿಲಿನಲ್ಲಿಟ್ಟು ನನ್ನನ್ನು ಸಂತಯಿಸಿ ಜೋಗುಳವನ್ನು ಹಾಡುತ್ತಾಳೆ.

ನನ್ನ ನಿವೃತ್ತಿಯ ಈ ದಿನಗಳಲ್ಲಿ ಸುದರ್ಶನ, ಭಾರತಿ ಮತ್ತು ವಿಷ್ಣುವರ್ಧನರುಗಳ ಮದುವೆಗಳನ್ನು ಮಾಡಿದ್ದೇನೆ. ಈ ಇಬ್ಬರೂ ಸೊಸೆಗಳಾದ ಅರುಣ ಮತ್ತು ಶಾರದೆಯರು ಬ್ಯಾಂಕುಗಳಲ್ಲಿ ಉದ್ಯೋಗದಲ್ಲಿದ್ದಾರೆ. ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದೇನೆ; ಅನೇಕವುಗಳನ್ನು ನಾನೇ ಪ್ರಕಟಮಾಡಿಯೂ ಇದ್ದೇನೆ. 'ಕೋಟೆಮನೆ'ಯ ಮುಂದಿನ ಪೀಳಿಗೆಯ ನನ್ನ ಹಿರಿಯ ಮಗ ಸುದರ್ಶನನು ದುಬೈನಲ್ಲಿ ಉನ್ನತ ದರ್ಜೆಯ ಸಿವಿಲ್ ಇಂಜಿನಿಯರ್ ಆಗಿದ್ದಾನೆ. ವಿಷ್ಣುವರ್ಧನನು ಮೈಸೂರು ಬ್ಯಾಂಕಿನಲ್ಲಿದ್ದಾನೆ. ಈ ಇಬ್ಬರೂ ತುಂಬ ಚೆನ್ನವೇ ಆದ ಮನೆಗಳನ್ನು ಮೈಸೂರಿನ ಗೋಕುಲ ಮತ್ತು

ಶ್ರೀರಾಮಪುರದ ಬಡಾವಣೆಗಳಲ್ಲಿ ಕಟ್ಟಿಕೊಂಡು ನೆಮ್ಮದಿಯ ಬದುಕನ್ನು ಕಂಡಿದ್ದಾರೆ.

ನನ್ನ ಹಿರಿಯ ಮಗಳು ಇಂದಿರೆ ತನ್ನ ಗಂಡ ಗೋಪಿನಾಥಶರ್ಮ (ನಿವೃತ್ತ ಅಧ್ಯಾಪಕರು) ಮತ್ತು ಮಕ್ಕಳೊಡನೆ ಮೈಸೂರಿನಲ್ಲಿದ್ದಾಳೆ. ಕಿರಿಯ ಮಗಳು ಭಾರತಿ ಲೇಖಕಿಯಾಗಿ ಹಲವಾರು ಗ್ರಂಥಗಳನ್ನು ರಚಿಸಿದ್ದಾಳೆ ; ಕಲಾವಿದೆಯಾಗಿದ್ದಾಳೆ ; ತನ್ನ ಗಂಡ ರಂಗರಾವ್ ಕಾಸರಗೋಡ್ ಮತ್ತು ಮಕ್ಕಳೊಡನೆ ಬೆಂಗಳೂರಿನಲ್ಲಿ ನೆಮ್ಮದಿಯ ಬದುಕನ್ನು ನಡೆಸುತ್ತಿದ್ದಾಳೆ. ಇದೆಲ್ಲ ನನ್ನ ಭಾಗ್ಯವೇ ಆಗಿದೆ.

ನಾನೀಗ ನನ್ನ ಈ ಮುಸ್ಸಂಜೆಯ ದಿನಗಳಲ್ಲಿ ನನ್ನ ಹಿರಿಯ ಮಗ ಸುದರ್ಶನನ ಗೋಕುಲದ 'ಕೋಟೆಮನೆ'ಯಲ್ಲಿ ಇದ್ದೇನೆ. ಈ ಮಗ ದುಬೈನಲ್ಲಿರುವದರಿಂದ ಅರುಣ ಮನೆಯ ಎಲ್ಲ ವಹಿವಾಟನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದಾಳೆ. ನನ್ನೆಲ್ಲ ಅನುಕೂಲಗಳನ್ನು ಮಮತೆ ಮತ್ತು ಭಕ್ತಿಗಳಿಂದ ನೋಡಿಕೊಳ್ಳುತ್ತಿದ್ದಾಳೆ. ಈ ಮನೆಯನ್ನು ಕಟ್ಟುವಾಗ ಪ್ರತಿಯೊಂದು ಇಟ್ಟಿಗೆಯೂ ನನ್ನ ನೇರವಾದ ಕಣ್ಣೋಟ ದಲ್ಲಿ ತನ್ನ ಸ್ಥಾನದಲ್ಲಿ ಕುಳಿತುಕೊಳ್ಳುತ್ತಿದ್ದಿತು. ಇಲ್ಲಿಗೆ ಬಂದ ಈ ಹತ್ತು ವರುಷಗಳಲ್ಲಿ ಮನೆಯ ಸುತ್ತಣ ತೆಂಗು, ಪಾರಿಜಾತ, ಮಲ್ಲಿಗೆ, ದಾಳಿಂಬೆ ಕರಿಬೇವು ಮುಂತಾದವು ಗಳನ್ನು ನಾನೆ ಬೆಳೆಸಿದುದರಿಂದ, ಈ ಮನೆಯತ್ತ ನನ್ನ ಮನಸ್ಸು ಹೆಚ್ಚು ಒಲಿದಿದೆ. ನಾನು ಬೆಳೆಸಿದ ಪುಸ್ತಕ ಭಂಡಾರ ನನ್ನ ಮನಸ್ಸನ್ನು ಮತ್ತೆತ್ತಲೂ ಚಲಿಸದಂತೆ ಸೆರೆ ಹಿಡಿದಿಟ್ಟಿದೆ. ಇದೆಲ್ಲದರ ನಡುವೆ ಬರೆವ ಓದುವ ನನ್ನ ಸಂತಸ ಪ್ರಾಪಂಚಿಕದ ಯಾವುದೇ ಕೊಳೆಕಸಗಳನ್ನು, ನೋವು ನಿರಾಶೆಗಳನ್ನು ತೊಳೆದು ಹಾಕಿಬಿಡುತ್ತದೆ. ಮೈಸೂರಿನ ಗೋಕುಲದ ಮೂರನೆಯ ಹಂತದ ನಾಲ್ಕನೆಯ ದೊಡ್ಡಬೀದಿಯ ಈ ಪ್ರಶಾಂತ ವಾತಾ ವರಣದ 'ಕೋಟೆಮನೆ'ಯ ಮಹಡಿಯ ಮೇಗಣ ಬೀದಿಯ ಕಡೆಯ ನನ್ನ ಕೊಠಡಿ ಯಲ್ಲಿ ಮಂಚದ ಮೇಲೆ ಒರಗಿದಾಗ ಅಥವಾ ನನ್ನ ಬರವಣಿಗೆಯ ಮೇಜಿನ ಮುಂದಣ ಬರೆವ ಮೆತ್ತನ್ನ ಆಸನದಲ್ಲಿ ಕುಳಿತು ಹಿಂದಕ್ಕೊರಗಿದಾಗ ನಾನು ನಾನೇ ಆಗುತ್ತೇನೆ.

ದೈವ ಈಗ ನನಗೆ ಕೊಟ್ಟಿರುವ ಮಧ್ಯಮವರ್ಗಕ್ಕೂ ಮೀರಿದ ಅನುಕೂಲಗಳ ನಡುವೆಯೂ ನನ್ನ ಹಿಂದಣ ದಿನಗಳ ನೆನಪಾಗುತ್ತದೆ. ಹಳ್ಳಿಯ ಗುಡಿಸಿಲಿನ ಹಳ್ಳ ಕೊಳ್ಳಗಳ ಮಣ್ಣಿನ ನೆಲದ ಮೇಗಣ ಹರುಕು ಚಾಪೆಯ ಮೇಲೆ ಬಿದ್ದುಕೊಳ್ಳು ತ್ತಿದ್ದುದು,ಹೊದೆದ ಹರಕು ಪಂಚೆಯ ತೂತುಗಳ ನಡುವೆ ಚಳಿಗಾಳಿ ತೂರಿಬಂದು ತಿವಿ ಯುತ್ತಿದ್ದುದು, ಬರಿಯ ಹುಣಿಸೆ ಉಪ್ಪು ಹಸಿಮೆಣಸಿನಕಾಯಿಯ ಗೊಜ್ಜಿನಲ್ಲಿ ಅದ್ದಿದ ರಾಗಿಯ ಹಿಟ್ಟನ್ನು ಕಡಿಯುತ್ತಿದ್ದುದು, ಈಗಲೂ ಸ್ಮೃತಿಪಟಲದ ಮೇಲೆ ಹಾದು ಹೋಗುತ್ತದೆ. ಆಗ ನಾನು ನಮ್ರನಾಗುತ್ತೇನೆ. ಈಗ ಇದನ್ನೆಲ್ಲ ಕೊಟ್ಟಿರುವ ದೈವ ವನ್ನು ಭಕ್ತಿಯಿಂದ ನಮಿಸುತ್ತೇನೆ ; ಕಣ್ಣುಗಳು ಅಂತಃಕರಣದಿಂದ ಹರಿದು ಬಂದ ಜಲ ದಿಂದ ಮಂಜಾಗುತ್ತದೆ.

ನನ್ನ ಜೀವನದ ಪ್ರತಿ ಹಂತದಲ್ಲಿಯೂ ಮುತ್ತಿ ಬಂದ ಸಂಕಷ್ಟಗಳೆಲ್ಲವನ್ನೂ ತಮ್ಮದೆಂದೇ ಭಾವಿಸಿ ನನ್ನ ನೆರವಿಗೆ ಧಾವಿಸಿ ಬಂದ ಮಿತ್ರರು ಬಹುಮಂದಿ ಆಗಿದ್ದಾರೆ.

ಅವರುಗಳ ಉಪಕಾರವನ್ನು ಲೇಖನದ ವಿಸ್ತಾರದ ಭಯದಿಂದ ಇಲ್ಲಿ ಹೇಳಿಲ್ಲ. ಅವುಗಳನ್ನು ನನ್ನ ಆತ್ಮ ಚರಿತೆ 'ಕೋಟೆಮನೆ'ಯಲ್ಲಿ ಹೇಳಿ ನನ್ನ ಕೃತಜ್ಞತೆಯನ್ನು ಅರ್ಪಿಸಿದ್ದೇನೆ.

ನನ್ನ ಭವಿಷ್ಯವೇ ಶೂನ್ಯವೆಂಬ ನಿರ್ಧಾರಕ್ಕೆ ಬಂದಿದ್ದ ನಾನು, ಕಾಸೊಂದಕ್ಕಾದರೂ ಗತಿಯಿಲ್ಲದೆ ಪರಿದಾಡುತ್ತಿದ್ದ ನಾನು, ಈಗ ಕಾಗದ ಮುಸಿ ಲೇಖನಿಗಳಿಗಾಗಿ ಹತ್ತಾರು ರೂಪಾಯಿಗಳ ಪುಸ್ತಕಗಳಿಗಾಗಿ ವ್ಯಯ ಮಾಡಲು ಹಿಂದೆ ಮುಂದೆ ನೋಡಬೇಕಾಗಿಲ್ಲ. ನನ್ನ ಆವಶ್ಯಕತೆಗಳೋ, ಅತ್ಯಲ್ಪವಾದವುಗಳು. ಇರಲು ಒಂದು ನೆರಳುಬೇಕು. ಅದನ್ನು ಹಿರಿಯ ಮಗ ಸುದರ್ಶನ ಚೊಕ್ಕವಾಗಿಯೇ ಹೊಂಚಿಕೊಟ್ಟಿದ್ದಾನೆ. ಎರಡು ಹೊತ್ತಿನ ಕೂಳು ಬೇಕು. ಅದಕ್ಕೆ ಖಂಡಿತವಾಗಿಯೂ ಕೊರತೆಯಿಲ್ಲ. ಹಿರಿಯ ಸೊಸೆ ಅರುಣ ಇದನ್ನು ಗೌರವದಿಂದ ಪೂರೈಸುತ್ತಿದ್ದಾಳೆ. ಉಡುವ ಹತ್ತಾರು ಧೋತರಗಳಿವೆ. ತೊಡುವ ನಾಲ್ಕಾರು ಜುಬ್ಬಗಳೂ ಇವೆ. ಮಲಗಲು ಒಳ್ಳೆಯ ಸುಪ್ಪತ್ತಿಗೆ ಅಂಗೈ ಮಂದದ ಉಣ್ಣೆಯ ಹಚ್ಚಡ ಇದೆ. ಹೊರಗೆ ಗಾಳಿಯ ಸೇವನೆಗಾಗಿ ಹೋಗುವಾಗ ಹೊದೆಯಬಹುದಾದ ಹತ್ತು ಉಣ್ಣೆಯ ಶಾಲುಗಳನ್ನು ಕನ್ನಾಡ ಜನತೆ ಅಭಿಮಾನದಿಂದ ಹೊದಿಸಿದೆ. ಓದಲೆಂದು ನನ್ನದೇ ಆದ ಹತ್ತಾರು ಗ್ರಂಥಗಳನ್ನೂ ಸಂಗ್ರಹಿಸಿಕೊಂಡಿದ್ದೇನೆ. ಇದನ್ನೆಲ್ಲ ನಾನು ನನ್ನ ಪರಮ ಐಶ್ವರ್ಯವೆಂದೇ ಎಣಿಸಿದ್ದೇನೆ. ಉಳಿದ ಮಕ್ಕಳಾದ ವಿಷ್ಣುವರ್ಧನ, ಭಾರತಿ, ಇಂದಿರೆ ಅವರ ಮಕ್ಕಳು ಮನೆಯವರು ತೋರುತ್ತಿರುವ ಪ್ರೀತಿ ವಿಶ್ವಾಸಗಳ ತಂಗಾಳಿ ಸದಾ ನನ್ನ ಮೇಲೆ ಬೀಸುತ್ತ ನನ್ನನ್ನು ಪ್ರಫುಲ್ಲಗೊಳಿಸುತ್ತಿರುತ್ತದೆ. ಇಷ್ಟಕ್ಕೆ ನಾನು ತೃಪ್ತನು ; ಪರಮ ತೃಪ್ತನು.

ರಸೋತ್ಸಾಹ

ಈ ಭಾಗದಲ್ಲಿ ನನ್ನ ಸಾಹಿತ್ಯ ಶಕ್ತಿಯನ್ನು ಕುರಿತು ನಾಲ್ಕು ಮಾತುಗಳನ್ನು ಸೇರಿಸಿರುವೆನೇ ಹೊರತು, ಅದರ ವ್ಯಾವಹಾರಿಕ ವಿಷಯಗಳನ್ನು ಪ್ರಸ್ತಾಪಿಸುವುದಿಲ್ಲ. ಅವುಗಳ ಪ್ರಕಟನೆಯ ಸಾಹಸ, ಮಾರಾಟದ ಮುಳ್ಳಿನ ಮೇಗಣ ನಡಿಗೆ, ಪುಸ್ತಕ ವ್ಯಾಪಾರಿಗಳೊಡನೆ ಮತ್ತು ಕೆಲವು ಪ್ರಕಾಶರೊಡನೆ ನಡೆಯಿಸಿದ ಹೋರಾಟಗಳೆಲ್ಲವನ್ನೂ ಇಲ್ಲಿ ಹೇಳಲಾಗದು. ಅವುಗಳೆಲ್ಲದರ ಒಂದು ಸ್ಥೂಲ ಪರಿಚಯವನ್ನು ನನ್ನ ಆತ್ಮಕಥೆಯಾದ 'ಕೋಟೆಮನೆ'ಯಲ್ಲಿ ಕೊಟ್ಟಿದ್ದೇನೆಯೆಂದು ಈ ಮೊದಲು ಹೇಳಿದ್ದೇನೆ.

ನನ್ನ ಇಬ್ಬರೂ ಮಿತ್ರರಾದ ಪ್ರೊ. ಅಶ್ವತ್ಥನಾರಾಯಣ ಮತ್ತು ಪ್ರೊ. ಎಸ್. ಶ್ರೀನಿವಾಸನ್‌ರವರು ಇತ್ತೀಚೆಗೆ ನನ್ನ ಬಳಿ ಚರ್ಚೆಮಾಡುತ್ತಾ ನನ್ನ ಪ್ರತಿಯೊಂದೂ ಪುಸ್ತಕದ ರಚನೆಯ ಹಿನ್ನೆಲೆ ಮತ್ತು ಅದಕ್ಕೊದಗಿದ ಪ್ರೇರಣೆಗಳನ್ನು ಕುರಿತು ಬರೆದು ಕೊಡಬೇಕೆಂದು ಒತ್ತಾಯಿಸಿದರು. ಕೃತಿಗಳ ಹಿನ್ನೆಲೆಯಾಗಿ ಪ್ರೇರಣೆ ಅದೇನಿದ್ದೀತು ? ಲೇಖಕನ ಹೃದಯದ ಒಳಗಿನಿಂದ ಹರಿದು ಬಂದ ಸಾಹಿತ್ಯದ ತಲಪರಿಗೆ, ಹೀಗೆ ನನ್ನ ಭಾವಗಳಾಗಿ ಬರವಣಿಗೆಯಲ್ಲಿ ಹರಡಿ ನಿಂತಿದೆಯೆಂಬುದನ್ನು ನಾನು ಹೇಗೆ ಬರೆಯಿ

ವುದು ? ಅದೊಂದು ನಿಸರ್ಗದತ್ತವಾದುದೆಂದು ಜನತೆ ಅರಿತುಕೊಳ್ಳುತ್ತದೆಂದು ನಾನು ಉದಾಸೀನನಾಗಿ ಬಿಟ್ಟೆನು.

ಈ ಬರೆಹ ರೂಪಗೊಳ್ಳುತ್ತಿರುವ ಈ ಸಮಯದಲ್ಲಿ, ನನಗೆ ಈ ಇಳಿವಯಸ್ಸಿನಲ್ಲಿ ಮುತ್ತಿಬಂದ ನನ್ನದೇ 'ಕೋಟೆಮನೆ'ಯ ಬೆನ್ನಿನ ಇರಿತಗಳು, ನಂಬಿಸಿ ಕತ್ತನ್ನು ಕೊಯ್ದ ಕುಯುಕ್ತಿಗಳು, ನಂಬಿಕೆ ದ್ರೋಹಗಳು, ನನ್ನ ಔದಾರ್ಯ ಮತ್ತು ಪ್ರೇಮಗಳ ಮೆತುಜಾಗಗಳನ್ನು ಹಿಡಿದು ಬಡಿದ ಮತ್ತು ಕೊಯ್ದ ಕೊರೆತಗಳು, ಇದರಿಂದಾಗಿ ನಾನು ಹೂಡಿದ ನ್ಯಾಯಾಲಯದ ವಿವಾದಗಳ ಗೊಂದಲಗಳು, ತತ್ಫಲವಾಗಿ ಆದ ಧನ ಹಾನಿ ಮಾನಹಾನಿಗಳು—ಸದ್ಯ ದೇವರು ದೊಡ್ಡವನು ಪ್ರಾಣಹಾನಿಯಾಗಲಿಲ್ಲ—ನನ್ನ ಜೀವ ಸತ್ವವನ್ನೇ ಹೀರಿ ಬಿಟ್ಟಿದ್ದುದರಿಂದ, ನಾನು ಯಾವುದೇ ಸೃಜನ ಶೀಲ ಕೃತಿಯನ್ನು ಬರೆಯಲಾಗದೆ ತಳಮಳಿಸುತ್ತಿದ್ದೆನು. ಈ ಮಿತ್ರರ ಕೋರಿಕೆಯನ್ನು ನಾನು ಒಡನೆಯೇ ಈಡೇರಿಸಲಾಗಲಿಲ್ಲ. ಈಗ ನನ್ನ ಒಂದೆರಡು ಮಾತುಗಳು ಹೊರಬರುತ್ತಿವೆ.

ನನ್ನ ಸಾಹಿತ್ಯಾಭಿರುಚಿಯ ಒಲವು ನನ್ನಲ್ಲಿ ಹೇಗೆ ಅಂಕುರಿಸಿತೆಂಬುದು ನನಗೂ ಅರ್ಥವಾಗದುದಾಗಿದೆ. ನನ್ನ 'ಕೋಟೆಮನೆ'ಯ ಹಿನ್ನೆಲೆಯನ್ನು ನೋಡುವುದಾದರೆ ಅದೇನೂ ಅಷ್ಟು ಆಶಾದಾಯಕವಾದುದಾಗಿರಲಿಲ್ಲ. ನನ್ನ ತಾತ ವೆಂಕಟರಾಯಪ್ಪ (ಪಿತಾಮಹ) ಲಕ್ಷ್ಮೀಶನ ಜೈಮಿನಿ ಭಾರತ, ಗದುಗಿನ ಮಹಾಭಾರತ, ಯಕ್ಷಗಾನವಾದ ವಿಭೀಷಣನ ಬುದ್ಧಿವಾದ ಮತ್ತು ಗೋವಿನ ಕಥೆಗಳನ್ನು ಓದಿಕೊಳ್ಳುತ್ತಿದ್ದನಂತೆ. ಆಗಿನ ಕಾಲದಲ್ಲಿ ಓದು ಬರೆಹ ಬಲ್ಲ ಪ್ರತಿಯೊಬ್ಬನೂ ಅವುಗಳನ್ನು ಹಾಡಿಕೊಳ್ಳುತ್ತಿದ್ದುದರಿಂದ ನನ್ನ ತಾತನ ಈ ಓದಿಗೆ ನಾನೇನೂ ಪ್ರಾಮುಖ್ಯತೆಯನ್ನು ಕೊಡಲಾಗದು.

ಈ ತಾತ ವೆಂಕಟರಾಯಪ್ಪ ತನ್ನ ಜೀವನದಲ್ಲಿ ಯಾವುದೇ ಶ್ರದ್ಧೆಯನ್ನು ತಾರದೆ ಬದುಕಿದವನು ; ತನ್ನ ಹೊಟ್ಟೆಯನ್ನು ಹೊರೆದುಕೊಳ್ಳುವುದಕ್ಕಾಗಿ ಇದ್ದ ಒಬ್ಬನೇ ಮಗನನ್ನು ನಿಷ್ಕರುಣೆಯಿಂದ ಚಿಂದಿಯ ಬಟ್ಟೆಗಳಲ್ಲಿ ಬೀದಿಗೆ ತಳ್ಳುವಷ್ಟರ ಅಜ್ಞಾನವನ್ನೂ ಪರಮ ಸ್ವಾರ್ಥತೆಯನ್ನೂ ಬೆಳೆಯಿಸಿಕೊಂಡವನು ; ಮೈಗಳ್ಳತನದಿಂದ ಬದುಕಿದವನು. ಇಂತಹ ಕೆಲಸಗಳ್ಳವ್ಯಕ್ತಿ ಯಾವುದೇ ಹಿರಿಯ ಗುಣಗಳನ್ನು ರೂಢಿಸಿಕೊಳ್ಳದೆ, ರಾಮಾಯಣ ಮಹಾಭಾರತಗಳನ್ನು ಗಿಳಿಯ ಪಾಠದಂತೆ ಒದರಿಕೊಂಡರೆ ಅದೇನೂ ದೊಡ್ಡ ವಿಷಯವಾಗಲಾರದು.

ಸಾಹಿತ್ಯದೇವಿ ನಿರಂತರವಾದ ಕಠಿಣತಪಸ್ಸು ಮತ್ತು ಸಾಧನೆಗಳಿಗೆ ಮಾತ್ರ ಒಲಿಯಬಲ್ಲವಳು. ಅವಳು ರಸವಾರಿಧಿಯ ಮಡಿಲಿನ ಶ್ವೇತ ದ್ವೀಪದಲ್ಲಿ ಮೇರುಗಿರಿ ಸಾನುಗಳ ಮಹೋನ್ನತಗಳಲ್ಲಿ ಮಾತ್ರ ಮೆರೆಯುವವಳು. ನಿತ್ಯತಪಸ್ಸಿನಿಂದ ಪರಿಶುದ್ಧನಾಗಿ ಸತ್ವಸಿದ್ಧಿಯನ್ನು ಗಳಿಸಿಕೊಂಡ ಶ್ರದ್ಧಾವಂತನಿಗೆ ಮತ್ತು ಮಹಾಸಾಹಸಿಗೆ ಮಾತ್ರ ಆ ತಾಯಿ ಘನರೂಪಳಾಗಿ ಕಾಣಿಸಿಕೊಂಡಾಳು. ಅಂತಹ ಯೋಗಿ ತನ್ನ ಜೀವದಣುಕಣಗಳಲ್ಲಿ ತುಂಬಿಕೊಂಡ ತೇಜಸ್ಸನ್ನು ತನ್ನ ಮುಂದಿನ ಪೀಳಿಗೆಗೆ ಹಂಚಿಕೊಟ್ಟಾನು. ನನ್ನ ಈ ತಾತ ಅಂತಹ ತಪಸ್ವಿಗಳ ಸತ್ವ ಜೀವನದ ಗಂಧದ ಗಾಳಿಯನ್ನೂ ಕಾಣದವನು.

ಈ ಪ್ರೇರಣೆ ನನಗೆ ಮಾತಾಮಹನ ಕಡೆಯಿಂದ ಬಂದಿರಬಹುದೆ ? ಖಂಡಿತ ವಾಗಿಯೂ ಇಲ್ಲ. ಈ ತಾತ ವೆಂಕಟಕೃಷ್ಣಯ್ಯ ಇದಕ್ಕೂ ಹೆಚ್ಚಿನ ಭಂಡತನದಿಂದ ಬದುಕಿದವನು. ಮರೆ ಮೋಸ ಕಪಟಗಳೊಂದಿಗೆ, ಹೆಂಡತಿ ಭಿಕ್ಷಾಟನೆಯಿಂದ ಉಂಡು ತೇಗುತ್ತ ಅಹರ್ನಿಶಿಯೂ ಕೆಳಜಾತಿಯವನೊಬ್ಬನ ಹೆಂಡತಿಯ ಮನೆಯ ಬಾಗಿಲನ್ನು ಕಾಯ್ದು ಸತ್ತವನು. ಇಂತಹ ಕುಶೀಲನು ತನ್ನ ರಕ್ತದಲ್ಲಿ ಯಾವ ಸದ್ವಸ್ತುವನ್ನು ತಾನೆ ಬೆಳೆಸಿಯಾನು ?

ನನ್ನ ತಂದೆ ತನ್ನ ತಂದೆಯ ಪಡಿಯಚ್ಚಿನಂತೆ ಬದುಕಿದವರು. ಅವರ ಎಲ್ಲ ಗುಣಗಳೂ ಇವರಲ್ಲಿ ಮೂರ್ತೀಭವಿಸಿದ್ದುವು. ನನ್ನ ವಿಷಯದಲ್ಲಿ ಎರಡೂ ಕಡೆಯವರ ವಂಶವಾಹಿನಿಗಳು ತಮ್ಮ ಯಾವುದೇ ದುಷ್ಪರಿಣಾಮಗಳನ್ನು ಉಂಟುಮಾಡಲಿಲ್ಲವೆಂಬುದು ಒಂದು ಸಮಾಧಾನದ ವಿಷಯವಾಗಿದೆ.

ನನ್ನ ತಂದೆ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು ರಚಿಸಿದ ಸಟೀಕಾ ಜೈಮಿನಿ ಭಾರತವನ್ನು ಇಟ್ಟುಕೊಂಡು,ಒಂದಿಬ್ಬರು ಹುಡುಗರಿಗೆ ಹೇಳಿಕೊಟ್ಟುದೇನೋ ಉಂಟು. ಇವರಿಗೆ ಜೈಮಿನಿ ಭಾರತ ಮತ್ತು ಗದುಗಿನ ಭಾರತಗಳನ್ನು ಬಿಟ್ಟರೆ ಬೇರೆ ಯಾವ ಗ್ರಂಥದ ಹೆಸರೂ ತಿಳಿಯದು. ಇವರು ಶಾಲೆಯ ಉಪಾಧ್ಯಾಯರಾಗಿದ್ದುದರಿಂದ ನನಗೆ ಮೊದಲನೆಯ ಅಕ್ಷರಗಳನ್ನು ಮರಳ ಹರಹಿನ ಮೇಲೆ ತಿದ್ದಿ ಹಾಕಿದರು ಮತ್ತು ಚ. ವಾಸುದೇವಯ್ಯನವರ ಬಾಲಬೋಧೆಯ ಪಾಠಗಳನ್ನು ಹೇಳಿಕೊಟ್ಟರು. ಆಗ 'ಒಂದನೆಯ ಬಾಲಬೋಧೆ', 'ಎರಡನೆಯ ಬಾಲಬೋಧೆ' ಆದಮೇಲೆ 'ಒಂದನೆಯ ಪುಸ್ತಕ' ಬರುತ್ತಿದ್ದಿತು. ಇವುಗಳಲ್ಲಿ ಸಣ್ಣ ಪದ್ಯಗಳೂ ಇದ್ದುವು. 'ಎರಡನೆಯ ಪುಸ್ತಕ' ಆದ ಮೇಲೆ 'ಮೂರನೆಯ ಪುಸ್ತಕ' ಬಂದಾಗ ಅದರಲ್ಲಿ ಹಳೆಯ ಕಾವ್ಯಗಳ ಪದ್ಯಗಳೂ ಇರುತ್ತಿದ್ದವು.

ಇದರ ಜತೆಯಲ್ಲಿ ಅಮರಕೋಶದ ಪ್ರಥಮಕಾಂಡ ಮತ್ತೆ ಹಳೆಯ ಕಾವ್ಯಗಳಿಂದಾಯ್ದ ಷಟ್ಪದಿಯ ಪದ್ಯಗಳಿಂದ ಕೂಡಿದ 'ಪದ್ಯಸಂಗ್ರಹ'ವೂ ಇದ್ದುವು. ಇದರ ಜತೆಗೆ ಪ್ರಥಮವ್ಯಾಕರಣ, ಭೂಗೋಳ, ಚರಿತ್ರೆಗಳೂ ಇದ್ದುವು. ಭಾಷಾ ವಿಷಯವಾಗಿ ಹೇಳುವುದಾದರೆ ನಾನು ಇಲ್ಲಿ ತಪ್ಪಿಲ್ಲದ ಕಾಗುಣಿತವನ್ನೂ, ಲ ಳ ಶ ಷ ಸ ಹ ಗಳ ಸರಿಯಾದ ಉಚ್ಚಾರಣೆಯನ್ನೂ, ಅಲ್ಪಪ್ರಾಣ ಮಹಾಪ್ರಾಣ ದೀರ್ಘಾಕ್ಷರಗಳ ವ್ಯತ್ಯಾಸವನ್ನೂ ಚೆನ್ನಾಗಿಯೇ ಕಲಿತೆನು. ತಂದೆ ಅಮರಕೋಶವನ್ನೇನೋ ಹೇಳಿಕೊಡುತ್ತಿದ್ದರು. ಅದು ಕೇವಲ ಉಚ್ಚಾರಣೆಯನ್ನು ಮಾತ್ರ ಕುರಿತುದಾಗಿದ್ದಿತು. ಮಿಕ್ಕ ಏನೂ ಅವರಿಗೆ ತಿಳಿಯುತ್ತಿರಲಿಲ್ಲ. ಇಲ್ಲಿ ನಾನು ಅಕ್ಷರಗಳ ಕಾಗುಣಿತ ಮತ್ತು ಉಚ್ಚಾರಗಳನ್ನು ಮಾತ್ರ ಕಲಿತೆನಲ್ಲದೆ, ಸಾಹಿತ್ಯಾಭ್ಯಾಸದ ಯಾವುದೇ ಪ್ರವೇಶವೂ ನನಗಾಗಲಿಲ್ಲ. ವ್ಯಾಕರಣವಾದರೂ ಸೊನ್ನೆಯೇ.

ಇಲ್ಲಿ ಪ್ರಾಥಮಿಕದ ನಾಲ್ಕು ವರುಷಗಳಾದ ಮೇಲೆ ಇನ್ನೂ ಎರಡು ವರುಷಗಳ ಕನ್ನಡದ ಲೋಯರ್ ಸೆಕಂಡರಿಯನ್ನು ಓದಲೆಂದು ನಾನು ದೊಡ್ಡಬಳ್ಳಾಪುರದ

ತಾಲ್ಲೂಕಿನ ಕಾಡನೂರಿಗೆ ಹೋದೆನು. ಇಲ್ಲಿ ನಾನು ಇದ್ದ ಮನೆಯು ಒಂದು ವರುಷದ ನರಕವಾಸದ ಅವಧಿಯಲ್ಲಿ ನಾನು ಶಾಲೆಯಲ್ಲಿ ಕಲಿತುದು ಏನೂ ಇಲ್ಲವೆಂದೇ ಹೇಳಬೇಕು. ಇಲ್ಲಿನ ಶಾಲೆಯಲ್ಲಿ ನಮ್ಮ ತಂದೆಯ ಸಂಬಂಧಿಯೇ ಆದ ಸುಬ್ಬರಾಯರೆಂಬುವರು ಇದ್ದರು. ನಮ್ಮ ಈ ಮೇಷ್ಟ್ರು ಇಲಾಖೆಯಿಂದ ನಿಗದಿಯಾದ ಯಾವುದೇ ಪುಸ್ತಕವನ್ನಾಗಲಿ ನೋಡುತ್ತಿರಲಿಲ್ಲ. ನಮಗೆ ಅವುಗಳನ್ನು ನೋಡಲಾದರೂ ಬಿಡುತ್ತಿರಲಿಲ್ಲ. ಪ್ರತಿಯೊಂದು ಪಠ್ಯಕ್ಕೂ ನರಸಿಂಹಯ್ಯ ಎಂಬುವರು ಪ್ರಶ್ನೆ ಮತ್ತು ಸಂಕ್ಷಿಪ್ತ ಉತ್ತರಗಳ ನೋಟ್ಸುಗಳನ್ನು ಬರೆದಿದ್ದರು. ವಿದ್ಯಾರ್ಥಿಗಳು ಅವುಗಳನ್ನು ಮಾತ್ರ ಕೊಂಡು ಓದಬೇಕಾಗಿದ್ದಿತು.

ಈ ಮಹಾನುಭಾವರು ಯಾವುದೇ ವಿಷಯವಾಗಿ ಒಂದು ದಿವಸವಾದರೂ ಬಾಯಿಬಿಟ್ಟವರಲ್ಲ. ಇವರು ಒಮ್ಮೆಯಾದರೂ ಕಪ್ಪುಹಲಗೆಯ ಮೇಲೆ ಲೆಕ್ಕವನ್ನಾಗಲಿ ಅಥವಾ ಇನ್ನಾವುದನ್ನೇ ಆಗಲಿ ಬರೆದು ಹೇಳಿಕೊಡಲಿಲ್ಲ. ಬೆಳಿಗ್ಗೆ ಏಳೂವರೆ ಗಂಟೆಗೆ ಬರುತ್ತಿದ್ದ ಈ ಸುಬ್ಬರಾಯರು ಕುರ್ಚಿಗೆ ಒರಗಿ ಕುಳಿತರೆ ಶಾಲೆ ಬಿಡುವವರೆಗೆ ಕುರ್ಚಿಯಿಂದ ಮೇಲಕ್ಕೆ ಏಳುತ್ತಿರಲಿಲ್ಲ. ಮಧ್ಯಾಹ್ನದ ಪಾಳಿಯಲ್ಲಿಯೂ ಅಷ್ಟೇ. ಹುಡುಗರ ಪಾಠವೋ ? ಹುಡುಗರು ತಮ್ಮಲ್ಲಿರುತ್ತಿದ್ದ ನೋಟ್ಸುಗಳ ಪ್ರಶ್ನೆಗಳನ್ನೂ ಮತ್ತು ಅದರ ಸಂಕ್ಷಿಪ್ತ ಉತ್ತರಗಳನ್ನೂ ಪದ್ಯದಂತೆ ಬಾಯಿಪಾಠಮಾಡಿ ತಪ್ಪಿಲ್ಲದಂತೆ ಒದರಬೇಕಾಗಿದ್ದಿತು. ಒಂದು ಪದವನ್ನೋ ಅಥವಾ ಅಕ್ಷರವನ್ನೋ ಬಿಟ್ಟುದಾದರೆ, ಆಗ ಕುರ್ಚಿಯನ್ನು ಬಿಟ್ಟು ಎದ್ದ ಸುಬ್ಬರಾಯರು ತಮ್ಮ ಮುಂದಣ ಮೇಜಿನ ಮೇಲೆ ಇರುತ್ತಿದ್ದ ರೂಲುದೊಣ್ಣೆಯನ್ನು ಹಿಡಿದು ಅಂಗೈಯನ್ನು ಒಡ್ಡಿ ನೀರುಗಣ್ಣಿನಲ್ಲಿ ನಿಂತ ಹುಡುಗನನ್ನು ಬಾರಿಸಿಬಿಡುತ್ತಿದ್ದರು. ಏಟು ಸಾಧಾರಣವಾದುದಾಗಿರುತ್ತಿರಲಿಲ್ಲ. ಈ ರಕ್ಕಸ ಹೊಡೆತವನ್ನು ತಿಂದ ವಿದ್ಯಾರ್ಥಿ ನೋವಿನಿಂದ ಗಟ್ಟಿಯಾಗಿ ಅಳಲೂ ಬಾರದಿತ್ತು. ಅತ್ತರೆ ಮೈಯಲ್ಲಿ ಬಾಸುಂಡೆಗಳೇಳುವಂತಹ ಹೊಡೆತ ತಪ್ಪುತ್ತಿರಲಿಲ್ಲ.

ನಾನು ಅಲ್ಲಿದ್ದ ಒಂದು ವರುಷದ ಅವಧಿಯಲ್ಲಿ ಒಂದು ದಿವಸ ಮಾತ್ರ ಅಂತಹ ಒಂದೇ ಒಂದು ಏಟನ್ನು ತಿಂದುದರ ನೆನಪು ನನಗೆ ಚೆನ್ನಾಗಿ ಇದೆ. ನಾನು ಅಂದಂದಿನ ಬಾಯಿ ಪಾಠಗಳನ್ನೆಲ್ಲ ಅಂದಂದೇ ಚೊಕ್ಕವಾಗಿ ಗಿಳಿಯಂತೆ ಒದರಿ ಬಿಡುತ್ತಿದ್ದೆನು. ನಾನು ಒದರಿದ ಭಾಗದ ಬಹುಮಟ್ಟಿನ ವಿಷಯಗಳು ನನ್ನ ತಲೆಗೆ ಹಿಡಿಸುತ್ತಲೇ ಇರಲಿಲ್ಲ. ನಾನು ತಪ್ಪಿಲ್ಲದೆ ಸಾಲುಗಳನ್ನು ಹೇಳಿಬಿಡುತ್ತಿದ್ದುದರಿಂದ ನನಗೆ ಈ ವಿಷಯ ಚೆನ್ನಾಗಿ ತಿಳಿಯಿತೆಂಬುದೇ ನಮ್ಮ ಆ ಮಹಾಗುರುಗಳ ಸಂತೃಪ್ತಿಯಾಗಿರುತ್ತಿದ್ದಿತು.

ನನಗೆ ಏಟು ಬೀಳದಿರುವುದಕ್ಕೆ ಇನ್ನೂ ಒಂದು ಕಾರಣವನ್ನು ನಾನು ಊಹಿಸುತ್ತೇನೆ. ನಾನು ಇದ್ದ ಮನೆಗೂ ಈ ಸುಬ್ಬರಾಯರ ಮನೆಗೂ ಒಂದು ಗೋಡೆ ಮಾತ್ರ ಅಡ್ಡವಾಗಿದ್ದಿತು. ಅಂಗಳ ಎರಡೂ ಮನೆಗೂ ಒಂದೇ ಹೌದು. ಈ ಮನೆಯಲ್ಲಿ ನಾನು ಒದ್ದೆ ಕೌಪೀನವನ್ನು ಹಾಕಿಕೊಂಡು 'ಅಗ್ನಿಮಂಥನ' ಭಾಗದಲ್ಲಿ ಹೇಳಿರುವಂತೆ ಕಸ

ಮುಸುರೆಯನ್ನು ಮಾಡುವುದೇ ಮುಂತಾದ ಮನೆಗೆಲಸಗಳನ್ನು ಮಾತ್ರ ಮಾಡುತ್ತಿದ್ದು ದನ್ನು ಸದಾ ಕಾಣುತ್ತಿದ್ದ ಸುಬ್ಬರಾಯರಿಗೆ ನನ್ನ ಮೇಲೆ ಕನಿಕರ ಜಿನುಗಿ ನನಗೆ ವಿನಾ ಯತಿಯನ್ನು ಕೊಟ್ಟಿದ್ದರೂ ಕೊಟ್ಟಿರಬಹುದು.

ಕಾಡನೂರಿನಲ್ಲಿ ನನ್ನ ಸಾಹಿತ್ಯಾಭಿವೃದ್ಧಿಗೆ ಏನು ಸಹಾಯವಾಯಿತು ಎಂದು ಕೇಳುವುದಾದರೆ ಅದಕ್ಕೆ ಬರಿಯ ಸೊನ್ನೆಯೇ ಆಯಿತು ಎಂಬ ಉತ್ತರ ನನ್ನಲ್ಲಿ ಸಿದ್ಧ ವಾಗಿಯೇ ಇದೆ. ನನ್ನ ಸಾಹಿತ್ಯೋಪಾಸನೆಯ ತಳಹದಿ ಯಾವ ಹುಸಿಯ ಮೇಲೆ ನಿಂತಿತು ಎಂಬುದನ್ನು ಇಲ್ಲಿ ಕಾಣಿಸಿದ್ದೇನೆ. ಶಾಲೆಯ ಪಾಠಪ್ರವಚನಗಳ ವಿಷಯವಾಗಿ ಇಲ್ಲಿಂದ ಮುಂದೆ ಪರಿಸ್ಥಿತಿ ಉತ್ತಮಗೊಂಡಿತು. ಆದರೂ ಬಡತನದ ಸುಡು ಬೇಗೆ ಯಿಂದಾಗಿ ನನ್ನ ಜ್ಞಾನಾಭಿವೃದ್ಧಿ ಇರಬೇಕಾದ ಮಟ್ಟವನ್ನು ಮುಟ್ಟದೇ ಕುಂಠಿತ ಗೊಂಡೇ ಇದ್ದಿತು.

ಇನ್ನು ನಾನು ಬೆಳೆದ ಸಮಾಜದ ಹಿನ್ನೆಲೆಯನ್ನು ಒಂದೆರಡು ಮಾತುಗಳಲ್ಲಿ ಸೇರಿ ಸುವುದು ಅಗತ್ಯವಾಗಿದೆ. ನಾನು ಹುಟ್ಟಿದುದು, ಬೆಳೆದುದು, ಯೌವನದ ಹೊಸ್ತಿಲನ್ನು ತುಳಿವವರೆಗೆ ಬಾಳಿದುದು ಹಳ್ಳಿಯ ಒಂದು ಅಂಧಕಾರದಲ್ಲಿಯೇ. ಇಲ್ಲಿ ನನ್ನದೇ ಕುಲದ ಬ್ರಾಹ್ಮಣ ದಾಯಾದಿಗರ ನಾಲ್ಕಾರು ಮನೆಗಳೇನೋ ಇವೆ. ನನ್ನೊತ್ತಿನ ಹಿರಿಯ ತಲೆ ಮಾರಿನ ಜನವಾಗಲಿ ಅಥವಾ ಅವರ ಹಿಂದಣವರಾಗಲಿ ಜೀವನ ಸತ್ವವನ್ನು ಕೂಡಿಸಿ ಕೊಂಡು ಬದುಕಿದವರೇನಲ್ಲ. ಇವರುಗಳ ದೃಷ್ಟಿಯಲ್ಲಿ ಜೀವನದ ಸೊಗಸೆಂದರೆ ತೂಕ ಬಣ್ಣ ಮತ್ತು ವೈಭವಗಳೆಂದರೆ, ನಾಲ್ಕು ಕಾಸನ್ನು ಕೂಡಿರಿಸುವ, ನೆಲವನ್ನು ಗಳಿಸುವ, ಚೆದುರೇ ಆಗಿದ್ದಿತು. ಅವರುಗಳ ಬದುಕಿನ ಗೊತ್ತು ಗುರಿ ಮತ್ತು ಹೆಗ್ಗಳಿಕೆಗಳು ಅವರ ಡಕ್ಕೆ ಮಾತ್ರ ಸೀಮಿತಗೊಂಡಿದ್ದುವು. ಇಂತಹ ಹುಳಿ ಮನಸ್ಸಿನ ಜನದಿಂದ ಜೀವನದ ನಯ, ಸೊಗಸು, ಸತ್ವ ಮತ್ತು ಸೌಂದರ್ಯದ ಅದಾವ ಗುಣವನ್ನೂ ನಾನು ಕಾಣಲಿಲ್ಲ. ನಾನು ಚಿಕ್ಕಂದಿನಲ್ಲಿ ಬದುಕಿದುದು ಇಂತಹ ಮುಳ್ಳುಗಾಡಿನ ಚುಚ್ಚು ಮತ್ತು ತಿವಿತಗಳ ನಡುವೆ. ನಾನು ಈಗ ಈ ದೂರದಲ್ಲಿದ್ದರೂ ಅದರ ದಳ್ಳುರಿ, ಝಳ, ಬೇಗೆಗಳ ಚಾಚು ನಾಲಗೆ ತನ್ನ ತುಟಿಗಳನ್ನು ಸವರಿಕೊಳ್ಳುತ್ತ ನನ್ನನ್ನು ನುಂಗ ಬಯಸುತ್ತದೆ.

ಇನ್ನು ನನ್ನ ಮನೆ! ನಾನು ನನ್ನ ಹಳ್ಳಿಯ ಮನೆಯ ಅಂಗಳದಲ್ಲಿ ಮಲ್ಲಿಗೆಯ ಗಿಡವನ್ನು ನೆಟ್ಟೆನು. ಅದಕ್ಕೆ ನಾನೂ ನನ್ನ ಹೆಂಡತಿಯೂ ಗೊಬ್ಬರ ಗೋಡುಗಳನ್ನು ಹಾಕಿ ತಿಳಿನೀರನ್ನು ಎರೆದೆವು. ಅದು ಬೆಳೆಯಿತು ; ಹಬ್ಬಿ ಹರಡುವಂತೆ ಬೆಳೆಯಿತು. ಆದರೆ ಅದರ ಬಳ್ಳಿ ತನ್ನ ತಲೆಯಲ್ಲಿ ಬಿಟ್ಟುದು ಹೂಗಳನ್ನಲ್ಲ; ಹಾಲಾಹಲಗಳನ್ನು ತುಂಬಿ ಕೊಂಡ ಹಾವಿನ ಹೆಡೆಗಳನ್ನು ಮುಂಚಾಚಿತು. ಅವುಗಳಿಂದ ಹೊರಸೂಸುವ ವಿಷದುಸಿರು ನನ್ನನ್ನೂ ನನ್ನ ಮಕ್ಕಳನ್ನೂ ಬಳಸುತ್ತದೆ. ಈ ಬೇಗೆ ಬವಣೆಗಳು ನನ್ನ ಮೈಯನ್ನು ಮನಸ್ಸನ್ನು ಸುಡುತ್ತದೆ. ಆಗ ನಾನು ಬರೆಯಬಹುದಾದರೂ ಏನನ್ನು ? ಇವುಗಳು ನನ್ನ ಬಹುಮಟ್ಟಿನ ಕಾಲವನ್ನು ಹಾಳುಮಾಡಿದುವು. ಪ್ರೇಮದ ನಂಟು ಬಿಗಿಗೊಂಡಷ್ಟೂ, ಗಾಢವಾದಷ್ಟೂ, ಅದರಿಂದ ಬಿಡಿಸಿಕೊಳ್ಳುವಾಗ ಆಗಬಹುದಾದ ನೋವು ಸಂಕಟಗಳನ್ನು

ಹೋಲಿಸಲು ನನಗೆ ಯಾವುದೇ ಹೋಲಿಕೆ ಹೊಳೆಯುತ್ತಿಲ್ಲ.

ನನ್ನ 'ಕೋಟೆಮನೆ'ಯ ಮೇಲೆ ಈ ಮಮತೆಯನ್ನು ನಾನು ಬೆಳೆಯಿಸಿ ಕೊಂಡುದು ತಪ್ಪಾಯಿತೇನೋ ಎಂದೂ ಒಮ್ಮೊಮ್ಮೆ ಅನ್ನಿಸುತ್ತದೆ. ನಾನು ಅದನ್ನು ಬೆಳೆಯಿಸಿಕೊಳ್ಳದಿದ್ದರೆ, ಕರ್ತವ್ಯ ಚ್ಯುತನಾದೆನಲ್ಲಾ ಎಂಬ ಬೇವಸ ನನ್ನನ್ನು ಆಗಲೂ ಇಷ್ಟೇ ತೀವ್ರತರವಾಗಿ ಕಾಡುತ್ತಿದ್ದಿತು. ಹೇಗೂ ನಾನು ಬೆಂಕಿಯಲ್ಲಿ ಬಿದ್ದ ಹುಳುವಿ ನಂತೆ ಒದ್ದಾಡುವುದು ತಪ್ಪಲಿಲ್ಲ. ಜೀವನದ ಈ ಹೋರಾಟದ, ಗಾಸಿಯ, ಬಿಸಿಯ, ಕಸಿವಿಸಿಯ ಮನಸ್ಸು, ಹುಚ್ಚೆದ್ದ ಕಡಲಿನಲೆಗಳ ಮುಡಿಯಲ್ಲಿ ತೇಲಿ ಮುಳುಗುವ, ಮುಳುಗಿ ತೇಲುವ, ಅನಿಶ್ಚಿತತೆಯಲ್ಲಿ ಯಾವ ಕೃತಿ ರಚನೆ ಸಾಧ್ಯವಾದೀತು ? ಹೀಗಾಗಿ ಸಾಹಿತ್ಯ ಕ್ಷೇತ್ರದಲ್ಲಿ ನನ್ನ ಬೆಳೆವಣಿಗೆ ತೀರ ಕುಬ್ಜವಾಗಿ ಹೋಯಿತು. ಈ ಈತಿಬಾಧೆ ಗಳು ಈ ಪ್ರಮಾಣದಲ್ಲಿ ಇಲ್ಲದಿದ್ದಲ್ಲಿ, ಈ ನೆಲದಲ್ಲಿ ನನ್ನ ದುಡಿಮೆ ಇನ್ನೂ ಸ್ವಲ್ಪ ಎತ್ತರಕ್ಕೆ ಏರಬಹುದಿತ್ತೇನೋ ಅಥವಾ ಈ ರಸಪೊಸರಲು ಆ ಹಿರಿಯ ಹಿಳಿತ ನುಲಿತ ಗಳು ಆವಶ್ಯಕವಾದವುಗಳೇನೋ !

ನನ್ನ ಸ್ವಕೀಯವಾದ ವಿಷಯಗಳು ಇಲ್ಲಿ ಅನವಶ್ಯವಾದವುಗಳೆಂದು ಅನ್ನಿಸ ಬಹುದು. ಆದರೆ ನಾನು ಅನುಭವಿಸಿದ ಈ ಯಾತನೆ, ಈ ಶೋಷಣೆ, ನನ್ನ ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಗೆ ಬದಲಾಗಿ ನನಗೆ ಎದುರಾದ ಕೋಟಲೆಗಳು ನನ್ನ ಮನ ಸ್ಸಿನ ಮೇಲೆ ಯಾವ ದುಷ್ಪರಿಣಾಮವನ್ನು ಉಂಟು ಮಾಡಿರಬಹುದು ಎಂಬ ಒಂದು ಹಿನ್ನೆಲೆಯಲ್ಲಿ ಅದು ಆವಶ್ಯಕವೆಂದು ನನಗನ್ನಿಸುತ್ತದೆ. ಏಕೆಂದರೆ ಸಾಹಿತ್ಯ ರಚನೆ ಮಾನ ಸಿಕ ತಳಹದಿಯ ಮೇಲೆಯೇ ನಿಂತಿರುತ್ತದೆ. ಆದರೂ ಒಮ್ಮೊಮ್ಮೆ ನನಗನ್ನಿಸುತ್ತದೆ, ಈ ಕಾವು ಈ ನೋವು ಮನಸ್ಸಿನ ಕೊಳೆ ಕಸಗಳನ್ನು ಸುಟ್ಟುರಿಸಿ, ಸ್ವಚ್ಛತೆಯ ಹದ ವನ್ನು ಅನುಗೊಳಿಸಿದುವೇನೋ ಎಂದು.

ಈ ದಾಯಾದಿ ಬ್ರಾಹ್ಮಣರು ತಿನ್ನಲೆಂದು ಎತ್ತಿದ ನನ್ನ ಕೈದುತ್ತನ್ನು ಮಣ್ಣಿಗೆ ಕೆಡುಹಲು ಹವಣಿಸುತ್ತಾರೆ ; ನನ್ನ ಭೂಮಿ ಕಾಣಿಗಳನ್ನು ನಂಬಿಸಿ ದೋಚುತ್ತಾರೆ. ಆದರೂ ನನ್ನ ಹಳ್ಳಿಯ ಹೆಸರನ್ನು ಹೆಮ್ಮೆಯಿಂದ ನನ್ನ ಹೆಸರಿಗೆ, ಮಕ್ಕಳ ಮತ್ತು ಮೊಮ್ಮಕ್ಕಳ ಹೆಸರಿಗೆ ಸಿಕ್ಕಿಸಿಕೊಳ್ಳುತ್ತೇನೆ ; ಅದನ್ನು ನಾಡಿನ ಮೇಲೆಲ್ಲ ಬಿತ್ತಿ ಕೊಂಡು ಬೆಳೆಯುತ್ತೇನೆ. ಇವರು ನನ್ನನ್ನು ನನ್ನ ಊರನಿಂದ ಹೊರದೂಡಲು ಎಷ್ಟು ಎಷ್ಟು ಹವಣಿಸುತ್ತಾರೆಯೋ, ನಾನು ಅಷ್ಟೂ ಅಷ್ಟು ಅದಕ್ಕೆ ಕಚ್ಚಿಕೊಳ್ಳುತ್ತೇನೆ. ಏಕೆ ? ನಾನು ಆ ನೆಲವನ್ನು ತುಳಿಯುತ್ತ ಬೆಳೆದೆನು. ಅಲ್ಲಿನ ಗಾಳಿಯನ್ನು ನೀರನ್ನು ಕುಡಿದ ಈ ಜೀವವನ್ನು ಬಿಗಿಹಿಡಿದೆನು. ಈ ಮಂತ್ರದ ಉಚ್ಚಾರ ಬದುಕಬೇಕೆಂಬ ನನ್ನ ಆಸೆಯನ್ನು ಚಿಗುರಿಸಿತು. ಈ ನೆನಪಿನ ಸವಿ ಅಲ್ಲಿ ನನಗೆ ಬಂದಡಸುವ ನೋವುಗಳ ನಡುವೆ ಅತ್ಯಲ್ಪವಾದುದಾದರೂ, ನಾನು ಅಲ್ಲಿಗೆ ಹೋಗುತ್ತೇನೆ. ಅಲ್ಲಿ ನಾನು ನಿಂತ ಜಾಗ, ಕುಳಿತ ಜಾಗ, ಆಡಿದ ಜಾಗ, ಕವನಗಳನ್ನು ಕಟ್ಟಿದ ಮರಗಳ ನೆರಳು ಹರಡಿದ್ದ ಜಾಗಗಳನ್ನು ನೋಡಿ ನೋಡಿ ಹಿಂದಿರುಗುತ್ತೇನೆ. ಅಂದಿನ ನನ್ನ ಆ ಉಸಿರು ಹಸಿರು

ಗಳು ನನಗೆ ಸ್ವಲ್ಪ ಮುದವನ್ನು ತಂದಾವು.

ಬಿಸಿಲಿನ ರಝಳಕ್ಕೆ ಗಿಡದ ಕಾಯಿ ಒಣಗಿ ಒಡೆದು ಒಳಗಣ ಬೀಜ ದೂರಕ್ಕೆ ಸಿಡಿಯುವಂತೆ ನಾನು ಸಮೇತನಹಳ್ಳಿಯಿಂದ ಸಿಡಿದು ದೂರಕ್ಕೆ ಬಿದ್ದೆನು. ಬೀಜ ಕೆಲವಕ್ಕೆ ನವಿರಾದ ನುಣುಪಾದ ತಂತುಗಳು ಬೆಳೆದಿರುತ್ತವೆ. ಕಾಯಿ ಸಿಡಿದಾಗ ತನ್ನ ತಂತುಗಳ ನೆರವಿನಿಂದ ಗಾಳಿಗೆ ತೇಲುವ ಈ ಬೀಜ ತೇಲಿ ತೇಲಿ ಹೋಗಿ ದೂರ ಬಹುದೂರಗಳನ್ನೂ ಮುಟ್ಟಿ ಬೀಳುತ್ತದೆ. ನನ್ನ ಬದುಕಿನ ಗುರಿಯನ್ನು ಒಳಗಿರಿಸಿಕೊಂಡ ಈ ಬೀಜ ಹೀಗೆ ನಾಡಿನ ಹದಗೊಂಡ ಹುಲುಸು ನೆಲದಲ್ಲಿ ಬಿದ್ದಿತು. ಅಲ್ಲಿ ನಾನು ಬೆಳೆದೆನು. ಜೀವನದ ನೆಲೆ ಬೆಲೆಗಳನ್ನು ಗುರುತಿಸಿಕೊಂಡು ಬಾಳಿದೆನು. ಆ ಬೀಜ ಕ್ಷೇತ್ರಸಾರದಿಂದ ಪೊಳೆತು, ಹಸಿರುಗಟ್ಟಿ, ಹೂಬಿಟ್ಟು ಒಂದೆರಡು ಹಣ್ಣುಗಳನ್ನು ಕೊಟ್ಟಿದ್ದರೆ ಅದು ಆ ನೆಲದ ಗುಣ ಆಗುತ್ತದೆ. ನಾನು ಗಣ್ಯತೆಯನ್ನೇನಾದರೂ ಗಳಿಸಿದ್ದರೆ ಅದು ಅದರ ಗಟ್ಟಿತನವೇ ಹೊರತು ನನ್ನದೇನಿಲ್ಲ. ಈ ಮಾತು ಔಪಚಾರಿಕವಲ್ಲ ; ನಿಜದಲ್ಲಿ ನಿಜ ಆಗಿದೆ.

ಬಾವಿಯನ್ನು ತೋಡಿದಾಗ ಮೊದಲು ಮಣ್ಣಿನ ಪದರವನ್ನು ಎತ್ತಬೇಕು. ಹಾಗೆ ಎತ್ತುವಾಗ ಒಳಗಿನ ತಿಳಿನೀರು ಯಾವುದೋ ಒಂದು ಕಲ್ಲಿನ ಕೆಳಗೆ ಮಡುಗಟ್ಟಿ ನಿಂತಿರುತ್ತದೆ. ಮೇಲಿನ ಕಲ್ಲನ್ನು ಸಡಿಲಿಸಿದಾಗ ಅದರ ಊಟೆ ಮೇಲಕ್ಕೆ ಚಿಮ್ಮುತ್ತದೆ ; ಬಾವಿಯನ್ನು ತುಂಬಿ ನಿಲ್ಲುತ್ತದೆ. ಈ ಮಣ್ಣನ್ನು ಅಗೆದೆತ್ತುವ ಕೆಲಸ ನನ್ನಿಂದಾದುದು ನಿಜ. ಹಾಗೆ ಆದಾಗ ಭಗವತ್ಕೃಪೆಯು ಈ ಸಾಹಿತ್ಯ ಪರಿಚಾರಿಕೆಯ ತಿಳಿನೀರಿನೂಟೆ ಮೈದಾಳಿ ನಿಂತಿತು.

ನನ್ನ ಬುದ್ಧಿ ಮತ್ತು ಚೇತನಗಳು ದೈವ ಕೃಪೆಯಿಂದ ಮತ್ತು ಪೂರ್ವಜನ್ಮದ ಪರಿಪಾಕದಿಂದ ತಮ್ಮ ಇರವನ್ನು ಹೀಗೆ ಬೇರೆ ಮಾಡಿಕೊಂಡಾಗ, ನಾನು ಅಧ್ಯಯನಕ್ಕೆಂದು ಎತ್ತಿಕೊಂಡುದು ಷಟ್ಪದಿ ಮತ್ತು ಚಂಪೂ ಮಹಾಕಾವ್ಯಗಳನ್ನೇ. ಈ ವಸ್ತುಕ ವಿನ್ಯಾಸದ ರಮಣೀಯ ಪರಿಸರವನ್ನು ಹೊಕ್ಕ ಮನಸ್ಸು ಮುದುಡಲಿಲ್ಲ ; ದುಸ್ತರವೆಂದು ಹಿಮ್ಮೆಟ್ಟಲಿಲ್ಲ. ಬದಲಾಗಿ ಅದರ ರುಚಿಶುಚಿಗಳನ್ನು ಮತ್ತಷ್ಟು ಮೈಗೂಡಿಸಿಕೊಳ್ಳುವ ಹುರುಪು ಹುಮ್ಮಸ್ಸುಗಳು ತುಂಬಿ ಬಂದುವು. ಈ ಮಹೋದ್ಯಮದ ನಡುವೆ ಮೂಡಿ ಬಂದುದೇ 'ಭೀಷ್ಮಸಂಕಲ್ಪ'ವೆಂಬ ಗದ್ಯನಾಟಕ. ಇದಕ್ಕೂ ಮೊದಲು ಬರೆದ ಆರಂಭದ ಸುಮಾರು ಒಂದು ತಲೆ ಹೊರೆಯಷ್ಟರ ಬರೆಹವನ್ನು ಅಗ್ನಿಗೆ ಅರ್ಪಿಸಿದ್ದೆನು.

ಈ 'ಭೀಷ್ಮಸಂಕಲ್ಪ'ವನ್ನು ಪ್ರಕಟಿಸುವ ಅದಮ್ಯವಾದ ಬಯಕೆಯೇನೋ ಇತ್ತು. ಇದು ನನ್ನ ಚೊಚ್ಚಲು ಕೃತಿಯಾದುದರಿಂದ ಅರಿವುಳ್ಳ ಜನದೆದುರಿನಲ್ಲಿ ಎಲ್ಲಿ ನಗೆಪಾಟಲಿಗೆ ಗುರಿಯಾಗುವುದೋ ಎಂದು ಹೆದರಿದೆನು. ಅದು ನನ್ನನ್ನು ಕಾಡಿಯೇ ಕಾಡಿತು. ನನ್ನ ಇಂತಹ ಬರವಣಿಗೆಯನ್ನು ಯಾವ ಪ್ರಕಾಶಕನೂ ಮೂಸುವುದೂ ಇಲ್ಲವೆಂಬ ಅಳುಕು ಬೇರೆ ನನ್ನನ್ನು ತುಂಬಿಕೊಂಡಿತು. ಆಗ ಶ್ರೀ ಅ. ನ. ಕೃಷ್ಣರಾಯರ ಪ್ರಗತಿಶೀಲ ಸಾಹಿತ್ಯದ ಅಬ್ಬರ ತಾರಕಸ್ವರದಲ್ಲಿ ಮೆರೆದಿದ್ದಿತು. ಮೈಯಲ್ಲಿ ಮಾಂಸವೇ ಇಲ್ಲದ ನಾನು ಸ್ವಂತವಾಗಿ ಪ್ರಕಟಿಸಲು ಚಿಂತಿಸುವಷ್ಟರ ಕಸುವಾದರೂ ನನ್ನಲ್ಲಿರಲಿಲ್ಲ.

ಧೈರ್ಯಮಾಡಿ ಮೊದಲಿಗೆ ಅದನ್ನು ಬಳೇಪೇಟೆಯ ಇಂಡಿಯನ್ ಪ್ರೆಸ್ಸಿನ ಶ್ರೀ ವಿ. ಎಸ್. ನಾರಾಯಣರಾಯರನ್ನು ಕೇಳಿದೆನು. ಅವರು ನೋಡುವುದಾಗಿ ಹೇಳಿದರು. ಕೊಟ್ಟೆನು. ಅದು ಅವರಿಗೆ ಒಪ್ಪಿಗೆಯಾಗಲಿಲ್ಲ. ಈ ಮೊದಲ ಸೋಲು ನನ್ನನ್ನು ಹಿಮ್ಮೆಟ್ಟಿಸಲಿಲ್ಲ. ಅಳುಕಿನ ಚಳಿ ಇದರಿಂದ ಬಿಟ್ಟಿತು. ಅಲ್ಲಿಯೇ ಇದ್ದ ಜ್ಯೂಪಿಟರ್ ಪ್ರೆಸ್ಸಿನ ಮಾಲೀಕರಾದ ಶ್ರೀ ಎಸ್. ಎಸ್. ವಾಸನ್ ನೋಡಲು ಒಪ್ಪಿದರು. ಕೊಟ್ಟೆನು. ಅವರು ಅದನ್ನು ಆಗ ಸರ್ಕಾರದ ಭಾಷಾಂತರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀವರದರಾಜಾರಾಯರಿಗೆ ಪರಿಶೀಲಿಸಲು ಕೊಟ್ಟರು. ರಾಯರು ಅದಕ್ಕೆ ಸಂತೋಷ ದಿಂದ ಒಪ್ಪಿಗೆಯನ್ನು ಕೊಟ್ಟರು. ನನ್ನ ಮತ್ತು ಅವರ ಸ್ನೇಹ ಅಂಕುರಿಸಿದುದು ಇಲ್ಲಿಯೇ. ಈ ನಾಟಕ ಅಲ್ಲಿ ಪ್ರಕಟ ಆಯಿತು.

ನನ್ನ ಅಧ್ಯಯನಾರಂಭ ಹಳೆಯ ಹಳಗನ್ನಡದ ಮಹಾಕಾವ್ಯಗಳಿಂದಲೇ ಎಂದು ಹೇಳಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯ ಇಂತಹ ಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿದ್ದಿತು. ಅವುಗಳಲ್ಲಿ ಬಾಣಭಟ್ಟನ 'ಕಾದಂಬರಿ'ಯನ್ನು ನಾಗವರ್ಮನು ಕನ್ನಡಿಸಿದ್ದು ದೊಂದೂ ಇದ್ದಿತು. ಅದನ್ನು ಓದಿದಾಗ ಅದರ ಸೊಗಸು ನನ್ನನ್ನು ತುಂಬ ಆಕರ್ಷಿಸಿತು. ಅದು ಇಂಟರ್‌ಮೀಡಿಯಟ್ ತರಗತಿಗೆ ಪಠ್ಯವಾಗಿದ್ದಾಗ ವಿ. ಸೀ. ಯವರು ಅದನ್ನು ತರಗತಿಯಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಬೋಧಿಸುತ್ತಿದ್ದುದನ್ನು ಅವರ ವಿದ್ಯಾರ್ಥಿಯೊಬ್ಬನು ನನ್ನ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದನು. ಆ ಇಂಪು ಮತ್ತು ಸೊಗಸುಗಳು ನನ್ನ ಮೈಮನಗಳನ್ನು ತುಂಬಿಕೊಂಡಿದ್ದುವು. ಈ ವೇಳೆಗೆ ನನಗೆ ಪದ್ಯದ ಹುಚ್ಚು ಬಿಟ್ಟುಹೋಗಿ ನಾಟಕವನ್ನು ಹೆಣೆಯುವ ಆಟ ಆರಂಭವಾಗಿಹೋಗಿತ್ತು. ಈ ಕಾವ್ಯದಲ್ಲಿ ಕತೆ ಒಂದರಲ್ಲಿ ಒಂದು ಹೆಣೆದುಕೊಂಡು ತೊಡಕು ತೊಡಕಾಗಿ ನನಗೆ ಕಾಣಿಸಿತು. ನಾನು ಈ ಕತೆಗಳೆಲ್ಲವನ್ನೂ ಬಿಡಿಸಿ, ಮೊದಲಿನಿಂದ ಕೊನೆಯವರೆಗೆ ಒಂದೇ ಸಮನೆ ಹರಿವ ನೀರಿನಂತೆ ಬಿಡಿಸಿಡಬಾರದೇಕೆ ಎಂಬುದು ಅಂಕುರಿಸಿದಾಗ 'ಮಹಾಶ್ವೇತೆ' ನಾಟಕ ಹುಟ್ಟಿಕೊಂಡಿತು. ಆಗಲೇ ಇದನ್ನು ಸರಳವಾದ ಗದ್ಯರೂಪದಲ್ಲಿಯೂ ಅದೇ ಹೆಸರಿನಲ್ಲಿಯೇ ಒಂದು ನೀಳ್ಗತೆಯನ್ನಾಗಿ ಬರೆದೆನು.

ನನ್ನ ಸಾಹಿತ್ಯಾಧ್ಯಯನ ಆರಂಭವಾದುದು ಸ್ವಾತಂತ್ರ್ಯ ಪೂರ್ವದ ಹತ್ತು ವರುಷಗಳ ಹಿಂದೆಯೇ. ರಾಷ್ಟ್ರಭಕ್ತಿ ತನ್ನ ನಿಜವಾದ ಅರ್ಥದಲ್ಲಿ ನಮ್ಮ ನಾಡಿನ ತುಂಬ ರಾಷ್ಟ್ರದ ತುಂಬ ಹರಡಿಕೊಂಡಿದ್ದ ಕಾಲ ಅದು. ಖಾದಿಯ ಬಟ್ಟೆಯನ್ನು ಖಾದಿಯ ಟೋಪಿಯನ್ನು ಧರಿಸಿದವರು ಆಗ ಎಲ್ಲೆಲ್ಲಿಯೂ ಮನ್ನಣೆಯನ್ನು ಗಳಿಸಿದ್ದರು. ಆಗ ಅದೊಂದು ತ್ಯಾಗ, ಬಲಿದಾನ, ಧರ್ಮ ಸತ್ಯಗಳ ಸಂಕೇತವಾಗಿದ್ದಿತು. ಅಂದಿನ ಆ ಕಾಂಗ್ರೆಸ್ ಜನ ಪ್ರಾಮಾಣಿಕತೆಯನ್ನು ಮತ್ತು ಹೇಳಿದುದನ್ನು ತ್ರಿಕರಣಪೂರ್ವವಾಗಿ ನಡೆಯಲ್ಲಿ ಆಚಾರದಲ್ಲಿ ತರುತ್ತಿದ್ದರು. ಆಗ ಅವರನ್ನು ಕಂಡಾಗ ಭಕ್ತಿ ಗೌರವಗಳು ತಾವಾಗಿಯೇ ಮೂಡಿಬರುತ್ತಿದ್ದುವು.

ಆ ಹೋರಾಟದ ಕಾಲದಲ್ಲಿ ಬೆಂಗಳೂರಿನ ಚಿಕ್ಕಲಾಲ್ ಬಾಗ್, ಬನಪ್ಪಪಾರ್ಕ್,

ಗಾಂಧಿ ಮೈದಾನ–ಈಗಿನ ಕನ್ನಡ ಸಾಹಿತ್ಯ ಪರಿಷತ್ತಿನ ಜಾಗದಲ್ಲಿ, ಆಗ ಇನ್ನೂ ಕಟ್ಟಡ ಎದ್ದಿರಲಿಲ್ಲ–ನ್ಯಾಷನಲ್ ಹೈಸ್ಕೂಲಿನ ಮೈದಾನ ಮುಂತಾದೆಡೆಗಳಲ್ಲಿ, ನಮ್ಮ ನಾಡಿನ ಹಾಗೂ ರಾಷ್ಟ್ರ ನಾಯಕರ ಭಾಷಣಗಳಾಗುತ್ತಿದ್ದುವು. ಮೈಸೂರು ಮಹಾರಾಜ ಸರಕಾರ ದೊಡನೆ ಘರ್ಷಣೆಗಳೂ ನಡೆಯುತ್ತಿದ್ದುವು. ನಾನು ಹೋಗಿ ಇವುಗಳನ್ನು ಕೇಳುತ್ತಿ ದ್ದೆನು. ಆಗ ನರನಾಡಿಗಳು ಬೆಂಕಿಯನ್ನೇ ತುಂಬಿಕೊಳ್ಳುತ್ತಿದ್ದುವು.

ಸ್ವಾತಂತ್ರ್ಯ ಚಳುವಳಿ ಒಂದು ತಾರಕಕ್ಕೆ ಏರಿದ್ದಿತೆಂದರೆ ಆಶ್ಚರ್ಯವಲ್ಲ. ಬಿರು ಗಾಳಿ ಹೀಗೆ ಬೀಸಿದಾಗ, ತರುಣನಾದ ನನ್ನಮೇಲೆ ಅದು ಪ್ರಭಾವವನ್ನು ಬೀರಿದ್ದಿತು. ಆದರೆ ಅದರಲ್ಲಿ ಸಕ್ರಿಯ ಪಾತ್ರವನ್ನು ವಹಿಸುವ ಉತ್ಸಾಹವಿದ್ದರೂ, ನಾನು ಅದರಿಂದ ದೂರ ನಿಲ್ಲಬೇಕಾದುದು ಅನಿವಾರ್ಯವಾಗಿದ್ದಿತು. ತಂದೆ, ತಾಯಿ, ತಂಗಿ, ತಮ್ಮಂದಿರು ಉಣಲಿಲ್ಲದೆ ಕಂಗಾಲಾಗಿರುವಾಗ, ನಾನು ಚಳುವಳಿ ಎಂದು ಅದರಲ್ಲಿ ಮುಳುಗಿ, ಸೆರೆ ಮನೆಗೆ ಹೋದರೆ, ನನ್ನನ್ನು ನಂಬಿದವರಿಗೆ ನಾನು ದ್ರೋಹವನ್ನು ಮಾಡಿದಂತಾಗು ತ್ತಿದ್ದಿತು. ಅಂದು ನನಗೆ ರಾಷ್ಟ್ರಪ್ರೇಮಕ್ಕಿಂತ ಹೆಚ್ಚಾಗಿ ಕಂಡುದು, ನನ್ನ ಮನೆಯನ್ನು ತುಂಬಿಕೊಂಡಿದ್ದ ದಾರಿದ್ರ್ಯರಕ್ಕಸನೊಡನೆಯ ಹೋರಾಟವೇ ಆಗಿದ್ದಿತು.

ಈ ಸಂಕಲ್ಪದಿಂದ, ಸಾರ್ವಜನಿಕರ ನೆರವು ಇದ್ದರೂ ನಾನು ನನ್ನ ಮುಂದಿನ ಕಾಲೇಜಿನ ಅಧ್ಯಯನವನ್ನೂ ಆಚೆಗೆ ತಳ್ಳಿ, ನನ್ನ ತಂದೆಯ ಸಂಸಾರವನ್ನು ಹೆಗಲ ಮೇಲೆ ಹೊತ್ತು ನಿಂತಿದ್ದೆನು. ಆದಾಗ್ಯೂ, ನನ್ನ ದೇಶ ಪ್ರೇಮದ ಹೊನಲು ಒಳಗೇ ರೂಪವನ್ನು ಪಡೆಯುತ್ತಿದ್ದಿತು. ಆ ರೂಪವೇ ಮುಂದಿನ ವರುಷಗಳ ನಂತರ 'ಎಲೆ ಮರೆಯ ಹೂ'ವೆಂಬ ಹೊತ್ತಗೆಯಾಗಿ ಹೊರಕ್ಕೆ ಬಂದಿತು.

ರಾಷ್ಟ್ರಪ್ರೇಮದಿಂದ ಕೂಡಿದ ಇಂತಹ ಒಂದು ಹೊತ್ತಗೆಯನ್ನು ನಾನು ರಚಿಸಿ ದುದನ್ನು ಕೆಲವರು ವಿನೋಬಾರವರ ಕಿವಿಗೂ ಹಾಕಿದ್ದರು. ನಾನು ರಾಮನಗರದಲ್ಲಿ ದ್ದಾಗ, ಈ ಸಂತ ಭೂದಾನ ಚಳುವಳಿಯ ಪಾದಯಾತ್ರೆಯಲ್ಲಿ ಬಂದಿದ್ದರು. ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟಾಗ, ಅವರು ತುಂಬಿದ ಸಂತಸದಿಂದ ನನ್ನನ್ನು ಹರಸಿದುದೊಂದೇ ಅಲ್ಲ, ತಮ್ಮ 'ಗೀತಾಪ್ರವಚನ'ದ ಪುಸ್ತಕವೊಂದಕ್ಕೆ ಕನ್ನಡದಲ್ಲಿ ತಮ್ಮ ಅಂಕಿತವನ್ನಿರಿಸಿಕೊಟ್ಟರು. ಇದು ಈಗಲೂ ನನ್ನ ಪುಸ್ತಕ ಸಂಗ್ರಹದಲ್ಲಿ ಇದೆ. ಮರುದಿನ ಮುಂಬೆಳಗಿಗೆ ಮುಂಚೆಯೇ ಬೆಂಗಳೂರಿನತ್ತ ಅವರು ಕಾಲುನಡಿಗೆಯಲ್ಲಿ ಹೊರಟಾಗ, ನನ್ನನ್ನೂ ಕರೆದುಕೊಂಡು ನಡೆಯುತ್ತ, ಗ್ರಂಥದ ಸ್ಥೂಲ ಪರಿಚಯ ವನ್ನು ಮಾಡಿಸಿಕೊಂಡು ಸಂತಸಪಟ್ಟರು.

ನಾನು ಹಾಸನದಲ್ಲಿ ಇದ್ದಾಗ, ಅಲ್ಲಿನ ಸುತ್ತಣ ದೊಡ್ಡಗದ್ದವಳ್ಳಿ, ಬೇಲೂರು, ಹಳೇಬಿಡು, ಶ್ರವಣ ಬೆಳುಗೊಳ ಮುಂತಾದ ಕಡೆಗಳಲ್ಲಿನ ಹೊಯ್ಸಳ ಶಿಲ್ಪಗಳು ನನ್ನ ಮನಸ್ಸನ್ನು ಸೂರೆಗೊಂಡುವು. ಅಲ್ಲಿ ಹಾಸನ ಜಿಲ್ಲೆಯ ಹೊಯ್ಸಳ ಯುಗದ ಹಲವಾರು ಶಾಸನಗಳನ್ನು ಅಧ್ಯಯನ ಮಾಡಲು ನನಗೊಂದು ಪ್ರೇರೇಪಣೆ ದೊರೆಯಿತಾದರೂ, ನಾನು ಆ ವಸ್ತುವಿನ ಯಾವುದೇ ಕೃತಿಯನ್ನೂ ಅಲ್ಲಿ ರಚಿಸಲಿಲ್ಲ. ಮುದ್ದಣ ಕವಿಯ 'ಶ್ರೀ

ರಾಮಾಶ್ವಮೇಧಂ' ಕಾವ್ಯವನ್ನು ಇಲ್ಲಿ ಸರಳ ಹೊಸಗನ್ನಡಕ್ಕೆ ಹಾಕಿದೆನು. 'ರಾಸಲೀಲೆ' ಎಂಬ ಕೃಷ್ಣನನ್ನು ಕುರಿತ ಗೇಯನಾಟಕ ರಚಿತವಾದುದೂ ಇಲ್ಲಿಯೇ. ಕೃಷ್ಣನ ವಿಷಯ ವಾಗಿ ಚಾರಿತ್ರಿಕ ನಿಲುವನ್ನು ತಾಳಲು ನನ್ನನ್ನು ಪ್ರೇರೇಪಿಸಿದವರು, ಆಗ ಇಲ್ಲಿಯೇ ಇದ್ದ ಶ್ರೀ ಎಲ್. ಗುಂಡಪ್ಪನವರು. ಇದನ್ನು ತಿದ್ದಿ ಹಲವಾರು ಸಲ ಬರೆದೆನು.

ಇಲ್ಲಿ ಮೊದಲನೆಯ ಸಲ 'ಶ್ರೀ ರಾಮಾಶ್ವಮೇಧ'ವನ್ನು ಹೊಸಗನ್ನಡಕ್ಕೆ ಹಾಕಿದ ಮೇಲೆ, ಮುಂದೆ ರಾಮನಗರಕ್ಕೆ ಹೋದ ಮೇಲೆ, ಇದನ್ನು ಪರಿಷ್ಕರಿಸಿ, ಡಾ. ಗೋವಿಂದ ಪೈಗಳಿಗೆ ಕಳಿಸಿದೆನು. ಅವರು ಮೊದಲನೆಯ ಆಶ್ವಾಸವನ್ನು ಪೂರ್ಣವಾಗಿ ತಮ್ಮ ಎಂದಿನ ನೇರಳೆಯ ಬಣ್ಣದ ಶಾಯಿಯಲ್ಲಿ ತಿದ್ದಿ, ಅನುವಾದ ಹೀಗಿರಬೇಕು ಎಂದು ಆದೇಶವನ್ನು ನೀಡಿದರು. ಅದರಂತೆ ಮತ್ತೊಂದು ಸಾರಿ ಪರಿಷ್ಕರಿಸಿದೆನು. ಅದರ ನಂತರ ಮತ್ತೂ ಒಮ್ಮೆ ಪರಿಷ್ಕರಿಸಿದೆನು. ಈ ಪರಿಷ್ಕರಣಗಳು ಮುಗಿದ ಮೇಲೆ ಹೆಚ್ಚೂ ಕಡಿಮೆ ಇಡೀ ಗ್ರಂಥ ನನಗೆ ಬಾಯಿಪಾಠವಾದಂತಾಗಿ ಹೋಯಿತು. ಇದರಿಂದ ನಾನು ಪಡೆದ ಲಾಭ ಅಪಾರವಾದುದಾಯಿತು. ನನ್ನ ಶಬ್ದ ಭಂಡಾರ ದೊಡ್ಡದೇ ಆಯಿತು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವುದಾಗಿ ಹೇಳಿ ಇದನ್ನು ಬಹಳ ದಿವಸ ಗಳ ಕಾಲ ಉಳಿಸಿಕೊಂಡಿತಾದರೂ ಪ್ರಕಟವಾಗಲಿಲ್ಲ. ಇದು ಈಗಲೂ ಹಸ್ತ ಪ್ರತಿ ರೂಪ ದಲ್ಲೇ ಇದೆ. ನಾನು ಹಾಸನದಲ್ಲಿ ಇದ್ದ ಕಾಲದಲ್ಲಿ ಆರಂಭಿಸಿದ ಹೊಯ್ಸಳಾಧ್ಯಯನ ಯಾವುದೇ ರೂಪದಲ್ಲಿಯೂ ಹೊರಬರಲಿಲ್ಲ. ಅದು ಮನಸ್ಸಿನಲ್ಲಿಯೇ ಹುದುಗಿ ಕುಳಿ ತಿದ್ದು ಆ ಕಾವಿಗೆ ಕಳಿಯುತ್ತಿದ್ದಿತೆಂದು ಕಾಣುತ್ತದೆ. ಮನಸ್ಸಿನ ಮೇಲೆ ಬಿದ್ದ ಒಂದು ಬೀಜ ನನ್ನಲ್ಲಿ ಎಂದೂ ಒಮ್ಮೆಲೆಯೇ ಬೆಳೆಯಲಿಲ್ಲ. ಅಂತಹ ಪರಿಪಕ್ವತೆಗೆ ಅದು ಹಲ ವಾರು ತಿಂಗಳುಗಳನ್ನು, ಏಕೆ, ವರುಷಗಳನ್ನು ತೆಗೆದುಕೊಂಡುದೂ ಉಂಟು. ಉದಾ ಹರಣೆಗೆ ಹೇಳುವುದಾದರೆ, ನಾನು ಬರೆದಿರುವ 'ತಾಯಿ' ಎಂಬ ಸಣ್ಣ ಕತೆಯ ಕೇಂದ್ರ ವಸ್ತು, ನಾನು ಚಿಕ್ಕಂದಿನಲ್ಲಿ ನನ್ನ ಕಿವಿಗೆ ಬಿದ್ದಿದ್ದುದು, ಹಲವಾರು ವರುಷಗಳ ನಂತರ ಅದು ರಾಮನಗರದಲ್ಲಿ ರೂಪದಾಳಿತು. ನಾನು ಹಾಸನವನ್ನು ಬಿಟ್ಟಮೇಲೆ ಬೆಂಗಳೂರಿಗೆ ವರ್ಗವಾಗಿ ಒಂದು ವರುಷ ಅಲ್ಲಿ ಇರಬೇಕಾಯಿತು. ಆಗ ನನ್ನ ವಾಸ್ತವ್ಯ ಬೆಂಗಳೂರು ಮತ್ತು ಸಮೇತನಹಳ್ಳಿಗಳ ನಡುವೆ ತೂಗುಯ್ಯಾಲೆಯಂತೆ ಇದ್ದಿತಾದರೂ, ನನ್ನ ಹೆಂಡತಿಯ ಬಳಗದವರಿಂದ ನನಗೊದಗಿ ಬಂದಿದ್ದ ಕೌಟುಂಬಿಕ ಸಂಕಷ್ಟಗಳ ನಡು ವೆಯೂ ಕೂಡ, ಹಾಸನದಲ್ಲಿ ಮನಸ್ಸಿಗೆ ಬಿದ್ದಿದ್ದ ಹೊಯ್ಸಳಾಧ್ಯಯನ ಸ್ವಲ್ಪಮಟ್ಟಿಗೆ ಮುಂದುವರಿಯಿತು. ಸಾಧಾರಣವಾಗಿ ಯಾವುದೇ ವಸ್ತು ನನ್ನ ಮನಸ್ಸನ್ನು ಹೊಕ್ಕ ಮೇಲೆ, ಅದು ಒಂದು ರೂಪಕ್ಕೆ ಬಂದು, ಬರವಣಿಗೆಯಲ್ಲಿ ಮೂಡಿ ಮುಕ್ತಾಯ ವಾಗುವ ಮುನ್ನ ಮತ್ತಾವುದೇ ವಿಷಯ, ಅದೆಂತಹುದೇ ಮಹತ್ವದ್ದಾಗಲಿ, ರುಚಿಕರ ವಾದುದಾಗಲಿ, ಅಲ್ಲಿ ಹೊಗಲು ಸಾಧ್ಯವೇ ಆಗುತ್ತಿರಲಿಲ್ಲ. ಏಕಕಾಲದಲ್ಲಿ ಒಂದೇ ಸ್ಥಳ ವನ್ನು ಎರಡು ವಸ್ತುಗಳು ಆಕ್ರಮಿಸಲಾರದೆಂಬ ತತ್ವ ಇಲ್ಲಿ ನನಗೂ ಅನ್ವಯಿಸುತ್ತದೆ. ಬೆಂಗಳೂರು ಸರ್ಕಾರಿ ಮುದ್ರಣಾಲಯಕ್ಕೆ ಹೋಗಿ, ರಾಜಚರಿತ ವಿಶಾರದ ಶ್ರೀ ಸಿ.

ಹಯವದನ ರಾಯರ ಎಂಟೂ ಸಂಪುಟಗಳ ಮೈಸೂರು ಗೆಜಟಿಯರನ್ನು ಹೊತ್ತು ತಂದೆನು. ಇದನ್ನು ತಂದ ಸಮಯದಲ್ಲಿ ನನ್ನ ಆರ್ಥಿಕ ಪರಿಸ್ಥಿತಿ ತುಂಬ ದಾರುಣಮಯ ವಾಗಿದ್ದಿತು. ಒಂದೇ ಒಂದು ಬಿಡಿಗಾಸನ್ನು ಇಂತಹುದಕ್ಕೆ ವ್ಯಯಮಾಡುವುದೆಂದರೆ, ನನ್ನ ಮಕ್ಕಳ ತಂದೆ ತಾಯಿಗಳ ಮತ್ತು ತಮ್ಮಂದಿರ ಬಾಯ್ತುತ್ತನ್ನು ಕಸಿದು ಕೊಂಡಂತೆಯೇ ಆಗಿದ್ದಿತು. ಆದರೂ ನನ್ನ ಮಾನಸಿಕ ಹಸಿವನ್ನು ಇಂಗಿಸುವ ಈ ಮಹಾ ಸ್ವಾರ್ಥದ ಅಪರಾಧ ನನ್ನಿಂದ ಆಗಿಹೋಯಿತು. ಈಗ ಹೊಯ್ಸಳಾಧ್ಯಯನಕ್ಕೆ ಸಂಬಂಧ ಪಟ್ಟ ಸುತ್ತಣ ರಾಜಮನೆತನಗಳ ಇತಿಹಾಸದಲ್ಲಿ ತೊಡಗಿಸಿಕೊಂಡೆನು.

ಒಂದು ವಸ್ತುವನ್ನು ಕುರಿತು ಚಿಂತಿಸುತ್ತಿರುವಾಗ ಬೇರೆಯ ವಿಷಯಕ್ಕೆ ಅಲ್ಲಿ ಜಾಗವನ್ನು ಕೊಡದಿರುವ ನನ್ನ ಮನೋಧರ್ಮಕ್ಕೆ ವ್ಯತಿರಿಕ್ತವಾಗಿ ಇಲ್ಲಿ ಒಂದು ಘಟನೆ ನಡೆದುಹೋಯಿತು. ರಾಷ್ಟ್ರಕ್ಕೆ ಸ್ವಾತಂತ್ರ್ಯದ ಹೋರಾಟದ ದಿನಗಳು ಅವು. ತಮ್ಮ ಸಮಸ್ತವನ್ನೂ ವೃತ್ತಿಯನ್ನೂ ತ್ಯಾಗಮಾಡಿ ಸರಕಾರ ಕೊಟ್ಟ ಚಿತ್ರಹಿಂಸೆಯನ್ನೂ ಒಂದು ತಪಸ್ಸೆಂಬ ಔದಾರ್ಯದಿಂದ, ಸಾತ್ತ್ವಿಕ ನಿಲುವಿನಿಂದ ಕೂಡಿದ ಅನೇಕ ಪುಣ್ಯ ಜೀವಿಗಳ ಜೀವನ ಚಿತ್ರಣಗಳು ನನ್ನ ಕಣ್ಣ ಮುಂದೆ ಅಚ್ಚ ಹಸಿರಾಗಿ ನಿಂತಿದ್ದುವು. ಅದರ ಪ್ರಬಲವಾದ ಧಾಳಿ ನನ್ನ ಹೊಯ್ಸಳಾಧ್ಯಯನವನ್ನು ಹೊರಕ್ಕೆ ನೂಕಿತು. ಈಗಲೇ 'ಎಲೆಮರೆಯ ಹೂ' ಎಂಬ ಕಾದಂಬರಿ ಹುಟ್ಟಿಕೊಂಡುದು.

ಒಂದು ವರುಷವನ್ನು ಹೀಗೆ ಬೆಂಗಳೂರಿನಲ್ಲಿ ಕಳೆದು ರಾಮನಗರಕ್ಕೆ ಹೋದೆನು. ಅಲ್ಲಿ ಸ್ವಲ್ಪ ಕಾಲ ಹಾಸನದಲ್ಲಿ ಮಾಡಿದ್ದ 'ಶ್ರೀರಾಮಾಶ್ವಮೇಧಂ' ಕಾವ್ಯದ ಪರಿಷ್ಕರಣ ಪುನರ್ಪರಿಷ್ಕರಣಗಳು ಮೊದಲೇ ಹೇಳಿದಂತೆ ಮುಗಿದುವು. ಕೆಲವು ಸಣ್ಣ ಕತೆಗಳು ಏಕಾಂಕ ನಾಟಕಗಳು, ಬಿಡಿಗವನಗಳು ಹುಟ್ಟಿಕೊಂಡ ಮೇಲೆ ಹೊಯ್ಸಳಾಧ್ಯಯನವನ್ನು ಮತ್ತೆ ತೀವ್ರತರವಾಗಿ ಕೈಗೆತ್ತಿಕೊಂಡೆನು. ಹೊಯ್ಸಳ ಶಿಲ್ಪದ ಕಲೆಯನ್ನು ಕಂಡಿದ್ದ ಹಿನ್ನೆಲೆ ಯಲ್ಲಿ, ಈ ಅಧ್ಯಯನ ನನಗೆ ಕೊಟ್ಟ ಸಂತೋಷ ಹಿರಿದಾದುದಾಯಿತು. ಈ ತನ್ಮಯತೆ ಯಲ್ಲಿ ಮತ್ತಾವುದೇ ಪೌರಾಣಿಕ ಪ್ರಪಂಚ ನನ್ನ ಮನಸ್ಸಿನಿಂದ ದೂರವಾಯಿತು. ಖಂಡ ಸಕ್ಕರೆಯ ಪ್ರತಿ ತುಣುಕೂ ಸಿಹಿಯಿಂದ ಕೂಡಿರುವಂತೆ, ಈ ಅಧ್ಯಯನದ ಪ್ರತಿಯೊಂದು ಹಂತವೂ ನನಗೆ ನವನವೋನ್ಮೇಷಶಾಲಿನಿಯಾಗಿ ರಂಜಿಸತೊಡಗಿತು. ವಿಷ್ಣುವರ್ಧನನ ನೆರೆಯವರಾದ ಚೋಳ, ಚಾಲುಕ್ಯ, ಸೇವುಣರುಗಳ ಅವಲೋಕನವೂ ಅತ್ಯವಶ್ಯಕ ವಾದವುಗಳೆಂದು ಹೇಳಬೇಕಾದುದಿಲ್ಲ.

ಪೌರಾಣಿಕ ಪ್ರಪಂಚದಿಂದ ಈ ಚಾರಿತ್ರಿಕ ಯುಗಕ್ಕೆ ಬಂದುದು ನನಗೆ ನೆಮ್ಮದಿ ಯನ್ನೂ ಸಂತೋಷವನ್ನೂ ಕೊಟ್ಟಿದೆ. ಆ ಕಾಲದ ಶಾಸನಗಳನ್ನು ಓದುವಾಗ ಮೈತುಂಬ ಹೊಸಚೇತನದ ಸಂಚಾರವಾಗುತ್ತಿದ್ದಿತು. ತತ್ಫಲವಾಗಿ 'ಹೆಡೆಯ ನೆರಳು', 'ರೂವಾರಿ ದಾಸೋಜ', 'ಕಲಾರಾಧನೆ' ಎಂಬ ಏಕಾಂಕ ನಾಟಕಗಳು, 'ಶಿಲ್ಪಸಂಗೀತ', 'ತಲಕಾಡು ಗೊಂಡ', 'ನಾಟ್ಯಮಂದಾರ'ವೆಂಬ ಒಂದು ನಾಟಕ ಚಕ್ರದ ಮೂರು ಪೂರ್ಣ ನಾಟಕಗಳ ಲ್ಲದೆ, 'ಸವತಿಗಂಧವಾರಣೆ'ಯೆಂಬ ಕಾದಂಬರಿಯೂ ಹುಟ್ಟಿದುವು. ಇದು ಪ್ರಕಟವಾದ

ವರುಷದಲ್ಲಿ ನನ್ನ ಪ್ರಿಯ ಮಿತ್ರರಾದ ಡಾ. ಜಿ. ವರದರಾಜರಾಯರು ಈ ಕಾದಂಬರಿಗೆ ಆ ವರುಷದ ರಾಜ್ಯ ಸರಕಾರದ ಪ್ರಥಮ ಬಹುಮಾನ ಬರುತ್ತದೆಂದು ನಿರ್ಧರಿಸಿದ್ದು ದಾಗಿ ಹೇಳಿದರು. ಆಮೇಲೆ ಅದು ಬರದಿದ್ದುದನ್ನು ಅವರು ನನಗೆ ತುಂಬ ಬೇಸರದಿಂದ ಹೇಳಿದರು. ನಾನು ರಾಮನಗರದಲ್ಲಿ ಎಂಟು ವರುಷಗಳ ಕಾಲ ಇದ್ದೆನಾಗಿ ಅಲ್ಲಿ ಸಂಕೀರ್ಣ ಜಾತಿಯ ಇನ್ನೂ ಅನೇಕ ಬರೆಹಗಳು ಮೂಡಿ ಬಂದುವು. ಮುಖ್ಯವಾಗಿ ಇಲ್ಲಿ ಹೊಯ್ಸಳ ಯುಗದ ಚಿಂತನೆ ನನ್ನನ್ನು ಬಹುಕಾಲ ದುಡಿಸಿತು.

ರಾಮನಗರದಿಂದ ನಾನು ಹೋದುದು ಮಧುಗಿರಿಗೆ. ಮಧುಗಿರಿಯ ಪರಿಸರಣ ರಾಮನಗರದ ಪರಿಸರಣದಷ್ಟೇ ಸೊಗಸಾದುದು ಮತ್ತು ಚೇತೋಹಾರಿಯಾದುದು. ಕವಿಹೃದಯದ, ರಸಿಕಮನೋವೃತ್ತಿಯ, ಸಾತ್ವಿಕ ಚಿದ್ವಿಲಾಸದ ವ್ಯಕ್ತಿಯೊಂದು ಇಲ್ಲಿ ಚಿರನೂತನ ಮೌಲ್ಯಗಳನ್ನುಳ್ಳ ಮಹಾಕೃತಿಗಳನ್ನು ರಚಿಸಬಹುದಾದ ಸುಂದರಮಯ ವಾದ ತಾಣ ಇದು ; ವೀರನಿಲುವಿನ ಗಂಡುಮೆಟ್ಟಿನ ನಾಡು ಇದು. ಆದರೆ ಅಂತಹ ಕೃತಿರಚನೆಯ ಪುಣ್ಯ ನನಗೆ ಇಲ್ಲಿ ಒದಗಿ ಬರಲಿಲ್ಲ.

ಅದಕ್ಕೆ ಕಾರಣ ಇಷ್ಟು. ನನ್ನ ಹೃದಯದ ತುಡಿತ, ಜೀವನದ ಗುರಿಗಮ್ಯಗಳು ಏನಾಗಿದ್ದುವೆಂಬುದು ಇದುವರೆಗಿನ ನನ್ನ ಈ ಅರಿಕೆಯಲ್ಲಿ ಸ್ಪಷ್ಟವಾಗಿದೆ. ಆದರೆ ನನ್ನ ಈ ಮನೋಧರ್ಮದ ಕಾವ್ಯರಚನಾವಲಂಬನೆಯಿಂದ ನಾನು ನನ್ನನ್ನು ನಂಬಿದವ ರಿಗೆ ತುತ್ತು ಹಿಟ್ಟನ್ನಾದರೂ ಕೊಡಲು ಅಸಮರ್ಥನಾಗಿಬಿಡುತ್ತಿದ್ದೆನು. ಆದ್ದರಿಂದ ನಾನು ಉದರಪೋಷಣೆಗೆ ಬೇರೆಯ ವೃತ್ತಿಯನ್ನು ಹಿಡಿಯಬೇಕಾದುದು ಅನಿವಾರ್ಯ ವಾದುದಾಯಿತು. ಆ ವೃತ್ತಿಯೆಂದರೆ 'ಹೆಲ್ತ್ ಇನ್‌ಸ್ಪೆಕ್ಟರ್'ಗಿರಿ. ಒಂದು ಉತ್ತರ ಧ್ರುವವಾದರೆ ಮತ್ತೊಂದು ದಕ್ಷಿಣ ಧ್ರುವವೆಂದೇ ಹೇಳಬೇಕು. ಆದರೆ ನನ್ನ ದೃಢವಾದ ಸಂಕಲ್ಪ, ಹೃದಯದಾಳದಿಂದ ಒತ್ತಿ ಬರುತ್ತಿದ್ದ ಸಾಹಿತ್ಯ ರಚನೆಯ ಪ್ರೇರಣೆಗಳೆರ ಡನ್ನೂ ಸಮರಸವಾಗಿ ಸರಿದೂಗಿಸಿಕೊಂಡು ಹೋಗುವ ಒಂದು ಹೊಸಕಸುವನ್ನು ಕೂಡಿಸಿಕೊಂಡೆನಾದರೂ, ಮಧುಗಿರಿಯಲ್ಲಿ ಅನ್ನವನ್ನು ಕೊಡುವ ವೃತ್ತಿ ಧರ್ಮಕ್ಕೆ ಹೆಚ್ಚಾಗಿ ಅಂಟಿಕೊಳ್ಳಬೇಕಾದುದು ಅನಿವಾರ್ಯವಾಯಿತು.

ಅನ್ನ ಸಂಪಾದನೆಯ ವೃತ್ತಿಯಲ್ಲಿ ನಾನು ನನ್ನ ಆರೋಗ್ಯ ಇಲಾಖೆಯಿಂದ ಮಧುಗಿರಿಗೆ ಎರವಲಾಗಿ ಹೋದುದು ಆ ನಗರಸಭೆಗೆ. ನಗರಸಭೆಯೆಂದ ಮೇಲೆ ಅಲ್ಲಿನ ಗುಂಪುಗಾರಿಕೆ, ಸ್ವಾರ್ಥ, ದ್ವೇಷ, ಅಸೂಯೆ, ನಾಗರಿಕ ಪರಿಜ್ಞಾನರಹಿತವಾದ ಅಹಮಿಕೆ, ಕಚ್ಚಾಟ, ಕೂಗಾಟ, ಏಟು, ಎದಿರೇಟುಗಳೇ ಮುಂತಾದವುಗಳಿಗೆ ಸರ್ಕಾರದ ನೌಕರ ಸಿಕ್ಕಿ ನಜ್ಜುಗುಜ್ಜಾಗುತ್ತಾನೆ. ಇಂತಹ ಒತ್ತಡ ಹೊಡೆತಗಳಿಗೆ ದಿನ ಬೆಳಗಾದರೆ ನಾನು ಗುರಿಯಾಗುತ್ತಿದ್ದೆನಾದುದರಿಂದ, ಮನಸ್ಸು ಛಿದ್ರ ಛಿದ್ರವಾಗುತ್ತಿದ್ದಿತು. ಇಂತಹುದರಲ್ಲಿ ನಾನು ಬರೆಯುವುದಾದರೂ ಏನ್ನನ್ನು ? ಆದರೂ ಇದ್ದ ಮೂರು ವರುಷಗಳಲ್ಲಿ ಸ್ವಲ್ಪ ಸಾಹಿತ್ಯ ವ್ಯವಸಾಯವೂ ಸಾಗಿತು.

ಹನ್ನೊಂದನೆಯ ಶತಮಾನದ ಮೊದಲ ವರುಷಗಳಲ್ಲಿ ಕಬ್ಬಿನೀ ತೀರದಲ್ಲಿ ತಲೆ

ಯೆತ್ತಿದ್ದ ನವಿಲೆನಾಡಿನ ಏಚರಾಜ ಮತ್ತು ನುಗುನಾಡಿನ ಕುಡಿಯುರ ಕುಲದಿಂದ ಬಂದ ಅವನ ರಾಣಿ ದೇಕಬ್ಬೆಯರನ್ನು ಕುರಿತ ಒಂದು ಶಾಸನ ನನ್ನ ಮನವನ್ನು ಬಹುವಾಗಿ ಆಕರ್ಷಿಸಿದ್ದಿತು. ಆ ಕಥಾ ವಸ್ತುವನ್ನು ಕೇಂದ್ರವನ್ನಾಗಿಸಿಕೊಂಡು 'ದ್ರೋಹಾಡಂಬರ' ವೆಂಬ ಒಂದು ಪೂರ್ಣಗದ್ಯ ನಾಟಕವನ್ನು ಹೆಣೆದನು. ಅದರೊಡನೆ 'ಭಾರತಸಂಹಿತೆ' ಎಂಬ ಇನ್ನೊಂದು ನಾಟಕವೂ ರಚನೆಯಾಯಿತು. ಇದು ಪ್ರಕಟವಾಗಲಿಲ್ಲ. ಈ ಎರಡು ನಾಟಕಗಳೊಡನೆ 'ಸ್ವರ್ಗ ಸೋಪಾನ'ವೆಂಬ ಒಂದು ನೀಳ್ಗತೆ ಮತ್ತು 'ಮಂಗಳಾರ'ವೆಂಬ ಒಂದು ಏಕಾಂಕ ನಾಟಕ ಮಾತ್ರ ರಚನೆಯಾದುವು. ಮೂರು ವರುಷಗಳ ಅವಧಿಗೆ ಇದು ಅತ್ಯಲ್ಪವಾದ ರಚನೆಯಾದರೂ, ವೃತ್ತಿಯ ಹಿಗ್ಗಾಟ ಮುಗ್ಗಾಟಗಳ ನಡುವೆಯೂ ಇಷ್ಟಾದರೂ ಆಯಿತಲ್ಲ ಎಂಬ ಸಮಾಧಾನ ನನಗುಂಟು.

ಮಧುಗಿರಿಯಿಂದ ನಾನು ಬಂದದ್ದು ಪಾಂಡವಪುರಕ್ಕೆ. ಇಲ್ಲಿ ಸ್ವಲ್ಪ ಕೆಲಸವಾದ ಸಮಾಧಾನ ನನಗಿದೆ. ಇಲ್ಲಿ ನಾನು ಬಂದುದು ನನ್ನ ಆರೋಗ್ಯ ಇಲಾಖೆಗೆ. ಈಗ ಯಾವುದೇ ಮಾನಸಿಕ ವೇದನೆ ಇಲ್ಲದೆ ನೆಮ್ಮದಿ ಸಿಕ್ಕಿದುದರಿಂದ 'ಶಾಕುಂತಲಾ' ಮಹಾ ಕಾವ್ಯದ ರಚನೆಗೆ ಕೈಹಾಕಿದೆನು. ವ್ಯಾಸಮಹರ್ಷಿಯ ಶಕುಂತಲೆ ಮತ್ತು ದುಷ್ಯಂತರನ್ನು ಕಂಡಿದ್ದೆನು. ಅದರಂತೆ ಕಾಳಿದಾಸ ಮಹಾಕವಿ ತನ್ನ ನಾಟಕಕ್ಕೆ ಬೇಕಾದ ಹಾಗೆ ಅದನ್ನು ಮಾರ್ಪಡಿಸಿಕೊಂಡು ರಚಿಸಿದ್ದನು. ಈ ಶಕುಂತಲೆ ಮತ್ತು ದುಷ್ಯಂತರ ಕತೆ ಮೊಟ್ಟ ಮೊದಲ ಬಾರಿಗೆ ಶತಪಥ ಬ್ರಾಹ್ಮಣದಲ್ಲಿ ಕಾಣಿಸಿಕೊಳ್ಳುತ್ತದೆಂದು ಹೇಳಲಾಗಿದೆ. ಅದನ್ನು ನಾನು ನೋಡಿಲ್ಲ. ಅದರ ಮೂಲರೂಪ ಹೇಗಿದೆಯೆಂದು ನನಗೆ ತಿಳಿಯದು.

ವ್ಯಾಸ ಮತ್ತು ಕಾಳಿದಾಸರ ಕತೆಗಳಲ್ಲಿ ದುಷ್ಯಂತನು, ಕಣ್ವರು ಬಂದರೆ ಏನಾಗಿ ಬಿಡುತ್ತದೆಯೋ ಎಂದು ಹೆದರಿಕೆಯಿಂದ, ಆರ್ಯ ಸಭ್ಯತೆಯನ್ನು ಮೀರಿ ಕಳ್ಳತನದಿಂದ ಓಡಿ ಹೋಗುವುದು, ಶಂಕುತಲೆ ಸಮಾಗಮಕ್ಕೆ ಮುನ್ನ ಗ್ರಾಮ್ಯಳಂತೆ, ತಮ್ಮ ಸಂಯೋಗ ದಿಂದ ಹುಟ್ಟಿದ ಮಗನಿಗೆ ರಾಜ್ಯದ ಪಟ್ಟವನ್ನು ಕಟ್ಟುವ ಮಾತನ್ನು ರಾಜನಿಂದ ತೆಗೆದು ಕೊಳ್ಳುವುದು, ಕಾಳಿದಾಸನ ಮಾರೀಚಾಶ್ರಮದ ಊರ್ಧ್ವಲೋಕ, ಮಾನವ ಧರ್ಮಕ್ಕೆ ಅಸಹಜವಾಗಿ ದುಷ್ಯಂತನು ಆಕಾಶಮಾರ್ಗದಲ್ಲಿ ಚಲಿಸಿ ಆ ಆಶ್ರಮದಲ್ಲಿ ಪತ್ನಿ ಪುತ್ರ ರನ್ನು ಕಾಣುವುದೇ ಮುಂತಾದವುಗಳು ನನಗೆ ಸಹ್ಯವಾಗಲಿಲ್ಲ. ಇವರಿಬ್ಬರ ಉದಾತ್ತ ಜೀವನವನ್ನು ನಾನು ಕಲ್ಪಿಸಿಕೊಂಡುದೇ ಬೇರೆಯಾಯಿತು. ಇದನ್ನೇ ಇಪ್ಪತ್ತು ಪುಟ ಗಳಲ್ಲಿ ಚಿತ್ರಿಸಬಹುದೆಂದು ನಾನು ರಾಮನಗರದಲ್ಲಿ ಇದ್ದಾಗಲೇ ಆರಂಭಿಸಿದ್ದೆನು. ಅದನ್ನು ಈಗ ಪೂರ್ಣಗೊಳಿಸಲೆಂದು ಕೈಗೆತ್ತಿಕೊಂಡಾಗ, ಅದರ ಹರಹು ಬೃಹತ್ತಾಗಿ ಬೆಳೆಯುತ್ತ ಹೋಯಿತು. ಇದರ ರಚನೆ ನನ್ನ ಸಂಪೂರ್ಣ ಕಾಲವನ್ನು ತೆಗೆದುಕೊಂಡಿತು.

ನಮ್ಮ ರಾಷ್ಟ್ರದ ಮೇಲೆ ಚೀನೀಯರು ಧಾಳಿ ಮಾಡಿದ ಸಂದರ್ಭ ಅದು. ಅದನ್ನು ಕುರಿತ ರಾಷ್ಟ್ರ ಭಕ್ತಿಯ ಒಂದೆರಡು ಕವನಗಳನ್ನು ಬಿಟ್ಟರೆ, ಮತ್ತಾವುದೇ ಬೇರೆಯ ಕೃತಿ ನಿರ್ಮಾಣ ಆಗಲಿಲ್ಲ. ಈ ಮಹಾ ಕಾವ್ಯದ ರಚನೆ ಚೆನ್ನ ಎನ್ನುವಷ್ಟರ ಮಟ್ಟಿಗೆ ಮುಂದುವರಿಯಿತು.

ವಿಧಿವಿಲಾಸವನ್ನು ಏನೆಂದು ಹೇಳಲಿ ! ಕಾವ್ಯ ಹೀಗೆ ಗಂಗಾಪ್ರವಾಹದಂತೆ ಓತಪ್ರೋತವಾಗಿ ಹರಿದಿರುವಾಗ, ತನ್ನ ಕುತಂತ್ರಗಳಿಂದ ನಮ್ಮ ಮನೆಯ ಸಂಬಂಧವನ್ನು ಬೆಳೆಯಿಸಿಕೊಂಡ ನನ್ನ ತಂದೆಯ ಸೋದರ ಸಂಬಂಧಿಯಾದ ಒಬ್ಬ ಧೂರ್ತನ, ಕಪಟಿಯ, ಭಂಡನ, ಬ್ರಾಹ್ಮಣನಿಗಿರಬೇಕಾದ ಸಭ್ಯತೆಯನ್ನೂ ವ್ಯವಹಾರ ಧರ್ಮವನ್ನೂ ಗಾಳಿಗೆ ತೂರಿಬಿಟ್ಟು ಮೃಗೀಯ ಬಲದಿಂದ ಪದೇ ಪದೇ ನಮ್ಮ ಮೇಲೆ ಮಾಡುತ್ತಿದ್ದ ಆಕ್ರಮಣಗಳು, ನನ್ನ ಕಾವ್ಯ ಶಕ್ತಿಯನ್ನು ಸಂಪೂರ್ಣವಾಗಿ ನುಂಗಿ ಹಾಕಿದುವು.

ಈ ಮಾನಸಿಕ ಹಿಂಸೆಯಲ್ಲಿಯೇ ಬರೆದ 'ನೃತ್ಯ ಸರಸ್ವತಿ' ಕಾದಂಬರಿಯಲ್ಲಿ ಈ ನೀಚನು ಸೋಮಿಗ ಭಟ್ಟನಾಗಿ ಸ್ವಲ್ಪಮಟ್ಟಿಗೆ ಚಿತ್ರಿತನಾಗಿದ್ದಾನೆ. ಇದೇ ಸಂದರ್ಭದಲ್ಲಿ ಪ್ರಕಟವಾದ 'ನಾಟ್ಯ ಮಂದಾರ' ನಾಟಕದ 'ನಿವೇದನೆ'ಯಲ್ಲಿ ನನ್ನ ಮನಸ್ಸಿನ ಅತೀವವಾದ ನೋವನ್ನು ತೋಡಿಕೊಂಡಿದ್ದೇನೆ.

ಒಂದೆರಡು ವರುಷಗಳ ಕಾಲ ಈ ಮಹಾ ಕಾವ್ಯದ ರಚನೆ ಹಾಗಿರಲಿ, ಬೇರೆಯ ಯಾವುದನ್ನೇ ಆದರೂ, ಒಂದೆರಡು ಸಾಲುಗಳಷ್ಟನ್ನಾದರೂ ಕಾಗದದ ಮೇಲೆ ಮೂಡಿಸಲು ನಾನು ಅಸಮರ್ಥನಾದೆನು. ನನ್ನ ಕಾವ್ಯಶಕ್ತಿ ಪೂರ್ಣವಾಗಿ ಉಡುಗಿ ಹೋಯಿತೆಂಬ ತೀರ್ಮಾನಕ್ಕೆ ಬಂದಾಗ, ನನ್ನ ಸಂಕಟ ಹೇಳತೀರದಂತಹುದು. ಭಗವದಿಚ್ಛೆ ಹೀಗಿದ್ದರೆ, ಅದೂ ಆಗಿ ಹೋಗಲಿ ಎಂಬ ಒಂದು ನೆಮ್ಮದಿಯೂ ಮೂಲೆಯೊಂದರಿಂದ ಇಣುಕಿ ನೋಡಲಾರಂಭಿಸಿತು. ಹೊರಗಣಿಂದ ಬಂದ ಆ ಈತಿ ಬಾಧೆ ಮತ್ತು ನನ್ನ ಕಾವ್ಯ ಪ್ರತಿಭೆ ಮತ್ತು ಸತ್ವಗಳು ಇನ್ನಿಲ್ಲದಂತಾದ ಎರಡೂ ಸಂಕಟಗಳಿಂದ ನಾನು ಬೆಂದುದು ಕಡಿಮೆಯೇನಾಗಲಿಲ್ಲ ; ಬೃಹತ್ತಾಗಿಯೇ ನನ್ನನ್ನು ಆವರಿಸಿದ್ದುವು. ಶಕುಂತಲೆಯ ಸಂಬಂಧದಿಂದ ರೂಪಗೊಳ್ಳುತ್ತಿದ್ದ ನನ್ನ 'ಶಾಕುಂತಲಾ' ಸುಮಾರು ಅರ್ಧಕ್ಕೂ ಹೆಚ್ಚು ಭಾಗ ಪಾಂಡವಪುರದಲ್ಲಿ ಮುಗಿದಿದ್ದುದು ಅಲ್ಲಿಗೇ ನಿಂತು ಹೋಯಿತು.

ಮಂಡ್ಯಕ್ಕೆ ಬಂದ ಮೇಲೆ ನನ್ನ ಅನುಭವಕ್ಕೆ ಬಾರದಂತೆ ಒಳಗೇ ಅಡಗಿದ್ದ ನನ್ನ ಕಾವ್ಯ ಚೇತನ ಒಮ್ಮಿಂದೊಮ್ಮೆಗೇ ಚಿಗುರಿಟ್ಟಿತು. ಆಗ ನಾನು ನಾನಾದೆನು. 'ಶಾಕುಂತಲಾ' ಕಾವ್ಯರಚನೆ ಆರಂಭವಾಯಿತು ; ಪೂರ್ಣಗೊಂಡಿತು. ಅಷ್ಟೇ ಅಲ್ಲ. ಹೊಯ್ಸಳ ಶಾಂತಲಾದೇವಿಯನ್ನು ಕುರಿತ ಮತ್ತೊಂದು ಕಾದಂಬರಿ 'ನೃತ್ಯ ಸರಸ್ವತಿ' ಮತ್ತು ಅವಳ ಮಲ ಮಗ ವಿಜಯ ನಾರಸಿಂಹನನ್ನು ಕುರಿತ 'ಸಿರಿಯಲ ದೇವಿ' ಎಂಬ ಕಾದಂಬರಿಗಳೂ ರಚಿಸಲ್ಪಟ್ಟುವು. ಇವಲ್ಲದೆ ನಾಲ್ಕೈದು ಸಣ್ಣ ಕತೆಗಳೂ ಕಾಗದದ ಮೇಲೆ ಕಾಣಿಸಿಕೊಂಡವು.

ಮೈಸೂರಿಗೆ ಬಂದ ಈ ಇಪ್ಪತ್ತೈದು ವರುಷಗಳಲ್ಲಿ ಗಣನೀಯವಲ್ಲದಿದ್ದರೂ, ಸ್ವಲ್ಪಮಟ್ಟಿನ ರಚನೆ ಸಾಧ್ಯವಾಯಿತು. ಷೇಕ್ಸ್ಪಿಯರರ 'ಜೂಲಿಯಸ್ ಸೀಸರ್' ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಿಕೊಡಿ ಎಂದು ಅದರ ಪ್ರಕಾಶಕರು ಕೇಳಿದಾಗ, ನಾನು ಅದನ್ನು ಇಲ್ಲವೆನ್ನಲಾಗಲಿಲ್ಲ. ನಾನು ಸಾಧಾರಣವಾಗಿ ಯಾವುದೇ ಪ್ರಕಾಶಕರ ಇಷ್ಟದಂತೆ, ಅವರು ಹೇಳಿದುದನ್ನು ಬರೆದು ಕೊಡುವ ಬುದ್ಧಿವಂತರ ಸಾಲಿಗೆ

ಸೇರಿದವನಲ್ಲ. ನನಗೆ ತೋಚಿದುದನ್ನು ನನ್ನ ಸಂತೋಷಾರ್ಥವಾಗಿ, ನನಗೆ ಬೇಕಾದ ಭಾಷೆ ಮತ್ತು ಶೈಲಿಗಳಲ್ಲಿ ಬರೆದುಕೊಂಡು ತೃಪ್ತಿಯನ್ನು ಪಟ್ಟವನು ನಾನು. ಹಾಗೆ ನಾನು ಬರೆದುದನ್ನು ಒಪ್ಪಿ ಯಾರಾದರೂ ಅಚ್ಚುಹಾಕಿದರೋ ಸರಿ, ಇಲ್ಲ, 'ರಾಸಪ್ರಕಾಶನ' ಎಂಬ ಹೆಸರಿನಲ್ಲಿ ನಾನೇ ಪ್ರಕಟಿಸಿ, ಅದು ಮಾರಾಟವಾಗಲಿ ಅಥವಾ ಬಿಡಲಿ, ನಾಲ್ಕು ಜನ ಮಿತ್ರರಿಗೆ ಗೌರವ ಪ್ರತಿಗಳನ್ನು ಕೊಟ್ಟೋ, ಅಥವಾ ನಾನೇ ಅಂಚೆಯಲ್ಲಿ ಕಳು ಹಿಸಿಯೋ, ಮುದವಡುವುದು ನನ್ನ ಸ್ವಭಾವಕ್ಕೆ ಅಂಟಿ ಬಂದುದು. ಈ ನಾಟಕವನ್ನು ತರ್ಜುಮೆ ಮಾಡುವುದರಿಂದ ನನ್ನ ಸಂಕಲ್ಪಕ್ಕೆ ವಿರುದ್ಧವಾದುದನ್ನು ನಾನೇನೂ ಮಾಡು ತ್ತಿರಲಿಲ್ಲವಾದುದರಿಂದ ಆ ಕೆಲಸ ಆಯಿತು.

ಇದಾದ ಮೇಲೆ ಬಂದುದು ದೇಶಭಕ್ತ, ಅಪ್ರತಿಮವಾದ ಸ್ವಾತಂತ್ರ್ಯ ಹೋರಾಟ ಗಾರ ಶ್ರೀ ತಗಡೂರು ರಾಮಚಂದ್ರರಾಯರ ಜೀವನ ಚರಿತ್ರೆ. ಇಂತಹ ನಿಸ್ವಾರ್ಥ ಜೀವನದ, ಪರಹಿತಕ್ಕಾಗಿ ಮತ್ತು ಸಮಾಜ ಸೇವೆಗಾಗಿ ತನ್ನ ಸಕಲಹಿತವನ್ನೂ ಪಕ್ಕಕ್ಕೆ ಸರಿಸಿ, ಎಳ್ಳನಿತಾದರೂ ಪ್ರತಿಫಲವನ್ನು ಅಪೇಕ್ಷಿಸದೆ ಬರಿದಾದ ಈ ಪುಣ್ಯ ಜೀವಿಯ ಬದುಕನ್ನು ಕುರಿತು ಬರೆಯಬೇಕಾದುದು ಅತ್ಯಗತ್ಯವಾಗಿದ್ದಿತು.

ನಾನು ಅವರನ್ನೇ ಒಂದು ಸಾರಿ ಈ ವಿಷಯವನ್ನು ಕೇಳಿದಾಗ ಅವರು ಒಪ್ಪ ಲಿಲ್ಲ. ಈಗ ಅದಕ್ಕೊಂದು ಸಂದರ್ಭ ಒದಗಿ ಬಂದಿತು. ಅವರನ್ನು ಸನ್ಮಾನಿಸಲು ಈ ಊರಿನ ಅವರ ಹಿತಚಿಂತಕರು ಹಲವಾರು ಮಂದಿ ಒತ್ತಾಯಿಸಿದಾಗ ಅವರು ಒಪ್ಪಲೇ ಬೇಕಾಯಿತು. ಆಗ ಇವರ ಜೀವನ ಚಿತ್ರಣವನ್ನು ಬರೆಯುವ ಸದವಕಾಶ ನನ್ನದಾ ಯಿತು. ನನ್ನ ಮನಸ್ಸಿನ ಆಶೆ ಈಡೇರುವಂತಾದಾಗ ನಾನು ತುಂಬ ಸಂತೋಷದಿಂದ ಬರೆದು ಕೊಟ್ಟೆನು. ಇನ್ನೂ ಬೇರೆ ಬೇರೆ ಬರಹಗಳನ್ನು ಒಳಗೊಂಡ ತೋರವಾದ ಈ ಹೊತ್ತಗೆಗೆ ಯಾವ ಹೆಸರನ್ನಿಡುವುದೆಂದು ನಾನು ಯೋಚಿಸಿ ನಿರ್ಧಾರಕ್ಕೆ ಬರುವುದಕ್ಕೆ ಹಲವಾರು ದಿನಗಳೇ ಆದುವು. ಹತ್ತಾರು ಹೊಳೆದುವಾದರೂ 'ಕರ್ಮಯೋಗಿ' ಎಂಬು ದನ್ನು ಉಳಿಸಿಕೊಂಡೆನು. ಅದರೊಳಗಣ ಅವರ ಜೀವನ ಚರಿತ್ರೆಯನ್ನು 'ಅಳಿಲು ಸೇವೆ' ಎಂದಂದೆನು. ನಾನು ಈ ಪುಸ್ತಕಕ್ಕೆ ಕೊಟ್ಟ 'ಕರ್ಮಯೋಗಿ' ಎಂದೆಂಬ ಹೆಸರು ರಾಯರ ಹೆಸರಿಗೆ ಒಂದು ಬಿರುದು ಎಂಬಂತೆ ಅಂಟಿಕೊಂಡು ಬಿಟ್ಟಿತು. ಈಗ ಅವರ ಹೆಸರನ್ನು ಹೇಳಬೇಕಾದರೆ ಎಲ್ಲ ಸಂಘ ಸಂಸ್ಥೆಗಳು ಅವರನ್ನು 'ಕರ್ಮಯೋಗಿ ತಗಡೂರು ರಾಮ ಚಂದ್ರರಾಯರು' ಎಂದೇ ಹೇಳುತ್ತವೆ. ಅವರಿಗೆ ಸಲ್ಲಬೇಕಾದುದು ಸಂದಿತೆಂಬ ನೆಮ್ಮದಿ ನನಗೂ ಆಯಿತು.

ನನ್ನ ನಿವೃತ್ತಿ ಆದ ಮೂರು ವರುಷಗಳಲ್ಲಿ ಮಾನ್ಯ ಕರ್ನಾಟಕ ಸರಕಾರ ನನ್ನ ಸಾಹಿತ್ಯ ಸೇವೆಯನ್ನು ಗಮನಿಸಿ ಶ್ರೇಷ್ಠ ಸಾಹಿತಿಯೆಂದು ನನಗೆ ತಿಂಗಳೊಂದಕ್ಕೆ ಐದು ನೂರು ರೂಪಾಯಿಗಳ ಗೌರವಧನವನ್ನು ಕೊಟ್ಟಿತು.

ಇದರ ಜತೆಯಲ್ಲಿಯೇ ಆರಂಭವಾದ ಇನ್ನೊಂದು ಕೃತಿಯೆಂದರೆ 'ಟಿಪೂಸುಲ್ತಾ ನನ ಇತಿಹಾಸ'ವೆಂಬ ಅನುವಾದ. ದೆಹಲಿಯಲ್ಲಿರುವ Indian Council of Histori-

cal Research ಸಂಸ್ಥೆ ಕೆಲವು ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಒಂದು ಯೋಜನೆಯನ್ನು ಹಾಕಿಕೊಂಡಾಗ ನನ್ನನ್ನು ಕಾಶ್ಮೀರ ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರಾದ ಡಾ॥ ಮೊಹಿಬ್ಬುಲ್ ಹಸನ್‌ರವರ History of Tipusultan ಎಂಬ ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿಕೊಡಲು ಕೇಳಿತು. ಆರು ನೂರು ಐವತ್ತು ಪುಟಗಳ ಈ ಕೃತಿಯನ್ನು ಆರು ತಿಂಗಳಲ್ಲಿ ಅನುವಾದ ಮಾಡಿದೆನು. ಆ ಸಂಸ್ಥೆ ಈ ಹೊತ್ತಗೆಯನ್ನು ಪ್ರಕಟಿಸಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿತು. ಅದರ ಪ್ರಕಟಣೆಯ ಹೋರಾಟಕ್ಕೆ ಸುಮಾರು ಹತ್ತು ವರುಷಗಳೇ ಹಿಡಿದುವು. ಮಾನ್ಯ ರಾಜ್ಯಪಾಲರ ಕಟ್ಟಪ್ಪಣೆ ಆದ ಮೇಲೆ ಮಾತ್ರ ಅದು ಪ್ರಕಟಗೊಂಡಿತು.

ನನ್ನ ಬದುಕು ದಾರುಣಮಯವಾದುದು ಎಂಬುದನ್ನು 'ಕೋಟೆಮನೆ' ಆತ್ಮ ಚರಿತೆಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ.ಅದರ ಪುನರಾವೃತ್ತಿ ಇಲ್ಲಿ ಅನಾವಶ್ಯಕವಾದುದು. ನಾನು ಅನುಭವಿಸಿದ ಹಿಂಸೆ, ಕೋಟಲೆ, ಬೆನ್ನಿನಲ್ಲಿ ಬಿದ್ದ ತಿವಿತ, ವಂಚನೆ, ಶೋಷಣೆ ಮುಂತಾದವುಗಳು ನನ್ನ ಒಳಗನ್ನು ದಳ್ಳುರಿಯಂತೆ ಕಾಡಿಸುತ್ತಿದ್ದುವು. ಅವುಗಳನ್ನು ನಾನು ಎಷ್ಟೆಂದು ತಾನೆ ನುಂಗುವುದಕ್ಕಾದೀತು ? ಅವುಗಳನ್ನು ತೋಡಿಕೊಂಡು ಹಗುರ ವಾಗೋಣವೆಂದರೆ ನನ್ನವರು ಎಂಬ ದಿಕ್ಕು ನನಗಿರಲಿಲ್ಲ. ಹಾಗೆ ಮನದ ಒತ್ತಡವನ್ನು ಹೊರಕ್ಕೆ ಹಾಕದಿದ್ದರೆ ನನ್ನ ತಲೆಯ ಬುರುಡೆ ಮತ್ತು ಹೃದಯಗಳು ಒಡೆದು ಹೋಳು ಗಳಾಗಿ ಬಿದ್ದುಹೋಗುವುದರಲ್ಲಿ ನನಗೆ ಯಾವ ಸಂಶಯವೂ ಇರಲಿಲ್ಲ. ನನ್ನ ಬದುಕಿನ ನೆಮ್ಮದಿಯ ದಿನಗಳು, ಮಳೆಯನ್ನು ಸುರಿಸಲೆಂದು ನೆಲದ ಹತ್ತಿರಕ್ಕೆ ಬಂದು ಎಂಟೂ ದಿಕ್ಕುಗಳನ್ನು ತುಂಬಿಕೊಂಡ ಕಾರ್ಮೋಡಗಳ ನಡುವೆ ಆಗೊಮ್ಮೆ ಈಗೊಮ್ಮೆ ಸುಳಿದು ಮಾಯವಾಗುವ ಕೋಲ್ಮಿಂಚುಗಳಂತೆನು ಸುಳಿ ಹೋಗುತ್ತಿದ್ದುವು ಅಷ್ಟೆ.

ಈ ಬೇಗೆಯನ್ನು, ತಳಮಳವನ್ನು ಹೊರಕ್ಕೆ ಹಾಕದಿದ್ದರೆ ನನ್ನ ಸಾವು ನಿಶ್ಚಿತ ಎಂಬ ತೀರ್ಮಾನಕ್ಕೆ ಬಂದ ಮೇಲೆ, ಅವುಗಳೆಲ್ಲವನ್ನೂ ಕಾಗದದ ಮೇಲೆ ತೋಡಿ ಇಡುವ ಅದಮ್ಯತೆ ಕಾಣಿಸಿಕೊಂಡಾಗ, ನನ್ನ ಆತ್ಮ ಚರಿತೆಯನ್ನು ಬರೆಯಲು ಆರಂಭಿಸಿ ದೆನು. ಬರೆಯುವಾಗ ಕಣ್ಣೀರಿನಿಂದ ನೆನೆಯದ ಪುಟಗಳು ಇರಲಿಲ್ಲ. ಪುಟಗಳು ಮುಂದು ವರಿದಂತೆಲ್ಲ ಹೃದಯದ ಬಿಗಿತ ಕಡಿಮೆಯಾದಂತೆ ಕಾಣುತ್ತಿದ್ದಿತು, ನನ್ನ ಮನೆಯಾಕೆ ಎಷ್ಟೋ ಸಾರಿ ನೀರನ್ನು ತುಂಬಿಕೊಂಡಿರುತ್ತಿದ್ದ ನನ್ನ ಕಣ್ಣುಗಳನ್ನು ಕಂಡು "ಇದೇನು ನೀವು ಮಾಡುತ್ತಿರುವುದು ! ನೀವು ಹೀಗೆ ನೊಂದರೆ, ನವೆದರೆ, ಮಕ್ಕಳ ಗತಿ ಏನಾಗ ಬೇಕು ? ಆ ಮನೆಗೆ ಹಿರಿಯ ಮಗನಾಗಿ ದುಡಿದ ಸಂತೋಷವನ್ನು ಮಾತ್ರ ನೆನಿಸಿ ಕೊಳ್ಳಿ. ಮಿಕ್ಕುದನ್ನು ಮೈಯಲ್ಲಿ ಹುಟ್ಟಿದ ಬೆವರನ್ನು ತೊಳೆದುಕೊಳ್ಳುವಂತೆ ತೊಳೆದು ಬಿಡಿರಿ. ಈಗ ಸಾಕು ಏಳಿ" ಎಂದು ಎಬ್ಬಿಸುತ್ತಿದ್ದ ಸಂದರ್ಭಗಳು ಹಲವಾರು ಇರು ತ್ತಿದ್ದುವು. 'ಕೋಟೆ ಮನೆ'ಯ ಕತೆ ಹೀಗೆ ಹಸ್ತ ಪ್ರತಿಯಲ್ಲಿ ಏಳು ನೂರು ಐವತ್ತು ಪುಟಗಳಷ್ಟಾಯಿತು. ನಾನು ಬಗೆದಂತೆ ಹೃದಯದ ಭಾರ ಮತ್ತು ಬಿಗಿತಗಳು ಎಷ್ಟೋ ಕಡಿಮೆಯಾದಂತೆ ಕಂಡು, ನಿರಾಳವಾದ ಉಸಿರನ್ನು ಬಿಟ್ಟೆನು. ಪ್ರಕಟಿಸುವ ಕಸುವು

ಇರಲಿಲ್ಲ. ಅದನ್ನು ಎತ್ತಿ ಇಟ್ಟೆನು.

ಹತ್ತು ವರುಷಗಳಾದ ಮೇಲೆ ಇದನ್ನು ಪ್ರಕಟಿಸಬೇಕು ಎಂದುಕೊಂಡಾಗ, ಈ ಬೃಹದ್ಗಾತ್ರ ನನ್ನ ಹಣ ಕಾಸಿನ ಸ್ಥಿತಿಗೆ ಹೊಂದದು ಎಂದುಕೊಂಡು, ಅದನ್ನು ಹಸ್ತ ಪ್ರತಿಯಲ್ಲಿ ಮೂರು ನೂರು ಮುವತ್ತುಮೂರು ಪುಟಗಳಿಗೆ ಭಟ್ಟಿ ಇಳಿಸಿದೆನು. ಇದು ಅಚ್ಚಿನಲ್ಲಿ ನಾಲ್ಕುನೂರು ಮೂವತ್ನಾಲ್ಕು ಪುಟಗಳಾಗಿವೆ. ನಾನು ಓದುಗರ ಮುಂದೆ ಈಗ ಅಚ್ಚಿನಲ್ಲಿ ಇಟ್ಟಿರುವುದು ಈ ಕುಗ್ಗಿಸಿದ ಪ್ರತಿಯನ್ನೇ.

ಹೃದಯದ ಭಾರ ಇಳಿದಂತೆ ಆಗಿ, ಮನಸ್ಸಿನ ನೆಮ್ಮದಿ ಕುದುರಿದಂತೆ ಕಂಡಾಗ, ನಾನು ಎತ್ತಿಕೊಂಡುದು ಶ್ರೀಕೃಷ್ಣಾಧ್ಯಯನವನ್ನು. ಇದಕ್ಕೆ ಹಿಡಿದ ಕಾಲವೂ ಹಿರಿದೇ ಆಯಿತು. ನಾನು ಚಿತ್ರಿಸಿಕೊಂಡ ಶ್ರೀ ಕೃಷ್ಣನ ರೂಪ ನನಗೆ ಸ್ಪಷ್ಟವಾಗಿ ಗೋಚರಿಸಿತು. ಬರೆಯಲು ಆರಂಭಿಸಿದಾಗ, ಐದುನೂರು ಐವತ್ತು ಪುಟಗಳಾದವು. ಈ ನನ್ನ 'ಶ್ರೀ ಕೃಷ್ಣದರ್ಶನ' ನನ್ನಲ್ಲಿ ಒಂದು ಸಂತಸದ ಹೊಳೆಯನ್ನೇ ತುಳುಕಾಡಿಸಿತು.

ಒಂದು ದೊಡ್ಡಕೃತಿ ಮುಕ್ತಾಯವಾದೊಡನೆ ನಾನು ಏನನ್ನೇ ಆಗಲಿ ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಆರು ತಿಂಗಳು, ವರ್ಷಗಳ ಕಾಲ ಮನಸ್ಸು ಹೀಗೆ ವಿಶ್ರಾಂತಿಯನ್ನು ಬಯಸುತ್ತದೆ. ಹೊಸ ಅಧ್ಯಯನವಾದರೂ ಆರಂಭವಾಗುವುದಿಲ್ಲ. ಒಂದೆರಡು ಸಣ್ಣ ಬಿಡಿಗವನಗಳೋ ಅಥವಾ ಸಣ್ಣ ಕತೆಯೋ ಹುಟ್ಟಬಹುದು. ನನ್ನ ಮೊಟ್ಟ ಮೊದಲ ಕವನದಿಂದ ಹಿಡಿದು ಇದುವರೆಗಿನ ನನ್ನ ಎಲ್ಲ ಕೃತಿಗಳನ್ನು ಕಾಲಾನುಕ್ರಮವಾಗಿ ಒಂದು ಪುಸ್ತಕದಲ್ಲಿ ಗುರುತು ಹಾಕಿ ಇಟ್ಟಿದ್ದೇನೆ. ಈ ಬಿಡುವಿನ ವೇಳೆಯಲ್ಲಿ ನಾನೊಬ್ಬ ಲೇಖಕನೇ, ನನಗೆ ಏನಾದರೂ ಒಂದೆರಡು ಪಂಕ್ತಿಗಳನ್ನು ಬರೆಯಲು ಬರುತ್ತದೆಯೇ ಎಂಬ ಸಂದೇಹ ಕೂಡ ನನ್ನನ್ನು ಕಾಡುತ್ತದೆ. ಅನೇಕ ಸಂದರ್ಭಗಳಲ್ಲಿ ನನ್ನ ಕಾವ್ಯಸತ್ವದ ಹೊನಲು ಬತ್ತಿಯೇ ಹೋಯಿತು ಎಂಬ ನಿರ್ಧಾರಕ್ಕೂ ಬಂದು ಬಿಟ್ಟಿದ್ದೇನೆ.

ಏನಾದರೂ ಕೆಲಸ ಮಾಡುತ್ತಿರಬೇಕಾದುದು ನನ್ನ ಜಾಯಮಾನ. ಪ್ರತಿನಿತ್ಯದ ಸ್ನಾನ, ಊಟ, ನಿದ್ದೆ ಉಸಿರಾಟಗಳು ಹೇಗೆ ದಿನನಿತ್ಯದ ಆವಶ್ಯಕತೆಗಳೊ, ಹಾಗೆ ಯಾವುದೇ ಒಂದು ಕೆಲಸ ನನ್ನ ಬದುಕಿನಲ್ಲಿ ಬೆರೆತುಕೊಂಡಿರತಕ್ಕುದು. ಉದ್ಯೋಗದಲ್ಲಿದ್ದಷ್ಟು ದಿನ ಹಗಲೆಲ್ಲ ಅದರಲ್ಲಿ ನಿರತನಾಗಿರುತ್ತಿದ್ದುದರಿಂದ, ಬರವಣಿಗೆಯ ಕೆಲಸ ಇಲ್ಲದಿದ್ದರೂ ನನಗೆ ಅಷ್ಟೇನೂ ಕಷ್ಟವಾಗುತ್ತಿರಲಿಲ್ಲ, ನಿವೃತ್ತಿಯಾದ ಮೇಲೆ ಇಂತಹ ಬಿಡುವಿನ ವೇಳೆಯಲ್ಲಿ ನನ್ನ ಕಷ್ಟ ಹೇಳತೀರದಂತಹುದು. ಈಗ ನನ್ನ ಕೆಲಸವೆಂದರೆ ಬರವಣಿಗೆಯೇ. ಅದನ್ನು ಬಿಟ್ಟು ಬೇರೆಯ ಯಾವುದೇ ಕೆಲಸ ಮಾಡುವ ಯೋಗ್ಯತೆಯನ್ನು ನಾನು ಗಳಿಸಿಕೊಂಡಿಲ್ಲ. ಒಂದು ಕೃತಿಯಿಂದ ಇನ್ನೊಂದು ಕೃತಿಯವರೆಗಿನ ಬಿಡುವಿನಲ್ಲಿ ನಾನು ಪಡುವ ಪಾಡು ಬಹುದೊಡ್ಡದಾಗಿ ಬಿಡುತ್ತದೆ.

'ಶ್ರೀ ಕೃಷ್ಣದರ್ಶನ'ವನ್ನು ಬರೆದು ಮುಗಿಸಿದ ಒಂದಷ್ಟು ದಿನಗಳ ಕಾಲ ಇಂತಹ ಒಳತೋಟಿಯನ್ನು ತಾಳಿಕೊಂಡ ಮೇಲೆ, ಇದ್ದುಕಿದ್ದಂತೆ ಮೈಸೂರ ರಾಜಮನೆತನದ

ಇತಿಹಾಸ ಮನಸ್ಸಿನೊಳಕ್ಕೆ ನುಸುಳಿತು. ಅದರ ಅಧ್ಯಯನ ಆರಂಭವಾಯಿತು. ನಕ್ಷೆಗಳನ್ನು ತಂದಿರಿಸಿಕೊಂಡೆನು. ಶಾಸನಗಳನ್ನು ಸಾವಧಾನವಾಗಿ ಓದಿಕೊಂಡೆನು. ಈ ರಾಜಮನೆತನದ ಮೂಲ ಪುರುಷ 'ಯದುವೊಡೆಯ' ಕಾದಂಬರಿ ಸಿದ್ಧವಾಯಿತು. ಮತ್ತೆ ಅದೇ ಮನಸ್ಸಿನ ಶೂನ್ಯತೆ. ಇದೇ ಮನೆತನದ ಇತಿಹಾಸವನ್ನು ಮುಮ್ಮಡಿ ಕೃಷ್ಣರಾಜರು ಪಟ್ಟಾಭಿಷೇಕವಾಗುವವರೆಗೆ, ಒಂದು ಕಾದಂಬರಿ ಸರಣಿಯನ್ನು ಏಕೆ ಬರೆಯಬಾರದು ಎಂಬ ನೆಚ್ಚುಗೆ ತುಂಬಿ ಬಂದಿತು.

ಯದುವೊಡೆಯರಿಂದ ಮುಂದಕ್ಕೆ ಆಳಿದ ಎರಡನೆಯ ಆಳ್ವಿಕೆಯ ಹಿರಿಯಬೆಟ್ಟ ಚಾಮರಾಜ, ಮೂರನೆಯ ಒಮ್ಮಡಿ ತಿಮ್ಮರಾಜ, ನಾಲ್ಕನೆಯ ಇಮ್ಮಡಿ ಹಿರಿಯ ಚಾಮರಾಜರಸ ಒಡೆಯ, ಐದನೆಯ ಮುಮ್ಮಡಿ ಹಿರಿಯ ಬೆಟ್ಟ ಚಾಮರಾಜ ಒಡೆಯರವರುಗಳ ಕಾಲದ ಇತಿಹಾಸ ನನಗೇನೂ ದೊರೆಯಲಿಲ್ಲವಾಗಿ, ಆರನೆಯ ಆಳ್ವಿಕೆಯ ಇಮ್ಮಡಿ ತಿಮ್ಮರಾಜ ಒಡೆಯರ ವಿಷಯವಾಗಿ, ಅಲ್ಪಸ್ವಲ್ಪ ಸಿಕ್ಕಿತಾಗಿ, ಅವರನ್ನು ಕುರಿತು 'ಮೊನೆಗಾರ' ಕಾದಂಬರಿಯನ್ನು ನನ್ನ ಸಂಕಲ್ಪದ ಐತಿಹಾಸಿಕ ಕಾದಂಬರೀ ಸರಣಿಯಲ್ಲಿ ಎರಡನೆಯದಾಗಿ ಬರೆದಿರಿಸಿದೆನು. ಮೊದಲೇ ಸಿದ್ಧಪಡಿಸಿದ್ದ ಟಿಪ್ಪಣಿಗಳು ಇದ್ದುವಾಗಿ ಇದಕ್ಕೆ ಹೆಚ್ಚಿನ ಅಧ್ಯಯನದ ಆವಶ್ಯಕತೆ ಕಾಣಲಿಲ್ಲ. ಈ ಎರಡಕ್ಕೆ ಈ ಕಾದಂಬರಿ ಸರಣಿ ಪೂರ್ಣವಾಗಿ ನಿಂತುಹೋಯಿತು.

ಇದಾದ ಮೇಲೆ 'ಕೋಟೆಮನೆ' ಎಂಬ ನನ್ನ ಬದುಕಿನ ಕತೆಗಳನ್ನು ಪರಿಷ್ಕರಿಸಿ ಸುಮಾರು ಅರ್ಧಕ್ಕೆ ಭಟ್ಟಿ ಇಳಿಸಿದೆನು. ಅನಂತರ ನಾನು ಮನಸ್ಸಿಗೆ ಬಿಡುವನ್ನು ಕೊಡಲಿಲ್ಲ. ವೇದಯುಗದ ಜಾಮದಗ್ನ್ಯ ರಾಮನು ಬಂದು ನನ್ನ ಹೆಗಲ ಮೇಲೆ ತನ್ನ ಪರಶುವನ್ನು ತಂದಿರಿಸಿಬಿಟ್ಟನು. ತಪ್ಪಿಸಿಕೊಳ್ಳಲು ಸಾಧ್ಯವಾಗದಾಯಿತು. ನನ್ನ ಅಧ್ಯಯನದ ಅವಧಿಯಲ್ಲಿ ಅವನೊಬ್ಬ ಮಹಾಸಮಾಜ ಸುಧಾರಕನಾಗಿ ನನ್ನ ಕಣ್ಣಮುಂದೆ ನಿಂತನು. ಅವನು ಚಾರಿತ್ರಿಕ ಪುರುಷನಾಗಿ ಮಾನವನ ತನ್ನ ಶಕ್ತಿಯನ್ನು ಕೇಂದ್ರೀಕರಿಸಿಕೊಂಡು ಉಚ್ಛೃಂಖಲರಾಗಿ ಮೆರೆದ ರಾಜಕಾರಿಣಿಗಳನ್ನು ತನ್ನ ಉತ್ತರ ಭಾರತದ ಪರ್ಯಟನದ ಮೊದಲಸಲವೇ ನಿರ್ನಾಮವಾಗಿ ಹುಟ್ಟಡಗಿಸಿ ಆ ವಿಧವಾ ಕ್ಷತ್ರಿಯ ರಮಣಿಯರಲ್ಲಿ ಸಾತ್ತ್ವಿಕತನದ ವೀರ್ಯಾಣುಗಳನ್ನು ಬಿತ್ತಿಸಿ, ಇಪ್ಪತ್ತೊಂದು ವರುಷಗಳ ಕಾಲ ಆ ಹೊಸ ಪೀಳಿಗೆಯ ಬೆಳವಣಿಗೆಯನ್ನು ಸಂಚರಿಸುತ್ತ ನಿಯಂತ್ರಿಸಿ, ರಾಷ್ಟ್ರಾಡಳಿತವನ್ನು ಅವರ ಕೈಗಿತ್ತು ಮರೆಯಾದನೆಂಬ ನನ್ನ ನಿರ್ಧಾರ 'ಶ್ರೀಪರಶುರಾಮ' ಕಾದಂಬರಿಯಾಗಿ ಹುಟ್ಟಿಕೊಂಡಿತು.

ಮಹಾಛಂದಸ್ಸಿನ 'ಶಾಕುಂತಲಾ' ಕಾವ್ಯ ಪದ್ಯದಲ್ಲಿದ್ದುದರಿಂದ ಅದು ಎಲ್ಲರಿಗೂ ಅಂದರೆ ಸಾಮಾನ್ಯರಿಗೆ ನಿಲುಕದಾದುದರಿಂದ 'ಶ್ರೀಪರಶುರಾಮ'ನಾದ ಮೇಲೆ ಇದನ್ನು ಹೊಸಗನ್ನಡದ ಗದ್ಯಕ್ಕೆ ಹಾಕಿ 'ರಸವರ್ಷಿಣಿ' ಎಂದು ಕರೆದೆನು. ಅದನ್ನು ತಿದ್ದಿ ಅಚ್ಚಿನ ಪ್ರತಿಯನ್ನೂ ಮಾಡಿದೆನು. ಇಲ್ಲಿ ಒಂದು ಮಾತು. ಕೃತಿ ಎಷ್ಟೇ ಸಣ್ಣದಾಗಿರಲಿ ಅಥವಾ ತುಂಬ ದೊಡ್ಡದೇ ಆಗಿರಲಿ, ಅದನ್ನು ಮೊದಲ ಸಾರಿಗೆ ಬರೆದ ಮೇಲೆ ಮತ್ತೆ ಮತ್ತೆ

ಪರಿಷ್ಕರಿಸುತ್ತೇನೆ. ಕುಳಿತು ಅಚ್ಚಿನ ಪ್ರತಿಯನ್ನು ನಾನೇ ಮಾಡುತ್ತೇನೆ. ಹಾಗೆ ಮತ್ತೆ ಬರೆಯುವಾಗ ಪರಿಷ್ಕರಣ ಕಾರ್ಯ ಮುಂದುವರಿದಿರುತ್ತದೆ. ಹೀಗೆ ಮಾಡಿದ ಎರಡನೆಯ ಪ್ರತಿ ಚೊಕ್ಕವಾಗಿ ಮೂಡಿ ಬಂದಿರುತ್ತದೆ. ನನ್ನ ಎಲ್ಲ ಕೃತಿಗಳನ್ನು ಎರಡೆರಡು ಸಾರಿ ಪ್ರತಿಮಾಡಿದುದರಿಂದ ಅವುಗಳು ನನ್ನ ಬಹುಕಾಲವನ್ನು ಆಕ್ರಮಿಸಿಬಿಟ್ಟುವು. ಬರೆದುದನ್ನು ಬರೆದ ಹಾಗೆಯೇ ಅಚ್ಚಿಗೆ ಕೊಟ್ಟುದು ಒಂದೋ ಅಥವಾ ಎರಡೋ ಇರಬೇಕು ಅಷ್ಟೆ.

ನಾನು ಸಾಮಾಜಿಕ ಕಾದಂಬರಿಗಳನ್ನು ಬರೆದವನೇ ಅಲ್ಲ. ಬರೆದದ್ದು ಒಂದೇ–ಅದೂ ಕೂಡ ನಲವತ್ತಾರು ವರುಷಗಳ ಹಿಂದೆ. ನಾನು ಹಳ್ಳಿಯವನು ತಾನೆ ? ಬುದ್ಧಿ ಬಲಿಯುವವರೆಗೆ ಬೆಳೆದದ್ದೂ ಹಳ್ಳಿಯಲ್ಲಿಯೇ ಹೌದು. ಆದ್ದರಿಂದ ಗ್ರಾಮ್ಯ' ಜೀವನದ ಎಲ್ಲ ಮುಖಗಳನ್ನೂ ಕಂಡವನು ನಾನು. ಅವುಗಳನ್ನು ಪ್ರಧಾನವಾಗಿ ಹಿನ್ನೆಲೆಯಲ್ಲಿಟ್ಟುಕೊಂಡು ಒಂದು ಕಾದಂಬರಿಯನ್ನು ಏಕೆ ಪ್ರಯತ್ನಿಸಬಾರದು ಎಂದುಕೊಂಡಾಗ, ಅವತರಿಸಿದುದು 'ವಿಕಾಸ' ಕಾದಂಬರಿ. ಭಗವಂತನು ಇದ್ದಾನೆ ನಿಜ. ಆದರೆ ಆಲಸರಿಗೆ ಪುರುಷಪ್ರಯತ್ನವನ್ನು ಮಾಡದೆ 'ದೇವರ ಮೇಲೆ ಭಾರ ಹಾಕಿದ್ದೇನೆ', 'ಶ್ರೀರಾಮನು ಕಾಪಾಡುತ್ತಾನೆ' ಎಂಬ ಮೈಗಳ್ಳರಿಗೆ ಅವನು ನೆರವು ನೀಡುವುದಿರಲಿ, ಅಂತಹವರನ್ನು ಅವನು ಕಣ್ಣೆತ್ತಿಯೂ ನೋಡುವುದಿಲ್ಲ. ಹೀಗೆ ವ್ಯಕ್ತಿಯೊಬ್ಬನು ಪುರುಷಪ್ರಯತ್ನದಿಂದ ದುಡಿಯುತ್ತ, ತನ್ನ ಬದುಕನ್ನು ದೊಡ್ಡದು ಮಾಡಿಕೊಳ್ಳುತ್ತ, ವಿಕಾಸವನ್ನು ಹೊಂದುತ್ತ, ಸೌಂದರ್ಯವನ್ನೂ ಸಾಧಿಸಬೇಕು ಎಂಬ ತತ್ತ್ವವನ್ನು ಒಳಗೊಂಡಿದೆ ಈ ಕಾದಂಬರಿ.

'ವಿಕಾಸ' ಕಾದಂಬರಿಯ್ನು ಬರೆದಾದ ಮೇಲೆ ಯಾವುದೇ ಸೃಜನಶೀಲ ಸಾಹಿತ್ಯ ಹೊರಬರಲಿಲ್ಲ. ನಾನು ಮೊದಲೇ ಹೇಳಿದಂತೆ ಶೂನ್ಯತೆ ಬಂದು ಆವರಿಸಿಕೊಂಡಿತು. ಆದರೆ ಏನಾದರೂ ಕೆಲಸ ಬೇಕಲ್ಲವೆ ? ಮನಸ್ಸನ್ನು ಹೊಕ್ಕ ಈ ರಾಕ್ಷಸ ಕೆಲಸವನ್ನು ಕೊಡದಿದ್ದರೆ ನನ್ನನ್ನೇ ತಿನ್ನುವನಾದ್ದರಿಂದ ಅವನಿಗೆ ಕೂದಲನ್ನಾದರೂ ನೇರಕ್ಕೆ ನಿಲ್ಲಿಸು ಎಂದು ಹೇಳಬೇಕಾಗಿದ್ದಿತು. ನನ್ನ ಪುಸ್ತಕ ಭಂಡಾರದ ಮೇಲೆ ಕೈಯಾಡಿಸಿದಾಗ ನನಗೆ ಸಿಕ್ಕಿದುದು ಡಾ॥ ಜೋಗಿರಾಜ್ ಬಸು ಅವರ 'India of the Age of the Brahmanas' ಎಂಬ ಒಂದು ಪ್ರಬಂಧ. ಇದನ್ನು ಕನ್ನಡಕ್ಕೆ ತಂದೆನು. ಮತ್ತೆ ಕೆಲಸ ? ಸ್ವಾಮೀ ಹರ್ಷಾನಂದರ 'Hindu Gods and Goddesses' ಎಂಬ ಗ್ರಂಥವನ್ನು ಕನ್ನಡಿಸಿದೆನು.

ಅತ್ತಿಮಬ್ಬೆಯನ್ನು ಕುರಿತ ಕಾದಂಬರಿಯನ್ನು ಬರೆಯಬೇಕೆಂದು ಸುಮಾರು ಒಂದು ವರುಷದಿಂದ ಸಂಬಂಧಪಟ್ಟ ಸಾಹಿತ್ಯವನ್ನು, ಶಾಸನಗಳನ್ನು ಓದಿ ಗುರುತುಗಳನ್ನು ಹಾಕಿಕೊಂಡಿದ್ದೆನು. ಅದು ಈಗ ತಾನೆ ಮುಗಿದಿದೆ.

ಮೊಟ್ಟಮೊದಲನೆಯದಾಗಿ 'ಭೀಷ್ಮಸಂಕಲ್ಪ' ಪ್ರಕಟವಾದಂದಿನಿಂದ (೧೯೪೭) ಇಂದಿನವರೆಗೆ ಸರಿಯಾಗಿ ಅರ್ಧಮಾನ ಆಗುತ್ತದೆ. ಈ ಅವಧಿಯಲ್ಲಿ ನಾನು ಬರೆದುದೇ

ನಾದರೂ ಇದ್ದರೆ ಅದು ನನ್ನ ಆತ್ಮಸಂತೋಷಕ್ಕಾಗಿಯೇ ಹೊರತು ಯಾವುದೇ ಪ್ರತಿ ಫಲಾಪೇಕ್ಷೆಯಿಂದಲೂ ಅಲ್ಲ. ನನ್ನ ಒಳಗಿನ ಭಾವದೊತ್ತಡವನ್ನು ಕಾವ್ಯ, ಕತೆ, ಕಾದಂಬರಿ, ಮಹಾಕಾವ್ಯ ನಾಟಕಗಳೇ ಮುಂತಾದವುಗಳ ಮೂಲಕ ಹೊರಕ್ಕೆ ತೋಡಿಕೊಂಡಿದ್ದೇನೆ. ಅದು ಹಾಗೆ ಹೊರಕ್ಕೆ ಪ್ರತಿಫಲಿಸುವಾಗ, ನನಗಾದ ತೃಪ್ತಿ, ಸಂತಸ ಮತ್ತು ಸಮ್ಮೋದ ಗಳು ಎಲ್ಲ ಸನ್ಮಾನ ಮತ್ತು ಬಹುಮಾನಗಳನ್ನೂ ಮೀರಿದುದು. ಅವುಗಳಲ್ಲಿ ಸೊಗಸು, ಸತ್ತ್ವ ಸಂಭಾವ್ಯತೆಗಳು ಕಂಡು ಬಂದಾಗ ಅಂದಂದಿನ ವಿದ್ವಜ್ಜನ ಅವುಗಳನ್ನು ವಿವಿಧ ಹಂತಗಳ ವಿದ್ಯಾರ್ಥಿಗಳು ಅಧ್ಯಯನ ಮಾಡಲಿ ಎಂದು ಪಠ್ಯಗಳನ್ನಾಗಿ ಅಂಗೀಕರಿಸಿದು ದುಂಟು ; ರಾಜ್ಯಮಟ್ಟದ ಅನೇಕ ಸಂಘಸಂಸ್ಥೆಗಳು ಗೌರವಿಸಿದುದೂ ಉಂಟು.

ಈ ಎಂಬತ್ತು ವರುಷಗಳ ವರೆಗೆ ಈ ದೇಹವನ್ನು, ಮನಸ್ಸನ್ನು ಬಿಗಿಯಾಗಿ ಹಿಡಿದು ನಿಲ್ಲಿಸಿರುವ ಒಂದು ದಿವ್ಯವಾದ ಚೈತನ್ಯವೆಂದರೆ ದೈವ ನನ್ನ ಬೆನ್ನಿನ ಹಿಂದೆ ನಿಂತು ಕರುಣಿಸಿದ ಈ ಸಾಹಿತ್ಯಕಲ್ಪವೇ ಆಯಿತು. ಈ ತಣ್ಣೀರು ಪನ್ನೀರುಗಳ ಸೊಂಪು ಕಂಪುಗಳು ಇಲ್ಲದಿದ್ದರೆ ನನ್ನ ಜೀವನದಲ್ಲಿ ಅಡಿಗಡಿಗೂ ಮುತ್ತಿ ಬಂದ ಕೋಟಲೆಗಳು ಆ ಬೇಗೆ, ಆ ಉರಿ, ಆ ರಕ್ಕಸತನಗಳು ನನ್ನನ್ನು ಎಂದೋ ಸುಟ್ಟುಹಾಕಿ ಬಿಡುತ್ತಿದ್ದುವು. ನನ್ನ ಮೊದಲ ಹತ್ತು ವರುಷಗಳಿಗೆ ತಂದೆ ತಾಯಿಗಳ ಆಶ್ರಯ ಅನಿವಾರ್ಯವಾದು ದಾಯಿತು. ಆಮೇಲೆ ಹೆರವರ ಹಂಗಿನಲ್ಲಿ ಅವರಿವರ ಮನೆಗಳ ಬಚ್ಚಲನ್ನು ಬಾಚಿ ನಾಲ್ಕು ಅಕ್ಷರಗಳನ್ನು ಕಲಿತೆನು. ಬೆಂಗಳೂರಿನಲ್ಲಿ ನಾಲ್ಕು ಮನೆಗಳ ಮುಂದೆ ನಿಂತು ಭಿಕ್ಷೆಯನ್ನು ಬೇಡಿ, ತಂದುದನ್ನು ಬೀದಿಯ ದೀಪದ ಕೆಳಗೆ ಕುಳಿತು ಉಂಡು, ಪ್ರೌಢ ಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿಕೊಂಡೆನು. ನನ್ನ ತಂದೆ ಇದನ್ನು ನಿರ್ಲಿಪ್ತಭಾವ ದಿಂದ ಕಂಡುದಿರಲಿ,ಮನೆಯ ಹಿರಿಯ ಮಗನಾಗಿ ಈ ರೀತಿಯ ಪಾಡನ್ನು ಪಟ್ಟು ತಾನು ಹೆತ್ತಮಕ್ಕಳನ್ನು ನಾನು ಸಾಕಬೇಕಾದುದು ನನ್ನ ಧರ್ಮ ಎಂಬ ಕರ್ತವ್ಯವನ್ನು ಬೇರೆ ನನ್ನ ಹೆಗಲ ಮೇಲೆ ಹಗಲಿರುಳೂ ಹೇರಿದರು. ನಾನಾದರೂ ಅಷ್ಟೆ ಈ ಧರ್ಮವನ್ನು ನನ್ನ ರಕ್ತದಲ್ಲಿ ಬೆರೆಯಿಸಿಕೊಂಡೇ ಬದುಕಿದೆನು. ನನ್ನ ಈ ಹೊಣೆಗಾರಿಕೆ ತಲೆಯ ಮೇಲೆ ಕುಳಿತಾಗ ಅದನ್ನು ನನ್ನ ಆದ್ಯ ಕರ್ತವ್ಯವೆಂದೇ ನಾನು ಸಂತೋಷದಿಂದಲೇ ಬದುಕನ್ನು ಮುಂದುವರಿಸಿದೆನು. ಈಗ ಕಡೆಯಲ್ಲಿ ಆದುದೇನು ? ನಾನು ಕಟ್ಟಿದ ಹೂವಿನ ಸರಗಳು ಹಾವುಗಳಾಗಿ ನನ್ನನ್ನೇ ನುಂಗಿಹಾಕಿದುವು.

ನನಗೆ ಹೆಣ್ಣನ್ನು ಕೊಟ್ಟ ಮನೆಯುವರ ಅನಾಗರಿಕ ವೃತ್ತಿ, ಅವರುಗಳ ಕಡೆಯ ವರ ಅಹಂಕಾರ ಪ್ರದರ್ಶನದಿಂದ ನನಗೆ ಆಗುತ್ತಿದ್ದ ಮಾನಸಿಕ ಹಿಂಸೆ, ನನ್ನ ಹಳ್ಳಿಯ ದಾಯಾದಿಗಳ ಹುರಿದು ತಿನ್ನುವ ಕಿರುಕುಳಗಳು ಮತ್ತು ದುರಾಕ್ರಮಣಗಳು ನನ್ನನ್ನು ಎಂದೂ ನೆಮ್ಮದಿಗೆ ಬಿಡಲಿಲ್ಲ. ನನ್ನ ಬದುಕಿನ ಉದ್ದಕ್ಕೂ ನನಗೆ ನೆರವಾಗಿ ನಿಂತು ಸಾಂತ್ವ ನವನ್ನು ಹೇಳಿದ ಮಹಾವ್ಯಕ್ತಿಗಳೆಂದರೆ ಪಂಪ, ರನ್ನ, ಲಕ್ಷ್ಮೀಶ, ಮುದ್ದಣರಿಂದ ಹಿಡಿದು, ನನ್ನ ಸಮಕಾಲೀನ ಹಿರಿಯ ಕಬ್ಬಿಗರು ಮತ್ತು ಪುರಾತನ ಋಷಿಮುನೀಷಿಗಳೇ ಆದರು. ಅವರುಗಳು ತಾವು ನೆಲೆಸಿದ್ದ ಪುಣ್ಯಕ್ಷೇತ್ರಕ್ಕೆ ನನಗೆ ಪ್ರವೇಶವನ್ನು ಕೊಟ್ಟರು.

ಅವರು ತಮ್ಮ ವರದ ಹಸ್ತವನ್ನು ನನ್ನ ತಲೆಯ ಮೇಲಿರಿಸಿ, ಬೆನ್ನು ಚಪ್ಪರಿಸಿ. ಹೃದಯದ ಮೇಲೆ ತಿಳಿನೀರಿನ ತುಂತುರನ್ನು ಕರೆದರು. ಆಗ ಬದುಕಬೇಕೆಂಬ ಉತ್ಸಾಹ ಸೆಲಸಲಕ್ಕೂ ಚಿಗುರೊಡೆಯುತ್ತಿದ್ದಿತು ; ಬದುಕಿದೆನು.

ಬಾಲ್ಯ ಮತ್ತು ಯೌವನಗಳಲ್ಲಿ ನನ್ನ ಮಾನಸಿಕ ನೆಮ್ಮದಿಯನ್ನು ಹೀಗೆ ಛಿದ್ರ ವಾಗಿಸುವ ಬಿರುಗಾಳಿಯ ಹೊಯ್ಲುಗಳನ್ನೆಲ್ಲ ಸಹಿಸಿಕೊಂಡು, ಹತ್ತು ಸಾಲುಗಳನ್ನು ಬರೆದಾಗ ಸಂತೋಷಪಡುತ್ತ ಮುಂದುವರಿದೆನಾದರೂ, ನನ್ನ ಕೈ ಸ್ವಲ್ಪ ಹಿಂದೆ ಗೆಯಿತು ಎಂದಾಗ, ಅದೇ ತಂದೆ ತಾಯಿಗಳ ಅನಾದರಣೆ ಮತ್ತು ಅಸೂಯೆಗಳ ಕಿಚ್ಚು, ನಾನು ಸೇರಿಕೊಂಡಿದ್ದ ಕರ್ನಾಟಕ ಸರಕಾರದ ಆರೋಗ್ಯ ಇಲಾಖೆಯಲ್ಲಿ ಮೇಲ್ಗೈಯಾಗಿ ತಮ್ಮ ಪಾಳೆಯಗಾರಿಕೆಯಿಂದ, ಯಥೇಚ್ಛವಾಗಿ ದೊರಕುತ್ತಿದ್ದ ಅಕ್ರಮವಾದ ಕಳ್ಳಹಣ, ಹೆಣ್ಣು ಮತ್ತು ಹೆಂಡಗಳನ್ನು ಧಾರಾಳವಾಗಿ ಉಪಭೋಗಿ ಸುತ್ತಿದ್ದ ಹಲವಾರು ವೈದ್ಯರುಗಳ ದಂಭ, ದರ್ಪ, ಸ್ವೈರ ಮತ್ತು ತಿಳಿಗೇಡಿತನಗಳಿಂದ ಪಟ್ಟ ಕ್ಲೇಶ ಕಡಿಮೆಯೇನಾಗಲಿಲ್ಲ. ನ್ಯಾಯ ಧರ್ಮಗಳನ್ನು ಗೌರವಿಸುವ ನನ್ನ ಮನೋಧರ್ಮಗಳನ್ನು ಸಹಿಸಲಾರದ ಸಹ ಕಾರ್ಯಕರ್ತರು, ಆಡಳಿತದ ಸಿಬ್ಬಂದಿ ಸಮೂಹ ನಾನು ನಡೆವ ದಾರಿಯಲ್ಲಿ ಮುಳ್ಳುಗಳನ್ನೇ ಹರಡಿದರು. ನಾನು ಅವುಗಳನ್ನು ಜಾಗರೂಕತೆಯಿಂದ ಕಣ್ಣಿನಲ್ಲಿ ಕಣ್ಣಿಟ್ಟು ಗುಡಿಸಿ, ಆಯ್ದು ದೂರಹಾಕಿ, ಅಡಿಯನ್ನಿಟ್ಟು ಮುನ್ನಡೆಯಬೇಕಾಯಿತು. ನನ್ನ ಆಯುಷ್ಯದ ತೊಂಬತ್ತು ಭಾಗವನ್ನು ಇಂತಹ ಹೋರಾಟಗಳಿಗಾಗಿ ಮೀಸಲಿರಿಸಬೇಕಾಯಿತು. ನನ್ನ ಸಾಹಿತ್ಯ ವ್ಯವಸಾಯಕ್ಕೆಂದು ನಾನು ವಿನಿಯೋಗಿಸಿದ ಸಮಯ ಕಡಿಮೆ, ಬಹುಕಡಿಮೆಯಾಯಿತು.

ಈಗ ಜೀವನದ ಈ ಕೊನೆಯಲ್ಲಿ, ನನ್ನ ಕೈಯ ಹಾಲನ್ನು ಕುಡಿದವರು ಹಾಲಾ ಹಲವನ್ನುಣ್ಣಿಸುತ್ತಿರುವ ಈ ಪರಮ ಕ್ರೌರ್ಯವನ್ನು ಅನುಭವಿಸುತ್ತಿರುವುದು ನನ್ನ ಜೀವನದ ಅತಿದೊಡ್ಡ ದುರಂತವಾಗಿದೆ.

ಬಾಳಿನ ಈ ಹೊಯ್ದಾಟ ತುಯ್ದಾಟಗಳನ್ನು ತಾಳಿಕೊಂಡು, ಮಾನಸಿಕವಾದ ಅಗ್ನಿಪರೀಕ್ಷೆಗಳಿಗೆ ನನ್ನನ್ನು ನಾನೇ ಒಡ್ಡಿಕೊಂಡು ಬರೆದಿದ್ದೇನೆ. ಈ ವ್ಯುತ್ಪತ್ತಿ ಮತ್ತು ಬದ್ಧತೆಗಳು ನನಗರಿವಿಲ್ಲದಂತೆ ನನ್ನ ಮನದಾಳಕ್ಕೆ ಇಳಿದು, ನಾನು ಮಾಡುವ ಅಲ್ಪ ವಾದ ಕೆಲಸಕ್ಕೆ ಪ್ರೇರಣೆಯಾನ್ನೊದಗಿಸಿವೆ. ಈ ದೃಢತೆ ಮತ್ತು ಗಾಢತನಗಳು ಅದು ಹೇಗೆ ಬಂದುವು ಎಂಬುದನ್ನು ನೆನೆದಾಗ, ಅವುಗಳ ಸುಳಿವು ನನಗೆ ಈಗಲೂ ಸಿಕ್ಕಿಲ್ಲ. ನೇರವಾದ ಯಾವುದೇ ಒಬ್ಬ ಗುರು ಎಂಬ ಮಹದ್ವಸ್ತು ನನಗಿಲ್ಲ. ಆದರೆ ಇಡೀ ರಾಷ್ಟ್ರದ ನನ್ನ ಹಿಂದಣ ಸಾಹಿತ್ಯ ತಪಸ್ವಿಗಳ ಪುಣ್ಯ ನನಗೊಂದು ದಾರಿಯನ್ನು ಬೆರಳು ಮಾಡಿ ತೋರಿಸಿತು. ಕಗ್ಗಾಡಿನಲ್ಲಿ ಬಿದ್ದಿರುವ ಸಹಜಾವಿರ್ಭಾವದ ಕಲ್ಲುಗುಂಡಿನಂತಹ ನನ್ನನ್ನು ಆ ದಿವ್ಯ ಪ್ರೇರಣೆ, ಜನ ಮೆಚ್ಚುವಂತಹ ಒಂದು ಮೂರ್ತಿಯನ್ನಾಗಿಸಿತು.

ನನ್ನ ಮನೋವಿಪ್ಲವಕ್ಕೆ ಕಾರಣವಾದ ಅನೇಕ ಸನ್ನಿವೇಶಗಳನ್ನು ನಾನು ಇಲ್ಲಿ ಬದಿಗೆ ಸರಿಸಬಹುದಾಗಿದ್ದಿತೇನೋ ! ಈ ಅನುನಯಕ್ಕೆ ನಾನು ಸೋತು, ಅವುಗಳಿಂದ

ಹಿಂಜರಿದೆನಾಗಿದ್ದರೆ, ಅಂತರಾಳದ ಕೇಂದ್ರಬಿಂದುವನ್ನೇ ನಾನು ಕಡೆಗಣಿಸಿದಂತಾಗುತ್ತಿದ್ದಿತು. ಆಗ ಏನಾಗುತ್ತಿದ್ದಿತು ? ನೀರಿನ ಆವಿಯ ಶಕ್ತಿಯನ್ನು ಬೇರ್ಪಡಿಸಿ ಬದಿಗಿಟ್ಟು, ಕೆಳಗೆ ಉಳಿದ ಗಚ್ಚನ್ನು ಎತ್ತಿ ತೋರುವಂತೆ ಆಗುತ್ತಿದ್ದಿತು. ಬರೆಹಗಾರನಿಗೆ ಇರುವ ಜೀವಾಳವೆಂದರೆ ಅವನ ಪ್ರಾಮಾಣಿಕತೆಯೇ ಆಗಿದೆ. ಅವನು ತನ್ನ ಒಳಗನ್ನು, ಅನುಭವವನ್ನು ಅದರಿಂದ ಮೂಡಿಬರುವ ರಸಾರ್ದ್ರತೆಯನ್ನು ಬಚ್ಚಿಡುವನಾದರೆ, ಅವನ ಭಾವ ಜೀವನಕ್ಕೆ ಒಣಗಿ ಹೋದ ತರಗೆಲೆಯ ಬೆಲೆಯಾದರೂ ಬಾರದೆ ಹೋಗುತ್ತದೆ. ಆಗ ಕೃಷಿಕರ್ಮ ಮರಳ್ಗಾಡಿನ ದಿಬ್ಬದಂತಾಗಿ ಬಿಡುತ್ತದೆ.

ಜೀವನದ ರೀತಿ ನೀತಿಗಳು, ಆಕರ್ಷಣೆ ಆಮಿಷಗಳು ಅವು ಬೇರೆಯಾದ್ದರಿಂದ ಕೃತಿಯ ಸತ್ತ್ವವನ್ನು ಅವುಗಳ ಹಿನ್ನೆಲೆಯಲ್ಲಿ ಕಾಣುವುದು ಸಲ್ಲ ಎಂಬ ವಾದವೊಂದುಂಟು. ಅಂತಹ ಪಲಾಯನವಾದಕ್ಕೆ ನಾನು ದೂರದಿಂದಲೇ ಕೈಮುಗಿಯುತ್ತೇನೆ. ಹರಿದ್ವಾರದ ಮೇಗಣಿಂದ ಜುಳಜುಳನೆ ಹರಿದು ಬರುವ ಗಂಗೆ ತನ್ನ ಸುತ್ತಣ ವನೌಷಧಿಗಳ ರಸವನ್ನು ಹೀರಿಕೊಂಡು, ರೋಗ ಕಾರಕಗಳಾದ ಜೀವಾಣುಗಳನ್ನು ಕೂಡ ಸ್ಥಗಿತಗೊಳಿಸುವ ಮಹಚ್ಛಕ್ತಿಯನ್ನು ಪಡೆದಿರುತ್ತದೆಂದೇ, ಮನೀಷಿಗಳು ಆಕೆಯನ್ನು ಪರಮ ಪಾವನೆಯೆಂದರು ; ಅದರಿಂದಲೇ ಗಂಗಾಸ್ನಾನ ಮೋಕ್ಷಪ್ರದವೆಂಬ ಅಧ್ಯಾತ್ಮಿಕ ತತ್ತ್ವದ ಲೇಪನವನ್ನೂ ಕೊಟ್ಟರು. ಕವಿಯ ಮನೋ ಭೂಮಿಕೆ, ಜೀವನ ನೈರ್ಮಲ್ಯದಿಂದ ಸಿದ್ಧವಾಗದೆ ಹೋದುದಾದರೆ, ಜಾಹ್ನವಿಯ ನಿರ್ಮಲೀಕರಣದ ಶಕ್ತಿ ಕವಿ ಕೃತಿಯಲ್ಲಿ ಮೂಡಬಹುದಾದರೂ ಹೇಗೆ ? ಆ ಕಲ್ಪ ಶಕ್ತಿ ಇಲ್ಲದ ಕೃತಿಯಿಂದ ಯಾವ ನಾಡಿಗೆ ಅಥವಾ ಯಾವ ಕಾಡಿಗಾದರೂ ಏನು ಉಪಯೋಗ ಆದೀತು ? ಕೃತಿಕಾರನ ಅನುಭದ ಜಲ ಅವನ ಶುದ್ಧ ಜೀವನದ ವಿಶಾಲವಾದ ಹರಹಿನಲ್ಲಿ ಹರಿದು, ಆ ನೆಲದ ಸತ್ವವನ್ನು ಗಿಡ ಮರಗಳ, ಬೇರು ನಾರುಗಳ, ಎಲೆ ಹೂಗಳ ಸಾರವನ್ನು ಮೈಗೂಡಿಸಿಕೊಂಡು, ಒಂದು ಕಲ್ಪ ಶಕ್ತಿಯನ್ನು ಪಡೆದಾಗ ಮಾತ್ರ, ಆ ತೀರ್ಥ ಹರಿವ ಕ್ಷೇತ್ರ ಫಲವತ್ತಾದುದಾದೀತು. ಆಗ ಅಲ್ಲಿನ ಬೆಳಸು ಅಮೃತವೇ ಆಗುತ್ತದೆ. ಸಾಹಿತ್ಯ ಬೆಳೆಯ ಬೇಕಾದುದು ಋತದ ಈ ಅಮೃತವನ್ನೇ. ಈ ದೃಷ್ಟಿ ಶುಭದ ಯಷ್ಟಿ ; ಪರಮ ಲಾಭದ ಸಮಷ್ಟಿ.

ವ್ಯಕ್ತಿದರ್ಶನ

ಅಭಿನಂದನೆ

ಪು ತಿ ನ

ನನ್ನ ಬಹುಕಾಲದ ಮಿತ್ರರಾದ ರಾಜೇಶ್ರೀ ಸಮೇತನಹಳ್ಳಿ ರಾಮರಾಯರು ತಮ್ಮ ಬದುಕಿನ ಸ್ವರ್ಣಾಕ್ಷರಗಳನ್ನು ಸಾಹಿತ್ಯ ರಚನೆಗೆ ಬಳಸಿಕೊಂಡು ಅನೇಕ ಗ್ರಂಥಗಳನ್ನು ರಚಿಸಿ ಧನ್ಯರಾಗಿದ್ದಾರೆ. ರಾಮರಾಯರಿಗೆ ಸಂಭಾವನಾ ಗ್ರಂಥವನ್ನು ಸಮರ್ಪಿಸಬೇಕೆಂದು ಬಂಧುಮಿತ್ರರು ಬಯಸಿ ಉತ್ಸಾಹದಿಂದ ಕಾರ್ಯಪ್ರವೃತ್ತರಾಗಿರುವುದು ಸ್ತುತ್ಯ ಸಂಗತಿ. ಅವರು ಒಂದು ದೀರ್ಘ ಕಾವ್ಯವನ್ನು–ಶಾಕುಂತಲವನ್ನು ಕುರಿತು ಬರೆದು ಸಹೃದಯರ ಮನವನ್ನು ಸೆಳೆದಿದ್ದಾರೆ. ಅದಕ್ಕೆ ಪ್ರಸ್ತಾವನಾ ರೂಪದಲ್ಲಿ ನಾನೊಂದು ಕೆಲವು ಸಾಲುಗಳನ್ನು ಅಭಿನಂದನಪೂರ್ವಕವಾಗಿ ಬರೆದಿದ್ದೇನೆ. ಅದನ್ನು ಈ ಕೆಳಗೆ ಉದ್ಧರಿಸಿದ್ದೇನೆ.

ಋವಿಯಾತುಮದಗ್ನಿಯ ತಣ್ಣನೆ ಸೋಕಿತು ಬಾನ್ ಚೆಲುವು
ವಿನಿಮಯವಾಯಿತು ಕೌಶಿಕಮುನಿ ತಪಕಾ ಮೇನಕೆಯೊಲವು

ಕಾಲದ ಕಾಲುಡುಗಿತು ನರಸುರನಚ್ಚಣೆಯರ ಮೇಳನಕೆ
ವೆಚ್ಚದ ಮುನಿತಪ ಸಂದಿತು ರೂಪಾಂತರದಿಂ ಪೆಣ್‌ಶಿಶುತನಕೆ

ಕೈಬಿಟ್ಟರು ಮಾತಾಪಿತರಾ ಕೂಸನು–ಋಷಿ ಇವ ಅಪ್ಸರೆಯವಳು
ಆದೊಡೆ ತಾಯ್ತಂದೆಗಳಕ್ಕರೆಯಂ ತಳೆದಿತು ಬನ ; ಕೊಂಡವು ಹಕ್ಕಿಗಳು

ಶಕುಂತಪಾಲಿತವಾದುದು ಮಗು, ಶಾಕುಂತಲೆ, ಕವಿಗಳ ಕನಸು
ಈ ತಿರೆ ಬಾನ್ ಮಗಳಿನ ಕತೆಯಂ ಪರಿಭಾವಿಸಿ ಹಿಗ್ಗದದಾವನ ಮನಸು

ಆ ಮೊದಲನುರಾಗಂ ಬಳಿಕಳಲಿನ ತಪ ಸಗ್ಗದಿ ಭರತನ ಜನನ
ದಿವ್ಯದ ಕಥೆಯಿದರೇರೊಳು ತಗ್ಗೊಳು ಹಿಂಬಾಲಿಸುತಡಿಯಿಟ್ಟಿದೆ ಕವಿಕಥನ

ಬಾಳಿನ ಬಂಡಿಯನೀತೆರ ತಾರೆಗೆ ಹೂಡುತ ಚರಿಸುವ ಕವಿನೀ ಧನ್ಯ
ಅದೆ ಹೊಸದದೆ ಸವಿಯದೆ ಮನದುತ್ಸವವದೆ ಶೋಕ ವಿಶೋಷಕವದೆ ಪುಣ್ಯ
ಉದಾತ್ತ ಚರಿತರ ಕತೆ ಪೇಳ್ವುದಕೂ ಮಿಗಿಲೇನಿಹುದೈ ; ಸೊಗವಡೆದೆಯೊ ಗಣ್ಯ

"ಯೋವೈಭೂಮಾತತ್ಸುಖಂ–ನಾಲ್ಪೇಸುಖಮಸ್ತಿ" ಎಂಬ ಉಪನಿಷತ್ ವಾಕ್ಯವನ್ನು ಶ್ರೀ ರಾಮರಾಯರು ಮೈಗೂಡಿಸಿಕೊಂಡು ಕೃತಾರ್ಥರಾಗಿದ್ದಾರೆ. ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ. ರಾಮರಾಯರಿಗೆ ಸಾಹಿತ್ಯ ಪ್ರೇಮಿಗಳ ಅಭಿಮಾನ ಇತೋಪ್ಯತಿಶಯವಾಗಿ ದೊರೆತು ಇವರ ಕೀರ್ತಿ ಹರಡಲೆಂದು ಪ್ರಾರ್ಥಿಸುತ್ತೇನೆ.

ಸಮೇತನಹಳ್ಳಿಯ ಧೀರ ಸಾಹಿತಿ

ದೇಜಗೌ

"ಕಾಲೇಜಿನ ಮೆಟ್ಟಲನ್ನು ಹತ್ತಿ, ಕನ್ನಡ ಗುರುವರ್ಗದ ನೇರವಾದ ಉಪದೇಶವನ್ನು ಪಡೆಯುವ ಸೌಭಾಗ್ಯವನ್ನು ಭಗವಂತನು ನನಗೆ ಕರುಣಿಸಲಿಲ್ಲ. ಏಕಲವ್ಯನು ತನ್ನ ಗುರುವಿನ ಪ್ರತಿಮೆಯ ಬಳಿ ಕುಳಿತು ಧನುರ್ವಿದ್ಯೆಯನ್ನು ಅಭ್ಯಸಿಸಿದನಂತೆ. ನಾನು ನನ್ನ ಸಮಕಾಲೀನ ಹಿರಿಯ ಕವಿ ಮತ್ತು ವಿದ್ವಾಂಸರೆಲ್ಲರ ಕೃತಿಗಳ ಮುಂದೆ ಕುಳಿತು ಅಂಥದೇ ಆರಾಧನಾ ಭಾವದಿಂದ ಅಧ್ಯಯನವನ್ನು ಮಾಡಿದ್ದೇನೆ. ಆದ್ದರಿಂದ ಅವರೆಲ್ಲರನ್ನೂ ನಾನು ಗುರುಭಾವದಿಂದ ಸ್ವೀಕರಿಸಿದ್ದೇನೆ. ದೊಡ್ಡವರು ನಡೆದ ಹಾದಿಯಲ್ಲಿ ನಡೆಯುವುದು ತಪ್ಪಲ್ಲ ; ಕುಂದೂ ಆಗಲಾರದು. ಅದು ಪುಣ್ಯಪ್ರದವಾದುದು."[1] ಕವಿ ಕೃತಿಗಳಲ್ಲಿಯೇ ತನ್ನ ಆರಾಧ್ಯ ಗುರು–ದೇವರುಗಳನ್ನು ಕಂಡುಕೊಂಡು, ಅವುಗಳನ್ನು ಶ್ರದ್ಧಾನ್ವಿತರಾಗಿ, ಏಕನಿಷ್ಠೆಯಿಂದ ಆರಾಧಿಸಿದ್ದರಿಂದಲೇ ಸಮೇತನಹಳ್ಳಿಯ ಕೋಟೆ ಮನೆ ರಾಮರಾಯರು ಸಾಹಿತ್ಯಸಿದ್ಧಿಯ ಶಿಖರವನ್ನೇರಿ ವಿರಾಜಮಾನರಾಗಿದ್ದಾರೆಂಬುದು ಸರ್ವವೇದ್ಯ.

ಅವರು ಹುಟ್ಟಿದ ಪರಿಸರವನ್ನು ಅವರನುಭವಿಸಿದ ಕಷ್ಟಪರಂಪರೆಗಳನ್ನು ಜೀವನೋಪಾಯಕ್ಕಾಗಿ ತಮ್ಮ ಪ್ರವೃತ್ತಿಗೆ ವಿರುದ್ಧವಾದ ವೃತ್ತಿಯಲ್ಲಿ ಅವರೆದುರಿಸಬೇಕಾದ ಕೀಟಲೆ ಕೋಟಲೆಗಳನ್ನು ನೋಡಿದಾಗ ಅವರು ಧೀರರೆಂದು, ಹಠವಾದಿಯೆಂದು, ಸತ್ಯವ್ರತರೆಂದು ಯಾರಿಗಾದರೂ ಅನಿಸದಿರದು. ತಮ್ಮ ಜಾಯಮಾನಕ್ಕೊಗ್ಗದ ವೃತ್ತಿಯ ಬಲೆಯಲ್ಲಿ ಸಿಕ್ಕಿಕೊಂಡಾಗ, ನೆಂಟರಿಷ್ಟರೇ ನಿಂದಿಸುವಾಗ, ಬಡತನ ಅಸುವನ್ನು ಹಿಂಡುತ್ತಿರುವಾಗ

ನನ್ನ ಬದುಕಲಿ ನೋವು ತುಂಬಿದೆ ದಿನವ ಕಳೆವೆನು ಹೇಗೆಯೋ
ದಾರಿಗಾಣದೆ ಹಗಲು ಇರುಳೂ ಮನವು ಮರುಗಿದೆ ಮುಂದೆಯೋ[2]

ಎಂಬ ಸ್ಥಿತಿಯಲ್ಲಿರುವಾಗ, ತಮ್ಮ ಪ್ರವೃತ್ತಿಗೊಗ್ಗುವ ಕಾವ್ಯಾರಾಧನೆ ಸಾಹಿತ್ಯ ವ್ಯವಸಾಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು, ಚಿತ್ತಸ್ವಾಸ್ಥ್ಯವನ್ನು ರಕ್ಷಿಸಿಕೊಳ್ಳುತ್ತಾರೆ. ನಾಡಿನ ಮಾನಸಿಕ ಆರೋಗ್ಯವನ್ನು ಕಾದುಕೊಳ್ಳುತ್ತಾರೆ. "ದೀಪಬೇಕು ಎನ್ನುವಾಗ ಅದರ ನೆರಳನ್ನೂ ಅನಿವಾರ್ಯವಾಗಿ ಕೊಂಡೊಯ್ಯುವಂತೆ, ಸುಖದೊಡನೆ

1 ಉದಯೋದ್ಯಾನ, ಮನವಿ, ಪು iv

2 ನೋವಿನ ಹರಿಗೋಲು, ಅದೇ, ಪು ೪೭

ದುಃಖವನ್ನೂ ಕಟ್ಟಿಕೊಂಡೇ ಇರಬೇಕು" ಎನ್ನುವುದು ಅವರ ಸ್ವಾನುಭವದಿಂದ ಮೂಡಿದ ಸಿದ್ಧಾಂತ. ಆ ಸಿದ್ಧಾಂತವೆಷ್ಟು ಸತ್ಯವೋ ಅದನ್ನು ಹೇಳುವ ರೀತಿಯೂ ಅಷ್ಟೇ ಸ್ವಾರಸ್ಯವಾಗಿದೆ.

ಸಮೇತನಹಳ್ಳಿಯವರು ಹುಟ್ಟಿದಾರಭ್ಯ ದಾರಿದ್ರ್ಯದ ದಾಳಿಯನ್ನೆದುರಿಸಿ, ಹಲವು ಕಷ್ಟತಾಪಗಳ ಅಗ್ನಿಪರೀಕ್ಷೆಯಲ್ಲಿ ಗೆದ್ದಿದ್ದಾರೆ. ಗೆದ್ದಿದ್ದಾರೆ ನಿಜ; ಆದರೆ ಕಾಲೇಜು ವ್ಯಾಸಂಗ ಸಾಧ್ಯವಿಲ್ಲದಿದ್ದರೂ, ಸ್ವಂತವ್ಯಾಸಂಗದ ಮೂಲಕ ಅಪಾರ ವಿದ್ವತ್ತನ್ನು ಗಳಿಸಿದ್ದಾರೆ. ಈಚೀಚಿನ ಹಲವು ಲೇಖಕರಂತಲ್ಲದೆ ಅವರು ಸಾಕಷ್ಟು ಸಜ್ಜುಮಾಡಿಕೊಂಡು, ಗರಡಿಯಲ್ಲಿ ಪಳಗಿದನಂತರವೇ ಸಾಹಿತ್ಯಕೃಷಿಯನ್ನು ಪ್ರಾರಂಭಿಸಿದ್ದು. ಏಕಲವ್ಯ ಪದ್ಧತಿಯ ವ್ಯಾಸಂಗ ಅವರದು.

> ಪ್ರತಿಭಾನಂ ಕಾವ್ಯವಿದ್ಯಾಪ್ರಚಯ ಪರಿಚಯಂ ವೃದ್ಧಸೇವಾನುರಾಗಂ
> ಸತತಾಭ್ಯಾಸ ಪ್ರಯತ್ನಂ ನಿಯತಂ ಕವಿತೆಗೆ ಕಾರಣಂ

ಎಂಬ ಪ್ರಾಚೀನೋಕ್ತಿಯನ್ನು ಅವರು ಅಕ್ಷರಶಃ ಪಾಲಿಸಿದ್ದಾರೆ. ಹಳಗನ್ನಡ ನಡುಗನ್ನಡ ಗ್ರಂಥಗಳನ್ನು, ನವೋದಯ ಲೇಖಕರ ಪೈಕಿ ಕುವೆಂಪು, ಡಿವಿಜಿ, ಸಂಸ, ಮಾಸ್ತಿ ಮೊದಲಾದವರ ಕೃತಿಗಳನ್ನು ಓದಿ, ಮೆಲುಕುಹಾಕಿ, ಜೀರ್ಣಿಸಿಕೊಂಡಿದ್ದಾರೆ. ಅವರ ವಿದ್ವತ್ತು ಯಾವ ಕಾಲೇಜು ಪ್ರಾಧ್ಯಾಪಕನಿಗೂ ಕಡಿಮೆಯಾದದ್ದಲ್ಲ. ಸಾಹಿತ್ಯೋಪಾಸನೆ ಅವರ ನಿರಂತರ ಕರ್ಮವಾಗಿದೆ, ನಿತ್ಯಪೂಜೆಯಾಗಿದೆ. ಪಂಪ ರನ್ನ ಕುವೆಂಪು ಸಂಸರನ್ನು ಅಧಿಕವಾಗಿ ವ್ಯಾಸಂಗಮಾಡಿದ ಫಲವಾಗಿ ಅವರ ಶೈಲಿಯಲ್ಲಿ ಆ ಹಿರಿಯರ ಪ್ರಭಾವ ನಿಚ್ಚಳವಾಗಿ ಎದ್ದುಕಾಣುತ್ತದೆ.

ಎಸ್ಸೆಸ್ಸೆಲ್ಸಿಯ ನಂತರ ಓದು ಮುಂದುವರಿಸಲು ಸಾಧ್ಯವಾಗದಿದ್ದಾಗ, ಚಾಕರಿ ಬೇಟೆ ಅನಿವಾರ್ಯವಾಗುತ್ತದೆ. ಹೋಟಲು ಮಾಣಿಯಾಗಿ ಬಸ್‌ಕಂಡಕ್ಟರಾಗಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ, ಊರೂರು ನೋಡುತ್ತಾರೆ, ನಾನಾ ರೀತಿಯ ಜನರ ಸ್ವರೂಪ ಸ್ವಭಾವಗಳು ಪರಿಚಯವಾಗುತ್ತವೆ ; ಐದು ರೂಪಾಯಿ ಮಾಸಿಕ ವೇತನ ಪಡೆಯುವ ಭರವಸೆಯ ಮೇಲೆ ಎರಡು ಮೂರು ತಿಂಗಳು ದುಡಿದರೂ ನಿಗದಿತ ಸಂಬಳವೂ ಕೈಗೆ ಸಿಗದಿದ್ದಾಗ ಅವರು ನಿರಾಶರಾಗುತ್ತಾರೆ ; ಕೊನೆಗೆ ಸರ್ಕಾರದಲ್ಲಿ ಗುಮಾಸ್ತೆ ಹುದ್ದೆ ದೊರೆತಾಗ ಅವರಿಗೆ ತುಸು ಸಮಾಧಾನವಾಗುತ್ತದೆ. ಕೊನೆಗೆ ಆರೋಗ್ಯ ಇಲಾಖೆಯಲ್ಲಿ ತನಿಖಾಧಿಕಾರಿ ಹುದ್ದೆಗೆ ನಡೆದ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿ, ಪ್ರಥಮ ರ್‍ಯಾಂಕ್ ಪಡೆದಾಗ, ಅವರ ಭವಿಷ್ಯ ನಿರ್ಧಾರವಾಗುತ್ತದೆ. ಲೌಕಿಕ ವಿಚಾರಗಳಲ್ಲಿ ಅವರೇನೂ ಮಹತ್ವಾಕಾಂಕ್ಷಿಯಲ್ಲ. ಹೊಟ್ಟೆ ಬಟ್ಟೆಗಳಿಗೆ ನೆರವಾಗುವ ಹುದ್ದೆಯೊಂದು ಸಿಗುವುದಾದರೆ, ನಿಶ್ಚಿಂತೆಯಾಗಿ ಸಾಹಿತ್ಯೋಪಾಸನೆಯನ್ನು ಮುಂದುವರಿಸಬಹುದು, ನಿಶ್ಚಿಂತೆಯಿಂದ ಲೇಖನ ವ್ಯವಸಾಯ ಸಾಗಿಸಬಹುದು ಎಂಬ ಹಂಬಲ ಅವರದು. ಇಂಥದೇ ಹುದ್ದೆ ಬೇಕೆಂಬ ಚಲವಂತು ಅವರಿಗಿಲ್ಲವೇ ಇಲ್ಲ. ರೆವಿನ್ಯೂ ನೋಂದಣಿ,

ಎಕ್ಸೈಜ್ ಮೊದಲಾದ ಹುಲುಸು ಬೆಳೆಯ ಇಲಾಖೆಗಳ ಕಡೆಗೆ ಅವರ ಗಮನ ಹರಿಯುಲಿಲ್ಲ. ಶ್ರಮವಿಲ್ಲದೆ ನ್ಯಾಯವಾಗಿ ತಮ್ಮ ಪಾಲಿಗೆ ದೊರೆತದ್ದೇ ಪಂಚಾಮೃತವೆಂದು ತಿಳಿದು, ಆರೋಗ್ಯ ತನಿಖಾಧಿಕಾರಿ ಹುದ್ದೆಯನ್ನು ಸೇರುತ್ತಾರೆ. ತಮ್ಮ ಹುದ್ದೆಗೆ ಸಂಬಂಧಿಸಿದ ಕರ್ತವ್ಯವನ್ನು ಮರೆಯದೆ, ಸಾಹಿತ್ಯ ಕೃಷಿಯುನ್ನು ಬಿಡದೆ, ಪಂಪನಂತೆ ಲೌಕಿಕಾಗಮಿಕಗಳೆರಡನ್ನು ನಿಷ್ಠೆಯಿಂದ ಶ್ರದ್ಧೆಯಿಂದ ನಿರ್ವಹಿಸುತ್ತಾರೆ. ಒಬ್ಬ ಪ್ರಾಧ್ಯಾಪಕ ಏಕಾಗ್ರತೆಯಿಂದ ಗ್ರಂಥರಚನೆ ಮಾಡುವುದಕ್ಕೂ ಆರೋಗ್ಯ ಇಲಾಖೆಯ ಪುಟ್ಟ ಅಧಿಕಾರಿಯೊಬ್ಬ ಲೌಕಿಕ ಕರ್ಮಗಳ ಜತೆಗೆ ಪದ್ಯ ನಾಟಕ ಕಾದಂಬರಿಗಳನ್ನು ರಚಿಸುವುದಕ್ಕೂ ಅಜಗಜಾಂತರವಿದೆ. ಪ್ರಾಧ್ಯಾಪಕನ ವೃತ್ತಿ ಪ್ರವೃತ್ತಿಗಳೆರಡೂ ಸಮರಸವಾಗಿದ್ದರೆ, ಆಡಳಿತಾಧಿಕಾರಿಯ ವೃತ್ತಿ ಒಂದಾಗಿ ಪ್ರವೃತ್ತಿ ಮತ್ತೊಂದಾಗಿರುವಾಗ, ಒಂದು ನೀರಿಗೆಳೆದರೆ ಮತ್ತೊಂದು ನೆರಳಿಗೆಳೆದಂತಾಗುತ್ತದೆ. ರಾಮರಾಯರ ವೈಶಿಷ್ಟ್ಯವೆಂದರೆ, ವೃತ್ತಿಯಲ್ಲಿ ಶಹಭಾಸ್‌ಗಿರಿ ಪಡೆದದ್ದಲ್ಲದೆ, ಪ್ರವೃತ್ತಿ ಸಂಬಂಧವಾದ ಪವಿತ್ರ ಕರ್ಮದಲ್ಲಿಯೂ ಜಯ ಡಿಂಡಿಮವನ್ನೂ ಬಾರಿಸಿದ್ದು.

'ಸೇವಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ' ಎಂಬುದು ಪ್ರಾಚೀನ ಕವಿಯ ಪ್ರಸಿದ್ಧ ಸೂಕ್ತಿ. 'ಇಳಾಧಿನಾಥರಂ' ಬದಲಿಗೆ 'ಇಳಾಧಿಕಾರರಂ' ಎಂಬ ಪದವನ್ನು ತುಂಬಿದರೆ ಇಂದಿನ ಪರಿಸ್ಥಿತಿಯ ಚಿತ್ರ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅಧಿಕಾರಿಗಳ ಸಮುದಾಯದಲ್ಲಿ ದರ್ಪಿಷ್ಠರೇ ಅಧಿಕ. ಅವರಲ್ಲಿ ನೂರಕ್ಕೆ ತೊಂಬತ್ತು ಭಾವ ಭ್ರಷ್ಟಾಚಾರಿಗಳು. ತಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರವಿಲ್ಲವೆಂದು ಗಂಟಲು ಕಿತ್ತುಹೋಗುವಂತೆ ಅರಚುವ ಮಂತ್ರಿಗಳು ಕುತಂತ್ರಿಗಳು. ಆತ್ಮದ್ರೋಹಿಗಳು. ಸಮಾನ ರೆಕ್ಕೆ ಪುಕ್ಕಗಳುಳ್ಳ ಹಕ್ಕಿಗಳು ಒಂದಕ್ಕೊಂದು ಹೆಣೆದುಕೊಳ್ಳುತ್ತವೆಂಬ ಗಾದೆ ಇಂಗ್ಲಿಷಿನಲ್ಲಿದೆ. ಸಮಾನ ಮನೋಧರ್ಮವುಳ್ಳ ಮಂತ್ರಿಗಳು ತಮ್ಮ ಅಧಿಕಾರಿಗಳನ್ನು ಮುಳುಗಿಸುವಂಥ ಕೃತಘ್ನರಲ್ಲ. ಅಂದರೆ ತಪ್ಪುಮಾಡಿದಾಗಲೂ ರಕ್ಷಿಸಿಕೊಳ್ಳುತ್ತಾರೆ. ಅಂಥ ವಾತಾವರಣದಲ್ಲಿ ದರ್ಪಿಷ್ಠ ಭ್ರಷ್ಟ ಅಧಿಕಾರಿಗಳು ತಮ್ಮ ಕೈಕೆಳಗಿನ ನೌಕರರನ್ನು ತಮ್ಮ ಆಶೆ ಆಮಿಷಗಳ ತೃಪ್ತಿಗಾಗಿ ಬಳಸಿಕೊಳ್ಳುತ್ತಾರೆ. ಆದರೆ ಸ್ವಾಭಿಮಾನ ಆತ್ಮಗೌರವಗಳಿರುವ ರಾಮರಾಯರಂಥ ನಿಷ್ಠುರ ಸ್ವಭಾವದ, ಕಠೋರ ಸತ್ಯನಿಷ್ಠೆಯ, ಧರ್ಮಶ್ರದ್ಧೆಯ, ನ್ಯಾಯಬಲದ ನೌಕರರ ಬಳಿ ಅಂಥ ಅಧಿಕಾರಿಗಳ ಬೇಳೆ ಬೇಯುವುದಿಲ್ಲ. ಆದರೆ ಆ ನೌಕರರು ಅಧಿಕಾರಿಗಳ ಕೀಟಲೆ ಕಿರುಕುಳ ಕೋಟಲೆಗಳ ಚಪ್ಪಡಿಯಡಿಯಲ್ಲಿ ಸಿಕ್ಕಿಕೊಂಡು ನಜ್ಜುಗುಜ್ಜಾಗುತ್ತಾರೆ. ದಿನ ಬೆಳಗಾದರೆ ಅವರು ಹತ್ತು ಹಲವು ಸಮಸ್ಯೆಗಳನ್ನೆದುರಿಸಬೇಕಾಗುತ್ತದೆ, ನಾರಕಯಾತನೆಯನ್ನನುಭವಿಸಬೇಕಾಗುತ್ತದೆ. ತಮ್ಮ ಕೈಯಲ್ಲಿ ಅಧಿಕಾರವಿದೆಯೆಂದು ಏನಾದರೊಂದು ಆರೋಪ ಹೊರಿಸುವುದು, ಬೇಡದ ಊರಿಗೆ ವರ್ಗಾಯಿಸುವುದು, ಬಡ್ತಿ ತಡೆ ಹಿಡಿಯುವುದು, ಜುಲ್ಮಾನೆ ವಿಧಿಸುವುದು—ಇನ್ನು ಏನೇನೋ ಚಿತ್ರ ಹಿಂಸೆಗಳನ್ನು ಅವರಿಗೆ ಕೊಡುತ್ತಾರೆ. ಅಂಜುಕುಳಿಗಳು, ನರಸತ್ತವರು, ಮಾನಮರ್ಯಾದೆ ಬಿಟ್ಟವರು, ಪಾದಸೇವಕರು, ಅವರ ಬೇಕು ಬೇಡಗಳನ್ನು ಪೂರೈಸುವ

ಲಜ್ಜಾವಿಹೀನರು ದರ್ಪಿಷ್ಟ ಅಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ.

ರಾಮರಾಯರು ಎಂಥ ಕಠಿನ ಸಂದರ್ಭದಲ್ಲಿಯೂ ಅಧಿಕಾರಿಗಳ ದರ್ಪಕ್ಕೆ ಮಣಿದವರಲ್ಲ; ಕಾಟಕೋಟಲೆಗಳಿಗೆ ಅಂಜಿದವರಲ್ಲ. ಮರೆತೂ ಅವರನ್ನು ಓಲಗಿಸಿದವರಲ್ಲ. ಉನ್ನತಾಕಾರದ ದೃಢಕಾಯದ ಆ ವ್ಯಕ್ತಿ ಉನ್ನತವಾಗಿಯೇ, ದೃಢವಾಗಿಯೇ ಉಳಿಯುತ್ತಾರೆ. ಉನ್ಮತ್ತ ಆರೋಗ್ಯಾಧಿಕಾರಿಗಳ ಲಂಚ ಸಂಪಾದನೆಗೆ ಕುಮ್ಮಕ್ಕು ಕೊಡಲಿಲ್ಲವಾಗಿ ದುಷ್ಟ ವೈದ್ಯಾಧಿಕಾರಿಗಳ ಮನೆಗೆ ಬಕೇಟು ಹಗ್ಗ ಸೋಪು ಸೋಫ ತರಕಾರಿ ಮೊದಲಾದ ಮನೆ ಬಳಕೆಯ ವಸ್ತುಗಳನ್ನು ಒದಗಿಸಲಿಲ್ಲವಾಗಿ, ಇತರ ಅಧಿಕಾರಿಗಳಿಗೆ ಸಲ್ಲುತ್ತಿದ್ದ ಮಾಮೂಲಿಗಳನ್ನು ನಿಲ್ಲಿಸಿದ್ದಕ್ಕಾಗಿ, ಏಕ್ ದಿನ್ ಕಾ ಸುಲ್ತಾನರಾದ ಹುಂಬ ಪುರಸಭಾಧ್ಯಕ್ಷರ ದುರುದುಂಬಿತನಕ್ಕೆ ಜಗ್ಗಲಿಲ್ಲವಾಗಿ ಎಲ್ಲರೂ ಅವರ ಮೇಲೆ ಕ್ಯಾತೆ ತೆಗೆಯುತ್ತಾರೆ ; ಅವರ ವೈರ ಕೋಪಗಳಿಗೆ ಬಲಿಯಾಗುತ್ತಾರೆ. ಈಗಂತು ಹಣದ ಆಸೆಗಾಗಿ ಮಂತ್ರಿಗಳೇ ವರ್ಗಾವಣೆಯಲ್ಲಿ ಕೈ ಹಾಕುತ್ತಾರೆ. ಅವರ ಮುಂದಿರುವ ಒನ್ ಪಾಯಿಂಟ್ ಪ್ರೋಗ್ರಾಮ್ ಅಂದರೆ ಧನ ಸಂಪಾದನೆ. ರಾಜರ ಸರ್ಕಾರದಲ್ಲಿ ಇಂಥ ಅನಿಷ್ಟ ಸಂಗತಿಗಳು ಮಂತ್ರಿಗಳ ಮಟ್ಟದಲ್ಲಿ ನಡೆಯುತ್ತಿರಲಿಲ್ಲ. ಅದೇನೇ ಇರಲಿ, ಸಣ್ಣಪುಟ್ಟ ಎಂಜಲಿಗೆ ಅಧಿಕಾರಿಗಳು ಕೈಯೊಡ್ಡುತ್ತಿದ್ದ ಸಂದರ್ಭಗಳನ್ನು ರಾಮರಾಯರು ಆಗ್ಗಾಗ್ಗೆ ಉದಾಹರಿಸುತ್ತಾರೆ. ಮುನಿಸಿಪಲ್ ನಿಯಮಾವಳಿಗೆ ವಿರುದ್ಧವಾಗಿ ಮನೆ ಕಟ್ಟಲು ಲೈಸೆನ್ಸ್ ಕೊಡದಿದ್ದಾಗ, ಅಥವಾ ಶಿಫಾರಸು ಮಾಡದಿದ್ದಾಗ ಶ್ರೀಮಂತರು ಅವರ ಮೇಲೆ ಹರಿಹಾಯುತ್ತಾರೆ. ಆದರೆ ರಾಮರಾಯರದು ಅನ್ಯಾಯಕ್ಕೆ ಜಗ್ಗುವ ಪಿಂಡವಲ್ಲ.

ಮಣಿಯದಿಹ ಮನವೊಂದು
ನಿಜದನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು

ಇದು ರಾಮರಾಯರ ಸಂಕಲ್ಪ ; ಅವರ ಪ್ರತಿಯೊಂದು ನಡೆನುಡಿಯಲ್ಲಿಯೂ ಈ ಸಂಕಲ್ಪ ಪ್ರತಿಧ್ವನಿಸುತ್ತದೆ. ಶ್ರೀಮಂತರು ಶ್ರೀಮಂತರಾದದ್ದು ಪರಪೀಡನೆ ಶೋಷಣೆ ಅಕ್ರಮಗಳ ಮೂಲಕ ತಾನೆ ! ರಾಮರಾಯರ ಈ ನ್ಯಾಯ ನೈಷ್ಠುರ್ಯದಿಂದ ಗಾಳಿ ಬಂದಾಗ ತೂರಿಕೊಳ್ಳುವ, ಸಮಯ ಬಂದಾಗ ಜಾರಿಕೊಳ್ಳುವ, ತಮ್ಮ ತಪ್ಪನ್ನು ಮುಗ್ಧರ ಹೆಗಲಿಗೆ ತಟಾಯಿಸುವ, ಬಿಕ್ಕಟ್ಟು ಬಂದಾಗ ನುಣುಚಿಕೊಳ್ಳುವ ಮೇಲಣಧಿಕಾರಿಗಳ ಕಣ್ಣು ಕೆಂಡವಾಗುತ್ತದೆ.

ನೌಕರಿಯಲ್ಲಿದ್ದಾಗಲೇ ರಾಮರಾಯರ ಗಮನ ದಲಿತರ ಸಮಸ್ಯೆಯ ಕಡೆಗೂ ಹರಿಯುತ್ತದೆ. ಸಾಮಾನ್ಯವಾಗಿ ಪೌರ ಕಾರ್ಮಿಕರು ತಮ್ಮ ದುಡಿಮೆಯಿಂದ ಬಂದ ಕೂಲಿಯ ಹಣವನ್ನು ಹೆಂಡದ ಮಾರಿಗೆ ಸಲ್ಲಿಸಿ, ಮಕ್ಕಳು ಮರಿಗಳನ್ನು ಉಪವಾಸ ಕೆಡವುತ್ತಿದ್ದರೂ, ತಾವು ಗಳಿಸಿದ ಹಣವೂ ಸಾಲದೆ ತಮ್ಮ ಮಡದಿಯರ ಚೀಲಕ್ಕೂ

ಅವರು ಕೈ ಹಾಕುತ್ತಿದ್ದರು. ಆ ಮಡದಿ ಮಕ್ಕಳಗೋಳನ್ನು ಸಹಿಸಲಾರದ ರಾಯರು ಹೊಸದೊಂದು ಕ್ರಮವನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಾರೆ, ಆ ಕ್ರಮದ ಪ್ರಕಾರ ಅಂಗಡಿಗಳಿಂದ ಮಡದಿ ಮಕ್ಕಳಿಗೆ ದವಸ ಧಾನ್ಯಗಳನ್ನು ಸಾಲಕೊಡಿಸುವುದು. ಕೂಲಿಯ ಹಣ ಬಂದ ಕೂಡಲೇ ಅಂಗಡಿಯವರ ಸಾಲ ತೀರಿಸುವಂತೆ ಏರ್ಪಾಡು ಮಾಡುವುದು. ಇದರಿಂದ ಮಡದಿ ಮಕ್ಕಳಿಗೆ ಸಂತೋಷವಾಯಿತು, ನಿಜ. ಗಂಡಂದಿರಿಗೋ ? ಉಸ್ತುವಾರಿ ನೌಕರರಿಗೊ ? ಇಲ್ಲ. ಗಂಡಂದಿರ ಕುಡಿತಕ್ಕೆ ಖೋತಾ ಆಗುತ್ತದೆ, ಉಸ್ತುವಾರಿಗಾರರಿಗೆ ಸಿಗುತ್ತಿದ್ದ ನೈವೇದ್ಯ ತಪ್ಪಿಹೋಗುತ್ತದೆ. ಉಸ್ತುವಾರಿ ನೌಕರರ ಪ್ರಚೋದನೆಯಿಂದ ಗಂಡಸರು ಮುಷ್ಕರ ಹೂಡುತ್ತಾರೆ. ರಾಯರ ತಲೆ ಮೇಲೆ ಗುಬ್ಬಿ ಕೂರಿಸಲು ಆಗದವರಿಗೆ ಅದೇ ಸರಿಯಾದ ಸಮಯ. ಆದರೆ ಅವರ ಆ ಕ್ರಮ ತಪ್ಪೆಂದು ಯಾರೂ ಸಾಧಿಸುವಂತಿರಲಿಲ್ಲ. ಆದರೂ ಶಿಕ್ಷೆ ವಿಧಿಸಲು ಅದೊಂದು ಸುವರ್ಣಾವಕಾಶ. ದೂರ ದೂರಿಗೆ ಅವರನ್ನು ವರ್ಗಾವಣೆ ಮಾಡಲಾಗುತ್ತದೆ. ಮಧುಗಿರಿಯಲ್ಲಿದ್ದಾಗ ಅವರಿಗೆ ಪ್ರಾಣಭಯವೂ ಇತ್ತೆಂದು ತೋರುತ್ತದೆ.

ಇಲಾಖೆಯವರೆಲ್ಲರೂ ಕೆಟ್ಟವರಲ್ಲ. ಎಲ್ಲೆಡೆಯೂ ಕೆಲವರು ಧರ್ಮಭೀರುಗಳಿದ್ದೇ ಇರುತ್ತಾರೆ. ಅವರ ಸಂಖ್ಯೆ ಅಲ್ಪವಿರಬಹುದು. ಕತ್ತಲೆಯ ಬಸಿರಿನಲ್ಲಿ ಮಣಿದೀಪ ವಿದ್ದಂತೆ. ಅಂಥವರಿರುವುದರಿಂದಲೇ ಶುದ್ಧ ಹಸ್ತದ ಮುಗ್ಧರಿಗೆ ಅಲ್ಪ ಸ್ವಲ್ಪ ನೆಮ್ಮದಿ ದೊರೆಯುತ್ತದೆ. ಅಂಥವರಲ್ಲೊಬ್ಬರು, ರಾಮರಾಯರು ಯಾವಾಗಲೂ ಕೃತಜ್ಞತೆಯಿಂದ ನೆನೆಯುವ ಡಾ. ವಿ. ರಾಮಕೃಷ್ಣ ಅವರು. ತಮಗೆ ತೊಂದರೆಯಾದಾಗಲೆಲ್ಲ ರಾಯರು ಅವರ ಬಳಿಗೆ ಧಾವಿಸುತ್ತಾರೆ. ಇಲಾಖೆಯಲ್ಲಿ ದೊಡ್ಡ ಅಧಿಕಾರಿಯಾದರೂ ರಾಮಕೃಷ್ಣರು ಅಸಹಾಯಕರ ಆಪದ್ಬಂಧುಗಳು, ವಿನಯಶಾಲಿಗಳು, ಶಾಂತ ಸ್ವಭಾವದವರು, ಮೇಲಾಗಿ ಶುದ್ಧ ಚಾರಿತ್ರ್ಯವುಳ್ಳವರು. ಸೂರ್ಯಪ್ರಖರ ಜ್ಯೋತಿಯನ್ನು ಹಿಡಿದು ಕೃತಜ್ಞತೆಯನ್ನು ಅರಸಬೇಕಾದ ಈ ದಿನಗಳಲ್ಲಿ ರಾಮಕೃಷ್ಣರ ಉಪಕಾರವನ್ನು ಮೇಲಿಂದ ಮೇಲೆ ನೆನೆಯುವ ರಾಯರು ನಿಜಕ್ಕೂ ಸ್ತುತ್ಯರ್ಹರು. ನೋಡನೋಡುತ್ತಿದ್ದಂತೆಯೆ ಮನುಷ್ಯರ ಮರ್ಜಿಯನ್ನರಿಯಬಲ್ಲ, ಅವರ ಗುಣಲಕ್ಷಣಗಳನ್ನು ತೂಗಿ ನೋಡಬಲ್ಲ ಸೂಕ್ಷ್ಮಪರೀಕ್ಷಣ ಶಕ್ತಿ ಅವರಲ್ಲಿ ಅಗಾಧವಾಗಿದೆ. ವಿನಯಕ್ಕೆ ವಿನಯ, ಅಹಂಕಾರಕ್ಕೆ ಅಹಂಕಾರ–ಇದು ಅವರ ಜೀವನ ಸಿದ್ಧಾಂತ ; ಕಪಟಕ್ಕಾಗಲಿ ವಂಚನೆಗಾಗಲಿ ಅವರ ಮನಸ್ಸಿನಲ್ಲಿ ಜಾಗವೇ ಇಲ್ಲ. ಋಜುತ್ವವೇ ಅವರ ಹೆಗ್ಗುಣ–ಕೋಗಿಲೆಯನ್ನು ಕಪ್ಪೆಂದು, ಎರಡು ಎರಡು ಸೇರಿದರೆ ನಾಲ್ಕಾಗುವುದೆಂದು, ಕಪಟಿಯನ್ನು ಕಪಟಿಯೆಂದು ಕರೆದಾರೇ ಹೊರತು, ಒಳಗೊಂದನ್ನು ಮುಚ್ಚಿಕೊಂಡು ಹೊರಗೊಂದನ್ನು ಹೇಳುವ ನಯವಂಚನೆಗವರು ಹೊರಗು.

ರಾಯರೆಲ್ಲಿಗೆ ಹೋದರೂ ತಮ್ಮ ವೃತ್ತಿ ಕರ್ತವ್ಯದ ಜತೆಗೆ ತಮ್ಮ ಜ್ಞಾನಪಿಪಾಸೆಯನ್ನು ಪರಿಹರಿಸಿಕೊಳ್ಳುವಲ್ಲಿ ಸದಾ ಕಾತರರಾಗಿರುತ್ತಿದ್ದರು. ಅಲ್ಲಲ್ಲಿಯ ಇತಿಹಾಸದ ಹೆಜ್ಜೆ ಗುರುತುಗಳನ್ನು ಕಾಣುವುದು, ಶಾಸನ ವೀರಗಲ್ಲು ಮಾಸ್ತಿಕಲ್ಲುಗಳನ್ನು ಹುಡುಕು

ವುದು ಅವರ ಅನುದಿನದ ಕಾಳಜಿಯಾಗಿರುತ್ತಿತ್ತು, ಪರಿಪಾಠವಾಗಿರುತ್ತಿತ್ತು. ಇವರ ಈ ಪರಿಪಾಠವನ್ನು ನೋಡುವಾಗ ಜೋನ್ಸ್, ರೇತ್, ಹೆರಾಸ್ ಮೊದಲಾದ ಅಂದಿನ ಯುರೋಪೀಯ ಅಧಿಕಾರಿಗಳು ನೆನಪಿಗೆ ಬರುತ್ತಾರೆ. ಇಂಥವರೀಗ ಈ ದೇಶದಲ್ಲಿ ಲಕ್ಷಕ್ಕೊಬ್ಬ ಇದ್ದರೆ ಹೆಚ್ಚು.

ಮೋಸವೇ ಮೂರ್ತಿವೆತ್ತಂತಿರುವ, ಲೇಖಕರನ್ನು ಶೋಷಣೆಮಾಡುವ ಕೆಲವು ಪ್ರಕಾಶಕರಿಗವರು ಸಿಂಹಸ್ವಪ್ನ. ಲೇಖಕರ ಕಣ್ಣಿಗೆ ಮಣ್ಣೆರಚಿ, ಬುದ್ಧಿಗೆ ಮಂಕು ಬೂದಿ ತೂರಿ, ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಗಳನ್ನು ಮುದ್ರಿಸುವ, ಅವರಿಗೆ ತಿಳಿಸದೆಯೆ ಮರು ಮುದ್ರಣಗಳನ್ನು ಅಚ್ಚುಮಾಡಿಸಿಕೊಳ್ಳುವ, ಪುಸ್ತಕ ಪಥ್ಯವಾದ ಸಂಗತಿಯನ್ನು ಅವರ ಗಮನಕ್ಕೆ ತಾರದ ಪ್ರಕಾಶಕರ ಮಾನವನ್ನು ಅವರು ಹರಾಜು ಹಾಕಿದ್ದೂ ಉಂಟು, ಅವರನ್ನು ಕೋರ್ಟಿಗೆಳೆದು ಬುದ್ಧಿಕಲಿಸಿದ್ದೂ ಉಂಟು. ಆಡಳಿತದಲ್ಲಿ ಲೋಕವ್ಯವಹಾರ ದಲ್ಲಿ ಅವರು ಆತ್ಮಗೌರವವನ್ನುಳಿಸಿಕೊಂಡು ಪ್ರಾಮಾಣಿಕವಾಗಿ ದಿಟ್ಟತನದಿಂದಲೇ ನಡೆದುಕೊಂಡಿದ್ದಾರೆಂಬ ವಿಷಯದಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ.

ರಾಮರಾಯರ ಮೂಲಪ್ರವೃತ್ತಿಗನುಗುಣವಾದ ಸಹಜ ವೃತ್ತಿಯೆಂದರೆ ಸಾಹಿತ್ಯ ಕೃಷಿ. ಅವರು ಕವನ ರಚನೆಯಿಂದ ಸಾಹಿತ್ಯಕೃಷಿ ಪ್ರಾರಂಭಿಸಿದ್ದರೂ, ಅವರ ಪ್ರಥಮ ಪ್ರೇಮ ನಾಟಕ. ಕಷ್ಟಸಂಕಷ್ಟಗಳಲ್ಲಿ, ಬೇನೆ ಬವಣೆಗಳಲ್ಲಿ ಅವರ ಚೈತನ್ಯ ಕೊರಗದಂತೆ, ಸೊರಗದಂತೆ, ಮುರುಟಿ ಹೋಗದಂತೆ ರಕ್ಷಿಸಿರುವ, ಬದುಕಿನಲ್ಲವರಿಗೆ ತೃಪ್ತಿಯನ್ನೂ ಆಶೆಯನ್ನೂ ಮೂಡಿಸಿರುವ ಟಾನಿಕ್ಕೆಂದರೆ ಸಾಹಿತ್ಯಶಕ್ತಿ. 'ಉದಯೋದ್ಯಾನ'ವೆಂಬ ಅನ್ವರ್ಥನಾಮವುಳ್ಳ ಅವರ ಏಕೈಕ ಕವನ ಸಂಕಲನದಲ್ಲಿ ಪ್ರಣಯಗೀತೆಗಳದ್ದೆ ದರ್ಬಾರು. ಅವುಗಳಲ್ಲಿ ಜೇನಿಂಪಿದೆ, ಹಸುರುಸೊಂಪಿದೆ, ಮಲ್ಲಿಗೆಯ ಕಂಪಿದೆ. 'ತಳಿರನುಟ್ಟು ಬಂದ ತಿರೆ' ಎಂಬುದು ಸುಂದರ ನಿಸರ್ಗಕವನ. 'ಏಳು ಭಾರತವೀರನೆ' ಚೀನೀಧಾಳಿಯ ಸಂದರ್ಭದಲ್ಲಿ ದೇಶಪ್ರೇಮವೇ ಆಕ್ರೋಶ ರೂಪದ ನಿರ್ಝರಿಯಾಗಿ ಧುಮುಕಿದ ಭಾವಪಾತ. ಇಲ್ಲಿ ವೀರರಸ ಛಂದಸ್ಸುಗಳೆರಡೂ ಸಮಸ್ಪರ್ಧಿಯಾಗಿವೆ.

ನಡೆ ನಾಡಿನ ಗಡಿಯಂಚಿಗೆ ಹೆತ್ತಮ್ಮನ
ಕಂಬನಿಯನು ಒರಸೆ
ಅವಳುರ್ಕಿನ ಸಿರಿಸಾಸವ ಹಿರಿಹೆಮ್ಮೆಯ
ನೆರೆ ಮೆರೆಯುಲು ಸೆಣಸೆ
ನೆಲದಾಹದ ನೆಣಗೊಬ್ಬಿನ ಚೈನೀಯನ-
ನ್ನಿನ್ನಾದರು ನಾವು
ಕೆಲಕಿಕ್ಕುವ ಕಡುಗಲಿತನವೀ ಕತದಲಿ
ನಮಗಡಸಲಿ ಸಾವು

'ಕರ್ನಾಟಕ ಸಂಸ್ಕೃತಿ'ಯ ಬಗೆಗಿನ ಕವಿಯ ಉತ್ಕಟಾಭಿಮಾನ ಪ್ರೇಮಗಳು 'ನಮ್ಮ ನಿಲುವು' ಕವಿತೆಯಲ್ಲಿ ಹೆಪ್ಪುಗಟ್ಟಿವೆ. ಕವಿತೆಯ ಶೀರ್ಷಿಕೆ ಅದರ ಸತ್ವ ಹೂರಣಗಳಿಗನು

ಗುಣವಾಗಿಲ್ಲವೆನಿಸುತ್ತದೆ. 'ಸೀತೆ'ಯೆಂಬ ಕಥನಕವನ ಸರಳ ಸುಂದರ ಗೊಲ್ಲಗಬ್ಬವಾಗಿದೆ. 'ಧರ್ಮ ಬರೆವುದಕಲ್ಲ, ಬರಿ ಜಪದ ಕೂಗಲ್ಲ ; ಅದು ಇಹುದು ಬಾಳ್ವುದಕೆ, (೮೯) ಎಂಬ ಧರ್ಮವನ್ನು ಕುರಿತ ವ್ಯಾಖ್ಯಾನ ಕಂಠಶೋಷಕರಿಗೆ ಎಚ್ಚರಿಕೆಯಾಗಿದೆ. 'ಹೊಂಬಿಸಿಲು ಬಳುಕಿತ್ತು, ಮಲಗಿತ್ತು ತಳಿರಿನಲ್ಲಿ'. 'ಕಳೆಗೊಂಡ ಬಿಳಿನೀಲಿ, ಸುತ್ತ ರಾಗದ ಬೇಲಿ' (೩) ಇಂಥ ಕಾವ್ಯ ಭಾಷೆಯಲ್ಲಿ ಸಮರ್ಥವಾಗಿ ಭಾವಾನುಭವಗಳನ್ನು ಹೊರಹೊಮ್ಮಿಸಬಲ್ಲ ಈ ಕವಿ ಕವನ ರಚನೆಯನ್ನೇಕೆ ಕೈ ಬಿಟ್ಟರೋ ಕಾಣೆ. 'ಶಾಕುಂತಲಾ' ಎಂಬ ಮಹಾಕಾವ್ಯವನ್ನವರು ರಚಿಸಿದ್ದಾರೆಂಬುದು ಮರೆಯಲಾಗದ ಮಾತು.

ಈ ಮೊದಲೇ ತಿಳಿಸಿದಂತೆ ರಾಮರಾಯರು ನಾಟಕರಚನೆಗೆಂದೇ ಹುಟ್ಟಿದವರೆಂದು ತೋರುತ್ತದೆ. 'ಭೀಷ್ಮ ಸಂಕಲ್ಪ'ದಿಂದ ಪ್ರಾರಂಭವಾದ ಅವರ ನಾಟಕ ಪರಂಪರೆ 'ಕಲಾರಾಧನೆ'ಯವರೆಗೆ ಹಬ್ಬುತ್ತದೆ. ಇಲ್ಲಿಯೂ ಐತಿಹಾಸಿಕ ವಸ್ತುವೇ ಮೇಲುಗೈ. ಇದಕ್ಕೆ 'ಸಂಸ'ರ ಪ್ರಭಾವವೂ ಕಾರಣವಿರಬೇಕು. 'ಸಂಸ'ರು ಸತ್ತಿಲ್ಲ, ಬದುಕಿದ್ದಾರೆ ಎಂಬ ಭ್ರಮೆ ಮೂಡಿಸುವಂತೆ ರಾಮರಾಯರ ನಾಟಕರಚನೆ ನಡೆದಿದೆ, ಎಂಬ ವಿಮರ್ಶಕರ ಮಾತನ್ನು ನಂಬಬಹುದಾಗಿದೆ. ಇತಿಹಾಸದ ವಿದ್ವಾಂಸರು ಮೆಚ್ಚುವಂಥ ರೀತಿಯಲ್ಲಿ ರಾಯರು ಆಳವಾಗಿ ಕರ್ನಾಟಕದ ಇತಿಹಾಸವನ್ನು ಅಧ್ಯಯನ ಮಾಡಿದ್ದಾರೆ ; ವಿಮರ್ಶಕರು ಒಪ್ಪುವಂಥ ರೀತಿಯಲ್ಲಿ ಆ ವಸ್ತುವನ್ನು ನಾಟಕಕ್ಕೆ ತಿರುಗಿಸಿದ್ದಾರೆ. 'ತಲಕಾಡುಗೊಂಡ,' 'ದ್ರೋಹಾಡಂಬರ', 'ಸವತಿಗಂಧವಾರಣೆ' 'ಶಿಲ್ಪಸಂಗೀತ' 'ನಾಟ್ಯಮಂದಾರ' 'ಕಲಾರಾಧನೆ'–ಉತ್ಕೃಷ್ಟ ನಾಟಕ ಶ್ರೇಣಿಯಲ್ಲಿ ನಿಲ್ಲಬಲ್ಲ ಕೃತಿರತ್ನಗಳು. ಐತಿಹಾಸಿಕ ನಾಟಕ ರಚನೆಗೆ ಬೇಕಾದ ಸಂಶೋಧನಾನುರಕ್ತಿ, ತಲಸ್ಪರ್ಶಿವಿದ್ವತ್ತು, ಭೂತಕಾಲದ ಜೀವನವನ್ನು ಪ್ರವೇಶಿಸುವಂಥ ಕಲ್ಪನಾ ಸಾಮರ್ಥ್ಯ, ಆ ವಸ್ತುವಿಗೆ ಕಲಾರೂಪವನ್ನು ಕೊಡಬಲ್ಲ ಸೃಜನಶೀಲ ಪ್ರತಿಭೆ–ಇವು ಸಮೃದ್ಧವಾಗಿದ್ದದ್ದರಿಂದಲೇ ರಾಯರು ನಾಟಕಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದು.

ರಾಯರ ಎರಡನೆಯ ಒಲವೆಂದರೆ ಕಾದಂಬರಿ. ಇಲ್ಲಿಯೂ ಐತಿಹಾಸಿಕ ಕಾದಂಬರಿಗಳ ಬೆಳೆಯೇ ಅಪಾರ. ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಅವರ ಮೈಮನಗಳನ್ನೆಲ್ಲ ಆವರಿಸಿಕೊಂಡಿರುವಾಗ, ಅವರ ಧಮನಿ ಧಮನಿಗಳಲ್ಲಿ ಆ ಸಂಸ್ಕೃತಿಯ ಸತ್ವ ಹರಿಯುತ್ತಿರಲಾಗಿ, ಅವರ ಕಾದಂಬರಿಗಳಲ್ಲಿ ಕನ್ನಡದ ಹೃದಯ ಮಿಡಿಯುತ್ತಿದೆ. "ಮಣ್ಣಿನ ವಾಸನೆಯಂತೆ ! ಅದೇ ಪರಮ ಸಿದ್ಧಿಯಂತೆ ! ಇದಕ್ಕಿಂತ ಹೆಚ್ಚಿನ ಅವಿವೇಕ ಬೇರೊಂದು ಇರಲಾರದು, ಮಣ್ಣನ್ನು ಹಣ್ಣಾಗಿ ಪರಿವರ್ತಿಸುವುದೇ ಜೀವನದ ಕಲೆ" (ಉದಯೋದ್ಯಾನ, ಪು, v) ಎಂಬುದು ಅವರ ಕಲೆಯ ನೆಲೆ. ಈ ಸೂತ್ರವನ್ನು ಅವರ ಸಾಹಿತ್ಯ ಕೃತಿಗಳಲ್ಲೆಲ್ಲ ಮೈದಾಳಿರುವುದನ್ನು ನೋಡಬಹುದು) 'ಕೋಟೆಮನೆ' ಎಂಬ ಅವರ ಆತ್ಮಕಥೆ ಆ ಸಾಹಿತ್ಯ ಪ್ರಕಾರದಲ್ಲಿ ನಿಲ್ಲುವ ಸಾಹಸದ, ರೋಮಾಂಚನಕಾರಿಯಾದ ಕಥೆ)

ಗುಣಗಾತ್ರಗಳೆರಡರಲ್ಲಿಯೂ ಶ್ರೇಷ್ಠ ಮಟ್ಟದ ಕೊಡುಗೆಯನ್ನು ಕ್ಷೇತ್ರಕ್ಕೆ ನೀಡಿರುವ ರಾಮರಾಯರು ಧನ್ಯರು : ಅವರ ಜೀವನ ಸಾರ್ಥಕ. ಇಪ್ಪತ್ತೇಳು ಕೃತಿಗಳಲ್ಲಿ

ಅವರು ಕೊಟ್ಟಿರುವ ಆರುಸಾವಿರ ಪುಟ ಪ್ರಮಾಣದ ಸಾಹಿತ್ಯರಾಶಿ ಯಾವ ಪ್ರಮಾಣ ದಿಂದಲೂ ಕಡಮೆಯೇನಲ್ಲ. ಆರೋಗ್ಯ ಇಲಾಖೆಯ ಅಧಿಕಾರಿಯಾಗಿ ಜನರ ಶಾರೀರಕಾ ರೋಗ್ಯವನ್ನೆಂತು ರಕ್ಷಿಸುತ್ತಿದ್ದರೊ ಅಂತೆಯೇ ಸಾಹಿತಿಯಾಗಿ ಸಮಾಜದ ಮಾನಸಿಕ ಆರೋಗ್ಯವನ್ನು ರಕ್ಷಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಆದರೂ ಅವರಿಗೆ ದೊರಕ ಬೇಕಾದ ಮಾನ್ಯತೆ ದೊರೆಯಲಿಲ್ಲವೆಂದು ಖೇದದಿಂದ ಹೇಳಬೇಕಾಗಿದೆ. ಅದಕ್ಕೆ ಮುಖ್ಯ ವಾದ ಕಾರಣ ಅವರು ಯಾವ ಗುಂಪಿಗೂ ಸೇರಿದವರಲ್ಲ ; ಯಾರನ್ನೂ ಅಷ್ಟಾಗಿ ಹಚ್ಚಿ ಕೊಂಡವರಲ್ಲ ; ಯಾರಿಗೂ ದುಂಬಾಲು ಬಿದ್ದವರಲ್ಲ. ಅಂಕಣಕಾರರಿಗೆ, ವಿಮರ್ಶಕ ವರೇಣ್ಯರಿಗೆ, ಅಕಾಡೆಮಿಯ ಸದಸ್ಯರಿಗೆ, ಪುರಸ್ಕಾರ ಸಮಿತಿಗಳ ಗಣ್ಯರಿಗೆ ಎಂದೂ ಬೆಣ್ಣೆ ಹಚ್ಚಿದವರಿಲ್ಲ. ತಮಗೆ ಅದು ಸಿಗಲಿಲ್ಲವೆಂದು ಗೊಣಗುವವರೂ ಅಲ್ಲ. ಸಾಹಿತ್ಯರಚ ನೆಯೂ ದೇವರ ಸೇವೆಯೆಂದು ನೈವೇದ್ಯವೆಂದು ತ್ರಿಕರಣಶುದ್ಧಿಯಾಗಿ ನಂಬಿ, ನಿಂದಾ ಸ್ತುತಿಗಳನ್ನು ಲೆಕ್ಕಿಸದೆ, ಹುಸಿಹೆಸರಿಗಾಶಿಸದೆ, ಏಕಾಗ್ರತೆಯಿಂದ, ಆತ್ಮಪ್ರತ್ಯಯದಿಂದ ನೆಚ್ಚುಕೆಚ್ಚುಗಳಿಂದ ಅವಿರತವಾಗಿ ಸಮರ್ಪಣಭಾವದಿಂದ ಅವನ್ನು ನಡಸುತ್ತಿದ್ದಾರೆ. ಇಂದಲ್ಲ ಮುಂದಾದರೂ ವಿಮರ್ಶಕರು ಅವರ ಕೃತಿಗಳನ್ನು ಆಸ್ಥೆಯಿಂದ ಅಧ್ಯಯನ ಮಾಡುತ್ತಾರೆ, ಸಂಶೋಧನ ವಿದ್ಯಾರ್ಥಿಗಳು ನಿಬಂಧಗಳನ್ನು ರಚಿಸಿ ಡಾಕ್ಟರೇಟ್ ಪದವಿ ಪಡೆಯುತ್ತಾರೆ, ಸಮಾಜವೂ ಅವುಗಳನ್ನು ಪುರಸ್ಕರಿಸುತ್ತದೆಂಬ ಭರವಸೆ ನನಗಿದೆ.

ನಿಮ್ಮ ಸಾಹಸವನ್ನು ಕಂಡು ಇತರರಿಗೆ ತಲೆತಗ್ಗಿಸುವಂತಾದರೆ ಆಶ್ಚರ್ಯವೇನಲ್ಲ. ತುಂಬು ವ್ಯಾಸಂಗದಿಂದ ಕೂಡಿರುವ ಕೃತಿ 'ಸವತಿ ಗಂಧವಾರಣೆ' ವಿದ್ವಾಂಸರ ವಿಶ್ವಾಸಕ್ಕೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ.

೧೬-೧೦-೬೧

ಜಿ. ವರದರಾಜರಾವ್

ಧೀರ ಗಂಭೀರ ಸುಂದರಮೂರ್ತಿ

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ಎಲ್ಲಿ ಎಂಬುದು ಜ್ಞಾಪಕವಿಲ್ಲ, ಬಹುಶಃ ರಾಮನಗರವೋ ಮಂಡ್ಯವೋ ಇರಬಹುದು, ಮೊದಲ ಸಲ ನಾನು ರಾಮರಾಯರನ್ನು ಒಂದು ಚಿಕ್ಕ ಹೋಟೆಲಿನ ಒಳಕೋಣೆಯಲ್ಲಿ ಕಂಡೆ. ಅಕ್ಕಪಕ್ಕದಲ್ಲಿಯೇ ಕುಳಿತು ಕಾಫಿ ಕುಡಿಯುತ್ತ ಮಾತಾಡುವಾಗ, ಅವರ ಪರಿಚಯವಾಯಿತು. ಅವರು ವೃತ್ತಿಯಿಂದ ಯಾವ ಕಾಲೇಜಿನಲ್ಲಿ ಉಪನ್ಯಾಸಕರು ಎಂದೋ ಏನೋ ನಾನು ಕೇಳಿದಂತೆ ನೆನಪು. ಅವರು ತಾವೊಬ್ಬ ಸ್ಯಾನಿಟರಿ ಇನ್ಸ್ಪೆಕ್ಟರ್ ಎಂದೂ ತಾವು ಕಾಲೇಜು ಮೆಟ್ಟಿಲು ಹತ್ತಿದವರಲ್ಲ ಎಂದೂ ಹೇಳಿದರೆಂದು ನನ್ನ ಮಟ್ಟಿನ ಜ್ಞಾಪಕ. ಅವರು ಸಜ್ಜನರ, ಸಾಹಿತಿಗಳ, ವಿದ್ಯಾವಂತರ ಸ್ನೇಹ ಒಡನಾಟಗಳನ್ನು ತುಂಬ ಬಯಸುವವರು ಎಂದು ಆಗಲೇ ನಾನು ಕಂಡುಕೊಂಡೆ. ಅನಂತರದ ಈ ಎರಡು–ಮೂರು ದಶಕಗಳಲ್ಲಿ ನಾವು ಹಲವು ಸಲ ಒಬ್ಬರನ್ನೊಬ್ಬರು ಭೇಟಿಯಾಗಿದ್ದೇವೆ, ಸಭೆ ಸಮಾರಂಭಗಳಲ್ಲಿ, ರಸ್ತೆಗಳಲ್ಲಿ, ಮನೆಗಳಲ್ಲಿ, ಸಂಸಾರದ ವಿಷಯ ಮಾತಾಡಿದ್ದೇವೆ, ಸಾಹಿತ್ಯದ ವಿಷಯ ಮಾತಾಡಿದ್ದೇವೆ. ಹೀಗೆ ಮಾತಾಡುವಾಗಲೆಲ್ಲ ಅವರು ಕೇಳುತ್ತಿರುವವರಿಗೆ ಹಿತವಾಗುವಂತೆ ತುಂಬ ಹಾರ್ದಿಕವಾಗಿ, ಸ್ಫುಟವಾಗಿ, ಸರಸವಾಗಿ. ಸಸ್ಮಿತವಾಗಿ ಮಾತಾಡುವುದು ಅವರ ದೊಡ್ಡ ಗೆಲವು ಎಂದು ನನಗೆ ತೋರಿದೆ.

ರಾಮರಾಯರಿಗೆ ಜನ ಬೇಕು, ಸ್ನೇಹ ಬೇಕು, ಮಾತು ಬೇಕು. ಅವರು ಹಳೆಯ ಪೀಳಿಗೆಯ, ಎತ್ತರದ ನಿಲವಿನ, ಧೀರ ಗಂಭೀರ ವ್ಯಕ್ತಿತ್ವದ ಸುಂದರ ಮೂರ್ತಿ ; ಈಗ ವಿರಳವಾಗುತ್ತಿರುವ ತಳಿ ಇದು. ಅವರನ್ನು ನಾನು ಆಗಾಗ ಕಂಡು ಏನಾದರೂ ವಿಚಾರ ವಿನಿಮಯ ಮಾಡಿದ್ದು ಉಂಟು. ಒಂದೆರಡು ಸಂಗತಿಗಳು ನನ್ನ ನೆನಪಿನಲ್ಲಿ ಸುಳಿಯುತ್ತಿವೆ.

ಒಮ್ಮೆ ರಾಯರ ಒಂದು ಹೊಸ ಪುಸ್ತಕ ಪ್ರಕಟವಾಗಲಿತ್ತು. ಆ ವಿಷಯವನ್ನು ಅವರು ನನ್ನಲ್ಲಿ ತಿಳಿಸಿದರು. "ಇದರ ಬಿಡುಗಡೆ ಯಾವಾಗ ಇಟ್ಟುಕೊಳ್ಳುತ್ತೀರಿ ?" ಎಂದು ಕೇಳಿದೆ. ಅವರು ಕೂಡಲೇ "ಪುಸ್ತಕಗಳ ಬಿಡುಗಡೆಗೆ ಸಮಾರಂಭ ಏರ್ಪಡಿಸುವುದು ನನ್ನ ಪದ್ಧತಿಯಲ್ಲ ; ನಾನು ಯಾವಾಗಲೂ ಹಾಗೆ ಮಾಡಿಲ್ಲ" ಎಂದರು. ನನಗೆ ಆಶ್ಚರ್ಯವಾಯಿತು ; ಮೆಚ್ಚಿಕೆಯೂ ಹುಟ್ಟಿತು.

ಇನ್ನೊಮ್ಮೆ ಎಲ್ಲಿಯೋ ನನ್ನ ಒಂದು ಭಾಷಣ ನಡೆಯುವುದಿತ್ತು. ಅದು ಮೈಸೂರಿನ ಅರಮನೆಯ ಸಮೀಪದಲ್ಲಿ. ನಾನು ಭಾಷಣ ಆರಂಭಿಸಿದಾಗ, ಪರಿಮಿತ ಶ್ರೋತೃಗಳ ನಡುವೆ ರಾಮರಾಯರ ಎದ್ದು ಕಾಣುವ ಆಕೃತಿ ಗೋಚರಿಸಿತು. ಭಾಷಣ

ಮುಗಿದು, ಕಾರ್ಯಕ್ರಮ ಕೊನೆಗೊಂಡು ಎಲ್ಲರೂ ಹೊರಡಲಿದ್ದಾಗ, ನಾನು ರಾಯರನ್ನು "ನೀವೇಕೆ ಈ ಭಾಷಣ ಕೇಳುವ ಶ್ರಮ ತೆಗೆದುಕೊಂಡು ಇಲ್ಲಿಯವರೆಗೆ ಬಂದಿರಿ ?" ಎಂದು ಪ್ರಶ್ನಿಸಿದೆ. ಅವರು ಕೂಡಲೇ, "ನಿಮ್ಮ ಭಾಷಣ ಕೇಳೋಣವೆಂದೇ ಬಂದೆ" ಎಂದರು. ಮಾತು ತೀರ ಸಹಜವಾಗಿತ್ತು ; ಅದು ಬಾಯುಪಚಾರದ ಮಾತು ಎಂದು ಅನುಮಾನಿಸಲು ಕಾರಣವಿರಲಿಲ್ಲ.

ಮತ್ತೊಮ್ಮೆ, ತೀರ ಈಚೆಗೆ, ನನಗೆ ರಾಯರ ಕಡೆಯಿಂದ ಒಂದು ದೂರವಾಣಿ ಕರೆ ಬಂತು. ತಾವು ಹೊಸಕೋಟೆ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಬರೆಯುತ್ತಿರುವುದಾಗಿಯೂ, ಅದಕ್ಕೆ 'ಕರ್ಣಾಟಕ ಕವಿಚರಿತೆ'ಯಲ್ಲಿ ಬಂದಿರುವ ಮಾಹಿತಿಯಲ್ಲದೆ ಬೇರೆ ಸಾಹಿತ್ಯಿಕ ಮಾಹಿತಿ ಏನಾದರೂ ಉಂಟೇ, ತಿಳಿಸುವುದು ಸಾಧ್ಯವೇ ? ಎಂಬುದಾಗಿಯೂ ಆ ಮೂಲಕ ರಾಯರು ನನ್ನನ್ನು ಕೇಳಿದ್ದರು. ನಾನು ಮೂವತ್ತರ ದಶಕದಲ್ಲಿ 'ಕನ್ನಡ ನುಡಿ'ಪತ್ರಿಕೆಯಲ್ಲಿ ಭಾರತಿ ಸಂಪಂಗಿರಾಮಯ್ಯನವರನ್ನು ಕುರಿತು ದ. ಕೃ. ಭಾರದ್ವಾಜರು ಬರೆದ ವಿವರವಾದ ಲೇಖನವೊಂದು ಇರುವುದನ್ನು ಅವರ ಗಮನಕ್ಕೆ ತಂದೆ ; ಸಂಚಿಕೆ ನನ್ನಲ್ಲಿರುವುದನ್ನೂ ತಿಳಿಸಿದೆ. ಕೂಡಲೇ ಅವರು "ಲೇಖನದಿಂದ ವಿವರಗಳನ್ನು ಸಂಗ್ರಹಿಸಲು ನಿಮ್ಮ ಮನೆಗೆ ಬರುತ್ತಿದ್ದೇನೆ" ಎಂದರು. ನಾನು ತುರ್ತಾಗಿ ಎಲ್ಲಿಯೋ ಹೋಗುವುದಿತ್ತು ; "ಬಂದರೆ ಇನ್ನು ಒಂದು ಗಂಟೆ ಯಿಂದೊಳಗೆ ಬರಬೇಕಾಗುತ್ತದೆ, ನಾನು ಎಲ್ಲಿಗೋ ಹೋಗಬೇಕಾಗಿದೆ" ಎಂದೆ. ಅವರು "ಇನ್ನು ೨೦ ನಿಮಿಷದಿಂದೊಳಗೆ ನಿಮ್ಮ ಮನೆಯಲ್ಲಿರುತ್ತೇನೆ" ಎಂದರು. ಹಾಗೆಯೇ, ದೂರದ ಗೋಕುಲಂ ಬಡಾವಣೆಯಿಂದ ಕಾಲುನಡಗೆಯಲ್ಲಿ ವೇಗವಾಗಿ ನಡೆದು ಹೇಳಿದ ವೇಳೆಗೆ ನಮ್ಮ ಮನೆಗೆ ಬಂದೇ ಬಂದರು. "ಸ್ವಲ್ಪ ದೂರ ಓಡುತ್ತ ಬರಬೇಕಾಯಿತು" ಎಂದರು. ಹತ್ತು ನಿಮಿಷಗಳಲ್ಲಿ ಲೇಖನದಿಂದ ತಮಗೆ ಬೇಕಾದ ಮಾಹಿತಿ ಗುರುತಿಸಿ ಕೊಂಡು ಹೋದರು. ೮೦ರ ಹರಯದಲ್ಲಿ ೨೦ರ ಹರಯದ ಉತ್ಸಾಹ ಮುಖದಲ್ಲಿ ಚಿಮ್ಮುತ್ತಿತ್ತು.

ರಾಮರಾಯರಿಂದ ಅವರ ಹೆಸರಿನ ಸಮೇತನಹಳ್ಳಿಗೆ ಒಂದು ನೆಲೆ, ಒಂದು ಪ್ರಸಿದ್ಧಿ. ಹುಟ್ಟಿದ ಹಳ್ಳಿಯನ್ನು ಬೆಳಗಿದ ಹಿರಿಯರು ಅವರು. ಈ ಹಳ್ಳಿ ಹೊಸ ಕೋಟೆ ತಾಲ್ಲೂಕಿನ ಒಂದು ಗ್ರಾಮವೆಂದು ಈಚೆಗೆ ತಾನೇ ನನಗೆ ತಿಳಿಯಿತು. ಅವರು ಸಿದ್ಧಪಡಿಸಿದ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ನಾನು ನೋಡಿಲ್ಲ. ತಾಲ್ಲೂಕಿನ ಸಾಂಸ್ಕೃತಿಕ ಇತಿಹಾಸದ ಒಂದು ಹೃದಯಂಗಮ ಚಿತ್ರ ಅಲ್ಲಿ ವರ್ಣರಂಜಿತವಾಗಿ ಮೂಡಿರುತ್ತದೆ ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ರಾಮರಾಯರ ಸದ್ದಿಲ್ಲದ ಸಾಹಿತ್ಯ ಸೇವೆಗೆ ತಕ್ಕ ಪ್ರಮಾಣದಲ್ಲಿ ಮಾನ ಸಮ್ಮಾನಗಳು ಅವರಿಗೆ ಸಂದಿವೆ ಎಂದು ನಾನು ಹೇಳಲಾರೆ. ಅಲ್ಪ ಸ್ವಲ್ಪ ಆದರಣೆಯನ್ನೇ ಅವರು ಅತಿಶಯವೆಂದು ಭಾವಿಸಿ ತಮ್ಮ ಕೃತಜ್ಞತೆಯನ್ನು ಪ್ರಕಟಿಸಿರುವುದುಂಟು. ಕರ್ನಾಟಕ ಸರ್ಕಾರ ಅವರ ಸಾಹಿತ್ಯ ಸಾಧನೆಯನ್ನು ಪರಿಗಣಿಸಿ ಅವರಿಗೆ ಐದುನೂರು ರೂಪಾಯಿ

ಗಳ ಮಾಸಿಕ ಗೌರವ ವೇತನ ಕೊಡುತ್ತಿರುವುದಕ್ಕೆ ಅವರು ತಮ್ಮ ಕೃತಜ್ಞತೆಯನ್ನು ಪರಿಪರಿಯಾಗಿ ವ್ಯಕ್ತಮಾಡಿದ್ದಾರೆ. ಅವರ ವಿನಯ ಸ್ವಭಾವಕ್ಕೆ ಅದು ಸಹಜವಾದ್ದು ; ಆದರೆ ಇಂತಹ ಸಾಹಿತಿಯೊಬ್ಬರು ತನ್ನ ನೆಲದಲ್ಲಿರುತ್ತಿದ್ದು, ಹೀಗೆ ಅಕ್ಷರವಿದ್ಯೆಯನ್ನು, ಜೀವನ ಸಂಸ್ಕಾರ ಸಾಧಕವಾದ ಸಾಹಿತ್ಯವನ್ನು ಪ್ರಸಾರ ಮಾಡುತ್ತಿದ್ದಾರಲ್ಲ ಎಂಬು ದಾಗಿ ರಾಜ್ಯಸರ್ಕಾರ ತಾನೇ ಹೆಮ್ಮೆ ಪಡಬೇಕಾದುದು ನ್ಯಾಯ ಎಂದು ಹೇಳಬೇಕಾಗಿದೆ. ಅವರ ದೀರ್ಘಕಾಲದ ಸಾಹಿತ್ಯಸೇವೆಗೆ, ಸದಭಿರುಚಿಯ ಕೃತಿರಚನೆಯ ಕೈಂಕರ್ಯಕ್ಕೆ, ಅವ ರಿಗೆ ಇನ್ನೂ ವಿಶಾಲವ್ಯಾಪ್ತಿಯ ಸಮ್ಮೇಳನಗಳ ಅಧ್ಯಕ್ಷತೆ ದೊರೆಯಬೇಕು, ವಿದ್ಯಾ ಸಂಸ್ಥೆಗಳ ಗೌರವ ಪ್ರಶಸ್ತಿಗಳು ಸಲ್ಲಬೇಕು. ಆದರೆ ಎಲ್ಲಿಯವರೆಗೆ ಪದವಿ, ಅಂತಸ್ತು, ಅಧಿಕಾರ ಸ್ಥಾನ, ಜಾತಿ ಪಂಗಡಗಳ ಹೆಸರಿನಲ್ಲಿ ಮನ್ನಣೆ ಮುಂತಾದ ಮಾಪನಸೂತ್ರ ಗಳೇ ಮುಖ್ಯವಾಗಿರುತ್ತವೆಯೋ ಅಲ್ಲಿಯವರೆಗೆ ಅವು ದೊರೆಯುವುದಿಲ್ಲ, ಸಲ್ಲುವುದಿಲ್ಲ ಎನ್ನುವುದೂ ಸಿದ್ಧವಾದ ವಿಷಯವೇ ಆಗಿದೆ.

ಸಮೇತನಹಳ್ಳಿ ರಾಮರಾಯರು ಸಂಪನ್ನವೂ ಸಮೃದ್ಧವೂ ಆದ ಸಾಹಿತ್ಯ ಸೇವೆ ಯಲ್ಲಿ ತನ್ನನ್ನು ನಿರಂತರವೂ ತೊಡಗಿಸಿಕೊಂಡಿರುವ ಒಬ್ಬ ಕಾಯಕಜೀವಿ. ಅವರು ಸಾಹಿತ್ಯಸಾಧಕರೂ ಹೌದು ; ಸಿದ್ಧಿಪ್ರಾಪ್ತರೂ ಹೌದು. ಲಲಿತ ಸಾಹಿತ್ಯದ ಹಲವು ಮುಖಗಳಲ್ಲಿ ಅವರು ತಮ್ಮ ಪ್ರಾಗಲ್ಭ್ಯವನ್ನೂ ನೈಪುಣ್ಯವನ್ನೂ ಪ್ರಕಟಿಸಿದ್ದಾರೆ. ಕತೆ ಕಾದಂಬರಿ ಕವಿತೆ ಕಾವ್ಯ ನಾಟಕ ಅನುವಾದ ಜೀವನಚರಿತ್ರೆ ಆತ್ಮಕಥೆ ಹೀಗೆ ಹಲವು ಕವಲುಗಳಲ್ಲಿ ಅವರ ಕೃಷಿ ಸಾಗಿದೆ. ನಾಟಕವೂ ಕಾದಂಬರಿಯೂ ಅವರಿಗೆ ಆದ್ಯತೆಯ ಕ್ಷೇತ್ರಗಳು ; ಆಢ್ಯತೆಯ ಕ್ಷೇತ್ರಗಳೂ ಅವೇ. ಇಲ್ಲಿ ಅವರು ವಿಶೇಷವಾಗಿ ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಚರಿತ್ರಪುರುಷರನ್ನೂ ಚಾರಿತ್ರಿಕ ಸಂದರ್ಭಗಳನ್ನೂ ಗಮನಿ ಸಿದ್ದಾರೆ. ವೈದಿಕ ಸಾಹಿತ್ಯದ, ಭಾರತ ಭಾಗವತಗಳ, ಮಹಾಕಾವ್ಯಗಳ ಕಥಾವಸ್ತುವನ್ನೂ ಆಶ್ರಯಿಸಿ ಅವರು ತಕ್ಕ ವಿಸ್ತಾರದ ಹಲವು ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯ ರಚನೆಗೆ ದೃಢವೂ ವಿಶಾಲವೂ ಆದ ಭಿತ್ತಿಯಿದೆ ; ಅವರು ಗಾಢವಾದ ಪರಿಶ್ರಮ, ಗಹನವಾದ ಚಿಂತನ, ಉಜ್ಜ್ವಲವಾದ ಕಲ್ಪನೆ ಇವುಗಳ ಬೆಂಬಲದಿಂದ ಆ ಭಿತ್ತಿಗಳ ಮೇಲೆ ಕಲಾತ್ಮಕ ಮೌಲ್ಯದ ವರ್ಣರಂಜಿತ ಚಿತ್ರಗಳನ್ನು ರೇಖಿಸಿದ್ದಾರೆ. ಈ ರೇಖೆಗಳು ಮಾಸದ, ಮಸುಳದ ಸುಂದರ ಸ್ಫುಟವಾದ ರೇಖೆಗಳಾಗಿದ್ದು, ಇವಕ್ಕೆಂದು ಬಳಸಿರುವ ಭಾಷೆ ಶೈಲಿಗಳಲ್ಲಿ ಲಾಲಿತ್ಯ ಮಾಧುರ್ಯಗಳ, ಪ್ರೌಢಿಮೆ ಸರಳತೆಗಳ ಮಧುರ ಸಂಯೋ ಜನೆಯಿದೆ. ನನ್ನಂತಹ ಶಾಸ್ತ್ರನಿಷ್ಠುರರಿಗೆ, ಆರೋಚಿಗಳಿಗೆ ಹಲ ಕೆಲವಂಶಗಳಲ್ಲಿ ಕುಂದು ಕೊರತೆಗಳು ಕಾಣುವುದು ಸಹಜವೇ. ಆದರೆ ಸಾಹಿತ್ಯಪ್ರೇಮಿಗಳಾದ ಕನ್ನಡ ಜನರ ವಾಚನಾಭಿರುಚಿಯನ್ನು ಉತ್ತೇಜಿಸುವಲ್ಲಿ ಅವರ ಭಾವದ ಹಸಿವನ್ನು ಹಿಂಗಿಸುವಲ್ಲಿ ಇವರ ರಚನೆಗಳು ಧಾರಾಳವಾಗಿ ಕೃತಕೃತ್ಯಗಳಾಗಿವೆ.

ನನ್ನ ಒಂದು ಕುತೂಹಲಕ್ಕೆ, ಈಚೆಗೆ ಅವರು ಅನುವಾದಮಾಡಿರುವ ಮೊಹಿ ಬ್ಬುಲ್ ಹಸನ್ ಅವರ ಟೀಪೂ ಸುಲ್ತಾನನ ಇತಿಹಾಸ ಕುರಿತ ಕೃತಿಯನ್ನು ಓದಬೇಕಾಗಿ

ಬಂತು. ಈ ದೊಡ್ಡ ಇಂಗ್ಲಿಷ್ ಗದ್ಯಗ್ರಂಥವನ್ನು, ಸಮೃದ್ಧ ಐತಿಹಾಸಿಕ ವಿವರಗಳಿಂದ ತುಂಬಿರುವುದನ್ನು, ರಾಮರಾಯರು ತುಂಬ ಶ್ರಮವಹಿಸಿ ಅನುವಾದಿಸಿದ್ದಾರೆ ; ಅನುವಾದದ ಭಾಷೆ ಸರಳ, ನೇರ ಹಾಗೂ ಶುದ್ಧ ಆಗಿದ್ದು, ಅನುವಾದಕ್ಕೆ ಅವರು ಸಾಕಷ್ಟು ಕಾಲ ತಾಳ್ಮೆಯಿಂದ ದುಡಿದಿರಬೇಕು ಎಂದು ನನಗೆ ಕಂಡಿತು.

ಶ್ರೀಮಾನ್ ರಾಮರಾಯರು ಜೀವನದಲ್ಲಿ ಸಾಕಷ್ಟು ಕಷ್ಟನಷ್ಟಗಳನ್ನು ಅನುಭವಿಸಿರಬಹುದು ; ಸೂಕ್ಷ್ಮಸಂವೇದನೆಯ ಬುದ್ಧಿಜೀವಿಗಳಲ್ಲಿ ಆ ಅನುಭವ ತೀವ್ರವಾಗಿಯೂ ಇರುವುದು ಸ್ವಾಭಾವಿಕ. ಆದರೆ ಅವರು ಹಲವು ಅಗ್ನಿಪರೀಕ್ಷೆಗಳಲ್ಲಿ ಗೆದ್ದಿದ್ದಾರೆಂದೇ ನನ್ನ ತಿಳಿವಳಿಕೆ. ಅವರ ರಚನೆಗಳು, ಅವರ ಅಧ್ಯಾತ್ಮಸಂತತಿಯ ಚೆಲುವಿನ ಕುಡಿಗಳು, ಅವರ ಅನಂತರವೂ ಅವರ ಹೆಸರು ಹೇಳತಕ್ಕವು, ಹೆಸರು ನಿಲ್ಲಿಸತಕ್ಕವು. ಈಗಾಗಲೇ ಹಲವರು ಗಣ್ಯಸಾಹಿತಿಗಳು ಅದನ್ನು ಮನಗಂಡಿದ್ದಾರೆ ; ಮನವಾರೆ ಮೆಚ್ಚಿ ಕೀರ್ತಿಸಿದ್ದಾರೆ. ಇವರಲ್ಲಿ ಹಳೆಯ ಪೀಳಿಗೆಯವರಲ್ಲಿ ಮೂರ್ಧನ್ಯಪ್ರಾಯರಿದ್ದಾರೆ, ಹೊಸಪೀಳಿಗೆಯ ಶಿಖರ ವ್ಯಕ್ತಿಗಳಿದ್ದಾರೆ. ಇವರಿಗೆಲ್ಲ ರಚನೆಗಳು ಸೊಗಸಿವೆ ಎನ್ನುವುದೇ ರಾಯರ ಸಾಹಿತ್ಯದ ಸವಿ ಸತ್ತ್ವಗಳ ಉತ್ತಮಿಕೆಗೆ ಸಾಕ್ಷ್ಯವಾಗಿದೆ. ಪ್ರೋತ್ಸಾಹಕ್ಕೆಂದು ಹೊಗಳಿ ಸೈ ಸೈ ಎನ್ನುವರು ಮಾತ್ರವಲ್ಲ, ಹಿಕ್ಕಿ ಹಿಂಜಿ ಅಳೆದು ತೂಗಿ ಬೆಲೆ ಕಟ್ಟುವವರು ಸಹ ಒಪ್ಪಿದ್ದಾರೆ ಎಂದ ಮೇಲೆ, ರಾಯರು ಅಲ್ಲೊಂದು ಇಲ್ಲೊಂದು ಅಡ್ಡಮಾತು ಹಿಡಿದು ಬೇಸರಿಸುವ ಅಗತ್ಯವಿಲ್ಲ.

ಈ ಮುಪ್ಪಿನಲ್ಲಿಯೂ ರಾಮರಾಯರು ಬೆನ್ನೆ ಮುರಿಯದ, ಸತ್ತ್ವಯುತವಾದ, ಪಾಙ್ಕ್ತವಾದ, ಉತ್ಸಾಹ ಸ್ಥಾಯಿಯ ದೀರ್ಘಪ್ರಮಾಣದ ಕೆಲವು ಕಾದಂಬರಿಗಳನ್ನು ರಚಿಸುತ್ತಿದ್ದಾರೆ ಎನ್ನುವುದನ್ನು ನೋಡಿದರೆ, ಯಾರಿಗಾದರೂ ಅವರ ಕ್ರಿಯಾಸಿದ್ಧಿಯ ಸತ್ತ್ವ ಯಾವ ನೆಲೆಯದು ಎಂಬುದು ತಿಳಿಯುತ್ತದೆ. ಸಾಹಿತ್ಯಲೋಕದ ಸೋಜಿಗದ ಹೊಳಲಿನ ಸವಾರಿಯನ್ನು ಸಮೇತನಹಳ್ಳಿ ರಾಮರಾಯರು ಇನ್ನೂ ಹಲಗಾಲ ವೈಖರಿಯಿಂದ ಸಾಗಿಸಲಿ ಎಂಬುದಾಗಿ ನಾನು ಹಾರೈಸುತ್ತೇನೆ.

ನೀವೇ ಸ್ವಂತ ಶೈಲಿಯನ್ನು ಸೃಷ್ಟಿ ಮಾಡಿಕೊಂಡು ಬರೆದ ನಿಮ್ಮ ನಾಟಕಗಳು ಮತ್ತು ವಿಸ್ತಾರವಾದ ನಿಮ್ಮ ಕಾವ್ಯ ಇವು ನಿಮ್ಮನ್ನು ತುಂಬ ಸಮರ್ಥರನ್ನಾಗಿ ಚಿತ್ರಿಸಿವೆ. ನಿಮ್ಮ ಸಾಹಿತ್ಯ ಕೃಷಿ ಬೆಳೆದು ಯೋಗ್ಯವಾದ ಮನ್ನಣೆ ದೊರಕಲೆಂದು ಹಾರೈಸುತ್ತೇನೆ.

೨೮–೩–೭೭ ಜಿ. ವೆಂಕಟಸುಬ್ಬಯ್ಯ

ನಿರ್ಮಲ ಸ್ನೇಹ

ಸಿ. ಕೆ. ನಾಗರಾಜ ರಾವ್

ನನ್ನ ಹಾಗೂ ಶ್ರೀ ಸಮೇತನಹಳ್ಳಿಯವರ ಸ್ನೇಹಕ್ಕೆ ಸುವರ್ಣ ಮಹೋತ್ಸವ ಸಂದಿದೆ. ಈ ಶತಮಾನದ ಐದನೆಯ ದಶಕದ ನಡುವಿನಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಪ್ರಾಂತ ಸಮಿತಿಯ ಗೌರವ ಕಾರ್ಯದರ್ಶಿಯಾಗಿದ್ದ ಕಾಲದಿಂದ ನನ್ನ ಪರಿಷತ್ತಿನ ಸಂಬಂಧ ಹೆಚ್ಚು ಹೆಚ್ಚು ಗಾಢವಾಗ ತೊಡಗಿತು. ಅಂತೆಯೇ ನಾಡಿನ ಶ್ರೇಷ್ಠ ಬರಹಗಾರರ ನಿಕಟ ಸಂಪರ್ಕ ಸ್ನೇಹಗಳು ನನಗೆ ಲಭ್ಯವಾದವು. ಅಂತಹ ಸ್ನೇಹದಲ್ಲಿ ಶ್ರೀ ಸಮೇತನಹಳ್ಳಿಯವರದು ಒಂದು. ನನಗೆ ಅವರ ಪರಿಚಯವಾದದ್ದು ಒಳ್ಳೆಯ ನಾಟಕಕಾರರೆಂದು. ಕನ್ನಡ ನಾಟಕಕಾರರಲ್ಲಿ ಕೆಲವು ವೈಶಿಷ್ಟ್ಯಗಳು ಇವೆ. ನಾನು ನನ್ನ ಪ್ರೌಢಶಾಲಾ ವ್ಯಾಸಂಗ ಕಾಲದಿಂದ ವಿಲಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡವನು. ಸಂಪ್ರದಾಯಬದ್ಧ ವೃತ್ತಿರಂಗನಾಟಕಗಳಿಗಿಂತ ಭಿನ್ನವಾದ ಶೈಲಿಯಲ್ಲಿ ನಾಟಕ ರಚಿಸಿದವರಲ್ಲಿ ಶ್ರೀ ಟಿ. ಪಿ. ಕೈಲಾಸಂ ಒಬ್ಬರು. ಶ್ರೀ ಸಂಸ ಇನ್ನೊಬ್ಬರು. ಕೈಲಾಸಂರವರು ಆಧುನಿಕ ಸಾಮಾಜಿಕ ವಿಚಾರಧಾರೆಗೆ ದಾರಿ ಮಾಡಿಕೊಟ್ಟರೆ ಸಂಸರು ಮೈಸೂರು ರಾಜಮನೆತನದ ಒಳಗನ್ನು ಹೊರತರಲು ಪ್ರಯತ್ನಪಟ್ಟವರು. ವೃತ್ತಿ ರಂಗನಾಟಕಗಳಲ್ಲಿ ಭಾಷಾಶೈಲಿಯಲ್ಲಿ ವೈವಿಧ್ಯವಿರಲಿಲ್ಲ ಎಂದು ಹೇಳಿದವರುಂಟು. ಆದಕ್ಕೆ ಕಾರಣ ನಾಟಕದ ವಸ್ತು ಪುರಾಣವಿರಲಿ, ಇತಿಹಾಸವಿರಲಿ, ಸಾಮಾಜಿಕವೇ ಇರಲಿ ಶೈಲಿಯಲ್ಲಿ ಭಿನ್ನ ಸ್ವರೂಪವಿರಲಿಲ್ಲವೆಂಬುದು. ನನಗೆ ಕೈಲಾಸಂ ಸಂಸ ಇಬ್ಬರ ನಾಟಕಗಳೂ ತುಂಬ ಪ್ರಿಯ. ಅಂದರೆ ಕೈಲಾಸಂರವರ ಮನೆಮಾತಿನ ಶೈಲಿ, ಸಂಸರದೇ ಆದ ವಿಶಿಷ್ಟ ಶೈಲಿ. ನಾನು ಅವರ ವಿಗಡ ವಿಕ್ರಮರಾಯ ಐತಿಹಾಸಿಕ ನಾಟಕವನ್ನು ರಂಗಕ್ಕೆ ತಂದು ಅನೇಕ ಪ್ರದರ್ಶನಗಳನ್ನು ನೀಡಿ ಪ್ರೇಕ್ಷಕರ ಒಲವನ್ನು ಸಂಪಾದಿಸಿದ್ದವನು. ಶ್ರೀ ಸಮೇತನಹಳ್ಳಿಯವರ ಶೈಲಿಯಲ್ಲಿ ಸಂಸರ ಶೈಲಿಯ ಛಾಯೆ ಇದ್ದುದು ನನ್ನ ಆಸಕ್ತಿಗೆ ಕಾರಣವೆಂದರೆ ತಪ್ಪಾಗಲಿಕ್ಕಿಲ್ಲ. ಅವರು ಸರ್ಕಾರಿ ಉದ್ಯೋಗದಲ್ಲಿ ಇದ್ದುದರಿಂದ ಪದೇ ಪದೇ ಸೇರುವ ಸಂದರ್ಭಗಳು ದೂರವಾದವು. ಆಗೊಮ್ಮೆ, ಈಗೊಮ್ಮೆ ಭೇಟಿಯಾದಾಗ ಆತ್ಮೀಯತೆಗೆ ಹೊಸ ಲೇಪ ತನ್ನ ಪಾಡಿಗೆ ತಾನು ರೂಪಗೊಳ್ಳುತ್ತಿತ್ತು. ಆದರೆ ಅದಕ್ಕೆ ನಿಖರವಾದ ಶಾಶ್ವತತ್ವ ಬಂದುದು ವಿಶಿಷ್ಟವಾದುದು.

ಸಮೇತನಹಳ್ಳಿಯವರು ಹೊಯ್ಸಳರ ಬಗೆಗೆ ಆಸಕ್ತಿ ತಳೆದವರು. ಇತಿಹಾಸವನ್ನು ಅಭ್ಯಾಸಮಾಡಿದವರು. ನನಗೂ ಆ ಗುಣ ಬಂತು. ನನಗಿಂತ ಮುಂಚೆ ಹೊಯ್ಸಳರನ್ನು ಕುರಿತು ಬರೆದವರು ಶ್ರೀಗಳಾದ ಕೆ. ವಿ. ಅಯ್ಯರ್, ಸಮೇತನಹಳ್ಳಿಯವರು,

ಮ. ನ, ಮೂರ್ತಿ, ತರಾಸು ಅವರುಗಳು.ಅಯ್ಯರ್ ಅವರ ಕೃತಿಯನ್ನು ನಾನು ಓದಿದ್ದೆ. ಉಳಿದ ಕೃತಿಗಳ ಬಗೆಗೆ ಪರಿಚಯ ಲೇಖನಗಳನ್ನೂ ಓದಿದ್ದೆ. ಶಾನ್ತಲ ದೇವಿಯ ಬಗೆಗೆ ವ್ಯಾಪಕವಾದ ಸಂಶೋಧನೆಗೆ ನಾನು ತೊಡಗಿ ಅನೇಕ ಸ್ಥಳಗಳನ್ನು ನೋಡಬೇಕಾಗಿ ಬಂತು. ಮಂಡ್ಯ ಜಿಲ್ಲೆಯ ತೊಣ್ಣೂರಿಗೆ ಹೋಗಬೇಕಾಯಿತು. ಆಗ ಸಮೇತನಹಳ್ಳಿ ಯವರು ಪಾಂಡವಪುರದಲ್ಲಿ ಇದ್ದರು. ಅವರ ನೆರವು ಸಿಗುತ್ತದೆ ಎಂದು ಯೋಚಿಸಿ ನಾನು ನೇರವಾಗಿ ಪಾಂಡವಪುರಕ್ಕೆ ಹೋಗಿ ಅವರ ಮನೆ ಪತ್ತೆ ಮಾಡಿ ಬಾಗಿಲು ಬಡಿದೆ. ಮುಂಚೆ ತಿಳಿಸಿರಲಿಲ್ಲ. ಸಂತಸದ ಸ್ವಾಗತ ಸಿಕ್ಕಿತು. ಆತ್ಮೀಯ ಆತಿಥ್ಯವೂ ಸಾಗಿತು. ಪಾಂಡವಪುರದ ಬಳಿ ಎ. ಎನ್. ಮೂರ್ತಿರಾಯರ 'ಆಷಾಢ ಭೂತಿ' ಚಿತ್ರೀಕರಣ (ಸುಬ್ಬಾಶಾಸ್ತ್ರಿ) ವಾದ ಕಾರಣಗಳನ್ನೂ ಸಮೇತನಹಳ್ಳಿ ತೋರಿಸಿದರು. ತೊಣ್ಣೂರು ಪ್ರಯಾಣದ ಬಗೆಗೆ ಮಾತನಾಡಿದಾಗ ಇಲ್ಲಿ ಕಸಬ ರೆವಿನ್ಯೂ ಇನ್‌ಸ್ಪೆಕ್ಟರ್ ಮೂರ್ತಿ ಇದಾರೆ. ಅವರನ್ನು ಕಾಣೋಣ ಎಂದರು. ಇಬ್ಬರೂ ಅವರ ಮನೆಗೆ ಹೋದೆವು. ಅವರು ನನಗೆ ಪರಿಚಿತರಾದ ಮೂರ್ತಿ ಎಂದು ತಿಳಿದಾಗ ಆದ ಆನಂದ ಅಷ್ಟಿಷ್ಟಲ್ಲ. ಮೂರ್ತಿಗೂ ಸಂತಸವಾಯಿತು. ಅವರು ಮಳವಳ್ಳಿಯಲ್ಲಿ ಪಂಚಾಯ್ತಿ ಗುಮಾಸ್ತೆ ಆಗಿ ದ್ದರು. ನಾನು ಪಂಚಾಯ್ತಿಗಳಿಗೆ ಬಾಲಪ್ರಪಂಚ ಮಾರಲು ಹೋದಾಗ, ಅವರ ಪರಿಚಯ ಆಗಿತ್ತು. ಅವರ ಮಾವ ಅವರೆಲ್ಲ ನಮಗೆ ಆತ್ಮೀಯರು. ಮಾರನೆಯ ದಿವಸ ನಾನು, ಮೂರ್ತಿ ಇಬ್ಬರೂ ಸೈಕಲ್ ಮೇಲೆ ತೊಣ್ಣೂರಿಗೆ ಹೋಗಿ ಬಂದೆವು. ಪಾಂಡವಪುರಕ್ಕೆ ಆರು ಮೈಲಿ ತೊಣ್ಣೂರು. ಅವರಿದ್ದುದರಿಂದ ತೊಣ್ಣೂರಿನ ಅನೇಕ ಹಿರಿಯರೊಡನೆ ಪ್ರಚಾರದಲ್ಲಿದ್ದ ಸ್ಥಳ ಪುರಾಣ ಐತಿಹ್ಯಗಳ ವಿವರ ಸುಲಭವಾಗಿ ತಿಳಿಯಿತು.

ರಾತ್ರಿ ತೊಣ್ಣೂರು ಪ್ರವಾಸದ ಬಗೆಗೆ ಸಮೇತನಹಳ್ಳಿಯವರಿಗೆ ವಿವರಿಸಿದೆ. "ನಾನು ಬರೆದಿರುವ ಸವತಿ ಗಂಧವಾರಣೆ, ನಾಟ್ಯ ಮಂದಾರ, ತಲಕಾಡುಗೊಂಡ ಮೊದ ಲಾದುವನ್ನು ಕೊಡುತ್ತೇನೆ. ಓದಿ ನಿಮಗೆ ಅದೂ ಸಹಾಯಕ್ಕೆ ಬರಬಹುದು" ಎಂಬ ಔದಾರ್ಯವನ್ನೂ ಅವರು ತೋರಿದರು. ಆಗ ನಾನು ಹೇಳಿದೆ. "ನಾನು ಅಯ್ಯರ್‌ರ ಶಾಂತಲಾ ಓದಿದ್ದೇನೆ. ನಾನು ಬರೆಯಲೆಳಿಸಿರುವ ಕೃತಿ ಮುಗಿಯುವವರೆಗೆ ಉಳಿದ ನಿಮ್ಮ ಕೃತಿಗಳನ್ನು ಓದಬಾರದೆಂದು ಮಾಡಿದ್ದೇನೆ, ಕಾರಣ ಅವುಗಳ ಪ್ರಭಾವ ನನ್ನ ಮೇಲೆ ಆಗಬಾರದು" ಎಂದೆ. ಮೂರನೆಯ ದಿನ ಆತ್ಮೀಯ ಬೀಳ್ಕೊಡಿಗೆ ನಡೆ ಯಿತು. ಆಮೇಲೆ ನನ್ನ ಕಾದಂಬರಿ 'ಪಟ್ಟಮಹಾದೇವಿ ಶಾನ್ತಲದೇವಿ' ಪ್ರಕಟವಾದ ಮೇಲೆ ಮೈಸೂರಿಗೆ ಹೋಗಿ ಅವರ ಮನೆ ಬಾಗಿಲು ತಟ್ಟಿದೆ. ಒಳಗಿನಿಂದ 'ಯಾರು ?' ಎಂಬ ರಾಮರಾಮರ ಧ್ವನಿ ನನಗೆ ಸಮಾಧಾನ ತಂದಿತು. ನಾನು ಹೆಸರು ಹೇಳಿದೆ. "ಬನ್ನಿ ಬನ್ನಿ ನಾನು ಊಟಕ್ಕೆ ಕೂತು ಬಿಟ್ಟಿದ್ದೇನೆ. ಜೊತೆಗೆ ಬನ್ನಿ"ಎಂಬ ಧ್ವನಿ ಬಂತು, ಅವರ ಶ್ರೀಮತಿಯರು ಬಾಗಿಲು ತೆಗೆದರು. ಕೈಕಾಲು ತೊಳೆದು ಅವರೊಂದಿಗೆ ಊಟಕ್ಕೆ ಸೇರಿದೆ. ನನ್ನ ಕಾದಂಬರಿ ಕೊಟ್ಟೆ. ತುಂಬ ಸಂತಸದಿಂದ ಅದನ್ನು ಸ್ವೀಕರಿಸಿದರು. ಅವರ ಪುಸ್ತಕಗಳನ್ನೂ ಕೊಟ್ಟರು. ನಂತರದ ನಮ್ಮ ಬರವಣಿಗೆ ಒಬ್ಬರಿಗೊಬ್ಬರು ಕೊಡುವ

ಸಂಪ್ರದಾಯ ಆತ್ಮೀಯತೆಯ ಫಲವಾಗಿ ರೂಪಗೊಂಡಿದೆ. ಪ್ರಚಾರ ಪ್ರದರ್ಶನದಲ್ಲಿ ಆಡಂಬರವಿಲ್ಲದ ಆತ್ಮೀಯತೆ ಅದು ಎಂಬುದು ನನ್ನ ಭಾವನೆ. ನಮ್ಮ ಅವರ ವಿಚಾರ ಧಾರೆಯಲ್ಲಿ ಭಾವಭಿನ್ನತೆ ಇರಬಹುದು. ಅದು ಚರ್ಚೆಯೂ ಆಗಿರಬಹುದು. ಆದರೆ ಅದು ಕೇವಲ ಸೀಮಿತ. ಮಾನವೀಯ ಆತ್ಮೀಯತೆ ಗಟ್ಟಿ ನಿಲುವನ್ನು ತಾಳಿದೆ.

ಈಚೆಗೆ ನನ್ನ ಆರೋಗ್ಯಕೆಟ್ಟು ಹದಗೆಟ್ಟಿದೆ ಎಂದು ತಿಳಿದು ಮನೆಗೆ ಬಂದು ವಿಚಾರಿಸಿಕೊಂಡು ಹೋದರು. ನಮ್ಮ ಸ್ನೇಹ ಸುಭದ್ರ. ಏಕೆಂದರೆ ಮನಸ್ಸು ನಿರ್ಮಲ.

ಇಷ್ಟು ವರ್ಷಗಳವರೆಗೆ ನೀವು ಮಾಡಿದ ಸರಸ್ವತಿಯ ಆರಾಧನೆಯ ಫಲವಾಗಿ ಈ'ಶಾಕುಂತಲಾ' ಮೂಡಿಬಂದಿದೆ. ವಾಕ್ಯರಚನೆಯಲ್ಲಿ ವಿವಿಧ ಭಾವಗಳ ತೀವ್ರತೆ ಸ್ಫುಟವಾಗಿದೆ. ಸಹೃದಯರನ್ನು ತಲ್ಲೀನಗೊಳಿಸುವ ಸಂದರ್ಭಗಳನ್ನು ಬಹಳ ಜಾಣ್ಮೆಯಿಂದ ಚಿತ್ರಿಸಿ, ಓದುಗರ ಮನಸ್ಸನ್ನು ಸೆರೆಹಿಡಿಯುವ ಶಕ್ತಿ ನಿಮ್ಮ ಬರವಣಿಗೆಯಲ್ಲಿ ಪ್ರಭಾವ ಶಾಲಿಯಾಗಿ ಮೂಡಿದೆ. ಕುವೆಂಪು ಅವರ ಶೈಲಿಯ ಅನುಕರಣೆ ಸ್ಪಷ್ಟವಾಗಿದ್ದರೂ ಅವರ ಗ್ರಂಥಕ್ಕೆ ಸರಿಮಿಗಿಲೆನಿಸುವ ಅರ್ಹತೆ ಇದರಲ್ಲುಂಟು. ಮಧುರವಾದ ಭಾವಾಭಿವ್ಯಕ್ತಿ ಮೇಲ್ಮಟ್ಟದಲ್ಲಿದೆ. ಇದಕ್ಕಾಗಿ ಹೃತ್ಪೂರ್ವಕ ಅಭಿನಂದನೆಗಳು.

೨೫-೮-೭೭

ಎಸ್. ರಂಗನಾಥಶರ್ಮ

ಸಮೇತನಹಳ್ಳಿ ರಾಮರಾಯರು

ಸೀತಾರಾಮು ಜಾಗೀರ್‌ದಾರ್

ನಾನು ಬಿ. ಎ. ಓದುತ್ತಿದ್ದಾಗ್ಗೆ ದಿವಂಗತ ಕೆ. ವಿ. ಅಯ್ಯರ್ ಅವರ ಐತಿಹಾಸಿಕ ಕಾದಂಬರಿ 'ಶಾಂತಲಾ' ಪಠ್ಯೇತರ ಪುಸ್ತಕವನ್ನಾಗಿ ಓದಬೇಕಿತ್ತು. ಅದನ್ನೋದಿ ಚಿಕ್ಕ ವಯಸ್ಸಿನಲ್ಲಿ ಪಡಬಹುದಾದ ಆನಂದವನ್ನು ಪಟ್ಟಿದ್ದೆ. ಅನಂತರ ಒಂದು ದಿನ 'ಸವತಿ ಗಂಧವಾರಣೆ' ಓದಲು ದೊರೆಯಿತು. ಇದನ್ನೂ ಓದಿದೆ. ಇನ್ನೊಂದು ರೀತಿಯಲ್ಲಿ ಖುಷಿಪಟ್ಟೆ. ವಸ್ತು ಒಂದೇ ಆದರೂ ಎರಡೂ ಬೇರೆ ಬೇರೆ. ತಂದ ನೂಲು ಒಂದೇ ಆದರೂ ಸೀರೆಗಳನ್ನು ನೆಯ್ದಾಗ ಕಲಾಕಾರನ ಚತುರತೆಯಲ್ಲಿ ಒಂದೊಂದೂ ಒಂದು ತೆರ. ಇನ್ನು ನೇಕಾರರೇ ಬೇರೆ ಆದಾಗ ಹೂಬಾಹೂಬಿತನ ಕಡಿಮೆಯೆ. ಎರಡರ ವಸ್ತು ಒಂದೇ ಆದರೂ ಮೊದಲಿನದರಲ್ಲಿ ಕಾಲ್ಪನಿಕತೆ ಹೆಚ್ಚು; ಎರಡನೆಯದರಲ್ಲಿ ಐತಿಹಾಸಿಕತೆಯ ಕಸು ಹೆಚ್ಚು. ಒಂದೇ ವಸ್ತುವಾದರೂ ಪ್ರತಿಯೊಂದಕ್ಕೂ ತನ್ನದೇ ಆದ ಚುಂಬಕ ಶಕ್ತಿ ಇರುತ್ತದೆ. ಅದ್ಭುತ ರಾಮಾಯಣ, ರಾಮಾಶ್ವಮೇಧ, ಲಕ್ಷ್ಮೀಶನ ಸೀತಾಪರಿತ್ಯಾಗ, ಶತಕೋಟಿ ರಾಮಾಯಣಗಳು ತಮ್ಮಷ್ಟಕ್ಕೆ ಇಂದಿಗೂ ಆಕರ್ಷಣೀಯವೆ. ಕಾದಂಬರಿಗಳು ಸೊಗಸಾಗಿದ್ದರೆ ತಮ್ಮಷ್ಟಕ್ಕೆ ತಾವೇ ಸಾಹಿತ್ಯ ಸಾಗರದಲ್ಲಿ ಅಲ್ಲೊಂದು ಇಲ್ಲೊಂದು ದ್ವೀಪ–ನಡುಗಡ್ಡೆ–ಆಗಿ ನಿಲ್ಲುತ್ತವೆ. ಸವತಿ ಗಂಧವಾರಣೆಯೂ ಅಷ್ಟೇ. ಕನ್ನಡ ನಾಡಿನ ರಾಣಿಯರಲ್ಲಿ ಶಾಂತಲೆ ಅದೃಷ್ಟವಂತೆ. ವಿಷ್ಣುವರ್ಧನ ಹಾಗೂ ಶಾಂತಲೆಯರಿಗೆ ಮಾದರಿಯಾದ ತ್ರಿಭುವನಮಲ್ಲ ೬ನೆಯ ವಿಕ್ರಮಾದಿತ್ಯ, ಆತನ ರಾಣಿ 'ದುಷ್ಟ–ದರ್ಪಿಷ್ಟ–ಸವತಿ ಶಿರೋವಜ್ರ ಮುಷ್ಟಿ' 'ಸವತಿ ಗಜಕೇಸರಿ' 'ಕಲಿಕಾಲ ಸರಸ್ವತಿ' ಎಂದು ಪ್ರಸಿದ್ಧಳಾದ ಚಂದಲದೇವಿ ಮತ್ತೆ ಇನ್ನೋರ್ವ ರಾಣಿ 'ಅಭಿನವ ಸರಸ್ವತೀ' 'ಸಕಲಕಳಾಧರಿ' ಎಂದು ಪ್ರಸಿದ್ಧಳಾದ ಜಾಕಲದೇವಿ ಇವರು ಅಷ್ಟು ಅದೃಷ್ಟವಂತರಾಗಲಿಲ್ಲ ! ! ರಾಮರಾಯರಂಥವರಿಗೆ ಇಂತಹ ವಸ್ತು ಅವರ ಬರವಣಿಗೆಯ ಹರೆಯದಲ್ಲಿ ದೊರಕಿದ್ದರೆ ಇನ್ನಷ್ಟು ಉತ್ತಮ ಕೃತಿಗಳು ಅವರ ಲೇಖನಿಯಿಂದ ಹೊರಬೀಳುತ್ತಿದ್ದವು. ಈ ಮಹನೀಯರು ನಮ್ಮ ರಾಮರಾಯರ ಸೃಜನಶೀಲ ಕಣ್ಣಿಗೆ ಏಕೆ ಬೀಳಲಿಲ್ಲವೊ ಇದು ಇನ್ನೂ ನನಗೆ ಒಂದುಬಿಡಿಸಲಾರದ ಒಗಟೇ.

ದಿ. ಕೆ.ವಿ. ಅಯ್ಯರ್ ಅವರನ್ನು ನನ್ನ ಹರೆಯದಲ್ಲಿ ಹೈದರಾಬಾದಿನಲ್ಲಿ ಇದ್ದವನು ಕಾಣಲೇ ಇಲ್ಲ. ೧೯೭೨ಕ್ಕೂ ಮುಂಚೆ ಮೈಸೂರಿಗೆ ಬರುತ್ತೇನೆ ಎಂದು ಕನಸಿನಲ್ಲಿಯೂ ಅಂದುಕೊಂಡಿದ್ದಿಲ್ಲ. ಮೈಸೂರಿಗೆ ಬಂದರೂ ನನ್ನ ಸಂಕೋಚದ ಸ್ವಭಾವ

ಅನೇಕರನ್ನು ಇನ್ನು ಹತ್ತಿರದಿಂದ ನೋಡಿಯೆ ಇಲ್ಲ. ನಾನಾಯಿತು ನನ್ನ ಕೆಲಸ ಆಯಿತು ಎಂದುಕೊಂಡ ನನಗೆ ಸಮೇತನಹಳ್ಳಿಯವರ ಭೇಟಿ ಆದದ್ದು ಒಂದು ಆಕಸ್ಮಿಕ. ಒಂದು ದಿನ ಉಷಾ ಪ್ರೆಸ್ಸಿನಲ್ಲಿ ದಿವಂಗತ ಆರ್. ಎನ್. ಹಬ್ಬು ಅವರೊಂದಿಗೆ ಸಂಜೆ ಸಮಯ ದಲ್ಲಿ ಮಾತನಾಡುತ್ತ ಕುಳಿತಿದ್ದೆ ; ಬೆಳ್ಳಗಿನ ಜುಬ್ಬ–ಬೆಳ್ಳಗಿನ ದೋತರ–ಉಟ್ಟ, ಮೈ ತುಂಬಿಕೊಂಡ, ಕೊರಳಿನಲ್ಲಿ ಚಿನ್ನದ ಚೈನ್ ಹಾಕಿಕೊಂಡ, ಆಕರ್ಷಕ ವ್ಯಕ್ತಿ ಪ್ರೆಸ್ಸಿನ ಬಾಗಿಲಲ್ಲಿ ಬಂದು ನಿಂತಿತು. ಅವರನ್ನು ಹಬ್ಬು 'ಬನ್ನಿರಿ ರಾಮರಾಯರೆ' ಎಂದು ಸ್ವಾಗ ತಿಸಿದರು. ಬಂದವರು ಯಾರೊ ದೊಡ್ಡ ವ್ಯಕ್ತಿಗಳೆಂದು ಗ್ರಹಿಸಿದೆ. ಹಬ್ಬು ಅವರೇ ನನಗೆ ಇವರು 'ಸಮೇತನಹಳ್ಳಿ ರಾಮರಾಯರು' ಎಂದು ಪರಿಚಯಿಸಿದರು. ಅನಾಮ ಧೇಯನಾದ ನನ್ನ ಪರಿಚಯ ಅವರಿಗೆ ಇದ್ದಿಲ್ಲ. 'ಸಮೇತನಹಳ್ಳಿ' ಎಂದ ಕೂಡಲೆ ನನ್ನ ಮೈ ಸ್ವಲ್ಪ ಬೆವರಿತು. ಏಕೆಂದರೆ ಅವರು ಸಾಕಷ್ಟು ಪ್ರಸಿದ್ಧ ಸಾಹಿತಿ ಆಗಿದ್ದರು–ಆ ಕಾಲಕ್ಕೆ ಯಾವ ಹಮ್ಮು ಬಿಮ್ಮು ಇಲ್ಲದೆ ಸರಳವಾಗಿ ಮಾತನಾಡುತ್ತಿದ್ದ ಅವರ ವರ್ತನೆ ನನ್ನ ಮನಸ್ಸಿಗೆ ಹಿಡಿಯಿತು. ಅವರ ಈ ಸ್ವಭಾವ ಅನೇಕ ಕಿರಿಯರನ್ನು ಆಕರ್ಷಿಸಲು ಇಂದಿಗೂ ಸಮರ್ಥವಾಗಿದೆಯೆಂದರೆ ಅಚ್ಚರಿಪಡಬೇಕಿಲ್ಲ. ಅವರ ಸರಳತೆಯನ್ನು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಇಲ್ಲವೆ ಯಾವುದೇ ಸಾಹಿತ್ಯ ಚರಿತ್ರೆ–ಅದರಲ್ಲೂ ಕನ್ನಡ ನಾಡಿಗೆ ಸಂಬಂಧಿಸಿದ್ದು ಇದ್ದರೆ ಅಂತಹ ಸಭೆ ಸಮಾರಂಭಗಳಲ್ಲಿ, ಸಂಕಿರಣಗಳಲ್ಲಿ ಯಾರೂ ನೋಡಬಹುದು. ಎಲ್ಲರೊಳಗೊಂದಾಗಿ ಹೋಗುವ ಸ್ವಭಾವ ಶ್ರೀರಾಮರಾಯ ರದು.

ಸಮೇತನಹಳ್ಳಿಯವರು ಇತಿಹಾಸವನ್ನು ಪ್ರೀತಿಸುತ್ತಾರೆ. ಅವರು ಬರೆಯುವುದು ಫಿಕ್ಷನ್ (Fiction). ಅವರ ಕಾರ್ಯಕ್ಷೇತ್ರಕ್ಕೂ ಇತಿಹಾಸಕ್ಕೂ ಏನೂ ಸಂಬಂಧವಿಲ್ಲ. ಆದರೆ ಅವರು ಕೆಲಸಮಾಡಿದ ತಾಲೂಕುಗಳಲ್ಲಿ ಯಾವ ಊರಿನಲ್ಲಿ ಯಾವ ದೇವಾಲಯ ದಲ್ಲಿ ಶಾಸನ ಇದೆ ಎಂಬುದನ್ನು ಬಲ್ಲರು. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೬. ಅಚ್ಚಾದ ಹೊಸದರಲ್ಲಿ ಅವರು ಒಮ್ಮೆ ಚಾಮರಾಜಪುರಂ ರೈಲ್ವೆ ಸ್ಟೇಷನ್ನಿನ ಬಳಿಯಲ್ಲಿ ಭೇಟಿಯಾಗಿದ್ದರು. ಕೂಡಲೆ ಕೇಳಿಯೆ ಬಿಟ್ಟರು. ಏನು ನೀವು ನಮ್ಮ ಪಾಂಡವಪುರ ತಾಲ್ಲೂಕಿನ ಇಂತಹ ದೇವಾಲಯದ ಶಾಸನ ಸೇರಿಸಿಲ್ಲವಲ್ಲ ಎಂದು ಪ್ರಶ್ನಿಸಿದರು. ಎಪಿಗ್ರಾಫಿಯ ಕರ್ನಾಟಿಕ ಯೋಜನೆಗೆ ಇದ್ದ ಇತಿಮಿತಿಗಳನ್ನು ನಮಗಿದ್ದ ಅನಾನುಕೂಲ ಗಳನ್ನು ವಿವರಿಸಿದೆ. ಶಾಸನ ಸೇರಿಸಿಲ್ಲವೆಂಬ ಕೊರಗು ಮತ್ತೆ ನಾನಿದ್ದಾಗ ಎಪಿಗ್ರಾಫಿಯ ಕರ್ನಾಟಿಕ ವಿಭಾಗಕ್ಕೆ—ಯೋಜನೆಗೆ—ಇದ್ದ ತೊಂದರೆ ನನ್ನ ಮನಸ್ಸನ್ನು ಇನ್ನೂ ಕೊರೆ ಯುತ್ತದೆ. ಎಪಿಗ್ರಾಫಿಯ ಕರ್ನಾಟಿಕ ಯೋಜನೆಗೆ ಇದ್ದ ಕೊರತೆಗಳನ್ನು ಮನದಂದರೆ ಈ ಕನ್ನಡದ ಕೆಲಸ ಎಂದಿಗೂ ಎತ್ತಿಕೊಳ್ಳಬಾರದೆಂದು ಇಂದಿಗೂ ನನಗೆನಿಸುತ್ತದೆ. ಇಲ್ಲಿ ಕನ್ನಡಕ್ಕೆ ಕೈ ಎತ್ತುವವರ ಕೈಗಳು ಕತ್ತರಿಸಿ ಹೋದವು. ರಾಮರಾಯರಿಗೆ ಎಪಿಗ್ರಾಫಿಯ ಕರ್ನಾಟಿಕದ ಬಗ್ಗೆ ಇಂದಿಗೂ ಕಳಕಳಿ ಇದೆ. ಅವರಾಗಲಿ, ನಾನಾಗಲಿ ಶ್ರೀಸಾಮಾನ್ಯರಾದ ನಾವು ಏನನ್ನು ಮಾಡಬಲ್ಲೆವು ? ಕನ್ನಡದ ಬಗ್ಗೆ ಒಂದಷ್ಟು ಕಣ್ಣೀರನ್ನು ಸುರಿಸಬಲ್ಲೆವು.

ರಾಮರಾಯರಿಗೆ ಇರುವ ಕಳಕಳಿಯನ್ನು ಅವರ ಮನಸ್ಸನ್ನು ಕೆದಕಿ ನೋಡಬೇಕು.

ರಾಮರಾಯರು ಛಲಗಾರರು. ಅವರ 'ಟೀಪುಸುಲ್ತಾನ್' ಅನುವಾದ ಅಚ್ಚಾಗದೆ ಹಲವು ವರ್ಷ ಕಳೆದವು. ಅದನ್ನು ಅಚ್ಚಾದ ರೂಪದಲ್ಲಿ ನೋಡುವುದಕ್ಕೆ ಕುರಿಕೋಣ ಗಳೇ ಬಿದ್ದವು! ಆ ಕೆಲಸಕ್ಕಾಗಿ ಅವರು ಮಾತನಾಡಿಸದ ಕರ್ನಾಟಕ ಸರ್ಕಾರದ–ಮೈ ವಿ.ವಿ.ಯದ–ಕಲ್ಲೇ ಇಲ್ಲ!! ಅಂತೂ ಕೊನೆಗೊಮ್ಮೆ ಅದು ಅಚ್ಚಾಯಿತು. ಅದು ಅಚ್ಚಾ ಗುತ್ತದೆಯೆಂದು ನಮಗಂತೂ ಅನ್ನಿಸಿದ್ದಿಲ್ಲ. ಪುಸ್ತಕ ಅಚ್ಚಾದದ್ದು ಒಂದು ಸಂತೋಷ.

ಮಾಸ್ತಿ ವೆಂಕಟೇಶ ಅಯ್ಯಂಗಾರರಿಂದ 'ಮಾಸ್ತಿ' ಗೊರೂರು ರಾಮಸ್ವಾಮಿ ಅಯ್ಯಂಗಾರರಿಂದ 'ಗೊರೂರು' ವೆಂಕಟರಾಯರಿಂದ 'ಆಲೂರು' ಪುಟ್ಟಪ್ಪನವರಿಂದ 'ಕುಪ್ಪಳ್ಳಿ' ಮಲ್ಲಿಕಾರ್ಜುನ ಮನ್ಸೂರರಿಂದ 'ಮನ್ಸೂರು' ಗ್ರಾಮಗಳು ಪ್ರಸಿದ್ಧವಾದ ಹಾಗೆ ರಾಮರಾಯರಿಂದ 'ಸಮೇತನಹಳ್ಳಿ' ಪ್ರಸಿದ್ಧವಾಗಿದೆ. ಅವರ ಸಾಹಿತ್ಯ ಸೃಷ್ಟಿ ಅನೇಕ ಬಹುಮಾನಗಳ ವೃಷ್ಟಿಯನ್ನು ಪಡೆಯಲೆಂದು ಪರಮಾತ್ಮನಲ್ಲಿ ಹಾರೈಸುತ್ತೇನೆ. ಜೀವನದಲ್ಲಿಯ ರಾಯರ ಸರಳತನ, ಬರಹದಲ್ಲಿಯ ಬಿಗುತನ, ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗಲೆಂದು ಆಶಿಸುತ್ತೇನೆ. ಮೈಸೂರಿನಲ್ಲಿ ಇದ್ದರೂ ಅವರದು ಅದೇ ಸಮೇತನ ಹಳ್ಳಿಯ ಕೋಟೆಮನೆ. ಪಳೆಯುಳಿಕೆಯ ನೆನಪಿನ ಮನೆ. ಹಳ್ಳಿ ಬಿಟ್ಟ ನಮಗೆ ಇದೊಂದು ದಾರಿ! ಆನೆ ನಡೆದಿದೆ–ಶತವರ್ಷಕಾಲ ನಡೆಯುತ್ತಿರಲಿ.

ತಮ್ಮ ಜೀವನ ಚರಿತ್ರೆ, 'ಕೋಟೆ ಮನೆ'ಯನ್ನು ನೋಡಿ ಸಂತೋಷವಾಯಿತು. ಸಾಕಷ್ಟು ಸುದೀರ್ಘ ಜೀವನ ; ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ದೊಡ್ಡದು. ಕಷ್ಟ ಸುಖ, ಏರಿಳಿತ, ಕಾರ್ಪಣ್ಯಗಳನ್ನು ಸಾಕಷ್ಟು ಅನುಭವಿಸಿದ್ದೀರಿ. ತಮ್ಮ ಜೀವನ ಚರಿತ್ರೆ ಓದಿ ತಿಳಿಯಬೇಕಾದದ್ದು ಎಂದು ತನ್ನ ಅಭಿಪ್ರಾಯ. ಓದುತ್ತೇನೆ. ತಮ್ಮ ಜೀವನದಿಂದ ಕಲಿಯಬೇಕಾದ ಪಾಠಗಳನ್ನು ಕಲಿತು ಲಾಭ ಪಡೆಯುತ್ತೇನೆ.

೩೦–೮–೯೨

ಎಸ್. ನಿಜಲಿಂಗಪ್ಪ

ರಾಸರ ಸಾಧನೆ

ಅನಾಜಿ

"ನಾನು ಅರ್ಧಶತಮಾನದ ಅವಧಿಯಲ್ಲಿ (೧೯೪೭-೧೯೯೭) ಬರೆದುದೇನಾದರೂ ಇದ್ದರೆ, ಅದು ನನ್ನ ಆತ್ಮಸಂತೋಷಕ್ಕಾಗಿಯೇ ಹೊರತು. ಯಾವುದೇ ಪ್ರತಿಫಲಾಪೇಕ್ಷೆ ಯಿಂದ ಅಲ್ಲ. ನನ್ನ ಒಳಗಿನ ಭಾವದೊತ್ತಡವನ್ನು ಕಾವ್ಯ, ಕತೆ, ಕಾದಂಬರಿ, ನಾಟಕ ಗಳೇ ಮುಂತಾದವುಗಳ ಮೂಲಕ ಹೊರಕ್ಕೆ ತೋಡಿಕೊಂಡಿದ್ದೇನೆ. ಅದು ಹಾಗೆ ಹೊರಕ್ಕೆ ಪ್ರತಿಫಲಿಸುವಾಗ ನನಗಾದ ತೃಪ್ತಿ ಸಂತಸ ಮತ್ತು ಸಮ್ಮೋದಗಳು ಎಲ್ಲ ಸನ್ಮಾನ ಮತ್ತು ಬಹುಮಾನಗಳನ್ನು ಮೀರಿದುದು."

ರಾಸರು ಹೀಗೆಂದು ಹೇಳುತ್ತಾರೆ.

ಒಬ್ಬ ಲೇಖಕನು ನಿಸ್ವಾರ್ಥವಾಗಿ. ಸಹಜ ಬಯಕೆಯಿಂದ, ಪ್ರಕೃತಿಯಲ್ಲಿ ಅಂತ ರಂಗದ ಒತ್ತಡದಿಂದ ನೀರಿನ ಬುಗ್ಗೆ ಉಕ್ಕಿದಂತೆ ಸಾಹಿತ್ಯ ಹೊರಬಂದಾಗ ಹೇಳುವ ಮಾತುಗಳು ಇವಾಗಿವೆ.

'ರಾಸ' ಕಾವ್ಯ ನಾಮದಿಂದ ಪರಿಚಿತರಾಗಿರುವ ಸಮೇತನಹಳ್ಳಿ ರಾಮರಾಯರು ನನಗೆ ೧೯೬೯ರಲ್ಲಿ ಮಂಡ್ಯದಲ್ಲಿ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗಿನಿಂದ ಪರಿಚಯವಾದವರು. ಅವರ ಮಗಳು ಭಾರತಿ ನಮ್ಮ ಕಾಲೇಜಿನ ವಿದ್ಯಾರ್ಥಿಯಾಗಿದ್ದು ಆ ಮೂಲಕ ಅವರ ಪರಿಚಯವಾಯಿತು. ಆಗ ಅವರು ಶಾಕುಂತಲಾ ಮಹಾಕಾವ್ಯದ ರಚನೆಯ ಮುಕ್ತಾಯದ ಹಂತಕ್ಕೆ ಬಂದಿದ್ದರು. ಒಬ್ಬ ಹೆಲ್ತ್ ಇನ್ಸ್‌ಪೆಕ್ಟರ್ ಸಂಸ್ಕೃತ ಸಾಹಿತ್ಯದ ಮೇರು ಕೃತಿ ವಸ್ತುವಾದ ಶಾಕುಂತಲವನ್ನು ಕುರಿತು ಕಾವ್ಯ ರೂಪದಲ್ಲಿ ಬೃಹದ್ರಚನೆಯಲ್ಲಿ ತೊಡಗಿದ್ದು ನನಗೆ ಅಚ್ಚರಿಯುಂಟುಮಾಡಿತ್ತು. ಎಂಥ ಶ್ರೇಷ್ಠ ಬೀಜವಾದರೂ ಬೆಳೆಯಲು ಹದವಾದ ನೆಲ ನೀರು ಗೊಬ್ಬರ ಗಾಳಿ ಬೆಳಕು ಬೇಡವೇ ? ಡಬ್ಬಿಯಲ್ಲಿಟ್ಟ ಬೀಜ ಮೊಳಕೆಯೊಡೆಯಲು ಸಾಧ್ಯವೇ ? ಮೊಟ್ಟೆಯಿಂದ ಮರಿ ಬರು ವುದಾದರೂ ಅದಕ್ಕೆ ಕಾವು ಬೇಡವೇ ? ಅದರೆ ಯಾವುದೇ ಹಿತಕಾರಿಯಾವ ಕಾವು ಇಲ್ಲದೆ ಕಾವೇರಿದ ಬದುಕಿನಲ್ಲೇ ಕಾವ್ಯಗಂಗೆ ಹರಿಸುತ್ತಿರುವ ಇವರ ಪ್ರತಿಭೆ ಕಂಡು ಬೆರ ಗಾದೆನು. ಅದರ ಬಗ್ಗೆ ಚರ್ಚಿಸುತ್ತಿದ್ದಾಗ ಅವರ ದೃಷ್ಟಿಕೋನ, ತನ್ಮಯತೆ ಮೊದ ಲಾದವು ಮನಸೆಳೆದವು. ಒಂದು ದಿನ ಮಧ್ಯಾಹ್ನ ಇರಬೇಕು ನಾನು ನನ್ನ, ಮಿತ್ರರಾದ ಶ್ರೀನಿವಾಸನ್, ಜಯಚಂದ್ರ ಮೂವರೂ ಅವರ ಮನೆಗೆ ಕಲ್ಲಹಳ್ಳಿಗೆ ಧಾವಿಸಿದೆವು. ಬಿಡುವಾದಾಗಲೆಲ್ಲಾ ಹೋಗಿ ಹರಟುವುದು ಸಾಹಿತ್ಯ ಸಂವಾದ ನಡೆಸುವುದು ಅವರು ನಮಗೆ ಸೊಗಸಾಗಿ ಕಾಫಿ ತಿಂಡಿ ಸಮಾರಾಧನೆ ನಡೆಸುವುದು ಸಾಮಾನ್ಯ ಪರಿಪಾಟ

ವಾಗಿತ್ತು. ಎಷ್ಟೋ ವೇಳೆ ನಾವು ಅವರೊಡನೆ ಚರ್ಚಿಸುತ್ತಾ ಕುಳಿತಾಗ ಕೆಲವು ಅಚಾನಕ್ ಸಂಗತಿಗಳು ನಡೆದಿದ್ದೂ ಉಂಟು. ಒಮ್ಮೆ ಕನ್ನಡದ ಪ್ರಸಿದ್ಧ ಸಾಹಿತಿಗಳು ಕಸಾಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲು ವಿಶ್ವಸಾಹಸ ಮಾಡಿದರು. ಅವರು ವ್ಯವಹಾರ ಕೌಶಲ್ಯದಲ್ಲಿ ಅಭಿನವ ಚಾಣಕ್ಯರೇ ಆಗಿದ್ದರು. ನಾವು ಇವರ ಮನೆಯಲ್ಲಿ ಕುಳಿತಾಗ ಅವರು ಕಾರಿನಲ್ಲಿ ಬಂದು ಇವರನ್ನು ಹೊರಕ್ಕೆ ಕರೆದರು. ನಾವಿದ್ದುದು ಅವರಿಗೆ ತಿಳಿಯಲಿಲ್ಲ. ಮನೆ ಗೋಡೆ ಪಕ್ಕದಲ್ಲೇ ಮಾತುಕಥೆ ಆಗುತ್ತಿದ್ದರಿಂದ ಕೇಳಿಸುತ್ತಿತ್ತು.

ರಾಮರಾಯರೇ, ಈ ಸಲ ನಾನು ಕ.ಸಾ. ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ನಿಲ್ಲುವವನಿದ್ದೇನೆ. ನಿಮ್ಮ ಸಹಕಾರ ಅರ್ಥಾತ್ ಮತಬೇಕು. ಅದಕ್ಕಾಗಿ ಬಂದಿದ್ದೇನೆ. ಅಂದ ಹಾಗೆ ನಿಮ್ಮ ಆ ಪುಸ್ತಕವನ್ನು ಪಠ್ಯ ಮಾಡಬೇಕೆಂದಿದ್ದೇನೆ. ಒಂದು ವೇಳೆ ನಿಮಗೆ ನನ್ನ ಬಗ್ಗೆ ಇಷ್ಟವಿಲ್ಲದಿದ್ದರೆ ಅಭ್ಯಂತರವೇನಿಲ್ಲ. ನೀವು ಸಭೆಗೆ ಬರದಿದ್ದರಾಯಿತು ಮತ ಚಲಾಯಿಸದಿದ್ದರಾಯಿತು ಅಷ್ಟೆ ಎಂದರು. ರಾಮರಾಯರು ತಕ್ಷಣ ಏನೂ ಹೇಳಲಿಲ್ಲ. ಸಂದಿಗ್ಧತೆಗೆ ಸಿಲುಕಿದ್ದರು. ಸ್ವಲ್ಪ ವೇಳೆ ಕೊಡಿ ವಿಚಾರ ಮಾಡ್ತೇನೆ ಎಂದು ಹೇಳಿದರು. ಹೂಂ ಎನ್ನಲಿಲ್ಲ. ಉಹುಂ ಎನ್ನಲಿಲ್ಲ. ಅವರು ಆ ಕಡೆ ತೆರಳಿದ ಮೇಲೆ ಒಳಕ್ಕೆ ಬಂದು ನೋಡಿ "ಈ ಪ್ರಾಣಿ ತಾನು ಕೆಡೋದಲ್ಲದೆ ವನವೆಲ್ಲಾ ಕೆಡಿಸಿತು ಎನ್ನೋ ಹಾಗೆ ನಮಗೆಲ್ಲಾ ಪ್ರಾಣಸಂಕಟಕ್ಕೆ ತಂದಿಡ್ತಾನೆ" ಎಂದರು. ಮತ್ತೇನು ಮಾಡ್ತೀರಾ ಈಗ ಎಂದೆ ನಾನು. ಏನೇ ಆಗಲಿ ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ, ದುಡುಕುವುದಿಲ್ಲ ಸ್ವಲ್ಪ ವಿಚಾರ ಮಾಡ್ತೇನೆ ಎಂದರು. ಇವರೇನು ಮಾಡಿದರೋ ಬಿಟ್ಟರೋ ಅವರಂತೂ ಅಧ್ಯಕ್ಷರಾದರು.

ಇದಾದ ಕೆಲವು ದಿನಗಳ ನಂತರ ಒಮ್ಮೆ ಅವರ ಮನೆಗೆ ಹೋದಾಗ "ಈವತ್ತು ನನ್ನ ಮನಸ್ಸು ಬಹಳ ಹಗುರವಾಗಿದೆ. ಬಂಧನದಲ್ಲಿದ್ದ ಗಿಣಿ ಪಂಜರ ಬಿಟ್ಟು ಆಕಾಶದಲ್ಲಿ ಸ್ವೇಚ್ಛೆಯಾಗಿ ಹಾರಾಡುವಂತಾಗಿದೆ." ಎಂದು ಭಾವಪೂರ್ಣವಾಗಿ ಹೇಳಿದರು. "ಯಾಕೆ ಸಾರ್" ಎಂದು ನಾವು ಕೇಳಿದೆವು. ಇಲ್ಲಿ ಇನ್ನೊಂದು ಸಂಗತಿ ಹೇಳಬೇಕು. ನಾನು ಶ್ರೀನಿವಾಸನ್ ಜಯಚಂದ್ರ ಅವಿಭಾಜ್ಯ ತ್ರಿಮೂರ್ತಿಗಳಾಗಿ ಸದಾ ಒಟ್ಟಿಗೆ ಇರುತ್ತಿದ್ದೆವು. ಬೆಳಗಿನಿಂದ ರಾತ್ರಿಯವರೆಗೆ, ಶಾಲೆ ಆಗಲಿ, ಊಟ ತಿಂಡಿಗೆ ಆಗಲಿ ಸಭೆ ಸಮಾರಂಭಕ್ಕೆ ಆಗಲಿ ಹರಟೆ, ರಸ್ತೆ ಸಂಚಾರ, ಯಾರದಾದರೂ ಭೇಟಿಗಾಗಲಿ ತ್ರಿವಳಿಗಳಾಗಿಯೇ ಸಂಚರಿಸುತ್ತಿದ್ದೆವು. ನಾವು ಮೂವರೂ ಅಲ್ಲಿದ್ದಾಗ ಆ ದಿನ ಅವರ ಮನಸ್ಸಿನ ಬಿಡುಗಡೆಯ ಸ್ಥಿತಿಯನ್ನು ಅವರ ಮುಖಭಾವ ಹೇಳುತ್ತಿದ್ದ ರೀತಿ ಇಂದಿಗೂ ಮರೆಯಲಾರೆವು.

ಆ ಧನ್ಯತಾಭಾವ ಕೃತಜ್ಞತಾ ಸಮರ್ಪಣೆಯ ಮಾತುಗಳಾಗಿ 'ಶಾಕುಂತಲಾ'ದ ಮಂಗಳದ ನುಡಿಗಳಲ್ಲಿ ಹೀಗೆ ಮೂಡಿದೆ.

"... ಏಳ್ಬರಿಸಗಳ ಮುನ್ನ
ನಿನ್ನಾಣತಿಯ ಪಡೆದು ತೊಡಗಿದೆಂ ರಚನೆಗೈ.

ಮುಗಿದುದಿದೊ, ಸೌಮ್ಯ ಮಾಘದ ಏಳ್ಗೆ ಬಿದಿಗೆಯಾ
ರವಿವಾರದಂದು. ಈ ದಿನಮೆನ್ನ ಬಾಳಿನೊಳ್
ಶುಭದ ಅದ್ವಿತೀಯ ದಿನಂ ! ತನ್ನ ಸಹನೆಯಿಂ
ಜೀವನವನಿಂತು ನಡೆಯಿಸಿದ ಎನ್ನೊಲುಮೆವೆಣ್
ಸತಿ ಪಂಕಜಾಕ್ಷಿಯ ಕರವೆತಾಳ್, ನಿಲೆ ಪಕ್ಕದೊಳ್.
ಈ ಕಾರ್ಯಮಂ ನಿರ್ವಹಿಪ ಶಕ್ತಿಯಂ ಸ್ಫೂರ್ತಿಯಂ
ಇತ್ತ ನಿನಗಿದೊ, ಇರ್ವರುಂ ಕೈ ಮುಗಿಯುತರ್ಪಿಪೆವು,
ಕೃತಜ್ಞತಾಭಾವದಿಂದೆದೆದುಂಬಿ. ಪುನರ್ವಂದನಂ !
ಓಂ ಶಿವಂ ! ಓಂ ಭವ್ಯಂ ! ಓಂ ಶುಭಂ ! ಓಂ ಸ್ವಸ್ತಿ !"

ಮಂಗಳ ನುಡಿಯ ಕೊನೆಯ ಸಾಲುಗಳನ್ನು ಬರೆಯುವಾಗ ಹೇಗಾಯಿತು ನನ್ನ ಮನಸ್ಸು ಅಂತಿರಾ ! ಅಂತ ಹೇಳಿದ ರೀತಿ ಭಾವ ಭಂಗಿ ನನ್ನ ಕಣ್ಮುಂದೆ ನಿಂತಿದೆ. ಕವಿಯ ಧನ್ಯತಾಭಾವದ ಸ್ಥಿತಿಯ ದರ್ಶನ ಅಂದು ನಮಗಾಯಿತು.

ಒಬ್ಬ ಕವಿ, ಸಾಹಿತಿ, ಆತ್ಮಸ್ವಾರ್ಥ್ಯ, ಅಥವಾ ಆತ್ಮಾನಂದಕ್ಕಾಗಿ ಕೃತಿರಚನೆ ಮಾಡಿದಾಗ ಅದು ಪೂರ್ಣಗೊಂಡಾಗ ಆಗುವ ಮಹದಾನಂದಕ್ಕೆ ಸಾಟಿ ಇನ್ನೊಂದಿಲ್ಲ. ಆದರೆ ಯಾವುದೇ ಇತರ ಕಾರಣಗಳಿಗಾಗಿ, ಕೀರ್ತಿಗಾಗಿ ಹಣಕ್ಕಾಗಿ, ಪಠ್ಯಕ್ಕಾಗಿ, ಪ್ರತಿಷ್ಠೆಗಾಗಿ ಅಹಂಗಾಗಿ ಕೃತಿರಚಿಸಿದಾಗ ಅದರಿಂದ ಲೌಕಿಕ ಲಾಭಗಳಾಗಬಹುದು ಆದರೆ ಅಲೌಕಿಕಾನಂದ ಲಭ್ಯವಾಗುವುದಿಲ್ಲ. ರಾಮರಾಯರಿಗೆ, 'ಶಾಕಾಂತಲಾ' ರಚಿಸಿದಾಗ, 'ಶ್ರಿ ಕೃಷ್ಣದರ್ಶನ' ರಚಿಸಿದಾಗ ಆದ ಆನಂದಾನುಭವ ಅಪೂರ್ವವಾದುದು.'ಶಾಕುಂತಲಾ' ಕೃತಿಪೂರ್ಣವಾದಾಗ ಅವರಿಗಾದ ಅನಂದಾನುಭವ ನನಗೊಂದು ರೋಮಂಚಕಾರಿ ನೋಟವಾಗಿದೆ.

ಬಾಳಿನಲ್ಲಿ ಸಿಹಿಗಿಂತ ಘೋರಕಹಿಗಳನ್ನು ಉಂಡ ನಂಜುಂಡ ಸಾಹಿತಿ ರಾಮರಾಯರು ನೋಡಲು ದಿಟ್ಟ ವ್ಯಕ್ತಿ. ಮಾತು ಸ್ವಲ್ಪ ಗಡಸೇ ಅಭಿಪ್ರಾಯ ಒರಟೇ ಹೊರನೋಟಕ್ಕೆ. ವೈಯಕ್ತಿಕ ನಿಲುವುಗಳನ್ನು ಬಿಟ್ಟು ಕೊಡುವ ಪ್ರಾಣಿ ಅಲ್ಲ. ಇದಕ್ಕೆ ಕಾರಣ ಅವರು ಬೆಳೆದು ಬಂದ ದಾರಿಯಲ್ಲಿ ಅನ್ಯಾಯ, ಕಾರ್ಪಣ್ಯ, ಕಷ್ಟನಷ್ಟಗಳ ಮುಳ್ಳು ದಾರಿಯ ಅನುಭವ. ಆದರೆ ತೆಂಗಿನಕಾಯಿ ಹೊರಸಿಪ್ಪೆ ಕರಟ ಕಠಿಣವಾಗಿದ್ದರೂ ಅದರೊಳಗಿನ ತಿರುಳು–ಸೀಯಾಳ ರುಚಿಕರ–ಹಿತಕರವಿದ್ದಂತೆ ಅವರ ಮಾನವೀಯತೆ; ಸತ್ಯಾರಾಧನೆ, ಅತಿಥಿಸತ್ಕಾರ, ಪ್ರಾಮಾಣಿಕತೆ ಸ್ನೇಹಪ್ರಿಯತೆ ಎಂಥವರನ್ನೂ ಒಲಿಸಿಕೊಳ್ಳುವಂಥ ಗುಣಗಳಾಗಿವೆ. ನಿಜ. ಅವರೇ ಹೇಳಿಕೊಂಡಿರುವಂತೆ :

"ನನಗೆ ತೋಚಿದುದನ್ನು ನನ್ನ ಸಂತೋಷಾರ್ಥವಾಗಿ ನನಗೆ ಬೇಕಾದ ಭಾಷೆ ಮತ್ತು ಶೈಲಿಗಳಲ್ಲಿ ಬರೆದುಕೊಂಡು ತೃಪ್ತಿಯನ್ನು ಪಟ್ಟವನು ನಾನು. ಹಾಗೆ ನಾನು ಬರೆದಿರುವುದನ್ನು ಒಪ್ಪಿಯಾರಾದರೂ ಅಚ್ಚು ಹಾಕಿದರೋ ಸರಿ, ಇಲ್ಲ ರಾಸ ಪ್ರಕಾಶನ ಎಂಬ ಹೆಸರಿನಲ್ಲಿ ನಾನೇ ಪ್ರಕಟಿಸಿ, ಅದು ಮಾರಾಟವಾಗಲಿ ಆಗದಿರಲಿ ನಾಲ್ಕು ಜನ ಮಿತ್ರರಿಗೆ ಗೌರವ ಪ್ರತಿಗಳನ್ನು ಕೊಟ್ಟೋ, ಅಥವಾ ನಾನೇ ಅಂಚೆಯಲ್ಲಿ ಕಳುಹಿಸಿಯೋ ಮುದ

ಪಡುವುದು ನನ್ನ ಸ್ವಭಾವಕ್ಕೆ ಅಂಟಿಬಂದುದು" ಎಂಬ ಮಾತಿನಲ್ಲಿ ಅವರ ಸ್ನೇಹ ಪ್ರಿಯತೆಯನ್ನು ಗುರುತಿಸಬಹುದು.

ಕಷ್ಟದಲ್ಲಿ ಬೆಳೆದುದರಿಂದ ಕಟ್ಟುನಿಟ್ಟುತನ ಅವರಲ್ಲಿ ಬೆಳೆದುಬಂದಿದೆ. ಕೆಲವೊಮ್ಮೆ ಉಳಿದವರಿಗೆ ಹಠಮಾರಿತನ ಅನ್ನಿಸಿದರೂ ಅಚ್ಚರಿಯೇನಿಲ್ಲ. ಆದರೆ ಅವರ ನಿಷ್ಠೆ ಮೆಚ್ಚುವಂಥದ್ದು. ಅವರು ತಮ್ಮ ಎಲ್ಲ ಬರಹಗಳನ್ನು ಕಾಯ್ದಿಟ್ಟ ರೀತಿ ಅವುಗಳನ್ನು ಒಪ್ಪ ಓರಣಗಳಿಂದ ವರ್ಗೀಕರಿಸಿ ತಕ್ಷಣ ಸಿಗುವಂತೆ ಜೋಡಿಸಿಟ್ಟ ರೀತಿ ಕಂಡಾಗ ಅಂಥ ಶಿಸ್ತು ನಮ್ಮ ಅನೇಕ ಸಾಹಿತಿಗಳ ಜಾಯಮಾನದಲ್ಲೇ ಇಲ್ಲದಿರುವುದನ್ನು ಕಂಡಿದ್ದೇನೆ. ಅವರ ಬರಹವಾದರೂ ಅಷ್ಟೆ, ಮುತ್ತಿನಂಥ ಅಕ್ಷರಗಳು ಚಿತ್ತಿಲ್ಲದ ಬರಹ. ಅನಕೃ ಬರಹ ನನಗೆ ನೆನಪಾಗುತ್ತದೆ. ಮತ್ತೊಂದು ಅಂಶವೆಂದರೆ ಬರೆದುದನ್ನು ಅಳಿಸದೊಂದ ಗ್ಗಳಿಕೆ ಅವರದಲ್ಲ. ಬರೆದುದನ್ನು ಪರಿಷ್ಕರಿಸುವ ಪ್ರವೃತ್ತಿ ಅವರದು. ಈ ವಿಚಾರದಲ್ಲಿ ತೀನಂಶ್ರೀ ಮಾರ್ಗ ಅವರದು ಎಂದುಕೊಂಡಿದ್ದೇನೆ. ರಾಮರಾಯರೇ ಹೇಳಿಕೊಂಡಿರು ವಂತೆ "ಇಲ್ಲಿ ಒಂದು ಮಾತು. ಕೃತಿ ಎಷ್ಟೇ ಸಣ್ಣದಾಗಿರಲಿ ಅಥವಾ ತುಂಬ ದೊಡ್ಡದೇ ಆಗಿರಲಿ ಅದನ್ನು ಮೊದಲಸಾರಿಗೆ ಬರೆದ ಮೇಲೆ, ಮತ್ತೆ ಪರಿಷ್ಕರಿಸುತ್ತೇನೆ. ಕುಳಿತು ಅಚ್ಚಿನ ಪ್ರತಿಯನ್ನು ನಾನೇ ಮಾಡುತ್ತೇನೆ. ಹಾಗೆ ಮತ್ತೆ ಬರೆಯುವಾಗ ಪರಿಷ್ಕರಣ ಕಾರ್ಯ ಮುಂದುವರೆದಿರುತ್ತದೆ." ಹೀಗೆ ಮಾಡಿದ್ದರಿಂದ ಅವರ ಕೃತಿಗಳಲ್ಲಿ ಅಚ್ಚುಕಟ್ಟು ತನ ಕಂಡು ಬರುತ್ತದೆ. ಇದರಿಂದ ಕಾಲವ್ಯಯವಾಗಿದ್ದುಂಟು. ಈ ಬಗೆಗೆ ರಾಮರಾಯ ರಿಗೆ ಅನೇಕ ಸಲ ಮನಸ್ಸಿಗೆ ಅನ್ನಿಸಿದ್ದುಂಟು : "ನನ್ನ ಎಲ್ಲ ಕೃತಿಗಳನ್ನು ಎರಡೆರಡು ಸಾರಿ ಪ್ರತಿ ಮಾಡಿದುದರಿಂದ ಅವುಗಳು ನನ್ನ ಬಹುಕಾಲವನ್ನು, ಆಕ್ರಮಿಸಿ ಬಿಟ್ಟವು" ಆದರೆ ಓದುಗರಿಗೆ ಆದಷ್ಟು ಶುದ್ಧವಾಗಿ ಸಾಹಿತ್ಯ ನೀಡಬೇಕೆನ್ನುವ ನಿಷ್ಠೆ ಇರುವವರೆಲ್ಲ ಮಾಡುವ ಕೆಲಸ ಇದಾಗಿದೆ. ಇಂದಿನ ಯುವ ಸಾಹಿತಿಗಳಿಗೆ ಆದರ್ಶವಾಗಬೇಕಾಗಿದೆ.

ಎಂಬತ್ತರ ಹೊಸ್ತಿಲಲ್ಲಿ ಹರೆಯದವರನ್ನು ಮೀರಿದ ಉತ್ಸಾಹದಲ್ಲಿರುವ 'ನವ ತರುಣ'ರಾದ ಕೋಟೆಮನೆಯ ಸಮೇತನಹಳ್ಳಿ ರಾಮರಾಯರು ಈಗಲೂ ಸಾಹಿತ್ಯ ಸೇವಾ ನಿರತರೇ ಆಗಿದ್ದಾರೆ. ಅತ್ತಿಮಬ್ಬೆಯನ್ನು ಕುರಿತು ಬೃಹತ್ ಕಾದಂಬರಿಯ ರಚನೆಯಲ್ಲಿ ತೊಡಗಿದ್ದಾರೆ. ಕನ್ನಡಕ್ಕೊಂದು ಶ್ರೇಷ್ಠ ಕೊಡುಗೆ ಅದಾಗುತ್ತೆಂದು ನನ್ನ ನಂಬಿಕೆ ; ಏಕೆಂದರೆ ಈಗಿನ ಪರಿಪಕ್ವ ವಯಸ್ಸಿನಲ್ಲಿ ಅದನ್ನು ಬರೆಯುತ್ತಿದ್ದಾರೆ.

ಸುಮಾರು ೩೦ ಗ್ರಂಥಗಳನ್ನು ನೂರಾರು ಲೇಖನಗಳನ್ನು ಬರೆದಿರುವ 'ರಾಸ' ಅವರ ಕೃತಿಗಳ ಮೌಲ್ಯಮಾಪನ ನಮ್ಮ ನಾಡಿನ ವಿಮರ್ಶಕರಿಂದ ಸಮರ್ಪಕವಾಗಿ ನಡೆ ದಿಲ್ಲ.ಅವರ ಅನೇಕ ಕೃತಿಗಳು ಪ್ರಕಟನೆ ಆಗಿದ್ದರೂ ಆ ಬಗೆಗೆ ಪರಿಚಯ ಲೇಖನಗಳೂ ಬಂದಿಲ್ಲ. ಇನ್ನು ವಿಮರ್ಶೆಯ ಮಾತೆಲ್ಲಿ ಬಂತು. ನವೋದಯ ಸಾಹಿತ್ಯ ಕಾಲದಲ್ಲಿ ಮಧ್ಯಮ ವರ್ಗದ ತರುಣನೊಬ್ಬ ಬಾಳಿನ ಕಷ್ಟ ಕಾರ್ಪಣ್ಯಗಳ ಅಗ್ನಿಕುಂಡದಲ್ಲಿದ್ದೂ ಯಾವುದೇ ಸಾಹಿತ್ಯಿಕ ವಾತಾವರಣ, ಪ್ರೇರಣೆ, ಮನೆತನದ ಹಿನ್ನೆಲೆ ಇಲ್ಲದೆ, ಪ್ರಾಮಾ

ಣಿಕ ಅನಿಸಿಕೆಗಳ ಅದಮ್ಯ ಭಾವಗಳಿಗೆ ಸಾಹಿತ್ಯ ರೂಪ ನೀಡಿದ ಸಾಹಿತಿಯಾದ ರಾಮರಾಯರ ಕೃತಿಗಳಿಗೆ ತಕ್ಕ ಸ್ಥಾನಮಾನ ದೊರೆಯಬೇಕು. ಮೌಲ್ಯಮಾಪನವಾಗಬೇಕು. ರಾಮರಾಯರ ಬದುಕಿನ ನಿಷ್ಠೆ, ಎದೆಗುಂದದಿರುವ ದಿಟ್ಟತನ, ಪ್ರಾಮಾಣಿಕತೆ ವ್ಯಕ್ತಿತ್ವ ಇಂದಿನ ಯುವಕರಿಗೆ ಅರಿವಾಗಬೇಕು. ಆ ಕಾಲ ಬರಲಿ ಎಂದು ಹಾರೈಸುವೆ.

ತಾವು ದಯವಿಟ್ಟು ಕಳಿಸಿಕೊಟ್ಟ ತಮ್ಮ ಎರಡು ಪುಸ್ತಕಗಳು 'ಪಿನಾಕಿನಿ' ಮತ್ತು 'ಸ್ವರ್ಗ ಸೋಪಾನ' ಎಂಬವು ನನಗೆ ಸೇರಿವೆ. ಅದಕ್ಕಾಗಿ ವಂದನೆಗಳು. ನಿಮ್ಮ ಸಾಹಿತ್ಯೋಪಾಸನೆ ಸಂತತವಾಗಿ ನಡೆಯುತ್ತಿರುವುದಕ್ಕಾಗಿ ನನಗೆ ಸಂತೋಷ. 'ಸ್ವರ್ಗ ಸೋಪಾನ' ಕಥಾ ಸಂಕಲನ ತುಂಬಾ ಚೆನ್ನಾಗಿದೆ. 'ಪಿನಾಕಿನಿ'ಯನ್ನು ಇನ್ನೂ ಓದಲಾಗಿಲ್ಲ. ಮುಂದೆ ಓದಿ ಬರೆಯುತ್ತೇನೆ.

೨೩-೩-೮೩ ಡಿ. ಎಲ್. ನರಸಿಂಹಾಚಾರ್

ವಾಗರ್ಥಗಳ ಸವ್ಯಸಾಚಿ

ಎಸ್. ಶ್ರೀನಿವಾಸನ್

೧೯೬೩ ನೆಯ ಮಾರ್ಚಿ ತಿಂಗಳ ೨೦ನೆಯ ದಿನಾಂಕ ಮಂಡ್ಯ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ. ಎಸ್. ನಂಜುಂಡಯ್ಯನವರು ತಮ್ಮ ಕೊಠಡಿಗೆ ನನ್ನನ್ನು ಕರೆಸಿದರು. ಅವರ ಮುಂದೆ ಕಾಳಿದಾಸನ ರಘುವಂಶದ ಅರಸರ ವರ್ಣನೆಗೆ ಸರಿದೊರೆಯೆನಿಸಿದ ಅಜಾನುಬಾಹು, ಸ್ಫುರದ್ರೂಪಿ ವ್ಯಕ್ತಿಯೊಬ್ಬರು ಕುಳಿತಿದ್ದರು. "ವ್ಯೂಢೋರಸ್ಕೋ ವೃಷಸ್ಕಂಧಃ ಸಾಲಪ್ರಾಂಶುರ್ಮಹಾ ಭುಜಃ" ಎಂಬ ಶ್ಲೋಕಾರ್ಥವೂ ಅದರೊಡನೆ ಆ ಧೀಮಂತ ನಿಲವಿನ ಗಂಭೀರ ವ್ಯಕ್ತಿಯ ಬಗ್ಗೆ ನನ್ನ ಮನಸ್ಸಿನಲ್ಲಿ ಒಂದು ಆತ್ಮೀಯವಾದ ಸದ್ಭಾವನೆಯೂ ಮೂಡಿತು.

ಶ್ರೀ ನಂಜುಂಡಯನವರು ಇವರು ಸಮೇತನಹಳ್ಳಿ ರಾಮರಾಯರು, ಆರೋಗ್ಯ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದಾರೆ. ಅದರ ಜೊತೆಗೆ ಬರವಣಿಗೆಯನ್ನು ಹವ್ಯಾಸವನ್ನಾಗಿಟ್ಟುಕೊಂಡಿದ್ದಾರೆ. ಅವರ ಕೆಲವು ಪುಸ್ತಕಗಳನ್ನು ಕಾಲೇಜಿನ ಗ್ರಂಥಾಲಯಕ್ಕೆ ತೆಗೆದುಕೊಳ್ಳಬಹುದಲ್ಲವೆ ! ಎಂದು ಪರಿಚಯಿಸಿದರು. ಹೀಗೆ ರಾಯರ ಪರಿಚಯವಾದುದಲ್ಲದೆ ಇಂದಿನವರೆವಿಗೆ ಅವ್ಯಾಹತವಾಗಿ ಅವರ ಸಖ್ಯ ಉಳಿದುಬಂದಿರುವುದು ನನ್ನ ಭಾಗ್ಯ.

ಕನ್ನಡ ನಾಡು, ನುಡಿ, ಸರಸ್ವತಿಗೆ ಅಚ್ಚಳಿಯದ ಸೇವೆಸಲ್ಲಿಸಿರುವ ರಾಮರಾಯರು ಕೆಚ್ಚೆದೆಯ ಕಲಿ ; ಅವರದು ಹೋರಾಟದ ಬದುಕು. ಎಳವೆಯಿಂದಲೇ ಬಡತನದ, ಕಾರ್ಪಣ್ಯದ ಬವಣೆಯಲ್ಲಿ ಬೆಂದು, ಬಂಧು ಬಾಂಧವರ ಮಾತ್ಸರ್ಯೋಪಲಾಲಿತ ವಿಭ್ರಮದ ರುಚಿಯುಂಡು, ಕಾಳಿಕೆಯನ್ನು ಕಳೆದುಕೊಂಡು ಶುದ್ಧ ಸ್ಫಟಿಕ ಸಂಕಾಶರಾಗಿ ಸಾಧುವರವೃತ್ತಿಯಿಂದ ಕೂಡಿ ಚಿತ್ತಶುದ್ಧಿಯುಳ್ಳವರಾಗಿ ಸತ್ಯತೆಯನಭ್ಯಸಿಸಿದ ಧೀಮಂತ ಸಾಹಸಿ, ಸಾಹಿತಿ ಸಹ. ದಿಟ.

ಶ್ರೀಮತಿ ರುಕ್ಮಿಣಿಯಮ್ಮ ಮತ್ತು ಶ್ರೀನಿವಾಸರಾಯರ ಸುಪುತ್ರರಾದ ಇವರು

> ಸಾಲಪ್ರಾಂಶು, ವಿಶಾಲಲೋಲ ನಯನಂ, ಪ್ರೋದ್ಯದ್ವೃಷಸ್ಕಂಧನ್,
> ಉನ್ಮೀಲತ್ ಪಂಕಜವಕ್ತ್ರನ್, ಆಯತ ಸಮಗ್ರೋರಸ್ಥಲನ್, ದೀರ್ಘ
> ಬಾಹಾಲಂಬನ್, ಭುಜವೀರ್ಯ ವಿಕ್ರಮಯುತನ್ ರುಕ್ಮಿಣ್ಯಾತ್ಮ ಜನ್ಮಂ
> ಸರಸ್ವತೀಲೋಲಂ ಶ್ರೀನಿವಾಸಾಖ್ಯ ನಾಮದೊಳ್ ಕಲ್ತರ್ ಪ್ರಾರಂಭಿಕ ವಿದ್ಯೆಯಂ

ಸುರಧೇನುಸ್ತನಭಾರದಂತೆ, ಮೂರ್ತಿಗೊಂಡ ಪುರುಷಾರ್ಥದಂತೆ, ರಾಮ

ರಾಯರು ಪಂಕಜಾಕ್ಷಮ್ಮನವರಿಗೆ ನಾಲ್ವರು ಮಕ್ಕಳು–ನಾಲ್ಕು ದಿಕ್ಕಿನಲ್ಲಿಯೂ, ಚತುಸಮುದ್ರ ಪರ್ಯಂತವೂ ನಾಲ್ಕು ಜಯಸ್ತಂಭಗಳನ್ನು ನಿಲ್ಲಿಸಲು ಸಮರ್ಥರೆನಿಸಿ ಚರಿತ್ರಾರ್ಹರಾಗಿ ಕಂಗೊಳಿಸುತ್ತಿದ್ದಾರೆ. ನನ್ನ ವಿದ್ಯಾರ್ಥಿನಿಯಾಗಿದ್ದ ಅವರ ಮಗಳು ಭಾರತಿ ನಿಜಕ್ಕೂ ಕಲಾಭಾರತಿಮಾತ್ರವಲ್ಲದೆ ಧಾರ್ಷ್ಟ್ಯದ ಹೆಣ್ಣುಮಗಳೂ ಹೌದು.

"ಇಂಡಿಯಾದಲ್ಲಿ ಮಂಡ್ಯ, ಅದರ ಸುಖ ನೀನುಂಡ್ಯಾ" ಎಂಬ ಗಾದೆಯೊಂದಿದೆ. ಶ್ರೀರಾಮರಾಯರು ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮದ್ದೂರಿನಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಿಂದ ನಡೆಸಿ ಜಿಲ್ಲೆಯ ಶ್ರೇಷ್ಠಕವಿವರ್ಯರಾದ ಡಾ. ಪು. ತಿ. ನರಸಿಂಹಾಚಾರ್ಯರನ್ನೂ ಶ್ರೇಷ್ಠ ಜಾನಪದ ವಿದ್ವಾಂಸರಾದ ಡಾ. ಎಚ್. ಎಲ್. ನಾಗೇಗೌಡರನ್ನೂ ಸನ್ಮಾನಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಆ ಸಂದರ್ಭದಲ್ಲಿ ಒಬ್ಬ ಅನಾಮಧೇಯ ದ್ರಾಬೆ ಜಾತೀಯತೆಯ ಗುಂಪುಗುಳಿತನದ ಮದ ಹತ್ತಿ ಅನಾಗರಿಕವಾಗಿ, ನಡೆದುಕೊಂಡ ಸಂದರ್ಭದಲ್ಲಿ ರಾಮರಾಯರು ಅವನನ್ನು ಬೊಗ್ಗುಬಡಿದು ತಮ್ಮ ಧೀಮಂತತೆಯನ್ನು ಮೆರೆದದ್ದು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತೆ ಸುಸ್ಪಷ್ಟವಾಗಿ ಕಾಣುತ್ತಿದೆ. ಮತ್ತೊಂದು ಸಂದರ್ಭದಲ್ಲಿ ಕಾಲೇಜಿನ ಅಧ್ಯಾಪಕರಿಬ್ಬರು ವಿದ್ಯಾರ್ಥಿಗಳನ್ನೆತ್ತಿ ಕಟ್ಟಿ ಬಿತ್ತಿದ ಜಾತೀಯತೆಯ ಬೇಳ್ವಿಗೆ ಅಹುತಿಯಾಗಬೇಕಾಗಿದ್ದ ನನ್ನನ್ನು ಆ ವಿಷವರ್ತುಲದಿಂದ ಬಿಡುಗಡೆಮಾಡಲು ನನ್ನ ಪರವಾಗಿ ಕುಲಪತಿಗಳಲ್ಲಿ ವಿನಂತಿಸಿಕೊಂಡು ಅವರ ಮನದಲ್ಲಿ ಮೂಡಿದ್ದ ಸಂದೇಹಗಳನ್ನು ನಿವಾರಿಸಿ ಅವರ ಸಿಟ್ಟನ್ನಿಳಿಸಿ ವಾತಾವರಣವನ್ನು ತಿಳಿಗೊಳಿಸಿದ ರಾಯರನ್ನು ನಾನು ಮರೆಯಲು ಸಾಧ್ಯವಿಲ್ಲ. ಎಲ್ಲಿ ವಿದ್ವತ್ತಿದೆಯೋ ಅದನ್ನು ಎತ್ತಿ ಹಿಡಿದು ಗೌರವಿಸುವ ಹಿರಿತನವನ್ನು ನಾನು ಅವರಲ್ಲಿ ಕಂಡಿರುವೆ. ಅವರನ್ನು ನಾನು ಪಿತೃ ನಿರ್ವಿಶೇಷರೆಂದು ಭಾವಿಸಿರುವೆ.

'ಆಡು ಮುಟ್ಟದ ಸೊಪ್ಪಿಲ್ಲ. ರಾಯರು ಬರೆಯದ ಸಾಹಿತ್ಯ ಪ್ರಕಾರವಿಲ್ಲ . . , 'ಭೀಷ್ಮ ಸಂಕಲ್ಪ'ದಿಂದ ಹಿಡಿದು 'ಕೋಟೆಮನೆ'ವರೆಗೆ 'ಶಾಕುಂತಲಾ' ಮಹಾಕಾವ್ಯವನ್ನೂ ಒಳಗೊಂಡು ಇಪ್ಪತ್ತೊಂಭತ್ತು ಕೃತಿಗಳನ್ನು ಅವರು ರಚಿಸಿ ಜನಾದರಣೀಯರಾಗಿದ್ದಾರೆ. ಅವರ 'ತಲಕಾಡುಗೊಡ' ಐತಿಹಾಸಿಕ ನಾಟಕವನ್ನು ಬೋಧಿಸುವ ಸುಯೋಗ ನನ್ನದಾಗಿತ್ತು. "ಕನ್ನಡದ ಬೊಕ್ಕಸವನ್ನು ಚೊಕ್ಕ ಚಿನ್ನದಿಂದ ತುಂಬಿದ ತಾವು ನಮ್ಮ ನಾಡಿನ ಸುಪುತ್ರರು . . . ಎಂದಿರುವ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಮಾತು ರಾಯರಿಗೆ ಚೆನ್ನಾಗಿ ಅನ್ವಯಿಸುತ್ತದೆ.

'ನ ಮಾನುಷಾತ್ ಶ್ರೇಷ್ಠತರಂ ಹಿ ಕಿಂಚಿತ್' ಎಂಬ ಮಹಾಭಾರತದ ಉಕ್ತಿ 'ಮನುಷ್ಯನಿಗಿಂತ ಮಿಗಿಲಾದುದು ಮತ್ತೊಂದಿಲ್ಲ' ಎಂಬ ಅರ್ಥವನ್ನು ಕೊಡುತ್ತದೆ. ಆತ್ಮಾನುಭಾವಿಗಳೂ, ನಿರ್ಭಾವದಾಚಾರ ನಿರತರೂ, ಅಗ್ಗಳಿಕೆಯ ವಿಬುಧರೂ ಆದ ರಾಮರಾಯರು ಮಾನವನ ದಿಟವಾದ ಬದುಕು ಯಾವುದು ಎಂಬುದನ್ನು ತಮ್ಮ ಎಲ್ಲ ಕೃತಿಗಳಲ್ಲಿಯೂ ಚೆನ್ನಾಗಿ ನಿರ್ದೇಶಿಸಿದ್ದಾರೆ. ಅವರ ಬದುಕಿನ ನಿಲವು ನಿಚ್ಚಳ, ಅವರದು ಸ್ವಚ್ಛ ಜೀವನ, ಸರ್ವೋಚ್ಚ ದರ್ಶನ.

ಪರಿಪಕ್ವ ಭಾವಾಚಾರದ ಫಲವಾಗಿ ಸಾಮರಸ್ಯದ ದೃಷ್ಟಿಗೆ ಮಾನವನು ಲೋಕ ಕಲ್ಯಾಣಕ್ಕೆ ಸನ್ನದ್ಧವಾಗುವ ಮುನ್ನ ಆತ್ಮಕಲ್ಯಾಣವನ್ನು ಆರ್ಜಿಸಬೇಕು, ಸ್ವಯಂ ಚಾರಿತ್ರ್ಯದ ಶುಭ್ರತೆಯನ್ನು ಸಂಗಳಿಸಿಕೊಳ್ಳಬೇಕು. ಕಳಂಕರಹಿತ ಜೀವನವೇ ಕಳಾ ಜೀವನ. ಪ್ರಥಮತಃ ಆಸೆಗೆ ಒಳಗಾಗಬಾರದು, ಎಲ್ಲ ಅಂಗಾಂಗಗಳೂ ಬಣ್ಣಗೆಡಬಾರದು ಎಂದರೆ ತಮ್ಮ ಸದ್ಗುಣ ಸತ್ಕ್ರಿಯೆಗಳನ್ನು ತ್ಯಜಿಸಿರಬಾರದು. ಕುಲಮದಕ್ಕೆ ಸಿಕ್ಕಿ ವಿನಯ ವಿವೇಕಗಳನ್ನೂ ಸಮಭಾವ ಸಹಕಾರಗಳನ್ನೂ ಕಳೆದುಕೊಳ್ಳಬಾರದು–ಅದೇ ಮಹಾಘನ ಶಕ್ತಿಯಿಲ್ಲದೆ ಭಕ್ತಿಯಿಲ್ಲ ; ಭಕ್ತಿಯಿಲ್ಲದೆ ಶಕ್ತಿಯಿಲ್ಲ. ಉಪಾಸನ ಪಥದಲ್ಲಿ ಭೇದವಾಗಿ ಉಪಾಸನಾಂತ್ಯದಲ್ಲಿ ಅಭೇದವಾಗಿರುವುದೇ ಸ್ವಾಭಾವಿಕ ! ಬಹಿರಂಗದ ಕರ್ತೃತ್ವದಲ್ಲಿ ಶಕ್ತಿ, ಅಂತರಂಗದ ಭೋಕ್ತೃತ್ವದಲ್ಲಿ ಭಕ್ತಿ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ, ಇವೆರಡರ ಸಾಮರಸ್ಯವೇ ಮಹಾಕಲ್ಯಾಣ ; ಮಾನವೀಯ ಮಹಾಸ್ಥಾನ ಎಂಬುದನ್ನು ತಮ್ಮ ಮಹಾಕಾವ್ಯ 'ಶ್ರೀ ಕೃಷ್ಣದರ್ಶನ'ದಲ್ಲಿ ಪ್ರತಿಪಾದಿಸಿದ್ದಾರೆ.

ಬಸವಣ್ಣನವರು ಎಲ್ಲ ಪ್ರಾಣಿಗಳಲ್ಲಿಯೂ ದಯೆಯಿರಬೇಕೆಂದು ತಿಳಿಸಿದರೆ ರಾಮರಾಯರು ಎಲ್ಲ ಕಾಲದಲ್ಲಿಯೂ ದಯೆಯಿರಬೇಕೆಂದು ಹೇಳಿ ಲಕ್ಷಣದ ಕೊರತೆಯನ್ನು ಪೂರೈಸಿದ್ದಾರೆ.

ಪ್ರಾಮಾಣಿಕವಾದ, ಪರಿಣಾಮಕಾರಕವಾದ ಭಗವತ್ ಸಚ್ಚರಿತ್ರವನ್ನು ಶ್ರವಣ ಮಾಡುವುದಕ್ಕಿಂತ ಶ್ರೇಷ್ಠ ಸನ್ನಿಹಿತ ಸುಖ ಬೇರೊಂದಿಲ್ಲ–ಇದು ದೊರೆಯುವುದು ಮಹಾಭಾಗ್ಯ. ಜ್ಞಾನಿಗಳ ಸಂಗದಿಂದ ಉಭಯಸಂಗ ಸಿದ್ಧಿ ; ಅದೇ ತವನಿಧಿ ಎಂದು ಸಾರಭೂತವಾಗಿ ತಮ್ಮ ಬಹುತೇಕ ಕೃತಿಗಳಲ್ಲಿ ತತ್ವಗಳ ಭಟ್ಟಿ ಇಳಿಸಿದ್ದಾರೆ.

ಸತ್ಯ ಶಕ್ತಿಯನ್ನು ಗುರುತಿಸಿ ಗೌರವಿಸುವುದು ಸೌಜನ್ಯದ ಸಂಕೇತ, ಸರ್ವಾದರ್ಶ ಸಂಕೇತ, ಸಮರಸಭಾವ ಪ್ರತೀಕ. ತನ್ನ ಸ್ಥಾನಮಾನಗಳನ್ನೇ ಮುಂದುಮಾಡದೆ, ತಾನೇ ಹೊತ್ತು ಮೆರೆಯದೆ ತನ್ನಂತೆ ಉಳಿದವರನ್ನು ಕಾಣುವ ಸಮದರ್ಶಿತ್ವ ರಾಯರದು. ಅದರಿಂದ ಅವರ ನಿಲವು ಇನ್ನೂ ಎತ್ತರಕ್ಕೇರಿ ಅವರು ಸಾಹಿತ್ಯ ಪ್ರಪಂಚದಲ್ಲಿ ಗೌರೀ ಶಂಕರವಾಗಿ ರಾರಾಜಿಸುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

ಆರ್ಥಿಕ ದಾರಿದ್ರ್ಯಕ್ಕಿಂತ ಆಚಾರ ದಾರಿದ್ರ್ಯ ದೂಷ್ಯ ; ದುಸ್ಸಹ ; ಹೇಯ. ಅನಾಚಾರದ ಅಪವಿತ್ರ ಭೂಮಿಕೆಯ ಮೇಲೆ ಮಾನವೀಯ ಆತ್ಮ ಹನನ ಸಾಗುತ್ತಿದೆ. ಪ್ರತಿನಿಮಿಷದಲ್ಲೂ ಅನಾಚಾರದ ಮಬ್ಬು ಕಣ್ಣುಗಳ ಮೇಲೆ ಕವಿಯುತ್ತಿದೆ. ಎಲ್ಲಿಯೋ ಇರುವ ಆಚಾರ ಪ್ರಕಾಶದತ್ತ ಹೋಗಲು ಮನಸ್ಸುಮಾಡದು, ಬುದ್ಧಿಬಾರದು. ಹೊಲಬುದಪ್ಪಿ ಹಳ್ಳಕೊಳ್ಳಗಳಿಗೆ ಬೀಳುವವರೇ ಎಲ್ಲ. ಮಾನವರೆಂಬ ಕಲ್ಪನೆಯೂ ಇಲ್ಲವಾಗಿದೆ. ಭಾವುಕತೆ ಬಿಟ್ಟು ಹೋಗಿದೆ. ಹೃದಯಶೂನ್ಯತೆ, ಮರುಭೂಮಿಯಂತಾಗಿದೆ, ಬಾಳೆಲ್ಲ ಅಸ್ತವ್ಯಸ್ತ ; ಬದುಕೆಲ್ಲ ಅಪ್ರಶಸ್ತ. ಹಿನ್ನೋಟ ಮುನ್ನೋಟವಿಲ್ಲ ; ಪವಿತ್ರ ಪ್ರೇಮಭಾವವಿಲ್ಲ.ಬಾಳಕಾನನದಲ್ಲಿ ವಿಷಯಾಸೆಯೆಂಬ ಬಿಸಿಲ್ಗುದುರೆಯ ಬೆನ್ನು ಹತ್ತಿದಂತಿದೆ. ತಿಳಿಮನವಿಲ್ಲ, ಬೀಳು ಬಯಕೆಗಳಿಗೆ ಕೊನೆಮೊದಲಿಲ್ಲ. ಅನಾಚಾರ ಅಪ

ಚಾರಗಳ ಪಂಕದಲ್ಲಿ ಬಿದ್ದು ಒದ್ದಾಡುವುದೇ ಬದುಕೆಂದು ಮಂದಿ ಭ್ರಮಿಸಿದ್ದಾರೆ– ಇಂಥ ಪ್ರಗಲ್ಭವೂ ಬುದ್ಧಿಯನ್ನು ಕೆಣಕುವ, ಬುದ್ಧಿಗೆ ಕಸರತ್ತನ್ನು ನೀಡುವ ಪುಂಖಾನು ಪುಂಖವಾದ ವಾಗ್ಧಾರೆ ಹಾಗೂ ಅಚ್ಚುಕಟ್ಟಾದ ಬರವಣಿಗೆಯ ದಟ್ಟ ನೆಲೆಗಟ್ಟು ರಾಯ ರದು. "ವಾಗರ್ಥಗಳ ಉಮಾಮಹೇಶ್ವರರ ಮೆರವಣಿಗೆ ರಾಮರಾಯರ ಬರವಣಿಗೆ."

ಆತ್ಮಾನಮಖಿಲಂ ವಸ್ತು ಶಿವಾನಂದ ಚಿನ್ಮಯಂ ।
ಏಕೀಭಾವೇನ ಸತತಂ ಸಂಪಶ್ಯನ್ನೇವ ಪಶ್ಯತಿ ॥

ಈ ಏಕೀಭಾವ ಶ್ರೀ ಸಮೇತನಹಳ್ಳಿ ರಾಮರಾಯರದು. ಸೋಮಾರಿಯಾಗಿದ್ದ ನನ್ನ ಮೇಲೆ ಅನೇಕಬಾರಿ ಒತ್ತಡ ಹೇರಿ, ಕಾಡಿ ಬೇಡಿ ಕೊನೆಗೂ ಈ ಲೇಖನ ಬರೆಸಿದ ಶ್ರೀಮತಿ ಭಾರತೀ ಕಾಸರಗೋಡು ಅವರಿಗೆ ನಾನು ಎಷ್ಟು ಋಣಿಯಾಗಿದ್ದರೂ ಸಾಲದು. ಶ್ರೀ ರಾಸ ಸಾಹಿತ್ಯ ಇನ್ನೂ ಇತೋಪ್ಯತಿಶಯವಾಗಿ ಬೆಳೆದು ಪ್ರವರ್ಧಿಸಲಿ, ಅದಲ ಫಲ ಕನ್ನಡಿಗರಿಗೆ ದೊರೆಯಲಿ. ಎಂಬತ್ತರ ಹರೆಯದ ರಾಮರಾಯರು ಶತಾ ಯುಷಿಗಳಾಗಲಿ ವರ್ಧಿಷ್ಣುಗಳಾಗಲಿ ಎಂಬುದೇ ಭಗವಂತನಲ್ಲಿ ನಮ್ಮ ಪ್ರಾರ್ಥನೆಯಾಗಲಿ.

ತಾವು ವಿಶ್ವಾಸದಿಂದ ಕಳುಹಿಸಿದ 'ಸ್ವರ್ಗಸೋಪಾನ'ದ ಪ್ರತಿಯು ಬಂದು ಸೇರಿತು. ತಾವು ಅದನ್ನು ಕಳುಹಿಸಿದುದಕ್ಕಾಗಿ ಸಪ್ರೇಮ ವಂದನೆಗಳನ್ನು ಸಮರ್ಪಿಸುತ್ತೇನೆ. ನಾನು ಅದನ್ನು ಓದಿ ಬಹಳವಾಗಿ ಹರ್ಷಿಸಿದೆ. ಅದೊಂದು ಉತ್ತಮ ಗ್ರಂಥ. ತಮ್ಮಿಂದ ಇದೇ ರೀತಿ ಚಿರಕಾಲ ಶ್ರೇಷ್ಠ ರೀತಿ ಯಲ್ಲಿ ಸಾಹಿತ್ಯಸೇವೆ ನಡೆಯಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

೨೭-೩-೬೩ ಸಿ. ಕೆ. ವೆಂಕಟರಾಮಯ್ಯ

'ಕೋಟೆಮನೆ'ಯ ರಾ.ಸ. ಲೀಲೆ

ಎನ್ಕೆ

ಸಮೇತನಹಳ್ಳಿಯ ವಂಶವೃಕ್ಷವನ್ನು ಪಾಲಿಸಿದ 'ಕೋಟೆಮನೆ'ಯ ಶಾಖೆ ಮೈಸೂರಿನ 'ಕೋಟೆಮನೆ'ಯ ಕಸಿಯಾಗಿ ಬೆಳೆದು ಎರಡೂ ಕೋಟೆ ಮನೆಗಳಲ್ಲಿ ನಮ್ಮ 'ರಾ. ಸ.ರು' (ರಾಮರಾಯರು ಸಮೇತನಹಳ್ಳಿ) ಅನುಭವಿಸಿದ ತೊಳಲಾಟದ, ವೃದ್ಧಾಪ್ಯದ ತೃಪ್ತಿಯ ಬದುಕಿನ ಆ ಬದುಕಿನ ಪ್ರತಿಫಲಿತ ಬರವಣಿಗೆಯ ಬಗೆ ಬಗೆಯ ರಾಸಲೀಲೆಯ ರೂಪರೇಷೆ ಇದು ಈ ಪುಟ್ಟ ಲೇಖನ. ಆ ಬೆಟ್ಟದಂತಹ ವ್ಯಕ್ತಿತ್ವದ, ವ್ಯಕ್ತಿಮತ್ತೆಯ, ಆ ಬಾಳಿನ ಜಾಳಿಗೆಯ ಜಂಜಾಟದ ಹಾಗೂ ಆ ಸಂಕೀರ್ಣ ಜೀವನ ದಿಂದುದ್ಭವಿಸಿದ ಸಾಹಿತ್ಯ ಸಂಕೀರ್ಣತೆಯ ವೈವಿಧ್ಯ, ವೈಪುಲ್ಯಗಳನ್ನು ತಲಸ್ಪರ್ಶಿಯಾಗಿ ಆಲೇಖಿಸುತ್ತ ಹೋದರೆ ಅದೊಂದು ಡಬಲ್ ಪಿಎಚ್.ಡಿ.ಯ ಡಬಲ್ ಮಹಾಪ್ರಬಂಧ ಗಳ ವಸ್ತುವಾದೀತು–ಆ ಬದುಕು–ಬರೆವಣಿಗೆಯ ಶ್ರೀಮಂತ ದ್ರವ್ಯ !

ನಮ್ಮ ರಾಸರ ಬರೆವಣಿಗೆಯೆಂದರೆ ರಸದಿಂದ ಉದ್ಭವಿಸಿರುವುದರಿಂದ ಅವರ ನಾಮಾಂಕಿತ ಕಾವ್ಯನಾಮವೆ 'ರಾ.ಸ.'ವಾಗಿದೆ. 'ರಸೋ ವೈ ಸಃ' ಎಂಬಂತೆ ಸುಮಾರು ಹನ್ನೊಂದೂವರೆ ಸಾವಿರ ಪುಟಗಳ (ಕ್ರೌನ್ ಅಷ್ಟದಲ) ಗಾತ್ರದ ಸಾಹಿತ್ಯ ರಾಸರಿಂದ ಕೇವಲ ಭಗವತ್‌ಪ್ರೇರಣೆಯಿಂದ ಸೃಷ್ಟಿಯಾಗಿದೆ ಎನ್ನುವುದು ಸ್ಪಷ್ಟ ! ಏಕೆಂದರೆ ಶೈಕ್ಷಣಿಕವಾಗಿ ಕಾಲೇಜ್‌ಕಟ್ಟೆ ಏರಿ ಪದವೀಧರ ಸರ್ಟಿಫಿಕೆಟ್ ಎಂಬ ಮಾರ್ಕೆಟ್ ಮೌಲ್ಯದ ಚೀಟಿ ಅಂಟಿಸಿಕೊಳ್ಳದೆ ಕೇವಲ ಪ್ರೌಢಶಾಲಾ ಶಿಕ್ಷಣದ ಬಲದಿಂದಲೆ ಇಂತಹ ಪ್ರಾತಿಭ ಸಾಹಿತ್ಯ ಸೃಷ್ಟಿಯ ಪರ್ವತವೊಂದನ್ನು ತಮ್ಮ ಲೇಖನಿಯ ಬೆರಳಿನಿಂದ ಹೂ ಸರೆದಂತೆ ಎತ್ತಿ ನಿಲ್ಲಿಸುವುದು ಸಾಧ್ಯವೇ ? ಮೈಸೂರು 'ಕೋಟೆಮನೆ'ಯ ನೆರಳಿನಲ್ಲಿ ಬರೆದ ತಮ್ಮ ಬಾಳಿನ ಕತೆಗಳ ೪೨೨ ಪುಟಗಳ ಈ ಬೃಹದಾತ್ಮ ಕಥೆ ಬಡವರ ಆತ್ಮಕಥೆಯಾಗಿ (VIP ಗಳೇ ಆತ್ಮಕಥೆ ಬರೆಯಬೇಕೆಂಬ ಕಾಯಿದೆ ಏನೂ ಇಲ್ಲವಲ್ಲ !) ಬಂಗಾರದಂಥ ಸಾಹಿತ್ಯ ನಿರ್ಮಿಸಿದೆ.

ಜಿ. ಪಿ. ರಾಜರತ್ನಂ ತಮ್ಮ 'ಹತ್ತುವರ್ಷ' ಎಂಬ ತಮ್ಮ ಸಾಹಿತ್ಯ ಸೃಷ್ಟಿಯ ಕಥೆಯ ನಿರೂಪಣೆಯಲ್ಲಿ ಒಂದೆಡೆಗೆ ಹೇಳುತ್ತಾರೆ–ತಮ್ಮ ಸಾಹಿತ್ಯ ಹೆಚ್ಚಾಗಿ ಬಾಳಿನ irritation ನಿಂದ ಹೊರಹೊಮ್ಮಿದೆಯಲ್ಲದೆ inspiration ನಿಂದಲ್ಲ ಎಂದು. ಹಾಗೆ 'ರಾ.ಸ.' ಅವರ ಪ್ರಥಮ ಸಾಮಾಜಿಕ ಕಾದಂಬರಿಯ ಹಸ್ತಪ್ರತಿಯೊಂದು ('ಸಂದೇಶ') ತಮ್ಮ ಬಾಳಿನ ಕಹಿಯ ಸಂಘರ್ಷದ ಫಲವಾಗಿ ಹೊರಹೊಮ್ಮಿ ಮುಂದೆ ಪ್ರಕಾಶಕರು

ಅದನ್ನು ಹಿಂದಕ್ಕೆ ಕಳಿಸಿಕೊಟ್ಟಾಗ ತಾವೇ ಅದನ್ನು 'ಕ.ಬು.'ಗೆ ಅರ್ಪಣೆ ಮಾಡುತ್ತಾರೆ. ಎಷ್ಟೊ ಕವನಗಳ ರಾಶಿಯನ್ನು ಅಗ್ನಿದೇವನಿಗೆ ಆಹುತಿಯಾಗಿ ಹೋಮಿಸುತ್ತಾರೆ.

ಬಾಲ್ಯದಿಂದಲೆ ರಾ. ಸ. ಅವರು ಕಿತ್ತುತಿನ್ನುವ ಬಡತನದ ಶಿಶುವಾಗಿ ಕಷ್ಟ ಸಂಕಷ್ಟಗಳನ್ನೆದುರಿಸಲೆಂದೆ ಭೂಮಿಯ ಮೇಲೆ ಬಂದಿರುವಂತೆ ಬೆಳೆಯುತ್ತ ವಿದ್ಯಾರ್ಥಿ ದೆಸೆಯನ್ನಂತೂ ಗಾಯತ್ರಿ ಮಂತ್ರಕ್ಕಿಂತ 'ಭವತೀ ಭಿಕ್ಷಾಂ ದೇಹಿ' ಎಂಬ ಸಪ್ತಾಕ್ಷರಿ ಬೀಜ ಮಂತ್ರದ ಬಲದಿಂದಲೆ ಬದುಕುಮಾಡಿ ಬೆಳೆಯುತ್ತಾರೆ. 'ದುಃಖ ಸಂವೇದನಾಯೈವ ರಾಮೇಚೈತನ್ಯಮಾಹಿತಂ' ಎಂದು ಭವಭೂತಿ ಕವಿಯ (ಉತ್ತರರಾಮ ಚರಿತದ) ಶ್ರೀ ರಾಮಚಂದ್ರನು ನುಡಿಯುವ ಮಾತನ್ನು ನಮ್ಮ ರಾಮರಾಯರಿಗೂ ಅನ್ವಯಿಸಬಹು ದಾಗಿದೆ. ರಾಮರಾಯರಷ್ಟೆ ಏಕೆ, ಅವರ ತಾಯಿ ಕೂಡ ಬಡತನದಲ್ಲಿ ಬ್ರಹ್ಮೇತಿ ಎಂಬಂತೆ, ಯಜಮಾನರ (ರಾಮರಾಯರ ತಂದೆ) ಅಸಹಕಾರ. ಅಹಂಕಾರ ಔದಾಸೀನ್ಯ ಗಳಿಂದ ತ್ರಸ್ತರಾಗಿ ಪಟ್ಟ ತಾಪತ್ರಯಗಳನ್ನು ಬಾಲಕ ರಾಮರಾಯರು ಅಷ್ಟು ಚಿಕ್ಕ ವಯಸ್ಸಿನಲ್ಲೇ ಕಣ್ಣಾರೆ ಕಂಡು ಸಂವೇದನಶೀಲರಾಗಿ ತಮ್ಮ ೭೩ನೆಯ ವಾರ್ಧಕ್ಯದಲ್ಲೂ ಕರುಳುಕರಗುವಂತೆ ಬಣ್ಣಿಸುತ್ತಾರೆ. ಅಕ್ಕಿಬೇಳೆಯನ್ನು ಕೈ ಸುಟ್ಟುಕೊಂಡು ಬೇಯಿಸು ವುದರೊಂದಿಗೆ ತಾವೂ ಬೇಯುತ್ತಿದ್ದರಂತೆ ! ಸ್ನಾನ ಮಾಡುತ್ತಿದ್ದ ತಂದೆ, ಸ್ನಾನದ ನೀರು ಬಿಸಿಯಾಗಿದ್ದರೆ ತಾನೇ ಒಂದು ಕೊಡ ನೀರನ್ನು ಸೇದಿಕೊಂಡು ಬೆರೆಸಿ ಸ್ನಾನ ಮಾಡುತ್ತಿರಲಿಲ್ಲ. ಎಷ್ಟೋ ವೇಳೆ ನಾನು ಕಂಡಂತೆ ತಾಯಿ ಮಡಿಯ ನೀರನ್ನೆ ಗಂಡನ ಸ್ನಾನಕ್ಕೆಂದು ಕೊಟ್ಟು, ಅಡುಗೆಯನ್ನು ಇದ್ದಂತೆ ನಿಲ್ಲಿಸಿ, ಹೋಗಿ ನೀರನ್ನು ತಂದದ್ದು ಉಂಟು. 'ಹೆಂಡತಿಯ ಈ ಕಡು ಕಷ್ಟದ ಜೀವನವನ್ನು ಅವರು ಹೆಂಗಸಿನ ಕರ್ತವ್ಯದ ದೃಷ್ಟಿಯಿಂದ ಕಂಡರು ; ತಮ್ಮ ಆ (ಪತಿಯ) ಅಧಿಕಾರವನ್ನು ಉಪಯೋಗಿಸುತ್ತ, ನಿರ್ಲಿಪ್ತತೆಯ ಈ ಸುಖವನ್ನು ಕೊನೆವರೆವಿಗೂ ಅನುಭವಿಸಿದರು' ಎಂದಿದ್ದಾರೆ. (ಪು. ೨೪, 'ಕೋಟೆಮನೆ.') ಮೂರು ವರ್ಷದ ಬುದ್ಧಿ ನೂರು ವರ್ಷದ ವರೆಗೆ ಎನ್ನುವುದು ಸುಳ್ಳಲ್ಲ. 'ನನ್ನ ತಂದೆ ಹೆಬ್ಬಾವಿನ ಈ ಜೀವನ ವಿಧಾನವನ್ನು ಅನುಸರಿಸಿಕೊಂಡು ಬಂದರು' ಎಂದು ಅಂದಿನ ಚಿಕ್ಕಮಗ ಇಂದಿನ ತನ್ನ ವೃದ್ಧಾಪ್ಯದಲ್ಲಿ ಸ್ಮರಿಸಿಕೊಂಡು ಬರೆಯುತ್ತಾರೆ !

ಮಿಡಲ್‌ಸ್ಕೂಲ್ ವಿದ್ಯಾರ್ಥಿಯಾಗಿ ನಿತ್ಯ ಸಮೇತನಹಳ್ಳಿಯಿಂದ 'ವೈಟ್ ಫೀಲ್ಡ್' ರೈಲ್ವೆ ಸ್ಟೇಶನ್‌ಗೆ ಬಂದು ಅಲ್ಲಿಂದ ಬೆಂಗಳೂರು ಸಿಟಿ ಸ್ಟೇಶನ್‌ಗಿಳಿದು ಬಳೇ ಪೇಟೆಯ ಬಳಿಯ ಆರ್ಯವಿದ್ಯಾಶಾಲೆಗೆ ಹೋಗಿ ಬರಬೇಕು ! ಹೈಸ್ಕೂಲು ವಿದ್ಯಾರ್ಥಿ ಯಾಗಿ ಬೆಂಗಳೂರಿನಲ್ಲೇ ಯಾರದೊ ನೆರಳಿನಲ್ಲಿದ್ದು ಮಧುಕರವೃತ್ತಿಯಿಂದ ಉದರ ನಿರ್ವಾಹ ಮಾಡುವರು. ಬೆಳಗಿಗೂ ಅದೇ ಭಿಕ್ಷಾನ್ನವನ್ನಿಟ್ಟುಕೊಂಡು ಹಗಲಿನ ಯಾತ್ರೆ ಮುಗಿಸುವರು. ಮರುದಿನ ಬೆಳಿಗ್ಗೆ ಶಾಲೆಗೆ ಹೋಗಬೇಕಾದಾಗ ಬರಿ ಹೊಟ್ಟೆಯಿಂದ ಹೋಗುವ ಪ್ರಸಂಗವೇನೂ ಇರಲಿಲ್ಲವಂತೆ ! ಏಕೆಂದರೆ ಹಿಂದಿನ ದಿನದ ತಂಗಳನ್ನ ಹಳ ಸಿದ ಸಾರು ಹೊಟ್ಟೆಗಾಧಾರವಾಗಿತ್ತೆಂದು ಖುಷಿಪಟ್ಟು ಹೇಳುಹಾಗ ನಮ್ಮ ಕರುಳು ಚುರುಗುಡುತ್ತದೆ.

ಅರ್ಧದಿನದ ರಜೆಯಿದ್ದಾಗ ಮಧ್ಯಾಹ್ನ ಎರಡೂವರೆ ಗಂಟೆಗೇ ಕಬ್ಬನ್‌ಪಾರ್ಕಿನ ಸಾರ್ವಜನಿಕ ಲೈಬ್ರರಿಗೆ ಹಸಿದ ಹುಲಿಯಂತೆ ಹೋಗುವರು. ಹೇಗೆ ಹೇಗೆ ಒಳದಾರಿ ಹುಡುಕಿಕೊಳ್ಳುತ್ತ ಕಬ್ಬನ್‌ಪಾರ್ಕ್‌ನ ಗೇಟಿಗೆ ಬಂದು ಮುಟ್ಟುತ್ತಿದ್ದರೆಂಬುದನ್ನು ವರ್ಣಿಸುವಾಗ, ಲೈಬ್ರರಿ ಸಿಪಾಯಿ ವಾಗ್ದೇವಿಯ ಭಾಂಡಾರದ ಬೀಗಮುದ್ರೆಯನ್ನು ತೆರೆಯುವುದೇ ತಡ ಒಳಗಿನ ಆ ಸರಸ್ವತೀ ಸಂಪತ್ತನ್ನು ಸೂರೆಗೊಳ್ಳುವ ಅವರ ತವಕ, ಆ ಲೈಬ್ರರಿಯ ಮೆತ್ತೆಯ ಕುರ್ಚಿಗಳು, ಆ ಸಾಹಿತ್ಯದ ಚಿನ್ನದ ಗಣಿ ಕೈಗೇ ಎಟಕುವಂತಿರುವ ಸಂಭ್ರಮಗಳನ್ನೆಲ್ಲಾ ವರ್ಣಿಸುವಾಗ ಈ ಬಡ ಬ್ರಾಹ್ಮಣ ವಿದ್ಯಾರ್ಥಿಯ ಈ 'ಭವತಿ ಭಿಕ್ಷಾಂದೇಹಿ'ಯ ಪುಸ್ತಕವಾಚನವ್ಯಸನ ಎಷ್ಟರಮಟ್ಟಿನದಪ್ಪ–ಎಂದು ಬೆರಳು ಕಚ್ಚುತ್ತೇವೆ! Rt. Hon'ble ಶ್ರೀನಿವಾಸ ಶಾಸ್ತ್ರಿಗಳ, ಸರ್ ಸಿ. ವಿ. ರಾಮನ್‌ರಂತವರ ಭಾಷಣ ಕೇಳುವ ಸದವಕಾಶ, ಮಾನ್ಯ ಮಿರ್ಜಾ ಸಾಹೇಬರನ್ನು ಕಾಣುವ ಅವಕಾಶ ಇವೆಲ್ಲಾ ದೇವಪ್ರೇಷಿತ.

ಹಾಗೆ ಕಲಿಯುವದಕ್ಕೆ ಲಲಿತವಾದ ಮಾರ್ಗ, ಅನುಕೂಲಾವಕಾಶಗಳು ದೊರೆತಿದ್ದರೆ ನಮ್ಮ ರಾಮರಾಯರು ಜಿಗಿಜಿಗಿದು ಓದಿ ಪದವೀಪರೀಕ್ಷೆಗಳನ್ನೆಲ್ಲಾ ನುಂಗಿ ಸಹಜವಾಗಿ ಡಾಕ್ಟರೇಟ್ ಪದವಿ ಪಡೆಯುತ್ತಿದ್ದರು! ಆದರೆ . . .

ಪೂರ್ತಿ ಪ್ರೌಢಶಾಲೆಯ ವ್ಯಾಸಂಗವನ್ನು ಮುಗಿಸಿದುದೇ ಒಂದು ಪುಣ್ಯವೆನ್ನಬೇಕು. ಹಿರಿಯ ಗಂಡಸು ಮಗನಾಗಿ ತಂಗಿಯ ಮದುವೆ, ತಮ್ಮಂದಿರ ಭವಿಷ್ಯ, ಮನೆಯ ವ್ಯವಹಾರ, ಹಸಿದ ಬಾಯಿಗಳಿಗೆ ಅನ್ನ ಸಂಪಾದನೆಗಳ ಹೊಣೆ ರಾಮರಾಯರನ್ನು ಹಗ್ಗ ಹಾಕಿ ಎಳೆಯಿತು! ಆಯಿತು. ಕಾಲೇಜಿಗೆ ಕತ್ತರಿ ಬಿತ್ತು! ಉದ್ಯೋಗ ಹುಡುಕಿಕೊಳ್ಳಬೇಕಲ್ಲ! ಹೊಟೆಲ್ ಮಾಣಿ, ಬ್ರೆಡ್‌ಬೇಕರಿ ಕೆಲಸ, ಬಸ್ ಕಂಡಕ್ಟರ್ ಎಲ್ಲಾ ಬಹುಕೃತವೇಷಗಳಾದವು. ಉದರ ನಿಮಿತ್ತ ಮಾತ್ರ ಬಗೆಹರಿಯಲಿಲ್ಲ!

ಅಂತೂ ಒಮ್ಮೆ ದೈವ ಕಣ್ದೆರೆಯಿತು! ೪–೯–೧೯೪೪! ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್–ಎಂದು ನೇಮಕ! ಸರಕಾರೀ ನೌಕರಿ! ಸರಕಾರೀ ಸೇವೆಯಲ್ಲಿ ಪ್ರಾಮಾಣಿಕತೆ, ದೇವರ ಸಾಕ್ಷಿಯಾಗಿ ಕರ್ತವ್ಯನಿರ್ವಹಣೆ ಇಷ್ಟೇ ಸಾಲದು. ಮೇಲಿನವರನ್ನು ಸೀಸೀ ಮಾಡುವ ಚಾಣಾಕ್ಷತನ ಬೇಕು. ಅದು ಬಿಟ್ಟು ಅದರ ಸ್ಥಾನದಲ್ಲಿ ಸ್ವಾಭಿಮಾನ ಬಂದುಬಿಟ್ಟರೆ ? ರಾತ್ರಿ ನಿದ್ದೆಕೆಟ್ಟು ಓದಿ ಹಳಗನ್ನಡ ಕಾವ್ಯಗಳನ್ನೂ ರಾಮಾಶ್ವಮೇಧವನ್ನೂ ಆಧುನಿಕ ಸಾಹಿತ್ಯ ಕೃತಿರತ್ನಗಳನ್ನೂ ಓದಿ ಪತ್ರಿಕೆಗಳಿಗೆ ಕಾವ್ಯ ಬರೆಯತೊಡಗಿದರೆ ಮೇಲಿನವರಿಗೆ ಅಸೂಸೆಯಾಗದೆ ಇದ್ದೀತೆ ? ನಿದ್ದೆಕಟ್ಟಿ ಓದಿದರೂ negligence of duty ಎಂದು ಶಾಪಾದಪಿ ಶರಾದಪಿ ಶರಾ ಬರೆಯುವ ಹಕ್ಕು ಮೇಲಧಿಕಾರಿಗೆ ಇದ್ದೇ ಇರುತ್ತದೆ. ಹೀಗಾಗಿ ಕೌಟುಂಬಿಕ ಹೊಣೆ, ನಿತ್ಯದ ಸೈಕಲ್ ಓಡಾಟ, ಇತ್ತ ಆಫೀಸಿನಲ್ಲಿ ಕಿರುಕುಳಗಳು ತಿಗಣೆ, ಸೊಳ್ಳೆಗಳಂತೆ ರಾಮರಾಯರ ರಕ್ತ ಹೀರಿದವು. ಆದರೂ ಆಫೀಸ್ ಕರ್ತವ್ಯ ನಿರ್ವಹಣೆಯಲ್ಲಿ ಚ್ಯುತಿ ತಂದುಕೊಳ್ಳಲಿಲ್ಲ. ಲಂಚ, ಅವ್ಯವಹಾರಗಳಂತೂ ಸುತರಾಂ ಇಲ್ಲ.

ಮಲೇರಿಯಾ ಸ್ಥಳಗಳಲ್ಲಿ ಕ್ವಿನೈನ್ ಮಾತ್ರೆ ಹಂಚುವುದು, ರೋಗಿಗಳು ನೆವಹೇಳಿ ಮನೆಯೊಳಗೆ ಶೇಖರಿಸಬಾರದೆಂದು ಸ್ಥಳದಲ್ಲಿ ಅವರಿಂದ ಮಾತ್ರೆಗಳನ್ನು ನುಂಗಿಸಿ ಮತ್ತೆ ಎರಡು ರಾತ್ರಿ ಡೋಜ್ ಎಂದು ವಿತರಿಸುವುದು. ಇದು ಸರಕಾರೀ ಆಜ್ಞೆ. ಜ್ಯೂ. ಆರೋಗ್ಯಾಧಿಕಾರಿ ರಾಮರಾಯರು ಈ ನಿಯಮ ಪಾಲಿಸುತ್ತಿರುವಾಗ ಒಬ್ಬ ಬಿಗುಮಾನದ ಗೃಹಸ್ಥ–'ನೀನೇನು ಮನ್ಮಥನೋ, ಶ್ರೀಕೃಷ್ಣನೋ ? ಚೆಲುವೆಯರೆಲ್ಲಾ ನಿನ್ನಲ್ಲಿಗೇ ಬರಬೇಕು, ಮಾತ್ರೆ ಸ್ವೀಕರಿಸಬೇಕು ಎಂಬ ನೆವದಿಂದ ಅವ್ಯಾಪಾರ ನಡಿಸಿದ್ದೀಯಂತೆ!' ಎಂದೆಲ್ಲಾ ನುಡಿದಾಗ ರಾಮರಾಯರು–'ನಾನು ಮನ್ಮಥ'ನಾಗಿದ್ದರೆ ನನ್ನ ಪತ್ನಿಗೆ ಮಾತ್ರ ! ನಾನು 'ಶ್ರೀಕೃಷ್ಣನಲ್ಲ–ಶ್ರೀರಾಮ !' ಎಂದು ಉತ್ತರಿಸಿದಾಗ ಆ ಸದ್ಗೃಹಸ್ಥ ಇನ್ನಷ್ಟು ರೇಗಿದ. 'ಸರಕಾರಿ ಅಪ್ಪಣೆಯಂತೆ ರೋಗಿಗಳು ಇಲ್ಲಿ ಬಂದೇ ಮಾತ್ರೆ ಸೇವಿಸಿ ಮತ್ತೆ ಕೊಂಡೊಯ್ಯುವುದು' ಎಂದು ನುಡಿದಾಗ ಈ ತಕರಾರು ಬಗೆಹರಿಯುವ ತನಕ ನಮ್ಮ ಆರೋಗ್ಯಾಧಿಕಾರಿ ತನ್ನ ಸ್ವಾಭಿಮಾನ, ಕರ್ತವ್ಯಬದ್ಧತೆ ಕಡೆಗಣಿಸಲಿಲ್ಲ. ಈ ಕೆಟ್ಟ ಪ್ರಸಂಗ ಹೇಗೊ ದಾಟಿತು.

ರಾಮರಾಯರಿಗೆ ಉಂಟಾದ ಬೇಸರದಿಂದ ವರ್ಗಾವಣೆ ಬೇಡಿದರು. ಮೇಲಿನ ಅಧಿಕಾರಿ ಸಾನುಭೂತಿಪರವಾಗಿ ಇವರಾಯ್ಕೆಯ ಹಾಸನ್‌ಗೇ ವರ್ಗಾಯಿಸಿದರು. ರಾಮರಾಯರಿಗೆ ಇಮ್ಮಡಿ ಹುಮ್ಮಸ್ಸು. ಬೇಕಾದ ಬದಲಾವಣೆ ದೊರಕಿತೆಂದು. ಹಾಸನಕ್ಕೆ ಹೊಂದಿದ ಐತಿಹಾಸಿಕ ಹೊಯ್ಸಳರ ದೇವಸ್ಥಾನಗಳನ್ನು ನೋಡಬಹುದಲ್ಲ ಎಂದು ! ಹಾಸನಾಂಬೆ ಹಸಾದ ನೀಡಿದಳು. ಇದೇ ಅವಕಾಶವೆಂದು ರಾಮರಾಯರು ಹೊಯ್ಸಳರಾಯರ ಶಾಸನಗಳ ಅಧ್ಯಯನದ ಮೂಲಕ first hand ಆಗಿ ದೋರಸಮುದ್ರದ ಅರಸರ ಇತಿಹಾಸವನ್ನು ಕರತಲಾಮಲಕ ಮಾಡಿಕೊಂಡರು. ವಿಷ್ಣುವರ್ಧನ, ಶಾಂತಲೆಯರ ಕಥೆಯನ್ನು ಗದ್ಯಕಾವ್ಯದಲ್ಲಿ ಎರಕಹೊಯ್ದರು. ಶಾಂತಲೆಯ ಕಲಾಜೀವನಕ್ಕೆ ಜೀವಂತಿಕೆಯನ್ನಿತ್ತರು. 'ಸವತಿಗಂಧವಾರಣೆ' ಕಾದಂಬರಿ ಕೊನರಿತು, ದಲವೇರಿತು, ದಾಂಗುಡಿಬಿಟ್ಟಿತು. ಅದೇ ಸಮಯಕ್ಕೆ ಮೈಸೂರು ಸರಕಾರ ನಾಟಕ ಸ್ಪರ್ಧೆಯೊಂದನ್ನು ಘೋಷಿಸಿತು. ಇದೇ ಕಾದಂಬರಿ ವಸ್ತುವಿನ ಒಂದಿಷ್ಟು ದ್ರವ್ಯದಿಂದ 'ತಲಕಾಡುಗೊಂಡ' ಎಂಬ ನಾಟಕ ಬರೆದರು. ಬಹುಮಾನ, ನಗದು ಬಹುಮಾನ ಐದುನೂರು ರೂಪಾಯಿ ಗಿಟ್ಟಿತು ! ಬಡವನು ಕಡವರವನೆಡಹಿದಂತಾಯಿತು. ಇತ್ತ 'ಸವತಿಗಂಧವಾರಣೆ' ೧೯೬೧ ರಲ್ಲಿ ಪ್ರಕಟವಾಯಿತು. ಬದುಕಿನಲ್ಲಿ ಒಂದಿಷ್ಟು ಗೆಲುವು, ಒಂದಿಷ್ಟು ಲವಲವಿಕೆ. ೧೯೪೧ ರಲ್ಲಿಯೆ ಚತುರ್ಭುಜರಾದ ರಾಮರಾಯರಿಗೆ ಸಂತಾನ ಸಂಪತ್ತು ಪ್ರಾಪ್ತವಾಗಿತ್ತು. (ನಾಲ್ಕು ಮಕ್ಕಳಲ್ಲಿ ಎರಡು ಗಂಡು, ಎರಡು ಹೆಣ್ಣು ! ಒಂದೆರಡು ಕುಸುಮಗಳನ್ನು ಭಗವಂತ ತಾನೇ ಎತ್ತಿಕೊಂಡು ಬಿಟ್ಟಿದ್ದ. ದೈವಕ್ಕೆ ಯತ್ನವಿಲ್ಲ.)

೧೯೫೭ರಲ್ಲಿ ರಾಮರಾಯರಿಗೆ ಪದೋನ್ನತಿ! ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರ್! ಸಂಸಾರನೌಕೆ ನೆಮ್ಮದಿಯಿಂದ ದಡದತ್ತ ಸಾಗಿತ್ತು. ಸೇವಾವಧಿಯಲ್ಲಿ ಒಳಿತು ಕೆಡಕು, ಸ್ನೇಹ–ಗುಪ್ತವೈರ–ಔದಾಸೀನ್ಯ, ಮೇಲಾಧಿಕಾರಿಗಳ ಸಾನುಭೂತಿ, ನಿಷ್ಠುರ, ಮನೆ

ಬಾಳ್ವೆಯಲ್ಲಿ ದೈವದ ಕ್ರೌರ್ಯ, ಸಾಮಾಜಿಕರ ಕ್ರೌರ್ಯ, ನೆರೆಹೊರೆಯವರ ಮತ್ಸರ ಎಲ್ಲಾ ಅನುಭವಿಸಿದರು. ಪಟ್ಟಪಾಡೆಲ್ಲವೂ ಒಂದು ಯಜ್ಞರೂಪಕ್ಕೆ ಪರಿವರ್ತನೆಗೊಂಡು ಸಾಹಿತ್ಯವಾಗಿ ಮಾರ್ಪಟ್ಟಿತು. ಬಾಳ ನೋವುಗಳೆಲ್ಲವೂ ಹೂವುಗಳಾಗಿ ಅರಳಿದವು. ಕವಿ ರವೀಂದ್ರರು ನುಡಿದಂತೆ—'ದೇವರು ನನಗೆ ನೋವನ್ನು ಕಳಿಸುತ್ತಾನೆ, ನಾನು ಅವನ್ನು ಕಾವ್ಯದ ಹೂವುಗಳನ್ನಾಗಿ ಪರಿವರ್ತಿಸಿ ಆತನೆಡೆಗೆ ಮರಳಿ ಕಳುಹಿಸಲೆಂದು' ; ರಾಮ ರಾಯರೂ ಹಾಗೆಯೆ ಮಾಡಿದರು.

ಕವಿ ಲಕ್ಷ್ಮೀಶ, ಪಂಪ, ಮುದ್ದಣ, 'ಸಂಸ'ರ ವಿಗಡ ವಿಕ್ರಮರಾಯ, ಮಾಸ್ತಿ ಸಾಹಿತ್ಯ, ಡಿವಿಜಿ ಕಗ್ಗ, ಸಂಸ್ಕೃತ ಕಾವ್ಯ, ಇಂಗ್ಲಿಷ್‌ನಲ್ಲಿ ಶೇಕ್ಸ್‌ಪಿಯರ್, ವೇದವಾಙ್ಮಯ ಸಂಪತ್ತು—ಎಲ್ಲಾ ಎಲ್ಲಾ ಅರಗಿಸಿಕೊಂಡರು. ವೇದವ ನೋಡಿ ವೇದಕಾಲಿನ ಕಾದಂಬರಿ ಯೊಂದನ್ನು ಅತ್ಯಂತ ಶ್ರೀಮಂತ ನಾಯಕ ರತ್ನವೆನುವಂತಹ ಕೃತಿಯ ಉಪಕೃತಿ ಯೊಂದನ್ನು ಕನ್ನಡ ನಾಡಿಗೆಸಗಿದರು. ಅದರ ಹೆಸರು 'ಶ್ರೀ ಪರಶುರಾಮ'! ಎಂತಹ ಸಮರ್ಥ ರೀತಿಯಲ್ಲಿ ವಿಶ್ವಾಮಿತ್ರ, ಜಮದಗ್ನಿ. ಋಚೀಕ ಅಂದರೆ ಅಜೀಗರ್ತ, ಪರಶು ರಾಮರಂತಹ ಪಾತ್ರಗಳನ್ನು ಶಾಶ್ವತ ಕೊಡುಗೆಯಾಗಿ ನೀಡಿದ್ದಾರೆ ! ಇತ್ತೀಚೆಗೆ (೧೯೯೩). ಇದರಲ್ಲಿ ಬ್ರಾಹ್ಮಣನಾದ ಪರಶುರಾಮನಲ್ಲಿ ಕ್ಷಾತ್ರ ತೇಜ ಹೇಗೆ ಉಕ್ಕಿ ಹರಿಯಿತು ? ಕ್ಷತ್ರಿಯನಾದ ವಿಶ್ವಾಮಿತ್ರನಲ್ಲಿ ಬ್ರಹ್ಮರ್ಷಿಯ ಮನೀಷೆ ಹೇಗೆ ಉದ ಯಿಸಿತು ? ಈ ರಹಸ್ಯ ಕೌತುಕಕಾರಿಯಾಗಿ, ಕುತೂಹಲಕಾರಿಯಾಗಿ ಚಿತ್ರಿತವಾಗಿದೆ 'ರಾಸ'ರ ರಸಮುಖವಾಣಿಯ ಶೈಲಿಯಲ್ಲಿ.

ಹಾಸನ ವಾಸ್ತವ್ಯದಲ್ಲಿ ಹೊಯ್ಸಳರಸರ ಜೀವನ ಉಳಿದ ಕರ್ನಾಟಕ ರಾಜರ ಜೀವನ ಇತಿಹಾಸಗಳನ್ನು ಅವರ ರಾಣಿಯರ ಕಲೆ, ಸಾಧನೆ, ಶೌರ್ಯಕೃತಿಗಳನ್ನೆಲ್ಲ ಅಧ್ಯಯನ ಮಾಡಿದ ಪರಿಣಾಮವಾಗಿ 'ತಲಕಾಡುಗೊಂಡ', 'ದ್ರೋಹಾಡಂಬರ', 'ನೃತ್ಯ ಸರಸ್ವತಿ', 'ನಾಟ್ಯಮಂದಾರ', 'ಸಿರಿಯಲದೇವಿ', 'ಯದುವೊಡೆಯ', 'ಮೊನೆಗಾರ' ಮೊದಲಾದ ಕರ್ನಾಟಕ ಇತಿಹಾಸ ವಸ್ತುವುಳ್ಳ ಸಾಹಿತ್ಯ ಕೃತಿಗಳಲ್ಲಿ ನಾಟಕಗಳೇ ಹೆಚ್ಚು. ಅದೂ ಹೊಯ್ಸಳರಸರ ಸಾಹಿತ್ಯವೇ ಹೆಚ್ಚು. ವಿಷ್ಣುವರ್ಧನ, ಶಾನ್ತಲದೇವಿಯ ಚರಿತ್ರ ಗಳಿಂದ ಲೇಖಕರು ಎಷ್ಟೊಂದು ಪುಲಕ, ಸ್ಫೂರ್ತಿ ಪಡೆದಿದ್ದಾರೆಯೊ ಅದೇ ಮಟ್ಟದ ಪುಲಕ, ಸ್ಫೂರ್ತಿಗಳನ್ನು ಓದುಗ ತಾಳುತ್ತಾನೆಂದು ನಾನು ಹೇಳಬಲ್ಲೆ.

ಇವರ ಪೌರಾಣಿಕ ಕಾದಂಬರಿಗಳಲ್ಲಿ ಪರಶುರಾಮ ಹೇಗೆ ಒಂದು ನಾಯಕರತ್ನವೊ ಹಾಗೆ 'ಶ್ರೀಕೃಷ್ಣದರ್ಶನ' ಇನ್ನೊಂದು ಅಸಾಮಾನ್ಯ ದರ್ಶನದ ಪೌರಾಣಿಕ ಕಾದಂಬರಿ. ಶ್ರೀಕೃಷ್ಣನ ತತ್ವೋಪದೇಶ, ರಾಜನೀತಿ ಚತುರತೆ, ಧರ್ಮದೃಷ್ಟಿ, ಅವತಾರ ಕಾರ್ಯ ಗಳೊಂದಿಗೆ ಆತನ ಕೊನೆಯ ದಿನಗಳ ಕ್ರೂರ ದೈವದಾಟದ ದುರಂತವನ್ನು ನೆನೆದರೆ ದೇವರಿಗೂ ಇಂತಹ ದುಃಖಾಂತವೇ ಎಂದು ಬೆರಗು, ದುಗುಡ ಎರಡೂ ಮುತ್ತಿ ಆವರಿಸುತ್ತವೆ.

'ಅಭಿಸಾರಿಕೆ' ಎಂಬ ಒಂದು ಚಿಕ್ಕ ಕತೆ ನಚ್ಚಣಿ ಮಲ್ಲಿಕೆ ಮತ್ತು ರೂವಾರಿ ಶ್ರೇಷ್ಠ

ದೇವೋಜ–ಇವರ ಪ್ರಣಯ ಕತೆಯು ಕುತೂಹಲಕಾರಿ ಕೊನೆಯಿಂದ ಮೈ ಜುಂ ಎನ್ನುತ್ತದೆ. ದೇವೋಜ ಏನನ್ನು ಮಲ್ಲಿಕೆಯಲ್ಲಿ ಅಪೇಕ್ಷಿಸಿ ಆಕೆಯನ್ನು ಪರಿತ್ಯಜಿಸಿದ್ದನೊ ಕೊನೆಗೆ ಅದರ ಸಿದ್ಧಿಯನ್ನೇ ಆಕೆಯಲ್ಲಿ ಕಂಡು ಮಾರುಹೋಗುವ, ಆಕೆ ತನ್ನನ್ನು ತಾನು ತನ್ನ ಪ್ರಿಯತಮನಿಗೆ ಅರ್ಪಿಸಿಕೊಳ್ಳುವ ಅಂಶಗಳು ಹೃದಯಸ್ಪರ್ಶಿ! ಏನು ಕಥೆ ಇದು! ಜೊತೆಗೆ ಜಕ್ಕಣ–ಡಂಕಣ ಎಂಬ ಕಾಲ್ಪನಿಕ ಶಿಲ್ಪಿಗಳ ಸಾಂಕೇತಿಕತೆ ಮಾತ್ರ ಸತ್ಯ ಎಂಬ ಸ್ಪಷ್ಟೀಕರಣ ತುಂಬ ಮೌಲಿಕ ಮಹತ್ವದ ಒಂದಂಶವಾಗಿದೆ. ಶಾಕುಂತಲಾ ಮಹಾಕಾವ್ಯವಂತೂ ಇವರನ್ನು ಕುವೆಂಪು ಮತ್ತು ವಿನಾಯಕರ ಸಮೀಪಕ್ಕೆ ಕರೆದೊಯ್ಯಿತು.

ಹತ್ತು ತಲೆಮಾರುಗಳ ಕತೆ ಹೇಳುವ ಕೋಟೆಮನೆಯು ಮಹಾ ಕಥೆ ಎಂದರೆ 'ರಾಸ'ರ ರಸಮಯ ಆತ್ಮಕಥೆ. ಕೊನೆಯ ಎಂಟು ಪುಟಗಳಲ್ಲಿ ನಮ್ಮ ರಾಮರಾಯರು ತಮ್ಮ 'ಜೀವನದರ್ಶನ'ವನ್ನು ತೆರೆದುತೋರಿಸುವಲ್ಲಿ ತಮ್ಮ ಅಂತರಂಗದ ಕದವನ್ನೇ ತೆರೆದು ತಮ್ಮ ಸ್ಫಟಿಕ ಸದೃಶ ಸ್ವಚ್ಛವಾದ ಅಂತಃಕರಣವನ್ನು ನಮ್ಮ ಮುಂದೆ ಇಡುತ್ತಾರೆ.

"ನನ್ನ ಹಿಂದಣ ಜನ್ಮದ ಕರ್ಮಶೇಷವನ್ನು ಕಳೆಯಲೆಂದು ಪರದೈವ ನನಗೆ ತೋರಿದುದು ಕಡುಬಡತನದ ಕುಟುಂಬವನ್ನು. ಅವನು ಆಡಿಸಿದಂತೆ ಆಡಿದ್ದೇನೆ . . . ಬಾಂಧವ ಲೋಕದ ಕ್ರೌರ್ಯವನ್ನು ಎದುರಿಸಲು ಸಿದ್ಧನಾಗಿ ನಿಂತೆನು. ಅದು ನನ್ನಲ್ಲಿ ಛಲವನ್ನು ಹೆಚ್ಚಿಸಿತು ; ಬದುಕಬೇಕೆಂಬ ಹಠವನ್ನು ತುಂಬಿತು ; ಎಬ್ಬಿಸಿತು . . .

"ಭಗವಂತನಲ್ಲಿ ಅಚಲವಾದ ಭಕ್ತಿ, ಸ್ವಪ್ರಯತ್ನದಲ್ಲಿ ನಂಬಿಕೆಗಳನ್ನು ಅಚ್ಚಳಿಯದಂತೆ ಬೆಳೆಸಿಕೊಂಡು ಮುಂದೆ ನುಗ್ಗಿದೆನಾದ್ದರಿಂದ ಜೀವನದ ನಿರ್ವಹಣೆಗೆಂದು ಒಂದು ಉದ್ಯೋಗ ಸಿಕ್ಕಿತು. ಅದು ಸಿಕ್ಕಿದ ಮೇಲೆ ಅಂತರ್ಗತವಾದ ಸಾಹಿತ್ಯ ಪ್ರವೃತ್ತಿಯನ್ನು ಬೆಳೆಸಿಕೊಂಡೆನು. ಅದರಲ್ಲಿ ನಾನು ಆತ್ಮ ಸಂತೋಷವನ್ನು ಕಂಡಿದ್ದೇನೆ"–ಎಂದಿದ್ದಾರೆ.

ಸಾಹಿತ್ಯದ ಮಾರಾಟ, ಲಾಭ–ಹಾನಿಯ ಲೆಕ್ಕ ರಾಸರಿಗಿಲ್ಲ. ಅವರು ನೀಡಿದ ೨೯ ಗ್ರಂಥಗಳು ತತ್ವಗಳಂತೆ ಮಹಾದರ್ಶನವೊಂದನ್ನು ಮಾಡಿಸುತ್ತವೆ. ರಾ.ಸ.ರು ಸಿಟ್ಟು–ಛಲಗಳನ್ನು ಎತ್ತಿ ಹಿಡಿದು ತಪ್ಪೆಂದು ಒಪ್ಪಿಕೊಂಡರೂ ಒಮ್ಮೊಮ್ಮೆ ತಮ್ಮ ಪುರುಷಾರ್ಥಕ್ಕೆ ಸಾಹಸವೃತ್ತಿಗೆ ಅವು ಸಾಧಕ ಎಂಬ ಅಭಿಪ್ರಾಯ ಅವರದು. "ಸುಳ್ಳು ಹೇಳುವವರನ್ನು ಕಂಡಾಗ ನನ್ನ ಮೈಮೇಲೆ ಹತ್ತಾರು ಚೇಳುಗಳು ಹರಿದಾಡಿದಂತಾಗುತ್ತದೆ" ಎನ್ನುತ್ತಾರೆ ಈ ಸತ್ಯಾಶ್ರಯರು.

ತನ್ನನ್ನು ಹಠಾತ್ತನೆ ಕೈಬಿಟ್ಟು ಹೋದ ಧರ್ಮಪತ್ನಿ ಶ್ರೀಮತಿ ಪಂಕಜಾಕ್ಷಿ ತನಗೆ ಕೊನೆಗೆ ಅನ್ಯಾಯ ಮಾಡಿದ್ದಾರೆಂದು ಹೇಳುವಲ್ಲಿ ತಮ್ಮ ಸುದೀರ್ಘ ಪತ್ನಿಪ್ರೇಮವನ್ನೇ ತೋರ್ಪಡಿಸಿದ್ದಾರೆ. ತಮ್ಮ ಅವಗುಣಗಳನ್ನು ಮುಖ್ಯವಾಗಿ ಸಿಟ್ಟನ್ನು–ಸಹನೆಯಿಂದ ತಾಳಿಕೊಂಡ ಜೀವವೆಂದರೆ ಜಗತ್ತಿನಲ್ಲಿ ತಮ್ಮ ಪತ್ನಿ ಒಬ್ಬರೆ ಎಂದು ಹೇಳಿ ನಮ್ಮ ಕರುಳನ್ನೇ ಮೀಟಿದ್ದಾರೆ.

ಸಮೇತನಹಳ್ಳಿ ರಾಮರಾಯರ ಸಾಹಿತ್ಯ ಸೇವೆ

ಎನ್. ಬಸವರಾಧ್ಯ

ಕನ್ನಡ ಸಾಹಿತ್ಯವನ್ನು ಸಂಪದ್ಭರಿತಮಾಡಿದ ಮಹನೀಯರು ಹಲವಾರು ಮಂದಿ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯಕೊಡುಗೆ ನೀಡಿದವರಲ್ಲಿ ಸಮೇತನಹಳ್ಳಿ ರಾಮ ರಾಯರು ಪ್ರಮುಖರು. ಕನ್ನಡವನ್ನೇ ಪ್ರಮುಖವಾಗಿ ವ್ಯಾಸಂಗಮಾಡದ ಶ್ರೀಯುತರು ವೃತ್ತಿಯಿಂದ ಬೇರೆಯಾದರೂ ಪ್ರವೃತ್ತಿಯಿಂದ ಕನ್ನಡಕ್ಕೆ ಅನುಪಮ ಕೃತಿಗಳನ್ನು ನೀಡಿದ್ದಾರೆ. ತಮ್ಮ ಜೀವಮಾನವನ್ನೆಲ್ಲಾ ಸಾಹಿತ್ಯ ಕ್ಷೇತ್ರಕ್ಕೇ ಮೀಸಲಾಗಿರಿಸಿ ಅಹರ್ನಿಶಿ ದುಡಿದವರಲ್ಲಿ ಸಮೇತನಹಳ್ಳಿ ರಾಮರಾಯ ಅಗ್ರಗಣ್ಯರು.

ರಾಮರಾಯರದು ದಿಟ್ಟತನದ ಪ್ರವೃತ್ತಿ. ತಮ್ಮ ಕೃತಿಗಳನ್ನು 'ರಾಸಸಾಹಿತ್ಯ' ಎಂಬ ತಮ್ಮ ಪ್ರಕಾಶನದ ಮೂಲಕವೇ ಪ್ರಕಟಸಿದ ಧೀಮಂತರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಗೈದ ಶ್ರೇಯಸ್ಸು ಸಮೇತನಹಳ್ಳಿ ರಾಮರಾಯರದು. ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ ಈ ಪ್ರಕಾರಗಳಿಗೆ ಶ್ರೀಯುತರ ಸೇವೆ ವಿಶೇಷವಾಗಿ ಸಂದಿದೆ.

ಸರಳರಗಳೆಯಲ್ಲಿ 'ಶಾಕುಂತಲಾ' ಮಹಾಕಾವ್ಯವನ್ನು ರಚಿಸಿದ ಕೀರ್ತಿ ರಾಮ ರಾಯರಿಗೆ ಸಲ್ಲುತ್ತದೆ. ಇದು ಒಂದು ಬೃಹತ್ಕಾವ್ಯ. ರಾಮರಾಯರಿಗೆ ಕರ್ನಾಟಕ ಇತಿಹಾಸದ ಬಗೆಗೆ ವಿಶೇಷ ಮಮಕಾರ. ಆದುದರಿಂದಲೇ ಶ್ರೀಯುತರು ಹಲವಾರು ಐತಿಹಾಸಿಕ ನಾಟಕಗಳನ್ನೂ ಕಾದಂಬರಿಗಳನ್ನೂ ಬರೆದಿದ್ದಾರೆ. 'ಭೀಷ್ಮಸಂಕಲ್ಪ' ಮೊದ ಲಾದ ಪೌರಾಣಿಕ ಮತ್ತು 'ನಾಟ್ಯಮಂದಾರ', 'ತಲಕಾಡು ಗೊಂಡ' 'ದ್ರೋಹಾಡಂಬರ', 'ಕಲಾರಾಧನೆ', 'ಪಿನಾಕಿನಿ'—ಮೊದಲಾದ ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ— ಇವುಗಳಲ್ಲಿ 'ತಲಕಾಡುಗೊಂಡ' ಕೆಲವಾರು ಮುದ್ರಣಗಳನ್ನು ಕಂಡಿದೆ. ಇದು ಧಾರವಾಡ ಮತ್ತು ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿತ್ತು. ಅಲ್ಲದೆ ಈ ನಾಟಕಕ್ಕೆ ರಾಜ್ಯ ಸಾಹಿತ್ಯಪ್ರಶಸ್ತಿಯೂ ಪ್ರಾಪ್ತವಾಗಿದೆ. 'ಕಲಾರಾಧನೆ' ಐದು ನಾಟಕಗಳ ಒಂದು ಸಂಕಲನ. ಇದರಲ್ಲಿನ ನಾಟಕಗಳು ವಿವಿಧ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರ ಗೊಂಡಿವೆ. 'ಕಲಾರಾಧನೆ'ಯಂತೆ 'ಪಿನಾಕಿನಿ'ಯೂ ಐದು ನಾಟಕಗಳ ಒಂದು ಗುಚ್ಛ.

'ಎಲೆಮರೆಯ ಹೂ', 'ಸವತಿಗಂಧವಾರಣೆ', 'ನೃತ್ಯ ಸರಸ್ವತಿ' ಎಂಬ ಕಾದಂಬರಿ ಗಳನ್ನು ಬರೆದಿದ್ದಾರೆ. ಇವೂ ಐತಿಹಾಸಿಕ ಕಾದಂಬರಿಗಳೇ. 'ಮಹಾಶ್ವೇತೆ', 'ಸ್ವರ್ಗ ಸೋಪಾನ', 'ಪ್ರಾಣವೀಣೆ'—ಇವು ಶ್ರೀಯುತರ ಕಥಾಸಂಕಲನಗಳು.

ಸಮೇತನಹಳ್ಳಿ ರಾಮರಾಯರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆಗೈದು ಯಶಸ್ಸನ್ನು ಸಾಧಿಸಿದ್ದಾರೆ. ಏಕಾಂಗ ಸಾಹಸಿಯಾಗಿ ತಮ್ಮ ಕೃತಿಗಳನ್ನೆಲ್ಲ 'ರಾಸ ಸಾಹಿತ್ಯ' ಎಂಬ ಪ್ರಕಾಶದಿಂದ ಹೊರ ತಂದಿದ್ದಾರೆ. ಶ್ರೀಯುತರು ನಿಸರ್ಗ ಪ್ರೇಮಿಗಳು. ತಮ್ಮ ನಿಸರ್ಗಪ್ರೇಮವನ್ನು ಕವನಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ತಮ್ಮ ಇಡೀ ಜೀವಮಾನವನ್ನೆಲ್ಲ ಸಾಹಿತ್ಯರಚನೆಗೇ ಮುಡಿಪಾಗಿಟ್ಟ ಕರ್ಮಯೋಗಿಗಳು. ಇಂಥಹ ನಿಸ್ವಾರ್ಥಜೀವಿಯನ್ನು ಗೌರವಿಸುವುದು ಪುರಸ್ಕರಿಸುವುದು ಕನ್ನಡಿಗರ ಕರ್ತವ್ಯ ವಾಗಿದೆ.

ಸಮೇತನಹಳ್ಳಿ ರಾಮರಾಯರನ್ನು ನಾನು ತೀರ ಹತ್ತಿರದಿಂದ ಬಲ್ಲವನಾಗಿ ದ್ದೇನೆ. ಇವರ ಕೆಲವು ಕೃತಿಗಳನ್ನು ವಿಮರ್ಶೆಮಾಡುವ ಸದವಕಾಶವೂ ನನಗೆ ಪ್ರಾಪ್ತ ವಾಗಿತ್ತು. ಇಂತಹ ಹಿರಿಯ ಸನ್ಮಿತ್ರರ ಸಾಹಿತ್ಯ ಸೇವೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸುವ ಕೆಲಸವನ್ನು ಸರಕಾರ ಸಂಘಸಂಸ್ಥೆಗಳು ಮಾಡಬೇಕಾಗಿತ್ತು. ಅದುಬಿಟ್ಟು ಶ್ರೀಯುತರ ಸುಪುತ್ರಿಯೇ ಈ ಕಾರ್ಯಕ್ಕೈಕೊಳ್ಳುವಂತಾದುದು ದುರ್ದೈವ. ಎಂತಾ ದರೂ ಆಗಲಿ ಶ್ರೀಯುತರಿಗೆ ಒಂದು ಅಭಿನಂದನಗ್ರಂಥ ಸಮರ್ಪಿತವಾಗಲಿರುವುದು ಸಂತೋಷದ ಸಂಗತಿ. ಸಮೇತನಹಳ್ಳಿ ರಾಮರಾಯರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಚಿರಸ್ಮರಣೀಯವಾದುದು.

ಶ್ರೀ ಕೆ. ವಿ. ಅಯ್ಯರ್ ಅವರ ಶಾಂತಲಾ ಸಹ ಪರಮ ರಮಣೀಯ ಕಾಂಬರಿ-ಕಾಮನ ಬಿಲ್ಲಿ ನಂತೆ ಮನೋಹರ ಆದರೆ ಕ್ಷಣಿಕ. ನಿಮ್ಮ ಶಾಂತಲೆ ಹೊಯ್ಸಳ ಸಾಮ್ರಾಜ್ಯದ ಅಧಿದೇವಿ. ಸಂಪ್ರದಾಯ ವೊಂದರ ಪ್ರತೀಕ. ಕಂನಾಡ ಸಂಸ್ಕೃತಿಯ ಸಾಕಾರ ರೂಪ.

ಎ. ಎನ್. ವೇಣುಗೋಪಾಲರಾವ್

ಕವಿ ಮನ್ಮಥ

ರಘುಸುತ

ಸುಮಾರು ನಲವತ್ತೆರಡು ವರ್ಷಗಳ ಹಿಂದಿನ ಮಾತು.

ಆಗ 'ಚಿತ್ರಗುಪ್ತ' ತುಂಬಾ ಜನಪ್ರಿಯವಾದ ವಾರಪತ್ರಿಕೆಯಾಗಿತ್ತು. ಉತ್ತಮ ಗುಣಮಟ್ಟವನ್ನು ಕಾಯುಕೊಂಡಿದ್ದ ಈ ಪತ್ರಿಕೆಯು ಉತ್ತಮ ಸ್ತರದ ಓದುಗರನ್ನು ಹೊಂದಿತ್ತು. ಇದರ ಸಂಪಾದಕರಾದ ಭಾರದ್ವಾಜರು ಸುಗುಣಶೀಲರೂ, ಸೌಜನ್ಯ ಭರಿತರೂ ಆಗಿದ್ದರು. ಅವರ ಪ್ರಭಾವಕ್ಕೆ ಒಳಗಾಗದವರೇ ವಿರಳ. ಈ ಪತ್ರಿಕೆಗೂ ನನಗೂ ಒಂದು ಸುಮಧುರ ಬಾಂಧವ್ಯ.

'ಕನ್ನಡದ ಉತ್ತಮ ಲೇಖಕರ, ಪರಿಚಯ ಮಾಲೆಯನ್ನು ಏಕೆ ನೀಡಬಾರದು ತಮ್ಮ ಪತ್ರಿಕೆಯಲ್ಲಿ ?' ಎಂದು ಒಂದು ದಿನ ಅವರನ್ನು ಕೇಳಿದೆ.

ಆದುವರೆವಿಗೂ ಅಂತಹ ಪರಿಚಯ ಮಾಲೆ ಯಾವುದೂ ಬಂದಿರಲಿಲ್ಲ ಕನ್ನಡದ ಪತ್ರಿಕೆಗಳಲ್ಲಿ. ಅದೊಂದು ಹೊಸ ಸಾಹಸವೂ ಆಗಿತ್ತು.

ನನ್ನ ಸೂಚನೆ ಭಾರದ್ವಾಜರಿಗೆ ಒಪ್ಪಿಗೆ ಆಯಿತು.

ಸಂತೋಷದಿಂದ ಹಸಿರು ಬಾವುಟವನ್ನು ಹಾರಿಸಿದರು.

ಜೊತೆಗೆ ಇದರ ಸಂಪೂರ್ಣ ಜವಾಬ್ದಾರಿಯನ್ನು ನನಗೇ ವಹಿಸಿದರು—ಸಾಹಿತಿಗಳ ಆಯ್ಕೆ, ನನ್ನ ಸ್ವಂತ ಖರ್ಚಿನಲ್ಲಿ ಅವರನ್ನು ಭೇಟಿ ಮಾಡುವುದು, ಅವರ ಫೋಟೋ ಇತ್ಯಾದಿಗಳು.

ಇದು ನನಗೂ ಸಂತೋಷವನ್ನು ಉಂಟು ಮಾಡಿತು—ಇಂತಹ ಒಂದು ಉತ್ತಮ, ಪವಿತ್ರ ಕೆಲಸ ನನ್ನ ಪಾಲಿಗೆ ಬಂತಲ್ಲ ಎಂದು.

ಈ ನೆಪದಲ್ಲಿ ದೇವುಡು, ವೀರಕೇಸರಿ, ಕುವೆಂಪು, ಡಿವಿಜಿ, ಡಿಎಲ್ಎನ್, ಸಿದ್ದವನಹಳ್ಳಿ, ತೀನಂಶ್ರೀ, ತಿತಾಶರ್ಮ, ಬೇಂದ್ರೆ, ಕಾರಂತ, ಗೋಕಾಕ, ಅನಕೃ—ಇತ್ಯಾದಿ ಸಾಹಿತ್ಯ ದಿಗ್ಗಜಗಳನ್ನು ಭೇಟಿ ಮಾಡಿ ಅವರ ಜೀವನ ಚಿತ್ರಣಗಳನ್ನು ಆ ಪತ್ರಿಕೆಯಲ್ಲಿ ನೀಡಿದೆ.

ಅಂದಿನ ಎರಡನೇ ಸರಣಿಯ ಲೇಖಕರ ಬಗ್ಗೆ ವಿಚಾರಮಾಡಿದಾಗ ನನಗೆ ಮೊಟ್ಟ ಮೊದಲು ನೆನಪಿಗೆ ಬಂದದ್ದು 'ಭೀಷ್ಮ ಸಂಕಲ್ಪ' ನಾಟಕದ ಸಮೇತನಹಳ್ಳಿ ರಾಮ ರಾಯರು. ಆಗಷ್ಟೆ ಅವರ 'ಎಲೆ ಮರೆಯ ಹೂ' ಎನ್ನುವ ಕಾದಂಬರಿಯೂ ಬೆಳಕಿಗೆ ಬಂದಿತ್ತು. ಭೀಷ್ಮನ ಧೀರೋದಾತ್ತ ವ್ಯಕ್ತಿತ್ವ, ಭವ್ಯ ಗುಣಾದರ್ಶಗಳು, ಅವನ ಸಾಹಸ—ಆದರ್ಶಗಳು, ಸಂಭಾಷಣಾ ಚಾತುರ್ಯ, ಸಾತ್ವಿಕ ತ್ಯಾಗಗಳು—ಆ ನಾಟಕದಲ್ಲಿ

ಸುಂದರವಾಗಿ ಚಿತ್ರಿತವಾಗಿದ್ದುವು. ಈ ವಿಚಾರಗಳು ನನಗೆ ತುಂಬ ಹಿಡಿಸಿದುವು. ಒಂದು ಉತ್ತಮ ನಾಟಕವಾಗಿತ್ತದು.

ಈ ವಿಚಾರವನ್ನು ಭಾರದ್ವಾಜರಿಗೆ ಹೇಳಿದೆ.

'ಹಾಗಿದ್ದರೆ ರಾಮರಾಯರ ಎರಡೂ ಪುಸ್ತಕಗಳನ್ನು ಕೊಡಿ. ಓದಿ ಅಭಿಪ್ರಾಯ ನೀಡ್ತೀನಿ' ಎಂದರವರು.

ಅಂತೆಯೇ ನನ್ನ ಬಳಿ ಇದ್ದ 'ಭೀಷ್ಮ ಸಂಕಲ್ಪ', 'ಎಲೆ ಮರೆಯ ಹೂ'—ಎರಡೂ ಪುಸ್ತಕಗಳನ್ನು ನೀಡಿದೆ.

ಎರಡು ದಿನಗಳ ನಂತರ, ಅವರು ನಗುಮುಖದಿಂದ,

'ನಿಮ್ಮ ಸೆಲೆಕ್ಷನ್ ಎಕ್ಸಲೆಂಟ್. ಸಮೇತನಹಳ್ಳಿಯವರನ್ನು ಇಂಟರ್‌ವ್ಯೂ ಮಾಡಿ, ಅವರ ಬಗ್ಗೆ ಬರೆಯಿರಿ !'

ಎಂದು ಪ್ರೋತ್ಸಾಹದ ಮಾತು ಹೇಳಿದರು.

ಕಷ್ಟಪಟ್ಟು ವಿಳಾಸ ಹುಡುಕಿ ಸಮೇತನಹಳ್ಳಿ ರಾಮರಾಯರನ್ನು ಭೇಟಿ ಮಾಡಿದೆ.

ಆಗ ಸುಮಾರು ನಲವತ್ತರ ಆಯುವಿನ ಸಮೀಪ.

ಆದರೂ ವಯಸ್ಸಿಗಿಂತ ತುಂಬಾ ಚಿಕ್ಕವರಾಗಿ ಕಂಡರು ಅವರು. ದೀರ್ಘ, ದೃಢ ಕಾಯ ದೇಹ, ಮನ್ಮಥನ ಅಪರಾವತಾರ. ಒಳ್ಳೆ he man ಹಾಗೆ ಕಂಡರು. ನನಗಿಂತ ಹನ್ನೆರಡು ವರ್ಷ ಹಿರಿಯರಾದ ಅವರನ್ನು ಕಂಡು ನನಗೆ ಸಂತೋಷವಾಯಿತು. ಒರ್ವ ಸಿನೀಮಾ ನಟನಂತೆ ಕಂಡು ಬಂದ ಆವರು, ಅಂದಿನ ಖ್ಯಾತ ಹಾಲಿವುಡ್‌ಗಳ ಜೆಫ್ ಛಾಡ್ಲರ್ (Jeff Chadler)ನ ನೆನಪು ತರುವಂತಿದ್ದರು. ಅದೇ ಎತ್ತರದ ನಿಲುವು, ಸುಂದರ ಮುಖದಲ್ಲಿ ನೆಲೆ ನಿಂತ ಗಾಂಭೀರ್ಯ, ಭಾವಪೂರಿತ ಕಂಗಳು, ಮೆದು ನಗು —ಅವರೊಂದಿಗೆ ಬಹಳ ಹೊತ್ತು ಮಾತನಾಡಬೇಕೆನ್ನಿಸಿತು. ಮಾತನಾಡಿದೆ. ಮೊದ ಮೊದಲು ಹಿಂಜರಿದಂತೆ ಕಂಡು ಬಂದ ಅವರು, ನಂತರ ನನ್ನೊಂದಿಗೆ ಸಲೀಸಾಗಿ, ಸರಸ ವಾಗಿ ಮಾತನಾಡಿದ್ದರು. ನಾನು ಏಕೆ ಬಂದಿದ್ದೇನೆಂಬುದರ ಗುಟ್ಟು ಬಿಟ್ಟು ಕೊಡದೆ, ಅವರ ಬಾಲ್ಯ. ವಿದ್ಯಾಭ್ಯಾಸ, ಬರವಣಿಗೆಗೆ ಸಹಾಯಕ ಸನ್ನಿವೇಶಗಳು, ಪ್ರೋತ್ಸಾಹ—ಇತ್ಯಾದಿ ವಿಷಯಗಳನ್ನೆಲ್ಲ ಮೆದುಳಿನಲ್ಲಿ ಸಂಗ್ರಹಿಸಿಟ್ಟುಕೊಂಡೆ.

ನನ್ನಲ್ಲಿ ಮಾತನಾಡುವ ಚಪಲವನ್ನು ಅರಿತು, ಅವರು ಮಾತನಾಡಿದ್ದರು. ಆಗ ಅವರಿಗೆ ನಾನು ಅವರನ್ನು ಭೇಟಿಯಾದುದರ ಹಿನ್ನೆಲೆಯನ್ನು ತಿಳಿಸಿ. 'ಚಿತ್ರಗುಪ್ತ' ಪತ್ರಿಕೆಗೆ ಅವರ ಬಗ್ಗೆ ಬರೆಯಬೇಕಾಗಿದೆ ಎಂದಾಗ ರಾಮರಾಯರು ಸಂಕೋಚಪಟ್ಟು

"ನನಗದೆಲ್ಲ ಏಕೆ ? ಅನೇಕ ಹಿರಿಯ ಸಾಹಿತಿಗಳ ಬಗ್ಗೆ ಈಗಾಗಲೇ ಕೊಟ್ಟಿದ್ದೀರಲ್ಲ !" ಎಂದರು ವಿನಯದಿಂದ.

"ಇಪ್ಪತ್ತು ವರ್ಷಗಳ ನಂತರ ನೀವೂ ಹಿರಿಯರಾಗುವಿರಲ್ಲ" ಎಂದಾಗ, ಅವರು ನಕ್ಕರು.

ಹೌದು, ನನ್ನ ಎಣಿಕೆಯ ಮಿತಿ ಅಷ್ಟೆ ಆವಾಗ.

ಈಗ ಎಂಭತ್ತು ವಸಂತಗಳನ್ನು ದಾಟುತ್ತಿರುವ ಶ್ರೀಯುತರು 'going strong for a century' ಎನ್ನುವ ಕ್ರಿಕೆಟ್ ಆಟಗಾರನ ನಾಣ್ನುಡಿಯಂತೆ, ಮುಂದುವರಿಯುತ್ತಿದ್ದಾರೆ.

ನಾನು ಸಮೇತನಹಳ್ಳಿಯವರನ್ನು ಮೊದಲ ಸಲ ನೋಡಿದಾಗ, ಇಂತಹ ಸುಂದರ ಪುರುಷರನ್ನು ಕನ್ನಡ ಸಿನೀಮಾದವರೇಕೆ ಗಮನಿಸಿಲ್ಲ ಎಂದುಕೊಳ್ಳುತ್ತಿದ್ದೆ. ರಾಯರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿದಾಗ, 'ಅವೆಲ್ಲ ಏನೂ ಬೇಡೀಪ್ಪ. ಈಗ ಸಂತೋಷವಾಗಿದ್ದೇನೆ" ಎಂದರು ಸಂತೃಪ್ತಿಯಿಂದ.

ಮೊದಲ ಸಲ ಸಮೇತನಹಳ್ಳಿಯವರನ್ನು ಭೇಟಿಯಾಗುವಷ್ಟೊ ಹೊತ್ತಿಗೆ ವೀರ ಕೇಸರಿ, ಆನಂದಕಂದ ಇತ್ಯಾದಿಯರುಗಳ ಐತಿಹಾಸಿಕಗಳು ಪ್ರಖ್ಯಾತಿಯನ್ನು ಪಡೆದಿದ್ದವು. ಶ್ರೀನಿವಾಸರಾವ್ ಕೊರಟಿ, ಮ. ನ. ಮೂರ್ತಿ, ಮಾಸ್ತಿ, ತ.ರಾ.ಸು., ಬಿ. ಪುಟ್ಟಸ್ವಾಮಯ್ಯ, ನಿರಂಜನರ ಐತಿಹಾಸಿಕ ಯುಗ ಕನ್ನಡದಲ್ಲಿ ಇನ್ನೂ ದೃಢವಾಗಿ ನೆಲೆಯೂರಿರಲಿಲ್ಲ.

'ಭೀಷ್ಮ ಸಂಕಲ್ಪ' ಕೃತಿಯಲ್ಲಿನ ಐತಿಹಾಸಿಕ ಛಾಯೆ, ಪೌರಾಣಿಕ ಸನ್ನಿವೇಶಗಳನ್ನು ಉಪಯೋಗಿಸಿಕೊಂಡಿದ್ದ ರೀತಿ, ಆ ಕೃತಿಯಲ್ಲಿನ ಕಾವ್ಯಾತ್ಮಕ ಗುಣಗಳನ್ನು ಕಂಡು,

"ನೀವೇಕೆ ಐತಿಹಾಸಿಕ ಕಾದಂಬರಿಗಳನ್ನು ಬರೆಯಬಾರದು."

ಎಂದು ಕೇಳಿದೆ.

ಅವರು ಒಂದು ನಿಮಿಷ ಸುಮ್ಮನಿದ್ದು, ನಂತರ ಹೇಳಿದರು.

"ಐತಿಹಾಸಿಕ ಕಥಾನಕಗಳ ಚಿತ್ರಣಗಳು ನನಗೂ ತುಂಬಾ ಇಷ್ಟವೇನೇ ! ಕೃತಿ ರಚನೆ ಮಾಡಬೇಕೆನ್ನುವ ಅಭಿಪ್ರಾಯವಿದೆ. ಶಾಸನಗಳ ಅಧ್ಯಯನ ಪ್ರಾರಂಭಿಸಿದೀನಿ. ಕೆಲವೊಂದು ಸಂಶೋಧನೆಗಳನ್ನು ಮಾಡಬೇಕಿದೆ. ಕೆಲವೊಂದು ಅನುಮಾನಗಳು ಹುಳುವಿನಂತೆ ನನ್ನ ಮಸ್ತಿಷ್ಕವನ್ನು ಕೊರೆಯುತ್ತಿವೆ. ಅವು ಪರಿಹಾರವಾದ ಕೂಡಲೇ ನಾನು ನನ್ನ ಬರವಣಿಗೆಗೆ ಸಿದ್ಧ. ತಪ್ಪದೆ ಕೃತಿ ರಚನೆ ಮಾಡ್ತೀನಿ." ಎಂದರು ಪ್ರಾಮಿಸ್ ಮಾಡುವಂತೆ.

ಅವರು ನೀಡಿದ ಮಾತಿನಂತೆ, ಮುಂದೆ ಅದ್ಭುತವಾದ ಐತಿಹಾಸಿಕ ನಾಟಕ, ಕಾದಂಬರಿಗಳನ್ನು ರಚಿಸಿ, ಕನ್ನಡ ಸಾಹಿತ್ಯಕ್ಕೆ, ಭಾಷೆಗೆ ಅಪಾರ ಸೇವೆ ಮಾಡಿರುವುದೇ ಅಲ್ಲದೆ, ಕನ್ನಡಕ್ಕೆ ಮೌಲಿಕತೆಯಿಂದ ಕೂಡಿದ ಅಮೂಲ್ಯ ಕೃತಿ ರತ್ನಗಳನ್ನು ನೀಡಿದ್ದಾರೆ. ಇದಕ್ಕೆ ಕನ್ನಡಿಗರು ಅವರಿಗೆ ಚಿರಋಣಿಯಾಗಿರಬೇಕು.

* * *

ಸಮೇತನಹಳ್ಳಿಯವರು ಪುರಸಭಾ ಕಛೇರಿ, ಮಧುಗಿರಿಯಲ್ಲಿದ್ದರು. ಆಗ ಅವರನ್ನು ಭೇಟಿ ಮಾಡಿದಾಗ ಹೇಳಿದೆ.

"ನಿಮ್ಮಿಂದ ನಿಮ್ಮ ಇಲಾಖೆ ಪ್ರಭಾವಿತವಾಗಿದೆಯೊ, ಅಥವಾ ನಿಮ್ಮ ಇಲಾಖೆಯಿಂದ ಆರೋಗ್ಯ ಪ್ರಭಾವಿತವಾಗಿದೆಯೊ ?"

"ಎರಡೂ ಇರಬಹುದೇನೋ ಅಥವಾ ಅದಕ್ಕೂ ಇದಕ್ಕೂ ಏನೂ ಸಂಬಂಧವೇ ಇಲ್ಲವೇನೊ !"

ಎಂದರು ಅವರು. ನನ್ನ ಕೀಟಲೆಯ ಪ್ರಶ್ನೆಗೆ ಅವರಿಗೇ ನಗು ಬಂದಿತ್ತು.

ಈ ಹೆಲ್ತ್ ಇನ್ಸ್‌ಪೆಕ್ಟರ್‌ಗಿರಿಯೊಂದಿಗೆ ಐತಿಹಾಸಿಕ ಸಂಶೋಧನಾ ಕಾರ್ಯವೂ ಒಂದುಗೂಡಿತ್ತು. ನಂತರ ರಾಯರಿಗೆ ಐತಿಹಾಸಿಕ ವಿಷಯಗಳ ಬಗೆಗೆ ನಾಟಕ ಬರೆಯುವುದೊಂದು ಹವ್ಯಾಸವಾಯಿತು. ಅವರ ನಾಟಕಗಳನ್ನು ಓದಿದೆ. ಆಗ ನಾನು ನಾಟಕಗಳನ್ನು ದಿಗ್ದರ್ಶಿಸಿ, ಪ್ರದರ್ಶಿಸುತ್ತಿದ್ದೆ. ಹಾಗಾಗಿ ರಾಯರ 'ತಲಕಾಡುಗೊಂಡ' ತುಂಬಾ ಇಷ್ಟವಾಯಿತು. ಅದನ್ನು ರಂಗಮಂದಿರದಲ್ಲೇಕೆ ಪ್ರದರ್ಶಿಸಬಾರದು ಎಂದುಕೊಂಡೆ. ಹಾಗೆ ಹಾಗೆಯೇ ಪ್ರದರ್ಶಿಸಲು ಸಾಧ್ಯವೆ ಎಂದು ಯೋಚಿಸಿದೆ. ಆದರೆ ಅಸಾಧ್ಯ ಎಂದು ಅರ್ಥವಾಯಿತು. ಸಂಸರ ನಾಟಕಗಳಂತೆಯೇ ಇವರ ನಾಟಕಗಳೂ ಕೂಡ ಪ್ರದರ್ಶಿಸುವುದು ಕಷ್ಟಕರವಾದುದು ಎಂದೆನ್ನಿಸಿತು. ನಾಟಕವನ್ನು ಸುಲಭೀಕರಿಸೋಣವೆ ಎಂದುಕೊಂಡೆ. ಹಾಗೆ ಮಾಡಿದರೆ ನಾಟಕದ ಸಮಗ್ರತೆಗೆ, ಭಾಷೆಗೆ, ಕಾವ್ಯಮಯ ಶೈಲಿಗೆ ಭಂಗ ಬರುವ ಸಂಭವವಿತ್ತು. ವಾಕ್ಯಗಳನ್ನು ಆಯ್ದುಕೊಂಡರೆ, ಒಂದಕ್ಕೊಂದು ಸಂಬಂಧವಿಲ್ಲದಂತಾಗುತ್ತದೆ ಎಂದನ್ನಿಸಿತು. ಶಿಥಿಲತೆ ಉಂಟಾಗುತ್ತಿತ್ತು. ಭಾಷೆಯ ಬಿಗಿ ಸಡಿಲವಾಗಿ, ಐತಿಹಾಸಿಕ ಚೌಕಟ್ಟೇ ಮಂಕಾಗುತ್ತಿತ್ತು.

ಅಲ್ಲದೆ 'ತಲಕಾಡುಗೊಂಡ' ಮತ್ತಿತರ ರಾಯರ ನಾಟಕಗಳಲ್ಲಿ ನಾಟಕೀಯ ಅಂಶ ಇನ್ನಷ್ಟು ಇರಲೇಬೇಕಾಗಿತ್ತು. ಸಂಸರ ನಾಟಕಗಳಲ್ಲಿ ಇರುವಂತಹ ರಭಸ, ಆವೇಶ, ಆವೇಗಗಳು ತಕ್ಕಮಟ್ಟಿಗೆ ಅಳವಡಿಸಿದ್ದರೆ, 'ವಿಗಡ ವಿಕ್ರಮರಾಯ'ನ ತರಹ ಇವರ ನಾಟಕಗಳೂ ಮಿಂಚುತ್ತಿದ್ದುವು.

ಇದು ಇವರ ನಾಟಕಗಳಲ್ಲಿನ ಅವಗುಣವೆಂದು ಹೇಳಲಾರೆ. ಇವರ ಬಹಳಷ್ಟು ನಾಟಕಗಳು ವಾಚ್ಯವಾಗಿರುವುದರಿಂದ, ಅಂತಹ ನಾಟಕಗಳನ್ನು ದೃಶ್ಯ ನಾಟಕಗಳಾಗಿ ಪರಿವರ್ತಿಸುವುದು ತುಸು ಕಷ್ಟವಾಗುತ್ತದೆ. ಇದು ನನ್ನ ಕೆಲವು ಮಿತ್ರರಿಗೂ ಆದ ಅನುಭವ. ಅವರೂ ಕೂಡ ಇವರ ನಾಟಕಗಳನ್ನು ಮುಟ್ಟಲು ಹಿಂದೇಟು ಹೊಡೆಯುತ್ತಿದ್ದರು.

ಆಗ ಸಮೇತನಹಳ್ಳಿಯವರು ಗಾಂಧಿ ಬಜಾರಿನ ರಸ್ತೆಗಿಂತ ಎತ್ತರದ ದಿಬ್ಬದ ಮೇಲಿನ ಮನೆಯಲ್ಲಿದ್ದರು. ಆಗ ನನ್ನ ಈ ಸಮಸ್ಯೆಯನ್ನು ಅವರಿಗೆ ತಿಳಿಸಿದೆ. ರಂಗಕರ್ಮಿಗಳಾದ ನಾವುಗಳು ಅವರ ನಾಟಕಗಳನ್ನು ರಂಗಮಂಚಕ್ಕೆ ಅಳವಡಿಸಬೇಕಾದಾಗ ಎದುರಿಸುವ ಸಮಸ್ಯೆಯ ಕಷ್ಟಗಳ ಕಡೆ ಗಮನ ಸೆಳೆದೆ. ಇರುವ ರೀತಿಯಲ್ಲೇ ಅವರ ನಾಟಕಗಳನ್ನು ಸ್ಟೇಜ್ ಮಾಡುವುದು ಕಷ್ಟ ಎಂದು ತಿಳಿಸಿದೆ. ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳೋಣವೆ ಎಂದು ಕೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ. ಅವರು ನನ್ನ

ಸಲಹೆಗೆ ಒಪ್ಪುವುದಿಲ್ಲವೆಂಬುದೂ ಗೊತ್ತಿತ್ತು. ಹೆಚ್ಚು ಒತ್ತಾಯಿಸಲು ನಾನೂ ಇಷ್ಟ ಪಡಲಿಲ್ಲ. ಅಂತಹ ಮನಸ್ಸೂ ಇರಲಿಲ್ಲ.

ಹೀಗಾಗಿ ರಾಯರ ನಾಟಕಗಳನ್ನು ಮರೆತು, ಆಗ ತಾನೆ ಬೆಳಕಿಗೆ ಬರುತ್ತಿದ್ದ ನನಗೆ ಪರಿಚಿತರಾಗಿದ್ದ 'ಭರತೇಶ'ರ ನಾಟಕವೊಂದನ್ನು ಆರಿಸಿಕೊಂಡೆ.

ಸಮೇತನಹಳ್ಳಿಯವರ ನಾಟಕಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು, ಕನಿಷ್ಟ ಬದಲಾವಣೆಗಳೊಂದಿಗೆ ರಂಗಮಂಚದ ಮೇಲೆ ತರುವ ಗಟ್ಟಿ ದಿಗ್ದರ್ಶಕ, ತಾಂತ್ರಿಕ ಪ್ರಾವೀಣ್ಯತೆ ಇರುವ ಅಲ್‌ಕಾಜಿಸ್ತರದ ಗುಣಮಟ್ಟ ನಿರ್ದೇಶಕರು ಬರಬೇಕಾಗಿದೆ. ಅದು ಎಂದಿಗೆ ಸಾಧ್ಯವಾಗುವುದೋ ನೋಡಬೇಕು. ಆ ಸಮಯಕ್ಕಾಗಿ ನಾವು ಕಾಯಬೇಕಾಗಿದೆ.

ಒಮ್ಮೆ ಬಿ. ವಿ. ಕಾರಂತರನ್ನು ಸಮೇತನಹಳ್ಳಿಯವರ ನಾಟಕಗಳನ್ನು ರಂಗ ಮಂದಿರಕ್ಕೆ ಅಳವಡಿಸುವ ಬಗ್ಗೆ ಕೇಳಿದೆ. "ಅದಕ್ಕೆ ಕಾಲ ಇನ್ನೂ ಪಕ್ವವಾಗಿಲ್ಲ !" ಎಂದಷ್ಟೇ ಅವರು ಹೇಳಿದರು.

ಕೆಲವು ವರ್ಷಗಳ ಹಿಂದೆ ಪಾಂಡವಪುರದ ಬಳಿಯ ತೊಂಡನೂರಿನಲ್ಲಿ ಮೂರು ದಿನಗಳ ಹೊಯ್ಸಳ ಸಾಮ್ರಾಜ್ಯೋತ್ಸವವು ನಡೆಯಿತು. ಈ ಉತ್ಸವಕ್ಕೆ ಅನೇಕರಿಗೆ ಆಹ್ವಾನ ಹೋಗಿತ್ತು. ವಿಚಾರ ಸಂಕಿರಣದಲ್ಲಿ ಭಾಗವಹಿಸಲು ನಾನೂ ಹೋಗಿದ್ದೆ. ಅಂತೆಯೇ ಸಮೇತನಹಳ್ಳಿಯವರೂ ಕೂಡ ಆಹ್ವಾನಿತರಾಗಿದ್ದರು.

ನಾವಿಬ್ಬರೂ ಕೂಡಿ ಬಹಳಷ್ಟು ಮಾತುಕತೆಯಾಡಿದೆವು. ಬಿಡುವು ಮಾಡಿಕೊಂಡು ನಮ್ಮ ವಿಚಾರ ವಿನಿಮಯದಲ್ಲಿ ಮಗ್ನರಾದೆವು.

ತೊಂಡನೂರು ಹೆಸರಿಗೆ ಪುರಾತನ ರಾಜಧಾನಿ ಅಷ್ಟೆ. ನಾಲ್ಕೈದು ದೇವಾಲಯಗಳ ವಿನಹ ಅಲ್ಲಿ ಮತ್ತಾವ ಅವಶೇಷಗಳೂ ಇಲ್ಲ. ಉತ್ಖನನವೂ ನಡೆದಿಲ್ಲ. ಮೋತೀ ತಲಾಬ್ ಎನ್ನುವ ಸುಂದರ ಸರೋವರವೊಂದು ಇತಿಹಾಸಕ್ಕೆ ಮೂಕಸಾಕ್ಷಿಯಾಗಿ ಉಪಸ್ಥಿತವಿದೆ.

ನಮ್ಮ ಮಾತುಕತೆಗಳು ಯಾವು ಯಾವುವೋ ವಿಷಯಗಳ ಬಗ್ಗೆ ಹರಿದಾಡಿದ ನಂತರ ರಾಯರ ಕಾದಂಬರಿಗಳ ಕಡೆ ಹರಿಯಿತು.

ರಾಯರ ಕಾದಂಬರಿಗಳೂ ಕೂಡ ಅವರ ನಾಟಕಗಳಂತೆಯೆ ಕಬ್ಬಿಣದ ಕಡಲೆ. ಇಂದಿನ ಸಾಮಾನ್ಯ ಓದುಗನಿಗೆ ಕೈಗೆಟುಕಲಾರದ ಕೃತಿರತ್ನಗಳಿವು. ಕಾವ್ಯಮಯ ಶೈಲಿ, ಕಾವ್ಯಾತ್ಮಕ ಹಾಗೂ ಅಲಂಕಾರಿಕ ಸಂಭಾಷಣೆಗಳು–ಬೇಗ ಓದುಗನ ಹೃದಯದ ಬಾಗಿಲನ್ನು ತೆರೆಯುವುದಿಲ್ಲ. ಕಾದಂಬರಿಯ ವಿವರಗಳೂ ಕೂಡ ಬಹಳಷ್ಟು ಹಳೆಗನ್ನಡ ಛಾಯೆಯಲ್ಲಿಯೇ ಇರುತ್ತವೆ. ಇಂದಿನ ವಾಯುವೇಗದ ಟಿ. ವಿ. ಯುಗದಲ್ಲಿ ಪಟ್ಟಾಗಿ ಕುಳಿತು ಸಾಹಿತ್ಯವನ್ನು ನಿಧಾನವಾಗಿ ಓದಿ ಅರ್ಥ ಮಾಡಿಕೊಂಡು ಅವುಗಳ ಆಂತರ್ಯದ ಸೊಗಸನ್ನು, ಅದರ ಸೊಗಡನ್ನು ಸವಿಯುವಷ್ಟು ವಿಶಾಲಹೃದಯ, ಸಾವಧಾನತೆ ಇಂದಿನ ಓದುಗನಿಗೆ ಎಲ್ಲಿರಬೇಕು ? ಅಂತಹ ಕೃತಿಯನ್ನೇ ಬೇಡವೆನ್ನುತ್ತಾನವನು.

ಅವನಿಗೆ ಕೃತಿ ತುಂಬಾ ಸುಲಭವಾಗಿರಬೇಕು. ಇದು ಐತಿಹಾಸಿಕಗಳ ವಿಚಾರದಲ್ಲಿ ಸಾಧ್ಯ ವಾಗದು. ಎಲ್ಲದಕ್ಕಿಂತ ಹೆಚ್ಚಾಗಿ ಆ ಓದುಗನಿಗೆ ಕರ್ನಾಟಕದ ಇತಿಹಾಸದ ಬಗ್ಗೆ ಅಭಿ ಮಾನವಿರಬೇಕು–ತಮಿಳು, ತೆಲುಗರಿಗೆ ಇದ್ದಂತೆ. ಅವನಿಗೆ ಐತಿಹಾಸಿಕಗಳೆಂದರೆ ಅಲರ್ಜಿಯೇ.

ಐತಿಹಾಸಿಕ ಪ್ರೀತಿ ನಮ್ಮವರಲ್ಲಿ ಸ್ವಲ್ಪ ಕಡಿಮೆಯೇ ! ಹಾಗಿರುವಾಗ ಐತಿಹಾಸಿಕ ಸ್ಮಾರಕಗಳ ಬಗ್ಗೆ ಪ್ರೀತಿ, ಅಭಿಮಾನಗಳಾದರೂ ಹೇಗೆ ಹುಟ್ಟೀತು ?

ಹೀಗಿರುವಾಗ ಐತಿಹಾಸಿಕವನ್ನೆ ತಮ್ಮ ಜೀವನದ ಗುರಿಯನ್ನಾಗಿ ಹೊಂದಿರುವ ಸಮೇತನಹಳ್ಳಿಯಂತಹವರ ಪರಿಸ್ಥಿತಿಯೇನು ? ಅವರ ಸೃಜನಶೀಲತೆ ಏನಾಗಬೇಕು ? ಎಂಬ ಭಾವನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಅವರ ಕಾದಂಬರಿಗಳ ಬಗ್ಗೆ ಅವ ರೊಂದಿಗೇ ಚರ್ಚಿಸತೊಡಗಿದೆ.

ತರಾಸು, ಅನಕೃ, ವೀರಕೇಸರಿಯವರ ಐತಿಹಾಸಿಕಗಳಷ್ಟು ರಾಯರ ಐತಿಹಾಸಿಕ ಗಳು ಸುಲಲಿತವಲ್ಲ. ಸಾಮಾನ್ಯ ಓದುಗನಿಗೆ ಇಲ್ಲಿ ಗುಂಪೇ ಬೇರೆಯೇ ಇದೆ. ಅಂತಹ ವರಿಗೆ ಈ ಕಾದಂಬರಿಗಳು ಎಡವಿದಂತಾಗುತ್ತವೆ. ಹೀಗಾಗಿ ಒಂದು ತಂಡದ ಓದುಗರು ರಾಯರ ಕಾದಂಬರಿಗಳಿಂದ ದೂರ ಇರುವಂತಾಗುತ್ತದೆ.

ಸಮೇತನಹಳ್ಳಿಯವರಿಗೆ ಹಳೆಗನ್ನಡ ಛಾಯೆಯ ಭಾಷಾ ಉಪಯೋಗ ತುಂಬಾ ಇಷ್ಟ. ಈ ರೀತಿಯ ಭಾಷೆಯು ಐತಿಹಾಸಿಕದ ನೈಜತೆಗೆ ಬಹಳ ಹತ್ತಿರ ಎಂಬುದು ರಾಯರ ಸದ್ಭಾವನೆ.

ಹೀಗಾಗಿ ಇವರ ನಾಟಕಗಳಲ್ಲಿರುವಂತೆ ಇವರ ಕಾದಂಬರಿಗಳಲ್ಲೂ ಇದೇ ರೀತಿಯ ಭಾಷೆ ಇರುವುದರಿಂದ ಸಾಮಾನ್ಯ ಓದುಗನು ತಡವರಿಸುವುದು ಖಚಿತ. ಈ ಓದುಗರಿಗೆ ಓದುವ ಕೃತಿಯ ಭಾಷೆ ಹಾಗೂ ಅವರ ಮನಸ್ಸಿನಲ್ಲಿ ಮೂಡುವ ಭಾವನೆಗಳಿಗೆ ಸಂಬಂಧ ಕಲ್ಪಿತವಾಗುವುದೇ ಇಲ್ಲ. ಇವೆರಡರ ಸಂಬಂಧ ಉಂಟಾಗದೆ ಇರುವುದರಿಂದ ನಡುವೆ ಶೂನ್ಯ ಸೃಷ್ಟಿಯಾಗುತ್ತದೆ.

ರಾಯರ ಐತಿಹಾಸಿಕಗಳಲ್ಲಿ ವಿಪುಲವಾದ ವರ್ಣನೆಗಳು ಬರುತ್ತವೆ. ಆ ವರ್ಣನೆ ಗಳೆಲ್ಲವನ್ನೂ ಓದುಗನು ಜೀರ್ಣಿಸಿಕೊಳ್ಳುವುದು ಕಷ್ಟವಾಗುತ್ತದೆ. ಹಾಗೆ ಕಲ್ಪಿಸಿ ಕೊಳ್ಳಲು ಸಾಕಷ್ಟು ಸಮಯ ಹಿಡಿಸುತ್ತದೆ. ಇದಕ್ಕೆ ಓದುಗ ಸಿದ್ಧನಾಗಿರುವುದಿಲ್ಲ. ಅವನಲ್ಲಿ ಆ ರೀತಿಯ ಸುಸಂಸ್ಕೃತಿಯೂ ಇರುವುದಿಲ್ಲ. ನಮ್ಮಲ್ಲಿ ಈಗಿನ ಜೆಟ್ ಯುಗ ದಲ್ಲಿ ಇಂತಹ ಸುಸಂಸ್ಕೃತ, ಸುಶಿಕ್ಷಿತ ಓದುಗರು ಬಹಳ ಕಡಿಮೆಯಾಗಿದ್ದಾರೆ. ಆದರೆ ಇಂತಹ ಭಾಷಾ ಇದಕ್ಕಿಂತಲೂ ಹೆಚ್ಚಿನ ಮಟ್ಟದ ಭಾಷಾ ಪ್ರಯೋಗ ಮಾಡಿಯೂ ಪಂಪ, ರನ್ನ, ಜನ್ನರ ಕೃತಿಗಳು ಹಳೆಗನ್ನಡದ್ದಿದ್ದರೂ, ಅವು ಪ್ರಸಿದ್ಧಿ ಪಡೆದಿಲ್ಲವೆ— ಎಂದು ಕೇಳಬಹುದು. ಕಾಲದ ಉರುಳುವಿಕೆಯಲ್ಲಿ ಈ ಹಿರಿಯರ ಕೃತಿಗಳು ಪಂಡಿತ ಮನ್ನಣೆ ಪಡೆದು, ಪಾಮರ ರಂಜಿತವಾಗಿದ್ದುವು. ಅಂದಿನ ಓದುಗರಲ್ಲಿ ಕಾವ್ಯ ಮನೋ ಭೂಮಿಕೆ ಇತ್ತು. ಇಂದು ಪರಿಸ್ಥಿತಿ ತಿರುಗು ಮುರುಗಾಗಿದ್ದು, ಕಾವ್ಯ ಮನೋಭಾವದ

ಓದುಗರ ಸಂಖ್ಯೆಯೇ ಬೆರಳೆಣಿಸುವಷ್ಟಾಗಿದೆ ಎಂದರೆ ತಪ್ಪಲ್ಲ.

'ಸವತಿ ಗಂಧವಾರಣೆ'ಯಾಗಲಿ, 'ಸಿರಿಯಲ ದೇವಿ'ಯಾಗಲಿ ಓದುಗನ ಸನಿಹಕ್ಕೆ ಬರಲು ಪ್ರಯತ್ನಿಸಿದರೂ ಸಾಕಷ್ಟು ದೂರವೇ ಉಳಿಯುತ್ತವೆ.

ಅಂದರೆ ರಾಯರು ಈ ಎಂಭತ್ತರ ಆಯುವಿನಲ್ಲಿ ಮೇಲೆ ತಿಳಿಸಿದ ಓದುಗರಿಗಾಗಿಯೇ ಕೃತಿ ರಚನೆ ಮಾಡಲು ಸಾಧ್ಯವೆ ?

ಇಲ್ಲ, ಖಂಡಿತ ಇಲ್ಲ.

ಈಗ ಅವರು ನಿರ್ಮಿಸಿರುವ ಸಾಹಿತ್ಯ ಅವರದ್ದೇ ಆದ ನೈಜ ಶೈಲಿಯ ಸಾಹಿತ್ಯ.

ರಾಯರು ಹೀಗೆ ಉತ್ತರಿಸುವರು, "ಇದು ನನ್ನ ನೈಜ ಶೈಲಿ. ಈ ಶೈಲಿ ನನ್ನದೇ ಆದ ಸ್ವಾಭಾವಿಕ ರೂಪದ್ದು. ಇದನ್ನು ಬದಲಾಯಿಸುವುದು, ಬದಲಾಯಿಸಿಕೊಳ್ಳುವುದು ಸಾಧ್ಯವೇ ಇಲ್ಲ . . ."

ಹೌದು. ಇದು ಸಮೇತನಹಳ್ಳಿ ರಾಮರಾಯರ ಶೈಲಿ. ಇದು ರಾಯರು ಸಾಹಿತ್ಯ ಸೃಷ್ಟಿ ಮಾಡುವ ರೀತಿ. ಅವರ ಸ್ವಾಭಾವಿಕ, ನೈಜ ರೀತಿ. ಈ ಶೈಲಿಯನ್ನು ಬದಲಾಯಿಸಿಕೊಳ್ಳಿ ಎಂದು ಹೇಳುವುದು ಸುತರಾಂ ಸಾಧ್ಯವಿಲ್ಲ. ಷೇಕ್ಸ್‌ಪಿಯರ್‌ನ, ಸಂಸರ, ಪಂಪರ ಶೈಲಿಯನ್ನು ಬದಲಾಯಿಸಿಕೊಳ್ಳುವಂತೆ ಹೇಳಲು, ಬದಲಾಯಿಸಲು ಸಾಧ್ಯವೇ ಇಲ್ಲ.

ಕನ್ನಡ ಗದ್ಯ ಸಾಹಿತ್ಯಕ್ಕೆ, ಕಾದಂಬರಿ, ನಾಟಕಗಳಿಗೆ ವಿಶಿಷ್ಟವಾದ ಶೈಲಿ ಇದು. ನಾವು ಇದಕ್ಕೆ ತಕ್ಕಂತೆ ಬದಲಾಗಬೇಕಾದುದು ಅವಶ್ಯ.

ರಾಯರ ಈ ನೈಜ ಶೈಲಿಯನ್ನು, ಅದನ್ನು ಕಾಪಾಡಿಕೊಂಡು ಬರುತ್ತಿರುವ ರಾಯರನ್ನು ನಾವು ಪ್ರಶಂಶಿಸಲೇಬೇಕು.

ರಾಯರ ನೈಜ ಶೈಲಿಯಲ್ಲಿ ರಚಿತವಾದ 'ಶ್ರೀಕೃಷ್ಣದರ್ಶನ' ಇದಕ್ಕೆ ಉತ್ತಮ ಉದಾಹರಣೆ. ಮೈಸೂರರಸರನ್ನು ಕುರಿತಾದ ಮಾಲೆಯ 'ಯದುವೊಡೆಯ' ಇಂತಹ ಶೈಲಿಗೆ ಮಗುದೊಂದು ಉದಾಹರಣೆ.

ಮೈಸೂರರಸರನ್ನು ಕುರಿತಾದ ಕೃತಿ ಮಾಲೆಯನ್ನು ಸಂಸರು ಈ ಹಿಂದೆಯೇ ಮಾಡಿದ್ದಾರೆ. ಅವುಗಳಲ್ಲಿ ಐದು ಕೃತಿಗಳು ಅದೂ ನಾಟಕಗಳು ಮಾತ್ರ ಉಳಿದಿವೆ. ಅವರ ಮರಣಾನಂತರ ಆ ನಾಟಕಗಳನ್ನು ಮೆಚ್ಚಿದ ಓದುಗರು, ವಿಮರ್ಶಕರು ಅವರನ್ನು ಷೇಕ್ಸ್‌ಪಿಯರನ ಸ್ಥಾನಕ್ಕೇರಿಸಿದರು.

ಮೈಸೂರರಸರನ್ನು ಕುರಿತಾದ ಕೃತಿ ಮಾಲೆ ಈಗ ಸಮೇತನಹಳ್ಳಿರಾಮರಾಯರು ಪ್ರಾರಂಭಿಸಿದ್ದಾರೆ. ಅವರು ಈ ಮಾಲೆಯನ್ನು ಪೂರ್ತಿಗೊಳಿಸುವರೆಂದು ಆಶಿಸೋಣ.

ಮೈಸೂರರಸರನ್ನು ಕುರಿತಾದ ಕಾದಂಬರಿಗಳನ್ನು ಮ.ನ. ಮೂರ್ತಿ ಮತ್ತಿತರರು

ರಚಿಸಲು ಪ್ರಯತ್ನಿಸಿ, ಹೆಚ್ಚು ಸಫಲರಾಗಲಿಲ್ಲ, ಈ ನಿಟ್ಟಿನಲ್ಲಿ ತಮ್ಮ ಅಪರ ವಯಸ್ಸಿನಲ್ಲಿ ರಾಯರು ಪೂರ್ತಿ ಮಾಡಲೆಂದು ಆಶಿಸೋಣ. ಅವರು ಅವರದ್ದೇ ಆದ ನೈಜ ಶೈಲಿಯಲ್ಲಿಯೇ ಈ ಕಾದಂಬರಿ ಮಾಲೆಯನ್ನು ಮುಗಿಸಲಿ. ಅವರಿಗೆ ಅವರದ್ದೇ ಆದ ಓದುಗರಿದ್ದಾರೆ. ಅದರಿಂದ ರಾಯರು ಈ ನಿಟ್ಟಿನಲ್ಲೆ ಮುಂದುವರಿದು, ಶತಾಯುಷಿಯಾಗುಳಿಯಲೆಂದು ದೇವರನ್ನು ಪ್ರಾರ್ಥಿಸುವ.

ಸುಗಂಧವಾದ ಪುಷ್ಪದಲ್ಲಿನ ಮಕರಂದವನ್ನು ದುಂಬಿಯು ನಿಧಾನವಾಗಿ ಹೀರುವಂತೆ ನಾನು 'ಶ್ರೀ ಕೃಷ್ಣದರ್ಶನ' ಕೃತಿಯಲ್ಲಿನ ಕಥೆ–ಪದ–ವಾಕ್ಯಗಳನ್ನು ನಿಧಾನವಾಗಿ ಓದುತ್ತಾ ಆನಂದತುಂದಿಲನಾಗುತ್ತಿದ್ದೇನೆ. ನಾನೇ ದ್ವಾಪರಯುಗದ ಶ್ರೀ ಕೃಷ್ಣಪರಮಾತ್ಮನ ಜತೆಯಲ್ಲಿ ನಿಂತು ಆ ಬಾಲಲೀಲೆಗಳನ್ನು ನೋಡುತ್ತಾ ಇರುವಂತೆ ನನಗೆ ಭಾಸವಾಗುತ್ತದೆ. ಈ ನನ್ನ ಮಾತುಗಳು ಉತ್ಪ್ರೇಕ್ಷೆಯಲ್ಲ. ನನ್ನ ಹೃದಯಾಂತರಾಳದಿಂದ ಬಂದ ಮಾತುಗಳು.

೨೮–೧೧–೮೮ **ಆಳವಂದಾರ್ ಗೋಪಾಲಾಚಾರ್**

ದೃಢವ್ರತ

ವಿದುಷಿ ತಿರುಮಲೆ ಶಾರದಾ

ಶ್ರೀ ಸಮೇತನಹಳ್ಳಿ ರಾಮರಾಯರ ನಾಟಕ 'ತಲಕಾಡುಗೊಂಡ'ವನ್ನು ನಾನು ಮೊದಲ ಬಾರಿಗೆ ಕಂಡದ್ದು ಬೆಂಗಳೂರು ಮಹಾರಾಣಿ ಕಾಲೇಜಿನ ಗ್ರಂಥಾಲಯದಲ್ಲಿ. ಭಾವಗೀತೆಗಳನ್ನು ವಿದ್ಯಾರ್ಥಿನಿಯರಿಗೆ ಹೇಳಿಕೊಡಲು ಕವನದ ಪುಸ್ತಕವನ್ನು ಹುಡುಕುವಾಗ ಕಣ್ಣಿಗೆ ಬಿದ್ದದ್ದು. ನಂತರ ಅವರ ಹೆಸರನ್ನು ಕೇಳಿದ್ದು ನನ್ನ ಶಿಷ್ಯೆ ಸೌ. ಭಾರತೀ ಕಾಸರಗೋಡ್ ಮೂಲಕ ಆರೇಳು ವರ್ಷಗಳ ಹಿಂದೆ. ಆಕೆ "ಶ್ರೀ ಸಮೇತನಹಳ್ಳಿ ರಾಮರಾಯರ ಕವಿಕಾವ್ಯ ವಿಮರ್ಶೆ ಕಾರ್ಯಕ್ರಮವನ್ನು ನವೋದಯ ಪ್ರಕಾಶನದವರು ಏರ್ಪಡಿಸಿದ್ದಾರೆ. ನೀವು ಬರಬೇಕು" ಎಂದು ಆಹ್ವಾನಿಸಿದರು. ಆಗಲೂ ಭಾರತಿ ರಾಮರಾಯರು ತನ್ನ ತಂದೆ ಎಂದು ಹೇಳಿಕೊಳ್ಳಲಿಲ್ಲ ! ನಮ್ಮದು ಬರಿಯ ಕಲಿಕೆ–ಕಲಿ ಸಂಬಂಧವಾಗಿತ್ತು. ಹಾಗಾಗಿ ನಾನು ಕವಿಯ ಪರಿಚಯವನ್ನು ಕೇಳಿದಾಗ ನನಗೆ ರಾಯರು ಭಾರತಿಯ ತಂದೆಯವರೆಂದು ತಿಳಿದು ಬಂದಿತು. ಭಾರತಿ ಕಾರ್ಯಕ್ರಮಕ್ಕೆ ಹೋಗುವಾಗ ನನ್ನನ್ನೂ ತಮ್ಮೊಡನೆ ಕರೆದೊಯ್ದರು. ಆಗ ಶ್ರೀಯುತ ರಾಮರಾಯರ ಪರಿಚಯವಾಗಿದ್ದು. ನಾನು ನಮಸ್ಕರಿಸಿದೆ. ಪ್ರತಿ ನಮಸ್ಕಾರವಾಯಿತು. ಬಹಳ ಗಂಭೀರವಾದ ವ್ಯಕ್ತಿತ್ವ, ಮಿತಭಾಷಿ. ಕಾರ್ಯಕ್ರಮವು ಮುಗಿದನಂತರ ರಾಯರ ವ್ಯಕ್ತಿತ್ವದ ಅರಿವು ನನಗಾಯಿತು.

ಕಾದಂಬರಿ, ನೀಳ್ಗತೆ, ಸಣ್ಣಕತೆಗಳು, ನಾಟಕಗಳು, ಕವನ ಸಂಗ್ರಹ ಮುಂತಾಗಿ ಎಲ್ಲ ಪ್ರಕಾರಗಳಲ್ಲೂ ಇವರ ರಚನೆಗಳು ಮುವ್ವತ್ತಕ್ಕೆ ಮಿಕ್ಕಿದೆ. ಹಲವು ನಾಟಕಗಳು ಆಕಾಶವಾಣಿಯ ಹಲವಾರು ಕೇಂದ್ರಗಳ ಮೂಲಕ ಪ್ರಸಾರಗೊಂಡಿವೆ. ಅವರ ಕೃತಿಗಳ ಅವಲೋಕನ ಮಾಡಲು ತೊಡಗಿದೆ. ನನಗೆ ಮೆಚ್ಚಿಗೆಯಾದದ್ದು ಅವರ 'ಶ್ರೀಕೃಷ್ಣ ದರ್ಶನ'. ಅದೆಷ್ಟೋ ಸಲ ಕೃಷ್ಣನನ್ನು ಅತಿಮಾನವನನ್ನಾಗಿ ಏಕೆ ಕಾಣಬೇಕು ? ಸಾಮಾನ್ಯ ಬುದ್ಧಿವಂತನಾದ ಮಾನವನನ್ನಾಗಿ ಕಾಣಬಾರದೇಕೆ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿತ್ತು. ಅದಕ್ಕೆ ಪುಷ್ಟಿ ಕೊಡುವಂತೆ ಶ್ರೀ ಮುನ್ಷಿಯವರು ತಮ್ಮ 'ಕೃಷ್ಣಾವತಾರ'ದಲ್ಲಿ ಗೋವರ್ಧನಗಿರಿಯನ್ನು ಎತ್ತುವ ಪ್ರಸಂಗವನ್ನು ಸಹಜವಾಗಿ ಸಂಯೋಜಿಸಿದ್ದಾರೆ. ನಾನು ಮೆಚ್ಚಿದ್ದೆ. ರಾಯರು ಶ್ರೀಕೃಷ್ಣದರ್ಶನದಲ್ಲಿ ಧೈರ್ಯವಾಗಿ ಅಂಜದೆ ಅಳುಕದೆ ತಮ್ಮ ಭಾವನೆಗಳಿಗೆ ರೂಪುಗೊಟ್ಟು ಕೃಷ್ಣನನ್ನು ಸಾಮಾನ್ಯ ಮಾನವನನ್ನಾಗಿ ಚಿತ್ರಿಸಿದ್ದಾರೆ. ಅವರ ದೃಢತೆಯು ಅನುಕರಣೀಯ. ನಂತರ ನನ್ನನ್ನು ಆಕರ್ಷಿಸಿದ್ದು

ಅವರ 'ಕೋಟೆಮನೆ'. ಅದರಲ್ಲಿನ ಸರಳವಾದ ಹಾಗೂ ಪ್ರಬುದ್ಧವಾದ ಕಥನಶೈಲಿ ಅವರ ಜೀವನವನ್ನೇ ನಮ್ಮ ಕಣ್ಣ ಮುಂದೆ ನಿಲ್ಲಿಸುತ್ತದೆ. ಸರ್ಕಾರದ ಸೇವೆಯಲ್ಲಿದ್ದು ಆಗಾಗ್ಗೆ ಒದಗಿ ಬರುತ್ತಿದ್ದ ವರ್ಗಾವಣೆಗಳಿಗೆ ಎದೆಗುಂದದೆ ಒಂದೇ ಸ್ಥಳದಲ್ಲಿರಬೇಕೆಂದು ಮೇಲಧಿಕಾರಿಗಳಿಗೆ ವಿನಂತಿಸಿಕೊಳ್ಳದೆ, ಬಂದದ್ದನ್ನು ಸಂತೋಷವಾಗಿ ಸ್ವೀಕರಿಸಿದವರು. ಈ ದೃಢ ನಿಲುವೇ ಅವರಿಗೆ ಇಂದು ದೃಢಕಾಯುವನ್ನೂ ಮನಸ್ವಾಸ್ಥ್ಯವನ್ನು, ಆರೋಗ್ಯವನ್ನು ಕೊಟ್ಟಿದೆ ಎನ್ನಬಹುದು.

ಈ ಸಂದರ್ಭದಲ್ಲಿ ರಾಯರೊಡನೆ ಅವರ ನೋವು-ನಲಿವುಗಳನ್ನು ಹಂಚಿಕೊಂಡು ಅವರ ಸಾಹಿತ್ಯ ಕೃಷಿಗೆ ನೆರವಾದ ಅವರ ಪತ್ನಿಯನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯ. ಅವರ ಜೀವನಶೈಲಿ, ಆಚಾರ-ವಿಚಾರ, ವಿಹಾರ ಇವೆಲ್ಲವೂ ನಮ್ಮ ಯುವ ಪೀಳಿಗೆಗೆ ಮಾದರಿಯಾಗಲಿ ಎಂದು ಆಶಿಸುತ್ತೇನೆ. ಶ್ರೀಮಾನ್ ರಾಮರಾಯರು ಶತಾಯುಗಳಾಗಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ತಮ್ಮ 'ಶಾಕುಂತಲಾ' ಅಧ್ಯಯನಾಂಗ ಕೈಸೇರಿ ಹಲವು ದಿನಗಳಾದವು. ಈ ಪೂರ್ವದಲ್ಲಿಯೂ ನೀವು ನಿಮ್ಮ ಬೇರೆ ಕೃತಿಗಳನ್ನು ಕಳಿಸಿದ್ದೀರಿ. ನಿಮ್ಮ ಶಕ್ತಿ ಬೆಳೆಯುತ್ತಲಿದೆ. ತಾಯಿ ಸರಸ್ವತಿ ನಿಮಗೆ ಪ್ರತಿಭೆ, ಸಾಮರ್ಥ್ಯ, ಆಯುರಾರೋಗ್ಯವನ್ನು ಕೊಡಲಿ.

೧೨-೭-೬೮ ದ. ರಾ. ಬೇಂದ್ರೆ

ಶ್ರಮಜೀವಿ

ಶಕುಂತಲಾಬಾಯಿ ಪಾಂಡುರಂಗರಾವ್

ಬದುಕಿನಲ್ಲಿ ಸೌಂದರ್ಯವೆಂದರೆ ಯಾವ ವ್ಯಕ್ತಿಯೇ ಆಗಲಿ ಆತನನ್ನು ತನ್ನ ಬಾಳನ್ನು ತೂಗಿಸುತ್ತಾ ರೂಢಿಸಿಕೊಂಡು ಸಾಧನೆ ಮಾಡುತ್ತಿರುವ ಪ್ರಾಮಾಣಿಕತೆ, ನಯ, ವಿನಯ, ಶುದ್ಧ ಮನಸ್ಸು ನೆರೆಹೊರೆಯವರ ಮನಸ್ಸು ಮನಸ್ಸಿನ ಸಂಪರ್ಕ ಮಾಡುವಾಗ ಹೂವಿನ ದಳಗಳನ್ನು ಎಷ್ಟು ಸೂಕ್ಷ್ಮದಿಂದ ಮುಟ್ಟಿ ಆನಂದಿಸುತ್ತೇವೆಯೋ ಅಷ್ಟೇ ಕೋಮಲತೆಯಿಂದ ಸ್ಪರ್ಶಿಸುವ ರೀತಿಯೇ ಬಾಳಿನ ಸೌಂದರ್ಯ. ಈ ಗುಣಗಳನ್ನು ನಾನು ಸಹೋದರ ಸಮಾನರಾದ ಶ್ರೀಯುತ ಸಮೇತನಹಳ್ಳಿ ರಾಮರಾಯರಲ್ಲಿ ಕಂಡು ತಣಿದಿದ್ದೇನೆ. ನನ್ನಂತೆಯೇ ನನ್ನ ಅಕ್ಕಪಕ್ಕದವರು ಎನ್ನುವ ಬೃಹತ್ ಭಾವನೆಯನ್ನು ಹೊಂದಿ ಅದರಂತೆ ನಡೆಯುತ್ತಿರುವ ರಾಮರಾಯರು ನಿಜಕ್ಕೂ ಸ್ತುತ್ಯರ್ಹರು. ಸಾಹಿತ್ಯಲೋಕದಿಂದ ಇವರ ಪರಿಚಯ ನಮ್ಮ ಯಜಮಾನರಿಗೆ (ಪಾಂಡುರಂಗ ರಾಯರಿಗೆ) ದಿ|| ವರದರಾಜಾರಾಯರ ಮುಖೇನ ಆಗಿ ಮೂವತ್ತು ವರ್ಷಗಳಾದರೂ ನನಗೆ ಅವರ ಪರಿಚಯ ಸರಿಯಾಗಿ ಆದದ್ದು ಅವರ 'ಶಾಕುಂತಲಾ' ಕಾವ್ಯದಿಂದ. ಅವರು ಕಲ್ಲಹಳ್ಳಿಯ ಮನೆ ಒಂದರಲ್ಲಿ ವಾಸಿಸುತ್ತಿದ್ದರು. ಹೃದಯ ಶ್ರೀಮಂತಿಕೆಯನ್ನು ಹೊಂದಿರುವ ನನ್ನ ಹಿರಿಯಣ್ಣ ರಾಮರಾಯರನ್ನು ಕಂಡು ನನಗೆ ಆದ ಸಂತೋಷ ಅಷ್ಟಿಷ್ಟಲ್ಲ. ಮನೆಯೊಳಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಅಡಿಗೆಯ ಮನೆಯಿಂದ ಅವರ ಧರ್ಮಪತ್ನಿ ಶ್ರೀಮತಿ ಪಂಕಜಮ್ಮನವರು ಹಸನ್ಮುಖದಿಂದ ನಮ್ಮನ್ನು ಸ್ವಾಗತಿಸಿ ಕರೆದೊಯ್ದರು. ಅವರ ಮಕ್ಕಳುಗಳು ಕೂಡ ತಮ್ಮ ಹಾಲುಗಲ್ಲದ, ಅರಳಿದ ಮುಖಕಮಲಗಳಿಂದ ನಮ್ಮನ್ನು ಕಂಡು ನಗುನಗುತ್ತಾ ಹತ್ತಿರ ಬಂದು ಕೂತು ತಮ್ಮ ಹೆಸರು, ವಿದ್ಯಾಭ್ಯಾಸಗಳನ್ನು ಹೇಳುತ್ತಾ ಬಹಳ ಆತ್ಮೀಯತೆಯನ್ನು ತೋರಿಸಿದರು. ಒಟ್ಟಿನಲ್ಲಿ ಹಿರಿಯಣ್ಣನವರ ಸಂಸಾರ ಬಲು ಚೊಕ್ಕಟವಾದದ್ದು. ಇದನ್ನೆಲ್ಲಾ ನೋಡಿದಾಗ ನನ್ನನ್ನು ನಾನು ಮೈಮರೆಯುವಂತಾಯಿತು. ಇನ್ನೊಂದು ವಿಶೇಷವೇನೆಂದರೆ ಎಷ್ಟೋ ವರ್ಷಗಳಿಂದ ಪರಿಚಯವಾದಂತೆ ಬಹಳ ಹತ್ತಿರದವರಾದರು. ಅದು ನಮ್ಮ ದಂಪತಿಗಳ ಭಾಗ್ಯ. ಅವರಲ್ಲಿ ನಾವು ಒಂದಾಗಿ ಹೋದೆವು. ನಂತರ ಸೊಗಸಾದ ಉಪಹಾರವಾಯಿತು. ನಾನು ಅಭ್ಯಾಸ ಮಾಡಿದ್ದ ಭಾಗ 'ತಪದ ಪಣ್ ಕಣ್ವರಾಶ್ರಮಕೆ' ಎಂಬ ವಾಚನವಾಯಿತು. ವಾಚನವನ್ನು ಕೇಳಿ ರಾಯರ ಕುಟುಂಬದವರೆಲ್ಲಾ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅದು ನನ್ನ ಜೀವನದಲ್ಲಿ ತಂದ ಒಂದು ಸೌಭಾಗ್ಯ.

ನಂತರ ಪುಷ್ಕಳವಾದ ಊಟ ಉಪಚಾರಗಳು ನಡೆಯಿತು. ಮಾರನೆಯ ದಿನ ನಮ್ಮೂರಿನತ್ತ ಧಾವಿಸಿದೆವು. ಎಂದೆಂದಿಗೂ ಸಹೋದರಿ ಪಂಕಜಮ್ಮನವರ ನಮ್ರತೆಯ, ವಿಶ್ವಾಸ ತುಂಬಿದ ಆದರಾತಿಥ್ಯವನ್ನು ನಾನು ಮರೆಯಲಾರೆ. ಈಗಲೂ ಅದು ನನ್ನ ಹೃದಯದಲ್ಲಿ ಹಚ್ಚ ಹಸುರಾಗಿಯೇ ಉಳಿದಿದೆ.

ರಾಯರನ್ನು ಕಂಡ ಒಂದು ಕ್ಷಣ ಇವರು ಬಹಳ ಮಿತಭಾಷಿಗಳು ಮತ್ತು ಕಾರ್ಯತತ್ಪರರು ಎಂದು ಭಾಸವಾಯಿತು. ಇವರಲ್ಲಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಪ್ಪಾ ಎನ್ನಿಸಿತು. ರಾಯರು ಖಂಡಿತವಾದಿಗಳು. ಅದು ಇರಬೇಕು. ಆಗಲೇ ನಮ್ಮ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗುವುದು. ಆದರೆ ಮಾತುಕತೆಗಳು ಸಾಗುತ್ತಾ ಸಾಗುತ್ತಾ ಬಹಳ ಹತ್ತಿರದವರಾದರು ರಾಯರು. ಕೆಲವು ಸಂದರ್ಭಗಳಲ್ಲಿ ಖಚಿತವಾದ ಅಭಿಪ್ರಾಯಗಳನ್ನು ಮಂಡಿಸದಿದ್ದರೆ ಬಾಳಿನ ಗುರಿಯೇ ಏರುಪೇರಾಗುತ್ತದೆ. 'ಖಂಡಿತವಾದಿ ಲೋಕವಿರೋಧಿ' ಎಂಬ ಗಾದೆಯೇ ಇದೆಯಲ್ಲಾ. 'ಸತ್ಯಮೇವ ಜಯತೇ' ಅನ್ನುವಂತೆ ಖಂಡಿತ, ಖಚಿತ, ಸತ್ಯಕ್ಕೆ ಜಯ ಕಾದಿಟ್ಟಿದೆ. ಸದಾ ಪರರ ಹಿತವನ್ನೇ ಬಯಸುವವರು ರಾಮರಾಯರು. ಮನಸ್ಸು ಬೆಣ್ಣೆಯಂಥಹುದು. ಕರುಣಾಮಯಿ. ಹಿಮಾಚಲ ಪರ್ವತದಷ್ಟು ಕಷ್ಟ ಕಾರ್ಪಣ್ಯಗಳು ಬಂದರೂ ಎದೆಗುಂದದೆ ದೃಢಮನಸ್ಸಿನಿಂದ ನಗುಮುಖದಿಂದ ಎದುರಿಸಿ ನಿಲ್ಲುವ ಎದೆಗಾರಿಕೆಯುಳ್ಳವರು ರಾಯರು.

ಇದರಿಗೆ ಜನ್ಮವಿತ್ತ ತಂದೆ ಶ್ರೀಯುತ ಶ್ರೀನಿವಾಸರಾಯರು ತಾಯಿ ಶ್ರೀಮತಿ ರುಕ್ಮಿಣಿಯಮ್ಮನವರು ಇಂತಹ ಪುತ್ರರತ್ನವನ್ನು ಕನ್ನಡನಾಡಿಗೆ ಕೊಡುಗೆಯಾಗಿ ನೀಡಿದ ಪುಣ್ಯಾತ್ಮ ದಂಪತಿಗಳು. ಇವರಿಗೆ ನಮೋನಮಃ.

ಪುಣ್ಯಾತ್ಮ ದಂಪತಿಗಳು ಕಡುಬಡತನದ ಬೇಗೆಗೆ ಸಿಕ್ಕಿದರೂ ಅದನ್ನು ಲಕ್ಷಿಸದೆ ರಾಯರ ಅಭಿವೃದ್ಧಿಗಾಗಿ ಶ್ರಮಿಸಿದ ಶ್ರಮ ಜೀವಿಗಳು. ಆ ರಕ್ತವನ್ನು ಕರಗತ ಮಾಡಿಕೊಂಡು ಜನ್ಮತಾಳಿದ ರಾಯರೂ ಸಹ ಶ್ರಮವೇ ಸಾಧನೆಯೆಂದು ತಿಳಿದು ತನ್ನ ಪ್ರಾಮಾಣಿಕತನವನ್ನು ಬಿಡದೆ ಕಾಪಾಡಿಕೊಂಡು ಒಬ್ಬರನ್ನು 'ದೇಹಿ' ಎಂದು ಕೇಳದೆ ಬಾಳ ನೌಕೆಯನ್ನು ಸಾಗಿಸಿಕೊಂಡು ಬಂದ ವೀರರು ರಾಮರಾಯರು. ನಾವು ದಂಪತಿಗಳು ಕಾರ್ಯಕ್ರಮದ ಸಲುವಾಗಿ ಮೈಸೂರಿಗೆ ಹೋಗಿದ್ದೆವು. ರಾಯರು ಮೈಸೂರಿನಲ್ಲಿದ್ದರು. ಎರಡನೆಯ ಸಲ 'ಶಾಕುಂತಲಾ' ಕಾವ್ಯದಿಂದ ಬೇರೆ ಭಾಗದ ವಾಚನ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟು ಅವರೂ ಆನಂದಿಸಿ ನನ್ನನ್ನು ಕೃತಾರ್ಥಳನ್ನಾಗಿಸಿದರು. ಅವರ ಮನೆಗೆ ಹೋಗಿ ಎರಡು ದಿನಗಳಿದ್ದು ಸಚ್ಚರಿತವಾದ ವಿಚಾರ ವಿನಿಮಯಗಳಿಂದ ನನ್ನ ಮನಸ್ಸು ಸಂತೋಷಸಾಗರದಲ್ಲಿ ತೇಲಿಹೋಯಿತು.

ರಾಯರಿಗೆ ಇಬ್ಬರು ಪುತ್ರರು ಇಬ್ಬರು ಪುತ್ರಿಯರು. ಆದರೆ ನಮಗೆ ತುಂಬಾ ಪರಿಚಯ, ಕಿರಿಯ ಮಗಳು ಭಾರತೀಯವರು. ಭಾರತಿ ಚಿಕ್ಕ ಹುಡುಗಿಯಿಂದ ಅತಿ ಜಾಣೆ, ಚತುರತೆಯ ಮಾತುಗಳು. ಆನಂದ ತುಂಬಿದ ದುಂಡು ಮುಖ. ಇವುಗಳು ಈಕೆಯ ಭವಿಷ್ಯವನ್ನು ಉನ್ನತಮಟ್ಟಕ್ಕೆ ಏರಿಸುತ್ತದೆ ಎಂದು ಹೇಳುತ್ತಿತ್ತು. ಅಂತೆಯೇ

ಈಕೆ ಎಂ. ಎ. ಪದವೀಧರಳು. ಜೊತೆಗೆ ಲೇಖಕಿಯಾಗಿ ತನ್ನ ಗಂಡನ ಮನೆಯಲ್ಲಿದ್ದು ಸಂಸಾರವನ್ನು ತೂಗಿಸಿಕೊಂಡು ಸಾಹಿತ್ಯ ಪ್ರಪಂಚಕ್ಕೆ ತನ್ನ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆಕೆಯ ಒತ್ತಾಸೆಯಿಂದ ಈ ನಾಲ್ಕು ಮಾತುಗಳನ್ನು ಸರಸ್ವತೀದೇವಿ ಬರೆಯಿಸುತ್ತಿದ್ದಾಳೆ. ಇದು ಲೇಖನವಲ್ಲ. ರಾಯರನ್ನು ಕುರಿತು ಲೇಖನ ಬರೆಯುವಷ್ಟು ಅರ್ಹತೆ ನನಗಿಲ್ಲ. ಆದರೆ ಸಹೋದರ ವಾತ್ಸಲ್ಯದಿಂದ ನನ್ನ ಅಳಿಲು ಸೇವೆಯನ್ನು ಈ ನಾಲ್ಕು ವಾಕ್ಯಗಳಿಂದ ಸಲ್ಲಿಸುತ್ತಿದ್ದೇನೆ. ರಾಯರು ಕಷ್ಟಗಳ ಗುಂಪುಗಳನ್ನು ತಮ್ಮ ಎದೆಗಾರಿಕೆಯಿಂದ ಎದುರಿಸಿ ನಾಲ್ಕು ಮಕ್ಕಳನ್ನು ಇಂದಿರಾ, ಸುದರ್ಶನ, ವಿಷ್ಣು, ಭಾರತಿ ಇವರುಗಳಿಗೆ ಉತ್ತಮ ಶಿಕ್ಷಣ ಕೊಟ್ಟು ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿದರು. ಒಳ್ಳೊಳ್ಳೆಯ ಸಂಪ್ರದಾಯದ ಮನೆಗಳನ್ನು ಹುಡುಕಿ ಲಗ್ನ ಮಾಡಿಕೊಟ್ಟರು. ಮನಸ್ಸು ತೃಪ್ತಿಯಾಯಿತು ಆ ದಂಪತಿಗಳಿಗೆ. ಭಗವಂತ ಅವರನ್ನೆಲ್ಲಾ ನೂರು ವರ್ಷಗಳ ಕಾಲ ಸುಖವಾಗಿಟ್ಟಿರಲಿ ಎಂದು ನನ್ನ ಸವಿನಯ ಪ್ರಾರ್ಥನೆ.

ರಾಯರು ದೇವರು ಕರುಣಿಸಿದ ಉದ್ಯೋಗಗಳನ್ನು ದೇವರ ಪ್ರಸಾದವೆಂದು ತಿಳಿದು ತೃಪ್ತಿಯಾಗಿ ಶ್ರದ್ಧಾಭಕ್ತಿಯಿಂದ ಕಾರ್ಯವನ್ನು ನಿರ್ವಹಿಸಿದರು. ನಿಷ್ಕಾಮವಂತರು, ಕೀರ್ತಿಗಾಗಿ ದುಡಿದವರಲ್ಲ. 'ನನ್ನನ್ನು ಈ ಲೋಕಕ್ಕೆ ಭಗವಂತ ಈ ಕೆಲಸವನ್ನು ನಿರ್ವಹಿಸು ಎಂದು ಕಳುಹಿಸಿದ್ದಾನೆ. ಅದನ್ನು ನಾನು ನಿರ್ವಂಚನೆಯಿಂದ ತೃಪ್ತಿಯಾಗಿ ಮಾಡುತ್ತೇನೆ' ಎನ್ನುವ ಮನೋಧೈರ್ಯವನ್ನು ಹೊಂದಿ ಕಾರ್ಯವನ್ನು ಮುಗಿಸಿ ಒಳ್ಳೆಯ ಹೆಸರನ್ನು ಪಡೆದು ನಿವೃತ್ತರಾದರು ರಾಯರು.

ಕುಮಾರವ್ಯಾಸನ ಮಾತಿನಂತೆ "ಕಾಲಕ್ಕೆಗೂಡಿದೊಡೆ ಲೇಸಿನ ಮೇಲೆ ಲೇಸು" ಎನ್ನುವ ಹಾಗೆ ನಲವಿನ ಮೇಲೆ ನಲವು ಬಂದೊದಗಿತು ರಾಯರಿಗೆ. ನಾಲ್ಕೈದು ವರ್ಷಗಳಿಂದ ಮೈಸೂರಿನಲ್ಲಿ ಮನೆಕಟ್ಟುವ ಆಸೆಯಿಂದ ನಿವೇಶನವನ್ನು ಹುಡುಕುತ್ತಿದ್ದ ರಾಯರು ಭಗವಂತನ ಕೃಪಾಕಟಾಕ್ಷದಿಂದ ಮತ್ತು ರಾಯರ ಸ್ನೇಹಿತರಾದ ಕಾಳಪ್ಪ, ಮಾದಪ್ಪನವರ ಸಹಾಯದಿಂದ ಕೇವಲ ಅರ್ಧಗಂಟೆಯ ಒಳಗೆ ವ್ಯಾಪಾರ ಕುದುರಿ ನಿವೇಶನ ಸಿಕ್ಕಿತು. ಒಂದೆರಡು ದಿನಗಳಲ್ಲಿ ರಾಯರ ಹಿರಿಯ ಪುತ್ರ ಸುದರ್ಶನ ಮತ್ತು ಅರುಣರುಗಳ ಕೈಸೇರಿತು, ಆ ನಿವೇಶನ. 'ಗೋಕುಲ'ದ ಮೂರನೆಯ ಹಂತದಲ್ಲಿರುವ ನಿವೇಶನದಲ್ಲಿ ಸುದರ್ಶನರ ಉಸ್ತುವಾರಿಯಲ್ಲಿ ಬೃಹದ್ ಕಟ್ಟಡ ಒಂದು ನಿರ್ಮಾಣವಾಯಿತು. ರಾಯರು ಕೋಟೆಮನೆಯ ವಂಶಸ್ಥರಾದ್ದರಿಂದ ಈ ಮನೆಗೂ 'ಕೋಟೆಮನೆ' ಎಂದು ನಾಮಕರಣ ಮಾಡಿದರು. ನಮಗೂ ಗೃಹಪ್ರವೇಶದ ಕರೆಯೋಲೆ ಬಂದಿತ್ತು. ಕಾರಣಾಂತರದಿಂದ ಹೋಗಲಾಗಲಿಲ್ಲ. ಗೃಹಪ್ರವೇಶವಾದ ಒಂಬತ್ತು ತಿಂಗಳಿಗೆ ರಾಯರು ಎಪ್ಪತ್ತೊಂದು ವರ್ಷಗಳಿಗೆ ಕಾಲಿಟ್ಟರು. ಮಕ್ಕಳೆಲ್ಲರೂ ಸೇರಿ 'ಭೀಮರಥಿ' ಶಾಂತಿಯನ್ನು ಭರ್ಜರಿಯಾಗಿ ನಡೆಸಿದರು.

ರಾಯರ ಸಾಹಿತ್ಯ ಸಾಧನೆಯ ಫಲವಾಗಿ 'ಶ್ರೀಕೃಷ್ಣದರ್ಶನ', 'ರಾಸಲೀಲೆ', 'ಶಿಲ್ಪ ಸಂಗೀತ', 'ಶಾಕುಂತಲಾ' ಈ ಹೊತ್ತಿಗೆಗಳು ಹೊರಬಂದವು. ಕನ್ನಡ ಸಾರಸ್ವತ ಲೋಕವು

ಸಮೃದ್ಧಿಯಾಯಿತು. ರಾಯರು ಕನ್ನಡ ತಾಯಿಗೆ ಕೊಡುಗೆಯಾಗಿ ಕೊಟ್ಟ ಅತ್ಯ ಮೂಲ್ಯ ರತ್ನಗಳಿವು. ಕನ್ನಡತಾಯಿ ಧನ್ಯೆ. 'ಶಿಲ್ಪಸಂಗೀತ' ಕಾವ್ಯ ಬಹುಮಾನವನ್ನು ಗಳಿಸಿದೆ. ಗೌರವ ವೇತನ ಇನ್ನೂರೈವತ್ತು ಇದ್ದದ್ದು ಐನೂರಕ್ಕೆ ಏರಿತು. ಮಕ್ಕಳೆಲ್ಲಾ ಒಂದು ಭದ್ರವಾದ ಸ್ಥಿತಿಯಲ್ಲಿ ನಿಂತರು. ಇದಕ್ಕಿಂತ ತಂದೆ ತಾಯಿಗಳಿಗೆ ಏನು ಬೇಕು? ತೃಪ್ತಿ ಸಮಾಧಾನಗಳಿಂದ ಕಾಲಕಳೆದರು ರಾಮರಾಯರ ದಂಪತಿಗಳು.

ಪತ್ನಿ ಪಂಕಜಮ್ಮನವರ ಆಸೆ ಒಂದು ಮೂಡಿತು. ಒಂದು ದಿನ ರಾಯರು ಮತ್ತು ಪಂಕಜಮ್ಮನವರು ಊಟ ಮಾಡಿ ವಿಚಾರ ಪತ್ರಿಕೆಯನ್ನು ಓದುತ್ತಾ ವಿಶ್ರಾಂತಿ ತೆಗೆದುಕೊಳ್ಳುತ್ತಾ ರಾಯರನ್ನು ಕೂಗಿ "ನಿಮಗೆ ಎಪ್ಪತ್ತಾಯಿತು ನನಗೆ ಅರವತ್ತೆರಡಾ ಯಿತು, ಕಾಶಿ, ಕಾಶ್ಮೀರಗಳನ್ನು ಎಂದು ನೋಡುವುದು ? ಈಗ ಕೈಕಾಲು ಸ್ವಲ್ಪ ಗಟ್ಟಿ ಯಾಗಿದೆ. ಈಗ ನೋಡಬೇಡವ ?" ಎಂದು ಅಂದರಂತೆ. ಕೂಡಲೇ ರಾಯರು ಅವರ ಪುತ್ರರಿಬ್ಬರನ್ನು ಕರೆದು ಉತ್ತರಭಾರತದ ಪ್ರವಾಸದ ವಿಷಯವನ್ನು ನಿರ್ಧಾರವಾಗಿ ತಿಳಿಸಿದರಂತೆ. ಕೂಡಲೇ ಸುದರ್ಶನನು ದೂರವಾಣಿಯ ಸಂಪರ್ಕದಿಂದ ಬೆಂಗಳೂರಿಗೆ ಮಾತನಾಡಿ ಉತ್ತರ ಭಾರತದ ಪ್ರವಾಸಕ್ಕೆ ಸಜ್ಜುಗೊಳಿಸಿ ಎರಡು ಜಾಗಗಳ ಮೀಸ ಲಾತಿಗೆ ತಗಲುವ ಹಣವನ್ನು ಕಟ್ಟಿ ಸಿದ್ಧವಾಗಿದೆ ಎಂದರಂತೆ. ನೋಡಿ ಎಂಥ ಚಿನ್ನ ದಂಥ ಮಕ್ಕಳು. ಅದರಂತೆ ದಂಪತಿಗಳು ಬೆಂಗಳೂರಿಂದ ಪ್ರವಾಸ ಹೊರಟು ದೆಹಲಿ ಯಿಂದ ಕಾಶಿ, ಗಯ, ಅಲಹಾಬಾದ್, ಹರಿದ್ವಾರ, ಋಷಿಕೇಶ್, ಬದರೀ ಎಲ್ಲವನ್ನೂ ಸುತ್ತಿ ನೋಡಿಕೊಂಡು ಹಿಮಾಲಯ ದರ್ಶನ ಪಡೆದು ಮತ್ತೆ ದೆಹಲಿಗೆ ಬಂದು, ಊರಿ ನತ್ತ ಪಯಣ ಬೆಳಸಿ, ಬೆಂಗಳೂರಿಗೆ ಬಂದು ಕಿರಿಯ ಮಗಳು ಭಾರತಿಯವರ ಮನೆ ಯಲ್ಲಿ ಎಂಟು ದಿನಗಳು ವಿಶ್ರಾಂತಿ ಪಡೆದು, ಮೈಸೂರನ್ನು ತಲುಪಿದರು. ದೇವರ ದಯೆ ಯಿಂದ ಸುಖವಾಗಿ ತಮ್ಮ ಮನೆಯನ್ನು ಸೇರಿಕೊಂಡರು.

ವಿಧಿಲೀಲೆ ಯಾರಿಗೂ ತಿಳಿಯುವುದಿಲ್ಲ. ಕಪಟನಾಟಕ ಸೂತ್ರಧಾರಿಯಾದ ಆ ನಾರಾಯಣನಿಗೊಬ್ಬನಿಗೇ ಗೊತ್ತು. ಹಲವಾರು ವರ್ಷಗಳಿಂದ ಸಕ್ಕರೆ ಖಾಯಿಲೆಯಲ್ಲಿ ನರಳುತ್ತಿದ್ದ ರಾಯರ ಪತ್ನಿಯವರ ಆರೋಗ್ಯ ಹದಗೆಟ್ಟಿತು. ನಾಲ್ಕು ತಿಂಗಳ ಕಾಲ ಬೇನೆಗೆ ಸಿಕ್ಕಿ ಮುತ್ತೈದೆಯಾಗಿ ಬದರಿನಾರಾಯಣನ ಚರಣಕಮಲದಲ್ಲಿ ಸೇರಿ ಒಂದಾ ದರು. ರಾಯರಿಗೆ ಸಹಿಸಲಾರದ ನೋವಾಯಿತು. ಎರಡು ದೇಹ ಒಂದು ಮನಸ್ಸು ಆಗಿದ್ದ ಹಕ್ಕಿಗಳಲ್ಲಿ ಒಂದನ್ನು ಕಳೆದುಕೊಂಡು ಏಕಾಂಗಿಯಾಗಿರುವುದು ಹೇಳುವಷ್ಟು ಸುಲಭವಲ್ಲ. ಆ ನೋವು ಏನೆಂದು ನಾನು ಅನುಭವಿಸುತ್ತಿದ್ದೇನೆ. ಕೂಡಿ ಇರಬಹುದು. ಅಗಲಿರುವುದು ಕಠಿಣ ಶಿಕ್ಷೆಯೇ ಸರಿ. ಆದರೆ ಈ ಸಂಗತಿ ಮಾತ್ರ ಅನಿವಾರ್ಯ. ಭಗ ವಂತ ಮನುಷ್ಯನಿಗೆ ಎಲ್ಲ ಸೌಕರ್ಯ ಸೌಭಾಗ್ಯಗಳನ್ನು ಕೊಟ್ಟು ಎರಡು ಸೂತ್ರಗಳನ್ನು ಮಾತ್ರ ತನ್ನಲ್ಲಿಟ್ಟುಕೊಂಡ. ಅದು ಯಾವುದೆಂದರೆ ಜನನ ಮರಣ. ಈ ಎರಡೂ ಮನುಷ್ಯನಿಂದ ನಿರ್ವಹಿಸಲಾಗದ ಮಾತು. ಪಂಕಜಮ್ಮನವರು ಹರಿದ್ರಾಕುಂಕುಮ ಶೋಭಿತಳಾಗಿ ಕಣ್ಮರೆಯಾದರು. ಆ ಸೌಭಾಗ್ಯ ಎಲ್ಲರಿಗೂ ಸಿಗುವುದಿಲ್ಲ ಪುಣ್ಯವಂತೆ,

ಭಾಗ್ಯವಂತೆ ಪಂಕಜಮ್ಮ ಸೋದರಿ.

ರಾಯರು ಜೀವನದುದ್ದಕ್ಕೂ ನೋವನ್ನುಂಡರು. ನೋವಿನಲ್ಲಿ ನಲಿವನ್ನು ಕಂಡು ತೃಪ್ತಜೀವನವನ್ನು ಸಾಗಿಸಿದ ಧೀಮಂತ ಪುರುಷ. ನಿಜಕ್ಕೂ ರಾಯರ ಕೆಲಸ ಕಾರ್ಯಗಳ ನಿರ್ವಹಣೆ, ನಿಷ್ಠಾವಂತ ಜೀವನ, ನಿರಹಂಕಾರ ಪರರ ಹಿತವನ್ನು ಬಯಸುವ ಮನಸ್ಸು ಇವಗಳೆಲ್ಲಾ ಭಗವಂತನಿಗೆ ಖಂಡಿತ ಮೆಚ್ಚುಗೆಯಾಗಿವೆ. ರಾಯರು ಮಾಡುವ ಕೆಲಸಗಳೆಲ್ಲಾ ಯಜ್ಞಕರ್ಮವೆಂದು ತಿಳಿದು ತಮ್ಮ ಕಾರ್ಯಸಾಧನೆ ಮಾಡಿದ್ದಾರೆ. ಇಂಥ ಪುತ್ರನನ್ನು ಪಡೆದ ಕನ್ನಡಮಾತೆ ಭಾಗ್ಯವಂತಳು. ಕನ್ನಡತಾಯ್‌ಗೆಲ್ಗೆ; ಬಾಳ್ಗೆ.

ನೀವು ವಿಶ್ವಾಸದಿಂದ ಕಳಿಸಿದ ನಿಮ್ಮ 'ರಾಸ ಸಾಹಿತ್ಯ'ದ ಸಂಕ್ಷಿಪ್ತ ಪರಿಚಯ ಕೈ ಸೇರಿದೆ. ಈ ಕೊಡುಗೆಗಾಗಿ ವಂದನೆಗಳು.

ನಿಮ್ಮ ಒಟ್ಟು ಸೃಷ್ಟಿ ಏನೆಂಬುದು ಒಂದು ಕಡೆ ವಿವರಣೆಗಳೊಡನೆ ಒದಗಿಸಿದ್ದು ಒಳ್ಳೆಯದಾಯಿತು. ರಸಿಕವಾಚಕರು ಅವುಗಳನ್ನು ಓದಿ, ಪ್ರಕಟಿಸಿರುವ ಪ್ರತಿಕ್ರಿಯೆಗಳು, ಅವೇ ಒಂದು ರೀತಿ ಸಾಹಿತ್ಯಕ್ಕೆ ಉದಾಹರಣೆಗಳಾಗಬಲ್ಲವು.

ಒಂದೆರಡು ಅಪಸ್ವರಗಳ ಬಗ್ಗೆ ನೀವು ತಾಳಿರುವ ಧೋರಣೆ ಉಳಿದವುಗಳಿಗೆ 'ದೃಷ್ಟಿಬೊಟ್ಟು' ಇದ್ದ ಹಾಗಿದೆ. ಇದರ ಬಗ್ಗೆ ನೀವೂ ನಾನೂ ಸಮಾನ ಧರ್ಮರು. ಈಯೊಂದು 'ನಿಂದಾ ಪದ್ಧತಿ' ನಮ್ಮ ಸಾಹಿತ್ಯ ಪರಂಪರೆಯ ಅಂಗ. 'ಕವಿಹೃದಯಸ್ಥಾನಮನರಿದೋದದೆ ಕಣ್‌ಬೇನೆಯ ಕರಡಿವೊಲೂಳ್ದಪಂ' ಎಂಬ ಪ್ರಾಚೀನ ಕವಿವಾಣಿ ಒಂದಿದೆ.

೨೮–೨–೭೭ ಜಿ. ಪಿ. ರಾಜರತ್ನಂ

ಹೃದಯವಂತ ಸಮೇತನಹಳ್ಳಿ ರಾಮರಾಯರು

ಡಾ. ಹೆಚ್. ಎ. ಪಾರ್ಶ್ವನಾಥ್

ನಾಡಿನ ಹಿರಿಯ ಸಾಹಿತಿಗಳಲ್ಲೋರ್ವರಾದ ಶ್ರೀ ಸಮೇತನಹಳ್ಳಿ ರಾಮರಾಯರನ್ನು ಸುಮಾರು ಎರಡೂವರೆ ದಶಕಗಳಿಂದಲೂ ಬಲ್ಲೆ. ೧೯೬೦ರ ಸಮಯ : ನನ್ನ ಹುಟ್ಟೂರು ಹಾಸನದ ಹತ್ತಿರವಿರುವ ಬೇಲೂರು ಮಾರ್ಗದಲ್ಲಿ ಎಡಪಾರ್ಶ್ವಕ್ಕೆ ಹೊರಳಿದರೆ ಕಾಣಸಿಗುವ ಕಿರುಗ್ರಾಮ ದೊಡ್ಡಗದ್ದವಳ್ಳಿ. ಅಲ್ಲಿಯ ಹೊಯ್ಸಳರ ಕಾಲದ ಶ್ರೀ ಲಕ್ಷ್ಮೀದೇವಾಲಯದ ಕುತೂಹಲಕರವಾದ ಇತಿಹಾಸವನ್ನು ಕುರಿತು ಅಧ್ಯಯನ ಮಾಡುತ್ತಲಿದ್ದೆ. ಜಗತ್ಪ್ರಸಿದ್ಧ ಬೇಲೂರು ಶ್ರೀ ಚೆನ್ನಕೇಶವ ದೇವಾಲಯಕ್ಕಿಂತ ನಾಲ್ಕು ವರುಷಗಳ ಮುಂಚೆಯೇ ದೊಡ್ಡಗದ್ದವಳ್ಳಿಯ ದೇವಾಲಯವು ನಿರ್ಮಾಣವಾಗಿದ್ದೆಂದು ತಿಳಿಯಲಾಗಿದೆ (ಕ್ರಿ. ಶ. ೧೧೧೩). ಇದರ ವಾಸ್ತುಶಿಲ್ಪ ಕಲಾವೈಭವವನ್ನು ಕಂಡು ರೋಮಾಂಚಿತನಾಗಿದ್ದೆ. ಇದಕ್ಕೆ ಸಂಬಂಧಪಟ್ಟ ಸಾಕ್ಷ್ಯ ಸಾಹಿತ್ಯ ಸಾಮಗ್ರಿಗಳ ಅನ್ವೇಷಣೆಯಲ್ಲಿ ತೊಡಗಿದ್ದಾಗ ನನಗೆ ದೊರೆತುದು ರಾಮರಾಯರ ನಾಟಕ ಕೃತಿ ನಾಟ್ಯ ಮಂದಾರ ; ಅದನ್ನು ಸಾದ್ಯಂತ ಓದಿದೆ. ನಾಟಕಕಾರನ ಹೃದಯಾಂತರಾಳದ ಐತಿಹಾಸಿಕ ದೃಶ್ಯಸಾಂಗತ್ಯಮಾಲೆ ನನ್ನ ಅಂತರಂಗದ ಚಕ್ಷುಗಳನ್ನು ಢಾಳಾಗಿರಿಸಿತು. ಅಚ್ಚ ಕನ್ನಡಿಗರಾದ ಹೊಯ್ಸಳರ ದೇದೀಪ್ಯಮಾನವಾದ ಕಲಾಪ್ರೇಮದ ಸುಳಿವು, ಸೆಳವು ಹೊಳವುಗಳು ನನ್ನ ಮನಸೆಳೆದವು. ಇಡೀ ಸಾಮ್ರಾಜ್ಯದ ದೃಶ್ಯವೈಭವವನ್ನು ರಾಮರಾಯರು ತಮ್ಮ ಲೇಖನಿಯಿಂದ ಕಣ್ಣಿಗೆ ಕಟ್ಟುವಂತೆ ತಮ್ಮ ಪಾತ್ರಗಳ ಮೂಲಕ ಶಿಲ್ಪಿಯೋಪಾದಿಯಲ್ಲಿ ಕಡೆದಿಟ್ಟಿದ್ದರು. ಅವರ ಕಲ್ಪನಾಮೂಸೆಯಿಂದ ಒಡಮೂಡಿದ ಪಾತ್ರಗಳು ಯಾವುದೇ ಕಲಾಭಿಕ್ಷುವನ್ನು ಅನವರತ ಕಾಡುವಂತಹವು. ನವಿರಾದ ಕಾವ್ಯಾತ್ಮಕ ರಂಗಭಾಷೆ ಬಹುಶಃ ಅವರ ರಚನಾವಿಶೇಷತೆಯೂ ಹೌದು. ದೊರೆ ವಿಷ್ಣುವರ್ಧನ (ಬಿಟ್ಟಿದೇವ)ನ ಮನದನ್ನೆ, ಪಟ್ಟಮಹಿಷಿ, ನಾಟ್ಯರಾಣಿ ಶಾಂತಲೆಯು ಭಗವದಾನಂದಮಯವಾದ ತನ್ನ ಕಲಾನೈಪುಣ್ಯ ಮತ್ತು ರಸಿಕತೆಯಿಂದ ಕನ್ನಡಿಗರ ಮನೋಭೂಮಿಕೆಯಲ್ಲಿ ನಿತ್ಯನಿರಂತರವಾಗಿ ನರ್ತನಗೈಯುತ್ತಾ ತಾದಾತ್ಮ್ಯವನ್ನು ತಂದಿತ್ತ ಪರಿಯ ಸೊಬಗು–ಸೊಡರು ಕೃತಿಯಲ್ಲಿ ಆಕೃತಿಯಾಗಿ ಅಚ್ಚೊತ್ತಿತ್ತು. ಕೃತಿಯನ್ನು ಓದಿದಂದಿನಿಂದಲೇ ರಾಮರಾಯರನ್ನು ಎಂದಾದರೊಂದು ದಿನ ಸ್ವತಃ ಕಂಡು ಸಂಭಾಷಿಸುವ ತವಕ ನನ್ನಲ್ಲಿ ಚಿಗುರೊಡೆದಿತ್ತು, ಹೀಗೆ ವರುಷಗಳುರುಳಿದವಾದರೂ ಅವರನ್ನು ಪ್ರತ್ಯಕ್ಷ ಕಾಣುವ ಸದವಕಾಶವಂತೂ ಒದಗಿಬರಲೇ ಇಲ್ಲ.

ನನ್ನ ವೈದ್ಯಕೀಯ ವಿದ್ಯಾಭ್ಯಾಸದ ನಂತರದ ಒಂದು ವರುಷದ ಗ್ರಾಮೀಣ ತರಬೇತಿ ಅವಧಿಯಲ್ಲಿ (೧೯೭೧) ಮೈಸೂರಿನಿಂದ ಮಂಡ್ಯದ ಹತ್ತಿರವಿರುವ ಶಿವಳ್ಳಿಗೆ ಪ್ರತಿದಿನ ಹೋಗಿಬರುತ್ತಿರಬೇಕಾಗಿದ್ದಿತು. ಅಲ್ಲಿಗೆ ಹೋದ ಮೊದಲ ದಿನದಂದೇ ಆರೋಗ್ಯ ಇಲಾಖೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದ ಮಾನ್ಯ ರಾಮರಾಯರನ್ನು ಭೇಟಿಯಾಗಿ ಸಂತಸಗೊಂಡೆ. ಬಹುಕಾಲದ ಹಂಬಲವೊಂದು ಈಡೇರಿದ ಅಮೋಘ ಘಳಿಗೆ ಅಂದು ಒದಗಿ ಬಂದಿತ್ತು. ತಮ್ಮ ವಿಶಿಷ್ಟ ಹಾಸ್ಯ ಚಟಾಕಿಗಳಿಂದ ಸುತ್ತ ಮುತ್ತಲು ನೆರೆದಿದ್ದವರೆಲ್ಲರನ್ನು ನಗೆಯ ಬುಗ್ಗೆಯಲ್ಲಿ ಮೀಯುವಂತೆ ಮಾಡಿ ಉಲ್ಲಾಸ ವಾತಾವರಣವನ್ನುಂಟು ಮಾಡಿದ್ದರು. ಈ ನಡುವೆ ನನ್ನನ್ನು ಅವರಲ್ಲಿ ಪರಿಚಯಿಸಿಕೊಳ್ಳಲೆತ್ನಿಸಿದೆ. ತುಂಬಾ ಖುಷಿಗೊಂಡ ರಾಮರಾಯರು ನನ್ನತ್ತ ಗಮನವನ್ನಿರಿಸಿ ಮಾತನ್ನು ಮುಂದುವರೆಸಿದರು. ಸಾಹಿತ್ಯ ಜೀವಿಯ ಪರಿಪಕ್ವಗೊಂಡ ವಾಕ್‌ವೈಖರಿ ಎಂತಹವರನ್ನೂ ತಣಿಸುವಂತಿತ್ತು. ಅವರ ಸಾಮಾನ್ಯ ಮಾತೂ ಆಕರ್ಷಣೆಗೊಳಗಾಗುತಿತ್ತು ; ಮುದ ನೀಡುತ್ತಿತ್ತು, ಮುಂದೆ ಪುನರಪಿ ಭೇಟಿಯಾಗುತ್ತಿದ್ದ ಪರಿಣಾಮವಾಗಿ ಅವರಿಗೆ ನಾನು ಹತ್ತಿರವಾಗುತ್ತಾ ಬಂದೆ. ಕಿರಿಯರಲ್ಲಿ ಕಿರಿಯನಾದ ನನ್ನನ್ನು ಒಪ್ಪಿಕೊಂಡುದಷ್ಟೇ ಅಲ್ಲದೆ ಅಪ್ಪಿಕೊಂಡು ವಾತ್ಸಲ್ಯಧಾರೆಯನ್ನು ಎರೆಯುತ್ತಾ ಬಂದರು. ನನ್ನ ಬದುಕಿನ ಪ್ರಾರಂಭದ ಹಂತದಲ್ಲಿಯೇ ಅವರ ಸಖ್ಯ ನನಗೆ ದೊರೆತಿತ್ತು.

೧೯೭೬: ನನ್ನ ಸ್ನಾತಕೋತ್ತರ ವಿದ್ಯಾಭ್ಯಾಸದ ನಂತರ ಮೈಸೂರಿನ ಜಯನಗರ ಬಡಾವಣೆಯಲ್ಲಿ ಕೆಲವು ತಿಂಗಳುಗಳ ಕಾಲ ಬಹಳ ಅನಿರೀಕ್ಷಿತವಾಗಿ ಅವರ ಮನೆಯ ಪಕ್ಕದಲ್ಲಿಯೇ ವಾಸಿಸುತ್ತಿದ್ದೆ. ಅಲ್ಲಿದ್ದಷ್ಟು ಕಾಲ ಪ್ರತಿದಿನ ಅವರನ್ನು ಕಾಣುವ ಕಲೆಯುವ ಸುಸಂದರ್ಭಗಳು ಒದಗಿಬರುತ್ತಲೇ ಇದ್ದವು. ಒಂದು ದಿನ ಸಂಜೆ ಬಲು ಅಕ್ಕರೆಯಿಂದ ತಮ್ಮ ಮನೆಗೆ ಕರೆದುಕೊಂಡು ಹೋಗಿ ಸಾಹಿತ್ಯ ಸಂವಾದದ ನಡುವೆಯೇ ಅತ್ಯಮೂಲ್ಯ ಗ್ರಂಥಗಳನ್ನು ಕೈಗಿತ್ತರು. ತಮ್ಮ ಬೃಹತ್ಕಾವ್ಯ 'ಶಾಕುಂತಲಾ' ತಂದಿತ್ತ ಪ್ರಶಂಸೆ–ಪುರಸ್ಕಾರಗಳನ್ನು ವಿನಮ್ರವಾಗಿ ನೆನೆದು ಹರ್ಷಿಸಿದರು. ಸಮಯ ದೊರೆತಾಗಲೆಲ್ಲಾ ಅಲ್ಲಿದ್ದಷ್ಟು ಕಾಲ ಸಮೀಪದಲ್ಲಿರುವ ಶ್ರೀರಾಮಮಂದಿರದಲ್ಲಿ ನಡೆಯುತ್ತಿದ್ದ ಪುರಾಣ ಪ್ರವಚನಗಳಲ್ಲಿ ಶ್ರೋತೃಗಳಾಗಿ ಭಾಗವಹಿಸುತ್ತಿದ್ದೆವು. ನನ್ನ ಸಾಹಿತ್ಯ ಮತ್ತು ಧಾರ್ಮಿಕಾಸಕ್ತಿಗಳು ರಾಮರಾಯರ ಸಾತ್ವಿಕ ಪ್ರಭಾವದಿಂದ ಪುಟಗೊಂಡವು.

ಸಮೇತನಹಳ್ಳಿಯವರ ಬರಹಗಳಲ್ಲಿ ಸರ್ವೇಸಾಧಾರಣವಾಗಿ ಕಂಡುಬರುವುದೆಂದರೆ ಅಸೀಮವಾದ ಕನ್ನಡ ನಾಡುನುಡಿ ಬಗೆಗಿನ ಪ್ರೇಮ ಮತ್ತು ಕಳಕಳಿ. ಆಳವಾದ ಅಧ್ಯಯನದಿಂದಾಗಿ ಅವು ನೈಜ ಸ್ವರೂಪವನ್ನು ಪಡೆದು ಸದಾ ಅಭಿಮಾನವನ್ನುಕ್ಕಿಸುತ್ತವೆ. ಅದೊಂದು ಬತ್ತದ ಸೆಲೆ. ಸಂಸಕವಿಯು ಮೈಸೂರು ರಾಜಮನೆತನದ ಏಳುಬೀಳು ಮತ್ತು ವೈಭವೋಪೇತ ಐತಿಹಾಸಿಕ ಘಟನೆಗಳನ್ನು ತನ್ನ ಲೆಕ್ಕಣಿಯಿಂದ ಚಿರಸ್ಥಾಯಿಗೊಳಿಸಿದಂತೆ ರಾಮರಾಯರು ಹೊಯ್ಸಳ ಸಾಮ್ರಾಜ್ಯದ ಹೊನ್ನಿನ ದಿನಗಳನ್ನು

ನಿಖರಪ್ರಖರವಾಗಿ ಅನ್ವೇಷಿಸಿ ಕಾವ್ಯಭಾಷೆಯಲ್ಲಿ ರಸವತ್ತಾಗಿ ನಿರೂಪಿಸಿದ್ದಾರೆ. ಬಾಳಿ ಬೆಳಗಿ ಅಳಿದುಹೋದ ರಾಜ್ಯಲಕ್ಷ್ಮಿಯನ್ನು ಹಿಡಿತಪ್ಪದ ಕಲ್ಪನಾವೈಭವ ವಿಲಾಸದ ಪರಿಕರಗಳಿಂದ ಪುನರ್‌ನಿರ್ಮಿಸಿ ಪ್ರತಿಷ್ಠಾಪಿಸಿದ್ದಾರೆ. ಮಹತ್ವಪೂರ್ವ ಇತಿಹಾಸ ಸಂಗತಿಗಳಂತೆಯೇ ಜನಸಾಮಾನ್ಯರ ಸ್ಥಿತಿಗತಿಗಳೂ ಪುಟಪುಟಗಳಲ್ಲಿ ಪುಟಿದಿವೆ. ಅವರ ಜನಪ್ರಿಯ ನಾಟಕಗಳಾದ 'ತಲಕಾಡುಗೊಂಡ', 'ಶಿಲ್ಪಸಂಗೀತ' ಮತ್ತು 'ನಾಟ್ಯಮಂದಾರ' ಕೃತಿಗಳು ಓದುಗರಲ್ಲಿ ಭಾವನಾತರಂಗಗಳನ್ನು ಉದ್ದೀಪನಗೊಳಿಸುತ್ತವೆ. ಪೌರಾಣಿಕ ಶಾಕುಂತಲೆಯನ್ನು ಹೇಗೆ ಅಚ್ಚಳಿಯದಂತೆ ಕಡೆದಿರುವರೋ ಅಂತೆಯೇ ನಾಟ್ಯಕಲಾ ಪ್ರಪೂರ್ಣೆ ಶಾಂತಲೆಯನ್ನು ಪಡಿಮೂಡಿಸಿದ್ದಾರೆ. ಬಹುಶಃ ಇಂತಹ ಪಾತ್ರನಿರೂಪಣೆಯ ಕುಶಲತೆ ಹಾಗೂ ನಿಸ್ಸೀಮತೆಯು ಇವರಿಗೆ ಮಾತ್ರ ಸಿದ್ಧಿಸುವಂತಹುದು. ಹಲವೊಮ್ಮೆ ಕಾಲ್ಪನಿಕ ಪಾತ್ರಗಳೂ ಜೀವಂತಿಕೆಯ ಸದೃಢತೆಯಿಂದ ಮೆರೆದಾಡುತ್ತವೆ. ವರ್ತಮಾನದಲ್ಲಿ ನಿಂತು ಭೂತಕಾಲದ ಆಗುಹೋಗುಗಳನ್ನು ಸಹಜ ಸುಂದರ ಹಾಗೂ ಹೃದಯಸ್ಪರ್ಶಿಯಾಗಿ ಹೆಣೆಯುವ ಅವರ ವಿಧಾನವೈಖರಿ ಶ್ಲಾಘನೀಯವಾಗಿದೆ. 'ತಲಕಾಡುಗೊಂಡ'ವು (ಚೋಳರಸರೊಡನೆ ದೊರೆ ವಿಷ್ಣುವರ್ಧನನು ಕಾದಾಡಿ ತಲಕಾಡನ್ನು ಗೆದ್ದು ಪಡೆದುಕೊಂಡದ್ದು–'ತಲಕಾಡನ್ನು ಕೊಂಡವನು') ಅಂದಿನ ಮೈಸೂರು ಸರಕಾರದ ರಾಜ್ಯಪ್ರಶಸ್ತಿಯಿಂದ ಪುರಸ್ಕೃತಗೊಂಡಿದೆ (೧೯೫೮). 'ಶಿಲ್ಪಸಂಗೀತ'ವು ೧೯೫೭ರಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ ನಾಟಕರಚನಾ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿತ್ತು.

ಐತಿಹಾಸಿಕ ನಾಟಕಗಳಂತೆಯೇ ಪೌರಾಣಿಕ ರಚನೆಗಳೂ ಮೈದುಂಬಿ ಮೆರೆಯುತ್ತವೆ. ಅವರ 'ಭೀಷ್ಮ ಸಂಕಲ್ಪ', 'ರಾಸಲೀಲೆ' ಮತ್ತು 'ಮಹಾಶ್ವೇತೆ' ಕೃತಿಗಳು ಭಾರತೀಯತೆಯ ಪ್ರಚ್ಛನ್ನತೆಯ ಗಣಿಗಳಾಗಿವೆ. ಓದಿದಷ್ಟೂ ವಿವಿಧ ಆಯಾಮಗಳನ್ನು ಪಡೆದುಕೊಳ್ಳುತ್ತವೆ. ಕುರುಕುಲ ಪಿತಾಮಹರಾದ ಭೀಷ್ಮಾಚಾರ್ಯರ ಧೀಮಂತ ವ್ಯಕ್ತಿತ್ವ, ಅಸದೃಶ ರಾಜವಿಧಾನಶೈಲಿ ಮತ್ತು ಮುತ್ಸದ್ದಿತನದ ಮೇರು ಪರಿಚಯವಾಗುತ್ತದೆ. ಗಂಭೀರವಾಹಿನಿಯ ರಸಧಾರೆ ಹರಿಯುತ್ತದೆ: 'ಮಹಾಶ್ವೇತೆ'ಯ ಸುಗುಣ, ಸುಶೀಲ, ಸಹನಾ ಲಕ್ಷಣಗಳು ಬಾಣಕವಿಯನ್ನು ಮಗುದೊಮ್ಮೆ ನೆನೆಯುವಂತೆ ಮಾಡುತ್ತವೆ ; ಭಾವಗೀತಾತ್ಮಕತೆಯಿಂದ ಓಲಾಡುತ್ತವೆ. 'ರಾಸಲೀಲೆ'ಯಲ್ಲಿ ಶ್ರೀಕೃಷ್ಣ ಪರಮಾತ್ಮನ ಶೃಂಗಾರಲೀಲಾವಿಲಾಸಗಳೊಂದಿಗೆ ಆದರ್ಶಮಯ ವ್ಯಕ್ತಿತ್ವವನ್ನು ಸಾರೋದ್ಧಾರಗೊಳಿಸಿದ್ದಾರೆ ರಾಮರಾಯರು.

ರಾಮರಾಯರು ಪೌರಾಣಿಕ ಹಾಗೂ ಗತೇತಿಹಾಸದ ಹಿರಿಮೆಯನ್ನು ನೆನೆದು ಮನದಣಿಯದೆ ತಣಿಯುವರು. ಅವರು ನಾಡಿನ ಬನಿಯನ್ನು ಕಂಡವರು, ಉಂಡವರು ಮತ್ತು ಉಣಿಸಿದವರು. ಅವರ ನಾಟಕಗಳು ಕೇವಲ ಓದುನಾಟಕಗಳಲ್ಲ. ಅವು ಸಮರ್ಥವಾಗಿ ಪ್ರಯೋಗಗೊಳ್ಳುವಂತಾಗಿ ಸೊರಗುತ್ತಿರುವ ಹಾಗೂ ಹೊಸತನವನ್ನು ಬಯಸುತ್ತಿರುವ ಕನ್ನಡ ಹವ್ಯಾಸಿ ರಂಗಭೂಮಿಯು ಪುನಶ್ಚೇತನಗೊಳ್ಳುವಂತಾಗಬೇಕು.

ಸಾಹಿತ್ಯವನ್ನು ಬದುಕಿನುದ್ದಕ್ಕೂ ಮೈವೆತ್ತು ಸಾರ್ಥಕ ಸಾದಿಷ್ಟಪಡಿಸಿಕೊಂಡ ಹಿರಿಯ ಜೀವಿ. ವಯೋಮಾನ ಮತ್ತು ಸಾಧನೆಗಳೆರಡರಲ್ಲಿಯೂ ಹಿರಿಯರೆನಿಸಿಕೊಂಡ ರಾಮರಾಯರು ಕಿರಿಯರೊಡನೆ ಬೆರೆಯುವ ಪರಿ ಚಕಿತಗೊಳಿಸುತ್ತದೆ; ಗೌರವ ಭಾವನೆಯನ್ನು ಮೂಡಿಸುತ್ತದೆ. ದಿಟ್ಟತನ ಅವರ ಮತ್ತೊಂದು ಗುಣವಿಶೇಷ. ೧೧-೨-೧೯೯೬ ರಂದು ರಾಮರಾಯರು ತಮ್ಮ ಜನ್ಮಪೆತ್ತಿದ ನೆಲವಾದ ಹೊಸಕೋಟೆಯಲ್ಲಿ ನೆರವೇರಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ನೀಡಿದ ಭಾಷಣವು ಅವರ ಸಂಶೋಧಕ ತಳಸ್ಪರ್ಶಿಯ ಅನುಪಮ ಸಾಕ್ಷಿಯಾಗಿದೆ. ಹಿಡಿದುದನ್ನು ಬೆಂಬಿಡದೆ ಸಾಧಿಸುವ ಛಲ ಅನುಕರಣೀಯ. ಅವರೊಡನೆಯ ಒಡನಾಟ ಒಂದು ಸತ್ಸಂಗ. ಅವರ ಸಾಧನೆ ಬೋಧನೆಯಷ್ಟೆ ಪರಿಪೂರ್ಣ. ರಾಮರಾಯರಿಂದ ಈ ನೆಲಕ್ಕೆ ಮತ್ತು ಜನಮನಕ್ಕೆ ಸಲ್ಲಬೇಕಾದ ಕೊಡುಗೆಯೇನೋ ಸಂದಿದೆ. ಆದರೆ ಪ್ರಚಾರ, ಪ್ರಶಂಸೆ ಮತ್ತು ವೇದಿಕೆಗಳಿಂದ ಗಾವುದ ದೂರವಿರಬಯಸುವ ಮನೋಭಾವದಿಂದಾಗಿ ಅವರಿಗೆ ಸಮಾಜ ಮತ್ತು ಪ್ರಭುತ್ವದಿಂದ ಸಲ್ಲಬೇಕಾದ ಗೌರವಾದರ ಮತ್ತು ಪುರಸ್ಕಾರ ಸಂದಿಲ್ಲವೆಂದೇ ನನ್ನ ಭಾವನೆ.

ಈಗಲೂ ರಾಮರಾಯರನ್ನು ಅನೇಕ ಸಂದರ್ಭ ಸಮಾರಂಭಗಳಲ್ಲಿ ಭೇಟಿಯಾಗುತ್ತಿರುತ್ತೇನಷ್ಟೆ. ಯಾವಾಗ ಭೇಟಿಯಾದರೂ ನಾನು ಕಾಣುವುದು ಅದೇ ಪ್ರಸನ್ನನಗೆ, ಮೆಲುಮಾತು, ಆತ್ಮೀಯತೆ ಮತ್ತು ಮನತುಂಬಿದ ಉಭಯಕುಶಲೋಪರಿ. ರಾಮರಾಯರು ಒಂದು ರೀತಿಯಲ್ಲಿ ನನ್ನ ಅಂತರಂಗದ ಗುರು ಕೂಡ. ನನ್ನ ವಿದ್ಯಾರ್ಥಿದೆಸೆಯ ನಂತರದ ಜೀವನ ಪ್ರವೇಶದ ಸಂಕ್ರಮಣದ ಅವಧಿಯಲ್ಲಿ ದೊರೆತಿದ್ದ ಅವರ ಅನನ್ಯ ಸಖ್ಯ ಮತ್ತು ಮಾರ್ಗದರ್ಶನ ಅವು ಇಲ್ಲಿಯವರೆವಿಗೂ ಸಾಹಿತ್ಯದೀವಿಗೆಯಾಗಿ ನನ್ನನ್ನು ನಡೆಸಿಕೊಂಡು ಬರುತ್ತಿದೆ.

ಕನ್ನಡ ಮನಸ್ಸಿನ ರಾಮರಾಯರು ನಾಡಿನ ಹಾಗೂ ಜನಮನದ ಆಸ್ತಿ. ಅವರು ನೂರ್ಕಾಲ ನಮ್ಮೊಡನಿರಲೆಂಬುದೇ ನಾಡಜನರ ಬಯಕೆ.

ನಾನರಿತಂತೆ ರಾಸ

ಕೆ. ಎಂ. ವಿಜಯಲಕ್ಷ್ಮಿ

ಸಮೇತನಹಳ್ಳಿ ರಾಮರಾಯರ ಹೆಸರು ಮತ್ತು ಒಂದೆರಡು ಕೃತಿಗಳು ನನ್ನ ಅರಿವಿನ ವಲಯದೊಳಗೆ ಸೇರಿದ್ದು, ಅವರ ಕೊನೆಯ ಮಗಳಾದ ಶ್ರೀಮತಿ ಭಾರತಿ ಕಾಸರಗೋಡು, ಇವರ ಸ್ನೇಹದ ಮೂಲಕ. ಭಾರತಿಯವರ ಸ್ನೇಹವಾದದ್ದು, ನಾನು ಮತ್ತು ಅವರು, ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿಗಳಾಗಿ ನೇಮಕ ಗೊಂಡು ಒಟ್ಟಾಗಿ ಕೆಲಸ ಮಾಡತೊಡಗಿದ ಮೇಲೆ. ನಾನು ರಾಮರಾಯರನ್ನು ನೋಡಿಲ್ಲ, ಬೇರಾರ ಬಾಯಿಂದಲೂ ಅವರ ಬಗ್ಗೆ ಹೆಚ್ಚು ಕೇಳಿಲ್ಲ. ಆದರೆ, ಅವರ ಬಾಲ್ಯದಿಂದ ಈವರೆಗಿನ ಆತ್ಮ ವೃತ್ತಾಂತವನ್ನು ಹೇಳುವ ಅವರ 'ಕೋಟೆಮನೆ', ಅವರ ವ್ಯಕ್ತಿತ್ವವನ್ನು ಮಾತ್ರವಲ್ಲ, ಅವರ ಊರು, ನೆಲ, ಜಲ, ಸಂಸಾರ, ಇತ್ಯಾದಿಗಳೆಲ್ಲ ದರ ಪೂರ್ಣ ಪರಿಚಯವನ್ನು ರಾಯರ ಕಡೆಯಿಂದ ಮಾಡಿಕೊಡುತ್ತದೆ. ಆದರೆ, ಅವರೊಡನೆ ಕೆಲಘಳಿಗೆ ಕಳೆದರೆ, ಮಾತಾಡಿದರೆ, ಓಡಾಡಿದರೆ, ಅವರು ಹೇಳದೇ ಉಳಿದುದನ್ನು ಅಥವಾ ಅವರು ಹೇಳಿದ್ದು ಒಪ್ಪುವ ಅಥವಾ ಬಿಡುವ ಅಂಕಗಳನ್ನು, ಅವರ ಮಾತಿನ ಶೈಲಿ, ಗತ್ತು, ವ್ಯಕ್ತಿತ್ವಗಳನ್ನು, ನನ್ನ ಕಣ್ಣು ಮತ್ತು ಮನಸ್ಸುಗಳ ಮೂಲಕ ನಾನೇ ಅಳೆದು ತಿಳಿದಾಗ ಆಗುವ ಪರಿಚಯ ಬೇರೆಯದೇ ಆಗಬಹುದು. ಆದ್ದರಿಂದ ನಾನು, ಅವರ ಕೃತಿಗಳ ಮೂಲಕ ಆಗಿರುವ ಪರಿಚಯವನ್ನು ನನ್ನ ಅನಿಸಿಕೆ ಯೊಂದಿಗೆ ಹೇಳುವ ಪ್ರಯತ್ನ ನನ್ನದು.

ಸಮೇತನಹಳ್ಳಿ ರಾಮರಾಯರ 'ಕೋಟೆಮನೆ' ಕೃತಿಯೇ ಒಂದು ದೊಡ್ಡ ಕಾದಂಬರಿಯಂತೆ. ಈಗಿನ ಸಕಲ ಸೌಲಭ್ಯ, ಸೌಕರ್ಯಗಳುಳ್ಳ ವಾತಾವರಣದಲ್ಲಿ ಬೆಳೆವ ಮಕ್ಕಳನ್ನು ಗಮನಿಸಿದರೆ, ರಾಯರು, ಬೃಹತ್ ಸಮಸ್ಯೆಗಳ ಬೆಟ್ಟವನ್ನೇ ಕಡಿದಂಥ ಕಷ್ಟಗಳನ್ನನುಭವಿಸಿ ಎಸ್‌ಎಸ್‌ಎಲ್‌ಸಿ ತೇರ್ಗಡೆ ಹೊಂದಿದರು, ಸರ್ಕಾರಿ ಸೇವೆಗೆ ಸೇರು ವಂಥ ಸಾಧನೆ ಮಾಡಿದರು ಎನ್ನಬಹುದು. ಅವರಿಗೆ ಏನೇ ಕಷ್ಟ ಬಂದರೂ, ಅತಿಯಾದ ದುಃಖ–ನೋವುಗಳಾದರೂ ಅವಕ್ಕೆಲ್ಲ ಸಮಾಧಾನವನ್ನು ಕಂಡುಕೊಳ್ಳುವ ಮತ್ತು ಆ ಮೂಲಕ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುವ ಗುಣವಿದೆ.

ರಾಯರಿಗೆ ಬುದ್ಧಿವಂತಿಕೆಯ ಸಮನಾದ ತೂಕದಲ್ಲಿ ಸ್ವಾಭಿಮಾನವೂ ಇದೆ. ಅತಿ ಸ್ವಾಭಿಮಾನಿ ಅವರು. ಯಾರಿಗೇ ಆದರೂ ಸ್ವಾಭಿಮಾನ ಹೆಚ್ಚು ಇದ್ದರೆ ಅನುಕೂಲವೂ ಇದೆ. ಅನನುಕೂಲವೂ ಇದೆ. ಅತಿ ಅಭಿಮಾನ ಇರುವವರು ಪರರಿಗೆ ಅಹಂಕಾರಿಯಾಗಿ

ಕಾಣುವ ಸಾಧ್ಯತೆ ಇರುವುದರಿಂದ, ಹೆಚ್ಚು ಜನರಿಂದ ದೂರ ಉಳಿಯುವ ಸಂದರ್ಭಗಳು ಬರಬಹುದು. ಮತ್ತು ಇನ್ನೊಂದು ತೊಂದರೆ ಎಂದರೆ, ಆತ್ಮಾಭಿಮಾನ, ಬಹು ಬೇಗ ಅವಮಾನದ ಅನುಭವ ನೀಡಿ, ಆ ಮನುಷ್ಯನ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುತ್ತದೆ. ರಾಯರೇ ಈ ತೊಂದರೆಯನ್ನು ಹಲವು ಬಾರಿ ಅನುಭವಿಸಿದ್ದಾರೆ. ಇದೊಂದು ತಮ್ಮ ದೌರ್ಬಲ್ಯವೆಂದೂ ಅವರೇ ಹೇಳಿದ್ದಾರೆ. "ಏನೇ ಕಷ್ಟ ಬಂದರೂ ಆ ಮಾನಸಿಕ ತಳಮಳವನ್ನು ತಡೆಯುವ ಶಕ್ತಿಯನ್ನು ಭಗವಂತನು ನನಗೆ ಕೊಡಲಿಲ್ಲ" ಎಂದೂ, "ಆಗೆಲ್ಲ ಒಳ್ಳೆಯ ಸಾಹಿತಿಗಳ, ಹಿರಿಯ ಸ್ಮರಣೀಯ ಜೀವಗಳನ್ನು ಸ್ಮರಿಸುತ್ತೇನೆ, ವೇದ ಪುರಾಣಗಳನ್ನು ಓದುತ್ತೇನೆ, ಆದರೂ ಆ ಮಾನಸಿಕ ಯಾತನೆ ನನ್ನ ದೇಹ ಮತ್ತು ಮನಸ್ಸುಗಳೆಲ್ಲವನ್ನೂ ನುಂಗಿ ಬಿಟ್ಟು ನನ್ನನ್ನೇ ಇಲ್ಲವಾಗಿಸಿ ಬಿಡುತ್ತದೆ," ಎಂದೂ ಹೇಳಿದ್ದಾರೆ ಅವರೇ. ಆದರೆ ರಾಯರ ಈ ಆತ್ಮಾಭಿಮಾನ ಅವರೇ ಸೃಷ್ಟಿಸಿಕೊಂಡದ್ದಲ್ಲವಲ್ಲ. ಅದು ಅವರ ನಿಯಂತ್ರಣವನ್ನೂ ಮೀರಿ ಅವರೊಂದಿಗೇ ಹುಟ್ಟಿ ಉಳಿದಿರುವಂಥದು. ಬಯಸಿದಾಕ್ಷಣ ಬದಲಿಸಿಕೊಳ್ಳಲು ಬರುವಂಥದಲ್ಲ.

ಈ ಆತ್ಮಾಭಿಮಾನದಿಂದ ಅನುಕೂಲವೂ ಉಂಟು. ಯಾರದ್ದಾದರೂ ಒಂದು ಮಾತು, ಒಂದು ಅಸಡ್ಡೆಯ ವರ್ತನೆ, ಅಭಿಮಾನವನ್ನು ಕೆಣಕಿ ಭುಸುಗುಟ್ಟಿಸಿದರೆ, ಏನನ್ನಾದರೂ ಸಾಧಿಸಿ ತೋರಿಸಲೇ ಬೇಕೆಂಬ ಛಲವೆಬ್ಬಿಸುವ ಮತ್ತು ಆ ಸಾಧನೆ ಮಾಡಿಯೇ ತೀರುವ ಅನುಕೂಲವದು. ರಾಮರಾಯರ ಅಭಿಮಾನ ಇಂಥ ಛಲವನ್ನು ಮೈಗೂಡಿಸಿಕೊಂಡೇ ಅವರ ಜೀವನದಲ್ಲಿ ಅನೇಕ ಮಹತ್ ಸಾಧನೆಗಳನ್ನು ಮಾಡಿಸಿದೆ.ಓದಬೇಕೆಂಬ, ಎಸ್‌ಎಸ್‌ಎಲ್‌ಸಿ ತೇರ್ಗಡೆಯಾಗಲೇಬೇಕೆಂಬ ಹಟ ಹುಟ್ಟಿದ್ದು, ಕೆಟ್ಟದ್ದನ್ನೇ ಬಯಸುವ ಅವರ ದಾಯಾದಿಗಳ ವರ್ತನೆಯಿಂದ, "ನನ್ನಲ್ಲೇನಾದರೂ ಸ್ವಲ್ಪ ಕ್ರಿಯೆ ಇದ್ದರೆ ಅದು ನನ್ನನ್ನೂ ನನ್ನ ಮಕ್ಕಳನ್ನೂ ಕಾಪಾಡುತ್ತದೆ.ಶ್ರೀರಾಮನೇ ನನ್ನ ಮಕ್ಕಳಿಗೆ ದಿಕ್ಕು" ಎಂಬ ಅಜಗರ ನ್ಯಾಯದ ಅವರ ತಂದೆಯ ಮಾತುಗಳಿಂದ. ರಾಯರು ಸ್ಯಾನಿಟರಿ ಇನ್ಸ್‌ಪೆಕ್ಟರಾಗಿ ಆಯ್ಕೆಗೊಂಡಾಗಲೂ, ಆ ನಂತರದ ಸಾಧನೆಗಳ ಸಮಯದಲ್ಲೂ, ಅವರ ಛಲ ನೆನೆದದ್ದು ಮತ್ತು ತೃಪ್ತಿಪಟ್ಟದ್ದು, ಅವರ ದಾಯಾದಿ ಶ್ರೀಮಂತರುಗಳೆಲ್ಲ ಇವರ ತಂದೆ–ತಾಯಿ–ತಮ್ಮಂದಿರನ್ನೂ ಅವಹೇಳನ ಮಾಡಿದ ವರ್ತನೆ ಮತ್ತು ಮಾತುಗಳನ್ನೇ, ಆ ದಾಯಾದಿಗಳಿಗೆ ತಮ್ಮ ಸಾಧನೆ ಸುದ್ದಿ ಮುಟ್ಟಿರುತ್ತದೆ ಎಂಬುದನ್ನೇ.

ರಾಮರಾಯರು,

೧. ವನಹಳ್ಳಿಯ ನಾಗಯ್ಯ ಮತ್ತು ಅವನ ಹೆಂಡತಿ ಸುಬ್ಬಮ್ಮನ ಮನೆಯಲ್ಲಿ ಬಾಲ್ಯದಲ್ಲಿ ಪಟ್ಟ ಕಷ್ಟಗಳನ್ನು ಓದಿದಾಗ,

೨. ಲಂಡನ್ ಮಿಷನ್ ಹೈಸ್ಕೂಲಿಗೆ ಸೇರಿದ ನಂತರ, ತನ್ನವರ ಕಣ್ಣಿಗೆ ಬಿದ್ದು, ಮರ್ಯಾದೆ ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ, ಹಗಲಿಡೀ ಹೊಟ್ಟೆಯಲ್ಲಿ ಹರಿದಾಡುವ ಹಸಿವನ್ನು ಹತ್ತಿಕ್ಕಿ ನಾಲ್ಕು ಬೊಗಸೆ ನೀರನ್ನು ಕುಡಿದು, ರಾತ್ರಿ ಭಿಕ್ಷಾ ಪಾತ್ರೆ ಹಿಡಿದು ಹತ್ತು ಮನೆಯ ಮುಂದೆ ನಿಂತು 'ಭವತಿ ಭಿಕ್ಷಾಂದೇಹಿ' ಎಂಬ ಸಪ್ತಾಕ್ಷರಿ

ಮಂತ್ರವನ್ನುಚ್ಚರಿಸಿ, ಅನ್ನ ಸಾರು ಸಂಗ್ರಹಿಸಿದರೂ ಗೆಳೆಯರ ಕುಟಿಲತನದಿಂದ ಕತ್ತಲಲ್ಲಿ ತಿನ್ನಲಾಗದೇ ಬಿಕ್ಕಿ ಬಿಕ್ಕಿ ಅತ್ತ ಪ್ರಸಂಗ ತಿಳಿದಾಗ,

೩. ಅವರ ತಂದೆ ರೈಲು ಖರ್ಚಿಗೆಂದು ನಾಲ್ಕಾಣೆ ಕೊಡುತ್ತಿದ್ದುದನ್ನು ಪುಸ್ತಕಕ್ಕೊ, ಸೀಸದ ಕಡ್ಡಿಗೊ ಬಳಸಿ, ಬೆಂಗಳೂರಿನಿಂದ ಸಮೇತನಹಳ್ಳಿಗೆ ಪ್ರತಿಸಲವೂ ನಡೆದೇ ಹೋಗುತ್ತಿದ್ದರೆಂಬ ವಿಷಯ ಕೇಳುವಾಗ,

೪. ಬಸ್ ಕಂಡಕ್ಟರಾದ ಮೊದಲ ದಿನವೇ ಚಾಲಕನ ಅವಹೇಳನಕ್ಕೆ ಬೈಯ್ಗುಳಕ್ಕೆ ವಿನಾಕಾರಣ ತುತ್ತಾಗಿ ಅತ್ತಾಗ,

ನನ್ನೊಳಗಿನಿಂದ ಎದ್ದ ಮರುಕ, ನನ್ನ ಕಣ್ಣಿನಲ್ಲೂ ನೀರು ತರಿಸಿತು. ಬಾಲ್ಯದಲ್ಲಿ ನಮ್ಮ ಸುತ್ತ ಮುತ್ತ ಕಣ್ಣಿಗೆ ಬೀಳುತ್ತಿದ್ದ ಕಷ್ಟಗಳು, ಇವರ ಕಷ್ಟದೆದುರು ಏನೂ ಅಲ್ಲವೆನಿಸಿತು.

ಒಟ್ಟು ರಾಯರ ಜೀವನದ ಇತಿಹಾಸವನ್ನು ತಿಳಿದರೆ, ಅವರ ಈಗಿನ, ತುಂಬಿ ತುಳಿದ ಹೊಟ್ಟೆಯಲ್ಲಿ, ಹಿಂದೆ ಅದೆಷ್ಟೋ ಬಾರಿ ಹಸಿವು ಹರಿದಾಡಿದ ನೆನಪುಗಳಿವೆ. ಅವರ ಕೆಚ್ಚೆದೆಯಲ್ಲಿ ಈಗಿನೆತ್ತರಕ್ಕೆ ಕಷ್ಟಪಟ್ಟು ಬಂದ ಹೆಮ್ಮೆ ಇದೆ. ಮನದಲ್ಲಿ ಉತ್ತಮ ಸಾಹಿತ್ಯ ಸೃಷ್ಟಿಸಿ ತಮ್ಮ ಬಾಳನ್ನು ಸದುಪಯೋಗಪಡಿಸಿಕೊಂಡ ಸಾರ್ಥಕತೆಯ ಸಮಾಧಾನವಿದೆ. ತಮ್ಮ ಬುದ್ಧಿವಂತ ಮಕ್ಕಳನ್ನು ಓದಿಸಿ ವಿದ್ಯಾವಂತರನ್ನೂ, ಅನುಕೂಲವಂತರನ್ನೂ ಆಗಿಸಿದ ತೃಪ್ತಿ ಇದೆ. ಅವರಲ್ಲಿ ಒಂದು ವೇಳೆ ಅಸಹನೆ ಇದ್ದರೆ, ಅಸಮಾಧಾನಗಳೂ ಇವೆ ಎನ್ನಬಹುದಾದರೆ, ಅದು ಕೆಡುತ್ತಿರುವ ನಾಡಿನ ಬಗ್ಗೆ, ಅನ್ಯಾಯ–ಅನೀತಿಗಳಿಂದ ತುಂಬಿ ತೂಗುವ ಇಂದಿನ ಜನರ ಬಗ್ಗೆ, ವೃದ್ಧಾಪ್ಯದಲ್ಲಿ ಎಲ್ಲರನ್ನೂ ಕಾಡಬಹುದಾದ ಒಂಟಿತನದ ಬಗ್ಗೆ.

ರಾಯರಿಗೆ ಚಿಕ್ಕವಯಸ್ಸಿನಿಂದಲೂ, ತಮ್ಮ ತಂದೆ–ತಾಯಿಗಳ ಕುಟುಂಬದ ಬಗ್ಗೆ, ಪಿತ್ರಾರ್ಜಿತ ಆಸ್ತಿ ಮತ್ತು ಮನೆಗಳ ಬಗ್ಗೆ, ಒಡಹುಟ್ಟಿದವರ ಬಗ್ಗೆ ಅಗತ್ಯ ಕಾಳಜಿ ಇತ್ತು ಎಂಬುದಕ್ಕೆ ಹಲವು ನಿದರ್ಶನಗಳನ್ನು ಆರಿಸಿ ಹೇಳಬಹುದು. ರಾಯರು, ಹೈಸ್ಕೂಲಿನಲ್ಲಿ ಓದುವಾಗ ಅವರ ತಂದೆ ರೈಲು ಖರ್ಚಿಗಾಗಿ ಎಂದೊ ಒಮ್ಮೆ ನಾಲ್ಕಾಣೆಗಿಂತ ಹೆಚ್ಚು ಕೊಟ್ಟರೂ, ಇಟ್ಟುಕೊಳ್ಳದೇ ಸ್ವಂತಹಕ್ಕೆ ಖರ್ಚು ಮಾಡದೆ, ತಾವು ಪ್ರತಿ ವಾರ ೧೫ ಮೈಲಿಗಳ ಅಂತರವನ್ನು ನಡೆದೇ ಹೋಗಿ ಬಂದು ಮಾಡಿ, “ಇದು ಮನೆ ಖರ್ಚಿಗಿರಲಿ” ಎಂದು ತನ್ನ ತಂದೆಗೆ ಹಿಂತಿರುಗಿಸುವುದಕ್ಕಿಂತ ಹೆಚ್ಚಿನ ಕಾಳಜಿ ಇನ್ನೇನಿರುತ್ತದೆ ? ಇಂಥದೇ ಔದಾರ್ಯ ಮತ್ತು ಜವಾಬ್ದಾರಿಯ ಗುಣವನ್ನು ರಾಯರು, ತಮ್ಮ ತಂದೆ ಸಾಲಕ್ಕೆ ಆಧಾರ ಮಾಡಿಕೊಟ್ಟ ಭೂಮಿಯನ್ನು ಉಳಿಸಿಕೊಳ್ಳುವಾಗಲೂ ತೋರಿಸಿದ್ದಾರೆ. ಅರೆಹಳ್ಳಿಯ ಸಾಹುಕಾರರ ಬಳಿ ರಾಯರ ತಂದೆ ಆಧಾರ ಮಾಡಿಕೊಟ್ಟ ಭೂಮಿ, ತೆಗೆದುಕೊಂಡ ಸಾಲ ತೀರಿಸಲಾಗದೇ ಕೈ ಬಿಟ್ಟು ಹೋಗುತ್ತದೆಂಬುದು ಖಚಿತವಾದಾಗ, ರಾಯರು ಭೂಮಿ ಉಳಿಸಿಕೊಳ್ಳುವ ಭಾರವನ್ನು ಆ ಚಿಕ್ಕ ವಯಸ್ಸಿನಲ್ಲೇ, ತನ್ನ ಹೆಗಲಿಗೆ ಹೊತ್ತು, ನಿದ್ದೆ ಕೆಟ್ಟು ದಾರಿಗಾಗಿ ಹುಡುಕಿದ್ದಾರೆ. ಮೇಡಿ ಮಲ್ಲಸಂದ್ರದ

ಮುಂದಾಳು ಶ್ರೀ ಸುಲ್ತಾನ್‌ಖಾನರ ಮೂಲಕ ಇದ್ದಷ್ಟೇ ಹಣ ಕೊಟ್ಟು, ಸಾಲ ತೀರಿದ ರಸೀತಿ ಪಡೆಯುವಲ್ಲಿ ತಮ್ಮ ಭೂಮಿಯನ್ನು ತಂದೆಗೆ ಉಳಿಸಿಕೊಳ್ಳುವುದರಲ್ಲಿ, ತಮ್ಮ ಜವಾಬ್ದಾರಿಯ ಗುಣವನ್ನು ಸ್ಪಷ್ಟಪಡಿಸಿದ್ದಾರೆ. ಅವರ ಈ ಕಥೆಯನ್ನು ಕೇಳುವವರ ಹೆಗಲ ಹೊರೆಯೂ ಹಗುರವಾದ ಹಾಗೆ ಅನಿಸುವಂತೆ ಮಾಡುತ್ತಾರೆ.

ರಾಯರು ತಮ್ಮ ಪತ್ನಿಯ ಬಗ್ಗೆ ಹೆಚ್ಚು ಹೇಳದೇ ನನ್ನ ಒಂದಿಷ್ಟು ಕುತೂಹಲ ವನ್ನು ಹಾಗೇ ಉಳಿಸಿದ್ದಾರೆ. ಅವರು ತಮ್ಮ ಪತ್ನಿಯ ಬಗ್ಗೆ ಹೇಳಿರುವ ಒಂದು ವಿಷಯ ಮಾತ್ರ ನನ್ನ ಮನಸ್ಸಿನಲ್ಲಿ, ಆಕೆಯ ಬಗ್ಗೆ ಒಂದು ಅನುಕಂಪ ಮೂಡಿಸಿ ಉಳಿ ದಿದೆ. ಅದು, ರಾಯರು ಬರೆಯಲು ಕುಳಿತಿದ್ದರೆ ರಾತ್ರಿ ಅವರಿಗೆ ಊಟ ಬಡಿಸುವ ಒಂದು ಕೆಲಸಕ್ಕಾಗಿ ಕಾಯುತ್ತಿದ್ದರು ಎಂಬುದು. ಮಧ್ಯರಾತ್ರಿಯಾದರೂ, ಹಗಲಿನ ದುಡಿತದ ಸುಸ್ತು ಮೈ ಆವರಿಸಿದ್ದರೂ ನೆಮ್ಮದಿಯಾಗಿ ಮಲಗುವ ಧೈರ್ಯವಿಲ್ಲದೇ, ಎಚ್ಚರದ ಪದರದೊಳಗೇ ನಿದ್ದೆಯಲ್ಲಿ ತೂಕಡಿಸುತ್ತಾ, ರಾಯರ ಕುರ್ಚಿ ಸರಿಸಿದ ಸದ್ದಿಗೇ ಜಾಗೃತಗೊಂಡು ಬಂದು ರಾಯರಿಗೆ ಊಟ ಬಡಿಸುತ್ತಿದ್ದರು ಎಂಬುದು. ಪತಿ ಯೊಬ್ಬನೊಡನೆ ಹೊಂದಿಕೊಳ್ಳಲು, ಸ್ತ್ರೀಯರು ಪಡುವ ಕಷ್ಟದ ಒಂದು ಚಿಕ್ಕ ಚಿತ್ರಣ ಈ ಸಂದರ್ಭದಲ್ಲಿದೆ ಎನಿಸುತ್ತದೆ ನನಗೆ. ತಿಳಿದೂ ತಿಳಿದೂ ನನ್ನ ಈ ತಪ್ಪನ್ನು ನಾನು ತಿದ್ದಿಕೊಳ್ಳಲಿಲ್ಲ ಎಂದು ರಾಯರೇ ಈ ಸಂದರ್ಭದಲ್ಲಿ ಹೇಳಿದ್ದಾರೆ.

"ನನ್ನ ತಪಸ್ಸನ್ನು ವೃದ್ಧಿಗೊಳಿಸಲು ನೆರವಾದ ನನ್ನ ಹೆಂಡತಿಯ ಈ ತಪಸ್ಸು ನನ್ನದಕ್ಕಿಂತ ಕಡಿಮೆ ಏನೂ ಅಲ್ಲ" ಎಂಬ ರಾಯರ ಹೇಳಿಕೆ ನನಗೆ ಒಂದಷ್ಟು ಸಮಾ ಧಾನ ಕೊಟ್ಟ ಅಂಶ.

ರಾಯರು ಸಮಾಜದಲ್ಲಿ ಬಾಳಿದ ರೀತಿ, ಕೆಲಸದಲ್ಲಿ ತೋರಿದ ನಿಷ್ಠೆ ಮೆಚ್ಚು ವಂಥದು. ಮಹಿಳೆಯರ ಬಗ್ಗೆ ಅವರಿಗೆ ಗೌರವವಿದೆ, ನ್ಯಾಯ-ನೀತಿ, ದಕ್ಷತೆ, ಕರ್ತವ್ಯ ನಿಷ್ಠೆ-ಇಂಥ ಒಳಿತುಗಳ ಬಗ್ಗೆ ಅತೀವ ಒಲವಿರುವವರು ಅವರು. ಕಾಯಕವೇ ಕೈಲಾಸ ಎಂಬುದನ್ನು ನಂಬಿದವರು ಅವರು. ಕುಟುಂಬದಲ್ಲಿ ತನ್ನ ಕರ್ತವ್ಯ ಮತ್ತು ಕಛೇರಿಯ ಕರ್ತವ್ಯಗಳ ಬಗ್ಗೆ ಚೆನ್ನಾಗಿ ಅರಿತು ಅದರಂತೆ ನಿರ್ವಹಿಸಿದ ವ್ಯಕ್ತಿ. ಈಗಿನ ಕಾಲದ ಅಪ್ರಾಮಾಣಿಕ, ಅನೈತಿಕ, ಕರ್ತವ್ಯಹೀನ, ಸಮೂಹದಿಂದ ಹೊರಗೆ ಉಳಿದಿರುವ ಅವ ರಿಗೆ, ಇಂದಿನ ಸಮಾಜದಲ್ಲಿ, ಕರ್ತವ್ಯ, ನ್ಯಾಯ-ಪ್ರಾಮಾಣಿಕತೆ ಮತ್ತು ಮಾನವೀಯ ಮೌಲ್ಯಗಳು ಮುದುಡಿ ಹೋಗುತ್ತಿರುವ ಬಗ್ಗೆ ಬಹಳವಾದ ನೋವಿದೆ.

ರಾಮರಾಯರು ತಮ್ಮನ್ನು ತಾವು ಹೊಗಳಿಕೊಳ್ಳುವ ಸ್ವಭಾವದವರಲ್ಲ. ತಮ್ಮ ಸಾಹಿತ್ಯದ ಗುಣಮಟ್ಟದ ಬಗ್ಗೆ ಹೇಳುವಾಗ ಬಹಳ ಸಂಕೋಚದಿಂದ ಹೇಳುತ್ತಾರೆ. "ತುಂಬ ಕೀರ್ತಿವಂತನಾಗಿ ಬದುಕುವಿರಿ" ಎಂದು ಹಸ್ತಸಾಮುದ್ರಿಕರು ಹೇಳಿದ ಮಾತು ನಿಜವಾಗಿದೆ ಎನ್ನುವ ತಮ್ಮ ಅನಿಸಿಕೆಯನ್ನು ಸ್ವಲ್ಪ ದಾಕ್ಷಿಣ್ಯದಿಂದ "ಗ್ರಂಥಕರ್ತನಾಗಿ ನಾನು ಸ್ವಲ್ಪ ಯಶಸ್ಸು ಕಂಡಿರುವುದುಂಟು" ಎಂದು ಸೂಕ್ಷ್ಮವಾಗಿ ನಮ್ಮ ಅರಿವಿಗೆ ತರುತ್ತಾರೆ. ಇದೇ ರೀತಿ 'ಶಾಕುಂತಲಾ' ಮಹಾಕಾವ್ಯಕ್ಕೆ, ಕುವೆಂಪು ಅವರ 'ಶ್ರೀ

ರಾಮಾಯಣದರ್ಶನಂ' ಅನ್ನು ಒಂದು ಆದರ್ಶವಾಗಿಟ್ಟುಕೊಂಡು ಬರೆದಿದ್ದು ಎಂಬುದನ್ನು ಹೇಳುತ್ತ, "ನಾನು ಬರೆದದ್ದು ಸಫಲ ಎಂದಾದರೆ ನನಗೆ ಅದಕ್ಕಿಂತ ಹೆಚ್ಚಿನ ಭಾಗ್ಯ ಇಲ್ಲ. ಇಲ್ಲ ಎಂದುದಾದರೆ ಆ ದಾರಿಯಲ್ಲಿ ನಡೆದ ನನ್ನ ಸಮ್ಮೋದವೂ ಒಂದು ಪುಣ್ಯ ಸಂಪಾದನೆಯೇ ಆದೀತು" ಎಂಬ ಮಾತಿನಲ್ಲೂ ಇದೇ ಭಿಡೆ ಸೇರಿರುವುದನ್ನು ನಾವು ಕಾಣುತ್ತೇವೆ.

ರಾಯರದು ಸರಳವಾದ ಅಚ್ಚಗನ್ನಡ ಭಾಷೆ. ಈಗಿನ ಕಾಲದಲ್ಲಿ ಓದಲು ಅಥವಾ ಕೇಳಲು ಸಿಗದ, ಚಚ್ಚರ, ಬಿಯ್ಯಗ, ಹೇವ, ಸನ್ನಣ ಇತ್ಯಾದಿ ಶಬ್ದಗಳು, ಹಳೆಗನ್ನಡದ ಬಗ್ಗೆ ಹೆಚ್ಚು ತಿಳಿಯದ ನನಗೆ ಇವು ಹಳೆಗನ್ನಡದ ಪದಗಳಿರಬಹುದು ಎನಿಸಿತು. ಅವರ ಐತಿಹಾಸಿಕ ಕಾದಂಬರಿ 'ಮೊನೆಗಾರ'ದಲ್ಲಿ, ಪೆರ್ಬಯಕೆ, ಪೇರಾಸೆ, ಹೆಬ್ಬಗ್ಗ, ಮಂತಣ, ಸೆಳೆಗೊಂಬೊಂದರಲ್ಲಿ, ಮುಂತಾದ ಶಬ್ದಗಳು, ಬಹುವಚನದ ಸಂಭಾಷಣೆಗಳು, ರಾಜಮನೆತನದಲ್ಲಿ ಆಗ ಪರಸ್ಪರರು ಸಂಭಾಷಿಸುವ ರೀತಿ-ನೀತಿ, ವಿಧಾನ ಇವೆಲ್ಲ ಬಹಳ ಸಮಂಜಸವಾಗಿವೆ. ಮೈಸೂರು ಮುವತ್ತೂರು ನಾಡಿನ ಸ್ಥಳಗಳು, ಅದರ ಇತಿಹಾಸ ಮುಂತಾದುವುಗಳ ಬಗ್ಗೆ ರಾಯರು ಚೆನ್ನಾಗಿ ಅಧ್ಯಯನ ಮಾಡಿ ತಿಳಿದಿದ್ದಾರೆ ಎಂಬುದನ್ನು ಈ ಕಾದಂಬರಿ ಸ್ಪಷ್ಟಪಡಿಸುತ್ತದೆ.

ರಾಯರ 'ಕೋಟೆಮನೆ'ಯಲ್ಲಿ ಆಪ್ತರೊಬ್ಬರು ತಮ್ಮ ಜೀವನ ಕಥನವನ್ನು ನಮ್ಮ ಮುಂದೆ ಹೇಳುತ್ತಿದ್ದಾರೆಂಬ ಅನಿಸಿಕೆ ಮೂಡುವಂತೆಯೇ ಅವರ 'ಈಸಬೇಕು' ಕಥಾ ಸಂಕಲನದ 'ಹಳ್ಳಿಯ ನ್ಯಾಯ' ಕಥೆ ಓದುವಾಗಲೂ ಅನಿಸಿತು.

ರಾಯರು ಪ್ರತಿದಿನ ದೇವರ ಪೂಜೆ, ನಮಸ್ಕಾರ, ಧ್ಯಾನ, ಜಪ-ತಪ ಮುಂತಾದುವುಗಳನ್ನು ಮಾಡುತ್ತಾರೊ ಇಲ್ಲವೋ ನನಗೆ ತಿಳಿಯದು. ಇಂಥ ಆಚರಣೆಯಲ್ಲಿ ಅವರಿಗೆ ನಂಬಿಕೆ ಇದೆ ಅಥವಾ ಇಲ್ಲ ಎಂಬುದೂ ಹೇಳಲಾಗದು. ಆದರೆ ಭಗವಂತನಲ್ಲಿ ಅಥವಾ ಅವನ ಶಕ್ತಿಯಲ್ಲಿ ಅವರಿಗೆ ಬಹಳವಾದ ನಂಬಿಕೆ ಇದೆ ಎಂಬುದು ಮಾತ್ರ ಬಹು ಸ್ಪಷ್ಟ. ತಮಗೆ ಒಳಿತಾದಾಗಲೆಲ್ಲ, ಅದು ಭಗವಂತನ ದಯೆ, ಪವಾಡ, ಕೃಪೆ, ಆಸರೆ, ಸಲಹುವಿಕೆ ಎಂಬಿತ್ಯಾದಿ ಪದಗಳಲ್ಲಿ ಬಹು ಭಕ್ತಿಯಿಂದ ಭಗವಂತನನ್ನು ಸ್ಮರಿಸುತ್ತಾರೆ ಅವರು. ತಮ್ಮ ಸೋಲು, ಗೆಲುವು, ಯಶಸ್ಸು, ದುಃಖ-ಈ ಎಲ್ಲವಕ್ಕೂ ಭಗವಂತನೇ ಕಾರಣ ಎನ್ನುವ ದೃಢ ನಂಬಿಕೆಯಲ್ಲೇ ತಮ್ಮ ನೋವು-ನಲಿವುಗಳೆರಡನ್ನೂ ನಿಯಂತ್ರಿಸಿಕೊಂಡು ನೆಮ್ಮದಿ ತಂದುಕೊಳ್ಳುತ್ತಾರೆ ಅವರು.

ರಾಮರಾಯರು ಬರೆದಿರುವ ೧. ಭೀಷ್ಮ ಸಂಕಲ್ಪ-ನಾಟಕ, ೨. ನೃತ್ಯ-ಸರಸ್ವತಿ-ಐತಿಹಾಸಿಕ ಕಾದಂಬರಿ, ೩. ಮೊನೆಗಾರ-ಕಾದಂಬರಿ, ೪. ಶಾಕುಂತಲಾ-ಮಹಾಕಾವ್ಯ, ೫. ತಲಕಾಡುಗೊಂಡ-ಐತಿಹಾಸಿಕ ನಾಟಕ (ಹೊಯಿಸಳ ವಿಷ್ಣುವರ್ಧನನ ಬಗ್ಗೆ), ೬. ಸವತಿ ಗಂಧವಾರಣೆ-ನಾಟ್ಯರಾಣಿ ಶಾಂತಲೆಯ ಕುರಿತು, ೭. ರಾಸಲೀಲೆ (ಶ್ರೀಕೃಷ್ಣನ ಬಗ್ಗೆ, ೮. ನಾಟ್ಯಮಂದಾರ-ಐತಿಹಾಸಿಕ ನಾಟಕಗಳ (ಹೊಯಿಸಳ ಸಾಮ್ರಾಜ್ಯದ ಇತಿಹಾಸ), ೯. ಸ್ವರ್ಗ-ಸೋಪಾನ-(ರಾಮಾಯಣ ಮತ್ತು ಮಹಾಭಾರತಗಳ ಹಿನ್ನೆಲೆ

ಯುಳ್ಳ ಕಥೆಗಳ ಸಂಕಲನ), ೧೦. ದ್ರೋಹಾಡಂಬರ (ಮಾಳರಸನ ಕಥೆ), ೧೧. ಮಹಾ ಶ್ವೇತೆ–ಈ ಕೃತಿಗಳ ಒಂದು ನೋಟದಲ್ಲೇ, ರಾಯರಿಗೆ ಪೌರಾಣಿಕ ಮತ್ತು ಐತಿಹಾಸಿಕ ವಸ್ತುಗಳ ಬಗ್ಗೆ ಹೆಚ್ಚು ಆಕರ್ಷಣೆ ಇದೆ ಎನಿಸುತ್ತದೆ. ಈ ಐತಿಹಾಸಿಕ ಮತ್ತು ಪೌರಾಣಿಕದ ಚೌಕಟ್ಟಿನೊಳಗೆ, ಸಾಹಿತ್ಯದ ಕುಸುರಿ–ಕಸೂತಿ ಮಾಡುವುದೆಂದರೆ ಅವರಿಗೆ ಪ್ರಿಯವಾದ ಕೆಲಸ.

ಇವರ ಕೃತಿಗಳಲ್ಲಿ ಮಾನವೀಯತೆ, ಅನುಕಂಪ ಮತ್ತು ಹೃದಯವಂತಿಕೆಗಳ ಒತ್ತಿದೆ. 'ಪೊನೆಗಾರ' ಕಾದಂಬರಿಯಲ್ಲಿ ಚಿಕ್ಕರೆಸ ಇಮ್ಮಡಿ ತಿಮ್ಮರಾಜನು, ಅನ್ನ, ಮಾಡಿಸಿಕೊಂಡು ಹೋಗಿ, ಬಡಬಗ್ಗರಿಗೆ ಹಂಚಿ, ಅವರ ಸಂತೋಷವನ್ನು ಕಂಡು ತಾನೂ ತೃಪ್ತಿ ಪಡುವುದರಲ್ಲಿ ಅಂಥ ಒಂದು ಹೃದಯವಂತಿಕೆಯನ್ನು ಕಾಣಬಹುದು. ಮಹಾರಾಜ ಕೃಷ್ಣದೇವರಾಯನ ಆಗಮನದಂದು, ಆನೆ–ಕುದರೆ, ರಥ–ರಸ್ತೆ, ಕಾಲಾಳು ಹೆಣ್ಣಾಳು–ಎಲ್ಲವೂ ಚಿನ್ನ–ವಜ್ರ–ವೈಢೂರ್ಯಗಳಿಂದ ತುಂಬಿ ತುಳಕುವ ವೈಭವವನ್ನು ವೀಕ್ಷಿಸುವಂಥ ತಿಮ್ಮರಾಜನ ಅಚ್ಚರಿಯ ದೃಷ್ಟಿ, ಅದರ ಜೊತೆ ಜೊತೆಗೇ, ಹಾಕಲು ಅರಿವೆಗಳಿಲ್ಲದೇ, ಅರೆ ಬರೆ ಬಟ್ಟೆಗಳಲ್ಲೇ ನಿಂತು ಆ ಮಹಾರಾಜನ ವೈಭವವನ್ನು ನೋಡುವ ಬಡ ಜನಗಳನ್ನು ದೃಷ್ಟಿಸಿ ಮನಸಿನಲ್ಲೇ ಮರುಗುತ್ತದೆ. ಈ ಅತಿ ವೃಷ್ಟಿ –ಅನಾವೃಷ್ಟಿಯ ಬಗ್ಗೆ ಆಲೋಚಿಸುತ್ತದೆ.

ಒಟ್ಟಿನಲ್ಲಿ, ಸಮೇತನಹಳ್ಳಿಯವರು ಕಿರೀಟಾಕಾರದ ಅಷ್ಟದಲಗಳಲ್ಲಿ ಏಳು ಸಾವಿರಕ್ಕೂ ಹೆಚ್ಚಿನ ಪುಟಗಳಷ್ಟು ಬರೆದಿರುವುದಾಗಿ ಹೇಳಿದ್ದಾರೆ. ಇವರ 'ಶಿಲ್ಪ ಸಂಗೀತ' ನಾಟಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಶಸ್ತಿ ನೀಡಿದೆ. ಅವರ 'ತಲಕಾಡು ಗೊಂಡ' ನಾಟಕಕ್ಕೆ, 'ಸ್ವರ್ಗಸೋಪಾನ' ಕಥಾ ಸಂಕಲನಕ್ಕೆ ಮತ್ತು 'ಶಾಕುಂತಲಾ' ಮಹಾಕಾವ್ಯಕ್ಕೆ, ಕರ್ನಾಟಕ ಸರ್ಕಾರದ ಪ್ರಶಸ್ತಿಗಳು ಬಂದಿವೆ. ಇವರ ಲೇಖನಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹರಿದಾಡಿ, ಮುವ್ವತ್ತಕ್ಕಿಂತ ಹೆಚ್ಚು ಕೃತಿಗಳನ್ನು ಹುಟ್ಟು ಹಾಕಿದೆ. ಆದರೂ ಇವರ ಒಂದೇ ಒಂದು ಕೃತಿಯ ಹೆಸರನ್ನಾಗಲೀ ಅಥವಾ ಈ ಲೇಖಕರ ಹೆಸರನ್ನೇ ಆಗಲಿ ಈಗಿನ ಸಮಯದಲ್ಲಿ ಯಾರೂ ಯಾವುದಕ್ಕೂ ಉಲ್ಲೇಖಿಸುವುದಿಲ್ಲ ಏಕೆ ಎಂದು ನನಗೆ ಆಶ್ಚರ್ಯ. ಅವರ ಕೃತಿಗಳು ಈ ಕಾಲಕ್ಕೆ ಅಪ್ರಸ್ತುತ ಎಂದೇ ? ಅಥವಾ ಪರಸ್ಪರ ಪ್ರಸಾರ ಮಾಡಿಕೊಳ್ಳುವ ಪ್ರಭಾವೀ ವಲಯದಲ್ಲಿ ತಮ್ಮ ಸದಸ್ಯತ್ವವನ್ನು ಸೇರಿಸುವ ಪ್ರಯತ್ನ ಮಾಡದೇ ದೂರ ಉಳಿದಿದ್ದಾರೆಂಬುದೇ ಕಾರಣವೇ ? ಇಲ್ಲವೇ ಅವರ ಅತಿ ಆತ್ಮಾಭಿಮಾನ ಇಲ್ಲೂ ಯಾವುದೋ ರೀತಿಯ ಅಡ್ಡಿ ಹಾಕಿದೆಯೋ?

ಬದುಕಿನಲ್ಲಿ ಹಲವಾರು ರೀತಿಯ ಜಟಿಲ ಸಮಸ್ಯೆಗಳನ್ನು ಎದುರಿಸಿದರೂ, ಅಂತಸ್ತು, ಹೆಸರು ತೃಪ್ತಿಗಳನ್ನು ಗಳಿಸುವಲ್ಲಿ ಯಶಸ್ಸು ಕಂಡಿರುವ ರಾಯರಿಗೆ, ಅವರ ಉಳಿದ ಬದುಕಿನಲ್ಲಿ ಇನ್ನಷ್ಟು ಸಂತೃಪ್ತಿ ಸಿಗುವಂತಾಗಲಿ ಎಂಬ ಹೃತ್ಪೂರ್ವಕ ಹಾರೈಕೆ ಆಶಯ ನನ್ನದು.

ಶಿಷ್ಟ ಸಾಹಿತಿ ರಾಸ

ನಂ. ನಾಗಲಕ್ಷ್ಮಿ

ಖಚಿತ, ನೇರ ಮಾತುಗಳು ಸರಳ. ಆದರೆ ಅಷ್ಟೇ ಗಂಭೀರ ನಡವಳಿಕೆ. ಕೈಕೊಂಡ ಕಾರ್ಯವನ್ನು ಪೂರ್ಣಗೊಳಿಸುವ ಛಲ, ಪ್ರಗತಿಶೀಲ ವಿಚಾರಧಾರೆ, ಮೌಲಿಕ, ಸಾಂಪ್ರದಾಯಿಕ ಸಾಹಿತ್ಯ ಶೈಲಿಯತ್ತ ಬಲವಾದ ಒಲವು, ಪ್ರಚಾರ, ಕೀರ್ತಿಗಳಿಗೆ ನಿರ್ಲಿಪ್ತತೆ– ಇವು ರಾಮರಾಯರ ಪರಿಚಯ ಮಾಡುವಲ್ಲಿ ಖಂಡಿತ ಸೇರಿಸಬೇಕಾದ ಮಾತುಗಳು. ಅಭಿಮಾನಿ ಓದುಗರ ಸಂಖ್ಯೆ ಹೆಚ್ಚಾದಷ್ಟೂ ತಮ್ಮ ಹಿರಿಮೆ ಹೆಚ್ಚುತ್ತದೆನ್ನುವ ಮಾತಿಗೆ ಅಪವಾದ ಇವರ ಸ್ವಭಾವ.

ಶಿಷ್ಟಸಾಹಿತ್ಯ ಪ್ರಿಯರೂ, ಕಾವ್ಯ, ನಾಟಕ ಪ್ರಕಾರಗಳಲ್ಲಿ ಹೆಚ್ಚಿನ ಒಲವುಳ್ಳವರೂ ಆದ ಶ್ರೀರಾಮರಾಯರು ೧೯೯೨ರ ನವೆಂಬರ್ ೨೪ಕ್ಕೆ ೮೦ಕ್ಕೆ ಕಾಲಿಟ್ಟ ಕನ್ನಡದ ಒಬ್ಬ ಹಿರಿಯ ಸಾಹಿತಿ. ಕಾವ್ಯ, ನಾಟಕ, ಕವನಸಂಕಲನ, ಕಾದಂಬರಿ ಎಂದು ಇದುವರೆಗೆ ಬರೆದಿರುವ ೨೯ ಕೃತಿಗಳ ಸಾಹಿತ್ಯ ಕೃಷಿಯ ಪುಟ ಸಂಖ್ಯೆ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳೂ ಸೇರಿದಂತೆ ಕ್ರೌನ್ ಅಷ್ಟದಲ ೧೧,೫೦೦. ಪ್ರಚಾರದ ವ್ಯಾಮೋಹವಿಲ್ಲ. ಹಾಗಾಗಿ ಹೆಚ್ಚಿನ ಜನತೆಗಾಗಲೀ, ಸರ್ಕಾರಕ್ಕಾಗಲೀ ಇವರತ್ತ ಹೆಚ್ಚು ಗಮನವಿಲ್ಲ. ಪರಿಣಾಮ ಹತ್ತೂ ಹಲವು ಪ್ರಶಸ್ತಿಗಳ ಸುರಿಮಳೆಯಿಲ್ಲ. ಹೊಸಕೋಟೆ ಸಾಹಿತ್ಯಸಮ್ಮೇಳನದ ಅಧ್ಯಕ್ಷ ಪದವಿ, ೧೯೯೦ರಲ್ಲಿ ಟಿ. ನರಸೀಪುರ ತಾಲ್ಲೂಕು ತಲಕಾಡಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ೧೯೯೫ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ಪ್ರತಿಷ್ಠಾನದ 'ನವರತ್ನ' ಪ್ರಶಸ್ತಿ ಹೀಗೆ ಕೆಲವೇ ಬೆರಳೆಣಿಕೆಯ ಸನ್ಮಾನ ಸಮಾರಂಭಗಳನ್ನು ಗುರುತಿಸಬಹುದು.

ಬೆಂಗಳೂರಿಗೆ ಸಮೀಪದ ಸಮೇತನಹಳ್ಳಿ ಹುಟ್ಟೂರು. ಆರೋಗ್ಯ ಇಲಾಖೆಯಲ್ಲಿ 'ಹೆಲ್ತ್ ಇನ್‌ಸ್ಪೆಕ್ಟರ್' ಆಗಿ ವೃತ್ತಿ. ಪ್ರವೃತ್ತಿ ಮಾತ್ರ ಕನ್ನಡ ಸಾಹಿತ್ಯ ಕೃಷಿ. ಈ ಪ್ರವೃತ್ತಿ ಬೆಳೆದು ಬಂದ ಬಗೆಯೂ ವಿಶಿಷ್ಟವೇ. ೧೯೩೦ರಲ್ಲಿಯೇ ಎಸ್.ಎಸ್.ಎಲ್.ಸಿ. ಓದುವಾಗಿನಿಂದಲೇ ಕಾವ್ಯ ಪ್ರಕಾರದಲ್ಲಿ ಒಲವು. ಫಲವಾಗಿ ಹಳೆಗನ್ನಡ ಕಾವ್ಯಗಳ ಅಧ್ಯಯನವೆಂದು ಪಂಪ, ರನ್ನ, ಜನ್ನ, ಲಕ್ಷ್ಮೀಶ, ನಾರಣಪ್ಪ, ಮುದ್ದಣ, ಚಾಮರಸ ಮುಂತಾದವರ ಕಾವ್ಯಗಳನ್ನು ಸ್ವತಃ ಪರಿಶ್ರಮದ ಮೂಲಕ ಅರ್ಥಮಾಡಿಕೊಳ್ಳುವ ಪ್ರಯತ್ನ. ಈ ಸಾಲಿನಲ್ಲಿ ಮೊದಲಿಗೆ ತೆಗೆದುಕೊಂಡ ಕೃತಿ ದೊಡ್ಡಬೆಲೆ ಶ್ರೀ ನಾರಾಯಣ ಶಾಸ್ತ್ರಿಗಳ ಟೀಕಾಸಹಿತವಾಗಿ ಬರೆದ 'ಜೈಮಿನಿ ಭಾರತ.' ಗುರುಮುಖೇನ ಕಾಲೇಜಿನಲ್ಲಿ ಕನ್ನಡ ಕಲಿಯುವ ಅವಕಾಶ ಒದಗದಿದ್ದರೂ ಸಾಹಿತ್ಯಾಧ್ಯಯನಕ್ಕೆ ಅದೇನೂ ತೊಡ

ಕಾಗಲಿಲ್ಲ. ಕಾವ್ಯ ಪ್ರಕಾರಗಳ ಕುರಿತು ಇವರಲ್ಲಿದ್ದ ಒಲವಿನ ಅತಿರೇಕ, ಅಭಿಮಾನಿ ಸಾಹಿತಿಗಳಿಗೆ ಪತ್ರ ಬರೆಯಲು ಪದ್ಯರೂಪವನ್ನೇ ಬಳಸುವವರೆಗೂ ತಲುಪಿತ್ತು. ಹಾಗೇ ಎಲ್ಲ ಹಿರಿಯ ಕವಿಗಳೂ ತನ್ನ ಗುರುಗಳೆಂದು ಹೇಳುವ ಸೌಜನ್ಯ ಶ್ರೀರಾಮ ರಾಯರದು.

೧೯೩೩ರಲ್ಲಿ ಮೊದಲ ಕೃತಿ ರಚನೆ–ಪರಿಶೀಲನೆ ಶ್ರೀ ಎ. ಆರ್. ಕೃಷ್ಣಶಾಸ್ತ್ರಿ ಗಳಿಂದ. ತಮಗೆ ಅತಿ ಪ್ರಿಯವಾದ ಮುದ್ದಣನ 'ಶ್ರೀರಾಮಾಶ್ವಮೇಧ'ದ ಅನುವಾದ ವನ್ನು ತಮಗೆ ತೃಪ್ತಿಯಾಗುವವರೆಗೂ ಅಂದರೆ ೪ ಸಲ ಮಾಡಿದ್ದಾರೆಂಬುದು ಇವರ ಕಾವ್ಯಶ್ರದ್ಧೆಗೆ, ಕಾರ್ಯದಕ್ಷತೆಗೆ ನಿದರ್ಶನ.

'ಶಾಕುಂತಲಾ' ಎಂಬ ಮಹಾಕಾವ್ಯ, ಒಂದು ಕವನಸಂಕಲನ, ಒಂದು ಗೀತನಾಟಕ, ೮ ಕಾದಂಬರಿಗಳು, ೯ ನಾಟಕಗಳು, ೪ ಸಣ್ಣಕತೆಗಳ ಸಂಕಲನಗಳು, ಎರಡು ಜೀವನ ಚಿತ್ರಣಗಳು ಹಾಗೂ ಎರಡು ಅನುವಾದಗಳು. ಹೀಗೆ ಇವರ ಸಾಹಿತ್ಯ ರಚನೆ ವೈವಿಧ್ಯ ಮಯ. ಇವರ ಹಲವಾರು ನಾಟಕಗಳು ರೇಡಿಯೋ ನಾಟಕಗಳಾಗಿ ಪ್ರಸಾರವಾಗಿದ್ದು ಯಶಸ್ವಿಯಾಗಿವೆ. ಕೆಲವು ಪುಸ್ತಕಗಳು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕಗಳಾಗಿಯೂ ಸ್ವೀಕೃತವಾಗಿವೆ.

ಇವರ ಮೆಚ್ಚಿನ ಕತೆಗಾರರು ಶ್ರೀ ಮಾಸ್ತಿಯವರಾದರೆ ಶ್ರೀ ಪುಟ್ಟಪ್ಪನವರು ಮೆಚ್ಚಿನ ಕವಿ.ಬಿ.ಎಂ.ಶ್ರೀ. ಡಿ.ವಿ.ಜಿ.ಯವರೂ ತಮಗೆ ಪ್ರಿಯರೆಂದೂ ಆದರೆ ಪುಟ್ಟಪ್ಪ ನವರ ಪ್ರಭಾವ ತಮ್ಮ ಮೇಲೆ ಹೆಚ್ಚೆಂದೂ ಹೆಮ್ಮೆಯಿಂದ ಹೇಳುತ್ತಾರೆ. ಕಾವ್ಯಪ್ರಕಾರ ದಲ್ಲಿ ಮೊದಲಿನಿಂದಲೂ ಆಸಕ್ತಿ ಇದ್ದುದರ ಪರಿಣಾಮವೂ ಇಲ್ಲಿ ಸೇರಿ ಇವರ ಗದ್ಯದಲ್ಲಿ ಕೂಡ ಪದ್ಯದ ಛಾಯೆ. 'ಸಂಸ'ರ ನಾಟಕಗಳನ್ನು ಅತಿಯಾಗಿ ಮೆಚ್ಚುವುದರ ಕಾರಣ ವಾಗಿಯೇ ಇವರ ನಾಟಕಗಳಲ್ಲಿ ಕೂಡ ಅವರ ಪ್ರಭಾವವಾಗಿದ್ದು 'ಅಭಿನವ ಸಂಸ'ರೆಂಬ ಬಿರುದು ಗೆಳೆಯರಿಂದ ಪ್ರಾಪ್ತ. ಸಾಂಪ್ರದಾಯಿಕ ಚೌಕಟ್ಟಿನಲ್ಲಿ ರಚನೆಗೊಂಡ ಶಿಷ್ಟ ಸಾಹಿತ್ಯ ಇವರ ಮನೋಧರ್ಮಕ್ಕೆ ಒಗ್ಗಿದ್ದು.

ಮೊದಲಿನಿಂದಲೂ ಪೌರಾಣಿಕ, ಐತಿಹಾಸಿಕ ವಸ್ತುಗಳಲ್ಲೇ ಆಸಕ್ತಿ. ಪುರಾಣದ ಐತಿಹಾಸಿಕ ವ್ಯಕ್ತಿಗಳು ಮನುಷ್ಯರು ಮಾಡಬಹುದಾದ ಅತ್ಯುತ್ತಮ ಸಾಧನೆಗಳನ್ನು ಮಾಡಿ ತೋರಿಸಿದ್ದಾರೆಂಬುದನ್ನು ತೋರಿಸುವ ದೃಷ್ಟಿಯಿಂದಲೇ ಈ ಆಯ್ಕೆ ಮಾಡಿ ದ್ದೆಂದು ಹೇಳುತ್ತಾರೆ. ಶೋಷಣೆಯ ವಿರುದ್ಧ ತೋರಿದ ಪ್ರತಿಭಟನೆ, ಮಾಡಿದ ಸಮಾಜ ಸೇವೆ ಗಮನ ಸೆಳೆದದ್ದರ ಫಲವೇ ಹೊಯ್ಸಳ ವಿಷ್ಣುವರ್ಧನ, ಶಾಂತಲಾ, ಮೈಸೂರಿನ ಇಮ್ಮಡಿ ತಿಮ್ಮರಾಜ ಒಡೆಯರ್ ಮುಂತಾದವರ ಚಿತ್ರಣ.

ಪೌರಾಣಿಕ ಪಾತ್ರಗಳಲ್ಲಿ ಮೊದಲಿನಿಂದಲೂ ಮೆಚ್ಚಿಕೆಯಾದದ್ದು ಕೃಷ್ಣನ ಪಾತ್ರ. ಮಹಾಯೋಗಿಯೆಂದಷ್ಟೇ ಅಲ್ಲ; ಹಿಂದೂ ಸಮಾಜದ ಮೊದಲ ಸಮಾಜ ಸುಧಾರಕ ನೆಂದು. ಸಮಸ್ಯೆಗಳನ್ನು ಮನುಷ್ಯನಾಗಿಯೇ ಬಿಡಿಸಿದ್ದು ಎಲ್ಲರಿಗೂ ಇಂದಿಗೂ ಸ್ಫೂರ್ತಿ ದಾಯಕವೆಂಬುದು ಗಮನಾರ್ಹ. ಮಹಾಭಾರತ ಯುದ್ಧದ ಮೊದಲಿಗೆ ಆತನ ಸಂಧಿ

ಪ್ರಯತ್ನ ಇದಕ್ಕೆ ಒಂದು ಉತ್ತಮ ಉದಾಹರಣೆಯೆಂಬುದು ಇವರ ಅಭಿಪ್ರಾಯ. ಮನುಷ್ಯನಾಗಿ ಹುಟ್ಟಿ ಆ ಮಿತಿಯಲ್ಲಿಯೇ ತನ್ನ ಕೆಲಸಗಳ ಮೂಲಕ ದೈವತ್ವಕ್ಕೆ ಏರಿರುವುದನ್ನು ಚಿತ್ರಿಸಿ ತಮ್ಮ ಕೃಷ್ಣನ ಪಾತ್ರ ಚಿತ್ರಣ ಭಾಗವತದ ಕೃಷ್ಣನ ಪಾತ್ರ ಚಿತ್ರಣಕ್ಕಿಂತ ಭಿನ್ನವೆಂದು ಸೂಚಿಸಿದ್ದಾರೆ.

ಇವರ 'ಪರಶುರಾಮ' ಕೂಡ ಇದಕ್ಕೆ ಉತ್ತಮ ಉದಾಹರಣೆ. ಸಮಾಜ ಸುಧಾರಣೆಯೊಂದೇ ತನ್ನ ಉದ್ದೇಶವೆಂದೂ, ಅದೇ ತನ್ನ ತಪಸ್ಸೆಂದೂ ಸ್ವೀಕರಿಸಿ ಕ್ರೌರ್ಯ, ಹಿಂಸೆ, ಅನೀತಿ ಮುಂತಾದವುಗಳಿಂದ ಶೋಷಿತಗೊಂಡವರ ರಕ್ಷಣೆಗಾಗಿ ಶ್ರಮಿಸಿದವನೇ ಈ 'ಪರಶುರಾಮ.'

ಹೆಣ್ಣಿನ ಮಾನಸಿಕ ಶಕ್ತಿಯ ಅಗಾಧತೆಯಿಂದ ಆಕರ್ಷಿತರಾದ ಶ್ರೀರಾಮರಾಯರು ತಮ್ಮ ಕೃತಿಗಳಲ್ಲಿನ ಸ್ತ್ರೀ ಪಾತ್ರಗಳಲ್ಲಿ ಈ ಅಂಶವನ್ನು ಎತ್ತಿಹಿಡಿದಿದ್ದಾರೆ. ನಮ್ಮ ಹಲವಾರು ಐತಿಹಾಸಿಕ, ಪೌರಾಣಿಕ ಘಟನೆಗಳಲ್ಲಿ ಬರುವ ಸ್ತ್ರೀಪಾತ್ರಗಳ ಇಂತಹ ಧೀಶಕ್ತಿ ಬಿಗುವಾದ ಆದರೆ ಸ್ಪಷ್ಟ ಮತ್ತು ನೇರ ಅಭಿವ್ಯಕ್ತಿಯಿಂದ ಸಾಹಿತ್ಯರೂಪಕ್ಕಿಳಿದಿದೆ. ಶ್ರೀ ರಾಮರಾಯರ ಕೃತಿಗಳಲ್ಲಿ ಇವರ ಅಭಿಪ್ರಾಯದಂತೆ ಸ್ತ್ರೀಯರ ಮಾನಸಿಕ ಬಲ ಅಪಾರ. ಅವರ ಉದಾತ್ತತೆ, ಎತ್ತರ, ಬಿತ್ತರಗಳು ಅನುಪಮವಾದುದು.

ಸಾಮಾನ್ಯ ಓದುಗರ ಮಟ್ಟವನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಸಾಹಿತ್ಯದ ಗುಣಮಟ್ಟವನ್ನು ಕಾಯ್ದುಕೊಳ್ಳುವತ್ತಲೇ ಗಮನ ನೀಡಿದ ಸಾಹಿತಿ ರಾಮರಾಯರು. ಮನರಂಜನಾ ಸಾಹಿತ್ಯ ರಚನೆ ಇವರ ಆಲೋಚನಾ ಕ್ಷೇತ್ರದಲ್ಲಿಯೇ ಸುಳಿದಿಲ್ಲ. ಸಂಪೂರ್ಣವಾಗಿ ಸಾಂಪ್ರದಾಯಿಕಚೌಕಟ್ಟಿಗೆ ತಲೆಬಾಗಿದವರು–ಹೀಗಾಗಿ ಇವರ ಗಂಭೀರ, ಶಿಷ್ಟ ಸಾಹಿತ್ಯ ರಚನೆಗೆ ದೊರೆತ ಪ್ರತಿಕ್ರಿಯೆ, ಮೆಚ್ಚಿಕೆ ಪಂಡಿತ ವರ್ಗದಿಂದಲೇ. ಓದುಗರು ಹೆಚ್ಚು ಹೆಚ್ಚಾಗಿ ಗಂಭೀರ ಸಾಹಿತ್ಯಾಧ್ಯಯನ ನಡೆಸಬೇಕೆಂಬುದು ಇವರ ಆಸೆ.ಅದರಿಂದ ಜ್ಞಾನವಿಕಾಸ ಸಾಧ್ಯ. ಯುವಪೀಳಿಗೆಗೆ ಬೇಕಾದ ಬುದ್ಧಿ, ಮನಸ್ಸು ವಿಕಾಸವಾಗಲು ನೆರವಾಗುವ ಸಾಹಿತ್ಯ ರಚನೆ ಮಾಡಬೇಕೆಂಬುದು ಇವರ ವಿಚಾರ.

ಪೌರಾಣಿಕ, ಐತಿಹಾಸಿಕ ವಸ್ತುಗಳೇ ಇವರ ಕೃತಿಗಳಲ್ಲಿ ಸಿಂಹಪಾಲು ಪಡೆದಿದ್ದರೂ ಸಾಮಾಜಿಕ ಸಮಸ್ಯೆಗಳೂ ಒಂದೆರಡು ಕಾದಂಬರಿಗಳು, ನಾಟಕಗಳಲ್ಲಿ ಪ್ರತಿಬಿಂಬಿತವಾಗಿವೆ.

ಶಿಷ್ಟ ಸಾಹಿತಿ ರಾಮರಾಯರಿಗೆ ನವ್ಯಸಾಹಿತ್ಯದ ಪ್ರಗತಿಶೀಲ, ದಲಿತ, ಬಂಡಾಯ ಇತ್ಯಾದಿ ಪ್ರಕಾರಗಳ ಕುರಿತು ಅಂತಹ ಒಲವಿಲ್ಲ. ಅವುಗಳ ಭಾಷೆಯಲ್ಲಿ ಬಿಗಿಯಿಲ್ಲವೆಂದೂ, ಅಲ್ಲಿನ ವಿಚಾರಗಳಲ್ಲಿ ಹೊಂದಾಣಿಕೆಯಿಲ್ಲವೆಂದೂ ಹೇಳುವ ಇವರಿಗೆ ಅಲ್ಲಿನ ಭಾವವೇ ಮೊದಲಿಗೆ ಇಷ್ಟವಿಲ್ಲ.

ಸಾಹಿತ್ಯದ ಭಾಷೆ ಪರಿಶುದ್ಧವಾಗಿರಬೇಕು, ಆಡು ಮಾತು ಇದ್ದರೂ ಗ್ರಂಥಸ್ಥ ಭಾಷೆ ಇದ್ದರೇ ಚೆನ್ನ ಎನ್ನುವ ರಾಮರಾಯರು ಬರವಣಿಗೆ ನೇರವಾಗಿ ಓದುಗರ ಮನ ಮುಟ್ಟುವಂತೆ ಇರಬೇಕೆನ್ನುತ್ತಾರೆ. ತಮ್ಮ ಪ್ರತಿಯೊಂದು ಕೃತಿಯನ್ನೂ ಸಮಾನವಾಗಿ

ಪ್ರೀತಿಸುವ ರಾಮರಾಯರಿಗೆ ಎಲ್ಲ ರಚನೆಗಳು ತೃಪ್ತಿ ನೀಡಿವೆಯಂತೆ.

ಗೌಹಾತಿ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರೊಫೆಸರ್ ಆಗಿದ್ದ, ದಿವಂಗತ ಶ್ರೀ ಜೋಗಿರಾಜಬಸು ಅವರ 'ಇಂಡಿಯ ಆಫ್ ದಿ ಏಜಸ್ ಆಫ್ ಬ್ರಾಹ್ಮಣಾಸ್' ಎಂಬ ಕೃತಿಯ ಅನುವಾದ ಸದ್ಯದಲ್ಲಿ ಪೂರ್ಣಗೊಂಡಿದೆ. ರಾಮಕೃಷ್ಣಾಶ್ರಮದ ಸ್ವಾಮಿ ಹರ್ಷಾನಂದರ 'ಹಿಂದೂ ಗಾಡ್ಸ್ ಆ್ಯಂಡ್ ಗಾಡೆಸಸ್'ನ ಅನುವಾದ ಕೂಡ ಆಗಿದೆ. ಸೃಜನಾತ್ಮಕ ಕೆಲಸ ಈಗೆರಡು ವರ್ಷಗಳಿಂದ ನಡೆದಿಲ್ಲವಾದುದರಿಂದ ಮುಂದಿನ ಯೋಜನೆಯಾಗಿ 'ಅತ್ತಿಮಬ್ಬೆ'ಯ ಕುರಿತು ಸಮಾರು ೪೦೦–೫೦೦ ಪುಟಗಳ ಮಹಾಕಾದಂಬರಿ ಬರೆಯುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ.*

ತಮ್ಮ ಕೃತಿಗಳಲ್ಲಿ ಸ್ತ್ರೀ ಪಾತ್ರಗಳನ್ನು ಉದಾತ್ತವಾಗಿ ಚಿತ್ರಿಸಿರುವ ಶ್ರೀ ರಾಮರಾಯರು ಪ್ರಸ್ತುತ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಸ್ತ್ರೀ ಸ್ವಾತಂತ್ರ್ಯದ ಅಗತ್ಯವನ್ನು ಒಪ್ಪುತ್ತಾ ಅದು ಸ್ವಚ್ಛಂದ ಮಾತ್ರ ಆಗಬಾರದೆನ್ನುತ್ತಾ, ಸಾಂಪ್ರದಾಯಿಕವಾಗಿ ಸಾಹಿತ್ಯ ರಚನೆ ಭಾಷೆ, ಶೈಲಿ ದೃಷ್ಟಿಯಿಂದ ಮಾಡಿರುವುದೇನೋ ನಿಜ. ಆದರೆ ಸಮಕಾಲೀನ ವಿಚಾರಗಳಿಗೆ ಸಕ್ರಿಯವಾಗಿ ಸ್ಪಂದಿಸುತ್ತಾರೆ. ಜಾತಿ, ಮತ ಭೇದಗಳ ಕುರಿತು ಪ್ರಬಲವಾದ ವಿರೋಧ ಇವರದು.

ಗಂಭೀರ, ಶಿಷ್ಟ ಸಾಹಿತ್ಯ ರಚನೆಯತ್ತಲೇ ಗುರಿಯಿಟ್ಟು ೮೦ರ ವಯಸ್ಸಿನಲ್ಲಿಯೂ ಸಾಹಿತ್ಯ ಕೃಷಿಯನ್ನು ನಡೆಸುತ್ತಾ ಜನಪ್ರಿಯತೆಗಿಂತ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸ್ವಭಾವದ ರಾಮರಾಯರದು ಮೊದಲಿನಿಂದಲೂ ಹೋರಾಟದ ಬದುಕು. ಇವರ 'ಕೋಟೆಮನೆ' ಇದನ್ನು ವಿವರವಾಗಿ ನಿರೂಪಿಸುತ್ತದೆ. ಎಷ್ಟೇ ನೋವನ್ನನುಭವಿಸಿದರೂ ತಮ್ಮ ಅಪಾರ ಮನಸ್ಥೈರ್ಯವನ್ನು ಕಾಯ್ದುಕೊಂಡು ಜಯಶಾಲಿಯಾದುದರ ವಿವರಣೆ ನೀಡುತ್ತದೆ.

ಯಾವುದೇ ಪ್ರಚಾರಕ್ಕಾಗಲೀ, ಕೀರ್ತಿಗಾಗಲೀ ಆಶಿಸದೆ ಸದ್ದು, ಗದ್ದಲವಿಲ್ಲದೆ ಕನ್ನಡ ನುಡಿಯ ಸೇವೆ ಮಾಡುತ್ತಿರುವ ಒಬ್ಬ ಹಿರಿಯ ಸಾಹಿತಿ ಶ್ರೀ ಸಮೇತನಹಳ್ಳಿ ರಾಮರಾಯರು.

---

* ಇದು ಈಗ ಮುಗಿದಿದೆ.

ಕವಿ ದಿಗ್ಗಜ

ಲೀಲಾ ವೆಂಕಟೇಶ್

ನಾಡಿನ ಹಿರಿಯ ಸಾಹಿತಿಗಳಲ್ಲಿ ದಿಗ್ಗಜರೆನಿಸಿಕೊಂಡವರ ಸಾಲಿನಲ್ಲಿ ನಿಲ್ಲಬಹುದಾದಂಥಾ ಶ್ರೀ ಸಮೇತನಹಳ್ಳಿ ರಾಮರಾಯರು ಕನ್ನಡ ಸಾಹಿತ್ಯಕ್ಕೆ ವಿಪುಲ ಕೊಡುಗೆಯನ್ನು ನೀಡಿದ್ದರೂ ಅವರ ಸಾಹಿತ್ಯದ ಮೌಲ್ಯಮಾಪನ, ವಿಮರ್ಶೆ ಏಕೆ ನಡೆದಿಲ್ಲ ? ಮೌಲಿಕವಾದ ಅವರ ಕೃತಿಗಳು ಏಕೆ ಪ್ರಚಾರ ಪಡೆದು ಪ್ರಶಸ್ತಿ ಪಡೆಯಲಿಲ್ಲ ಎಂದು ವಿಸ್ಮಯ ಪಡುವಂತಾಗಿದೆ. ೮೦ರ ಈ ವಯಸ್ಸಿನಲ್ಲಿ ತಡವಾಗಿಯಾಗಿಯಾದರೂ ಈ ಸನ್ಮಾನ ಸಮಾರಂಭ ನಡೆಯುತ್ತಿರುವುದು ಮನಸ್ಸಿಗೆ ಸಂತೋಷ ಕೊಡುತ್ತಿದೆ. ಶ್ಲಾಘನೀಯವಾದ ಕೆಲಸ ಇದು. ಬಾಲ್ಯದಿಂದಲೂ ಅವರ ಹೆಸರನ್ನು ಕೇಳುತ್ತ ಬಂದಿರುವ ನನಗೆ ಇದೊಂದು ಎಂದೋ ಆಗಬೇಕಾದ ಸಾರ್ಥಕಕೆಲಸ ಎನಿಸಿದೆ.

ಸಮೇತನ ಹಳ್ಳಿಯವರು ಕೈಯಾಡಿಸದ ಸಾಹಿತ್ಯ ಪ್ರಕಾರವಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ನಾಟಕಗಳು (ಭೀಷ್ಮ ಸಂಕಲ್ಪ, ಮಹಾಶ್ವೇತೆ, ತಲಕಾಡುಗೊಂಡ, ಶಿಲ್ಪಸಂಗೀತ, ರಾಸಲೀಲೆ, ಕಲಾರಾಧನೆ, ಪಿನಾಕಿನಿ, ದ್ರೋಹಾಡಂಬರ, ನಾಟ್ಯಮಂದಾರ) ಕಾದಂಬರಿಗಳು, ಸವತಿಗಂಧವಾರಣೆ, ಎಲೆಯ ಮರೆಯ ಹೂ, ನೃತ್ಯ ಸರಸ್ವತಿ, ಸಿರಿಯಲದೇವಿ, ಯದುವೊಡೆಯ ಸಣ್ಣಕತೆಗಳು ಸ್ವರ್ಗ ಸೋಪಾನ, ಪ್ರಾಣವೀಣೆ ಶಾಕುಂತಲಾ ಮಹಾಕಾವ್ಯ, ತಗಡೂರರ ಆತ್ಮಕತೆ. ನೀಳ್ಗತೆ, ಭಾಷಾಂತರ, ಕವನಗಳು ಎಂದು ಅವರ ವಿದ್ವತ್ತಿನ ವಿಸ್ತಾರ ಮುಂದುವರಿಯುತ್ತಿದೆ. ಪ್ರತಿಯೊಂದು ಕೃತಿಯ ಹಿಂದೆ ನಡೆದಿರುವ ಅಧ್ಯಯನ ಬೆರಗು ಹುಟ್ಟಿಸುವಂತಹುದು. ಆ ಧೀಮಂತ ಸಾಹಿತಿಗೆ ತಲೆಬಾಗುತ್ತೇವೆ.

ಇತ್ತೀಚೆಗೆ ಎಂದರೆ ೧೯೮೭ರಲ್ಲಿ ಪ್ರಕಟಗೊಂಡ 'ಶ್ರೀಕೃಷ್ಣದರ್ಶನ' ಎಂಬ ಅವರ ಬೃಹದ್ಗ್ರಂಥವಂತೂ ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ಸೆಳೆಯುವಂಥಹುದು,

'ರಾಮಾಯಣ ದರ್ಶನಂ' ಮಹಾಕಾವ್ಯದ ಬಗ್ಗೆ ಕವಿ ಕುವೆಂಪು ಅದನ್ನು ತಮ್ಮ ಗುರು ವೆಂಕಣ್ಣಯ್ಯನವರಿಗೆ ಅರ್ಪಿಸುತ್ತ ಹೀಗೆ ಹೇಳಿಕೊಂಡಿದ್ದಾರೆ.

ಪಿಂತೆ
ವಾಲ್ಮೀಕಿಯುಲಿದ ಕಥೆಯಾದೊಡಂ ಕನ್ನಡದಿ
ಬೇರೆ ಕಥೆಯೆಂಬಂತೆ, ಬೇರ ಮೈಯಾಂತಂತೆ,
ಮರುವುಟ್ಟುವಡೆದಂತೆ ಮೂಡಿದೀ ಕಾವ್ಯಮಂ
ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್ ನಿಮ್ಮ
ಕೃಪೆಯಿಂದೆ—

ಎಂದು. ಹಾಗೆಯೇ 'ಶ್ರೀಕೃಷ್ಣದರ್ಶನ'ವು ವ್ಯಾಸರುಲಿದ ಕಥೆಯಾದೊಡಂ, ಕನ್ನಡದಿ ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ, ಮರುವುಟ್ಟುವಡೆದಂತೆ ರಾಯರ ಲೇಖನಿ ಯಿಂದ ಮೂಡಿಬಂದಿದೆ. ಕೃಷ್ಣನ ಬಗೆಗೆ ಬಂದ ಎಲ್ಲ ಕೃತಿಗಳಿಗಿಂತ ಭಿನ್ನವಾಗಿ, ಎಲ್ಲ ಪವಾಡಗಳಿಂದ ಮುಕ್ತವಾಗಿ, ವಾಸ್ತವಿಕತೆಯ ನೆಲೆಗಟ್ಟಿನ ಮೇಲೆ ನಿಂತ ಸತ್ಯ ಕತೆಯಾಗಿ ಹೊಸ ದರ್ಶನವನ್ನು ನೀಡುತ್ತಿದೆ. ಇಲ್ಲಿ ಕೃಷ್ಣ ಪುರಾಣ ಪುರುಷನಾಗದೆ, ಉತ್ತ ಮೋತ್ತಮ ಮಾನವನಾಗಿ ಇತಿಹಾಸಕ್ಕೆ ಸೇರಿದ ಪರಮ ಅತ್ಮನಾಗುತ್ತಾನೆ. ಶ್ರೀ ರಾಮ ರಾಯರ ವಿಷಯ ಸಂಗ್ರಹ, ಅಧ್ಯಯನಶೀಲತೆ, ವಸ್ತುವನ್ನು ನೋಡುವ ಹೊಸದೃಷ್ಟಿ ಈ ಗ್ರಂಥವನ್ನು ಓದುವಾಗ ಪದೇ ಪದೇ ಮನನವಾಗದೇ ಇರದು.

ಇನ್ನೂ ಒಂದು ಮಹತ್ವದ ವಿಷಯವೆಂದರೆ ಇವರು ಕೇವಲ ಲೇಖಕರು ಮಾತ್ರ ವಲ್ಲದೆ ಪ್ರಕಾಶಕರೂ ಆಗಿರುವುದು. "ಗ್ರಂಥಕರ್ತನೊಬ್ಬನು ಪುಸ್ತಕವನ್ನು ಪ್ರಕಾಶ ಪಡಿಸಿ ಅದನ್ನು ನಷ್ಟವಾಗದಂತೆ ಮಾರಾಟಮಾಡುವುದು ಒಂದು ದುಸ್ಸಾಹಸವೆಂಬುದು ನನ್ನ ಅನುಭವಕ್ಕೆ ಬಂದಿದೆ" ಎಂದು ಅವರೇ ಈ ಗ್ರಂಥದ ಪ್ರಸ್ತಾವನೆಯಲ್ಲಿ ಹೇಳಿ ರುವುದು ಕಟು ಸತ್ಯ. ಆದರೂ ಅವರ ಬಹುಭಾಗದ ಪುಸ್ತಕಗಳನ್ನು ಅವರೇ ಪ್ರಕಟಿಸಿ ದರು. ಪೂರ್ವಾಪರ ವಿವೇಚನೆಯಿಲ್ಲದೆ, ಶ್ರದ್ಧೆ, ಸಾಧನೆ, ವಿಷಯಸಂಗ್ರಹವಿಲ್ಲದ ಎಷ್ಟೋ ಬರೆಹಗಳು ಇಂದು ಪ್ರಶಸ್ತಿಗಿಟ್ಟಿಸುತ್ತಿರುವಾಗ ಈ ಮೌಲಿಕ ಸಾಹಿತಿ ಏಕೆ ಎಲೆಯ ಮರೆಯಲ್ಲಿಯೇ ಉಳಿದರು ಎಂಬ ನೋವು ಬಗೆಯನ್ನು ಕದಡುತ್ತದೆ.

'ಶ್ರೀಕೃಷ್ಣ ದರ್ಶನ'ಕ್ಕೆ ಅವರು ಬರೆದಿರುವ ಪ್ರಸ್ತಾವನೆ ಸದಾ ನೆನಪಿನಲ್ಲಿ ಉಳಿ ಯುವಂತಹದು. ವಿಚಾರದ ಒರೆಗೆ ಹಚ್ಚುವಂತಹುದು. ಪ್ರಸಕ್ತ ರಾಜಕೀಯ, ಸಾಮಾ ಜಿಕ ಸ್ಥಿತಿಗೆ ಮರುಗುವ ಸಾಹಿತಿ, ಸುಮಾರು ಕ್ರಿ. ಪೂ. ೧೪೦೦ರ ಆಚೆ ಈಚೆ ಜೀವಿ ಸಿದ್ದನೆಂದು ವಿದ್ವಾಂಸರು ಒಪ್ಪಿಕೊಂಡಿರುವ ಶ್ರೀಕೃಷ್ಣನ ದರ್ಶನ ಇಂದಿಗೂ ಪ್ರಸ್ತುತ ವಾಗುವಂತೆ ಸಾದರ ಪಡಿಸಿದ್ದಾರೆ. ಕೊಲೆ, ಸುಲಿಗೆ, ದರೋಡೆ, ಕ್ರೌರ್ಯ, ಮೋಸ, ಅತ್ಯಾಚಾರ ದಿನನಿತ್ಯದ ಸುದ್ದಿಯಾಗಿರುವ ಈ ದಿನಗಳಲ್ಲಿ, ಮಾನವೀಯ ಮೌಲ್ಯಗಳೇ ಇಲ್ಲವಾಗುತ್ತಿರುವ ಈ ದಿನಗಳಲ್ಲಿ ಮಾನವೀಯತೆಯನ್ನು ಬೋಧಿಸುವ ಈ ಗ್ರಂಥದಲ್ಲಿ ಸಾಹಿತಿಯ ಕಳವಳ, ಕಳಕಳಿ ಪುಟ ಪುಟದಲ್ಲಿಯೂ ವ್ಯಕ್ತವಾಗುತ್ತದೆ.

ಕೃಷ್ಣನ ಜೀವಿತಕ್ಕೆ ಅಂಟಿಕೊಂಡಂತಿರುವ ಅತಿಪ್ರಕೃತಿಯ ಉತ್ಪ್ರೇಕ್ಷೆ ಮತ್ತು ಅದ್ಭುತಗಳನ್ನು ಅವರು ಅತ್ಯಂತ ನವಿರಾಗಿ ವಿಶ್ಲೇಷಿಸುತ್ತಾರೆ. ಕಂಸನ ತಾಯಿ ಜಯ ಭದ್ರೆಯ ತಾರುಣ್ಯದ ದಿನಗಳಿಂದ ಆರಂಭವಾಗುವ 'ಶ್ರೀಕೃಷ್ಣದರ್ಶನ' ಒಂದೆರಡು ಪುಟ ಓದುವುದರೊಳಗಾಗಿ ತನ್ನೊಳಗೆ ನಮ್ಮನ್ನು ಸೆಳೆದುಕೊಂಡುಬಿಡುತ್ತದೆ. ಕಂಸನ ಜನನ ರಹಸ್ಯ (ಹೆಸರು ಉಗ್ರಸೇನನಾದರೂ, ಸಾಧು ಪುರುಷನಾದವನ್ನ ಮಗನಾಗಿಯೂ ಕಂಸ ಯಾಕೆ ಹಾಗೆ ಕ್ರೂರ ರಾಕ್ಷಸನಂತೆ ನಡೆದುಕೊಂಡ ಎಂಬುದರ ರಹಸ್ಯ ಇಲ್ಲಿ ಸ್ಫೋಟ ವಾಗುತ್ತದೆ) ದೇವಕಿಯ ಮದುವೆಯ ನಂತರ ಅಶರೀರವಾಣಿಯೊಂದು ಇಲ್ಲಿ ಮೊಳ ಗುವುದಿಲ್ಲ. ಅತ್ಯಂತ ಸಹಜವೆಂಬ ರೀತಿಯಲ್ಲಿ, ಇಂದಿಗೂ ಪ್ರಸ್ತುತವೆಂಬಂತೆ ಈ ವಿಷಯ

ವರ್ಣಿತವಾಗಿದೆ. ಯಮುನಾನದಿ ವಸುದೇವನಿಗೆ ದಾರಿಬಿಡುವುದು, ಆದಿಶೇಷ ನೆರಳೀಯುವುದು, ಖಾಂಡವವನ ದಹನ ಎಲ್ಲವೂ ಆಗ, ಈಗ, ಅವರು ಇವರು ಕೃಷ್ಣನನ್ನು ದೇವರಾಗಿ ಮಾಡಲು ಮೂಲಕೃತಿಗೆ ಸೇರಿಸಿರಬಹುದಾದ ಸ್ವಕಪೋಲ ಕಲ್ಪಿತ ಪವಾಡಗಳು. ಇಲ್ಲಿರುವುದೇ ಸತ್ಯ, ಹೀಗೆಯೇ ನಡೆದಿರಬಹುದು ಎಂಬಷ್ಟರ ಮಟ್ಟಿಗೆ ಶ್ರೀಕೃಷ್ಣ ದರ್ಶನ ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಕವಿ ಇವೆಲ್ಲವನ್ನೂ ಹೊಸ ದೃಷ್ಟಿಯಿಂದ ನೋಡಿ ಮಾನವ ಶಕ್ತಿಯ ಮಿತಿಯಲ್ಲಿಯೇ ಈ ಘಟನೆಗಳಿಗೆ ಹೊಸ ಮೆರಗು ನೀಡಿದ್ದಾರೆ.

"ಮಾನವಶಕ್ತಿಯ ಮಿತಿಯಲ್ಲಿ ಏನನ್ನು ಮಾಡಬಲ್ಲೆನೊ ಅದನ್ನು ಮಾತ್ರ ನಾನು ಮಾಡಬಲ್ಲೆನೇ ಹೊರತು, ಅದಕ್ಕೂ ಹೆಚ್ಚಿನದನ್ನು ಮಾಡುವುದು ನನ್ನಿಂದ ಸಾಧ್ಯವಿಲ್ಲ", ಎಂದು ಶ್ರೀಕೃಷ್ಣನೇ ನಿರ್ಮಲ ಹೃದಯದಿಂದ ಒಪ್ಪಿಕೊಂಡಿದ್ದಾನೆ.

ಇಂದು ಆಸುರೀ ಶಕ್ತಿಗಳೇ ವಿಜೃಂಭಿಸುತ್ತಿರುವ ಈ ದಿನಗಳಲ್ಲಿ ಕೃಷ್ಣನ ಮಾನವ ಶಕ್ತಿಯ ದೇವದರ್ಶನ ನಮಗೆ ಹಿಂದೆಂದಿಗಿಂತಲೂ ಅತ್ಯಧಿಕವಾಗಿ ಬೇಕಾಗಿದೆ.

ಮೈಸೂರಿನಲ್ಲಿ ನಾನು ಕನ್ನಡ ಎಂ.ಎ. ಮಾಡುತ್ತಿದ್ದಾಗ ಶ್ರೀಯುತರ ಗೋಕಲದಲ್ಲಿರುವ ಮನೆಗೊಮ್ಮೆ ಹೋಗಿದ್ದೆ. ಅವರ ಕೊಠಡಿ, ಅದು ಬರಿಯ ಕೊಠಡಿಯಲ್ಲ, ಅಧ್ಯಯನದ ಕೊಠಡಿ, ವ್ಯಾಸಂಗದ ಕೊಠಡಿ, ಸರಸ್ವತಿಯ ಆರಾಧಕನ ಕೊಠಡಿ. ಓರಣವಾಗಿ ಜೋಡಿಸಿದ್ದ ಅಸಂಖ್ಯ ಪುಸ್ತಕಗಳ ಮಧ್ಯೆ ಕುಳಿತು ಓದುತಿದ್ದ, ಬರೆಯುತಿದ್ದ ಆ ಇಳಿಯ ವಯಸ್ಸಿನ ಹಿರಿಯ ಸಾಹಿತ್ಯ ತಪಸ್ವಿಯ ಚಿತ್ರ ಕಣ್ಣಿನಿಂದ ಎಂದೂ ಮರೆಯಾಗದು. ಅವರ ಮೇರು ವ್ಯಕ್ತಿತ್ವ ನಮಗೆಲ್ಲ ಆದರ್ಶ. ಅವರ ಸನ್ಮಾನ ನಮಗೆಲ್ಲ ಸುಮ್ಮಾನ.

'ತಲಕಾಡುಗೊಂಡ' ಒಂದು ಉತ್ತಮ ಮಟ್ಟದ ನಾಟಕ. ನಾಟಕದ ವಿಷಯವು ಕನ್ನಡನಾಡ ಹೆಮ್ಮೆಯ ದಿನಗಳದು. ಅದಕ್ಕನುಗುಣವಾದ ಭಾಷೆ, ಶೈಲಿಗಳಿಂದ ಕೂಡಿ, ನಾಟಕವು ಓದಿದವರ ಮನಸ್ಸನ್ನು ಸದ್ಗುಣಪ್ರೇರಣೆಯ ಶಿಖರಕ್ಕೆ ಏರಿಸುತ್ತದೆ. ಸಂಭಾಷಣೆಗಳು ಗಾಂಭೀರ್ಯಯುತವಾಗಿಯೂ ರಸವತ್ತಾಗಿಯೂ ಇವೆ.

ಇನ್ನೂ ಬರೆಯಿರಿ : ಮತ್ತೂ ಬರೆಯಿರಿ. ಕನ್ನಡವು ಬೆಳೆಯಬೇಕು.

೫–೨–೫೯ **ಕೆ. ಹನುಮಂತಯ್ಯ**

ಎಲೆಮರೆಯ ಹಿರಿಯ ಚೇತನ

ಎಲ್ಲೇಗೌಡ ಬೆಸಗರಹಳ್ಳಿ

ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿ ಸಮೀಪದ ಕೆರೆಮೇಗಳ ದೊಡ್ಡಿಯಲ್ಲಿ ಅಂದು ಸಂಭ್ರಮವೋ ಸಂಭ್ರಮ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಮೇತನ ಹಳ್ಳಿ ರಾಮರಾಯರು ಬರುತ್ತಾರೆ, 'ಕನ್ನಡ ಸಂಘ' ಉದ್ಘಾಟನೆ ಮಾಡುತ್ತಾರೆಂದು, ಬೆಸಗರಹಳ್ಳಿಯ ಸಾಹಿತ್ಯಾಸಕ್ತರಲ್ಲಿ ಒಬ್ಬನಾಗಿ ನಾನು ಸಹ ಅಂದು ದೊಡ್ಡಿಗೆ ಹೋಗಿದ್ದೆ. ಮಾತ್ರವಲ್ಲ ನಾನೂ ಸಹ ಅಂದಿನ ಮನರಂಜನಾ ಕಾರ್ಯಕ್ರಮದಲ್ಲಿ ನಾಟಕ ವೊಂದರಲ್ಲಿ ಪಾತ್ರವನ್ನೂ ಮಾಡಿದ್ದೆ.

೧೯೬೮ರಲ್ಲಿ ಶ್ರೀಯುತರು ಮಂಡ್ಯದಲ್ಲಿದ್ದಾಗ ಮೇಲ್ಕಂಡ ಕಾರ್ಯಕ್ರಮಕ್ಕೆ ಬಂದಾಗ ಅವರನ್ನು ನೋಡಿದ್ದು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟು ಹೊತ್ತಿಗೆ ಸಮೇತನಹಳ್ಳಿ ರಾಮರಾಯರು ಪ್ರಸಿದ್ಧರಾಗಿದ್ದರು. ಆ ವೇಳೆಗಾಗಲೇ ಅವರ ನಾಟ್ಯ ಮಂದಾರ, ರಾಸಲೀಲೆ, ನಾಟಕಗಳನ್ನು ಓದಿದ್ದೆ. ಪ್ರಾಣವೀಣೆ ಕಥಾಸಂಕಲನ ಬಿಡುಗಡೆ ಯಾಗಿತ್ತು. ಕಥೆ, ಕಾದಂಬರಿ, ನಾಟಕ, ಕಾವ್ಯಪ್ರಕಾರಗಳಲ್ಲಿ ಹೆಸರು ಮಾಡಿದ್ದ ಶ್ರೀಯುತರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರೂ ಹೌದು.

ಅನಂತರ ೧೯೮೯ರಲ್ಲಿ ಅವರನ್ನು ಪುನಃ ಭೇಟಿ ಮಾಡಿದ್ದು ಇಪ್ಪತ್ತೊಂದು ವರ್ಷಗಳ ನಂತರ.

"ನಿಮ್ಮ ಮಂಡ್ಯಜಿಲ್ಲೆಯಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದೆ. ಈಗ ನೀವು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕ.ಸಾ.ಪ ಅಧ್ಯಕ್ಷರಾಗಿದ್ದೀರಿ. ಚೆನ್ನಾಗಿ ಕಾರ್ಯಕ್ರಮಗಳನ್ನು ನಡೆಸಿರಿ" ಎಂದು ಅತ್ಯಂತ ಸಂತೋಷ ಮತ್ತು ಪ್ರೀತಿಯಿಂದ ಹೇಳಿದರು. ಅವರ ಸಲಹೆ ಮಾರ್ಗದರ್ಶನಗಳಿಂದ ಕಾರ್ಯಕ್ರಮಗಳನ್ನು ನಡೆಸಿದೆ.

ಆದರೆ ಶ್ರೀ ಸಮೇತನಹಳ್ಳಿ ರಾಮರಾಯರ ಸಾಹಿತ್ಯ ಕುರಿತ ಸಮಾವೇಶವನ್ನು ಹೊಸಕೋಟೆಯಲ್ಲಿ ಮಾಡಬೇಕೆಂದುಕೊಂಡು ತಾ॥ ಕ.ಸಾ.ಪ.ದ ಆಲೋಚನೆ–ಯೋಜನೆ ಕಾರ್ಯಗತವಾಗದೇ ಹೋದಾಗ ನೊಂದುಕೊಂಡೆ. ಶ್ರೀಯುತರಿಗೆ ಸಲ್ಲಬೇಕಾದ ಸನ್ಮಾನ ಗೌರವಗಳು ಸಂದಿಲ್ಲವೆಂದೇ ನನ್ನ ಭಾವನೆ. ತಮ್ಮ ವೃತ್ತಿಜೀವನದೊಂದಿಗೆ ಸಾಹಿತ್ಯಸೇವಾ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು, ನಾಡು–ನುಡಿಯ ಸೇವೆಯನ್ನು ಯಥಾಶಕ್ತಿ ಗೈಯ್ಯುತ್ತಿರುವ ಹಿರಿಯ ಚೇತನವಾಗಿದ್ದಾರೆ. ಮಾನವೀಯ ಗುಣಗಳು.

ನೈತಿಕ ಮೌಲ್ಯಗಳು, ಸಾಹಿತ್ಯಿಕ ಗುಣ ವಿಶೇಷಗಳಿಂದ ಕೂಡಿದ ಐತಿಹಾಸಿಕ ಕಾದಂಬರಿಗಳನ್ನು ನೀಡಿರುವ ರಾಯರು ಕನ್ನಡ ನಾಟಕ ರಂಗಕ್ಕೆ ಕೊಟ್ಟಿರುವ ಕೊಡುಗೆಯೇನೂ ಕಡಿಮೆಯಿಲ್ಲ. ಒಟ್ಟಾರೆ ಅವರು ಮಾಡಿರುವ ಸಾಹಿತ್ಯ ಸೇವೆಯನ್ನು ದಾಖಲಿಸುವ ಅಭಿನಂದನಾ ಸಂಪುಟವನ್ನು ತರುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಎಲೆ ಮರೆಯ ಹಿರಿಯ ಚೇತನಕ್ಕೆ ಸಂದ ಗೌರವವಾಗಿದೆ.

ತಮ್ಮ ಇಪ್ಪತ್ತೈದನೇ ಶ್ರೇಷ್ಠಕೃತಿಯಾದ 'ಶ್ರೀ ಪರಶುರಾಮ' ಕಾದಂಬರಿ ಓದಿದೆ. ಮನನವಾಗುವಂತೆ ಕೆಲವು ಅಧ್ಯಾಯಗಳನ್ನು ಎರಡು ಬಾರಿ ಓದಿದೆ. ನಿಜವಾಗಿ ಈ ದಶಕದಲ್ಲಿ ಬಂದ ಒಂದು ಅತ್ಯುತ್ತಮ ಕಾದಂಬರಿ ಇದು.

ನಿಜವಾಗಿ ನೀವು ಸಮರ್ಥ ಹಾಗೂ ಒಳ್ಳೆಯ ಕಾದಂಬರಿ ಕೊಟ್ಟಿದ್ದೀರಿ. ಇದಕ್ಕಾಗಿ ನಿಮಗೆ ವಂದನೆಗಳು.

'ಉದಯೋದ್ಯಾನ'ದ ಎಲ್ಲ ಕಡೆಗಳಲ್ಲೂ ವಿಹರಿಸಿ ನಲಿದೆ. ಸುಗಂಧಭರಿತವಾದ ಬಣ್ಣ ಬಣ್ಣದ ಹೂಗಳು ತುಂಬಿದ ಮನೋಹರ ಉದ್ಯಾನವಿದು.

ಆತ್ಮ ಸಂತೋಷ ಎಲ್ಲಕ್ಕಿಂತ ಮುಖ್ಯ ಎಂಬುದನ್ನು ನಾನು ತಮಗೆ ಹೇಳಬೇಕೆ ? "ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು."

ಸಿಪಿಕೆ

ಸಹೃದಯಿ ರಾಯರು

ಕೃ. ರಾಮಚಂದ್ರ

ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ಆತ್ಮಕಥೆ ಇತ್ಯಾದಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿ ಕನ್ನಡಮ್ಮನ ಸೇವೆಯನ್ನು ಸಲ್ಲಿಸಿರುವ ಹಿರಿಯ ಸಾಹಿತಿ, ಶ್ರೀ ಸಮೇತನಹಳ್ಳಿ ರಾಮರಾಯರು, ಲೇಖಕರಷ್ಟೇ ಅಲ್ಲ, ರಾಯರು ಪ್ರಕಾಶಕರೂ ಹೌದು. 'ರಾಸಪ್ರಕಾಶನ'ದ ಸ್ಥಾಪಕರಾಗಿ ಅವರ ಹೆಚ್ಚಿನ ಕೃತಿಗಳು ಬೆಳಕಿಗೆ ಬರಲು ಕಾರಣರಾದರು. ರಾಯರ ಹಲವಾರು ಕೃತಿಗಳಿಗೆ ಕರ್ನಾಟಕ ಸರಕಾರದ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರಾಜ್ಯದ ಪತ್ರಿಕೆಗಳ ಪ್ರಶಸ್ತಿ ದೊರಕಿರುವುದು ಪ್ರಶಂಸನೀಯ.

ವೃತ್ತಿಯಿಂದ ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಲೇ, ನಿರಂತರವಾಗಿ ಕೃತಿ ರಚಿಸುವುದನ್ನು ಪ್ರವೃತ್ತಿಯನ್ನಾಗಿ ಮಾಡಿಕೊಂಡದ್ದು ರಾಯರ ವೈಶಿಷ್ಟ್ಯ. ಅವರ ಹುಟ್ಟು, ಮೊದಲ ದಿನಗಳ ಬದುಕು ಬಡತನದ್ದಾಗಿದ್ದರೂ, ಸಾಹಿತ್ಯ ಸೇವೆಯಿಂದ ಅವರ ಹೃದಯ ಯಾವತ್ತೂ ಶ್ರೀಮಂತವಾಗಿದೆ.

ಶ್ರೀ ರಾಮರಾಯರ ಕೃತಿಗಳ ಬಗ್ಗೆ ಬರೆಯುವ ಸಾಮರ್ಥ್ಯ ನನ್ನದಲ್ಲ. ಕಾರಣ ನಾನು ಸಾಹಿತಿಯಲ್ಲ. ಅವರ ಕೃತಿಗಳ ಓದುಗರಲ್ಲಿ ಒಬ್ಬನಷ್ಟೆ. ಅದಕ್ಕಿಂತ ಹೆಚ್ಚಾಗಿ, ಅವರ ಆತ್ಮೀಯತೆಯನ್ನೂ ವಿಶ್ವಾಸವನ್ನೂ ಪಡೆದವರಲ್ಲಿ ನಾನೊಬ್ಬನಾಗಿರುವುದು, ಅವರ ಬಗ್ಗೆ ಬರೆಯಲು ಅರ್ಹತೆಯಿದೆಯೆಂದು ಭಾವಿಸುತ್ತೇನೆ. ಮೊದಲ ಪರಿಚಯದಲ್ಲೇ ಬಹು ಹತ್ತಿರದವರನ್ನಾಗಿ ಮಾಡಿಕೊಂಡು ತಮ್ಮ ವಿಶ್ವಾಸದ ಮಳೆಗರೆಯುವುದು ಅವರ ನೈಜ ಸ್ವಭಾವ. ಅವರ ಆತ್ಮೀಯ ಪರಿಚಯವಾದ ಸನ್ನಿವೇಶ ಹಾಗೂ ಅವರ ಸಹೃದಯತೆಯ ಬಗ್ಗೆ ನನ್ನ ಅನುಭವವನ್ನು ಉಲ್ಲೇಖಿಸುವುದೇ ನನ್ನ! ಈ ಲೇಖನದ ಉದ್ದೇಶ.

ಸುಮಾರು ಏಳೆಂಟು ವರುಷಗಳ ಹಿಂದೆ ರಾಯರ ಪರಿಚಯ ಆಗುವ ಸದವಕಾಶ ನನ್ನದಾಯ್ತು. ಮೈಸೂರಿನ ಕಾವ್ಯರಂಜನೀ ಸಭೆಯ ಕಾರ್ಯದರ್ಶಿಯಾಗಿದ್ದೆ. ಶ್ರೀ ರಾಮರಾಯರ 'ಶಾಕುಂತಲಾ' ಮಹಾಕಾವ್ಯದ ವಾಚನ ಕಾರ್ಯಕ್ರಮ ಏರ್ಪಡಿಸಬೇಕೆಂಬ ಹಂಬಲ ನನ್ನದಾಯ್ತು. ಆ ದಿನ ರಾಯರನ್ನು ಆಹ್ವಾನಿಸಿ ಗೌರವಿಸಬೇಕೆಂಬ ಅಪೇಕ್ಷೆ ನನ್ನ ಹಾಗೂ ಪಂ.ತ.ಲಿ. ವೈದ್ಯನಾಥನ್‌ರವರದಾಯ್ತು. ಒಂದು ಸಂಜೆ ಮೈಸೂರಿನ ಗೋಕುಲ ಬಡಾವಣೆಯಲ್ಲಿನ ರಾಯರ ನಿವಾಸ 'ಕೋಟೆಮನೆ'ಯನ್ನು ಹುಡುಕಿಕೊಂಡು

ಹೊರಟೆ. ಆ ಬಡಾವಣೆ ನನಗೆ ಅಪರಿಚಿತವಾಗಿದ್ದರಿಂದ ಸಾಕಷ್ಟು ಅಲೆದೆ. ಕೊನೆಗೂ 'ಕೋಟೆಮನೆ'ಯನ್ನು ಪತ್ತೆಹಚ್ಚಿದೆ. ರಾಯರು ಮನೆಯಲ್ಲೇ ಇದ್ದದ್ದು ನನ್ನ ಅದೃಷ್ಟ. ಎತ್ತರದ ದಿಟ್ಟ ನಿಲುವಿನ ರಾಯರ ಮೊದಲ ನೋಟವೇ ಸೂಜಿಗಲ್ಲಿನಂತೆ ನನ್ನನ್ನು ಬಹುವಾಗಿ ಆಕರ್ಷಿಸಿತು. ಮೇಲಾಗಿ ಅವರ ಆತ್ಮೀಯ ಮಾತುಕತೆ ಬಹು ಹತ್ತಿರದವರನ್ನಾಗಿ ಮಾಡಿತು. ಎಷ್ಟೋ ವರುಷಗಳ ಪರಿಚಯವೇನೋ ಎನ್ನಿಸಿತು. ನಮ್ಮ ತಂದೆಯವರು ಭಾರತದ ಕೃಷ್ಣರಾಯರು, ಮಾವನವರು ತಮಾಷ್ ಮಾಧವರಾಯರು, ಬಂಧುಗಳು ಡಾ. ಜಿ. ವರದರಾಜರಾಯರು ಎಲ್ಲರನ್ನೂ ಸ್ಮರಿಸಿಕೊಂಡರು. ಕಾವ್ಯ ರಂಜನೀ ಸಭೆಯ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪಿಸಿ ನನ್ನ ಕೋರಿಕೆಯನ್ನು ಮುಂದಿಟ್ಟ ಕೂಡಲೇ ಬಹು ಸಂತೋಷಪಟ್ಟು ತುಂಬುಹೃದಯದಿಂದ ಒಪ್ಪಿದರು.

ಕಾರ್ಯಕ್ರಮ, ಕಾಲೇಜು ರಸ್ತೆಯಲ್ಲಿರುವ ಗಮಕ ವಿದುಷಿ ಶ್ರೀಮತಿ ಎಂ. ಎಸ್. ರಾಜಮ್ಮನವರ ಮನೆಯಲ್ಲಿ ಏರ್ಪಡಿಸಿತ್ತು. ಗಮಕ ವಿದುಷಿ ಶ್ರೀಮತಿ ಜಯಲಕ್ಷ್ಮಿ ಗಣೇಶಮೂರ್ತಿ, ಶ್ರೀಮತಿ ಉಷಾ ಫಾಟಕ್ ಅವರಿಂದ 'ಶಾಕುಂತಲಾ' ಕಾವ್ಯದ ಸುಶ್ರಾವ್ಯ ವಾಚನ, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀರಾಮರಾಯರ ಹೃದಯ ತುಂಬಿ ಬಂದ ಮಾತು ನೆರೆದ ಕಲಾಭಿಮಾನಿಗಳೆಲ್ಲರನ್ನೂ ಸಂತೋಷಗೊಳಿಸಿತು. ದೂರದ ಗೋಕುಲ ಬಡಾವಣೆಯಿಂದ ರಾಯರು ತಾವು ಬಂದದ್ದಲ್ಲದೆ ತಮ್ಮ ಕುಟುಂಬದವರೆಲ್ಲರನ್ನೂ ಕರೆದುಕೊಂಡು ಬಂದದ್ದು ರಾಯರ ಅಭಿಮಾನದ್ಯೋತಕವಾಗಿತ್ತು. ಕಾವ್ಯ ರಂಜನೀ ಸಭೆ ರಾಯರಿಗೆ ಸಲ್ಲಿಸಿದ ಗೌರವ, ಹೊದಿಸಿದ ಶಾಲು, ನೀಡಿದ ಹಣ್ಣುಹಂಪಲಿಗೆ ಸೀಮಿತವಾಗಿದ್ದರೂ ಆ ಸುಂದರ ಸಂಜೆಯ ಕಾರ್ಯಕ್ರಮ ಮಾತ್ರ ಎಂದೆಂದೂ ನೆನಪಿನಲ್ಲುಳಿಯುವಂತಾದ್ದು.

ಅಂದಿನಿಂದ ಆದ ಶ್ರೀ ರಾಯರ ಪರಿಚಯ, ಆಗಿಂದಾಗ್ಗೆ ಸಭೆ ಸಮಾರಂಭಗಳಲ್ಲಿ ಭೇಟಿಯಾದಾಗ ನನ್ನ ಯೋಗಕ್ಷೇಮ ವಿಚಾರಿಸುತ್ತ ಹಿರಿಯಣ್ಣನಂತೆ ಪ್ರೀತಿ ಪಾತ್ರರಾಗಿದ್ದಾರೆ. "ಏನು, **Mr. Ramachandra**" ಎನ್ನುವ ಅವರ ಧ್ವನಿಯಲ್ಲೇ ಅಭಿಮಾನ ತುಂಬಿ ಬರುವುದನ್ನು ನಾನು ಅನುಭವಿಸಿದ್ದೇನೆ. ಅವರು ರಚಿಸುವ ಕೃತಿಗಳ ಬಗ್ಗೆ ಮುದ್ರಣಕ್ಕೆ ಮೊದಲೇ ತಿಳಿಸಿ, ಅವರ ಕೃತಿಗಳ ಓದುಗರಲ್ಲಿ ನನ್ನನ್ನೂ ಒಬ್ಬನನ್ನಾಗಿ ಪರಿಗಣಿಸಿ, ಅವರ ಕೃತಿಗಳನ್ನು ಪಡೆದು ಓದುವ ಸದವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅದೂ ನನ್ನ ಸೌಭಾಗ್ಯವೆಂದೇ ಭಾವಿಸಿದ್ದೇನೆ.

ಶ್ರೀ ರಾಮರಾಯರ ಸಹೃದಯತೆಯ ಬಗ್ಗೆ ನನ್ನ ಒಂದು ಅನುಭವ. ೧೯೬೨ರ ಜೂನ್ ಮಾಹೆಯಲ್ಲಿ ಪ್ರಖ್ಯಾತ ಗಮಕಿಗಳಾಗಿದ್ದ ನಮ್ಮ ತಂದೆಯವರು ಭಾರತ ಕೃಷ್ಣರಾಯರ ಜನ್ಮಶತಾಬ್ದಿಯ ಉದ್ಘಾಟನಾ ಕಾರ್ಯಕ್ರಮ ಏರ್ಪಡಿಸಿದ್ದೆವು. ಡಾ. ದೇ.ಜ.ಗೌ. ಉದ್ಘಾಟನೆಯನ್ನು ಮಾಡಿದರು. ಆ ಕಾರ್ಯಕ್ರಮಕ್ಕೆ ಶ್ರೀ ರಾಯರೂ ಆಗಮಿಸಿ ಯಶಸ್ಸು ಕೋರಿದರು. ಆ ದಿನ ಹಿರಿಯ ಮಿತ್ರರಾದ ಪ. ತ.ಲೆ. ವೈದ್ಯನಾಥನ್ ಮತ್ತು ಶ್ರೀ ಎ. ವಿ. ಸೂರ್ಯನಾರಾಯಣಸ್ವಾಮಿಯವರ ಪ್ರೇರಣೆಯ ಮೇರೆಗೆ ಶತಾಬ್ದಿಯ ವರ್ಷದಲ್ಲಿ

ರಾಜ್ಯದಾದ್ಯಂತ ನೂರೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಕಲ್ಪ ಮಾಡಿದೆವು. ಆ ಪ್ರಕಾರ ಮೈಸೂರಿನ ಗೋಕುಲ ಬಡಾವಣೆಯಲ್ಲಿ ದಿವಂಗತ ಡಾ. ಕೌಲ್‌ಗುಡ್ ಅವರ ನಿವಾಸದಲ್ಲಿ ಒಂದು ಕಾರ್ಯಕ್ರಮವನ್ನು ಮಿತ್ರ ಶ್ರೀ ಕೃಷ್ಣಕುಮಾರ್‌ರವರು ಏರ್ಪಡಿಸಿದ್ದರು. ಪ್ರತಿಭಾನ್ವಿತ ಯುವ ಗಮಕಿ ಡಾ. ಶ್ರೀನಿವಾಸ್‌ರವರಿಂದ ಜೈಮಿನಿ ಭಾರತದಿಂದ 'ಲವಕುಶರ ಜನನ'ದ ವಾಚನ ಕಾರ್ಯಕ್ರಮ. ಆ ಕಾರ್ಯಕ್ರಮದ ಬಗ್ಗೆ 'Post card'ನಲ್ಲಿ ಶ್ರೀ ರಾಮರಾಯರಿಗೆ ತಿಳಿಸಿ 'ಷರಾ' ಬರೆದು ಆ ದಿನದ ಕಾರ್ಯಕ್ರಮಕ್ಕೆ ರಾಯರು ಮುಖ್ಯ ಅತಿಥಿಗಳಾಗಿ ಆಗಮಿಸಬೇಕೆಂದು ಕೋರಿಕೊಂಡೆ. ಕಾರ್ಯಕ್ರಮದ ದಿನ, ವೇಳೆಗೆ ಸರಿಯಾಗಿ ಮನೆ ಹುಡುಕಿಕೊಂಡು ಬಂದ ರಾಯರು ತಮ್ಮ ಅಮೋಘ ಭಾಷಣದಿಂದ ನೆರೆದ ರಸಿಕರನ್ನು ಮುದಗೊಳಿಸಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕರಿಸಿದರು. ಇಂತಹ ಸರಳತೆ, ಸಹೃದಯತೆ ರಾಯರದು.

ಸಮೇತನಹಳ್ಳಿ ರಾಮರಾಯರ ಸಂಪರ್ಕ, ಸಹವಾಸ ದೊರಕಿದ ಕ್ಷಣದಲ್ಲೇ ಯಾರಿಗಾದರೂ ಅವರ ಹೃದಯ ಶ್ರೀಮಂತಿಕೆಯ ಪರಿಚಯ ಆಗುವುದರಲ್ಲಿ ಸಂಶಯವಿಲ್ಲ. ಸುಮಾರು ಒಂದು ದಶಕದಿಂದ ಅವರ ಅಭಿಮಾನ ವಿಶ್ವಾಸಕ್ಕೆ ಪಾತ್ರನಾಗಿರುವ ನನಗೆ ಮುಂಬರುವ ದಶಕಗಳಲ್ಲೂ ಅವರ ಪ್ರೀತಿವಿಶ್ವಾಸಗಳು ನಿರಂತರವಾಗಿ ದೊರಕುವಂತಾಗಲೆಂದು ಆ ತಾಯಿ ಕನ್ನಡ ಭುವನೇಶ್ವರಿಯಲ್ಲಿ ವಿನಮ್ರನಾಗಿ ಪ್ರಾರ್ಥಿಸುತ್ತೇನೆ.

'ಶ್ರೀಕೃಷ್ಣದರ್ಶನ'ವಾಯಿತು. ಇನ್ನೂ ಅಂತರಂಗದರ್ಶನವಾಗಿಲ್ಲ. ಹೊರಗಿನಿಂದ ಅದರ ಭವ್ಯತೆ, ದಿವ್ಯತೆಗಳನ್ನು ಕಂಡು ಮಹಾನಂದ ಪ್ರವಾಹದಲ್ಲಿ ಮುಳುಗಿದೆ. ಅಲ್ಲಲ್ಲಿ ಕಣ್ಣಾಡಿಸಿದೆ. ಕಣ್ಣು ತೇವಗೊಂಡವು.

ಇಂತಹ ಅಮೋಘ ಬೃಹತ್ ಗ್ರಂಥವನ್ನು ನೀಡಿ ಕನ್ನಡಿಗರ ಕೃತಜ್ಞತೆ ಗಳಿಸಿಕೊಂಡಿದ್ದೀರಿ. ಇದಕ್ಕೆ ಸರ್ವೋಚ್ಚ ಪುರಸ್ಕಾರದಿಂದ ಕನ್ನಡಿಗರು ಋಣಭಾರ ಇಳಿಸಬೇಕು.

೩೦–೧೧–೮೭

ಎಸ್ಕೆ

ನನ್ನ ಮಿತ್ರರಾದ ರಾಮರಾಯರು

ಡಾ || ಎಸ್. ವಿ. ರಾಮರಾವ್

ನನ್ನ ಮಾನ್ಯ ಮಿತ್ರರಾದ ಶ್ರೀ ರಾಮರಾಯರ ಬಗ್ಗೆ ಆತ್ಮೀಯ ಲೇಖನ ಒಂದನ್ನು ಬರೆಯುವುದು ಅಷ್ಟು ಸುಲಭವಾದದ್ದಲ್ಲ. ಈ ವಿಚಾರದ ಅರಿವು ನನಗಾದದ್ದು ಲೇಖನಿಯನ್ನು ಕಾಗದದ ಮೇಲಿಟ್ಟಾಗ. ಇದಕ್ಕೆ ಕಾರಣ ಅವರ ಬಹುಮುಖ ಪ್ರತಿಭೆ.

ರಾಮರಾಯರ ಮೊದಲ ಸಂಪರ್ಕ ನನಗಾದದ್ದು ರಾಮನಗರದಲ್ಲಿ ನಾವಿಬ್ಬರೂ ಒಂದೇ ಆರೋಗ್ಯಕೇಂದ್ರದಲ್ಲಿ ಸಂಧಿಸಿದಾಗ ೧೯೫೦ರಲ್ಲಿರಬೇಕು. ನನ್ನೊಂದಿಗೆ ಕೆಲಸ ಮಾಡಿದವರಲ್ಲಿ ಅನೇಕರು ಈಗ್ಲೂ ಸಂಪರ್ಕವನ್ನಿಟ್ಟುಕೊಂಡಿದ್ದಾರೆ. ಆದರೆ ೧೯೫೦ರಲ್ಲಿ ಪ್ರಾರಂಭವಾದ ನನ್ನ ಮತ್ತು ರಾಮರಾಯರ ಸ್ನೇಹ ಮುಂದುವರಿದದ್ದೊಂದೇ ಅಲ್ಲದೆ ಈ ಸಂಬಂಧ ಬೆಳೆದು ಕ್ರಮೇಣ ಪಕ್ವವಾಗಿದೆ. ಸಂಬಂಧಿಸಿದ ಕೆಲವೇ ದಿನಗಳಲ್ಲಿ ಅವರ ವ್ಯಕ್ತಿತ್ವ ಒಂದೊಂದಾಗಿ ಅರಳಿ ನನ್ನ ಮನಸ್ಸನ್ನು ಒಲಿಸಿಕೊಂಡಿತು. ಈ ಮಹನೀಯರು ಒಂಟಿಯಾಗಿಯೇ ತೋರಿದರು. ಯಾರೊಂದಿಗೂ ಅಷ್ಟಾಗಿ ಬೆರೆಯುತ್ತಿದ್ದುದು ಕಾಣಲಿಲ್ಲ. ಕಾಡುಹರಟೆ ನಗುವುದು, ಲಲ್ಲೆ ಮುಂತಾದವು ಅವರಿಂದ ದೂರವೆಂದೇ ಹೇಳಬೇಕು. ಹೇಳಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿ ವರದಿ ಮಾಡುತ್ತಿದ್ದರು. ಆತ್ಮವಿಶ್ವಾಸ ಬೆಳೆದಂತೆಲ್ಲ ರಾಮರಾಯರ ಸಲಹೆ ನಿರ್ಧರಿಸುವ ಮುನ್ನ ನನಗೆ ಬಹಳ ಮುಖ್ಯವಾಯಿತು. ವಿಶ್ವ ಆರೋಗ್ಯ ಸಂಸ್ಥೆ ಪ್ರಪಂಚದ ಐದು ಸ್ಥಳಗಳಲ್ಲಿ ಕುಟುಂಬ ಆರೋಗ್ಯ ಸಮೀಕ್ಷೆಯನ್ನು ಬೃಹತ್ಪ್ರಮಾಣದಲ್ಲಿ ಏರ್ಪಾಡು ಮಾಡಿದ್ದರು. ಈ ೫ ಸ್ಥಳಗಳಲ್ಲಿ ರಾಮನಗರವೂ ಒಂದಾಗಿತ್ತು. ಈ ಸಮೀಕ್ಷೆಯನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುವುದು ನಮ್ಮ ಜವಾಬ್ದಾರಿಯಾಗಿತ್ತು. ಈ ಯೋಜನೆಯಲ್ಲಿ ರಾಮರಾಯರ ಸಂಪೂರ್ಣ ನೆರವು ದೊರಕಿದ್ದು ನನ್ನ ಅದೃಷ್ಟ. ಬೆಳಿಗ್ಗೆಯಿಂದ ಸಂಜೆಯವರೆಗೂ ಹಳ್ಳಿ ಹಳ್ಳಿ, ಮನೆ ಮನೆಗೂ ಭೇಟಿಕೊಟ್ಟು ಮೇಲ್ವಿಚಾರಣೆ ಮಾರ್ಗದರ್ಶನ ಅನಿವಾರ್ಯವಾಗಿತ್ತು. ಸಂಜೆ ಕೇಂದ್ರಕ್ಕೆ ಹಿಂದಿರುಗಿದರೆ ಆ ದಿನದ ಮಾಹಿತಿಗಳನ್ನು ದಾಖಲಿಸಿ ವರದಿಗಳನ್ನು ಪೂರೈಸಿ ಮನೆಗೆ ಹಿಂದಿರುಗುವಾಗ ಎಷ್ಟೋ ವೇಳೆ ನಡುರಾತ್ರಿಯಾದದ್ದೂ ಉಂಟು. ಹಳೇ ಕಡತಗಳಿಂದ, ಅಚ್ಚಾದ ಪ್ರಕಟಣೆಗಳಿಂದ ಅನೇಕ ವಿಷಯಗಳನ್ನು ಸಂಗ್ರಹಿಸಬೇಕಾಗುತ್ತಿತ್ತು. ಈ ವಿಚಾರದಲ್ಲಿ ರಾಮರಾಯರ ಜ್ಞಾನ ಅಪಾರ ಹಾಗೂ ಬಹಳ ಉಪಯುಕ್ತವಾಯಿತು.

ಈ ರೀತಿ ಪ್ರಾರಂಭವಾದ ನಮ್ಮ ಸಂಬಂಧ ದಿನೇ ದಿನೇ ವೃದ್ಧಿಗೊಂಡು ಕೆಲವೇ ದಿನಗಳಲ್ಲಿ ಆತ್ಮೀಯತೆ ಬಲವಾಯಿತು. ಈ ಆತ್ಮೀಯತೆ ಎಷ್ಟು ಬಲವಾಯಿತೆಂದರೆ ಅನೇಕ ವೇಳೆ ನನ್ನ ಮನಸ್ಸಿನಲ್ಲಿರುವುದನ್ನು ರಾಯರು ಗ್ರಹಿಸಿ ನಾನು ತಿಳಿಯ ಹೇಳುವ ಮುನ್ನ ಸಿದ್ಧಪಡಿಸಿದ ಸಂದರ್ಭಗಳು ವಿರಳವೇನಲ್ಲ. ಅವರ ಕನ್ನಡ ಭಾಷಾಜ್ಞಾನ ಭಂಡಾರದ ಹಿರಿಮೆ ಇಂಗ್ಲಿಷ್ ಭಾಷೆಯಲ್ಲೂ ಇದ್ದದ್ದರಿಂದ ಅದೊಂದು ವರವಾಗಿತ್ತು. ಇಬ್ಬರೂ ಕಾರ್ಯತತ್ಪರವಾಗಿ ಕುಳಿತರೆ ನಿರರ್ಗಳವಾಗಿ ಹರಿಯುತ್ತಿತ್ತು. ಈ ಸನ್ನಿವೇಶ ಗಳಲ್ಲಿ ರಾಯರ ಕೊಡುಗೆಯೇ ಹೆಚ್ಚು ಎಂದು ಬೇರೆ ಹೇಳಬೇಕಾಗಿಲ್ಲ. ಈ ಯೋಜನೆ ಯನ್ನು ಯಶಸ್ವಿಯಾಗಿ ಕಾರ್ಯಗತಮಾಡಿ ವಿಶ್ವ ಆರೋಗ್ಯ ಸಂಸ್ಥೆಯ ಶಾಭಾಸ್‌ಗಿರಿ ಯನ್ನು ಪಡೆದೆವು.

ರಾಯರ ಸ್ವಾಭಿಮಾನ ಅಷ್ಟಿಷ್ಟಲ್ಲ, ಈ ಒಂದು ಗುಣ ವಿಶೇಷ ನನಗೆ ಅವರಲ್ಲಿದ್ದ ಗೌರವವನ್ನು ಹೆಚ್ಚಿಸಿತು.ಇದೇ ಗುಣ ಅವರ ಇತರ ಸಹೋದ್ಯೋಗಿಗಳಲ್ಲಿ ಅಸೂಯೆಗೂ ಕಾರಣವಾಗಿತ್ತು. ಕೆಲವರು ಬಂದು "ದುರಹಂಕಾರ" ಎಂದು ದೂರಿತ್ತುದೂ ಉಂಟು.

ತಾವಾಯ್ತು, ತಮ್ಮ ಕೆಲಸವಾಯ್ತು. ನಿಯಮ ನಿಷ್ಠೆ, ನಿಯತ್ತು, ಪ್ರಾಮಾಣಿಕ ತನ,ರಾಜನಿಷ್ಠೆ ಇವು ರಾಯರಲ್ಲಿ ಹಾಸುಹೊಕ್ಕಿತ್ತು. ಯಾವ ಕಾರ್ಯ ಅಥವಾ ಕಾರ್ಯ ಕ್ರಮದ ವಿಚಾರವಾಗಿ ವ್ಯವಸ್ಥೆಗೊಳಿಸಲು ರಾಯರಿಗೆ ಹೇಳಿ ಮರೆತು ಬಿಡಬಹು ದಾಗಿತ್ತು. ಸಣ್ಣ ಕೆಲಸವಾದರೂ ಅವರು ಹಗುರವಾಗಿ ತೆಗೆದುಕೊಂಡದ್ದನ್ನು ನಾನು ಕಂಡಿಲ್ಲ.

ಅವರ ಕುಟುಂಬದ ವಿಚಾರ ನನ್ನ ರಾಯರ ಆಫೀಸ್ ಸಂಬಂಧ ಒಂದು ರೀತಿಯ ದಾಗಿದ್ದರೆ, ನಮ್ಮ ಮನೆಯವರ ಪರಸ್ಪರ ನಡವಳಿಕೆ ಬಹಳ ಆತ್ಮೀಯವಾಗಿತ್ತು. ಅವರ ಮಕ್ಕಳು ಸುದರ್ಶನ, ಇಂದಿರಾ, ಭಾರತಿ, ವಿಷ್ಣುವರ್ಧನ್ (ಆಗ ಎಳೆಗೂಸು) ಇವರ ಸಂಪರ್ಕವಾಗಿತ್ತು. ನನ್ನ ಮನೆಯವರೊಂದಿಗೆ, ಮಕ್ಕಳೊಂದಿಗೆ ಆಟ ಪಾಠಗಳು ನಮ್ಮ ಮನೆಯಲ್ಲೇ ನಡೆಯುತ್ತಿತ್ತು. ನನ್ನ ಮಗಳು ಮೀರಾ ಅಂಗವಿಕಲಳಾಗಿದ್ದುದರಿಂದ ಈ ಏರ್ಪಾಡು ಎಲ್ಲರಿಗೂ ಸೂಕ್ತವಾಗಿತ್ತು. ನನ್ನ ಮಡದಿಗಂತೂ ಈ ಮಕ್ಕಳ ನಡತೆ ನಡ ವಳಿಕೆ ಬುದ್ಧಿವಂತಿಕೆ ಬಗ್ಗೆ ತೀರ ಮೆಚ್ಚುಗೆ. ರಾಯರು ಒಂದು ದಿನವಾದರೂ ತಮ್ಮ ಕೌಟುಂಬಿಕ ತಾಪತ್ರಯಗಳ ಬಗ್ಗೆ ಉಸಿರೆತ್ತಿದವರಲ್ಲ. ಈ ಮಾತು ಇಲ್ಲೇಕೆ ಪ್ರಸ್ತಾಪಿ ಸುತ್ತಿದ್ದೇನೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಅವರ ಆತ್ಮಚರಿತ್ರೆ 'ಕೋಟೆಮನೆ' ಓದಿದ ನಂತರ–ರಾಯರು ರಾಮನಗರದಲ್ಲಿದ್ದಾಗ ಅನುಭವಿಸಿದ ಕಷ್ಟ ತಾಪತ್ರಯ ಗಳನ್ನು ಮನಗಂಡೆ. ಹಾಗೂ ಅನೇಕ ವಿಚಾರಗಳಲ್ಲಿ "ಸನ್ನಿವೇಶ ನನ್ನ ಗಮನಕೆ ಬಂದಿದ್ದರೆ ಅಥವಾ ನಾನು ಆಗ ಗಮನಿಸಿದ್ದರೆ ಚೆನ್ನಾಗಿತ್ತು" ಅಂದುಕೊಂಡಿದ್ದೇನೆ. ರಾಮರಾಯರ ಮಡದಿ ನಮ್ಮ ಮನೆಗೆ ಅಪ್ಪಾಗಿ ಬಂದವರಲ್ಲ. ಅರಿಶಿನ ಕುಂಕುಮಕ್ಕೆ ಆಹ್ವಾನಿಸಿದಾಗ ಬಂದದ್ದುಂಟು. ರಾಯರಂತೂ ನಮ್ಮ ಮನೆಗೆ ಬಂದದ್ದು ನನಗೆ ಜ್ಞಾಪ ಕವೇ ಇಲ್ಲ. ಅವರ ಸ್ವಾಭಿಮಾನದ ಉತ್ತುಂಗ ಶಿಖರವಿದು ಎಂದು ಹೇಳಬಹುದು.

ಇನ್ನು ರಾಯರ ಸಾಹಿತ್ಯ. ಇದರ ಬಗ್ಗೆ ನನಗೆ ಆಳವಾದ ಜ್ಞಾನವಿಲ್ಲ. ಅವರ ಅನೇಕ ಪ್ರಕಟಣೆಗಳ ಸವಿಯನ್ನುಂಡಿದ್ದೇನೆ. 'ತಲಕಾಡುಗೊಂಡ', 'ಸವತಿಗಂಧವಾರಣೆ' 'ಕೃಷ್ಣದರ್ಶನ' 'ಕೋಟೆಮನೆ' 'ಪರಶುರಾಮ' ಜ್ಞಾಪಕಕ್ಕೆ ಬರುತ್ತವೆ. ಎಷ್ಟೋ ವೇಳೆ ಪ್ರಕಟಣೆಗಳನ್ನೋದಿದ ನನ್ನ ಮಡದಿ, ಮಗಳು ಕೂತು ಹರಟೆಹೊಡಿಯುವಾಗ ವಿಮರ್ಶಿಸಿ ಮೆಲಕು ಹಾಕಿದ್ದು ಉಂಟು.

ಈ ಮಹಾನುಭಾವರ ಸಖ್ಯ ಪಡೆದದ್ದು ನನ್ನ ಭಾಗ್ಯ. ದೇವರು ಅವರಿಗೂ, ಅವರ ಕುಟುಂಬವರ್ಗದವರಿಗೂ ಎಲ್ಲ ಒಳ್ಳೆಯದನ್ನೂ ಕೊಟ್ಟು ಆಶೀರ್ವದಿಸಲಿ.

ತಾವು ವಿಶ್ವಾಸವಿಟ್ಟು ನಿಮ್ಮ 'ಕೃಷ್ಣದರ್ಶನ'ದ ಒಂದು ಪ್ರತಿಯನ್ನು ಕಳುಹಿಸಿದ್ದನ್ನು ನಾನು ಸಂತೋಷದಿಂದ ಸ್ವೀಕರಿಸಿದ್ದೇನೆ. ಪ್ರಸ್ತಾವನೆಯನ್ನು ನಾನು ಓದಿ ನೋಡಿದೆ. ವಿಷಯವನ್ನು ನೀವು ಚೆನ್ನಾಗಿ ಅಭ್ಯಾಸ ಮಾಡಿದ್ದೀರಿ. ನಿಮ್ಮದೇ ಒಂದು ದೃಷ್ಟಿಕೋನ ಈ ಕೃತಿಯಲ್ಲಿ ವ್ಯಕ್ತವಾಗಿದೆ. ನನ್ನದು ಅದಕ್ಕಿಂತ ಸ್ವಲ್ಪ ಬೇರೆ ಇರಬಹುದು. ಆದರೆ ಎರಡೂ ನೋಟಗಳ ಉದ್ದೇಶ ಒಂದೇ–ಶ್ರೀಕೃಷ್ಣನ ಚಾರಿತ್ರವನ್ನು ಜನರಿಗೆ ಮಾದರಿಯಾಗಿ ಎತ್ತಿ ಹಿಡಿಯುವುದು.

೨–೨–೮೮ ವಿ. ಕೃ ಗೋಕಾಕ್

ಹಾಸನದ ಮಿತ್ರವೃಂದ ಮತ್ತು ರಾಸ

ಡಾ || ಚೇ. ಸೇ. ಜಗನ್ನಾಥ್

೧೯೪೮ರ ನನ್ನ ಮತ್ತು ಶ್ರೀ ಸಮೇತನಹಳ್ಳಿ ರಾಮರಾಯರ ಬಾಂಧವ್ಯ ಬೆಸೆದದ್ದು ಮಿತ್ರವೃಂದ. ನಾನು ಸಾಹಿತ್ಯಾಭಿಮಾನಿಯಾಗಿದ್ದೆ. ಆದರೆ ಶ್ರೀ ರಾಯರು ಸಾಹಿತಿಯೇ ಆಗಿದ್ದರು. ಅಂದು ಹಾಸನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಒಂದು ವ್ಯವಸ್ಥಿತ ಸಂಸ್ಥೆ ಇರಲಿಲ್ಲ. ಆ ಕೊರತೆ ತುಂಬಲೆಂದೇ ಅಂದು ಪೌರಸಭಾಧ್ಯಕ್ಷರಾಗಿದ್ದ ಶ್ರೀ ಎ. ಎಸ್. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ 'ಮಿತ್ರವೃಂದ'ದ ಅಂಕುರಾರ್ಪಣವಾಯಿತು. ಶ್ರೀ ಎಂ. ಎನ್. ಲಕ್ಷ್ಮೀನಾರಾಯಣರಾಯರು ಉಪಾಧ್ಯಕ್ಷರಾದರು. ನಾನು ಕಾರ್ಯದರ್ಶಿಯಾದೆ. ಸಾಹಿತ್ಯ ವಿಭಾಗದ ಕಾರ್ಯಕ್ರಮಗಳನ್ನು ನಡೆಸಲು ಶ್ರೀ ಸಮೇತನಹಳ್ಳಿಯವರಿಗೆ ವಹಿಸಲಾಯ್ತು. ನಾಟಕ ವಿಭಾಗಕ್ಕೆ ಶ್ರೀ ಮಧುಗಿರಿ ಶಾಮಣ್ಣನವರು ಮತ್ತು ಕಲಾ ವಿಭಾಗಕ್ಕೆ ಶ್ರೀ ರಘೋತ್ತಮರಾವ್. ಸಾಹಿತ್ಯದ ಚಟುವಟಿಕೆಗಳು ಅನೇಕ ಕಾರ್ಯಕ್ರಮಗಳೊಂದಿಗೆ ಪ್ರಾರಂಭವಾದವು. ಹಾಸನದ ಮೂಲಕ ಹೋಗುವ ಸಾಹಿತಿಗಳನ್ನು ಕರೆಸಿ ಭಾಷಣಗಳನ್ನೇರ್ಪಡಿಸುತ್ತಿದ್ದೆವು. ನನ್ನ ಔಷಧಾಲಯದಲ್ಲಿ 'ಮಿತ್ರವೃಂದ'ದ ಕಾರ್ಯಕ್ರಮಗಳ ರೂಪರೇಷೆಗಳು ಚರ್ಚೆಯಾಗಿ ನಂತರ ಕಾರ್ಯರೂಪಕ್ಕೆ ಬರುತ್ತಿದ್ದವು. ಹಸ್ತ ಪತ್ರಿಕೆಗಳನ್ನು ನಾವೇ ಎಲ್ಲ ಆಫೀಸುಗಳಿಗೂ, ಶಾಲಾ ಕಾಲೇಜುಗಳಿಗೂ ಹಂಚುತ್ತಿದ್ದೆವು. ಉಪನ್ಯಾಸಗಳಿಗೆ ಕಾರೊನೇಷನ್ ಹಾಲ್ ಮತ್ತು ನಾಟಕಾಭಿನಯಕ್ಕೆ ವಾಣೀವಿಲಾಸ ಹೆಣ್ಣು ಮಕ್ಕಳ ಶಾಲೆ ಕೇಂದ್ರವಾಗಿದ್ದವು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಉದ್ದಾಮ ಸಾಹಿತಿಗಳು ಬಂದು ವೈವಿಧ್ಯಪೂರ್ಣ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಹೆಸರಾಂತ ಸಾಹಿತಿಗಳಾದ ಮಾಸ್ತಿ, ಬೇಂದ್ರೆ, ಕಾರಂತ, ಮುಗಳಿ, ಗೋಕಾಕ್, ಗೋವಿಂದಪೈ, ಎಂ. ಆರ್. ಶ್ರೀ, ತೀ. ನಂ. ಶ್ರೀ., ವಿ. ಸೀ., ರಾಜರತ್ನಂ, ರಾಘವಾಚಾರ್ ಮುಂತಾದವರು ಅಮೋಘ ಉಪನ್ಯಾಸಗಳನ್ನು ಮಾಡಿದರು. ಮಾಸ್ತಿ ಮತ್ತು ಬೇಂದ್ರೆಯವರು ಮೊದಲೆರಡರ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಸಹ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಭೆ ಸಹ ಇಲ್ಲಿ ಒಮ್ಮೆ ಸೇರಿತ್ತು. ಎಂ. ಆರ್. ಶ್ರೀ. ಯವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ನಾವು ಅವರ 'ನಾಗರಿಕ' ನಾಟಕ ಸಹ ಆಡಿದೆವು. ಅದರಲ್ಲಿ ಶ್ರೀ ರಾಮರಾಯರೇ 'ನಾಗರಿಕ'ನ ಪಾತ್ರ ವಹಿಸಿದ್ದರು. ಅವರು ಘೋಷಿಸಿದ "ಅರಿರುಂಡ ಚೆಂಡಾಡಿ ಆಕಾಶಮಂಡಲವ ರುಂಡಮಯ ಮಾಡುವೆನು; ಸಾಗರವ ರಕ್ತ

ಮಯ ಮಾಡುವೆನು" ಈಗಲೂ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ಅಂದಿನ ಹಿರಿಯ ನಾಟಕಕರ್ತೃಗಳಾಗಿದ್ದ ಕೈಲಾಸಂ, ಕ್ಷೀರಸಾಗರ, ಪರ್ವತವಾಣಿ ಮುಂತಾದವರ ಅನೇಕ ನಾಟಕಗಳನ್ನು ಆಡಿದೆವು. ಶ್ರೀ ಜ್ವಾಲನಯ್ಯ, ಶ್ರೀ ಅನಂತರಾಮಯ್ಯ, ಶ್ರೀ ಮಧುಗಿರಿ ಶಾಮಣ್ಣ ಮುಂತಾದವರು ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದರು. ಶ್ರೀ ರಾಮರಾಯರ 'ಕರ್ಣಭಾರ್ಗವ'ದಲ್ಲಿ ಶ್ರೀ ರಾಯರೇ ಕರ್ಣ, ಶ್ರೀ ಶಾಮಣ್ಣನವರೇ ಭಾರ್ಗವ. ನಮ್ಮೆಲ್ಲ ಚಟುವಟಿಕೆಗಳನ್ನು ಗಮನಿಸಿ, ಕೇಂದ್ರದ ಸಾಹಿತ್ಯ ಮತ್ತು ಲಲಿತಕಲಾ ಅಕೆಡೆಮಿಗಳು 'ಮಿತ್ರವೃಂದ'ಕ್ಕೆ "ರೆಕೊಗ್ನಿಷನ್" ಕೊಟ್ಟವು.

ನನ್ನ ಮತ್ತು ಶ್ರೀ ಸಮೇತನಹಳ್ಳಿಯವರ ಸಂಬಂಧ ಬಹಳ ಆತ್ಮೀಯವಾಗಿತ್ತು. ಅತಿಥಿಗಳನ್ನು ಸ್ವಾಗತಿಸಲು ಎಷ್ಟೋ ವೇಳೆ ಒಟ್ಟಿಗೆ ಹೋಗುತ್ತಿದ್ದೆವು. ಇಲ್ಲಿ ರಾಷ್ಟ್ರಕವಿ ಗೋವಿಂದಪೈ ಪ್ರಕರಣ ಜ್ಞಾಪಕಕ್ಕೆ ಬರುತ್ತದೆ. ಅವರು ಮುಂಬೈ ಸಾಹಿತ್ಯ ಸಮ್ಮೇಳನವನ್ನು ಮುಗಿಸಿಕೊಂಡು ಮಂಗಳೂರಿಗೆ ಹೋಗುವಾಗ ನಮ್ಮ ಮಿತ್ರವೃಂದದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿತ್ತು. ಅವರಿಗಾಗಿ ಪ್ರವಾಸಿ ಮಂದಿರದ ಬಳಿ ನಾವುಗಳು ಒಬ್ಬರಾದ ಮೇಲೊಬ್ಬರು ಅವರನ್ನು ಬರಮಾಡಿಕೊಳ್ಳಲು ಕಾತರರಾಗಿ ಕಾಯುತ್ತಿದ್ದೆವು. ನಾನು ಸುಮಾರು ೧೦ ಘಂಟೆ ವೇಳೆಗೆ ಪ್ರವಾಸಿ ಮಂದಿರದ ಬಳಿ ಹೋದೆ. ಅವರಿನ್ನೂ ಬಂದ ಹಾಗೆ ಕಾಣಲಿಲ್ಲ. ಕೊಠಡಿಗಳಲ್ಲಿ ವಿಶ್ರಮಿಸುತ್ತಿದ್ದಾರೋ ಎಂದು ಒಂದು ಕಿಟಕಿಯಲ್ಲಿ ಇಣುಕಿ ನೋಡಿದೆ. ಮರುಕ್ಷಣವೇ ಒಬ್ಬರು ಬಾಗಿಲು ತೆರೆದು "I may be alone or with my wife. Could you peep in" ಎಂದರು. ನಾನು ಮಾಡಿದ ಅಪಚಾರದ ಅರಿವಾಗಿ ಬೆವರಿಟ್ಟೆ. ಅವರನ್ನು ಕ್ಷಮಾಯಾಚಿಸಿದೆ. ನಾನು ಅಲ್ಲಿಂದ ಹೋದನಂತರ ಬಂದ ಶ್ರೀರಾಮರಾಯರಿಗೆ ಪ್ರತ್ಯೇಕ ಅನುಭವ. ಶ್ರೀ ಗೋವಿಂದಪೈ ಅವರು ಶ್ರೀ ರಾಘವಾಚಾರ್ಯರ ಜೊತೆಯಲ್ಲಿ ಬಂದು ಮೆಟ್ಟಿಲಿನ ಮೇಲೆ ಕುಳಿತಿದ್ದರಂತೆ. ಹಿರಿಯರನ್ನು ಹೇಗೆ ಬರಮಾಡಿಕೊಳ್ಳಬೇಕೆಂಬುದನ್ನು ನೀವು ಅರಿತಿಲ್ಲ ಎಂದು ಶ್ರೀ ರಾಘವಾಚಾರ್ಯರು ಕೂಗಾಡಿದರಂತೆ. ಆದರೆ ಪೈ ಅವರು ಶಾಂತಚಿತ್ತದಿಂದ ಶ್ರೀ ರಾಮರಾಯರನ್ನು ಸಮಾಧಾನ ಮಾಡಿ ಮಾಸ್ತಿಯವರು ಘಂಟೆಗಳ ಕಾಲ ತಮಗಾಗಿ ಕಾದಿದ್ದನ್ನು ಸ್ಮರಿಸಿಕೊಂಡರಂತೆ.

ನಾವುಗಳು ಒಮ್ಮೆ ಹೊಯ್ಸಳರ ಕಾಲದ ಶ್ರೀ ಲಕ್ಷ್ಮೀ ದೇವಸ್ಥಾನವನ್ನು ನೋಡಲು ದೊಡ್ಡಗದ್ದವಳ್ಳಿಗೆ ಹೋಗಿದ್ದೆವು. ಅಲ್ಲಿಂದ ಬಂದ ಮೇಲೆ ಅವರ 'ನಾಟ್ಯ ಸರಸ್ವತಿ' ರೂಪುಗೊಂಡಿತೆಂದು ಕಾಣುತ್ತೆ. ಶ್ರೀ ರಾಯರು ಅನೇಕ ಸಲ ಬೇಲೂರು, ಹಳೇಬೀಡುಗಳಿಗೆ ಭೇಟಿಯಿತ್ತು, ಹೊಯ್ಸಳರ ಇತಿಹಾಸದ ಒಂದು ಚಿತ್ರವನ್ನು ಮನನ ಮಾಡಿಕೊಂಡು. ಅನೇಕ ಪುಸ್ತಕಗಳನ್ನು ಸಹ ಓದಿ, ನಂತರ 'ತಲಕಾಡುಗೊಂಡ', 'ಸವತಿ ಗಂಧವಾರಣೆ' ಮುಂತಾದ ಕಾದಂಬರಿಗಳನ್ನು ಬರೆದರು. ಶ್ರವಣಬೆಳಗೊಳಕ್ಕೂ ಸಹ ಒಮ್ಮೆ ನಾವೆಲ್ಲರೂ ಹೋಗಿ ಗೊಮ್ಮಟನ ಶಿಲಾ ವೈಭವವನ್ನು ಕಂಡು ತುಂಬ ಸಂತೋಷಿಸಿದೆವು. ಹಂಪೆಗೂ ನಾವೆಲ್ಲರೂ ಸಹ ಒಮ್ಮೆ ಹೋಗಿ ಬಂದೆವು. ಅಲ್ಲಿನ ಚಕ್ರತೀರ್ಥ

ವಿರೂಪಾಕ್ಷ ದೇವಾಲಯ ಹಾಗೂ ವಿಜಯವಿಠ್ಠಲ, ಹಜಾರ ರಾಮಸ್ವಾಮಿ, ಉಗ್ರ ನರಸಿಂಹ ದೇವಾಲಯಗಳು, ಸಾಸುವೆ ಗಣಪತಿ, ಕಮಲಮಹಲ್ ಮುಂತಾದ ಕಲಾ ವೈಭವಗಳನ್ನು ಕಂಡು ಪುಳಕಿತರಾದೆವು. ಪುರಂದರ ಮಂಟಪದಲ್ಲಿ ನಮ್ಮ ಭಕ್ತಿಕಾಣಿಕೆ ಯನ್ನು ಸಮರ್ಪಿಸಿದೆವು. ಅಂದಿನ ವಿಜಯನಗರದ ವೈಭವ ವೀರ್ಯೋತ್ಸಾಹಗಳ ಒಂದು ದೃಶ್ಯ ನಮ್ಮ ಕಣ್ಣೆದುರಿಗೆ ಗೋಚರಿಸಿದವು. ಅವರಿಗೆ ಬೆಂಗಳೂರಿಗೆ ವರ್ಗ ವಾದಾಗ ಶ್ರೀ ರಾಮದೇವರ ಕಟ್ಟೆಯಲ್ಲಿ ಮತ್ತು ಹಾಸನದಲ್ಲಿ ಸತ್ಕಾರವೇರ್ಪಡಿಸಿ, ಅವರನ್ನು ಬಿಡಲಾರದೆ, ಬೀಳ್ಕೊಟ್ಟೆವು. ಅವರು ಇಲ್ಲಿದ್ದ ಮೂರುವರ್ಷಗಳ ಒಡನಾಟ ಚಿರಸ್ಮರಣೀಯ.

ತಾವು ಕಳಿಸಿಕೊಟ್ಟ ದಿವ್ಯ ಕಾದಂಬರಿ 'ಸವತಿ ಗಂಧವಾರಣೆ'ಯನ್ನು ಒಮ್ಮೆಗೇ ಓದಿ ಮುಗಿಸಿದೆ. ಮತ್ತೊಮ್ಮೆ ಓದಬೇಕೆಂಬ ಆಶೆಯಿದೆ.

ತಮ್ಮ ಬರವಣಿಗೆಯಲ್ಲಿ ತೇಜಸ್ಸಿದೆ, ಓಜಸ್ಸಿದೆ, ಅಪಾರ ಶಬ್ದ ಸಂಪತ್ತಿ ಇದೆ. ವಿಪುಲ ಭಾವನಾ ಶಕ್ತಿ, ರೂಪಕ ಶಕ್ತಿಗಳಿವೆ. ಇಂತಹ ನೂರಾರು ರೂಪಕಗಳನ್ನು ಸೃಷ್ಟಿಸುವ ಸಾಮರ್ಥ್ಯ ತಮಗಿದೆ. ತಮ್ಮಿಂದ ಇನ್ನೂ ಇನ್ನೂ ಮಾತೃ ಭಾಷಾ ಸೇವೆ ಆಗಬೇಕು. ದೇವರು ಇದನ್ನು ಆಗಗೊಡಲಿ. ತಮಗೆ ಸರ್ವಥಾ ಮಂಗಳವಾಗಲಿ.

೧೨–೧೧–೬೧

ಕೆ. ವಿ. ಅಯ್ಯರ್

ರಾಸ-ವ್ಯಕ್ತಿ ಸಾಹಿತಿ

ವಿ. ಜಿ. ಕೃಷ್ಣಮೂರ್ತಿ

ಸಮೇತನಹಳ್ಳಿ ರಾಮರಾಯರದು ಆದರ್ಶ ವ್ಯಕ್ತಿತ್ವ. ಸ್ಥಿತಪ್ರಜ್ಞ–ಕಷ್ಟಕ್ಕೆ ತಗ್ಗರು ; ಸುಖಕ್ಕೆ ಹಿಗ್ಗರು. ತಮ್ಮ ವ್ಯವಹಾರಗಳಲ್ಲೆಲ್ಲಾ ಅವರದು ತುಂಬ ಶಿಸ್ತು. ಸತ್ಯಕ್ಕೆ ತಲೆಬಾಗಿ ನಡೆದು ಬಂದ ಈ ವ್ಯಕ್ತಿ ಕಪಟಿಗಳನ್ನು ಸಮೀಪಕ್ಕೇ ಸೇರಿಸುವುದಿಲ್ಲ. ಸತ್ಯಕ್ಕೆ ನಿಂತು, ಕೋರ್ಟಿನಲ್ಲಿ ವಾದಿಸಿ ತಮಗೆ ಮೋಸಮಾಡಲು ಬಂದ ದುರ್ಜನರನ್ನು ಅಡಗಿಸದೆ ಬಿಡುವವರಲ್ಲ. ಅವರ ಬದುಕು ಹೂವಿನ ಹಾಸಿಗೆಯಲ್ಲ. ಮುಳ್ಳಿನ ಬೇಲಿಯ ನಡುವೆ ಅವರ ಬದುಕಿನ ಹೋರಾಟ. ಬದುಕನ್ನು ಯುದ್ಧ ಭೂಮಿಯೆಂದೇ ಭಾವಿಸಿ ದುಷ್ಟಶಕ್ತಿಗಳನ್ನು ಧೈರ್ಯವಾಗಿ ಎದುರಿಸಿ ರಾಯರು ತಮ್ಮ ವ್ಯಕ್ತಿತ್ವವನ್ನು ಮೆರೆದಿದ್ದಾರೆ. ಬಡಕುಟುಂಬ, ವ್ಯಾಸಂಗಕ್ಕೆ ಕಷ್ಟ, ಬಂಧುಗಳ ದ್ವೇಷ–ಇವುಗಳನ್ನು ಲೆಕ್ಕಿಸದೆ, ನೌಕರಿಯಲ್ಲಿ ಕಿರುಕುಳ ಕೊಡುವ ಅಧಿಕಾರಿಗಳನ್ನು ಧೈರ್ಯವಾಗಿ ಪ್ರತಿಭಟಿಸುವ ಆತ್ಮಶಕ್ತಿಯನ್ನು ರಾಯರು ಹೊಂದಿದ್ದರು. ಇಂದಿಗೂ ಅವರು ಶೋಷಣೆಯನ್ನು ಸಹಿಸರು.

ನಾನು ರಾಮರಾಯರನ್ನು ಕಂಡದ್ದು ೧೯೪೭ರಲ್ಲಿ. ಆಗ ನಾನು ಮತ್ತು (ದಿವಂಗತ) ಡಾ. ಜಿ. ವರದರಾಜರಾವ್ 'ಕಥಾವಳಿ' ಮಾಸಪತ್ರಿಕೆಯ ಸಂಪಾದಕರಾಗಿದ್ದು, ಬೆಂಗಳೂರು ಬಳೇಪೇಟೆಯ ವಾಸನ್ ಕಂಪನಿ ಮುದ್ರಣಾಲಯಕ್ಕೆ ಹೋಗುವ ಪದ್ಧತಿ ಇತ್ತು. ಆಗ ರಾಮರಾಯರ 'ಭೀಷ್ಮ ಸಂಕಲ್ಪ' ನಾಟಕವು ಆ ಮುದ್ರಣಾಲಯದಲ್ಲಿ ಅಚ್ಚಾಗುತ್ತಿತ್ತು. ಆ ದಿನಗಳಲ್ಲಿ ಮೂಡಿದ ಸ್ನೇಹ ನಮ್ಮಲ್ಲಿ ಈವರೆಗೂ ಸಾಗಿ ಬಂದಿದೆ. ರಾಮರಾಯರು ತಮ್ಮ ಆಪ್ತ ಸ್ನೇಹಿತರಲ್ಲಿ ಯಾವುದನ್ನೂ ಮುಚ್ಚುಮರೆ ಮಾಡುವವರಲ್ಲ. ತಮ್ಮ ಜೀವನದ ಎಲ್ಲ ಘಟನೆಗಳನ್ನೂ ಹೇಳಿಬಿಡುವ ಅವರ ಸರಳ ಸ್ವಭಾವ ಅವರ ಸ್ನೇಹದ ಗಾಢಲಕ್ಷಣವನ್ನು ವ್ಯಕ್ತಪಡಿಸುತ್ತದೆ.

ರಾಮರಾಯರು ಬಡತನದಲ್ಲಿ ಕಷ್ಟಪಟ್ಟು ವ್ಯಾಸಂಗಮಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಮಾಡಿದರು (೧೯೩೬–೩೭). ಶಾಲೆಯನ್ನು ಬಿಟ್ಟಮೇಲೆ ಕೆಲಸವನ್ನು ಹುಡುಕುವ ಕೆಲಸ ; ತಂದೆ–ತಾಯಿಗಳ ಕಷ್ಟಗಳನ್ನು ಪರಿಹರಿಸಬೇಕೆಂಬ ಹಂಬಲ. ಬಸ್ ಕಂಡಕ್ಟರಾಗಿ ಕೆಲಸ ಮಾಡಿದರು ; ಮತ್ತೆ ಒಂದೆರಡು ಕಡೆ ದುಡಿದರು. ಮನೆಯ ಬಡತನದ ವಾತಾವರಣವನ್ನು ಕಂಡು ತೀವ್ರವಾಗಿ ನೊಂದುಕೊಳ್ಳುತ್ತಿದ್ದರು. "ನಾನು ಸಂಪಾದನೆಗೆ ಬಂದ ಮೇಲೆ ತಾಯಿಯ ಮನಸ್ಸಿನಲ್ಲಿದ್ದ ಪ್ರತಿಯೊಂದನ್ನೂ ಮನೆಗೆ ತಂದುಹಾಕಿದೆನು"

ಎಂದು ರಾಯರು ಹೇಳಿಕೊಂಡಿದ್ದಾರೆ. ಕುಟುಂಬವನ್ನು ಕಬಳಿಸುವಂತೆ ತಲೆಎತ್ತಿದ್ದ ಬಡತನವನ್ನು ನೀಗಲು ರಾಯರು ನಿಂತು ಆ ಕಾರ್ಯದಲ್ಲಿ ಯಶಸ್ವಿಯಾದಾಗ ಆ ಮಾತೆ, "ಅಪ್ಪಯ್ಯ, ನೀನು ನನ್ನ ಮನೆಯನ್ನು ನಿಲ್ಲಿಸಿದೆಯಪ್ಪ" ಎಂದು ತೃಪ್ತಿಯನ್ನು ವ್ಯಕ್ತಪಡಿಸಿದರು. ಮನೆಯ ಜವಾಬ್ದಾರಿಯೆಲ್ಲಾ ರಾಮರಾಯರದೆ. ಒಬ್ಬಳೇ ತಂಗಿಯನ್ನು ಗಂಡನ ಮನೆಗೆ ಕಳುಹಿಸಲು ಅವರು ಸಾಲಮಾಡಬೇಕಾಯಿತು. ಅವರಿಗೆ ಸಹೋದರ ಸಹೋದರಿಯರಲ್ಲಿ ಪ್ರೀತಿ ಅಪಾರ. "ಉಟ್ಟ ಬಣ್ಣದ ಹೊಸ ಸೀರೆಯ ಮಡಿಲ ಸೆರಗಿನಲ್ಲಿ ಮಂಗಲ ದ್ರವ್ಯಗಳನ್ನು ತುಂಬಿಕೊಂಡು ಹನಿಗಣ್ಣಾಗಿ ನಿಂತ ತಂಗಿ 'ಹೋಗಿ ಬರುತ್ತೇನೆ ಅಣ್ಣಯ್ಯ' ಎಂದು ಹೇಳಿದಾಗ ನನ್ನ ದುಃಖದ ಕಟ್ಟೆ ಒಡೆಯಿತು" ಎಂದು ರಾಮರಾಯರು ಹೇಳಿಕೊಂಡಿದ್ದಾರೆ.

ರಾಮರಾಯರಿಗೆ ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯದ ಬಗ್ಗೆ ಅಭಿರುಚಿ. ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗೆ ವ್ಯಾಸಂಗಮಾಡುತ್ತಿದ್ದಾಗ ಅವರಿಗೆ ಕನ್ನಡ ಕಾವ್ಯಗಳನ್ನು ಓದುವ ಅವಕಾಶ ಬಹಳವಾಗಿತ್ತು. ಹಳಗನ್ನಡ ಕಾವ್ಯಗಳನ್ನು ಅವರು ರಕ್ತಗತ ಮಾಡಿಕೊಂಡಿದ್ದರು. ಆರ್. ನರಸಿಂಹಾಚಾರ್ಯ ಮತ್ತು ಲೂಯಿ ರೈಸ್ ಸಾಹೇಬರ ಶಾಸನ ಸಂಪುಟಗಳ ಅಧ್ಯಯನದಲ್ಲಿ ಅವರ ಆಸಕ್ತಿ ಹೆಚ್ಚಿ, ಹೊಯ್ಸಳ ಇತಿಹಾಸದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ನಾಟಕ ಮತ್ತು ಕಾದಂಬರಿಗಳನ್ನು ಬರೆಯಹತ್ತಿದರು. ಅವರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೈ ಆಡಿಸಿದ್ದಾರೆ. ಅವರ ಐತಿಹಾಸಿಕ ನಾಟಕಗಳು ಬಲಯುತವಾದ ಶೈಲಿಯಲ್ಲಿ ರಚಿತವಾಗಿವೆ. ಆಧುನಿಕ ಕನ್ನಡದಲ್ಲಿ ನಿರ್ದಿಷ್ಟ ಶೈಲಿಗಳನ್ನು ನಾವು ಕಾಣುವುದು ಮುದ್ದಣನ 'ರಾಮಾಶ್ವಮೇಧಂ' ಕೃತಿಯಲ್ಲಿ, 'ಸಂಸ'ರ ಮೈಸೂರು ಅರಸರ ಇತಿಹಾಸವನ್ನು ಕುರಿತ ನಾಟಕಗಳಲ್ಲಿ, ಕುವೆಂಪು ಅವರ ಮೇರುಕೃತಿ 'ರಾಮಾಯಣ ದರ್ಶನಂ' ಕಾವ್ಯದಲ್ಲಿ, ಸಮೇತನಹಳ್ಳಿ ರಾಮರಾಯರ 'ಶಾಕುಂತಲಾ' ಕಾವ್ಯ, ಡಿ.ವಿ.ಜಿ. ; ಬಿ.ಎಂ.ಶ್ರೀ. ಮೊದಲಾದವರ ಕೃತಿಗಳಲ್ಲಿ.

ರಾಮರಾಯರು ಬರೆದಿರುವ ಹೆಚ್ಚಿನ ಕೃತಿಗಳಲ್ಲಿ ಹದಿನಾಲ್ಕು ನಾಟಕಗಳಾಗಿವೆ. ಅವುಗಳಲ್ಲಿ 'ಶಿಲ್ಪಸಂಗೀತ', 'ದ್ರೋಹಾಡಂಬರ', 'ನಾಟ್ಯಮಂದಾರ', 'ತಲಕಾಡುಗೊಂಡ ಇವು ಹೊಯ್ಸಳ ವಿಷ್ಣುವರ್ಧನ ಹಾಗೂ ಶಾಂತಲೆಯರಿಗೆ ಸಂಬಂಧಪಟ್ಟ ನಾಟಕಗಳು. 'ಗುರುದ್ರೋಣ', 'ಶ್ರೀಕೃಷ್ಣ ಮಾನಸ' ಮೊದಲಾದವು ಪೌರಾಣಿಕ ನಾಟಕಗಳ ಗುಂಪಿಗೆ ಸೇರುತ್ತವೆ. ಅವರ ಕಾದಂಬರಿಗಳಲ್ಲಿಯ ವಸ್ತು, ನಿರೂಪಣೆ, ಶೈಲಿ, ಪಾತ್ರ ಸೃಷ್ಟಿ–ಇವು ಸಮಂಜಸವಾಗಿದ್ದು ವಾಚನಕ್ಕೆ ನಮ್ಮ ಆಸಕ್ತಿಯನ್ನು ಮೂಡಿಸುತ್ತವೆ. ಅವರ ಮಹಾಕಾವ್ಯ 'ಶಾಕುಂತಲಾ', 'ಪುತಿನ' ಅವರ ಮುನ್ನುಡಿಯೊಂದಿಗೆ ಶೋಭಿತವಾಗಿ ತನ್ನದೇ ಆದ ಕಾವ್ಯಧಾಟಿಯನ್ನು ಪ್ರಕಟಿಸಿಕೊಂಡಿದೆ. ಅವರು ತಮ್ಮ ನಾಟಕಗಳಿಗೆ, ಕಾದಂಬರಿ ಹಾಗೂ ಸಣ್ಣಕತೆಗಳಿಗೆ ಪ್ರಯೋಗಿಸಿರುವ ಶೈಲಿ ಭಿನ್ನಭಿನ್ನವಾದವು. ನಾಟಕಗಳು ವೀರರಸಕ್ಕೆ ಯುಕ್ತವಾದ ಗಂಡು ಭಾಷೆಯಲ್ಲಿವೆ. ಪೌರಾಣಿಕ ನಾಟಕಗಳಲ್ಲಿ ಸರಳಸುಂದರವಾದ ಸಂಭಾಷಣೆಗಳನ್ನು ಕಾಣಬಹುದು. 'ಶಾಕುಂತಲಾ' ಹಳಗನ್ನಡ ಶಬ್ದಗಳ

ಮಾಧುರ್ಯದಿಂದ ಸಿಂಗರಿಸಲ್ಪಟ್ಟ ಕೃತಿ.

ನಾಡಿನ ಪ್ರಸಿದ್ಧ ಕವಿಗಳು, ಸಾಹಿತಿಗಳು ಸಮೇತನಹಳ್ಳಿ ರಾಮರಾಯರ ಕೃತಿಗಳನ್ನು ಮೆಚ್ಚಿಕೊಂಡಿದ್ದಾರೆ. ಎ. ಎನ್. ಉಪಾಧ್ಯೆ ಅವರು " 'ಶಾಕುಂತಲಾ' ಮಹಾಕಾವ್ಯ ಕನ್ನಡ ಸಾಹಿತ್ಯದ ಮಹಾಸಂಪ್ರದಾಯದ ಮುಂದುವರಿಕೆಯಾಗಿದೆ" ಎಂದಿದ್ದಾರೆ. "ಶಾಸನಗಳಲ್ಲಿ ಸಿಗುವ ವಸ್ತುವನ್ನು ಧಾರಾಳವಾಗಿ ಉಪಯೋಗಿಸಿಕೊಂಡು ರಾಮರಾಯರು ನಾಟಕವನ್ನು ಭವ್ಯಶೈಲಿಯಲ್ಲಿ ರಚಿಸಿದ್ದಾರೆ" ಎಂಬುದು ಕೆ. ಸಂಪತ್‌ಗಿರಿರಾಯರು "ಸವತಿಗಂಧವಾರಣೆ" ಕಾದಂಬರಿಯ ಬಗ್ಗೆ ನೀಡಿರುವ ಅಭಿಪ್ರಾಯ. "ನಿಮ್ಮ ನಾಟಕ 'ನಾಟ್ಯಮಂದಾರ' ತನ್ನದೇ ಆದ ಸೊಬಗನ್ನು ಆಧುನಿಕ ಕನ್ನಡ ಸಾಹಿತ್ಯಕ್ಕೆ ತಂದಿದೆ" ಎಂದು ವಿ. ಕೆ. ಗೋಕಾಕರು ನುಡಿದಿದ್ದಾರೆ.

ಸಮೇತನಹಳ್ಳಿ ರಾಮರಾಯರು ನಾಡಿನ ಹಿರಿಯ ಹಾಗೂ ಶ್ರೇಷ್ಠ ಸಾಹಿತಿಗಳಲ್ಲೊಬ್ಬರು. ಅವರಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊರಕಬೇಕಾದ ಮನ್ನಣೆ ನಮ್ಮ ಸಾಹಿತ್ಯಪಾಲಕರು–ಅವರು ಯಾರೇ ಆಗಿರಲಿ–ದೊರಕಿಸಿ ಕೊಟ್ಟಿರುವರೆ ಎಂಬುದನ್ನು ಬಲ್ಲವರೆ ಹೇಳಬೇಕು. ಎಲೆಯ ಮರೆಯ ಕಾಯಿಯಂತೆ, ಯಾವ ಪ್ರತಿಫಲವನ್ನೂ ನಿರೀಕ್ಷಿಸದೆ ಮೌನವಾಗಿ ಕನ್ನಡಮ್ಮನ ಸೇವೆಯನ್ನು ಮಾಡಿರುವ ರಾಮರಾಯರು ಕರ್ನಾಟಕ ಸರ್ಕಾರ ಮತ್ತು ಅಕಡೆಮಿಗಳ ಹಿರಿಯ ಗೌರವಗಳಿಗೆ ಪಾತ್ರರೆಂಬುದನ್ನು ಮಾತ್ರ ಹೇಳಬಲ್ಲೆವು. ಇತ್ತೀಚೆಗೆ ಮಂಡ್ಯದಲ್ಲಿ ನಡೆದ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ "ಅಲಕ್ಷಿತ ಸಾಹಿತ್ಯ" ಎಂಬ ವಿಷಯವಾದ ಮೇಲೆ ಚರ್ಚೆ ನಡೆಯಿತು. ಅಲ್ಲಿ ರಾಮರಾಯರ ವಿಷಯವೂ ಬಂದಿತ್ತು. ಕಾಲಗತಿಯಲ್ಲಿ, ವಿಮರ್ಶಕರ ಕೈಯಲ್ಲಿ, ಬಹುಮಾನ ನೀಡುವ ಸಾಹಿತ್ಯ ಸಂಸ್ಥೆಗಳಲ್ಲಿ ಒಳ್ಳೆಯ ಕೃತಿಗಳು ಅಲಕ್ಷಿತಗೊಳ್ಳುವುದು ಸಾಮಾನ್ಯ. ಉತ್ತಮ ಸಾಹಿತ್ಯ ಹಾಗೂ ರಾಮರಾಯರಂಥ ಶ್ರೇಷ್ಠ ಸಾಹಿತಿಗಳು ಎಂದಿಗೂ ಅಲಕ್ಷಿತರಾಗಬಾರದು.

ತಮ್ಮ 'ತಲಕಾಡುಗೊಂಡ' ನಾಟಕ ನನಗೆ ಮೆಚ್ಚುಗೆಯಾಯಿತು. ಹೊಯಿಸಳರ ವಿಷ್ಣುವರ್ಧನನ್ನು ನೀವು ಸಪರಿವಾರ ಸ್ಪಷ್ಟ ಕಂಡಿದ್ದೀರಿ, ನುಡಿಸಿದ್ದೀರಿ.

ಉದ್ದಕ್ಕೂ ಕೃತಿ ಸ್ವಚ್ಛವಾಗಿದೆ, ಸುಂದರವಾಗಿದೆ. ರಸಿಕರಿಗೆ ಈ ಕೃತಿ ಸಂತಸವನ್ನು ಕೊಡುವಂತೆ ತಮಗೆ ಇದು ಯಶಸ್ಸಿನ ಮುಖಮಂಟಪವಾಗಲಿ ಎಂದು ಆಶಿಸುತ್ತೇನೆ.

೨೮–೨–೫೯ ಕೆ. ವಿ. ಸುಬ್ಬಣ್ಣ

ಅಜಾತ ಶತ್ರು

ಹೆಚ್. ನಂಜೇಗೌಡ

ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತು. ಪಾಂಡವಪುರ ಗ್ರಾಮಸೇವಾ ವಿದ್ಯಾರ್ಥಿ ನಿಲಯದ ವ್ಯವಸ್ಥಾಪಕನಾಗಿದ್ದೆ. ಆ ಕಾಲಕ್ಕೆ ಮಲೇರಿಯಾ ಖಾಯಿಲೆಯಿಂದ ಪಾಂಡವಪುರ ತಾಲೋಕಿನ ಕೆಲವು ಊರುಗಳಲ್ಲಿ ಗಂಡಸರೇ ಇರಲಿಲ್ಲವಂತೆ. ಇರ್ವಿನ್‌ನಾಲಾ ಬಂದ ಹೊಸದು. ಸುಮಾರು ೧೯೩೦ನೆ ಇಸವಿಯಲ್ಲಿ ಈ ನಾಲೆಗೆ ನೀರು ಬಿಟ್ಟರೆಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಪ್ರಾರಂಭದಲ್ಲಿ ಈ ನಾಲೆಯಿಂದ ಅನುಕೂಲಕ್ಕೆ ಬದಲಾಗಿ ಅನಾನುಕೂಲವೇ ಹೆಚ್ಚಾಯಿತು. ಮಲೇರಿಯಾ ಮಂಡ್ಯ ಜಿಲ್ಲೆಯಾದ್ಯಂತ ಹರಡಿತು. ಈ ಖಾಯಿಲೆ ಇಲ್ಲದ ಊರೇ ಇರಲಿಲ್ಲ, ಮಂಡ್ಯ ಜಿಲ್ಲೆಯಲ್ಲಿ. ಇದರಿಂದಾಗಿ ಗಂಡಸರೂ ಗರ್ಭಿಣಿಯರೇ ಆದರು. ಮಲೇರಿಯಾ ಗಡ್ಡೆ ಬೆಳೆದು. ಹೊಟ್ಟೆ ಊದಿ ಕೊಂಡು ಜನ ಸಾಯುತ್ತಿದ್ದರು. ಇದನ್ನೆದುರಿಸುವುದು ಸರ್ಕಾರಕ್ಕೊಂದು ಸವಾಲಾ ಯಿತು. ಇದಕ್ಕಿದ್ದ ಔಷಧ ಒಂದೇ ಕ್ವಿನೈನ್‌ಪುಡಿ. ಈ ಪುಡಿಯೋ ಮಹಾಂತ ಕಹಿ. ವಿಷ ಕುಡಿದಂತೆ. ಅಂಚೆ ಕಚೇರಿಯಲ್ಲಿಯೂ ಮಾರಾಟ ಮಾಡುತ್ತಿದ್ದರು. ಒಂಬತ್ತು ಕಾಸಿಗೆ ಒಂದು ಪೊಟ್ಟಣ. ಒಂದು ಪೊಟ್ಟಣ ತೆಗೆದುಕೊಂಡು ನಿಂಬೆಹಣ್ಣಿನರಸದಲ್ಲಿ ಕುಡಿಯುವು ದೊಂದೇ ಮಾರ್ಗ.

ಈ ಖಾಯಿಲೆಯನ್ನು ಹತೋಟಿಗೆ ತರಲು ಸರ್ಕಾರದವರು ತಾಲೋಕು ಕೇಂದ್ರ ಗಳಲ್ಲಿ ಒಂದೊಂದು ಆರೋಗ್ಯ ಕೇಂದ್ರವನ್ನು ತೆರೆದರು. ಅಲ್ಲಿ ಒಬ್ಬ ಎಲ್. ಎಂ. ಪಿ. ವೈದ್ಯರು ಐದಾರು ಜನ ಹೆಲ್ತ್ ಇನ್‌ಸ್ಪೆಕ್ಟರುಗಳು ಇದ್ದರು. ಇವರುಗಳ ಕೆಲಸವೆಂದರೆ ಬಂದರೆ ರೋಗಿಗಳಿಗೆ ಕ್ವಿನೈನ್‌ಪುಡಿ ಇಲ್ಲವೇ ಕ್ವಿನೈನ್ ಮಿಶ್ರಣಕೊಡುವುದು, ಗ್ರಾಮಗಳಿಗೆ ಹೋಗಿ ರೋಗಿಗಳನ್ನು ತಪಾಸಣೆ ಮಾಡುವುದು, ರೋಗಿಗಳಿಂದ ರಕ್ತ ತೆಗೆದುಕೊಂಡು ಅವರಿಗೆ ಮಲೇರಿಯ ರೋಗ ಇದೆಯೇ ಇಲ್ಲವೆಂದು ಪರೀಕ್ಷಿಸಿ ಖಚಿತಪಡಿಸಿಕೊಂಡು ಊರು ಊರುಗಳಿಗೇ ಹೋಗಿ ರೋಗಿಗಳನ್ನು ಹುಡುಕಿ, ಅವರಿಗೆ ಸಮಾಧಾನ ಹೇಳಿ, ಔಷಧಿ ಮೇಲೆ ನಂಬಿಕೆ ಹುಟ್ಟಿಸಿ, ಖುದ್ದು ತಾವೇ ರೋಗಿಗೆ ಔಷಧ ಕುಡಿಸುವುದು. ಪ್ರತಿಯೊಂದು ಮನೆಗೂ ಡಿ.ಡಿ.ಟಿ. ಪುಡಿ ಮಿಶ್ರಣವನ್ನು ಸಿಂಪಡಿಸುವುದು ಹೆಲ್ತ್ ಇನ್‌ಸ್ಪೆಕ್ಟರುಗಳ ಕೆಲಸವಾಗುತ್ತಿತ್ತು.

ಪಾಂಡವಪುರ ನಗರದಲ್ಲಿಯೂ ಇಂತಹ ಒಂದು ಕೇಂದ್ರವಿತ್ತು. ಈ ಹೆಲ್ತ್

ಯೂನಿಟ್ಟು ಇದ್ದುದು ಒಂದು ಸಣ್ಣ ಕುಟೀರದಲ್ಲಿ ತಾಲೋಕು ಕಚೇರಿಪಕ್ಕದಲ್ಲಿ ಮಂಗಳೂರು ಹೆಂಚಿನ ಒಂದು ಕುಳ್ಳಾದ ಸಣ್ಣಮನೆ. ಎತ್ತರವಾದ ರೋಗಿಗಳು ಬಗ್ಗಿಯೇ ಹೋಗಬೇಕಾಗಿತ್ತು. ನಾವು ಎಷ್ಟೋ ದೊಡ್ಡವರಾಗಿದ್ದರೂ ನಾವು ನಿಮಗೆ ಶರಣಾಗಿದ್ದೇವೆ ಎಂಬ ಭಾವನೆಯನ್ನು ತೋರ್ಪಡಿಸುತ್ತಿದ್ದಾರೆಯೋ ಎಂಬಂತೆ ಆ ಕುಟೀರದ ಬಾಗಿಲುಗಳು ಕುಳ್ಳಾಗಿದ್ದವು. ಅದರೊಳಗಡೆ ಬೆಂಚಿನ ಮೇಲೆ ಕುಳಿತ ನಾಲ್ಕೈದು ಹೆಲ್ತ್ ಇನ್‌ಸ್ಪೆಕ್ಟರುಗಳು. ಅವರ ಮುಂದಿನ ಮೇಜಿನ ಮೇಲೆ ದೊಡ್ಡ ದೊಡ್ಡ ಸೀಸೆಗಳಲ್ಲಿ ತುಂಬಿಟ್ಟಿದ್ದ ಕೆಂಪು ಮತ್ತು ಬಿಳಿ ಬಣ್ಣದ ಔಷಧಿ ಸೀಸೆಗಳು. ಅಲ್ಲಿದ್ದುದು ಎರಡೇ ರೀತಿಯ ಔಷಧಿಗಳು. ಕೆಂಪು ಔಷಧಿ ಕ್ವಿನೈನ್ ಮಿಶ್ರಣ ಮಲೇರಿಯಾದವರಿಗೆ, ಬಿಳಿ ಬಣ್ಣದ ಬಿಸ್ಮತ್ ಮಿಶ್ರಣ ಭೇದಿಯಾಗುವವರಿಗೆ.

ನಮ್ಮ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಮಲೇರಿಯಾ ಖಾಯಿಲೆಯಿಂದ ನರಳುತ್ತಿದ್ದರು. ಅವರಿಗೆ ಔಷಧ ತಂದು ಕುಡಿಸುವ ಜವಾಬ್ದಾರಿಯೂ ನನ್ನದಾಗಿತ್ತು. ಹೀಗಾಗಿ ಒಂದು ದಿನ ಹೆಲ್ತ್ ಯೂನಿಟ್ಟಿಗೆ ಔಷಧಿಗಾಗಿ ಹೋದೆ. ಒಳಗಡೆ ಒಬ್ಬ ಎತ್ತರವಾದ ವ್ಯಕ್ತಿ, ಕುಳಿತ್ತಿದ್ದರು. ಕಚೇರಿಯಲ್ಲಿ ಅವರೊಬ್ಬರೇ ಇದ್ದವರು. ನಾನು ಮಾತನಾಡಿಸುವುದಕ್ಕಿಂತ ಮುಂಚೆಯೇ ಎಷ್ಟೋ ದಿವಸಗಳ ಹಿಂದಿನ ಪರಿಚಯವಿದ್ದವರಂತೆ "ಓಹೋ,ದಯಮಾಡಿಸಬೇಕು ಗುರುಗಳು. ಏನು ಸ್ವಾಮಿ ಬಹಳ ದೂರ ಬಂದು ಬಿಟ್ಟಿರಿ" ಎಂದು ಅತ್ಮೀಯವಾಗಿ ಮಾತನಾಡಿಸಿ ಹೆಗಲ ಮೇಲೆ ಕೈಹಾಕಿ ಕರೆದುಕೊಂಡು ಹೋಗಿ "ನೋಡಿಸ್ವಾಮಿ, ನಮ್ಮಲ್ಲಿ ಸಿಂಹಾಸನಗಳಿಲ್ಲ,ಕೇವಲ ಕಾಲು ಮಣೆಗಳು, ಬಡವರ ಕೇಂದ್ರ ಬನ್ನಿ ಕುಳಿತುಕೊಳ್ಳಿ. ಇದರ ಮೇಲೆ ಕೂತರೆ ನಡು ಭದ್ರವಾಗಿರುತ್ತೆ" ಎಂದು ತಮಾಷೆಯಾಗಿ ಮಾತನಾಡಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಪರಿಚಯ ಮಾಡಿಕೊಂಡರು. ಅವರಾರೇಂಬುದೇ ನನಗೆ ತಿಳಿಯಲಿಲ್ಲ. ಗುಮಾಸ್ತರಿರಬೇಕೆಂದು ಭಾವಿಸಿದ್ದೆ ಏಕೆಂದರೆ ಆಗಿನ ಕಾಲದಲ್ಲಿ ಆರೋಗ್ಯ ಇಲಾಖೆ, ರೆವಿನ್ಯೂ ಇಲಾಖೆಯ ಅಧಿಕಾರಿಗಳೆಂದರೆ ಭರ್ಜರಿ ಸೂಟು ಹಾಕಿ, ಟೈಕಟ್ಟಿಕೊಂಡು ಠೀವಿಯಿಂದ ಇರುತ್ತಿದ್ದರು. ಇಂಗ್ಲಿಷರ ಆಡಳಿತ ಹೋಗಿ ಬಹಳ ದಿವಸವಾಗಿರಲಿಲ್ಲ. ಆದುದರಿಂದ ಅವರ ಅನುಕರಣೆ ನಮ್ಮ ಅಧಿಕಾರಿಗಳಲ್ಲಿ ಇನ್ನೂ ಮರೆಯಾಗಿರಲಿಲ್ಲ. ಆದರೆ ಈ ವ್ಯಕ್ತಿ, ಸಾಧಾರಣ ಉಡುಪಿನಲ್ಲಿದ್ದು ಸೌಜನ್ಯದಿಂದ ವರ್ತಿಸಿದುದರಿಂದ ಅವರಲ್ಲಿ ನನಗೆ ಆ ಭಾವನೆ ಬೆಳೆಯಲು ಅವಕಾಶವಾಯಿತು. ಸರಿ ಪರಿಚಯಕ್ಕೆ ಪ್ರಾರಂಭವಾಯಿತು.

"ನೋಡಿ ಮೇಷ್ಟ್ರೆ, ನಿಮ್ಮನ್ನ ದಿವಸ ನಿಮ್ಮ ವಿದ್ಯಾರ್ಥಿನಿಲಯದ ಆವರಣದಲ್ಲಿ ನೋಡುತ್ತಿದ್ದೇನೆ. ನಾನು ಆಫೀಸಿಗೆ ಬರಬೇಕಾದರೆ ಆ ಕಡೆಯಿಂದಲೇ ಬರುತ್ತೇನೆ. ಮಕ್ಕಳಿಂದ ಏನೇನೋ ಚಟುವಟಿಕೆ ಮಾಡಿಸುತ್ತಾ ಇರುತ್ತೀರಿ. ನಾನು ಬಂದಾಗಿನಿಂದ ನಿಮ್ಮ ಪರಿಚಯ ಆಗಲಿಲ್ಲ. ನಾನು ಈ ಹೆಲ್ತ್ ಯೂನಿಟ್‌ನಲ್ಲಿ ಒಬ್ಬ ಸಣ್ಣ ಅಧಿಕಾರಿ ಹೆಲ್ತ್ ಇನ್‌ಸ್ಪೆಕ್ಟರು. ನನ್ನ ಹೆಸರು ಸಮೇತನಹಳ್ಳಿ ರಾಮರಾಯರು ಅಂತ. ನಾನೂ ಮೇಷ್ಟ್ರಾಗಬೇಕೆಂಬ ಆಸೆ ಇತ್ತು. ಹಣೇಬರಹ ನೋಡಿ ಈ ಔಷಧಿ ಹೊಡಿಸೋ ಕೆಲಸಕ್ಕೆ ಬಂದಿದ್ದೇನೆ. ದಯೆಯಿಟ್ಟು ತಮ್ಮ ಪರಿಚಯ ಮಾಡಿಕೊಡ್ತೀರ ?" ಎಂದರು. "ರಾಮ

ರಾಯರೇ ನನ್ನ ಹೆಸರು ನಂಜೇಗೌಡ ಅಂತ. ಇದೇ ಮಿಡಲ್ ಸ್ಕೂಲಿನಲ್ಲಿ ಮಾಸ್ಟರು
ಜೊತೆಗೆ ವಿದ್ಯಾರ್ಥಿನಿಲಯದ ಮೇನೇಜರೂ ಆಗಿದ್ದೇನೆ. ನಮ್ಮ ಹುಡುಗರಿಗೆ ಮಲೇ
ರಿಯ ಜ್ವರ. ಇಲ್ಲಿಗೆ ಔಷಧಿಗಾಗಿ ಬಂದಿದ್ದೇನೆ" ಎಂದೆ.

ಆಯಿತು ತಮ್ಮ ಪರಿಚಯವಾದುದು ತುಂಬ ಸಂತೋಷ. ಸಾಯಂಕಾಲ
ವಿದ್ಯಾರ್ಥಿ ನಿಲಯಕ್ಕೆ ಬರುತ್ತೇನೆ. ಹುಡುಗರ ರಕ್ತ ಪರೀಕ್ಷೆ ಮಾಡಿ ರೋಗ ಖಚಿತ
ಪಡಿಸಿಕೊಂಡು ಔಷಧ ಕೊಡಬೇಕು. ಈಗ ಸ್ವಲ್ಪ ಕಾಫಿ ಕುಡಿಯೋಣವೇ ಎಂದು ಕಾಫಿ
ತರಿಸಿದರು. "ಗೌಡರೇ ನನಗೂ ಸ್ವಲ್ಪ ಬರವಣಿಗೆ ಹುಚ್ಚು ಇದೆ. ತಮ್ಮಂತಹವರ
ಸಹಾಯ ಬೇಕು. ಆಗ್ಗಾಗ್ಗೆ ಸೇರಿ ಸಾಹಿತ್ಯ ವಿಚಾರ ಚರ್ಚಿಸೋಣ" ಎಂದು ಹೇಳಿ
ಆತ್ಮೀಯವಾಗಿ ಬೀಳ್ಕೊಟ್ಟರು. ಅಂದು ಪ್ರಾರಂಭವಾದ ಅವರ ನನ್ನ ಸ್ನೇಹ ನಿರಂತರ
ವಾಗಿದೆ. ಇಲ್ಲಿಯವರಾರೂ ರಾಮರಾಯರನ್ನು ಸಮೇತನಹಳ್ಳಿಯವರು ಎಂದು ಕರೆ
ಯುವುದಿಲ್ಲ. ಪಾಂಡವಪುರ ರಾಮರಾಯರೆಂದೇ ಪ್ರಸಿದ್ಧಿ. ಅಷ್ಟೊಂದು ಅವಿನಾಭಾವ
ಸಂಬಂಧ ರಾಮರಾಯರಿಗೂ ಪಾಂಡವಪುರಕ್ಕೂ. ಪಾಂಡವಪುರದಲ್ಲಿ ಯಾವುದೇ
ಸಾಹಿತ್ಯ ಸಮಾರಂಭ ನಡೆದರೂ ಆ ಸಮಾರಂಭದಲ್ಲಿ ಒಂದಲ್ಲ ಒಂದು ರೀತಿಯ ಕಾರ್ಯ
ಕ್ರಮದಲ್ಲಿ ಭಾಗವಹಿಸಲೇಬೇಕು. ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಗಳಲ್ಲಿ
ಇಬ್ಬರೂ ಜೊತೆಜೊತೆಯಾಗಿಯೇ ಅತಿಥಿಗಳಾಗಿ ಭಾಗವಹಿಸಿದ್ದೇವೆ.

ರಾಮರಾಯರು ಹಳ್ಳಿಗಳಿಗೆ ಹೋದಾಗ ಅನೇಕ ಬಾರಿ ನನ್ನನ್ನು ಜೊತೆಯಲ್ಲಿ
ಕರೆದುಕೊಂಡು ಹೋಗುತ್ತಿದ್ದರು. ಅಂದಿನ ದಿನಗಳಲ್ಲಿ ಸೈಕಲ್ಲೇ ದೊಡ್ಡವಾಹನ. ಸೈಕಲ್
ಹೊಂದಿರುವವರನ್ನ ದೊಡ್ಡವರು ಅನ್ನುವ ಭಾವನೆ. ಇಬ್ಬರೂ ಸೈಕಲ್ಲಿನಲ್ಲಿ ಹೋಗುತ್ತಿ
ದ್ದೆವು. ರಾಮರಾಯರು ತಮ್ಮ ಸಿಬ್ಬಂದಿ ವರ್ಗದವರನ್ನು ಮನೆಗಳಿಗೆ ಔಷಧಿ ಹೊಡೆ
ಯಲು ನೇಮಿಸಿ, ಬಿಡುವಿನ ವೇಳೆಯಲ್ಲಿ ತಾವು ಆ ಗ್ರಾಮದಲ್ಲಿರುವ ಹಳೇ ಶಾಸನಗಳು,
ವೀರಗಲ್ಲುಗಳು, ದೇವಾಲಯಗಳು, ಸ್ಮಾರಕಗಳು ಇತ್ಯಾದಿಗಳನ್ನು ಹುಡುಕಿಕೊಂಡು
ಹೋಗಿ ಅವುಗಳ ಬಗ್ಗೆ ಗ್ರಾಮದ ಹಿರಿಯರ ಜೊತೆ ವಿಚಾರವಿನಿಮಯ ಮಾಡಿಕೊಂಡು
ತಮಗೆ ಬೇಕಾದ ವಿಷಯವನ್ನೆಲ್ಲ ಬರೆದುಕೊಳ್ಳುತ್ತಿದ್ದರು. ನನಗೆ ಆಶ್ಚರ್ಯ. ಈ ಹಳೇ
ಕಲ್ಲುಗಳ ಕಥೆಯಿಂದ ಇವರಿಗೇನು ಪ್ರಯೋಜನ ಎನಿಸುತ್ತಿತ್ತು. ಒಮ್ಮೆ ಅವರನ್ನೂ
ಕೇಳಿದೆ, "ಏನು ಸ್ವಾಮಿ, ನೀವು ಊರುಗಳಿಗೆ ಔಷಧಿ ಹೊಡೆಸುವುದಕ್ಕೆ ಬರುತ್ತೀರೋ
ಇಲ್ಲ ಈ ಕಲ್ಲುಗುಂಡುಗಳ ಜೊತೆ ಹರಟೆ ಹೊಡೆಯೋಕೆ ಬರುತ್ತೀರೊ" ಎಂದು ಕೇಳಿ
ದಾಗ, "ನಮ್ಮ ಸಂಸ್ಕೃತಿ, ಇತಿಹಾಸ ಎಲ್ಲ ಈ ಕಲ್ಲುಗಳಲ್ಲೇ ಅಡಗಿರುವುದು ಗೌಡರೇ.
ಈ ಕೆಲಸವನ್ನು ನೀವೂ ಮಾಡಬೇಕು. ಬ್ರಿಟೀಷರ ಆಳ್ವಿಕೆಯಿಂದಾಗಿ ನಾವು ಯಾರೆಂಬುದೇ
ಮರೆತುಹೋಗಿದೆ. ನಮ್ಮ ಸಂಸ್ಕೃತಿ ಯಾವುದು ? ನಮ್ಮ ನಾಗರೀಕತೆ ಹೇಗಿತ್ತು ?
ನಮ್ಮಲ್ಲಿ ಯಾವ ಯಾವ ವಂಶದ ಶೂರರು ರಾಜ್ಯವಾಳಿದರು, ಅವರ ರಾಜ್ಯಾಡಳಿತ
ಕ್ರಮ ಹೇಗಿತ್ತು ? ನಮ್ಮವರು ಏನೇನು ಸಾಧನೆ ಮಾಡಿದರು ಎಂಬುದೆಲ್ಲ ಈ ಕಲ್ಲು
ಗಳಲ್ಲಿ ಅಡಗಿವೆ. ಅವುಗಳನ್ನು ಸಂಗ್ರಹಿಸಿ ನಮ್ಮ ಸಂಸ್ಕೃತಿಯನ್ನು, ಇತಿಹಾಸವನ್ನು

ಹೊರಗೆಡಹಬೇಕು. ಈ ಬಗ್ಗೆ ನಾವು ಮಾಡಬೇಕಾದ ಕೆಲಸ ತುಂಬ ಇದೆ" ಎಂದು ಹೇಳಿ ದೇವಸ್ಥಾನಗಳ ಗೋಡೆಗಳ ಮೇಲೆ, ಹೊಲದ ಬದುವಿನಲ್ಲಿ ಊರ ಮುಂದಿನ ಹೆಬ್ಬಾಗಿಲಿನಲ್ಲಿರುವ ಕಲ್ಲುಗಳ ಪರಿಚಯಮಾಡಿಸಿ ಅವುಗಳ ಇತಿಹಾಸವನ್ನು ಹೇಳುತ್ತಿದ್ದರು. ಇಂತಹ ಸಂಶೋಧನಾ ಕೆಲಸಮಾಡಬೇಕೆಂಬ ಸ್ಫೂರ್ತಿಯನ್ನು ತುಂಬಿದವರು ಶ್ರೀ ಸಮೇತನಹಳ್ಳಿ ರಾಮರಾಯರು.

ಅವರು ಕೇವಲ ಹೆಲ್ತ್ ಇನ್‌ಸ್ಪೆಕ್ಟರಾಗಿರಲಿಲ್ಲ. ಉತ್ತಮ ಸಂಶೋಧಕರು ಮತ್ತು ಸಾಹಿತಿಗಳು. ಸಾಹಿತಿಗಳ ಮನ್ನಣೆಗೂ ಪಾತ್ರರಾದವರು. ಹೆಲ್ತ್ ಇನ್‌ಸ್ಪೆಕ್ಟರ ಕೆಲಸ ಕೇವಲ ಜೀವನ ನಿರ್ವಹಣೆಗಾಗಿ ಮಾತ್ರವಾಗಿದ್ದಿತು. ಹಾಗೆಂದ ಮಾತ್ರಕ್ಕೆ ತಮ್ಮ ಕರ್ತವ್ಯದಲ್ಲಿ ಉದಾಸೀನತೆ ಇರಲಿಲ್ಲ. ತಮ್ಮ ಕರ್ತವ್ಯವನ್ನೂ ನಿಷ್ಠೆಯಿಂದ ನಿರ್ವಹಿಸಿಕೊಂಡು ಬರವಣಿಗೆಯ ಕೆಲಸವನ್ನು ಮಾಡುತ್ತಿದ್ದರು.

ಇವರನ್ನು ಕಂಡಾಗಲೆಲ್ಲ ಹಿರಿಯರ ಸೂಕ್ತಿಯೊಂದು ಸ್ಮರಣೆಗೆ ಬರುತ್ತದೆ. 'ಕಡೆದರೆ ಮರದ ತುಂಡುಗಳಿಂದ ಬೆಂಕಿ ಉಂಟಾಗುತ್ತದೆ. ಅಗೆದರೆ ನೆಲದ ಆಳದಲ್ಲಿ ನೀರು ಸಿಗುತ್ತದೆ. ಹುರುಪಿನಿಂದ ಕೆಲಸ ಮಾಡುವವನಿಗೆ ಅಸಾಧ್ಯವೆಂಬುದೇ ಇಲ್ಲ' ಈ ಸೂಕ್ತಿಗೆ ಹೇಳಿಮಾಡಿಸಿದಂತಹ ವ್ಯಕ್ತಿ ರಾಮರಾಯರು. ಸ್ನೇಹಿತರ ಜೊತೆ ಸೇರಿದಾಗಲ್ಲೆಲ್ಲ ಸ್ಥಳ ಪುರಾಣಗಳ ವಿಷಯವಾಗಿಯೇ ಚರ್ಚೆ. ಊರಿಗೆ ಈ ಹೆಸರು ಏಕೆ ಬಂತು ? ಹೇಗೆ ಬಂತು ? ಇಲ್ಲಿಯ ಮೂಲಪುರುಷರಾರು ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆ. ಅನಂತರ ಸಂಶೋಧನೆ ಮತ್ತು ಪ್ರಕಟಣೆ. ಹೀಗಾಗಿ ತಮ್ಮ ಸರ್ಕಾರಿ ಕೆಲಸವನ್ನೂ ನಿರ್ವಹಿಸಿಕೊಂಡು ಜೊತೆಗೆ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೆಲವು ಕೊಡುಗೆಗಳನ್ನೂ ಕೊಟ್ಟು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಪಾಂಡವಪುರ ಐತಿಹಾಸಿಕ ಹಿನ್ನೆಯ ಬಗ್ಗೆ ಸಂಶೋಧನೆ ನಡೆಸಿ ಅನೇಕ ಲೇಖನಗಳನ್ನು ಪ್ರಕಟಿಸಲು ಪ್ರೋತ್ಸಾಹ ನೀಡಿದವರು ಶ್ರೀ ಸಮೇತನಹಳ್ಳಿ ರಾಮರಾಯರು. ತಲಕಾಡು, ಮೇಲುಕೋಟೆ, ತೊಂಡನೂರು ಇವುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದ್ದಾರೆ. ಇವರನ್ನು ದ್ವೇಷಿಸುವವರನ್ನೇ ನಾನು ಕಂಡಿಲ್ಲ. ಯಾವಾಗಲೂ ಹಸನ್ಮುಖಿ. ಜಾತಿಮತಗಳ ಗೊಂದಲಕ್ಕೆ ಸಿಲುಕಿದವರಲ್ಲ. ಎಲ್ಲರನ್ನು ಒಂದೇ ಭಾವನೆಯಿಂದ ನೋಡುವ ಮನೋಭಾವ ಬೆಳಸಿಕೊಂಡವರು. ಚಿಕ್ಕವರಾಗಲೀ ದೊಡ್ಡವರಾಗಲೀ ಅವರೊಡನೆ ಸುಲಭವಾಗಿ ಬೆರೆಯುವುದು ಇವರ ದೊಡ್ಡಗುಣ. ಅವರ ಸಾಹಿತ್ಯದಲ್ಲಿ ಅಥವಾ ಚರ್ಚೆಯಲ್ಲಿ ಯಾರಾದರೂ ದೋಷಗಳನ್ನು ಗುರುತಿಸಿ ತೋರಿಸಿದರೆ ಚರ್ಚಿಸಿ ಸಮರ್ಥಿಸಿಕೊಳ್ಳುವುದು ಇಲ್ಲವೇ ಅದು ನನ್ನ ತಿಳಿವಳಿಕೆಯ ತಪ್ಪು ಎಂದು ಒಪ್ಪಿಕೊಳ್ಳುವ ದೊಡ್ಡಗುಣ ಅವರದು. ಹೀಗಾಗಿ ಅವರೊಬ್ಬ ಅಜಾತ ಶತ್ರು. ಎಲ್ಲರೂ ಅವರನ್ನು ಪ್ರೀತಿಸುವವರೇ. ಪರೋಕ್ಷವಾಗಿಯೂ ಅವರನ್ನು ಟೀಕಿಸಿದವರ ಹೆಸರನ್ನು ನಾನಂತು ಕೇಳಿಲ್ಲ.

'ಒಳ್ಳೆಯ ಮನಸ್ಸು, ಒಳ್ಳೆಯ ನಡೆವಳಿಕೆ, ಒಳ್ಳೆಯ ಕೆಲಸಗಳಿಂದ ನಾವು ಉತ್ತಮರಾಗುತ್ತೇವೆಯೇ ಹೊರತು ಜಾತಿಮತಗಳಿಂದಲ್ಲ' ಎಂಬ ಮಾತಿಗೆ ರಾಮರಾಯರೇ

ಸಾಕ್ಷಿ. ಇವರದು ಒಳ್ಳೆಯ ಮನಸ್ಸು, ಮೃದು ಸ್ವಭಾವ, ಮಿತಭಾಷಿ, ಒಳ್ಳೆಯ ನಡೆ ವಳಿಕೆ. ದುಶ್ಚಟಗಳಾವುದಕ್ಕೂ ಬಲಿಯಾದವರಲ್ಲ. ಸಾತ್ವಿಕ ಸ್ವಭಾವ, ಸನ್ನಡತೆಯ ಸಮೇತನಹಳ್ಳಿ, ಸಾಹಿತ್ಯದಲ್ಲಿ ಉತ್ತಮವಾದ ಕೆಲಸವನ್ನೂ ಮಾಡಿದ್ದಾರೆ. ಜಾತಿಮತ ಗಳಿಂದ ದೂರ. ಎಲ್ಲರನ್ನೂ ಸಮಾನ ಭಾವದಿಂದ ಕಾಣುವ ಹಿರಿಯ ಜೀವ. ಇಪ್ಪತ್ತೈ ದಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಕಾವ್ಯ, ನಾಟಕ, ಮಹಾಕಾವ್ಯ, ಕಾದಂಬರಿ, ಆತ್ಮಕತೆ, ಭಾಷಾಂತರ ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೆಲಸ ಮಾಡಿ ದ್ದಾರೆ. ಶ್ರೀಯುತರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿರಸ್ಥಾಯಿಯಾದ ಕೀರ್ತಿಯನ್ನು ಗಳಿಸಿಕೊಂಡಿದ್ದಾರೆ. ಇವರ ಲೇಖಣಿಯಿಂದ ಇನ್ನೂ ಉತ್ತಮವಾದ ಕೃತಿಗಳು ಮೂಡಿ ಬರಲೆಂದು ಹಾರೈಸುತ್ತೇನೆ.

ತಮ್ಮ ಮಹಾಕೃತಿ 'ಮೊನೆಗಾರ' ಕೈ ಸೇರಿದೆ.ಆ ಕನ್ನಡ, ಆ ಶೈಲಿ, ಇತಿಹಾಸದ ಮೇಲಿನ ಹಿಡಿತ, ನಾಟಕದ ಬಿಕ್ಕಟ್ಟು,-ನಿಜಹಾಗಿ ಹೇಳಬೇಕೆಂದರೆ 'ಸಂಸ'ರ ನಂತರ ತಮ್ಮ ಮೈಯ್ಯುಂಡು ಬಂದದ್ದು. ನನ್ನಂಥ ಕನ್ನಡಿಗನಿಗೆ ತಮ್ಮ ಬಗೆಗೆ ಹೆಮ್ಮೆ-ಸುಮ್ಮಾನಗಳಾಗುತ್ತವೆ. ಗೌರವ-ಕೃತಜ್ಞತೆಗಳು ಎದೆ ತುಂಬುತ್ತವೆ.

೨೫-೧೧-೮೯ ಎಚ್. ಕೆ. ರಂಗನಾಥ್

ಬಹುಸಮರ್ಥ ವ್ಯಕ್ತಿ *

ಡಾ. ಸಿ. ಅಚ್ಯುತನ್

"ಭವಿಷ್ಯ ವರವಲ್ಲ ; ಅದೊಂದು ಸಾಧನೆ"

–ರಾಬರ್ಟ್ ಎಫ್. ಕೆನಡಿ

ಸಮೇತನಹಳ್ಳಿ ರಾಮರಾಯರನ್ನು (ರಾಸ ಸಂಕ್ಷಿಪ್ತ ರೂಪ) ನಾನು ನಾಲ್ಕು ದಶಕಗಳಿಗಿಂತಲೂ ಹೆಚ್ಚಾಗಿ ಬಲ್ಲೆನು. ಮೊದಲ ಬಾರಿಗೆ ನಾನು ಅವರನ್ನು ರಾಮನಗರದಲ್ಲಿಯೂ ಆ ಬಳಿಕ ಮಂಡ್ಯದಲ್ಲಿಯೂ ಕಂಡೆನು. ವೈಯಕ್ತಿಕವಾದುದಾಗಲಿ ಅಥವಾ ಅಧಿಕಾರಯುತವಾದುದಾಗಿರಲಿ ಅವರು ವ್ಯವಹಾರವನ್ನು ನಮ್ರತೆಯನ್ನಾಗಿ ಕುದುರಿಸುವ ಒಂದು ವಿಶೇಷ ಕಲೆಯನ್ನು ರೂಢಿಸಿಕೊಳ್ಳುವವರು. ಅವರ ಈ ಗುಣಗಳನ್ನು ತೋರಿಸುವ ಸಲುಗೆಯನ್ನು ಇಲ್ಲಿ ಬಳಸಿಕೊಳ್ಳುತ್ತೇನೆ.

ರಾಯರು ಮೂರನೆಯ ಒಂದು ಭಾಗ ಪ್ರೇಮಯುಕ್ತನಾದ ಪತಿಯಾಗಿ
ಮತ್ತು ಮಕ್ಕಳಿಗೆ ತಮ್ಮನ್ನೇ ಅರ್ಪಿಸಿಕೊಂಡ ತಂದೆಯಾಗಿದ್ದರು.
ಮತ್ತೊಂದು ಮೂರನೆಯ ಭಾಗ ಅವರು ಕರ್ತವ್ಯ ಪ್ರಜ್ಞೆಯ ಮತ್ತು
ಶಿಸ್ತಿನಿಂದ ಕೂಡಿದ ಆರೋಗ್ಯ ಕಾರ್ಯಕರ್ತರಾಗಿದ್ದರು.
ಉಳಿದ ಮೂರನೆಯ ಭಾಗ, ಅವರು ಸಮೃದ್ಧ ಚಿಟ್ಟಿಕ್ತಿಯ ಮತ್ತು
ವಿಶೇಷವಾದ ಚೈತನ್ಯದಿಂದ ಕೂಡಿರುವ ತುಂಬಿದ ಲೇಖನಿಯಿಂದ
ಬರೆಯುವ ಸಾಮರ್ಥ್ಯದವರಾಗಿದ್ದರು.

ಇವು ಕವಿತ್ವದ ಅತಿಶಯೋಕ್ತಿಯಲ್ಲ ; ಕಠೋರ ಸತ್ಯಗಳು.

ಅವರ ಪ್ರಿಯ ಪುತ್ರಿ ನನ್ನನ್ನು ಸಂಪರ್ಕಿಸಿದಾಗ, ನಾನು ಮೊದಮೊದಲು ಈ ವಿಷಯಕ್ಕೆ ಬೇರೊಬ್ಬರನ್ನು ಕೇಳುವುದು ಸಮಾಜಂಸವಾಗುತ್ತದೆಂದು ನೊಂದ ಮನಸ್ಸಿನಿಂದ ಹೇಳಬೇಕೆನ್ನಿಸಿತು. ಕಾರಣ, ನಾನು ಅವರ ಪೂರ್ಣ ಸಾಹಿತ್ಯ ಶಕ್ತಿಯನ್ನು ಬಲ್ಲವನಲ್ಲ. ಆದಾಗ್ಯೂ ನಾನು ಕೂಡಲೇ ಅವರೊಡನೆಯ ನನ್ನ ಸಂಪರ್ಕವನ್ನು ದಾಖಲಿಸುವುದೆಂದು ತೀರ್ಮಾನಕ್ಕೆ ಬಂದು ಇಂತಹ ಕಠಿಣತರವಾದ ಕೆಲಸಕ್ಕೆ ಕೈಹಾಕಿದ ಅವರ ಮಗಳಿಗೆ ನನ್ನ ಒಪ್ಪಿಗೆಯನ್ನು ಹೇಳಿದೆನು. ಅದರ ಕಾರಣ ಸರಳವಾದುದು. ಏಕೆಂದರೆ ಮುದ್ರಿತ ವಸ್ತುವು, ನಾನು ಸುಮಾರು ಎರಡು ದಶಕಗಳ ಕಾಲ ಕೆಲಸ

* ಇದು ಅವರ ಇಂಗ್ಲೀಷ್ ಲೇಖನದ ಕನ್ನಡಾನುವಾದ

ಮಾಡಿದ ಗ್ರಾಮಪ್ರದೇಶದಲ್ಲಿ ತುಂಬ ವಿಶ್ವಾಸಯೋಗ್ಯವಾದುದಾಗುತ್ತದೆ.

೧೯೫೭ ರಷ್ಟು ಹಿಂದೆ ರಾಮನಗರದಲ್ಲಿ ವಿದೇಶದ ಸಹಾಯದಿಂದ ಒಂದು ವಿಶೇಷವಾದ ಪರಿವೀಕ್ಷಣಾ ಕಾರ್ಯವನ್ನು ಕೈಗೊಳ್ಳಲಾಯಿತು. ಫಲಾನುಭವಿಗಳ ಮನೆಗಳನ್ನು ಆಯ್ದುಕೊಳ್ಳುವ ಮತ್ತು ಅವುಗಳನ್ನು ಪರಿವೀಕ್ಷಣಕ್ಕೆಂದು ಪರಿವರ್ತಿಸುವ ಸಂಕ್ಷಿಪ್ತೇತಿಹಾಸಗಳನ್ನು ನಾವು ನಿರ್ಮಿಸಿದೆವು. ಪರಿವೀಕ್ಷಣೆಯ ಪ್ರಯತ್ನಗಳಿಗೆ ಇದು ನಿಜವಾಗಿಯೂ ಒಂದು ಭದ್ರವಾದ ಅಡಿಪಾಯವಾಗಿದ್ದಿತು. ಸೂಕ್ಷ್ಮ ವಿವರಗಳನ್ನೂ ತುಂಬ ಎಚ್ಚರದಿಂದ ಗಮನಿಸಿ ಪರಿವೀಕ್ಷಣೆಯನ್ನು ಮುಗಿಸಲಾಯಿತು. ಆದರೆ ಅಡ್ಡ ಬಂದ ತೊಂದರೆಗಳಿಂದಾಗಿ ಈ ಬೃಹತ್ ಸಾಧನೆಯನ್ನು ಶಾಸ್ತ್ರೀಯವಾಗಿ ಚಿತ್ರಿಸಿಡುವ ಕೆಲಸ ಬೆಳಕಿಗೆ ಬರಲಿಲ್ಲ. ನೌಕರನ ಕಾಲಾವಧಿ ಮೀರಿದ್ದರೂ ರಾಸರು ಅಲ್ಲಿ ನಿಂತೇನಿಂತರು. ಅದು ಹೇಗಾದರಾಗಲಿ, ಈ ವರದಿಯ ಒಂದು ಪ್ರತಿ ರಾಸರ ಸ್ವಂತ ಗ್ರಂಥ ಭಂಡಾರದಲ್ಲಿದೆಯೆಂಬುದನ್ನು ನಾನು ಬಲ್ಲೆನು. ಈ ಯೋಜನೆಯ ಅತ್ಯಂತ ಪ್ರಾಮುಖ್ಯ ವಸ್ತುಗಳು–ಅಂದರೆ ಪರಿಣಾಮಕಾರಿಯಾದ ತಿಳಿವಳಿಕೆಯ ಹೊಸ ಹೊಳಹುಗಳು ಸುಳಿವುಗಳು; ಎಡವಿರುವವುಗಳನ್ನು ಗುರುತಿಸುವುದು, ಸೇರಿಸಬೇಕಾದ ಮೂಲಭೂತ ವಸ್ತುಗಳನ್ನು ಅಭಿವೃದ್ಧಿಗೊಳಿಸುವುದೇ ಮುಂತಾದವುಗಳು ಅಂತ್ಯದ ವರದಿಯಲ್ಲಿ ತೋರಿಸಲಾಯಿತು.

ಇವರು ರಾಮನಗರದಲ್ಲಿ ಕಿರಿಯ ಬರಹಗಾರರಾಗಿ ಇದ್ದ ಅವಧಿಯಲ್ಲಿ ತನ್ನ ಕ್ಷೇತ್ರದ ಬಹುಶ್ರುತರನ್ನು ಸಂಪರ್ಕಿಸಿದ್ದರು. ಆದರೆ ಅವರ ಈ ಹವ್ಯಾಸ, ಸಂಸ್ಥೆಯ ತರಬೇತಿ ಕಾರ್ಯಕ್ರಮಗಳ ನಡುವೆ ಅಡಚಣೆಯಾಗಲಿಲ್ಲ ಅಥವಾ ಅವರು ಅದನ್ನು ತೋರಿಸಿಕೊಳ್ಳಲೂ ಇಲ್ಲ. ಅವರ ಕ್ಷೇತ್ರ ಪರ್ಯಟನೆ ಅಥವಾ ಆಡಳಿತ ಹೊಣೆಗಾರಿಕೆಗಳನ್ನು ನಾನು ಅವರಿಗೆ ಒಪ್ಪಿಸಿದಾಗ ಅವು ಕುಂಠಿತಗೊಳ್ಳಲೂ ಇಲ್ಲ.

ಸುಮಾರು ಅರವತ್ತರ ದಶಕದ ಮಧ್ಯಭಾಗದಲ್ಲಿ ನಾವು ಮಂಡ್ಯದಲ್ಲಿ ಮತ್ತೆ ಕಲೆತೆವು. ಇವರನ್ನು ಮಂಡ್ಯದ ಪುನಶ್ಚೇತನ ಕೇಂದ್ರದಲ್ಲಿ ತರಗತಿಯ ಉಪನ್ಯಾಸಗಳಿಗಾಗಿಯೂ ಮತ್ತು ಕ್ಷೇತ್ರ ಕಾರ್ಯಗಳಿಗಾಗಿಯೂ ನಿಯೋಜಿಸಲಾಗಿದ್ದಿತು. ಇವರು ಕನ್ನಡದಲ್ಲಿ ಬರೆಯುತ್ತಿದ್ದ ನಾವೀನ್ಯ ಲೇಖನಗಳು ಆಧುನಿಕವೂ ಮತ್ತು ಹೊಸ ಶೈಲಿಯಿಂದ ಕೂಡಿ (ಇದು ಮಂಡ್ಯದಲ್ಲಿ ಪರಾಕಾಷ್ಠೆಯನ್ನು ಮುಟ್ಟಿದ್ದಿತು) ನನ್ನಂತಹ ಹೊಸಬನೊಬ್ಬನನ್ನೇ ಅಲ್ಲ, ಸಾಹಿತ್ಯ ಕ್ಷೇತ್ರದಲ್ಲಿ ನುರಿತ ಬರಹಗಾರರನ್ನೂ ಉದ್ದೀಪನಗೊಳಿಸುತ್ತಿದ್ದಿತು.

ಇವರು ಆತ್ಮಸಂಯಮದಿಂದ ಮತ್ತು ಸತತ ಪ್ರಯತ್ನದಿಂದಾಗಿ ಒಳಗೆ ಹುದುಗಿದ್ದ ಪ್ರತಿಭೆಯನ್ನು ಮತ್ತೆ ಮತ್ತೆ ಹಿಡಿತದಲ್ಲಿಟ್ಟುಕೊಳ್ಳುತ್ತ ತಮ್ಮ ಪ್ರಕಟಣೆಗಳನ್ನು ಪುಂಖಾನುಪುಂಖವಾಗಿ ಹೊರತಂದರು. ಅದು ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಮುಟ್ಟಿದುದರಿಂದ ಇದರ ಒಂದು ಪ್ರಕಟಣೆಯನ್ನು ಪದವಿ ತರಗತಿಗೆ ಪಠ್ಯಪುಸ್ತಕವನ್ನಾಗಿಸಿತು.

ಇದೆಲ್ಲವೂ ಎಂದಿಗೂ ಅವರ ಪುನಶ್ಚೇತನ ಕೇಂದ್ರದ ತಮ್ಮ ಕೆಲಸದ ನಡುವೆ ಅಡ್ಡಿಯಾಗಲಿಲ್ಲ. ಸಿಡುಬು ರೋಗ ನಿರ್ಮೂಲನದ ಹಂತದಲ್ಲಿದ್ದಿತು. ರಾಸರು ತಮ್ಮ ಶಕ್ತಿಮೀರಿ ಈ ಪ್ರಾಮುಖ್ಯದ ಕೆಲಸದಲ್ಲಿ ತೊಡಗಿಸಿಕೊಂಡರು. ಅವರು ಹಳ್ಳಿಗಳಿಗೆ ಒಬ್ಬರಾಗಿಯೋ ಅಥವಾ ಸಹಾಯಕರೊಡನೆಯೋ ಕ್ರಮಬದ್ಧವಾಗಿ ಶ್ರದ್ಧೆಯಿಂದ ಮನೆ ಮನೆಗಳ ಬಾಗಿಲುಗಳನ್ನು ತುಳಿಯುತ್ತ ದುಡಿದರು. ಗ್ರಾಮೀಣ ಗೃಹಸ್ಥರು, ಇಂತಹ ವಿದ್ವಾಂಸನೊಬ್ಬನು ಸಮಾಜ ಕಲ್ಯಾಣ ಕಾರ್ಯಕ್ಕಾಗಿ ತಮ್ಮ ಮನೆಯ ಬಾಗಿಲಿಗೆ ಬಂದಿರುವನೆಂಬುದನ್ನು ಅರಿತರೇನೆಂಬುದನ್ನು ಕುರಿತು ನಾನು ಆಗಾಗ ಅಚ್ಚರಿಪಡುತ್ತಿದ್ದೆನು. ಬಹುಶಃ ಎಲ್ಲಿಯೋ ಕೆಲವು ಸರಕಾರಿ ಉದ್ಯೋಗಿಗಳು ಮಾತ್ರ ಇದನ್ನು ತುಷ್ಟರಾಗಿ ಕಂಡಿರಬೇಕು.

ಅಂತಹ ಒಂದು ಭೇಟಿಯ ಸಂದರ್ಭದಲ್ಲಿ ಬೆಂಗಳೂರಿನಿಂದ ಒಬ್ಬ ತನಿಖಾಧಿಕಾರಿ, ಹತ್ತಿರದ ಹಳ್ಳಿಯೊಂದಕ್ಕೆ, ರಾಜ್ಯದ ಸಿಡುಬು ಹಾಕಿದ ನೋಂದಣಿ ಪುಸ್ತಕವನ್ನು ಪರೀಕ್ಷಿಸಿ ನೋಡಲೆಂದು ಬಂದನು. ಈ ದಾಖಲೆ ತುಂಬ ದೊಡ್ಡದು. ಕ್ಷೇತ್ರದಲ್ಲಿ ಉಪಯೋಗಿಸುತ್ತಿದ್ದ ಕರಡು ದಿನಚರಿಯಲ್ಲಿ ಗುರುತಿಸಿದ್ದುದನ್ನು ರಾಜ್ಯಮಟ್ಟದ ಪುಸ್ತಕಕ್ಕೆ ಹಾಕಬೇಕಾಗಿದ್ದಿತು. ಕ್ಷೇತ್ರದ ಕೆಲಸಗಾರರು ಸಾಧಾರಣವಾಗಿ ಈ ತಃಖ್ತೆಗಳನ್ನು ಮಧ್ಯಾಹ್ನ ಕಛೇರಿಯಲ್ಲಿ ಕುಳಿತು ಮಾಡುತ್ತಿದ್ದರು. ಆ ಅಧಿಕಾರಿ ತಮ್ಮ ಕೋಪದ ಭರದಲ್ಲಿ ಆ ದಾಖಲೆಯನ್ನು ತುಯ್ದೆಸೆದನು. ಇದು ನನ್ನನ್ನು ಪೇಚಿಗೆ ಸಿಕ್ಕಿಸಿತು. ನನ್ನ ಮುಖಭಾವವನ್ನರಿತ ನನ್ನ ಸುತ್ತಣಿದ್ದವರು, ಒಳಗಣಿಂದ ಒತ್ತಿಬರುತ್ತಿದ್ದ ನನ್ನ ಭಾವೋದ್ರೇಕವನ್ನು ಕಂಡರು. ರಾಸರು ಕೂಡ ತಮ್ಮ ಎದೆಯಾಳದಲ್ಲಿ ನೋವನ್ನು ಉಂಡಿರಬೇಕು. ಆದರೆ ಅವರು ಶಾಂತಚಿತ್ತರಾಗಿ ಸಮಾಧಾನಗೊಂಡರು ; ಮನಸ್ಸನ್ನು ಸ್ಥಿಮಿತದಲ್ಲಿ ರಿಸಿಕೊಂಡಿದ್ದರು. ಇದು ಅವರು ಮನಸ್ಸಿನಿಂದ ಮಾತಿನಿಂದ ಮತ್ತು ಕೃತಿಯಿಂದ ಏನೆಷ್ಟು ಪಕ್ವವಾಗಿದ್ದರು ಎಂಬುದನ್ನು ತೋರಿಸುತ್ತದೆ.

೧೯೬೭ರ ಉತ್ತರಾರ್ಧದಲ್ಲಿ ನನಗೆ ಬೆಂಗಳೂರಿಗೆ ವರ್ಗವಾಯಿತು. ನನ್ನ ಬೀಳ್ಕೊಡಿಗೆಯ ಸಮಾರಂಭದಲ್ಲಿ ಆವರು ಮಾಡಿದ ಆಶುಭಾಷಣದ ವಾಗ್ವೈಖರಿ ನನ್ನ ಮನಸ್ಸಿನಲ್ಲಿ ಈಗಲೂ ಹಸಿರಾಗಿ ನಿಂತಿದೆ.

ಅವರ ಹಿಂದಣ ಸಂಕಟಮಯ ಸನ್ನಿವೇಶಗಳ ಹಲವನ್ನು ನಾನು ಬೇಕೆಂತಲೇ ಕೈಬಿಟ್ಟಿದ್ದೇನೆ.

ಇವರ ಗುಂಪು ಅಭಿವೃದ್ಧಿಗೊಳ್ಳಲಿ.

ಅವಜ್ಞೆಗೆ ಒಳಗಾದ ಕತೆಗಾರ

ಎಂ. ಎನ್. ವ್ಯಾಸರಾವ್

ಇಪ್ಪತ್ತನೆಯ ಶತಮಾನದ ಮೂರನೆಯ ದಶಕವು ಕನ್ನಡ ಸಾಹಿತ್ಯದ ಪುನರುಜ್ಜೀವನ ಕಂಡಂಥ ಮಹತ್ವದ ಕಾಲ.ಗುಣಗಾತ್ರದಲ್ಲಿ ಮಾತ್ರವಲ್ಲ ವೈವಿಧ್ಯತೆಯಲ್ಲಿಯೂ ಕನ್ನಡ ಸಾಹಿತ್ಯ ಶ್ರೀಮಂತ ವೈಭವದಿಂದ ಮೆರೆಯುವುದನ್ನು ಗುರುತಿಸಬಹುದು. ಕಾವ್ಯ, ಕಾದಂಬರಿ, ಸಣ್ಣಕತೆ ಈ ಮೂರೂ ತ್ರಿವೇಣಿ ಸಂಗಮದಂತೆ ಕೂಡಿ ಬೆಳೆದಿರುವುದು ವೇದ್ಯವಾಗುತ್ತದೆ. ನೈತಿಕ ಮೌಲ್ಯಗಳ, ತಾತ್ವಿಕ ಚಿಂತನೆಯ ಹಾಗೂ ಜೀವನಾನುಭವಗಳ ಸ್ಪಷ್ಟಚಿತ್ರಣ ಈ ಕ್ಷೇತ್ರಗಳಲ್ಲಿ ದಟ್ಟವಾಗಿ ಮೂಡಿ ಬಂದಿವೆ. ಕುವೆಂಪು ಅವರ ಕಾವ್ಯ ಹಾಗೂ ಕಾದಂಬರಿಗಳು ಬೇಂದ್ರೆಯವರ ಕಾವ್ಯ ಕಾರಂತರ ಕಾದಂಬರಿಗಳೂ ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ, ಮಾಸ್ತಿಯವರ ಸಣ್ಣಕತೆ ಹಾಗೂ ಕವನಗಳು ಪು.ತಿ.ನ. ಅವರ ಕಾವ್ಯಗಳು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸುವುದರಲ್ಲಿ ಮುಖ್ಯವಾದವು. ನವೋದಯುದ ಈ ಕಾಲದಲ್ಲೇ ಗೋಪಾಲಕೃಷ್ಣ ಅಡಿಗರು ಬೆಟಗೇರಿ ಕೃಷ್ಣಶರ್ಮ, ಜಿ. ಪಿ. ರಾಜರತ್ನಂ, ಕಡೆಂಗೊಂಡ್ಲು ಶಂಕರಭಟ್ಟ, ಕೆ. ಎಸ್. ನರಸಿಂಹಸ್ವಾಮಿ, ಮುಂತಾದವರು ನವೋದಯ ಪಂಥಕ್ಕೆ ತಮ್ಮ ಕೃತಿಗಳನ್ನು ಸಲ್ಲಿಸಿದ್ದಾರೆ.

ಇದೇ ಸಮಯದಲ್ಲಿ ಸಮಾಜದ ಎಲ್ಲ ಮುಖಗಳನ್ನೂ, ಅದರಲ್ಲಿಯೂ ಮಧ್ಯಮ ವರ್ಗದ ಜನಜೀವನವನ್ನು ಸಮಗ್ರವಾಗಿ ಕಂಡಿದ್ದ ಪ್ರತಿಭಾವಂತ ಮೇಧಾವಿಗಳಿಂದ ಕಾಂದಬರಿಯ ಹೊಸ ಸುಗ್ಗಿಯೇ ಕಾಣಿಸಿಕೊಳ್ಳುತ್ತದೆ.

ಅದ್ಭುತ ಕಲ್ಪನಾ ಪ್ರತಿಭೆ, ಲೋಕಾನುಭವ ಸಂಪತ್ತುಳ್ಳ ಸಾಹಿತಿಗಳು ಕನ್ನಡ ಸಾಹಿತ್ಯಕ್ಕೆ ಆ ಮೊದಲು ತೀರಾ ಅಪರಿಚಿತವಾಗಿದ್ದ ಸಾಹಿತ್ಯ ಪ್ರಕಾರಗಳನ್ನು ಬಿತ್ತಿ, ಕಸಿಕಟ್ಟಿ ಸಮೃದ್ಧವಾಗಿ ಬೆಳೆಸಿರುವುದನ್ನು ನೋಡಬಹುದು. ಪಂಜೆ ಮಂಗೇಶರಾಯರು ಮತ್ತು ಎಂ. ಎನ್. ಕಾಮತರು ಸಣ್ಣಕಥೆಗಳ ಮೊದಲ ಆರಂಭಗಾರರಾಗಿದ್ದರೂ. ಸಣ್ಣ ಕತೆಗಳ ಜನಕರೆಂದು ಮಾಸ್ತಿಯವರನ್ನು ಕರೆದಿರುವುದು ಸಮುಚಿತವಾಗಿದೆ.

ಮಾಸ್ತಿಯವರು ಸೃಷ್ಟಿಸಿರುವ ಕತೆಗಳ ಸಂಖ್ಯೆ ಅಪಾರ. ವಸ್ತುವೈವಿಧ್ಯ ಕಥನ ಕೌಶಲ, ಪಾತ್ರರಚನೆ, ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿ, ಭಾವ ರಸಾನುಭವಗಳ ಶ್ರೀಮಂತಿಕೆ ಮುಂತಾದ ಗುಣಗಳಿಂದ ಅವರ ಹಲವು ಕತೆಗಳು ವಿಶ್ವಕಥೆಗಳ ಮಟ್ಟಕ್ಕೆ ಏರುತ್ತವೆ. ಸರಳವೂ, ಹೃದ್ಯವೂ ಅನುಕರಣೀಯವೂ ಆದ ಅವರ ಶೈಲಿಯಿಂದ ಕತೆಗಳ ಘನತೆ ಹೆಚ್ಚಿವೆ. ಮಾಸ್ತಿಯವರಂತೆ ಆ ಕಾಲದಲ್ಲಿ ಬರೆಯಲು ಪ್ರಾರಂಭಿಸಿದ ಅನೇಕ

ಕಿರಿಯ ಲೇಖಕರು ಇಂದೂ ಬರೆಯುತ್ತಾ ಕನ್ನಡ ಕಥಾ ಸಾಹಿತ್ಯದಲ್ಲಿ ತಮ್ಮ ತಮ್ಮ ಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ.

ಹಿಂದಿನಿಂದಲೂ ಬರೆಯುತ್ತಾ ಬಂದಿರುವ ಅನೇಕ ಲೇಖಕರಲ್ಲಿ ಸಮೇತನಹಳ್ಳಿ ರಾಮರಾಯ ಅವರೂ ಒಬ್ಬರಾಗಿದ್ದಾರೆ. ರಾಮರಾಯರು ಹಲವಾರು ಪ್ರಕಾರಗಳಲ್ಲಿ ಬರೆದು ಹೆಸರು ಮಾಡಿದವರು. ಕಾದಂಬರಿ, ನಾಟಕ, ಕಾವ್ಯ, ಸಣ್ಣಕತೆ—ಹೀಗೆ ಬೇರೆ ಬೇರೆ ಬರೆದಿದ್ದರೂ ಅವರ ಒಲವು ಇರುವುದು ಐತಿಹಾಸಿಕ ವಸ್ತುಗಳಲ್ಲಿ. ಹಾಗೆ ನೋಡಿದರೆ ರಾಮರಾಯರು ಬರೆದಿರುವುದು ಸಂಖ್ಯೆಯ ದೃಷ್ಟಿಯಿಂದ ಕಡಿಮೆ ಎನ್ನಬಹುದು. ಒಟ್ಟು ಸಾಹಿತ್ಯ ಕೃತಿಗಳು ಇಪ್ಪತ್ತಒಂಬತ್ತು. ಇವುಗಳಲ್ಲಿ ಹತ್ತು ನಾಟಕಗಳಿವೆ, ಒಂಬತ್ತು ಕಾದಂಬರಿಗಳು, ಒಂದು ಗೀತ ನಾಟಕ, ಮಹಾಕಾವ್ಯ ಒಂದು, ನಾಲ್ಕು ಸಣ್ಣ ಕತೆಗಳ ಸಂಗ್ರಹ. ಎರಡು ಅನುವಾದಗಳು ಎರಡು ಜೀವನ ಚಿತ್ರಣಗಳು. ಬಹು ಪಾಲು ನಾಟಕಗಳು ಮತ್ತು ಕಾದಂಬರಿಗಳು ಐತಿಹಾಸಿಕವಾದವುಗಳು.

ಇವರ ಕಥಾ ಸಂಕಲನಗಳಾದ 'ಪ್ರಾಣವೀಣೆ,' 'ಸ್ವರ್ಗಸೋಪಾನ' 'ಈಸಬೇಕು' ಕನ್ನಡ ಕಥಾಲೋಕಕ್ಕೆ ಅಪೂರ್ವ ಕೊಡುಗೆಗಳಾಗಿವೆ. ಸಮೇತನಹಳ್ಳಿರಾಯರಾಯರ ಬದುಕು ಎಷ್ಟೊಂದು ಕಷ್ಟಕರವಾಗಿದ್ದವೋ, ಅವರು ಅನುಭವಿಸಿದ ಬಡತನದ ಎಲ್ಲ ಬವಣೆಗಳೂ ಒಂದಲ್ಲಾ ಒಂದು ಹಂತದಲ್ಲಿ ಅವರ ಸಾಹಿತ್ಯಕೃತಿಗಳಲ್ಲಿ ಮೂಡಿಬಂದಿವೆ. ಪಟ್ಟಪಾಡನ್ನೆಲ್ಲ ಹುಟ್ಟು ಹಾಡಾಗಿಸಿದವರು ರಾಮರಾಯರು. ಬಡತನ ಕೆಲವರ ಪಾಲಿಗೆ ಶತ್ರುವಾಗಿ ಬಂದಿದ್ದರೆ, ರಾಮರಾಯರ ಪಾಲಿಗೆ ವರವಾಗಿ ಪರಿಣಮಿಸಿದೆ. ಜೀವನದ ನೋಟವನ್ನೇ ಬದಲಿಸುವ ಅನುಕಂಪ, ಮಾನವೀಯತೆಯನ್ನು ಅರಳಿಸುವ ಕೀಳರಿಮೆಯ ಬದಲು ಆತ್ಮಸ್ಥೈರ್ಯವನ್ನು ಬೆಳೆಸುವ ಸಾಧನವಾಗಿ ಬಡತನ ಇಲ್ಲಿ ಕ್ರಿಯಾಶೀಲವಾಗಿದೆ. ಆದುದರಿಂದಲೇ ರಾಮರಾಯರ ಕತೆಗಳು ಮಧ್ಯಮ ವರ್ಗದ ಕುಟುಂಬಗಳಿಗೆ ಹೆಚ್ಚು ಹತ್ತಿರವಾಗಿರುವುದು. ಇನ್ನೊಂದು ಮುಖ್ಯವಾದ ಗುಣವೆಂದರೆ, ಈರ್ಷೆ ಇಲ್ಲದ ಸಮಾಜ ಸೃಷ್ಟಿಸುವುದು ಇಲ್ಲಿನ ಕತೆಗಳ ಗುಣ. ಪ್ರೀತಿ, ಸ್ನೇಹ, ಕರುಣೆ ಮುಂತಾದ ಸ್ವಭಾವಗಳು ಮಾನವನಲ್ಲಿ ಸಹಜವಾಗಿಯೇ ಇರುವಂಥದು. ಒಳಿತನ್ನೇ ಬಯಸುವ ಒಳಿತಿಗಾಗಿ ಶ್ರಮಿಸುವ ಒಳಿತನ್ನೇ ಕಾಣುವ ಮನಸ್ಸೊಂದು ಈ ಕತೆಗಳ ಹಿಂದೆ ಕೆಲಸಮಾಡಿರುವುದನ್ನು ಗಮನಿಸಬಹುದು. 'ಪ್ರಾಣವೀಣೆ' ಸಂಗ್ರಹದ 'ತಾಯಿ' ಹಾಗೂ 'ಬೆಂದಬಾಳು', 'ಒರೆಗಲ್ಲು' ಮುಂತಾದ ಕತೆಗಳಲ್ಲಿ ಮೇಲಿನ ಅಂಶಕ್ಕೆ ಪುಷ್ಟಿ ಕೊಡುತ್ತದೆ.

"ಜನಜೀವನವನ್ನು ಉತ್ತಮಗೊಳಿಸಬಲ್ಲ ಸಾಹಿತ್ಯಸೃಷ್ಟಿಗೆ ಸುಜ್ಞಸಮಾಜ ಎಂದೂ ಕೃಪಣತೆಯಿಂದ ಇರಲಾರದು. ಮನಸಿದ್ದರೆ ಸಾಕು ಅಡ್ಡಿ ಬರುವ ಸಾಂಪತ್ತಿಕ ನೂರು ಅಡಚಣೆಗಳನ್ನೂ ಅದು ನಿವಾರಿಸಿಕೊಳ್ಳಬಲ್ಲದು." ಇದು ರಾಮರಾಯರು ನಂಬಿಕೊಂಡು ಬಂದಿರುವ ತತ್ವ. ಅದಕ್ಕಾಗಿಯೆ ಅವರು ಬರೆಯುತ್ತಿರುವುದು. ನವೋದಯ ಕಾಲದ ಲೇಖಕರಲ್ಲಿ ಪ್ರಧಾನವಾಗಿದ್ದ ಮನೋಧರ್ಮ ಇದೇ ಆಗಿತ್ತು. ಮಾಸ್ತಿ

ಯವರ ಕತೆಗಳಲ್ಲಿ ಬರುವ ಪಾತ್ರಗಳು ಈ ಮನೋಧರ್ಮವನ್ನು ಹೊಂದಿದ್ದವು. ಯಥಾಸ್ಥಿತಿಯ ಬದುಕಿನ ವಿವರಗಳಾಗಲಿ, ಪಾತ್ರಗಳ ನಡೆನುಡಿಯಾಗಲಿ, ನೇರವಾಗಿ ದ್ದುದರಿಂದಲೇ ಸಮಾಜದ ಓರೆಕೋರೆಗಳು ಪ್ರಮುಖವೆನಿಸದೆ ದೈವಕ್ಕೋ ಹಣೆಬರ ಹಕ್ಕೊ ಹೋಲಿಸಿರುವ ಪ್ರಸಂಗಗಳನ್ನು ಕಾಣಬಹುದು. ಸರಳತನ ಸಜ್ಜನಿಕೆಗಳ ಹಿಂದೆ ಕೆಲಸ ಮಾಡುವ ಪಾಪಪ್ರಜ್ಞೆಯ ಎಚ್ಚರ ಬಹುಶಃ ಈ ಕತೆಗಳ ಸೃಷ್ಟಿಕಾರ್ಯದ ವೇಳೆ ಯಲ್ಲಿ ಕೆಲಸ ಮಾಡಿರಬಹುದು. ರಾಮರಾಯರ ಕತೆಗಳು ಇವುಗಳನ್ನೇ ಬಹುಪಾಲು ಬಿಂಬಿಸುತ್ತವೆ. ಆದ್ದರಿಂದಲೇ ಇವರ ಕತೆಗಳನ್ನು ಓದಿದಾಗ ನನ್ನ ಮುಂದೆ ಒಂದು ಶಿಷ್ಟ ಸಮಾಜದ ಕಲ್ಪನೆ ಬಂದು ನಿಲ್ಲುತ್ತದೆ. ಈ ಸಮಾಜದ ಮೇಲೆ ಇನ್ನೂ ಆಧುನಿಕತೆ ದಾಳಿಮಾಡಿಲ್ಲ. ಭಾರತೀಯ ಸಂಸ್ಕೃತಿಯ ಚೌಕಟ್ಟಿನಲ್ಲೇ ಉಳಿದು ಪರಂಪರಾನುಗತವಾಗಿ ಬಂದಿರುವ ಸುಸಂಸ್ಕೃತ ಜೀವನಕ್ರಮವನ್ನೇ ಗುರುತಿಸಿ ಉಳಿದದ್ದನ್ನು ಕೈಬಿಡಲೂ ಹಿಂಜರಿ ದಿಲ್ಲ. ಇದು ಒಂದು ಮುಖವಾದರೆ, ತನ್ನ ಶಕ್ತಿ ಸಾಧ್ಯತೆಯಿಂದಲೇ ಮೇಲೆ ಬರುವ ಉತ್ಕಟ ಬಯಕೆ ಇನ್ನೊಂದು ಮುಖವಾಗಿದೆ. ದ್ವಂದ್ವವಿಲ್ಲದ ಮನಸ್ಸು, ಒಪ್ಪಿಕೊಂಡ ಬದುಕಿನಾಚೆಗೆ ಜಿಗಿಯಲಾರದು. ಬರಹದ ಅನ್ವೇಷಣೆ ಬದುಕಿನ ಅನ್ವೇಷಣೆಯೂ ಹೌದು. ಕಠೋರವಾದ ಸತ್ಯಗಳನ್ನು ಹೊರತೆಗೆಯದೆ ಕೃತಕಮುಖವಾಡಗಳನ್ನು ಕಿತ್ತು ಹಾಕದೆ ದ್ವೈತಪ್ರಕ್ರಿಯೆಗೆ ಒಳಗಾಗದ ಹೊರತು, ಸಮಾಜದ ಎದುರು ಮುಖಾಮುಖಿ ಆಗದ ಹೊರತು ಶಿಷ್ಟ ಸಮಾಜದ ಕಲ್ಪನೆ ಕೇವಲ ಕಲ್ಪನೆಯಾಗಿಯೇ ಉಳಿದುಬಿಡು ತ್ತದೆ. ಈ ಅಪಾಯದ ಎಚ್ಚರ ರಾಮರಾಯರ ನಂತರದ 'ಈಸಬೇಕು' ಕತೆಗಳಲ್ಲಿ ವ್ಯಕ್ತ ವಾಗಿರುವುದನ್ನು ಗಮನಿಸಬಹುದು. ಆದರೂ ಸಮಾಜದ ಧೂರ್ತ ವ್ಯಕ್ತಿಗಳನ್ನು ಎದು ರಿಸಲಾಗದ ಅಸಹಾಯಕತೆ ತಲೆಹಾಕಿರುವುದರಿಂದ ಸೌಮ್ಯತನದಲ್ಲೇ ಉಳಿದುಬಿಡುತ್ತವೆ. ವ್ಯಕ್ತಿತ್ವ ಬೆಳೆಯುವುದು ವ್ಯಕ್ತಿಯ ಚಿಂತನೆಗಳಿಂದ ಸಮಾಜದ ಬಗ್ಗೆ ಕಾಳಜಿ ತೋರುವ ಮನೋಧರ್ಮಗಳಿಂದ. ಹಾಗೂ ಧರ್ಮದ ಎದುರು ಮುಖಾಮುಖಿಯಾಗಿ ನಿಂತು ತನ್ನ ಪ್ರಭಾವ ಅವರ ಮೇಲೆ ಬೀರುವಂತೆ ಮಾಡುವುದರಿಂದ ಪಾತ್ರಗಳು ಗಟ್ಟಿಯಾಗುತ್ತವೆ. ಸಣ್ಣ ಕಿಡಿಯಿಂದ ದಳ್ಳುರಿಯನ್ನೂ ಎಬ್ಬಿಸಬಹುದು. ನಂದಾದೀಪದ ಕುಡಿಯನ್ನೂ ಬೆಳಗಿಸಬಹುದು. 'ತಾಯಿ' ಕತೆಯು ಉದ್ದಕ್ಕೂ ಹಳ್ಳಿಯನ್ನು ರಣರಂಗಗೊಳಿಸುವಷ್ಟು ಘಟನೆಗಳಿದ್ದರೂ, ಶಾಂತವಾದ ನಿರ್ಮಲ ನಂದಾದೀಪ ಸದೃಶವಾದ ಗುಣಗಳು ಕತೆ ಯನ್ನು ಹೊಸ ದಿಕ್ಕಿಗೆ ನೋಡುವಂತೆ ಮಾಡಿದೆ. ಹಳ್ಳಿಯ ಜನ ಆಡಿಕೊಳ್ಳುತ್ತಿದ್ದ ಮಾತುಗಳಿಗೆ ಕಿವಿ ಕೊಟ್ಟ ಮಗ ಅವಿವೇಕದಿಂದ ತನ್ನ ಪ್ರಾಣವನ್ನು ತೆಗೆದು ಹಾಕಿದ ಮೇಲೂ ಆ ತಾಯಿಯ ಒಡಲು ಮಗನ ಕ್ಷೇಮವನ್ನೇ ಬಯಸುತ್ತದೆ. ಅಸಾಧಾರಣ ವಾದ ಮನೋಜ್ಞವಾದ ಈ ಕತೆ ಭಾರತೀಯ ಸಂಸ್ಕೃತಿಯಲ್ಲಿ ತಾಯಿಗಿರುವ ಮಹತ್ವ ವನ್ನು ಎತ್ತಿತೋರಿಸುತ್ತದೆ.

'ಸ್ವರ್ಗಸೋಪಾನ' ಸಂಗ್ರಹದಲ್ಲಿ ನಾಲ್ಕು ಕತೆಗಳಿವೆ ಇವುಗಳ ಬಗ್ಗೆ ಲೇಖಕರೆ ಹೇಳುವಂತೆ,. ಇವು ಉಚ್ಚ ಪರಂಪರೆಯನ್ನು ಬಿಂಬಿಸುವ, ಜೀವನದ ಪರಿಪೂರ್ಣತೆ

ಯನ್ನು ಸಾಧಿಸುವ, ಚೆಲುವನ್ನು ಕಾಣುವ, ಶಾಶ್ವತ ಸತ್ಯಗಳನ್ನು ಎತ್ತಿ ಹಿಡಿಯುವ ಚಿತ್ರಣವಾಗಿವೆ. ಇಲ್ಲಿನ ಕತೆಗಳು ಮಹಾಭಾರತದ ಪ್ರಸಂಗಕ್ಕೆ ಸಂಬಂಧಪಡಿಸಿದಂಥವು. ಈ ಕತೆಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ರಾಮರಾಯರು ಅಲ್ಲಿನ ಪಾತ್ರಗಳನ್ನು ಈ ಕಾಲಕ್ಕೆ ಇಳಿಸಿ ತಮ್ಮ ಆಲೋಚನೆಗಳನ್ನು ಆ ಪಾತ್ರಗಳ ಮುಖಾಂತರ ವ್ಯಕ್ತಪಡಿಸಿರುವುದು. ಪ್ರಸಂಗಗಳು ಒಂದೇ ಆದರೂ ಹೇಳುವ ರೀತಿ ಬೇರೆಯಾಗಿದೆ. ಸಂಸ್ಕೃತಿಯ ಮೇಲೆ ಹೆಚ್ಚು ಒತ್ತು ಬಿದ್ದಿದೆ. ತಾವು ಈ ಕತೆಗಳನ್ನು ಬರೆಯುವ ಉದ್ದೇಶವನ್ನು ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಹೀಗಾಗಿ ಕತೆಗಳು ಅದರ ಮಿತಿಯಲ್ಲೇ ಕೆಲಸಮಾಡುತ್ತವೆ. ಉದ್ದೇಶ ಸಫಲವಾದರೂ ಪ್ರಶ್ನೆಗಳಿಗೆ ಅವಕಾಶ ವಿಲ್ಲ. ಮಹಾಭಾರತದಂತಹ ಕತೆಯನ್ನು ಪ್ರಶ್ನಿಸುವುದು ಉದ್ಧಟತನವೆಂಬ ಅರಿವಿನಲ್ಲೇ ಈ ಕತೆಗಳನ್ನು ನೋಡಬೇಕಾಗುತ್ತದೆ.

'ಈಸಬೇಕು' ಕಥಾಸಂಗ್ರಹದಲ್ಲಿ ಮೂರುಕತೆಗಳಿವೆ 'ಅಭಿಸಾರಿಕಾ' ಒಬ್ಬ ನಾಟ್ಯ ಪ್ರವೀಣೆಯನ್ನು ಕುರಿತು ಬರೆದದ್ದು. 'ಪುರುಷೋತ್ತಮ' ಕಷ್ಟಪಟ್ಟು ಸಮಾಜದ ಪ್ರತಿ ಷ್ಠಿತ ವ್ಯಕ್ತಿಯಾಗುವ ಕುರಿತು ಮೂಡಿದ್ದು, ಹಾಗೂ 'ಹಳ್ಳಿಯ ನ್ಯಾಯ' ಹೆಸರೇ ಸೂಚಿಸುವಂತೆ ಹಳ್ಳಿಗಳಲ್ಲಿನ ರಾಜಕೀಯ ಪುಂಡತನಗಳನ್ನು ಕುರಿತದ್ದು.

ಅಭಿಸಾರಿಕೆ–ದೇವೋಜ ಹಾಗೂ ಮಲ್ಲಿಕಾರ ಪ್ರೇಮಕ್ಕೆ ಸಂಬಂಧಿಸಿದ ಕತೆ.ರಾಮ ರಾಯರು ಇತಿಹಾಸವನ್ನು ಹೇಳುವುದರಲ್ಲಿ ಅಗ್ರಮಾನ್ಯರು. ಸಾಮಾಜಿಕ ಕತೆಗಳಿಗಿಂತ ಐತಿಹಾಸಿಕ ಕತೆಗಳಲ್ಲಿ ರಾಮರಾಯರ ಮನಸ್ಸು ಹೆಚ್ಚು ಕ್ರಿಯಾಶೀಲವಾಗುತ್ತದೆ ಎನ್ನುವು ದಕ್ಕೆ 'ಅಭಿಸಾರಿಕಾ' ಒಂದು ಉದಾಹರಣೆ. 'ತಲಕಾಡುಗೊಂಡ' 'ಶಿಲ್ಪಸಂಗೀತ' 'ಸವತಿ ಗಂಧವಾರಣೆ' 'ದ್ರೋಹಾಡಂಬರ' 'ನೃತ್ಯಸರಸ್ವತಿ' 'ನಾಟ್ಯ ಮಂದಾರ' 'ಸಿರಿಯಲ ದೇವಿ' 'ಯದುವೊಡೆಯ' ಮುಂತಾದ ನಾಟಕ, ಕಾದಂಬರಿಗಳನ್ನು ಸಾರಸ್ವತ ಲೋಕಕ್ಕೆ ನೀಡಿದ ರಾಮರಾಯರದ್ದು ಐತಿಹಾಸಿಕ ಕಥಾ ಸೃಷ್ಟಿಯಲ್ಲಿ ಮೇಲುಗೈ. ಬಹಳ ಗಂಭೀರ ವಾದ ಶೈಲಿ, ಪಾತ್ರಗಳ ಪೋಷಣೆ, ಕಣ್ಣಿಗೆ ಕಟ್ಟುವಂತೆ ಹೇಳುವ ಘಟನೆಗಳು ರಾಮ ರಾಯರನ್ನು ಒಬ್ಬ ಶ್ರೇಷ್ಠಕತೆಗಾರರನ್ನಾಗಿ ಮಾಡಿವೆ. ಇಂತಹ ಕತೆಗಳಲ್ಲಿ ರಾಮರಾಯ ರನ್ನು ಸರಿಗಟ್ಟುವ ಲೇಖಕರು ತುಂಬಾ ವಿರಳವೆಂದೇ ಹೇಳಬಹುದು. ಜನಪ್ರಿಯ ಕಾದಂಬರಿಕಾರ ತರಾಸು, ಮ.ನ. ಮೂರ್ತಿ ಮುಂತಾದ ಕೆಲವರನ್ನು ಬಿಟ್ಟರೆ ಅವರ ಸರಿಸಾಟಿಯಾಗಿ ನಿಲ್ಲಬಲ್ಲವರು ಸಮೇತನಹಳ್ಳಿ ರಾಮರಾಯರೇ ಎನ್ನಬಹುದು.

ಸರಳವಾದ ಭಾಷೆ, ಮನಕಲಕುವ ಸನ್ನಿವೇಶ ನಿರ್ಮಾಣ, ಸ್ವಭಾವ ಜನ್ಯ ಪಾತ್ರ ಸೃಷ್ಟಿ, ವಸ್ತುವಿನ ಚೌಕಟ್ಟಿನೊಳಗೆ ಪರಿಪೂರ್ಣತೆಯನ್ನು ಕಾಣಿಸುವ ಪ್ರಯತ್ನ, ಸಜ್ಜ ನಿಕೆ, ಅಂತಃಕರಣ ಮನೋಭಾವ ಬಿಂಬಿಸುವ ರಾಮರಾಯರ ಕತೆಗಳು ಸದ್ಯದ ಸಾಮಾ ಜಿಕ ಜೀವನದಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತವೆ. ಒಂದು ಕಾಲದ ಮಿತಿ ಯಲ್ಲಿ ಬರೆದ ಈ ಕತೆಗಳು ಕಾಲದ ಗಡಿಯನ್ನು ದಾಟಿ ಸಾರ್ವತ್ರಿಕತೆಯನ್ನು ಪಡೆದು ಕೊಂಡಿವೆ. ಆದರೆ ರಾಮರಾಯರು ಸಾರಸ್ವತ ಲೋಕದಲ್ಲಿ ಇನ್ನೂ ಎಲೆಮರೆಯಾಗಿಯೇ

ಉಳಿದಿರುವುದು ಆಶ್ಚರ್ಯದ ಸಂಗತಿ. ಮಾಸ್ತಿಯವರನ್ನು, ಬೆಟಗೇರಿ ಕೃಷ್ಣಶರ್ಮರನ್ನು, ಆನಂದರನ್ನು, ಅಶ್ವತ್ಥರನ್ನು ನೆನೆಯುವ ವಿಮರ್ಶಕರು ರಾಮರಾಯರನ್ನೂ,ಅವರ ಕೃತಿಗಳನ್ನೂ ನೆನೆಯದಿರುವುದು ದುರಂತವೇ ಸರಿ.ಹೆಚ್ಚಿನ ಬೆಳಕಿಗೆ ಬರೆದ ಜನರಿಂದ ದೂರವೇ ಉಳಿದ ರಾಮರಾಯರನ್ನು ಸಾರಸ್ವತ ಲೋಕ ಅವಜ್ಞೆಗೆ ಗುರಿಪಡಿಸಿರುವುದು ನಿಜಕ್ಕೂ ದುಃಖಕರ ಸಂಗತಿ. ಈಗಿನ ಎಷ್ಟೋ ವಿಮರ್ಶಕರಿಗೆ ಸಮೇತನಹಳ್ಳಿ ರಾಮರಾಯರು ತಿಳಿಯದೇನೆ ಇರಬಹುದು. ಈಗಲಾದರೂ ಅವರ ಕೃತಿಗಳ ಕಡೆಗೆ ಗಮನ ಹರಿಸಿ ಹಂಸಕ್ಷೀರದ ಮನೋಧರ್ಮದಿಂದ ಅವರ ಸಾಹಿತ್ಯದ ಬಗ್ಗೆ ಅಧ್ಯಯನ ನಡೆಸಿ ರಾಮರಾಯರಿಗೆ ಸಲ್ಲಬೇಕಾಗಿದ್ದ ಸ್ಥಾನವನ್ನು ದೊರಕಿಸಿ ಕೊಡಲಿ ಅವರ ಕೃತಿ ಪರಿಚಯ ಸಮಸ್ತ ಕನ್ನಡಿಗರಿಗೂ ಆಗುವಂತಾಗಲಿ.

ಷೇಕ್ಸ್ಪಿಯರ್ ಕವಿಯ ನಾಟಕಗಳಲ್ಲಿ ನಾನು ಮೊದಲು ಓದಿದ್ದು 'ಜೂಲಿಯಸ್ ಸೀಸರ್' ನನ್ನ ಬಾಲ್ಯದಲ್ಲಿ, ಇನ್ನೂ ಜ್ಞಾಪಕದಲ್ಲಿದೆ. ತಾವು ಅದನ್ನು ಇಷ್ಟು ಒಳ್ಳೆಯ ಕನ್ನಡಕ್ಕೆ ಪರಿವರ್ತನೆ ಮಾಡಿರುವುದು ನನಗೆ ಬಹು ಸಂತೋಷದ ವಿಷಯ.

ತಮ್ಮ ಶೈಲಿ ನಿರ್ದುಷ್ಟವಾಗಿದೆ : ಬಹು ಚೆನ್ನಾಗಿದೆ.

೯-೧೧-೭೪

ಡಿ. ವಿ. ಗುಂಡಪ್ಪ

ಸನ್ಮಿತ್ರ ಸಮೇತನಹಳ್ಳಿ ರಾಮರಾಯ

ಕೆ. ಅನಂತರಾಮಯ್ಯ

ಸುಮಾರು ಐದು ದಶಕಗಳ ಹಿಂದಿನ ಮಾತು. ಒಂದು ಭಾನುವಾರ ಬೆಳಿಗ್ಗೆ ಡಾಕ್ಟರ್ ಜಗನ್ನಾಥ್ ಅವರ ಔಷಧಾಲಯದಲ್ಲಿ ಡಾಕ್ಟರ್ ತಂದೆ ಸೇತುರಾಮೈಂಗಾರ್ ಮುಂದೆ ಕೂತಿದ್ದೆ. ಅವರು ದೊಡ್ಡ ಟೇಬಲ್‌ನ ಅಂಚಿನಲ್ಲಿ ಚರಕ ಹಿಡಿದು ನೂಲು ತೆಗೆಯುತ್ತಿದ್ದರು. ಅವರು ನಮಗಳಿಗಿಂತ ಹಿರಿಯರು, ಹಸನ್ಮುಖಿ, ಆಜಾನುಬಾಹು. ಕೈ ಕುಲುಕಿದರೆ ಅರ್ಥವಾಗುತ್ತಿತ್ತು ಪೈಲ್ವಾನರೆಂದು. ದೊಡ್ಡ ನಾಮ ಹಣೆಯಲ್ಲಿ, ಮೃದುಭಾಷಿ, ಸ್ನೇಹಮಯಿ. ಡಾಕ್ಟರ್ ಮರದ ತೆರೆಯ ಆಚೆ ರೋಗಿಯನ್ನು ಪರೀಕ್ಷಿಸಲು ಹೋಗಿದ್ದರು. ಅಲ್ಲಿಗೆ ಒಬ್ಬ ಕ್ಷೀಣ ದೇಹದ ಎತ್ತರದ ಮನುಷ್ಯ ಬಂದ. ಖಾಕಿ ಷರಾಯಿ, ಬಿಳಿಯ ಅರ್ಧತೋಳಿನ ಷರಟು ಧರಿಸಿದ್ದ. ಅಗಲವಾದ ಮುಖ, ಅಗಲವಾದ ಕಿವಿಗಳು, ತೀಕ್ಷ್ಣವಾದ ಪ್ರಜ್ವಲಿಸುವ ಕಣ್ಣುಗಳು. ಆತನನ್ನು ಅಭಿಮಾನದಿಂದ ಗೌರವಪೂರ್ವಕವಾಗಿ ಸೇತೂರಾಮೈಂಗಾರ್ಯರು ನಮಸ್ಕಾರ ಹೇಳಿ ಕೂರಲು ಹೇಳಿದರು. ನಾನು ಈತ ಯಾರಿರಬಹುದೆಂದು ನೋಡುತ್ತಿದ್ದ ಹಾಗೆಯೇ ನನಗೆ ಆತನ ಪರಿಚಯ ಮಾಡಿದರು. ಈ ಪರಿಚಯದ ಮುಂದಲಭಾಗವನ್ನು ಒಳಗಿನಿಂದ ಬಂದ ಡಾಕ್ಟರ್ ಮುಂದುವರಿಸಿ ನಮ್ಮ ಆತ್ಮೀಯ ಗುಂಪಿಗೆ ಹೊಸದಾಗಿ ಸೇರಿರುವರೆಂದು ತಿಳಿಸಿದರು. ನಮ್ಮ ಇತರೆ ಮಿತ್ರರೆಂದರೆ ಹೆಚ್. ಬಿ. ಜ್ವಾಲನಯ್ಯ, ಬಿ. ವಿ. ಸತ್ಯನಾರಾಯಣ, ಹಾರನಹಳ್ಳಿ ರಾಮಸ್ವಾಮಿ, ಸಿದ್ದನಂಜಪ್ಪ, ಮಲ್ಲಪ್ಪ, ಶ್ರೀನಿವಾಸ ಅಯ್ಯಂಗಾರ್, ಹನುಮಂತು, ಗುಂಡಪ್ಪ, ಚಂದ್ರಶೇಖರ್, ಲಕ್ಷ್ಮೀನರಸಿಂಹಯ್ಯ, ನಾಗಪ್ಪ. ನೋಡುವಾಗಲೇ ಆಕರ್ಷಿತನಾದ ನಾನು ಸಹೋದರ ಭಾವನೆಯಿಂದಲೇ ನೋಡುವಂತಾಯಿತು. ಯಾವುದೋ ಒಂದು ಮಹಾ ಶಕ್ತಿಯೊಡನಿದ್ದಂತಾಗುತ್ತಿತ್ತು. ಪ್ರತಿ ನಿತ್ಯವೂ ಅದೇ ಜಾಗದಲ್ಲಿ ಸಂಧಿಸುತ್ತಿದ್ದೆ. ದಿನಕಳೆದಂತೆ ಈ ವ್ಯಕ್ತಿಯ ಬಹುಮುಖ ವ್ಯಕ್ತಿತ್ವದ ಪರಿಚಯವೂ ಆಗುತ್ತಾ ಬಂತು.

ಆ ಪರಿಚಯ ಬರಬರುತ್ತಾ ಗಾಢ ಸ್ನೇಹಕ್ಕೆ ತಿರುಗಿತು. ಸ್ನೇಹ ವೃದ್ಧಿಯೂ ಆಗುತ್ತಿತ್ತು. ಕಾರಣ ಸಮಾನ ಚಿಂತನೆಗಳು, ಅದೇನೆಂದರೆ ಸಾಹಿತ್ಯ ಕಲೆಯ ವ್ಯವಸಾಯ ಪ್ರಚಾರ, ಪ್ರವಚನ, ಸದ್ಭಾವನೆಗಳ ಸನ್ಮಾರ್ಗ ಬೆಳೆಸುವ ರೀತಿ ಸಮಾಜಸೇವೆ. ಅಲ್ಲಿಗಾಗಲೇ ಈ ವ್ಯಕ್ತಿ ಸಾಹಿತ್ಯಾಭ್ಯಾಸದಲ್ಲಿ ತುಂಬಾ ಮುಂದೆ ಹೋಗಿದ್ದರು. ಎಲ್ಲ ಬಿಡುವಿನ ಕಾಲವನ್ನು ಸಾಹಿತ್ಯದೇವಿಯ ಸೇವೆಗೆ ಉಪಯೋಗಿಸುತ್ತಿದ್ದರು. ಹಿರಿಯ ಕಿರಿಯ

ಸಾಹಿತಿಗಳ ಗ್ರಂಥಗಳು, ಕಾದಂಬರಿಗಳು ಗದ್ಯ ಪದ್ಯಗಳ ಅಧ್ಯಯನ ಸಾಹಿತ್ಯ ಪ್ರಪಂಚಕ್ಕೆ ಆತನನ್ನು ಬಹುದೂರ ಎಳೆದಿತ್ತು. ಸರಸ್ವತಿದೇವಿಯ ಕೃಪೆಯೂ ಆಗಿ ವ್ಯಕ್ತಿಯ ವಿಕಸನ ನಡೆದಿತ್ತು. ಕನ್ನಡಾಂಬೆಯ ನಮ್ರಸೇವಕರಾಗಿ ಎಲೆಮರೆಕಾಯಿಯಂತೆ ದುಡಿಯುತ್ತಿದ್ದರು. ಇತಿಹಾಸದ ಒಲವು ಹೊಯ್ಸಳ ಸಾಮ್ರಾಜ್ಯದ ನೆಲೆಬೀಡಾದ ಹಾಸನ ನಗರದಲ್ಲಿ ಹೆಚ್ಚು ಹೆಚ್ಚಾಗುತ್ತಾ ಬಂದಂತಿತ್ತು. ತುಂಬಿದ ಪಾತ್ರೆಯಿಂದ ಹಾಲು ಜೇನು ಚೆಲ್ಲುವಂತೆ ಬರವಣಿಗೆಯ ರೂಪತಾಳಿ ನಮ್ಮಗಳೊಡನೆ ಹಂಚಿಕೊಳ್ಳುತ್ತಿದ್ದರು. ಆಗಲೇ ಕನ್ನಡ ಸಾಹಿತ್ಯದ ಉತ್ತುಂಗ ಶಿಖರವೇರುತ್ತಿದ್ದರೆನಿಸುತ್ತಾರೆ. ಇತಿಹಾಸದ ಬೇರೆ ಬೇರೆ ಭಾಗಗಳನ್ನು ಕಣ್ಣ ಮುಂದೆ ಸ್ಪಷ್ಟಪಡಿಸುತ್ತಿದ್ದ ಆ ಬರವಣಿಗೆಗಳು ಮುದ್ದಾದ ಅಕ್ಷರ, ನಮ್ಮೆಲ್ಲರ ಮೆಚ್ಚುಗೆ ಅಭಿಮಾನಕ್ಕೆ ಬುನಾದಿಯಾಯಿತೆನ್ನಬಹುದು. ಸೇತುರಾಮಯ್ಯಂಗಾರ್‌ರವರ ಮನೆಯಲ್ಲಿ ಸೇರಿ ಇಸ್ಪೀಟು ಆಟ, ಅವರ ಮನೆಯಲ್ಲಿ ದೊರೆಯುತ್ತಿದ್ದ ಪುಳಿಯೋಗರೆ, ಚಕ್ಕುಲಿಯ ಅತಿಥ್ಯ ಸ್ನೇಹವೃದ್ಧಿಗೆ ನೀರೆರೆಯುತ್ತಿತ್ತು.

ದಿನನಿತ್ಯದ ಭೇಟಿ, ಸಂಭಾಷಣೆ, ಬೇರೆ ಬೇರೆ ವಿಷಯಗಳ ವಿಮರ್ಶೆ, ತರ್ಕಗಳೆಲ್ಲಾ ಹಂತ ಹಂತವಾಗಿ ದಿನ ಕಳೆದಂತೆ ಬೆಳೆಯಿತು. ಒಂದು ದಿನ ನಾವೆಲ್ಲ ಕೂಡಿ ಸಾಹಿತ್ಯ, ಕಲೆ, ಕ್ರೀಡೆಗಳ ಅಭಿವೃದ್ಧಿಗೆ ಸಂಘ ಸ್ಥಾಪಿಸಬೇಕೆಂದು ತೀರ್ಮಾನ ಮಾಡಿದೆವು. ಅದರ ಯೋಜನೆಗೆ ಎಲ್ಲರ ಅಭಿಪ್ರಾಯ ಅನುಭವವನ್ನು ಜೋಡಿಸಿದ್ದಾಯಿತು. ಈ ನಮ್ಮ ಗುಂಪಿನಲ್ಲಿ ಸಾಹಿತಿಗಳು, ಗರುಡಿಯ ಪೈಲ್ವಾನರೂ ಇದ್ದರು. ನಾಟಕ ಕಲೆಯಲ್ಲಿ ಪರಿಶ್ರಮವಿರುವವರು, ವ್ಯವಸ್ಥಾಪಕ ಚತುರರು ಎಲ್ಲರೂ ಸೇರಿದ್ದೆವು. ಇದರಿಂದ ಸಂಘ ಸ್ಥಾಪನೆಗೆ ಭೂಮಿಕೆ ಸಿದ್ಧವಾಗಿತ್ತು ; ತೀರ್ಮಾನ ಸಂಕಲ್ಪವಾಯಿತು ; ಸಂಘಕ್ಕೆ ನಾಮಕರಣವಾಯಿತು. ಅದು ಕಾನೂನು ಚೌಕಟ್ಟಿನಲ್ಲಿ ನೋಂದಣಿಯಾಯಿತು, ಅದೇ ಹಾಸನದ "ಮಿತ್ರವೃಂದ."

ಆ ವೇಳೆಗೆ ನಮ್ಮ ಸಂಘದ ಸದಸ್ಯ ಸಿದ್ದನಂಜಪ್ಪನವರು ಲೋಕಸಭಾ ಸದಸ್ಯರು, ಸ್ವಾತಂತ್ರ್ಯ ಚಳುವಳಿಯಲ್ಲಿ ಮುಳುಗೆದ್ದಿದ್ದ ಕರ್ನಾಟಕ ಏಕೀಕರಣಕ್ಕೆ ಹೊಡೆದಾಡಿದ್ದ ಹಾರ್‍ನಹಳ್ಳಿ ರಾಮಸ್ವಾಮಿ, ಕಾಂಗ್ರೆಸ್‌ನಲ್ಲಿ ಹೆಸರು ಮಾಡಿದ್ದರು. ಜ್ವಾಲನಯ್ಯ ಮುನಿಸಿಪಲ್ ಅಧ್ಯಕ್ಷ, ಚಂದ್ರಶೇಖರ್, ವೆಂಕಟನರಸಿಂಹಯ್ಯ ಇಬ್ಬರೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಹಾಗೂ ರಂಗಮಂಟಪದ ಬೆಳವಣಿಗೆಗೆ ಜೀವ ಸವೆಸಿದ್ದ ಸೇತೂರಾಮೈಯಂಗಾರ್, ಶ್ರೀನಿವಾಸ ಅಯ್ಯಂಗಾರ್, ಹನುಮಂತು, ಗುಂಡಪ್ಪ, ಪೋಲೀಸ್ ಇನ್‌ಸ್ಪೆಕ್ಟರ್ ಮಧುರಾನಾಥನ್ ಎಲ್ಲರೂ ಸೊಂಟಕಟ್ಟಿ ಚಿಕ್ಕವರು, ದೊಡ್ಡವರು, ರಾಜಕೀಯ ವ್ಯಕ್ತಿ, ಐಶ್ವರ್ಯವಂತ ಎಂಬ ಯಾವ ಭೇದ ಭಾವನೆಯೂ ಇಲ್ಲದೆ ಗುಂಪಾಗಿ ದುಡಿದರು. ಅಲ್ಲಿ ಎಲ್ಲರೂ ನಮ್ಮೋರು, ಆತ್ಮೀಯ ಸ್ನೇಹಿತರು, ಗುರಿ ಒಂದೇ, ಸಾಹಿತ್ಯ ದೇವಿಯ ಸೇವಕರೆಂಬುದು ಮಾತ್ರ.

ಈ ಗುಂಪಿಗೆ ಸೇರಿ ಮಿತ್ರವೃಂದದ ಆಧಾರ ಸ್ಥಂಭವಾಗಿ ದುಡಿದ ಈ ಮನುಷ್ಯ ಸ್ವಚ್ಛ ಜೀವನದ, ಎಲ್ಲ ಕೆಲಸದಲ್ಲೂ ಧರ್ಮ ದೃಷ್ಟಿಯಿರುವ ವ್ಯಕ್ತಿ ಎಂದು ಆತನ ನಡೆ

ನುಡಿಯಿಂದ ಸುಸ್ಪಷ್ಟವಾಗುತ್ತಾ ಬಂತು. ಈತನ ಜೀವನದ ಗುರಿ ನಿರ್ದಿಷ್ಟವಾಗಿತ್ತು, ಬೌದ್ಧಿಕ ವ್ಯವಸಾಯ ಅಪಾರವಾಗಿತ್ತು. ಇತಿಹಾಸದ ಸಾಹಿತ್ಯ ಸಂಶೋಧನೆಯ ಕೆಲಸ ನಿರಂತರವಾಗಿ ನಡೆಸುತ್ತಿದ್ದರು. ಮಿತ್ರವೃಂದದ ಎಲ್ಲಾ ಬರವಣಿಗೆಗಳಲ್ಲೂ ಈತನ ವಿಚಾರ ಧಾರೆ, ಸುಂದರ ಕೈ ಬರಹ ಎದ್ದು ಕಾಣುತ್ತಿತ್ತು. ದೇಶದ ಎಲ್ಲಾ ಹಿರಿಯಸಾಹಿತಿಗಳು–ಮಂಜೇಶ್ವರ ಗೋವಿಂದ ಪೈಗಳವರು ದ. ರಾ. ಬೇಂದ್ರೆಯವರು, ಮಾಸ್ತಿಯವರು, ದೇವುಡುರವರು, ಪು. ತಿ. ನರಸಿಂಹಾಚಾರ್ಯ, ಎ. ಎನ್. ಮೂರ್ತಿರಾಯರು, ಗೋಕಾಕ್‌ರಾದಿಯಾಗಿ ಎಲ್ಲರನ್ನೂ ಮಿತ್ರವೃಂದಕ್ಕೆ ಕರೆಸಿ ಹಾಸನ ಸಮಾಜಕ್ಕೆ ಸಾಹಿತ್ಯದ ಔತಣವನ್ನು ಬಡಿಸಿದೆವು. ನಮ್ಮೊಡನೆ ಇದ್ದ ಈ ವ್ಯಕ್ತಿಯ ಬರಹಗಳನ್ನು ಓದುತ್ತಾ ಹೋದರೆ ರಾತ್ರಿಯೆಲ್ಲಾ ಕಳೆದು ಬೆಳಗಿನ ಜಾವವಾಗಿರುತ್ತದೆ. ಆತನು ನಿರ್ಮಿಸಿದ ಸಾಹಿತ್ಯ ಪ್ರವಾಹದಲ್ಲಿ ನಾವು ಪಾತ್ರಧಾರಿಗಳಾಗಿ ಆ ಗತ ಕಾಲಕ್ಕೆ ಹೋಗಿರುತ್ತೇವೆ. ಮಾರನೆಯ ದಿನವೆಲ್ಲಾ ಅದೇ ಗುಂಗು ಆವರಿಸಿರುತ್ತೆ. ಸಾಹಿತ್ಯದ ಸೆಳೆತ ಇಂತಹ ಉತ್ತುಂಗ ಮಟ್ಟವನ್ನು ತಲುಪಿರುವುದನ್ನು ಅನುಭವಿಸಿ, ಈ ಸಾಹಿತ್ಯ ಕಲೆಯು ಈತನಿಗೆ ಸಿದ್ಧಿಯಾಗಿರುತ್ತದೆಂದು ಅಂದೇ ನಮ್ಮಗಳಿಗೆ ವ್ಯಕ್ತವಾಯಿತು. ಅಲ್ಲಿಂದ ಈಚೆಗೆ ಇನ್ನೆಷ್ಟು ದೂರ, ಇನ್ನೂ ಎಷ್ಟು ಎತ್ತರಕ್ಕೆ ಏರಿರುತ್ತಾನೆಂದು ನಾನು ಊಹೆಯನ್ನೂ ಮಾಡಲಾರೆ.

ಈ ವ್ಯಕ್ತಿ ನಮ್ಮ ಸಮೇತನಹಳ್ಳಿ ಹಾಸನ ಪುರಸಭೆಯ ಆರೋಗ್ಯಾಧಿಕಾರಿಯಾಗಿ, ನಮ್ರ ಸರ್ಕಾರಿ ಸೇವಕ ಎಂದರೆ ಯಾರಿಗಾದರೂ ಆಶ್ಚರ್ಯವೇ ಸರಿ. ಆ ಕಸುಬಿಗೆ ಬೇಕಾದ ಅವಶ್ಯ ಉಡುಪು, ನಿಷ್ಠೆಯ ಕೆಲಸ, ದಕ್ಷತೆ ಇವೆಲ್ಲವೂ ಈತನಲ್ಲಿ ಮನೆ ಮಾಡಿಕೊಂಡಿದ್ದವು. ಈತನ ಧೀಶಕ್ತಿ ಅನುಪಮವಾದುದು. ನಿಯಮ ಪಾಲನೆಯಲ್ಲಿ ಅಗ್ರಗಣ್ಯ. ತನ್ನ ಕೆಲಸದಲ್ಲಿ ಎಷ್ಟು ಉತ್ತಮವಾಗಿ 'ಜನಸೇವೆ' ಮಾಡಬಹುದೆಂದು ಮಾಡಿ ತೋರಿಸಿದವ. ಸರ್ಕಾರಿ ಕೆಲಸವಾದ್ದರಿಂದ ವರ್ಗವಾಗಿ ಬೇರೆ ಕಡೆಗೆ ಪ್ರಯಾಣಿಸಿದ. ವಿಧಿಯಿಲ್ಲದೆ ಅಗಲಬೇಕಾಯಿತು. ಆದರೆ ತನ್ನ ಗ್ರಂಥಗಳಿಂದ, ಸಾಹಿತ್ಯ ಪುಷ್ಪಗಳಿಂದ ಸದಾ ನಮ್ಮೊಡನೆಯೇ ಇರುವ ಸ್ನೇಹಿತನೆಂದು ಭಾವಿಸುತ್ತೇವೆ. ಕನ್ನಡಾಂಬೆಯ ಆದರ್ಶ ಪುತ್ರನೆಂದು ನಾವೆಲ್ಲಾ ಬಲ್ಲೆವು. ಸಮೇತನಹಳ್ಳಿಯ ಸ್ನೇಹ, ಸಜ್ಜನಿಕೆಯ ರುಚಿ ನೋಡಿರುವ ನಾನು ಭಾಗ್ಯಶಾಲಿ ಎಂದು ಹೆಮ್ಮೆಪಡುತ್ತಿರುತ್ತೇನೆ.

ನೀವು ನಿಜವಾಗಿ ಗಟ್ಟಿಗರು. ಒಂದು (ಸವತಿ ಗಂಧವಾರಣೆ) ಆಕರ್ಷಣೀಯವಾದ ವಿಷಯವನ್ನು ಆರಿಸಿಕೊಂಡು ಒಳ್ಳೆಯ ಹೆಸರನ್ನೂ ಇಟ್ಟು ಸೊಗಸಾದ ಪುಸ್ತಕವನ್ನು ಮಾಡಿದ್ದೀರಿ. ಪುಸ್ತಕ ಚೆನ್ನಾಗಿರುವುದರಲ್ಲಿ ಸಂದೇಹವಿಲ್ಲ.

೨೩–೧೦–೬೧ **ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಹಿತಚಿಂತಕ ಬೀಗರು

ರುಕ್ಮಿಣಿ ಉಡುಪ

ಶ್ರೀಯುತ ಸಮೇತನಹಳ್ಳಿ ರಾಮರಾಯರ ಹೆಸರನ್ನು ನಾನು ಮೊದಲೇ ಕೇಳಿದ್ದರೂ, ಅವರನ್ನು ನಾನು ಪ್ರಥಮ ಭೇಟಿ ಮಾಡಿದ್ದು ೧೯೭೬ರಲ್ಲಿ ನನ್ನ ಮಗಳು ಚಿ॥ ಸೌ॥ ಅರುಣ ಮತ್ತು ಶ್ರೀ ರಾಮರಾಯರ ಮಗ ಚಿ ॥ ಹರ್ಷವರ್ಧನರು ಪರಸ್ಪರ ಪ್ರೇಮಿಸಿ ಮದುವೆ ಆಗುವ ತೀರ್ಮಾನಕ್ಕೆ ಬಂದು, ಅದಕ್ಕೆ ಹಿರಿಯರ ಮನ್ನಣೆ, ಆಶೀರ್ವಾದ ಬಯಸಿದಾಗ.ಸಾಹಿತಿ ಮಿತ್ರ ಶ್ರೀ ಸೂರ್ಯನಾರಾಯಣ ಚಡಗರೊಂದಿಗೆ ಮೈಸೂರಿನಲ್ಲಿ ಜಯನಗರದಲ್ಲಿರುವ ಅವರ ಮನೆಗೆ, ನನ್ನ ಮಗಳೊಂದಿಗೆ ಬಂದಿದ್ದೆ. ಆಗ ಶ್ರೀ ರಾಮರಾಯರು ನಮ್ಮನ್ನು ತುಂಬಾ ಆತ್ಮೀಯವಾಗಿ ನಡೆಸಿಕೊಂಡರು. ನನ್ನ ಪತಿ (ದಿ। ಐರೋಡಿ ಯಜ್ಞನಾರಾಯಣ ಉಡುಪರು) ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದ ಕಾರಣ, ಈ ಮಾತುಕತೆಗಳಿಗೆ ನಾನೇ ಬರಬೇಕಾದ ಅನಿವಾರ್ಯತೆಯನ್ನು ತಪ್ಪು ತಿಳಿಯದೆ, ಮುಂದಿನ ಮಾತುಕತೆಗಳಿಗೆ ನನ್ನ ಹಿರಿಯ ಅಳಿಯ ಶ್ರೀ ಎಸ್. ಜನಾರ್ದನ್‌ರವರನ್ನು ಕಳಿಸುವ ನನ್ನ ಇಷ್ಟಕ್ಕೆ ಸಂತೋಷವಾಗಿ ಒಪ್ಪಿದರು. ನನಗಂತೂ ಪುಸ್ತಕಗಳ ಮಧ್ಯೆಯೇ ಬೆಳೆದ, ಸಾಹಿತ್ಯಾಸಕ್ತೆ. ನನ್ನ ಮಗಳಿಗೆ ಸಾಹಿತಿಗಳ ಮನೆಯ ಸೊಸೆಯೇ ಆಗುವ ಪುಣ್ಯ ಲಭಿಸಿದ್ದಕ್ಕೆ ತುಂಬಾ ಆನಂದವೇ ಆಗಿತ್ತು.

ನನ್ನ ಮಗಳು ಮದುವೆಯಾಗಿ ತುಂಬಿದ ಕುಟುಂಬದ ಸೊಸೆಯಾಗಿ ಸೇರಿದ ವರ್ಷದಲ್ಲೇ ತನ್ನ ತಂದೆಯನ್ನು ಕಳೆದುಕೊಂಡಳು. ತಂದೆಯ ಪ್ರೀತಿಯ ಮಗಳಾಗಿದ್ದ ಅವಳಿಗೆ ಈ ಆಘಾತವನ್ನು ತಡೆಯುವ ಶಕ್ತಿ ಕೊಟ್ಟುದೇ ಶ್ರೀರಾಮರಾಯರ ಪ್ರೀತಿ, ವಾತ್ಸಲ್ಯ. ಅವಳು ತನ್ನ ಮಾವನನ್ನು ಕರೆಯುವುದೇ 'ಅಣ್ಣಯ್ಯ' ಎಂದು. ಅವರ ಮಕ್ಕಳು ಕರೆಯುವುದೂ ಹಾಗೆಯೇ. ಅವಳು ನಮ್ಮಲ್ಲಿಗೆ ಬಂದಾಗ ಹೇಳುತ್ತಿದ್ದುದುಂಟು –'ಅಮ್ಮ, ಅಣ್ಣಯ್ಯನ ಹತ್ತಿರ ವ್ಯವಹಾರ ಮಾಡುತ್ತಿದ್ದರೆ ಅಪ್ಪಯ್ಯನ ಹತ್ತಿರ ಇದ್ದ ಹಾಗೇ ಆಗುತ್ತದೆ. ಅದೇ ಕೋಪ, ಅದೇ ಸರಳತನ, ನೇರವಾದ ನಡೆ ನುಡಿ–ಹಲವು ಬಾರಿ ತನ್ನದೇ ಸರಿ ಎಂಬ ಹಠಮಾರಿತನ, ಅತಿ ಭಾವುಕತೆ' ಎಂದು. ಆಗೆಲ್ಲ ಹೆತ್ತ ತಾಯಿಯಾದ ನನಗೆ ಅತೀವ ಸಮಾಧಾನ. ಸೂಕ್ಷ್ಮಪ್ರಕೃತಿಯ, ಭಾವುಕಳಾದ ನನ್ನ ಮಗಳಿಗೆ ಈ ರೀತಿಯ ಪಿತೃವಾತ್ಸಲ್ಯ ಸದಾ ತಂಪೆರೆಯುತ್ತಿರಲಿ ಎಂದು ಹಾರೈಸುತ್ತಿದ್ದೆ. ನನ್ನ ಅಳಿಯ ಹೊರದೇಶದಲ್ಲಿದ್ದು, ವರ್ಷಕ್ಕೆ ಒಂದೆರಡು ಬಾರಿ ಬಂದು ಹೋಗುತ್ತಿದ್ದರು. ಮನೆಯಲ್ಲಿ ಸೊಸೆ, ಮೊಮ್ಮಕ್ಕಳ ಜವಾಬ್ದಾರಿ ಇವರದ್ದೇ. ಮದುವೆಯಾಗಿ

ಇಪ್ಪತ್ತು ವರ್ಷಗಳ ಬಳಿಕವೂ ಸೊಸೆ ಒಬ್ಬಳೇ ಎಲ್ಲೂ ಹೋಗಬಾರದು. ನನ್ನ ಮನೆಯಲ್ಲಿ ಅವರ ಸೊಸೆ, ಮೊಮ್ಮಕ್ಕಳನ್ನು ಕ್ಷೇಮವಾಗಿ ನೋಡಿಕೊಳ್ಳುತ್ತೇವೋ ಇಲ್ಲವೋ ಎಂಬ ಭಯ ಅವರಿಗೆ. ನಮ್ಮಲ್ಲಿಗೆ ತಲಪಿದ್ದಕ್ಕೆ, ಆರೋಗ್ಯವಾಗಿ ಇರುವುದಕ್ಕೆ, ಇಲ್ಲಿಂದ ಹೊರಟದ್ದಕ್ಕೆ ಎಲ್ಲಾ ಫೋನ್ ಮಾಡಿ ಹೇಳುತ್ತಿರಬೇಕು. ನನಗೆ ಶ್ರೀ ರಾಮರಾಯರ ರಕ್ಷಣೆಯಲ್ಲಿ ನನ್ನ ಮಗಳು, ಮೊಮ್ಮಕ್ಕಳ ಬಗ್ಗೆ ಆತಂಕವೇ ಇಲ್ಲವಾಗಿದೆ.

ನೇರ ನಡೆನುಡಿಯ ರಾಯರು ಕಠಿಣತೆಯ ಪರಮಾವಧಿಯನ್ನು ತಲುಪಬಲ್ಲವರಾದರೂ, ಅಷ್ಟೇ ಮೃದುಸ್ವಭಾವದವರೂ ಹೌದು. ಅವರಿಗೆ ದುಃಖವಾದಾಗ ಮಾತ್ರ ಅಳಬೇಕೆಂದಿಲ್ಲ; ತುಂಬ ಸಂತೋಷವಾದರೂ ಅತ್ತು ಬಿಡುತ್ತಾರೆ. ಮೊಮ್ಮಕ್ಕಳು ಸ್ಪರ್ಧೆಗಳಲ್ಲಿ ಗೆದ್ದು ಬಹುಮಾನಗಳನ್ನು ತಂದಾಗ, ತರಗತಿಗಳಲ್ಲಿ ಮೊದಲನೆಯವರಾದಾಗಲೂ ಧಾರಾಳವಾಗಿ ಅಳುವುದುಂಟು.

ನನಗಂತೂ ಅವರ ಪತ್ನಿ ಶ್ರೀಮತಿ ಪಂಕಜಮ್ಮನವರಲ್ಲಿ ತುಂಬ ಅನುಕಂಪ ಇದೆ. ಯಾಕೆಂದರೆ ಗುಟ್ಟಿನಲ್ಲಿ ಮಾತಾಡಲು ಶ್ರೀ ರಾಯರಿಗೆ ಬಾರದು. ಗಂಡ ಹೆಂಡಿರ ಮಧ್ಯೆ ಗುಟ್ಟಿನಲ್ಲಿ ಮಾತಾಡುವುದು ಎಷ್ಟೋ ಇರುತ್ತದೆ. ಆದರೆ ಶ್ರೀ ರಾಯರದು ತುಂಬಾ ಎತ್ತರದ ಶ್ರುತಿ. ಅವರು ಮೆಲ್ಲನೆ ಮಾತಾಡಿದರೇ ಇಡೀ ಮನೆಗೆ ಕೇಳುತ್ತದೆ.

ಶ್ರೀ ರಾಯರು 'ಒಬ್ಬ ಅಭಿಸಾರಿಕೆ' ಬಗ್ಗೆ 'ಕೋಟೆಮನೆ'ಯಲ್ಲಿ ಬರೆದಿದ್ದಾರೆ. ಅದನ್ನು ಓದುವಾಗ ಅವರ ಹಿರಿಯರು ಅವರಿಗಿಟ್ಟ ಹೆಸರು ಅನ್ವರ್ಥವಾಗಿದೆ ಎಂದೆನ್ನಿಸುತ್ತದೆ. ಅವರ ಆತ್ಮಚರಿತ್ರೆ 'ಕೋಟೆಮನೆ' ಓದಿದಾಗ, ಅವರು ಚಿಕ್ಕಂದಿನಲ್ಲಿ ಪಟ್ಟ ಕಷ್ಟ, ಆಮೇಲೆ ಏರಿದ ಎತ್ತರ, ಸಾಧನೆಗಳ ಸರಮಾಲೆ ನೋಡುವಾಗ ಅವರ ಮೇಲೆ ಅಪಾರ ಗೌರವ ಮೂಡುತ್ತದೆ. ನನ್ನ ಬಾಳಿನಲ್ಲಿ ಅವರು ಬಂಧುವಾಗದಿದ್ದಲ್ಲಿ ದೊಡ್ಡ ನಷ್ಟವೇ ಆಗುತ್ತಿತ್ತು.

೧೯೯೫ರ ಸಪ್ಟೆಂಬರ್ ೧೫ ಇರಬೇಕು. ಅಂದು ವಿಶ್ವೇಶ್ವರಯ್ಯನವರ ಜನ್ಮದಿನದ ಆಚರಣೆಯ ಸಂದರ್ಭದಲ್ಲಿ ಶ್ರೀರಾಮರಾಯರನ್ನು ಇನ್ನು ಕೆಲವರನ್ನೂ ಸನ್ಮಾನಿಸುವ ಕಾರ್ಯಕ್ರಮವೊಂದು ಬೆಂಗಳೂರಲ್ಲಿ ಇತ್ತು. ಆ ಸಮಾರಂಭಕ್ಕೆ ನಾವೂ ಹೋಗಿದ್ದೆವು. ಸನ್ಮಾನಿತರ ಪರವಾಗಿ ಮಾತಾಡುತ್ತಿದ್ದ ಶ್ರೀ ರಾಮರಾಯರು ವೀಡಿಯೋ ಚಿತ್ರೀಕರಣ ಮಾಡುತ್ತಿದ್ದ ವ್ಯಕ್ತಿಗೆ, 'ಸಾಕಪ್ಪಾಸಾಕು–ಒಮ್ಮೆ ನಿಲ್ಲಿಸು' ಎಂದು ಹೇಳಿದಾಗ ಸಭೆಯಲ್ಲೆಲ್ಲಾ ನಗು ಹಬ್ಬಿತು. ವೀಡಿಯೋದ ಬೆಳಕು ಬಿದ್ದಲ್ಲೆಲ್ಲ ಮುಖ ತೂರಿಸುವ ಪ್ರವೃತ್ತಿಯೇ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ಇಂತಹವರು ಬಹಳ ವಿರಳ ಅಲ್ಲವೇ ?

ಶ್ರೀ ರಾಮರಾಯರ ದೇಹಕ್ಕೆ ಮಾತ್ರ ವಯಸ್ಸಾಗಿದೆ, ಮನಸ್ಸಿಗಲ್ಲ. ಮಗಳ ಮನೆಗೆ ಹೋದಾಗ ನೋಡುತ್ತೇನಲ್ಲ. ಪ್ರಾಯದ ಹುಡುಗರಿಗೂ ಇರದಷ್ಟು ಲವಲವಿಕೆಯಿಂದ ಇಡೀ ದಿನ ಕೆಲಸ ಮಾಡುತ್ತಾರೆ. ವಯೋಧರ್ಮದಿಂದ ಕಿವಿ ಸ್ವಲ್ಪ ಕೇಳಿಸುತ್ತಿಲ್ಲ–ಆದರೆ ಒಪ್ಪಲು ತಯಾರಿಲ್ಲ. ಅವರ ಗಮನಕ್ಕೆ ಬಾರದೆ ಹಿಂದಿನಿಂದ ಆನೆ

ಹೋದರೂ ತಿಳಿಯುದ ನೇರ ನಡವಳಿಕೆ ಅವರದು. ಆದರೆ ಮುಂದಿನಿಂದ ಒಂದು ಇರುವೆಯೂ ಅವರ ಆಜ್ಞೆ ಇಲ್ಲದೆ ಹೋಗಬಾರದೆನ್ನುವ ಮನೆ ಹಿರಿಯನ ಗತ್ತು, ನಿರ್ಧಾರ ತೆಗೆದುಕೊಳ್ಳುವ ಹುಮ್ಮಸ್ಸು ಇವತ್ತಿಗೂ ಇದೆ.

ಶ್ರೀ ರಾಮರಾಯರು ಅವರ ಸಂಸಾರಕ್ಕೆ ಮಾತ್ರವಲ್ಲ, ನನ್ನ ಸಂಸಾರಕ್ಕೂ ಹಿರಿಯರಂತಿದ್ದಾರೆ. ನಾನೂ ಕೆಲವೊಂದು ಸಂದರ್ಭಗಳಲ್ಲಿ ಹೋಗಿ ಅವರ ಮಾರ್ಗದರ್ಶನ ಪಡೆದು ಬರುವುದುಂಟು. ನನ್ನ ಕಿರಿಯ ಮಗ ನರೇಂದ್ರನೆಂದರೆ ಅವರಿಗೆ ತಮ್ಮ ಮಗನಷ್ಟೇ ಅಕ್ಕರೆ. ಅವನು ಬಿ.ಇ. ಮುಗಿಸಿದ ತಕ್ಷಣ ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಲ್ಲಿ ಕೆಲಸ ಸಿಕ್ಕಲು ಮುಕ್ಕಾಲಂಶ ಅವರೇ ಕಾರಣ.

ಶ್ರೀರಾಮರಾಯರ ವ್ಯಕ್ತಿತ್ವವನ್ನು ನೆನಪಿಸಿಕೊಳ್ಳುವಾಗ ದೊಡ್ಡದೊಂದು ಆಲದ ಮರ ನೆನಪಾಗುತ್ತದೆ. ಅದರ ನೆರಳಲ್ಲಿ ತಂಪುಂಡವರೆಷ್ಟು ಜನ, ಗೂಡು ಕಟ್ಟಿಕೊಂಡು ಬಾಳು ನಡೆಸಿದವರೆಷ್ಟು ಜನ, ಸುತ್ತಮುತ್ತ ಸುಳಿದಾಡುತ್ತ ಹಿತವಾದ ಗಾಳಿ ಸೇವಿಸಿದವರೆಷ್ಟು ಜನ ! ಭಗವಂತ ಅವರಿಗೆ ದೀರ್ಘಾಯುಸ್ಸನ್ನು ಆರೋಗ್ಯವನ್ನು, ಮನಶ್ಶಾಂತಿಯನ್ನು ಕರುಣಿಸಲಿ.

ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ರಾಜ್ಯ ಸಮ್ಮೇಳನದ ಮಟ್ಟದಲ್ಲಿ ನೆರವೇರಿಸಿದಿರಿ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ 'ಸಾಹಿತ್ಯಾರಾಧನೆ' ಭಾಗವಹಿಸಿದ ಆರುಮಂದಿ ವಿದ್ವಾಂಸರೂ ತಲೆದೂಗಿಸುವಂತಹ ಪ್ರಬಂಧಗಳನ್ನು ಸಿದ್ಧಗೊಳಿಸಿದ್ದರು. 'ಕವಿದರ್ಶನ' ಕಾರ್ಯಕ್ರಮವೂ ಬೋಧ ಪ್ರದವಾಗಿತ್ತು. 'ಕವಿಜನ ಸನ್ಮಾನ' ಮಾಡಿ ಇತರ ಜಿಲ್ಲೆಯವರಿಗೆ ಮಾರ್ಗದರ್ಶಕರಾದಿರಿ. 'ಇಕ್ಷು ಗಂಗಾ' ಕುರಿತು ವೇದಿಕೆಯ ಮೇಲಿಂದಲೇ ನನ್ನ ಸಂತೋಷವನ್ನು ವ್ಯಕ್ತ ಪಡಿಸಿದ್ದೇನೆ. ಉತ್ಸವ ಮಂಟಪದ 'ನವರಸ'ಗಳನ್ನು ಮೀರಿಸಿತು ನಿಮ್ಮ ಪಾಕಶಾಲೆಯ'ಷಡ್ರಸ !' ಉಂಡವರೇ ಬಲ್ಲರದರ ಸವಿಯನ್ನು !

೨೧-೧೧-೭೦

ತಿ. ತಾ. ಶರ್ಮ

ಭೀಷ್ಮ ಸಂಕಲ್ಪದ ಮಾವ

ಕೆ. ಗೋಪೀನಾಥ ಶರ್ಮ

ರಾ. ಸ. ಅಂದರೆ ರಾಮರಾಯ ಸಮೇತನಹಳ್ಳಿ. ಈ ಶಬ್ದಗಳಲ್ಲಿ ಕನ್ನಡ ಭಾಷೆಯ ಸೊಗಡು ಸೊಗಸಾಗಿ ಕಾಣುತ್ತದೆ. ರಾ. ಸ. ಇವರು ನನ್ನ ಮಾವನವರು: ನನ್ನ ಬಾಳ ಸಂಗಾತಿಯ ತೀರ್ಥರೂಪರು. ನನಗೆ ತೀರ್ಥರೂಪು ಸಮಾನರು. ನಮ್ಮ ಕರ್ನಾಟಕದ ಕನ್ನಡಕವಿಗಳಲ್ಲಿ ಒಬ್ಬರು. ಹಿರಿಯರ ಬಗ್ಗೆ ಕಿರಿಯರು ತಮ್ಮ ಅನಿಸಿಕೆಗಳನ್ನು ಬಹಿರಂಗ ವಾಗಿ ಹೇಳಲು ಅಥವಾ ಬರವಣಿಗೆಯ ಮೂಲಕ ಹೊರಹಾಕಲು ಮುಜುಗರವಾಗುತ್ತದೆ. ಈ ಕಿರಿಯರ ನಡವಳಿಕೆಯನ್ನು ಕೆಲವು ಹಿರಿಯರು ಉದ್ಧಟತನ ಎನ್ನುತ್ತಾರೆ: ನನ್ನ ಮಾವನವರ ಬಗ್ಗೆ ಅಭಿನಂದನಾ ಗ್ರಂಥ ಸಿದ್ಧವಾಗುತ್ತಿರುವಾಗ ಆ ಪುಸ್ತಕದಲ್ಲಿ ನನ್ನ ದಾದ ಕೆಲ ಅನಿಸಿಕೆಗಳನ್ನು ಬರವಣಿಗೆಯ ಮೂಲಕ ಓದುಗರಿಗೆ ತಲುಪಿಸುವ ಪ್ರಯತ್ನ ಮಾಡಿದ್ದೇನೆ.

ನಾವೆಲ್ಲರೂ ನನ್ನ ಮಾವನವರನ್ನು ಆತ್ಮೀಯವಾಗಿ 'ಅಣ್ಣಯ್ಯ' ಎಂದು ಕರೆಯುತ್ತೇವೆ. ನಾನೂ ಸಹ ಅದೇ ಶಬ್ದದಿಂದ ಅವರೊಡನೆ ಸಂಭಾಷಿಸುತ್ತಿರುತ್ತೇನೆ. ಅವರಲ್ಲಿ ನನ್ನ ಪರಿಚಯ, ಬಾಂಧವ್ಯಗಳು ಪ್ರಾರಂಭವಾಗಿ ಈಗ್ಗೆ ಮೂವತ್ತೈದು ವರ್ಷಗಳು ಸಂದಿವೆ.

ಒಂದೊಮ್ಮೆ ಬಹಳ ವರ್ಷಗಳ ಹಿಂದೆ ಮನೆಯ ರೇಡಿಯೋದಲ್ಲಿ ಸಿನಿಮ ಹಾಡು ಕೇಳಿಬರುತ್ತಿತ್ತು. "ಮನೆಗೆ ಬಂದಳಿಯ ಮಗನಲ್ಲಾ . . ." ನನ್ನ ಮಾವನವರು ಗುಡುಗಿದರು. "ಯಾರ್ರೆ ಅದು, ರೇಡಿಯೋ ಆರಿಸಿರೆ." ನನ್ನ ಮಡದಿ ಕೇಳಿದಳು. "ಯಾಕೆ, ಅಣ್ಣಯ್ಯ ?" "ನಮ್ಮ ಗೋಪಿ ಮನೆಗೆ ಬಂದ ಅಳಿಯ, ಆದರೆ ಮಗನಿಗಿಂತ ಒಂದು ಕೈ ಮಿಗಿಲು. ಹೀಗಿರುವಾಗ ಆಹಾಡನ್ನು ಕೇಳಬೇಕೆ ?" ಎಂದು ಸವಾಲು ಹಾಕಿದರು.

ನನ್ನ ಮಾವನವರಾದ ಸ.ರಾ., ರಲ್ಲಿ ಕೆಲವು ವೈಶಿಷ್ಟ್ಯಗಳಿವೆ. ಅವರ ಕೃತಿಗಳ ಶಿರೋನಾಮೆಯಿಂದ ನಾವು ಆ ವೈಶಿಷ್ಟ್ಯಗಳನ್ನು ಕಂಡುಕೊಳ್ಳಬಹುದು: ಅವರ ನಿಲುವು ಎಲೆಮರೆಯ ಹೂವಿನಂತೆ: ನಿಲುವನ್ನು ಸಮರ್ಥಿಸಿಕೊಳ್ಳಲು ಭೀಷ್ಮಸಂಕಲ್ಪ ಮಾಡುತ್ತಾರೆ: ಕನ್ನಡಾಂಬೆಯ ಸೇವೆ ಮಾಡುವಾಗ ಪಿನಾಕಿನಿಯ ದಡದಲ್ಲಿ ಕಲಾರಾಧನೆ ಮಾಡುತ್ತಾರೆ. ಸೌಂದರ್ಯಾರಾಧನೆಯನ್ನು ಸಿರಿಯುಲ ದೇವಿಯಲ್ಲಿ ಮೂಡಿಸಿದ್ದಾರೆ. ಸವತಿ ಗಂಧವಾರಣೆ, ಶಾಂತಲೆಯ ನಂತರ ಶಾಕುಂತಲೆಯನ್ನು ಕನ್ನಡ ಮಾತೆಯ ಅಡಿದಾವರೆಗಳಿಗೆ ಅರ್ಪಿಸಿದ್ದಾರೆ.

ಇವರಲ್ಲಿ ಅಚಲ ಆತ್ಮವಿಶ್ವಾಸವನ್ನು ನಾನು ಕಂಡುಕೊಂಡಿದ್ದೇನೆ. ನನ್ನ ವಿವಾಹದ ಕೆಲದಿನಗಳ ಮುನ್ನ ತಮ್ಮ ಭಾವೀ ಅಳಿಯನಿಗೆ ಹೀಗೆ ಹೇಳಿದ್ದರು.

"ನೋಡು ಗೋಪಿ, ನನ್ನ ಮಗಳು ಇಂದಿರ

"A Good daughter to her parents,
A Good wife to her husband and
A Good mother to her children"

ಈ ಮಾತುಗಳು ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿವೆ. ಸತ್ಯ ಎನಿಸಿವೆ.

ನನ್ನ ಅತ್ತೆಯವರು ಆಕಸ್ಮಿಕ ಅಕಾಲ ಮರಣಕ್ಕೆ ಗುರಿ ಆದರು. ತಮ್ಮ ಮಡದಿಯ ಸಾವಿನ ಸುದ್ದಿಯು ಮನೆ ಬಾಗಿಲಿಗೆ ಬಂದು ಬಡಿದಾಗಲೂ ಸ್ಥಿತ ಪ್ರಜ್ಞರಂತೆ, ದುಃಖವನ್ನು ನುಂಗಿಕೊಂಡು ಕುಳಿತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ: ಆ ದಿನದ ವಿಧಿಗಳು ಮುಗಿದವು. ಮಾರನೆಯ ದಿನ ಬೆಳಿಗ್ಗೆ ಬೇಗನೆ ಎದ್ದ ನನ್ನ ಮಾವನವರನ್ನು ನಾವು ಮನೆಯಲ್ಲಿ ಕಾಣಲಿಲ್ಲ. ಗಾಬರಿಯಿಂದ ನಾನು ನನ್ನ ಆತ್ಮೀಯ ಷಡ್ಡಕರು ಅನುಮಾನದಿಂದ ರುದ್ರಭೂಮಿಗೆ ಹೋದೆವು, ಅಲ್ಲಿ ತಮ್ಮ ಮಡದಿಯ ಚಿತಾಭಸ್ಮದ ಮುಂದೆ ನನ್ನ ಮಾವನವರು ಮೌನವಾಗಿ ಕಂಬನಿಗರೆದು ಅಗಲಿದ ಬಾಳ ಸಂಗಾತಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದರು. ಹಿಂದಿರುಗಿ ನಮ್ಮನ್ನು ಕಂಡೊಡನೆ "ಯಾಕ್ರಪ್ಪ ಬಂದ್ರಿ? ನಾನು ಸುಮ್ಮನೆ ಬಂದೆ. ಅವಳು ಎಲ್ಲರನ್ನೂ ಬಿಟ್ಟು ಹೊರಟು ಹೋದಳು. ನಾನು ನಿಮ್ಮನ್ನೆಲ್ಲಾ ಬಿಟ್ಟು ಹೋಗುವುದಿಲ್ಲ, ಎಂದು ಅವಳಿಗೆ ಮಾತುಕೊಟ್ಟು ಹೋಗಲು ಬಂದಿದ್ದೆ, ಅಷ್ಟೆ ನಡಿಯಿರಿ ಹೋಗೋಣ" ಎಂದರು.

ಸಮೇತನಹಳ್ಳಿ ರಾಮರಾಯ ಎಂಬ ಶಬ್ದವನ್ನು ಕೆಲವು ನೆಂಟರು 'ಬೆಂಕಿ ರಾಮರಾಯ' ಎಂದು ಕರೆಯುವುದನ್ನು ಕೇಳಿದ್ದೇನೆ. ಒಬ್ಬ ವ್ಯಕ್ತಿಯ ಒಂದು ನಡವಳಿಕೆ ಬಗ್ಗೆ ವ್ಯಂಗ್ಯ ಮಾತನ್ನು ಹೇಳಬೇಕಾದರೆ, ಆ ವ್ಯಕ್ತಿಯ ಇನ್ನಿತರ ನಡವಳಿಕೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು. ಒಂದು ನಾಣ್ಯದ ಒಂದೇ ಮುಖಕ್ಕೆ ಎಂದೂ ಬೆಲೆ ಇರುವುದಿಲ್ಲ. ಸಮಾಜದಲ್ಲಿ ಕಹಿಗಳನ್ನು ಉಂಡು ತೇಗಿದವರಿಗೆ ಕಟುವಾದ ಮಾತುಗಳು ಹೊರಬರುತ್ತವೆ. ಆ ಮಾತುಗಳು ಸತ್ಯವಾಗಿರುತ್ತವೆ. ಅನೇಕರಿಗೆ ಕಟುಸತ್ಯವು ಕಾರ್ಕೋಟಕ ಕಹಿ ಆಗುತ್ತದೆ. ಅಂತಹವರು, ವ್ಯಕ್ತಿಗಳ ಒಂದು ಮುಖವನ್ನು ಮಾತ್ರ ಕಂಡುಕೊಳ್ಳುತ್ತಾರೆ. ತಮಗೆ ತೋಚಿದಂತೆ ಮಾತನಾಡಿಕೊಳ್ಳುತ್ತಾರೆ. ನನ್ನ ಮಾವನವರು ಇಂತಹ ವಿಷಯಗಳ ಬಗ್ಗೆ ನಿರ್ಲಿಪ್ತರಾಗಿರುತ್ತಾರೆ. ಕೆಲವೊಮ್ಮೆ ಅವರ ಮನಸ್ಸಿಗೆ ಹಿತವಾದ ನೋವು ಕಾಣಿಸಿಕೊಂಡಾಗ, ಅವರು ಮೃದುವಾಗಿ ಬಿಡುತ್ತಾರೆ. ಗಳಗಳನೆ ಅತ್ತುಬಿಡುತ್ತಾರೆ. ಅವರ ಮುದ್ದಿನ ಮೊಮ್ಮಕ್ಕಳು "ಅಣ್ಣಯ್ಯ ಮೂತಿ ಚೂಪು ಮಾಡಿದ್ದಾರೆ" ಎಂದು ಹೇಳಿ ಗಂಭೀರವಾದ ಅವರ ಮನಸ್ಸಿಗೆ ನಗೆಯ ವಾತಾವರಣದ ದೃಶ್ಯಕಲ್ಪಿಸುತ್ತಾರೆ.

ಹಿರಿಯರ ಬಗ್ಗೆ ಎಷ್ಟೇ ಬರೆದರೂ ತೃಪ್ತಿ ಎನ್ನಿಸುವುದಿಲ್ಲ. ಓದುಗರಿಗೆ ಅತಿ ಎನಿಸುತ್ತದೆ.

ನಮ್ಮ ಭಾರತದ ೫೦ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಿರುವ ನಮಗೆ ಸ್ವತಂತ್ರವಾಗಿ ಬರೆಯಲು ಹಕ್ಕು ಇರುತ್ತದೆ. ಆದರೆ ಪ್ರಕಟಿಸಲು ಮುದ್ರಿಸಲು ಹಣ ಬಲ ಅಥವಾ ಇನ್ನಾವುದಾದರೂ ಶಕ್ತಿಸಾಮರ್ಥ್ಯಗಳು ಇರಬೇಕು ಅಷ್ಟೆ. ನನ್ನ ಮಾವ ನವರಿಗೆ ಯಾವ ಬಲಗಳೂ ಇದ್ದಂತಿರಲಿಲ್ಲ. ಲೇಖನಗಳನ್ನು ಬರೆಯುತ್ತಿದ್ದರು. ಮುದ್ರಿಸಿ ಪ್ರಕಟಿಸಲು ಕಷ್ಟಪಡುತ್ತಿದ್ದರು. ಮತ್ತೆ "ಭೀಷ್ಮ ಸಂಕಲ್ಪ" ಸ್ವಂತ "ರಾಸ ಪ್ರಕಾಶನ" ಜನ್ಮ ತಳೆಯಿತು. ಮನೆಯಲ್ಲಿ ಎಲ್ಲ ರೀತಿಯ ತೊಂದರೆಗಳು, ವಿರೋಧಗಳು ಆದರೂ ಪ್ರಕಾಶನದ ಕೃಷಿಯನ್ನೂ ಕೈಗೆತ್ತಿಕೊಂಡರು. ಇಂದಿಗೂ ತಾವೇ ರಚಿಸಿದ ಕೃತಿಗಳು, ಪ್ರಕಟಿಸಿದ ಪುಸ್ತಕಗಳು ರಾಶಿರಾಶಿಯಾಗಿ ಅವರ ಕಣ್ಮುಂದೆ ತುಂಬಿ ನಿಂತಿವೆ. ಪ್ರಕಾಶನದ ಕುಸುಮಗಳು ಬಾಡಿ ಬಸವಳಿಯುತ್ತಿದ್ದರೂ ಸಾಹಿತ್ಯ ಕೃಷಿ, ಕನ್ನಡಮ್ಮನ ಸೇವೆ ಕುಂದುತ್ತಿಲ್ಲ. ಎಂಭತ್ತರ ಇಳಿ ವಯಸ್ಸಿನಲ್ಲೂ ಉತ್ಸಾಹದಿಂದ ಕನ್ನಡ ಕೃತಿಗಳ ರಚನೆ ನಡೆಯುತ್ತಲೇ ಇದೆ.

ಪ್ರಶಸ್ತಿಗಳು ಕೈಬೀಸಿ ಕರೆದಾಗ ಮುಜುಗರದಿಂದ ಓ ಗೊಡದೆ ಸ್ಥಿರ ಚಿತ್ತದಿಂದಿದ್ದು, ಅವು ಮನೆಬಾಗಿಲಿಗೆ ಬಂದಾಗ ಹರ್ಷಚಿತ್ತದಿಂದ ಆಹ್ವಾನಿಸಿ ಅಪ್ಪಿಕೊಂಡಿದ್ದಾರೆ. ಒಪ್ಪಿಸಿಕೊಂಡಿದ್ದಾರೆ.

ಅಳಿಯನಂತಲ್ಲದೆ ಮಗನಂತೆ ಸಲಹಿದ ಅವರೊಡನೆ ಎಂದೆಂದಿಗೂ ವಿಧೇಯತೆಯಿಂದ ವಾತ್ಸಲ್ಯ ಪೂರ್ಣ ವ್ಯಕ್ತಿಯಾಗಿ ಬೆಳೆಯುತ್ತಿದ್ದೇನೆ. ಈ ಹಿರಿಯರ ಬಾಳಿಗೆ ಸದಾ ಒಳಿತನ್ನು ಬಯಸಿ ಪ್ರಿಯ ಓದುಗರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿ, ಸಕಲರಿಗೂ ಸನ್ಮಂಗಳವನ್ನೂ ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತಾ ಈ ನನ್ನ ಬರವಣಿಗೆಯನ್ನು ಮುಗಿಸುತ್ತೇನೆ.

ಸತ್ಯಂ ಶಿವಂ ಸುಂದರಂ.

ಬಾಣಕವಿಯ ಕಾದಂಬರಿಯ ಕಥಾ ವಸ್ತುವೇ ಈ ನಾಟಕದ ವಸ್ತು. ಶ್ರೀ ರಾಮರಾಯರು ಈ ನಾಟಕ ರಚನೆಯಲ್ಲಿ ಯಶಸ್ವಿಯಾಗಿದ್ದಾರೆ. ಅವರ ಶೈಲಿ ಚೆನ್ನಾಗಿದೆ. ಮೂಲಕೃತಿಯ ಸ್ವಾರಸ್ಯ, ಸೌಂದರ್ಯ ಅಳಿಯದಂತೆ ನಾಟಕರೂಪದಲ್ಲಿ ಸರಳವಾಗಿ ಬರೆದು ಶ್ರೀಯುತರು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ.

ಡಿಸೆಂಬರು : ೧೯೪೯ 'ಅಭಿಮಾನಿ'

ಅಣ್ಣಯ್ಯನ ಪ್ರೀತಿ

ಇಂದಿರಾ ಗೋಪಿನಾಥ್

ನಾನು ನಮ್ಮ ತಂದೆಗೆ ದೊಡ್ಡ ಮಗಳು. ನಾನು ಹುಟ್ಟಿದಾಗ ನನ್ನ ತಂದೆ 'ಮೊದಲನೆಯ ಮಗು ಹೆಣ್ಣಾದರೆ ಲಕ್ಷ್ಮಿಯ ಸಮಾನ' ಎಂದು ಸಂತೋಷ ಪಟ್ಟು ಕೊಂಡರಂತೆ. ಅದಕ್ಕಾಗಿಯೇ ನನಗೆ 'ಇಂದಿರಾ' ಎಂಬ ಹೆಸರನ್ನು ಇಟ್ಟರು. ಸಾಮಾನ್ಯ ವಾಗಿ ಮೊದಲನೆಯ ಮಗುವಿನ ಮೇಲೆ ತಾಯಿ–ತಂದೆಯರಿಗೆ ತುಂಬ ಪ್ರೀತಿ. ನಾನಂತೂ –ಮೊದಲೇ ಪ್ರೇಮಮಯ ಸ್ವಭಾವದ–ನನ್ನ ತಂದೆಯ ಪ್ರೀತಿ–ವಾತ್ಸಲ್ಯಗಳನ್ನು ಯಥೇಚ್ಛವಾಗಿ ಅನುಭವಿಸಿದ್ದೇನೆ. ನನ್ನ ತಂದೆಯವರ ಸ್ವಭಾವದ ಕೆಲವು ಗುಣಗಳನ್ನು ಈ ಲೇಖನದಲ್ಲಿ ಬರೆಯುತ್ತೇನೆ.

ನಾನು ಚಿಕ್ಕಂದಿನಿಂದ ಗಮನಿಸಿದ ಹಾಗೆ ನನ್ನ ತಂದೆ ತುಂಬ ಶಿಸ್ತಿನ ಸ್ವಭಾವದ ವರು. ಪ್ರತಿಯೊಂದರಲ್ಲೂ ವಿಪರೀತ (ಕೆಲವು ಸಾರಿ ಅದು ಬೇರೆಯವರಿಗೆ ಮುಜುಗರ ವಾಗುವಷ್ಟು !) ಅಚ್ಚುಕಟ್ಟು. ತಮ್ಮ ಟೇಬಲಿನ ಮೇಲೆ ಅವರಿಗೆ ಬೇಕಾದ ಪುಸ್ತಕಗಳು, ಬಣ್ಣಬಣ್ಣದ ಪೆನ್‌ಗಳು, ಪೆನ್ಸಿಲ್‌ಗಳು, ರಬ್ಬರ್, ಕರಿಮರದ ಒಂದು ಸುಂದರ ರೂಲರ್, ಇಂಕ್ ಬಾಟಲಿ–ಇವುಗಳನ್ನೆಲ್ಲ ಆಕರ್ಷವಾಗಿ ಜೋಡಿಸಿರುತ್ತಿದ್ದರು. ಅವರು ಇದ್ದಾಗ ಅವರ ರೂಮಿನೊಳಗೆ ಹೋಗಲು ನಮಗೆ ಧೈರ್ಯವಿಲ್ಲ. ಅವರು ಬೆಳಿಗ್ಗೆ ಅಫೀಸಿಗೆ ಹೋದ ಕೂಡಲೇ ಅವರ ಟೇಬಲಿನ ಬಳಿ ಹೋಗಿ ಅಲ್ಲಿದ್ದ ವಸ್ತುಗಳನ್ನು ಆಸೆಯಿಂದ ಮುಟ್ಟಿ ಮುಟ್ಟಿ ನೋಡುತ್ತಿದ್ದೆವು.

ನಮ್ಮ ತಂದೆಗೆ ಮಕ್ಕಳನ್ನು ಕಂಡರೆ ತುಂಬ ಪ್ರೀತಿ. 'ನಾನು ಬದುಕುತ್ತಿರುವುದೇ ನನ್ನ ಮಕ್ಕಳಿಗಾಗಿ' ಎಂದು ಯಾವಾಗಲೂ ಹೇಳುತ್ತಾರೆ. ಮಕ್ಕಳನ್ನು ಬಿಟ್ಟು ಅವರು ಯಾವ ದಿನವೂ ಏನನ್ನೂ ತಿನ್ನುತ್ತಿರಲಿಲ್ಲ. ಬೇಕರಿಯಿಂದ ತಿಂಡಿ, ಪೇಟೆಯಿಂದ ಹಣ್ಣು ತಂದರೆ ಅವುಗಳನ್ನು ಓರಣವಾಗಿ ತಟ್ಟೆಯಲ್ಲಿ ಜೋಡಿಸಿ ತಂದು ಮೊದಲು ನಮಗೆ ತಿನ್ನಿಸುತ್ತಿದ್ದರು. ನಾವು ತಿನ್ನುವುದನ್ನು ಸಂತೋಷದಿಂದ ನೋಡುತ್ತಾ ಕುಳಿತುಕೊಳ್ಳು ತ್ತಿದ್ದರು. ನಾವು ತೃಪ್ತಿಯಾಗಿ ತಿಂದ ಮೇಲೆ ಅವರು ಅಷ್ಟಿಷ್ಟನ್ನು ಬಾಯಿಗೆ ಹಾಕಿ ಕೊಳ್ಳುತ್ತಿದ್ದರು. ನಮ್ಮ ತಾಯಿ ನಮ್ಮ ತಂದೆ ಯಾವಾಗಲಾದರೂ ಒಂದೊಂದುಸಾರಿ ಹಸಿಮೆಣಸಿನಕಾಯಿಯ ಗೊಜ್ಜನ್ನು ಮಾಡಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಅವರು ಊಟ ಮಾಡುವ ಹೊತ್ತಿಗೆ ನಮ್ಮೆಲ್ಲರ ಊಟ ಮುಗಿದಿರುತ್ತಿತ್ತು. ಆದರೆ ಅವರಿಗೆ ನಮ್ಮನ್ನು ಬಿಟ್ಟು ಈ ಗೊಜ್ಜನ್ನವನ್ನು ತಿನ್ನಲು ಮನಸ್ಸಾಗುತ್ತಿರಲಿಲ್ಲ. ಅನ್ನವನ್ನು

ಹದವಾಗಿ ಕಲಸಿ. ನಮ್ಮೆಲ್ಲರನ್ನೂ ಕರೆದು ಎಲ್ಲರ ಕೈಮೇಲೆ ದಪ್ಪ ದಪ್ಪ ತುತ್ತುಗಳನ್ನು ಇಡುತ್ತಿದ್ದರು. ನಾವದನ್ನು–ಇಷ್ಟವಿಲ್ಲದಿದ್ದರೂ–ತಿಂದ ಮೇಲೆ ಅವರು ಊಟ ಮಾಡುತ್ತಿದ್ದರು.

ನಮ್ಮ ತಂದೆಯವರಿಗೆ ನಮ್ಮ ಮೇಲೆ ಬಹಳ ಪ್ರೀತಿಯೆಂದು ಹೇಳಿದ್ದೇನೆ. ಆದರೆ ಅದು ಕೆಲವು ಸಲ ಅತಿ ಅನಿಸುವಷ್ಟೇ ಆಗಿಬಿಡುತ್ತಿತ್ತು. ನಮಗೆ ಅವರ ಮೇಲೆ ಅಸಮಾಧಾನವೂ ಆಗುತ್ತಿತ್ತು. ನಾವು ರಾಮನಗರದಲ್ಲಿದ್ದಾಗ ಒಂದು ಸಾರಿ ನನ್ನ ಗೆಳತಿಯರೆಲ್ಲ ಸೇರಿ ರಾಮಪಾದ ಅನ್ನುವ ಜಾಗಕ್ಕೆ ವಿಹಾರ ಹೊರಟರು. ನನ್ನನ್ನೂ ಕರೆದರು. ನನ್ನ ತಂದೆ ನನಗೇನಾದರೂ ಅಪಾಯುವಾಗಬಹುದೆಂದು ಅಲ್ಲಿಗೆ ಕಳಿಸಲು ಒಪ್ಪಲಿಲ್ಲ. ನಾನು ಗೋಳಾಡಿ ರಂಪ ಮಾಡಿದೆ. ನನ್ನ ತಂದೆ ಕರಗಿ ನೀರಾದರು. ಕಡೆಗೆ ರಾಮಪಾದಕ್ಕೆ ನನ್ನ ಗೆಳತಿಯರೊಂದಿಗೆ ತಾವೂ ಹೊರಟರು. ಜತೆಗೆ ನನ್ನ ತಮ್ಮ ಸುದರ್ಶನನೂ ಇದ್ದ. ಸೈಕಲ್ಲಿನ ಮೇಲೆ ಸುದರ್ಶನ; ಅದನ್ನು ತಳ್ಳಿಕೊಂಡು, ನನ್ನ ಹೆಗಲ ಮೇಲೆ ಕೈ ಹಾಕಿಕೊಂಡು ನನ್ನ ತಂದೆ! ಇದು ಒಂದು ಗುಂಪು. ನಮ್ಮಿಂದ ಸ್ವಲ್ಪ ದೂರದಲ್ಲಿ ಕಿಲಕಿಲನೆ ನಗುತ್ತಾ ದಾರಿ ಸವೆಸುತ್ತಿರುವ ನನ್ನ ಗೆಳತಿಯರ ಗುಂಪು. ನನ್ನ ಮನಸ್ಸಿನ ಭಾವನೆಯನ್ನು ಊಹಿಸಿಕೊಳ್ಳಿ. ಜತೆಗೆ ಸುದರ್ಶನ ಆಗಾಗ ನನ್ನ ಕಡೆ ನೋಡುತ್ತಾ ನಗುತ್ತಿದ್ದ.

ನಮ್ಮ ತಂದೆಯವರಿಗೆ ನಮ್ಮ ಮೇಲೆ ಎಷ್ಟು ಪ್ರೀತಿಯೋ ನಮ್ಮನ್ನು ಬೆಳೆಸುವ ವಿಷಯದಲ್ಲಿ ಅಷ್ಟೇ ಕಟ್ಟುನಿಟ್ಟು. ಒಂದು ಸಾರಿ ನಮ್ಮ ಶಾಲೆಯಲ್ಲಿ ಕಾರ್ಯಕ್ರಮ. ಕತ್ತಲೆಗೆ ಮುಂಚೆ ಮನೆಗೆ ಬರಬೇಕೆಂದು ತಂದೆ ಹೇಳಿದ್ದರು, ಅದು ಸುಗ್ರೀವ ಶಾಸನ. ಆದರೆ ಕಾರಣಾಂತರಗಳಿಂದ ಕಾರ್ಯಕ್ರಮ ತಡವಾಗಿ ಮುಗಿಯಿತು. ನಾನು ಮನೆ ಸೇರುವಷ್ಟರಲ್ಲಿ ಕತ್ತಲೆಯಾಗಿ ಹೋಗಿತ್ತು. ಬಾಗಿಲನ್ನು ತೆಗೆದವರು ನನ್ನ ತಂದೆಯೇ. 'ನೀನು ಮಾತಿಗೆ ಮೀರಿದ್ದಕ್ಕೆ ಶಿಕ್ಷೆ ಅನುಭವಿಸು, ಅರ್ಧಗಂಟೆ ಆಚೆಯೇ ನಿಂತಿರು' ಎಂದು ಹೇಳಿ ಬಾಗಿಲನ್ನು ಹಾಕಿಬಿಟ್ಟರು. ನನ್ನ ಗೋಳಾಟ ನೋಡಲಾರದೆ ಅಮ್ಮ ಮೆಲ್ಲಗೆ ಹಿತ್ತಲು ಬಾಗಿಲಿನಿಂದ ಒಳಗೆ ಕರೆದುಕೊಂಡಳು. ಈಗಲೂ ಕತ್ತಲಾದ ನಂತರ ಮನೆಯಿಂದ ಹೊರಗೆ ಇದ್ದರೆ ಈ ಘಟನೆ ನೆನಪಾಗುತ್ತದೆ.

ಈಗ ನನ್ನ ಮಗ, ಮಗಳಿಗೆ ಮದುವೆಯಾಗಿ ನನಗೆ ಮೊಮ್ಮಕ್ಕಳು ಬಂದಿದ್ದಾರೆ. ಆದರೂ ನನಗೆ ತಂದೆಯನ್ನು ಕಂಡಾಗಲೆಲ್ಲ ಅದೇ ಭಯ. ಅದೇ ಗೌರವ. ತಮ್ಮ ಮಕ್ಕಳಲ್ಲಿ ಅವರಿಗೆ ಎಲ್ಲರಿಗಿಂತ ಹೆಚ್ಚು ವಿಧೇಯಳಾಗಿರುವುದು ನಾನೇ ಅನ್ನುವ ಮಾತನ್ನು ನನ್ನ ತಂದೆಯೂ ಒಪ್ಪುತ್ತಾರೆ. ಅವರಿಗೀಗ ೮೦ ವರ್ಷ. ಅವರು ನೂರು ವರ್ಷ ಬಾಳಬೇಕು, ಹೀಗೆಯೇ ಸಾರ್ಥಕವಾದ ಜೀವನವನ್ನು ನಡೆಸಬೇಕು ಎಂಬುದು ನನ್ನ ಆಸೆ.

ನನ್ನ ಅಣ್ಣಯ್ಯ

ಅರುಣ ಹರ್ಷವರ್ಧನ

ಅಣ್ಣಯ್ಯನ ಬಗ್ಗೆ ಸೊಸೆಯಾಗಿ ನಾನು ಬರೆಯುವುದೆಂದರೆ ದೊಡ್ಡದೊಂದು ಬೆಟ್ಟವನ್ನು ಕೇವಲ ಒಂದೇ ಮಗ್ಗುಲಲ್ಲಿ ನೋಡಿ ಚಿತ್ರಿಸಿದಂತೆ ಆದೀತು. ಆದರೂ ನಾನು ನೋಡಿದ ಒಂದು ಮಗ್ಗುಲನ್ನೇ ಪ್ರಮಾಣಿಕತೆಯಿಂದ ಚಿತ್ರಿಸುವ ಹಂಬಲ ದೊಂದಿಗೆ ಬರೆಯುವ ಇಚ್ಛೆ ನನ್ನದು.

೧೯೭೭ರ ಫೆಬ್ರುವರಿ–ಮಾರ್ಚ್ ತಿಂಗಳಿನ ಒಂದು ದಿನ ನಾನು, ನನ್ನ ತಾಯಿ ಮತ್ತು ಕುಟುಂಬದ ಸ್ನೇಹಿತರಾದ ಸಾಹಿತಿ ಶ್ರೀ ಸೂರ್ಯನಾರಾಯಣ ಚಡಗರೊಂದಿಗೆ ಮದುವೆಯ ಮಾತುಕತೆಗಳಿಗಾಗಿ ಮೈಸೂರಿನ ಜಯನಗರದಲ್ಲಿರುವ ಅಣ್ಣಯ್ಯನ ಮನೆಗೆ ಬಂದಿದ್ದೆವು. (ನನ್ನ ತಂದೆ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದ ಕಾರಣ ನನ್ನ ತಾಯಿಯೇ ತಂದೆಯ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು.) ನಾವು ಮನೆಗೆ ಬಂದ ತಕ್ಷಣ ಮುಂದೆ ನನ್ನವರಾಗಲಿದ್ದ ಶ್ರೀ ಹರ್ಷವರ್ಧನರು ನಮ್ಮನ್ನು ತಮ್ಮ ತಂದೆಗೆ ಪರಿ ಚಯ ಮಾಡಿಕೊಟ್ಟರು. ನಾವು ಒಳಗೆ ಬಂದು ಕುಳಿತು, ಮನೆಯ ಉಳಿದ ಜನರ ಪರಿ ಚಯ ಮಾಡಿಕೊಳ್ಳುತ್ತಿರುವಾಗ, ನನ್ನ ಕಣ್ಣಿಗೆ ವೆರಾಂಡದಲ್ಲಿ ಕಣ್ಣಲ್ಲಿ ನೀರು ತುಂಬಿ ಕೊಂಡು, ಭಾವುಕರಾಗಿ ನಿಂತಿದ್ದ ಅಣ್ಣಯ್ಯ ಕಾಣಿಸಿದರು. ನನಗೂ, ನನ್ನ ತಾಯಿಗೂ ತುಂಬಾ ಅಚ್ಚರಿಯಾಯಿತು. ಆದರೆ ಆ ತಕ್ಷಣದಲ್ಲಿ ತೋರ್ಪಡಿಸುವಂತಿಲ್ಲ. ಅಂದಿನ ಮಾತುಕತೆಗಳೆಲ್ಲ ಮುಗಿದು, ನನ್ನವರಾಗಲಿದ್ದ ಹರ್ಷ ಏಕಾಂತದಲ್ಲಿ ಸಿಕ್ಕ ಒಂದು ಗಳಿಗೆ ಯಲ್ಲೇ ಕೇಳಿದೆ–'ನಿಮ್ಮ ತಂದೆ ಅತ್ತದ್ದು ಯಾಕೆ?' ಎಂದು. ಅವರ ಉತ್ತರ ನನಗೆ ಇನ್ನಷ್ಟು ಅಚ್ಚರಿಯನ್ನು ತಂದಿತು. 'ನಮ್ಮ ಅಣ್ಣಯ್ಯ ತುಂಬಾ ಭಾವುಕರು, ಬಹು ಬೇಗ ಅತ್ತುಬಿಡುತ್ತಾರೆ... ಹಾಗೆಂದು ಅವರು ತುಂಬಾ ಮೃದು ಸ್ವಭಾವದವರೆಂದು ಕೊಳ್ಳಬೇಡ. ಅವರು ನಮ್ಮ ಕುಟುಂಬದಲ್ಲೆಲ್ಲ ಬೆಂಕಿ ರಾಮರಾಯರೆಂದೇ ಪ್ರಸಿ ದ್ಧರು...' ಎಂದು ಎಚ್ಚರಿಕೆಯ ದನಿಯಲ್ಲಿ ಹೇಳುವುದನ್ನು ಮರೆಯಲಿಲ್ಲ. ಹರ್ಷ 'Be careful' ಎಂಬ ದನಿಯಲ್ಲಿ ಹೇಳಿದ ಮಾತು ಅವರನ್ನು ತಕ್ಷಣ ನನ್ನ ಅಂತರಂಗದ ಹತ್ತಿರ ಬರುವಂತೆ ಮಾಡಿತು. ನನ್ನ ತಂದೆ (ಸಾಹಿತಿ ದಿ| ಐರೋಡಿ ಯಜ್ಞನಾರಾಯಣ ಉಡುಪರು.) ಅವರ ಹತ್ತಿರದ ಸ್ನೇಹಿತ, ಕುಟುಂಬ ವರ್ಗದಲ್ಲೆಲ್ಲ ಬೆಂಕಿ ಉಡುಪರೆಂದೇ ಪ್ರಸಿದ್ಧರಾಗಿದ್ದರು. ಆ ಬೆಂಕಿ ಉಡುಪರ ಕೋಪ ತಾಪಗಳನ್ನು ತಣಿಸಬಲ್ಲ ಮುದ್ದಿನ ಮಗಳಾಗಿದ್ದ ನನಗೆ 'ಬೆಂಕಿ' ಎಂಬ ಶಬ್ದವು ಭಯವನ್ನು ಹುಟ್ಟಿಸುವ ಬದಲು ಒಂದು

ರೀತಿಯ ಆತ್ಮೀಯ ಸೆಳೆತವನ್ನು ತಂದಿತು. 'ಹುಡುಗ ಹೇಗೆ' ಎಂದು ನನ್ನ ಅಮ್ಮ ಶ್ರೀ ಚಡಗರನ್ನು ಕೇಳಿದಾಗ ಅವರು 'ಹುಡುಗನ ವಿಚಾರ ನನಗೆ ಏನೂ ತಿಳಿದಿಲ್ಲ. ಆದರೆ ಸಪ್ಪೇತನಹಳ್ಳಿ ರಾಮರಾಯರ ಮಗ ದುಷ್ಟ ಆಗಿರಲು ಸಾಧ್ಯವೇ ಇಲ್ಲ' ಎಂದು ಹೇಳಿದುದು ಅಣ್ಣಯ್ಯನ ಸಚ್ಚಾರಿತ್ರ್ಯದ ವ್ಯಕ್ತಿತ್ವವನ್ನು ನಮಗೆ ಪರಿಚಯಿಸಿತು.

೧೯೭೭ರ ಮೇ ೧೫ ರಂದು ತುಂಬಿದ ಮನೆಗೆ ಹಿರಿಯ ಸೊಸೆಯಾಗಿ ಪ್ರವೇಶಿಸಿದೆ. ಹೊಸ ಪರಿಸರ, ಹೊಸದಾಂಪತ್ಯ, ಭಯ, ಆತಂಕದ ದಿನಗಳವು. ನಾನು ಸ್ಮಾರ್ತ ಕುಟುಂಬದಿಂದ ಬಂದವಳಾದ ಕಾರಣ ಮಾಧ್ವಮಠವೊಂದರಲ್ಲಿ ನನಗೆ ಮುದ್ರೆ ಹಾಕಿಸಬೇಕೆಂಬ ಮಾತು ಮನೆಯಲ್ಲಿ ಬಂದಿತು. ಅದನ್ನು ತಿಳಿದು ನಾನು ಭಯಗೊಂಡೆ. ನನ್ನ ಭಯವನ್ನು ನೋಡಿ (ಮುದ್ರೆ ಹಾಕುವುದೆಂದರೆ ಏನೆಂದು ನನ್ನ ಪತಿ ಅಪ್ಪರಲ್ಲಿ ನನಗೆ ಭಯಂಕರವಾಗಿ ವರ್ಣಿಸಿದ್ದರು) ನನ್ನ ಪತಿ ಅಣ್ಣಯ್ಯನ ಹತ್ತಿರ ಈ ಬಗ್ಗೆ ಮಾತಾಡಿರಬೇಕು. ಒಂದು ದಿನ ಅಣ್ಣಯ್ಯನ ಆಜ್ಞೆ ಹೊರಟಿತು. 'ಮುದ್ರೆ ಗಿದ್ರೆ ಏನೂ ಬೇಕಿಲ್ಲ. ಯಾವ ಕ್ಷಣದಲ್ಲಿ ಅವಳ ತಂದೆತಾಯಿ ನಮಗೆ ಕನ್ಯಾದಾನ ಮಾಡಿಕೊಟ್ಟರೋ, ಆ ಕ್ಷಣದಿಂದಲೇ ಅವಳು ಮಾಧ್ವಳಾದಳು . . .' ಎಂದು. ಅಣ್ಣಯ್ಯನ ಆಜ್ಞೆ ಎಂದರೆ ಯಾವ ರಾಜಾಜ್ಞೆಗೂ ಕಮ್ಮಿ ಇಲ್ಲ. ಮುದ್ರಾ ಪ್ರಕರಣ ಅಲ್ಲಿಗೇ ಮುಗಿಯಿತು.

ಸುಮಾರು ೨೦ ವರ್ಷಗಳಿಂದ ಅಣ್ಣಯ್ಯನ ಜತೆಯಲ್ಲೇ ವಾಸಿಸುತ್ತಾ, ಅವರ ಕೋಪ ತಾಪ, ಪ್ರೀತಿ ವಿಶ್ವಾಸಗಳೆಲ್ಲವನ್ನೂ ಧಾರಾಳವಾಗಿ ಸವಿಯುತ್ತಿರುವ ನನ್ನ ಸಂಸಾರ ಅವರ ದೂರದರ್ಶಿತ್ವ, ವ್ಯವಹಾರ ಪ್ರಜ್ಞೆ, ಸತ್ಯ ನ್ಯಾಯಗಳ ಬಗ್ಗೆ ಇರುವ ಕಠೋರ ನಿಷ್ಠುರತೆಗಳಿಂದ ಅಪಾರ ಸಂರಕ್ಷಣಾ ಭಾವವನ್ನು ಅನುಭವಿಸುತ್ತಿದೆ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಎಂಬ ಮಾತು ನನ್ನ ಅಣ್ಣಯ್ಯನಿಗೆ ಒಪ್ಪಿದಂತೆ ಇನ್ನಾರಿಗೂ ಒಪ್ಪಲು ಸಾಧ್ಯವಿಲ್ಲ ಎನ್ನುವುದು ನನ್ನ ಅನಿಸಿಕೆ. ತನ್ನ ಮನಸ್ಸಿಗೆ ನ್ಯಾಯವೆಂದು ತೋರಿದುದನ್ನು ಯಾವುದೇ ರೀತಿಯ ಮೋಹ, ಸೆಳೆತಗಳಿಗೆ ಒಳಗಾಗದೆ ವ್ಯಕ್ತಪಡಿಸುವುದನ್ನು ಅಣ್ಣಯ್ಯನಲ್ಲಿ ಕಂಡಂತೆ ನಾನು ಬಹುಜನರಲ್ಲಿ ಕಂಡಿಲ್ಲ. ತನ್ನ ಪಾಲಿಗೆ ಬಂದ ಕರ್ತವ್ಯವನ್ನು ನೂರಕ್ಕೆ ನೂರು ಶ್ರದ್ಧೆಯಿಂದ ಪಾಲಿಸುವ ಅವರ ಸ್ವಭಾವ ಕೆಲವೊಮ್ಮೆ ನಮಗೆಲ್ಲ ಉಸಿರುಗಟ್ಟಿಸುವುದೂ ಉಂಟು.

ಸುಮಾರು ಒಂಬತ್ತು ವರ್ಷಗಳ ಹಿಂದೆ ನಡೆದ ಘಟನೆ. ನನ್ನ ಬ್ಯಾಂಕಿನವರು ನನ್ನನ್ನು ಬೆಂಗಳೂರಿನ ಗಾಂಧೀನಗರದಲ್ಲಿರುವ ವಲಯ ಕಚೇರಿಗೆ ಒಂದು ವಾರದ ತರಬೇತಿಗಾಗಿ ಕಳಿಸಿದ್ದರು. ವಿಜಯನಗರದಲ್ಲಿರುವ ನನ್ನ ನಾದಿನಿಯ ಮನೆಯಿಂದ ಗಾಂಧೀನಗರಕ್ಕೆ ದಿನಾ ಓಡಾಡುವ ಭರವಸೆ ನನಗಿತ್ತು. ಆದರೆ ನನ್ನ ಅಣ್ಣಯ್ಯ ಕೇಳಬೇಕಲ್ಲ. ನನ್ನೊಂದಿಗೆ ಅವರೂ ಬೆಂಗಳೂರಿಗೆ ಬಂದರು. (ನನ್ನ ಪತಿ ಆಗ ವಿದೇಶದಲ್ಲಿದ್ದರು.) ಮೊದಲ ದಿನ, ದಾರಿತೋರಿಸುವ, ಮಾರ್ಗದರ್ಶಿಯಾಗಿ ನನ್ನೊಂದಿಗೆ ಬ್ಯಾಂಕ್ ತನಕವೂ ಬಿಟ್ಟು ವಾಪಾಸು ಬಂದರು. ಸಂಜೆ ತರಗತಿ ಮುಗಿಸಿ ಹೊರಬರುವಾಗ ಮೆಟ್ಟಿಲ ಮೇಲೆ ಅಣ್ಣಯ್ಯ ಕುಳಿತಿದ್ದರು. 'ನಾನೇ ಬರುತ್ತಿದ್ದೆನಲ್ಲ' ಎಂದೆ. 'ಇರಲಿ—ಮೊದಲ ದಿನ

ಅಲ್ಲವೇ ? ಅದಕ್ಕೇ ಬಂದೆ' ಎಂದರು. ಮರುದಿನ ಬೆಳಿಗ್ಗೆ ಪುನಃ ನನ್ನೊಂದಿಗೆ ಹೊರ ಟರು. 'ನೀವು ಬರಬೇಡಿ–ನನ್ನ ಪಾಡಿಗೆ ನಾನು ಹೋಗುತ್ತೇನೆ' ಎಂದೆ. 'ನೀನು ನಿನ್ನ ಪಾಡಿಗೆ ನಾನಿಲ್ಲ ಎಂದು ತಿಳಿದು ಹೋಗುತ್ತಿರು. ನಿನಗೆ ದಾರಿ ತಿಳಿದಿದೆಯೇ ಎಂದು ಇವತ್ತು confirm ಮಾಡಿಕೊಳ್ಳುತ್ತೇನೆ' ಎಂದರು. ಬ್ಯಾಂಕ್‌ತನಕ ಬಂದು ಮನೆಗೆ ವಾಪಾಸಾದರು. ಸಂಜೆ ಅಣ್ಣಯ್ಯ ಪುನಃ ಬ್ಯಾಂಕ್‌ನ ಮೆಟ್ಟಿಲ ಮೇಲೆ ಹಾಜರು. 'ಯಾಕೆ ಬಂದಿರಿ ?' ಎಂಬ ನನ್ನ ಪ್ರಶ್ನೆಗೆ 'ಮೋಡ ಮುಸುಕಿದೆ ನೋಡು–ಒಬ್ಬಳೇ ಮಳೆಗೆ ಸಿಕ್ಕರೆ ಎಂದು ಯೋಚಿಸಿ ಬಂದೆ' ಎಂಬ ಉತ್ತರ ಸಿದ್ಧವಾಗಿತ್ತು. ಆದರೆ ಮರುದಿನ 'ನನಗೆ ಸಮೇತನಹಳ್ಳಿಯಲ್ಲಿ ಸ್ವಲ್ಪ ಕೆಲಸವಿದೆ. ನಿನ್ನನ್ನು ಬಿಟ್ಟು ಹಾಗೇ ಊರಿಗೆ ಹೋಗುತ್ತೇನೆ' ಎಂದು ಬ್ಯಾಂಕ್ ತನಕ ಬಂದರೆ, ಸಂಜೆ ತರಗತಿ ಮುಗಿಸಿ ಹೊರಗೆ ಬರು ವಾಗ ಸಮೇತನಹಳ್ಳಿಯಿಂದ ವಾಪಾಸು ಬಂದು ಮೆಟ್ಟಿಲ ಮೇಲೆ ಕುಳಿತಿದ್ದರು. ಅದರ ಮರುದಿನ 'ಮನೆಯಲ್ಲೇ ಕುಳಿತಿದ್ದು ನಾನು ಏನು ಮಾಡಲಿ ? ನನಗೂ ಬೇಜಾರು ನಡಿ. ನಾನೂ ಬರುತ್ತೇನೆ' ಎಂದು ಬ್ಯಾಂಕ್‌ತನಕ ಬಂದು ಬಿಟ್ಟು, ಸಂಜೆ ವಾಪಾಸು ಕರೆದು ಕೊಂಡು ಹೋದರು. ಅಷ್ಟರಲ್ಲಿ ನನ್ನ ಗೆಳತಿಯರು ನನಗೆ ತಮಾಷೆಮಾಡಲು ಪ್ರಾರಂಭಿ ಸಿದ್ದರು. ಹಾಗಾಗಿ ಮರುದಿನ ಖಂಡಿತ ಬರಕೂಡದು ಎಂದು ಹೇಳಿದೆ. ನಾನು ಖಡಾ ಖಂಡಿತವಾಗಿ ಹೇಳಿದಾಗ ಅಣ್ಣಯ್ಯ ತಮ್ಮ 'ವೀಟೋ ಪವರ್' ಚಲಾಯಿಸಿಯೇ ಬಿಟ್ಟರು. 'ನಾನು ಇಲ್ಲಿಗೆ ಬಂದದ್ದೇ ನಿನ್ನ ರಕ್ಷಣೆಗಾಗಿ. ನಿನಗೆ ಬೆಂಗಳೂರು ಹೊಸತು. ಯಾರನ್ನೂ ನಂಬುವುದು ಕಷ್ಟ ಈಗ. ಏನಾದರೂ ಹೆಚ್ಚು ಕಡಿಮೆಯಾದರೆ ನನ್ನ ಮಗ ನಿಗೆ ಏನು ಹೇಳಲಿ ?' ಎಂದು ಮುಖ ಕೆಂಪು ಮಾಡಿಕೊಂಡು ಗದರುತ್ತಾ ಹೊರಟೇ ಬಿಟ್ಟರು. ಅವರಿಗೆ ಕೋಪ ಬಂದಾಗ ಎದುರಲ್ಲಿ ನಿಂತು ಮಾತಾಡುವ ಧೈರ್ಯ ಯಾರಿ ಗಿದೆ ? ಸಂಜೆ ಪುನಃ ಬಂದಿದ್ದರು. ನಾನೂ ಕೋಪದಿಂದ ಒಂದೇ ಒಂದು ಮಾತಾಡದೆ ಜತೆಯಲ್ಲೇ ಬಂದೆ. ನನ್ನ ಕೋಪ ಅರ್ಥ ಆಗಿರಬೇಕು. ಮರುದಿನ 'ಇಂದು ಕೊನೇ ದಿನ ಅಲ್ಲವೇನಮ್ಮ ? ಇಷ್ಟು ದಿನಾನೇ ಕಳೆಯಿತಂತೆ. ಒಂದು ದಿನ ನನಗೆ ಯಾಕೆ ಸುಮ್ಮನೇ ಆತಂಕ ಮಾಡ್ತೀಯಾ ? ನಡೆ–ನಾನೂ ಬರುತ್ತೇನೆ' ಎಂದು ಅವತ್ತೂ ಬೆಳಿಗ್ಗೆ ಬಿಟ್ಟು ಸಂಜೆ ಕರೆದುಕೊಂಡು ಬಂದದ್ದಾಯಿತು. ಅಣ್ಣಯ್ಯನ ಈ ಅತಿ ಕಾಳಜಿಯನ್ನು ನನ್ನ ತವರಲ್ಲಿ ನಾನು ಹೇಳಿದರೆ 'ಅಣ್ಣಯ್ಯ ಇರುವ ತನಕ ನಿನ್ನ ಬಗ್ಗೆ ನನಗೆ ಯಾವ ರೀತಿಯ ಆತಂಕವೂ ಇಲ್ಲಮ್ಮ' ಎಂದು ನನ್ನ ತಾಯಿ ಅಣ್ಣಯ್ಯನ ಅತಿ ಆತಂಕದ ಸ್ವಭಾವಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿಬಿಟ್ಟಳು.

ಅವರ ಈ ಪ್ರೀತಿ ಕೆಲವೊಮ್ಮೆ ನಮಗೆ ಉಸಿರುಗಟ್ಟಿಸುವುದೂ ಇದೆ. ಉದ್ಯೋಗ ದಲ್ಲಿರುವ ನನಗೆ ಒಮ್ಮೊಮ್ಮೆ ಅನಿವಾರ್ಯವಾಗಿ ಆಟೋದಲ್ಲಿ ಒಬ್ಬಳೇ ಓಡಾಡಬೇಕಾಗಿ ಬರುತ್ತದೆ. ಆಗೆಲ್ಲಾ ಅವರಿಗೆ ಅಸಮಾಧಾನ–ಒಮ್ಮೊಮ್ಮೆ ಕೋಪ. (ಅದಕ್ಕಾಗಿ ಮನೆ ಯಿಂದ ಸ್ವಲ್ಪ ದೂರದಲ್ಲೇ ಆಟೋ ನಿಲ್ಲಿಸಿ, ಅಲ್ಲಿಂದ ನಡೆದು ಬಂದದ್ದೂ ಉಂಟು.) ನನ್ನ ಈ ನಲವತ್ತನಾಲ್ಕನೇ ವಯಸ್ಸಲ್ಲೂ ನನ್ನ ತವರು ಮನೆಗೆ ಒಬ್ಬಳೇ ಹೋಗು

ವಂತಿಲ್ಲ. ಮದುವೆಯಾಗಿ ಬಹಳ ವರ್ಷಗಳ ತನಕ ತಮ್ಮಂದಿರು ಮನೆಗೇ ಬಂದು ಕರೆದು ಕೊಂಡು ಹೋಗಬೇಕೆಂಬ ಷರತ್ತು ಹಾಕುತ್ತಾರೆ (ಇಲ್ಲಿ ಬಸ್ ಹತ್ತಿಸಿ ಬಿಡುವ ಜವಾಬ್ದಾರಿ ಅಣ್ಣಯ್ಯನದು) ನನ್ನ ತಮ್ಮಂದಿರು ನಗುತ್ತಲೇ, ಹಾಸ್ಯ ಮಾಡುತ್ತಲೇ ಈ ಕೆಲಸ ಮಾಡುತ್ತಾರೆ. ದಿನಾ ಮನೆಗೆ ಬರುವ ಸಮಯಕ್ಕಿಂತ ಅರ್ಧ ಗಂಟೆ ತಡವಾದರೂ ಅಂಗಳದಲ್ಲಿ ಅಸಹನೆಯಿಂದ ಶತಪಥ ತಿರುಗುವ ಅಣ್ಣಯ್ಯ ನಮ್ಮ ಮುಖ ನೋಡಿದ ತಕ್ಷಣ, ನಮ್ಮ ವಿವರಣೆ ಕೇಳುವ ಮೊದಲೇ ಆಸ್ಫೋಟಿಸುವುದೂ ಉಂಟು. ನನ್ನ ಮಕ್ಕಳ ಬಗ್ಗೆಯಂತೂ ಅವರ ಮಿದುಳಿನಲ್ಲಿ built in alarm ಇದೆ ಎಂದು ನನ್ನ ಪತಿ ತಮಾಷೆ ಮಾಡುತ್ತಾರೆ.

ಹೊರ ಜಗತ್ತಿನಲ್ಲಿ ಏನಾಗುತ್ತಿದೆ ಎಂದೇ ತಿಳಿಯದಷ್ಟು ತನ್ಮಯತೆಯಿಂದ ಓದುತ್ತಾ ಬರೆಯುತ್ತಾ ಕುಳಿತಿರುತ್ತಾರೆ. ಮಕ್ಕಳು ಶಾಲೆಯಿಂದ ಬರುವ ಹೊತ್ತಿಗೆ ಸರಿಯಾಗಿ ಕೆಳಗಿಳಿದು ಬಂದು 'ಮಕ್ಕಳು ಯಾಕೆ ಬಂದಿಲ್ಲ ಇನ್ನು' ಎಂದು ಸ್ವಗತ ಹೇಳುತ್ತಾ ಓಡಾಡುತ್ತಿರುತ್ತಾರೆ. ಮಕ್ಕಳು ಬಂದ ತಕ್ಷಣ, ಒಮ್ಮೆ ಮುದ್ದುಮಾಡಿ, ತಮ್ಮ ಕೋಣೆ ಸೇರಿ ಮತ್ತೆ ಓದು ಬರಹಗಳಲ್ಲಿ ಮುಳುಗುತ್ತಾರೆ. ಅಧ್ಯಯನ ಈ ಶಿಸ್ತು ಕಠಿಣತೆ ನಮಗೆಲ್ಲ ಕೆಲವೊಮ್ಮೆ ಅಸಹನೆ ತಂದರೂ, ಅದರ ಹಿಂದಿರುವ ನಮ್ಮೆಲ್ಲರ ಬಗೆಗಿನ ಅವರ ಕಾಳಜಿ, ಮಮತೆಯನ್ನು ಅರ್ಥಮಾಡಿಕೊಂಡು, ಆಗಾಗ ನಮ್ಮಲ್ಲೇ ಗೊಣಗಾಡುತ್ತಾ, ಅಣ್ಣಯ್ಯನ ಇಷ್ಟದಂತೇ ನಡೆಯುತ್ತೇವೆ.

'ಭಗವಂತ ನಡೆಸಿದಂತಾಗುತ್ತದೆ. ನಮ್ಮ ಪ್ರಯತ್ನದಲ್ಲಿ ಕುಂದಿರಬಾರದು. ಆದರೆ ಬಂದುದನ್ನು ಬಂದಂತೆ ಸ್ವೀಕರಿಸಬೇಕು' ಎಂದು ನಮಗೆಲ್ಲ ಯಾವಾಗಲೂ ಹೇಳುವ ಅಣ್ಣಯ್ಯ ಪೂಜೆ ಪುರಸ್ಕಾರಗಳಲ್ಲಿ ಶ್ರದ್ಧೆ ಇಟ್ಟವರಲ್ಲ. ದಿನಾ ಪೂಜೆ ಮಾಡದಿದ್ದರೂ ಮಕ್ಕಳ, ಮೊಮ್ಮಕ್ಕಳ ಹುಟ್ಟು ಹಬ್ಬಗಳಂದು ಶ್ರದ್ಧೆಯಿಂದ ಪೂಜೆ ಮಾಡಿ, ಕಣ್ಣೀರು ತುಂಬಿ, ಮಕ್ಕಳ ಮೊಮ್ಮಕ್ಕಳ ಶ್ರೇಯಸ್ಸನ್ನು ಬೇಡುವುದುಂಟು. ನಾವು ಕಷ್ಟಕ್ಕೆ ಸಿಲುಕಿದಾಗ ನಮಗಿಂತ ಹೆಚ್ಚು ನೋಯುವವರು ಅಣ್ಣಯ್ಯ. ನಮ್ಮ ಕಷ್ಟಗಳನ್ನು ಅಣ್ಣಯ್ಯ ಪರಿಹರಿಸುತ್ತಾರೆ ಎಂಬ ಭರವಸೆ ನಮಗೆ ಶಕ್ತಿ ತುಂಬುತ್ತದೆ.

ಯಾವ ಉತ್ತಮ ವಿದ್ಯಾರ್ಥಿಯೂ ನಾಚುವಂತಹ ದಿನಚರಿ ಅಣ್ಣಯ್ಯನದು. ಬೆಳಗ್ಗೆ ನಾಲ್ಕಕ್ಕೋ, ೫ಕ್ಕೋ ದೀಪ ಉರಿಯುತ್ತಿದ್ದರೆ ಅದು ವಿದ್ಯಾರ್ಥಿಗಳಾದ ನನ್ನ ಮಕ್ಕಳ ಕೋಣೆಯಲ್ಲಲ್ಲ, ಎಂಭತ್ತು ವರ್ಷದ ವೃದ್ಧ ಅಣ್ಣಯ್ಯನ ಕೋಣೆಯಲ್ಲಿ. ಈ ವಯಸ್ಸಲ್ಲೂ ಗಂಟೆಗಟ್ಟಳೆ ಎಡೆಬಿಡದೆ ಓದುತ್ತಾರೆ–ಬರೆಯುತ್ತಾರೆ. ಮನೆಯ ಸುತ್ತ ಪುಟ್ಟ ತೋಟ ಮಾಡಿದ್ದಾರೆ. ಅದರ ಆರೈಕೆ ಸಂಪೂರ್ಣ ಅವರದೇ, ಎರಡು, ಮೂರು ದಿನಗಳ ಕಾಲ ಬೇರೆ ಊರಿಗೆ ಹೋಗಬೇಕಾಗಿ ಬಂದಾಗ ಮನೆಗೆ ಬಂದ ತಕ್ಷಣ ನೋಡುವುದು ಗಿಡಗಳ ಬುಡಗಳನ್ನು. ಅವು ಒಣಗಿದ್ದರೆ ನಮಗೆ ಮಂಗಳಾರತಿ ತಪ್ಪಿದ್ದಲ್ಲ. ತೋಟದಲ್ಲಿ ಅರಳುವ ಮಲ್ಲಿಗೆ, ಗುಲಾಬಿ ಹೂಗಳನ್ನು ದೇವರಿಗೂ ಏರಿಸುವುದಿಲ್ಲ. ನಾವು ಮುಡಿಯುವ ಬಗ್ಗೆ ಕೂಡಾ ಪೂರ್ಣ ಸಮಾಧಾನವಿಲ್ಲ. ಹೂಗಳು ಗಿಡದಲ್ಲೇ ಪೂರ್ಣ

ಆಯುಸ್ಸನ್ನು ಕಳೆದು ಬಾಡಿ, ಉದುರಿದರೇ ಅವರಿಗೆ ತೃಪ್ತಿ.

ಇಂದಿಗೂ ಮೈಲಿಗಟ್ಟಲೆ ನಡೆಯುತ್ತಾರೆ. ತಮ್ಮೆಲ್ಲಾ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದಲ್ಲದೆ, ಫೋನ್ ಬಿಲ್ ಕಟ್ಟುವುದು, ಜೀವ ವಿಮಾ ಕಂತುಗಳನ್ನು ತುಂಬುವುದು ಇತ್ಯಾದಿ ಮನೆಯ ಕೆಲಸಗಳನ್ನು ಮಾಡುತ್ತಾರೆ. ಮೊಮ್ಮಕ್ಕಳಿಗೆ ಸಂಬಂಧ ಪಟ್ಟ 'ಶಾಪಿಂಗ್' ಏನಾದರೂ ಇದ್ದರೆ ಅದನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಾರೆ. ಊಟ ತಿಂಡಿಗಳಲ್ಲಿ ಬಹಳ ನಿಯಮವನ್ನು ಪಾಲಿಸುತ್ತಾರೆ. (ಅವರ ಆರೋಗ್ಯದ ಗುಟ್ಟು ಅದೇ ಇರಬಹುದೇನೋ? ಹಾಗಾಗಿ ಅವರ ಮಕ್ಕಳು ಇರಬೇಕಾದ್ದಕ್ಕಿಂತ ಹೆಚ್ಚಿನ ತೂಕ ಬೆಳೆಸಿ, ತಮ್ಮ ದೇಹದ ಸಮಸ್ಯೆಗಳ ಬಗ್ಗೆ ಚರ್ಚಿಸುವಾಗ, ಅಣ್ಣಯ್ಯ ನೋಡು ಎಷ್ಟು ಪುಣ್ಯವಂತರು, ಚೆನ್ನಾಗಿ figure maintain ಮಾಡಿದ್ದಾರೆ. ಅಲ್ಲದೆ ಯಾವುದೇ ರೀತಿಯ ಸಮಸ್ಯೆಗಳೂ ಇಲ್ಲ' ಎಂಬ ಹೊಗಳಿಕೆಗೂ ಪಾತ್ರರಾಗುತ್ತಾರೆ. ಐದಾರು ವರ್ಷಗಳ ಹಿಂದಿನ ತನಕವೂ ಅವರು ಕಬ್ಬನ್ನು ಹಲ್ಲಿನಿಂದಲೇ ಕಿತ್ತು ತಿನ್ನುತ್ತಿದ್ದುದನ್ನು ನಾನು ನೋಡಿದ್ದೇನೆ. (ಇವತ್ತಿಗೂ ಬಹುಶಃ ನಮ್ಮೆಲ್ಲರ ಬಾಯಲ್ಲಿ ಇರುವುದಕ್ಕಿಂತ ಅಣ್ಣಯ್ಯನ ಬಾಯಲ್ಲಿ ಜಾಸ್ತಿ ಹಲ್ಲುಗಳಿವೆ.)

ಪ್ರತಿಯೊಂದರಲ್ಲೂ ಶಿಸ್ತು, ಅಚ್ಚುಕಟ್ಟುತನ ಅಣ್ಣಯ್ಯನಲ್ಲಿ ನಾನು ನೋಡಿರುವ ಇನ್ನೊಂದು ವಿಶಿಷ್ಟ ಗುಣ. ಲಕ್ಷಾಂತರ ಬೆಲೆಯ ಸಾವಿರಾರು ಪುಸ್ತಕಗಳಿರುವ ನಮ್ಮ ಮನೆಯ ಪುಸ್ತಕ ಭಂಡಾರದಲ್ಲಿ ಯಾವುದೇ ಪುಸ್ತಕ ಬೇಕೆಂದರೂ ತಕ್ಷಣ ಸಿಗುವುದು ಅಣ್ಣಯ್ಯನ ದಯೆಯಿಂದ. ಅವರ ಕೋಣೆ, ಮೇಜು, ಬೀರು, ಹಳೇ ದಾಖಲೆಗಳು ಎಲ್ಲವೂ ಶಿಸ್ತಿಗೊಳಪಟ್ಟೇ ಇರಬೇಕು. ದುಡ್ಡನ್ನಾದರೆ ಗಳಿಸಬಲ್ಲೆವು, ದಾಖಲೆಗಳನ್ನು ಸಾಧ್ಯವಿಲ್ಲ ಎಂದು ಸಣ್ಣ ಕಾಗದವನ್ನೂ ಹಾಳು ಮಾಡದೆ, ಒಂದೊಂದು ವಿಷಯಕ್ಕೆ ಒಂದೊಂದು ಫೈಲ್ ಮಾಡಿ, ನಂಬರುಗಳನ್ನು ಕೊಟ್ಟು, ಅಚ್ಚು ಕಟ್ಟಾಗಿ ಜೋಡಿಸಿಟ್ಟುದನ್ನು ನೋಡುವುದೇ ಒಂದು ಸೊಗಸು.

ಜೀವನದ ಈ ಸಂಧ್ಯಾ ಕಾಲವನ್ನು ತಲುಪುವುದರೊಳಗೆ ಸೋತು ಸುಣ್ಣವಾಗುವಷ್ಟರ ಮಟ್ಟಿಗೆ ಜವಾಬ್ದಾರಿ, ನೋವು, ನಿರಾಶೆ, ಅವಮಾನ, ಕಷ್ಟಗಳನ್ನು ಸಹಿಸಿ, ನುಂಗಿ ಜೀವನವನ್ನು ಎದುರಿಸುವುದು ಎಂದರೆ ಹೇಗೆಂದು ಕಿರಿಯ ಪೀಳಿಗೆಗೆ ತಮ್ಮ ಜೀವನವನ್ನೇ ಮಾರ್ಗದರ್ಶಿಯಾಗಿ ತೆರೆದಿರಿಸಿದ ಅಣ್ಣಯ್ಯ, ತಮ್ಮ ಪಕ್ವವಾದ ಬಾಳಿನ ಅನುಭವಗಳನ್ನು 'ಕೋಟೆ ಮನೆ' ಎಂಬ ಆತ್ಮಚರಿತ್ರೆಯಲ್ಲಿ ಹೃದಯಂಗಮವಾಗಿ ವಿವರಿಸಿದ್ದಾರೆ. ಈ ಇಳಿವಯಸ್ಸಿನಲ್ಲಿ ಮಕ್ಕಳೆಲ್ಲ ನೆಲೆ ನಿಂತ ನೆಮ್ಮದಿಯನ್ನು ಸಂಪೂರ್ಣವಾಗಿ ಅನುಭವಿಸುವ ಯೋಗವೂ ಅವರಿಗಿಲ್ಲವೇನೋ ಎಂಬ ವ್ಯಥೆ ಒಮ್ಮೊಮ್ಮೆ ನನಗಾಗುತ್ತದೆ. ತಮ್ಮ ಹದಿಹರೆಯದಲ್ಲೇ ಒಡ ಹುಟ್ಟಿದವರ, ಹೆತ್ತವರ ಭಾರವನ್ನು ತಮ್ಮ ಎಳೆ ಹೆಗಲುಗಳ ಮೇಲೆ ಹೊತ್ತು, ತನ್ನ ಬಾಯಿಗೆ ಹೋಗಬೇಕಾದ ತುತ್ತನ್ನು ನಂಬಿದವರ ಬಾಯಿಗೆ ಹಾಕಿ ಸಲಹಿದ ವ್ಯಕ್ತಿಗಳು ಈ ಇಳಿ ವಯಸ್ಸಿನಲ್ಲಿ ಊರುಗೋಲಾಗುವುದರ ಬದಲು, ಬೆನ್ನಿಗೆ ಇರಿವ ಶೂಲವಾದರೆಂಬ ನೋವು ಸದಾ ಅವರನ್ನು ಕಾಡುತ್ತಿದೆ.

ನಮ್ಮೆಲ್ಲರ ಜೀವನದಲ್ಲಿ ಸಮಸ್ಯೆಗಳ, ಕಷ್ಟದ ಅಲೆಗಳ ಹೊಡೆತ ತೀವ್ರವಾಗಿ, ಅದನ್ನು ತಾಳಲಾರದೆ ತತ್ತರಿಸುವ ದಿನಗಳು ಬಂದಾಗಲೆಲ್ಲ, ನಮ್ಮೊಂದಿಗೆ ತಾವೂ ಅದಕ್ಕೆ ಬಂಡೆಯಂತೆ ಎದೆಯೊಡ್ಡಿ ನಿಂತು, ಮಕ್ಕಳೆಲ್ಲರಿಗೂ ಅಪಾರವಾದ ಸಂರಕ್ಷಣಾ ಭಾವ ವನ್ನು ತರುತ್ತಿರುವ ಅಣ್ಣಯ್ಯ ನೂರು ವರ್ಷಗಳ ಕಾಲ ಆರೋಗ್ಯವಂತರಾಗಿ, ನಮಗೆ ದಾರಿದೀಪವಾಗಿ ಬಾಳಲಿ ಎಂಬುದೇ ಭಗವಂತನಲ್ಲಿ ನನ್ನ ಬೇಡಿಕೆ.

ನಿಮ್ಮ ಕಾಗದ ಓದಿದಾಗ ನನ್ನ ಮನಸ್ಸಿಗೆ ನಿಜವಾಗಿ ವ್ಯಥೆಯಾಯಿತು. ನಮ್ಮ ದೇಶದ ದೌರ್ಭಾಗ್ಯ : ಎಲ್ಲ ಕ್ಷೇತ್ರಗಳಲ್ಲಿಯೂ ನಿಷ್ಠೆಯಿಂದ ಕೆಲಸ ಮಾಡುವವರಿಗೆ ಒಂದಲ್ಲ ಒಂದು ಕಹಿವಾತಾ ವರಣ ನಿರ್ಮಾಣವಾಗುತ್ತದೆ. ಸಾಹಿತಿಗಳೂ, ಜನಪ್ರಿಯರೂ, ಕಾರ್ಯದಕ್ಷರೂ ಆದ ನಿಮ್ಮ ರಾಜೀ ನಾಮೆಯಿಂದ ಪರಿಷತ್ತಿನ ಕೆಲಸಕ್ಕೆ ತುಂಬಾ ನಷ್ಟವಾಗುವುದೆಂಬುದನ್ನು ನಾನು ಅರಿತಿದ್ದೇನೆ. ಮನ ನೋಯುವ ಪ್ರಸಂಗಗಳ ಮಧ್ಯೆ ತಾವು ಕೆಲಸ ಮಾಡುವುದು ಕಷ್ಟವೆಂದು ನಿಮ್ಮ ಮನಸ್ಸಿಗೆ ದೃಢವಾ ಗಿರುವಾಗ ನೀವು ಬರೆದ ಎರಡೂ ಕಾಗದಗಳಲ್ಲೂ ಈ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವಾಗ ನೀವು ರಾಜೀನಾಮೆ ಪತ್ರವನ್ನು ಹಿಂತೆಗೆದುಕೊಳ್ಳಬೇಕೆಂದು ಪುನಃ ಒತ್ತಾಯಪಡಿಸುವುದು ಸರಿಯಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ. ಆ ಕಾರಣ ನಿಮ್ಮ ರಾಜೀನಾಮೆಯನ್ನು ಅಂಗೀಕರಿಸಿದ್ದೇನೆ.

ತಾವು ಜಿಲ್ಲಾ ಸಮಿತಿ ಅಧ್ಯಕ್ಷಸ್ಥಾನದಿಂದ ವಿರಾಮ ಪಡೆದರೂ ಪರಿಷತ್ತಿನ ಮೂಲಕ ಆ ಜಿಲ್ಲೆ ಯಲ್ಲಿ ಆಗಬೇಕಾದ ಕನ್ನಡದ ಕೆಲಸಕಾರ್ಯಗಳ ಬಗ್ಗೆ ತಾವು ಎಂದಿನಂತೆ ಸಹಕಾರ ನೀಡಬೇಕಾಗಿ ಪ್ರಾರ್ಥಿಸುತ್ತೇನೆ. ಈವರೆಗೆ ತಾವು ಮಂಡ್ಯ ಜಿಲ್ಲಾ ಸಮಿತಿ ಅಧ್ಯಕ್ಷರಾಗಿದ್ದು ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಬಂದುದಲ್ಲದೆ ಮದ್ದೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿ ಯಾಗಿ ನಡೆಸಿದ ಕೀರ್ತಿ ತಮಗೆ ಸಲ್ಲಬೇಕು. ಪರಿಷತ್ತಿನ ಅಧ್ಯಕ್ಷನಾದ ನನಗೆ ಈವರೆಗೆ ಎಲ್ಲ ರೀತಿ ಯಿಂದಲೂ ತಮ್ಮ ಸಲಹೆ ಸಹಕಾರಗಳನ್ನು ನೀಡಿದ್ದಕ್ಕಾಗಿ ಪರಿಷತ್ತಿನ ಪರವಾಗಿ ಹಾಗೂ ವೈಯಕ್ತಿಕ ವಾಗಿ ಕೃತಜ್ಞತಾಪೂರ್ವಕ ವಂದನೆಗಳು.

೪–೩–೭೧ — ಜಿ. ನಾರಾಯಣ

ನನ್ನ ಅಂತರಂಗದ ಚೈತನ್ಯ

ಭಾರತೀ ಕಾಸರಗೋಡ್

"ಅಣ್ಣಯ್ಯಾ . . ."

ಈ ಆತ್ಮೀಯ ಕರೆ ನನ್ನ ಕಣ್ಣಮುಂದೆ ನಿಲ್ಲಿಸುವುದು ಭವ್ಯವಾದ ನಿಲುವಿನ ಸರಳ ಸುಂದರ ಮೂರ್ತಿಯೊಂದನ್ನು. ಹೌದು. ಅವರೇ ನನ್ನ ತಂದೆ. ನಮ್ಮೆಲ್ಲರ ಅಕ್ಕರೆಯ ಅಣ್ಣಯ್ಯ.

ನನ್ನ ಆಣ್ಣಯ್ಯನನ್ನು ವರ್ಣಿಸುವುದು ಬಹುಕಷ್ಟ. ಅವರೊಂದು ವಿಶಾಲ ಗಂಭೀರ ಸಾಗರವಿದ್ದಂತೆ. ಕರುಣೆ, ಪ್ರೇಮ ; ಮುಗ್ಧತೆ, ಮುಂಗೋಪ ; ಸತ್ಯ, ಸದಾಚಾರ–ಇವೆಲ್ಲವೂ ಈ ಸಾಗರದ ಅಂತರಂಗದಲ್ಲಿ ಉಕ್ಕೇರಿ ಹರಿಯುತ್ತಿರುತ್ತವೆ. ಅಣ್ಣಯ್ಯನ ಸಂಕೀರ್ಣ ವ್ಯಕ್ತಿತ್ವ, ನನ್ನ–ಅವರ ಪ್ರೇಮಮಯ ಬಾಂಧವ್ಯ, ಇವುಗಳನ್ನು ವರ್ಣಿಸಬೇಕೆಂದರೆ ನಾನು ಒಂದು ಪುಸ್ತಕವನ್ನೇ ಬರೆಯಬೇಕು. ಆದರೆ ನಾನಿಲ್ಲಿ ಪುಸ್ತಕವನ್ನು ಬರೆಯುವುದಿಲ್ಲ. ಅಣ್ಣಯ್ಯನ ವ್ಯಕ್ತಿಚಿತ್ರಣವನ್ನು ಕೊಡಬಹುದಾದ ಹಲವಾರು ಸಂಗತಿಗಳನ್ನು ಮೆಲುಕು ಹಾಕಿದ್ದೇನಷ್ಟೇ.

ನಾನು ಹುಟ್ಟುವುದಕ್ಕೆ ಮುನ್ನ ಮನೆಯಲ್ಲಿ ನನ್ನ ಅಕ್ಕ, ನನ್ನ ಅಣ್ಣ ಇದ್ದರು. "ಒಂದು ಹೆಣ್ಣು, ಒಂದು ಗಂಡು ; ಅಷ್ಟು ಸಾಕು." ಎಂದು ನಿರ್ಧರಿಸಿದರು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ನನ್ನ ತಂದೆ. ಈ ಕಾರಣದಿಂದಲೇ ಕುಟುಂಬ ಯೋಜನೆಯ ಸೂತ್ರಗಳನ್ನು ಅಳವಡಿಸಿಕೊಳ್ಳುವುದು ಅವರಿಗೆ ಸುಲಭವೂ ಆಗಿತ್ತು. ಆದರೇನು ? "ತಾನೊಂದು ಬಗೆದರೆ ದೈವವೊಂದು ಬಗೆಯಿತು" ಎನ್ನುವ ಗಾದೆಯ ಮಾತು ಇಲ್ಲಿಯೂ ಅನ್ವಯವಾಯಿತು. ಅದೊಂದು ದಿನ, ನನ್ನ ತಂದೆಯ ಶರೀರದ ಅದಾವುದೋ ತುಂಟ ರಸಾಂಶವೊಂದು ತನ್ನ ಸುತ್ತಮುತ್ತಲಿನ ಅಡೆತಡೆಗಳನ್ನೆಲ್ಲ ಮೀರಿ, ಹಾರಿ, ನನ್ನ ಅಮ್ಮನ ಮಡಿಲನ್ನು ಸೇರಿಯೇ ಬಿಟ್ಟಿತು ! ತನಗೆ ಗರ್ಭ ನಿಂತದ್ದು ತಿಳಿದ ಕೂಡಲೆ ಅಮ್ಮ ಪೇಚಾಡಿಕೊಂಡು ಅಣ್ಣಯ್ಯನಿಗೆ ಹೇಳಿದಳಂತೆ "ನಾವು ಬೇಡ ಅಂದುಕೊಂಡರೂ ಹೀಗಾಗಿ ಬಿಡ್ತಲ್ಲ! ಹೋಗಲಿ, ಅದನ್ನು ತೆಗೆಸಿಬಿಡೋಣವೇ ?" ಆದರೆ ಅಣ್ಣಯ್ಯ ಅದನ್ನು ತೀವ್ರವಾಗಿ ವಿರೋಧಿಸಿಬಿಟ್ಟರಂತೆ. "ಬೇಡ ಅಂದುಕೊಂಡದ್ದು ಹೌದು. ಆದರೆ ಇದು ದೇವರ ಇಚ್ಛೆ. ಮೇಲಾಗಿ ಭ್ರೂಣ ಹತ್ಯೆಗೆ ನಾನೆಂದೂ ಒಪ್ಪಲಾರೆ."

ಅಮ್ಮನಿಗೆ ಹೆರಿಗೆಯ ದಿನಗಳು ಸಮೀಪಿಸುತ್ತಿದ್ದಾಗ ವೈದ್ಯರು "ರಾಮರಾವ್,

ಈ ಸಾರಿ ನಿಮಗೆ ಯಾವ ಮಗು ಬೇಕು ?" ಎಂದು ಕೇಳಿದಾಗ ಅಣ್ಣಯ್ಯ ನಗುನಗುತ್ತ ಉತ್ತರಿಸಿದರಂತೆ "ಯಾವುದಾದರೂ ನನಗೆ ಪರವಾಗಿಲ್ಲ. ಹೆಣ್ಣಾದರೆ ಎರಡು ಹೆಣ್ಣು, ಒಂದು ಗಂಡು ಆಗುತ್ತದೆ ; ಗಂಡಾದರೆ ಎರಡು ಗಂಡು ಒಂದು ಹೆಣ್ಣು ಆಗುತ್ತದೆ. ಯಾವುದೇ ವ್ಯತ್ಯಾಸವೂ ಇಲ್ಲ."

ಹುಟ್ಟಿದ ಮಗು ಹೆಣ್ಣು ಎಂದು ಗೊತ್ತಾದಾಗ ಅಣ್ಣಯ್ಯ ಸಂತೋಷವನ್ನೇ ಪಟ್ಟುಕೊಂಡರಂತೆ. "ಮೊದಲನೆಯವಳು ಲಕ್ಷ್ಮಿ ಹುಟ್ಟಿದ್ದಾಳೆ. ಇವಳು ಎರಡನೆಯವಳು ಸರಸ್ವತಿ ಆದಳು" ಎಂದು ಆ ದೇವತೆಯ ಹೆಸರನ್ನೇ ನನಗೆ ಇಟ್ಟರಂತೆ.

ಬಹಳ ವರ್ಷ ಅಣ್ಣಯ್ಯ ನನ್ನನ್ನು 'ಬೇಡದೆ ಹುಟ್ಟಿದವಳು' ಎಂದು ಛೇಡಿಸುತ್ತಿದ್ದರು ; ಅಮ್ಮನ ಮುಖ ನೋಡಿ ಮುಸಿ ಮುಸಿ ನಗುತ್ತಿದ್ದರು. ಕೆಲವು ಸಾರಿ ನಾನು ಬೇಜಾರು ಮಾಡಿಕೊಂಡರೆ, ಅದನ್ನು ಮರೆಸುವಂತೆ ಅಪ್ಪಿಕೊಂಡು ಮುದ್ದು ಮಾಡಿಬಿಡುತ್ತಿದ್ದರು. ಅಣ್ಣಯ್ಯನ ಅಕ್ಕರೆ, ಅಪ್ಪುಗೆ ಎಷ್ಟೊಂದು ಪ್ರೇಮಮಯ !

ನಾವು ಅಣ್ಣಯ್ಯನ ನಾಲ್ಕೂ ಜನ ಮಕ್ಕಳು (ನಾನು ಹುಟ್ಟಿದ ಐದು ವರ್ಷಗಳ ಮೇಲೆ ನನ್ನ ತಮ್ಮ ಹುಟ್ಟಿದ. ಇವನ ಹುಟ್ಟು ನನ್ನದರ ಹಾಗೆ ಆಕಸ್ಮಿಕವಲ್ಲ. ಅದು ಪೂರ್ವ ನಿರ್ಧರಿತವಾದದ್ದು.) ತುಂಬ ಪುಣ್ಯವಂತರು. ಅಣ್ಣಯ್ಯನ ಅಸೀಮ ಪ್ರೀತಿಯನ್ನು, ಮೇರೆ ಮೀರಿದ ವಾತ್ಸಲ್ಯವನ್ನು ಯಥೇಚ್ಛವಾಗಿ ಪಡೆದುಕೊಂಡಿದ್ದೇವೆ. ಅಣ್ಣಯ್ಯನ ಮಕ್ಕಳ ಪ್ರೀತಿ ಅನೇಕಸಾರಿ 'ಅತಿ' ಎಂದು ಭಾವಿಸಬಹುದಾದ ಸಂದರ್ಭಗಳೂ ಇದ್ದವು. ಯಾರೇನೇ ಹೇಳಲಿ, ಅಣ್ಣಯ್ಯ ಮಾತ್ರ ಗದ್ಗದಿತರಾಗಿ "ನಾನು ಬದುಕುವುದಾದರೂ ಯಾಕೆ ಮತ್ತೆ ? ನನ್ನ ಮಕ್ಕಳ ಸುಖವೇ ನನ್ನ ಸುಖ !" ಎಂದು ಆಗಾಗ ಉದ್ಗರಿಸುತ್ತಿದ್ದರು.

ನಮ್ಮ ಬಾಲ್ಯಕಾಲದ ಚಳಿಗಾಲ ನನಗೆ ಚೆನ್ನಾಗಿ ನೆನಪಿದೆ. ನಮ್ಮೆಲ್ಲರ ರಾತ್ರಿಯೂಟ ಮುಗಿದು, ನಾವು ಮಲಗುವ ವೇಳೆಗೆ ಅಣ್ಣಯ್ಯ ತಮ್ಮ ಓದು–ಬರಹಗಳಿಂದ ಬಿಡುವು ಮಾಡಿಕೊಳ್ಳುತ್ತಿದ್ದರು. ಮೊದಲು ಮಕ್ಕಳೆಲ್ಲರಿಗೂ ಬಿಸಿನೀರಿನಲ್ಲಿ ಕೈ–ಕಾಲುಗಳನ್ನು ಶುಭ್ರವಾಗಿ ತೊಳೆಯುವರು. ಮೃದುವಾದ ಟವೆಲ್ಲಿನಲ್ಲಿ–'ಆಹಹಾ' ಉದ್ಗಾರಗಳನ್ನು ಮಾಡುತ್ತಾ–ಸ್ವಚ್ಛವಾಗಿ ಒರೆಸುವರು. ನಂತರ ಎಲ್ಲರ ಕೈ–ಕಾಲುಗಳಿಗೆ ರಾಶಿ ರಾಶಿ ವ್ಯಾಸಲೀನ್ ಲೇಪನ. ಈ ಕ್ರಿಯೆ ನಮಗೆ ಸುತಾರಾಂ ಇಷ್ಟವಿಲ್ಲದಿದ್ದರೂ ಅಣ್ಣಯ್ಯನ ಭಯದಿಂದಾಗಿ ಸುಮ್ಮನೆ ಹಲ್ಲು ಕಚ್ಚಿ ಕುಳಿತಿರುತ್ತಿದ್ದೆವು. ನನ್ನ ತಮ್ಮ ಮಾತ್ರ "ನನಗೆ ಬೇಡ ! ನನಗೆ ಬೇಡ ! ಅಯ್ಯೋ ಉರಿ, ಅಮ್ಮಮ್ಮಾ ಉರಿ !" ಬೊಬ್ಬೆ ಹೊಡೆಯುತ್ತಿದ್ದ. ಯಾಕೆಂದರೆ ಅವನ ಮೈತುಂಬ ಬಿದ್ದ, ಎದ್ದ ತರಚುಗಾಯಗಳೇ. ಆ ಜಾಗಗಳಲ್ಲಿ ಅಣ್ಣಯ್ಯ ರಭಸದಿಂದ ವ್ಯಾಸಲೀನ್ ತೀಡುವಾಗ ಅವನ ಆಕ್ರಂದನ ಮುಗಿಲು ಮುಟ್ಟುತ್ತಿತ್ತು.

ಸಾವಕಾಶವಾಗಿ ವ್ಯಾಸಲೀನ್ ಪೂಸಿದ ನಂತರ, ನಮ್ಮೆಲ್ಲರಿಗೂ ಮುಂಗೈ ಮುಚ್ಚುವಂತಹ ಅಂಗಿಗಳನ್ನೂ ಕಾಲು ಚೀಲಗಳನ್ನೂ ಹಾಕಿ ಹಾಸಿಗೆಯಲ್ಲಿ ಮಲಗಿಸುತ್ತಿದ್ದರು.

ಒಬ್ಬೊಬ್ಬರಿಗೂ ಬೆಚ್ಚಗೆ ಕುತ್ತಿಗೆಯವರೆಗೆ ಕಂಬಳಿಗಳನ್ನು ಹೊದಿಸುತ್ತಿದ್ದರು. ಅಷ್ಟು ಮಾಡಿಯೂ ಅವರಿಗೆ ಸಮಾಧಾನವಿಲ್ಲ. ಮನೆಯಲ್ಲಿದ್ದ ದೊಡ್ಡ ಜಮಖಾನವನ್ನು ತಂದು, ಅಷ್ಟೂ ಜನರನ್ನು ಸೇರಿಸಿ ಹೊದೆಸಿಬಿಡುವರು. ಅಷ್ಟು ದೂರ ಹೋಗಿ ನಿಂತು, ಮಕ್ಕಳೆಲ್ಲರೂ ಸುಖವಾಗಿ ಮಲಗಿದ್ದನ್ನು ಕಂಡು, ತೃಪ್ತಿಯಿಂದ ಮುಗುಳ್ನಕ್ಕು ತಮ್ಮ ಕೋಣೆ ಸೇರುವರು.

ಅಣ್ಣಯ್ಯ ತಮ್ಮ ಬಡತನದ ಬವಣೆಯನ್ನು ತಮ್ಮ ಸಾಹಿತ್ಯದಲ್ಲಿ ಹೃದಯಂಗಮ ವಾಗಿ ವರ್ಣಿಸುತ್ತಾರೆ. ನನಗೆ ಎಷ್ಟೋ ಸಾರಿ ಅದು ಉತ್ಪ್ರೇಕ್ಷೆಯೆಂದು ತೋರುತ್ತದೆ. ಆದರೆ ಅಣ್ಣಯ್ಯ ಸುಳ್ಳು ಹೇಳುವವರಲ್ಲ. ಹಾಗಾಗಿ ಅವೆಲ್ಲವನ್ನು ನಂಬಬೇಕಾಗಿದೆ. ನನ್ನ ಮಟ್ಟಿಗೆ ಪ್ರಾಮಾಣಿಕವಾಗಿ ಹೇಳಬೇಕೆಂದರೆ ಶ್ರೀಮಂತಿಕೆ ನನಗೆ ತಿಳಿಯದು ; ಹಾಗೆಂದು ಬಡತನವೂ ಭಾಸವಾಗಿಲ್ಲ. ಊಟ, ಬಟ್ಟೆ, ಪುಸ್ತಕ ಮುಂತಾದ ಮೂಲಭೂತ ಆವಶ್ಯಕತೆಗಳನ್ನು ನನ್ನ ತಂದೆ (ಅದಕ್ಕಾಗಿ ಅವರು ಎಷ್ಟೊಂದು ಕಷ್ಟಪಟ್ಟಿರಬಹು ದೆಂದು ನಾನು ಊಹಿಸಬಲ್ಲೆನಾದರೂ) ಸಮರ್ಪಕವಾಗಿ ಪೂರೈಸಿದ್ದಾರೆ. ಸಾಮಾನ್ಯ ವಾಗಿ ನನ್ನ ತರಗತಿಯಲ್ಲಿ ಎಲ್ಲರೂ–ಹಲವು ಶ್ರೀಮಂತರೂ ಸೇರಿದಂತೆ–ಸೆಕೆಂಡ್ ಹ್ಯಾಂಡ್ ಪುಸ್ತಕಗಳನ್ನು ತರುತ್ತಿದ್ದರು. ನನಗೆ ಮಾತ್ರ ನನ್ನ ತಂದೆ ಯಾವಾಗಲೂ ಹೊಸ ಹೊಸ ಪಠ್ಯ ಪುಸ್ತಕಗಳನ್ನೂ, ನೋಟ್‌ಪುಸ್ತಕಗಳನ್ನೂ ಒದಗಿಸುತ್ತಿದ್ದರು. ಅದೊಂದು ರೀತಿಯ ಘಾಟು ಸುವಾಸನೆಯನ್ನು ಬೀರುವ ಆ ಹೊಸ ಪುಸ್ತಕಗಳನ್ನು ಬಾಚಿ ಎದೆಗವಚಿಕೊಂಡು ನಾನು ಹರ್ಷಭರಿತಳಾಗುತ್ತಿದ್ದೆ. "ನಾಲ್ಕು ಕಾಸು ಹೆಚ್ಚಾದ್ರೂ ಪರವಾಗಿಲ್ಲ : ಒಳ್ಳೆಯ ಪದಾರ್ಥಗಳನ್ನೇ ಕೊಳ್ಳಬೇಕು." ಎಂದು ಅಣ್ಣಯ್ಯ ಉತ್ತಮ ದರ್ಜೆಯ ಪೆನ್, ಪೆನ್ಸಿಲ್, ಪುಸ್ತಕದ ಚೀಲಗಳನ್ನು ಕೊಡಿಸುತ್ತಿದ್ದರು. ಹೊಸ ಪುಸ್ತಕ ಗಳನ್ನು ತೆಗೆಸಿಕೊಳ್ಳುವುದು ಮಾತ್ರವಲ್ಲ, ಅವುಗಳನ್ನು ಅತ್ಯಂತ ಜಾಗರೂಕವಾಗಿ ನೋಡಿಕೊಳ್ಳುವುದು ಕೂಡ ನಮ್ಮ ಹೊಣೆಯಾಗಿತ್ತು. "ನಮಗೆ ಗಾಯವಾದರೆ ಕೂಡಲೇ ಔಷಧಿ ಹಚ್ಚಿಕೊಳ್ಳುತ್ತೇವೆ; ವಾಸಿ ಮಾಡಿಕೊಳ್ಳುತ್ತೇವೆ. ಆದರೆ ನಮ್ಮ ಪುಸ್ತಕಗಳಿಗೆ ಗಾಯವಾದರೆ ಸರಿಮಾಡುವುದು ಸಾಧ್ಯವೇ ಇಲ್ಲ. ಆದ್ದರಿಂದ ಅವುಗಳಿಗೆ ಸಣ್ಣ ಪುಟ್ಟ ತರಚುಗಾಯವೂ ಆಗದ ಹಾಗೆ ನೋಡಿಕೊಳ್ಳಬೇಕು. ಪುಸ್ತಕಗಳಿಗೆ ಗಾಯ ವಾದರೆ ನನ್ನ ಮನಸ್ಸಿಗೆ ತುಂಬ ನೋವಾಗುತ್ತದೆ." ಅನ್ನುತ್ತಿದ್ದರು ಅಣ್ಣಯ್ಯ.

ಅಣ್ಣಯ್ಯ ಪದೇ ಪದೇ ಹೇಳಿಕೊಳ್ಳುವ ಹಾಗೆ ಅವರ ಜೀವನವನ್ನು ಕಾದಿರುವುದು ಅವರ ಅಸೀಮ ದೈವಭಕ್ತಿ. ಅವರ ದೃಷ್ಟಿಯಲ್ಲಿ ದೈವಭಕ್ತಿಯೆಂದರೆ ಸ್ವಚ್ಛತೆ, ಪರಿಶುದ್ಧ ವಾದ ಮನಸ್ಸು ಮತ್ತು ಅನವರತದುಡಿತ. ಅಣ್ಣಯ್ಯನ ದೈವಭಕ್ತಿ ಅತ್ಯಂತ ಅಚಲ ವಾದದ್ದು ಮತ್ತು ಮೂಢ ನಂಬಿಕೆಗಳಿಂದ ದೂರವಾದದ್ದು. "ತಮ್ಮ ಕಾವರ ದೈವ ಕಾವುದು" ಮತ್ತು "ದೈವತ್ವದ ನಂತರದ್ದು ಶುಚಿತ್ವ" ಅನ್ನುವುದು ಅವರ ದೃಢವಾದ ನಿಲುವು.

ನಾನು ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದಾಗ ಒಂದು ದಿನ ಶಾಲೆಯಿಂದ

ಬಂದವಳೇ ನೇರವಾಗಿ ಅಣ್ಣಯ್ಯನ ಹತ್ತಿರ ಹೋಗಿ "ಅಣ್ಣಯ್ಯ, ನಾವು ದೇವರನ್ನು ಯಾಕೆ ನಂಬಬೇಕು ?" ಎಂದು ಕೇಳಿದೆ, ಅಣ್ಣಯ್ಯ ತದೇಕಚಿತ್ತರಾಗಿ ಏನೋ ಬರೆಯುತ್ತಿದ್ದವರು ಅದನ್ನು ನಿಲ್ಲಿಸಿ, ಮುಗುಳ್ನಕ್ಕು "ಇಲ್ಲಿ ಬಾ" ಎಂದು ಕರೆದು ತೊಡೆಯ ಮೇಲೆ ಕೂರಿಸಿ ಕೊಂಡರು. ಹೊಟ್ಟೆಗೆ ಒರಗಿಸಿಕೊಂಡು ತಲೆಯನ್ನು ಮಮತೆಯಿಂದ ನೇವರಿಸುತ್ತಾ ವಿವರಿಸಿದರು. "ನಾವು ದೇವರಲ್ಲಿ ಇಡುವ ನಂಬಿಕೆ ನಮಗೆ ನೆಮ್ಮದಿಯನ್ನೂ, ಬದುಕಲು ಬೇಕಾದ ಶಕ್ತಿಯನ್ನೂ ಕೊಡುತ್ತದೆ. ಉದಾಹರಣೆಗೆ, ನಿನಗೆ ಸ್ಕೂಲಿನಲ್ಲಿ ಏನೋ ಒಂದು ಕಷ್ಟ ಬರುತ್ತದೆ ಅಂದುಕೋ ; ಎಷ್ಟು ಯೋಚನೆ ಮಾಡಿದರೂ ಅದನ್ನು ನಿವಾರಿಸಿಕೊಳ್ಳುವುದು ಹೇಗೆ ಅಂತ ನಿನಗೆ ತೋಚುವುದೇ ಇಲ್ಲ. ಸುಮ್ಮನೆ ತಳಮಳ ಪಡುತ್ತಾ ಇರುತ್ತೀ. ಆಗ ಇದ್ದಕ್ಕಿದ್ದ ಹಾಗೆ ನಿನಗೆ ನನ್ನ ಜ್ಞಾಪಕ ಬಂದು ಬಿಡುತ್ತೆ. 'ತಾಳು. ಈ ವಿಷಯಾನ ಅಣ್ಣಯ್ಯಂಗೆ ಹೇಳಿ ಬಿಡೋಣ. ನನ್ನ ಸಮಸ್ಯೇನ ಅವರು ಖಂಡಿತ ಪರಿಹಾರ ಮಾಡಿಬಿಡ್ತಾರೆ. ನಮ್ಮ ಅಣ್ಣಯ್ಯ ಇರೋವಾಗ ನಂಗೆ ಯಾಕೆ ಯೋಚನೆ ?' ಅಂದುಕೊಳ್ಳುತ್ತೀ. ಈ ಯೋಚನೆ ಬಂದ ತಕ್ಷಣ ನಿನ್ನ ಮನಸ್ಸಿನ ಭಾರವೆಲ್ಲ ಇಳಿದು ಹಗುರ ಆಗಿಬಿಡುತ್ತೆ. ನೀನು ಹರ್ಷಿತಳಾಗುತ್ತೀ. ಹಾಗೆಯೇ ದೇವರು ಕೂಡ. ನಾನು ನಿನಗೆ ತಂದೆ. ನಿನ್ನ ಕಷ್ಟವನ್ನು ಪರಿಹರಿಸುತ್ತೀನಿ. ಆದರೆ ದೇವರು ನಮ್ಮೆಲ್ಲರ ತಂದೆ. ನಮ್ಮೆಲ್ಲರ ಕಷ್ಟ–ಕಾರ್ಪಣ್ಯಗಳನ್ನು ಆತ ದೂರ ಮಾಡುತ್ತಾನೆ. ತನ್ನನ್ನು ನಂಬಿದವರನ್ನು ಪ್ರೀತಿಯಿಂದ ಕಾಪಾಡುತ್ತಾನೆ." ನನ್ನ ತಂದೆಯ ಈ ವ್ಯಾಖ್ಯಾನ ನನಗೆ ಆಪ್ಯಾಯಮಾನವಾಗಿ ಕಂಡಿತು. ಮನಸ್ಸು ಅದೊಂದು ರೀತಿಯ ಸಮಾಧಾನವನ್ನೂ, ಶಾಂತತೆಯನ್ನೂ ಅನುಭವಿಸಿತು. ಇಂದು ಕೂಡ ನನ್ನ ಕಷ್ಟ ಕಾಲಗಳಲ್ಲಿ ದೇವರನ್ನು ಸ್ಮರಿಸಿ ಸಾಂತ್ವನ ತಂದುಕೊಳ್ಳುವುದನ್ನು ನಾನು ಅಭ್ಯಾಸ ಮಾಡುತ್ತಿದ್ದೇನೆ. ಪ್ರಾರ್ಥನೆಯಿಂದ ಕಷ್ಟಗಳು ಬರುವುದನ್ನು ನಾವು ನಿವಾರಿಸಲಾರೆವಾದರೂ ಅದರಿಂದ ಚೈತನ್ಯ ಮತ್ತು ಚಿತ್ತಶುದ್ಧಿ ದೊರೆಯುವುದು ಖಂಡಿತ.

ಅಣ್ಣಯ್ಯನ ದೃಷ್ಟಿಯಲ್ಲಿ ದುಡಿಮೆಯೇ ದೇವರು ; ದೇವರಪೂಜೆ ಆ ದುಡಿಮೆ ಯಾವುದಾದರೂ ಆಗಬಹುದು. ತೋಟಗಾರಿಕೆ, ಪುಸ್ತಕದ ಬೀರುವನ್ನು ಸ್ವಚ್ಛ ಮಾಡುವುದು, ಮನೆಯ ಧೂಳು ತೆಗೆಯುವುದು ಇತ್ಯಾದಿ. ಸಾಧಾರಣವಾಗಿ ಹಬ್ಬಗಳ ದಿನ ಆಫೀಸಿಗೂ ರಜಾ ಇರುವುದರಿಂದ ಅಂತಹ ದಿನಗಳಲ್ಲಿ ಅಣ್ಣಯ್ಯನ ಬರವಣಿಗೆ ನಿರಾತಂಕವಾಗಿ ಸಾಗಿರುತ್ತಿತ್ತು. ಅರ್ಧರಾತ್ರಿಯಲ್ಲಿಯೋ, ಬೆಳಗಿನ ಜಾವದಲ್ಲಿಯೋ ಎದ್ದು ಬರೆಯತೊಡಗುತ್ತಿದ್ದ ಅವರು ಅಮ್ಮನಪೂಜೆ,ಅಡುಗೆ ಮುಗಿದರೂ ಮೇಲೇಳುತ್ತಿರಲಿಲ್ಲ. ನಮಗೆ ಅಣ್ಣಯ್ಯನ ಮೇಲೆ ಕೋಪ ! ರುಚಿರುಚಿಯಾದ ಹೋಳಿಗೆ, ಪಾಯಸ, ಚಿತ್ರಾನ್ನಗಳು ಕಾಯುತ್ತಿವೆ ; ಆದರೆ ಅಣ್ಣಯ್ಯನನ್ನು ಬಿಟ್ಟು ನಮಗೆ ಅಮ್ಮ ಅವುಗಳನ್ನು ಬಡಿಸುವುದಿಲ್ಲ. "ಹಬ್ಬದ ದಿನವಾದ್ರೂ ಅಣ್ಣಯ್ಯನ ಜತೆ ಊಟ ಮಾಡಿ ಮಕ್ಕಳೇ" ಅನ್ನುತ್ತಾಳೆ. ನಮ್ಮ ವರಾತ ಹೆಚ್ಚಾದಾಗ ಅಮ್ಮ ಮೆಲ್ಲಗೆ ರೂಮಿನ ಬಾಗಿಲಲ್ಲಿ ಇಣುಕಿ "ಎಷ್ಟು ದೊಡ್ಡ ಹಬ್ಬ ಇವತ್ತು ! ಇವತ್ತಾದ್ರೂ ಎದ್ದು ಸ್ವಲ್ಪ ದೇವರಪೂಜೆ ಮಾಡ

ಬಾರದೆ ? ಮಕ್ಕಳು ಬೇರೆ ಹಸಿವಿನಿಂದ ಕಾಯ್ತಿವೆ !" ಎಂದರೆ ಅಣ್ಣಯ್ಯ ನಗುನಗುತ್ತ "ನಾನು ಬೆಳಿಗ್ಗೆಯಿಂದ ದೇವರಪೂಜೆ ಮಾಡ್ತಾನೇ ಇದ್ದೀನಲ್ಲೇ ಮಹರಾಯ್ತಿ. ನನ್ನ ಈ ಪೂಜೆಯನ್ನು ಅವನು ಖಂಡಿತ ಒಪ್ಪಿಕೊಳ್ತಾನೆ. ಕುಂಕುಮ–ಹೂವುಗಳ ಅರ್ಚನೆಯೇ ತನಗೆ ಬೇಕೆಂದು ಅವನು ಹಟ ಹಿಡಿಯೋಲ್ಲ" ಎಂದು ನುಡಿದರೂ "ಮಕ್ಕಳು ಕಾಯ್ತಿದಾರೆ" ಎನ್ನುವ ಎಚ್ಚರಿಕೆ ಅವರನ್ನು ಬಡಿದೆಬ್ಬಿಸುತ್ತಿತ್ತು. ಎದ್ದು, ಪೆನ್ನಿನ ಟೋಪಿಯನ್ನು ಮುಚ್ಚಿ, ಅದನ್ನೂ ಹಸ್ತಪ್ರತಿಯನ್ನೂ ಓರಣವಾಗಿ ಬದಿಗಿರಿಸಿ, "ನನ್ನ ಟವೆಲ್ ಎಲ್ರೋ ?" ಎಂದು ಸ್ನಾನಕ್ಕೆ ಹೊರಡುತ್ತಿದ್ದರು. ಹೋಳಿಗೆ ಕಬಳಿಸುವ ಕ್ಷಣ ಹತ್ತಿರ ವಾಯ್ತೆಂದು ನಾವು ಸಂತುಷ್ಟರಾಗುತ್ತಿದ್ದೆವು.

ನಾನು ಚಿಕ್ಕವಳಾಗಿದ್ದಾಗ ಅಣ್ಣಯ್ಯ ನನ್ನನ್ನು ಕೂಗುವ ರೀತಿಯಿಂದಲೇ ಅವರ ಭಾವನೆಗಳನ್ನು ಸುಲಭವಾಗಿ ಅರ್ಥೈಸಿ ಬಿಡುತ್ತಿದ್ದೆ. ತಮ್ಮ ರೂಮಿನಿಂದಲೇ ಧ್ವನಿಯೆತ್ತರಿಸಿ 'ಭಾರತೀ . . .!' ಎಂದು ಕೂಗುಹಾಕಿದರೆ ಯಾವುದೋ ವಿಷಯವಾಗಿ ನನ್ನ ಬಗ್ಗೆ ಅವರಿಗೆ ಅಗಾಧವಾದ ಸಿಟ್ಟು ಬಂದಿದೆಯೆಂದೇ ಅರ್ಥ. ಮಧ್ಯಸ್ಥಾಯಿ ಶ್ರುತಿಯಲ್ಲಿ ಮಧುರವಾಗಿ "ಭಾರತವ್ವಾ, ಇಲ್ಲಿ ಸ್ವಲ್ಪ ಬಾರವ್ವಾ" ಎಂದು ಮುದ್ದುಗರೆದರೆ, ಅವರಿಗೆ ನನ್ನಿಂದ ಯಾವುದೋ ಕೆಲಸವಾಗಬೇಕಾದದ್ದು ಖಚಿತ. "ಲೋ ಭಾರತನೇ, ಓಡಿಬಾರೋ" ಪ್ರೀತಿಯೊಸರುವಂತೆ ಕರೆದರೆ, ಯಾವುದೋ ಕಾರಣಕ್ಕೆ ಅವರಿಗೆ ನನ್ನನ್ನು ಮುದ್ದುಮಾಡಬೇಕೆನ್ನಿಸಿದೆ, ಕರೆಯುತ್ತಿದ್ದಾರೆ ! ಕೆಲವು ಸಾರಿ ಅವರಿಗೆ ನನ್ನಿಂದ ಕೆಲಸ ಆಗಬೇಕಾಗಿಯೂ ಇಲ್ಲ ; ಅವರು ನನ್ನನ್ನು ಬೈಯ್ಯಬೇಕಾಗಿಯೂ ಇಲ್ಲ. ಆದರೂ ಅವರಿಗೆ ನನ್ನ ಕಂಡು ಉಲ್ಲಾಸವಾಗಿದೆ. ಪ್ರಸನ್ನವದನರಾಗಿ ಆಗಾಗ ನನ್ನತ್ತ ದಿಟ್ಟಿಸುತ್ತಾ, ತಮ್ಮದೇ ಆದ ಒಂದು ರಾಗದಲ್ಲಿ (ಅಣ್ಣಯ್ಯನ ಹಾಡುಗಾರಿಕೆ ಬಲು ವಿಶಿಷ್ಟವಾದದ್ದು. ಅವರ ಹಾಡುಗಳಲ್ಲಿ ಯತ್ಕಿಂಚಿತ್ತಾದರೂ ಸಂಗೀತದ ಅಂಶವಿಲ್ಲ. ಶಬ್ದಗಳನ್ನು ಗುಡುಗುಡು ಉರುಳಿಸಿದ ಹಾಗೆ ಅವರ ಗಾಯನ.) "ಭಾರತೀಯ ಪೂಜಿತಾನ್ ಕುರುಲೋಕ ಬಾಂಧವಾನ್" ಎಂದು ಪಾಡಿಕೊಳ್ಳುತ್ತಾ ಕೆಲಸ ಮಾಡಿಕೊಳ್ಳುವರು. ನಮ್ಮ ಅಣ್ಣಯ್ಯನಿಗೆ ಹಲವಾರು ಬಾರಿ ಆರ್ಥಿಕ ಬವಣೆ ಕಾಡಿರಬಹುದಾದರೂ ಅವರ ಹೃದಯ ಶ್ರೀಮಂತಿಕೆಗೆ ಮಾತ್ರ ಎಣೆಯೇ ಇಲ್ಲ.

ಮೊದಲಿನಿಂದಲೂ ತಾಯಿಯಿಂದಾಗಲೀ, ತಂದೆಯಿಂದಾಗಲೀ ನಾನು ಹೆಚ್ಚಾಗಿ ಶಿಕ್ಷೆಗೆ ಒಳಪಟ್ಟವಳಲ್ಲ. ಅವರಿಬ್ಬರೂ ನನ್ನನ್ನು ಅತಿಶಯವಾಗಿ ಪ್ರೀತಿ ಮಾಡಿದ್ದೇ ಹೆಚ್ಚು. ಹಾಗೆಂದು ನನ್ನ ತಂದೆ ನನಗೆ ಹೊಡೆದೇ ಇಲ್ಲವೆಂದು ಹೇಳಲಾಗದು. ಅಪರೂಪವಾಗಿ ಒಂದೆರಡು ಸಾರಿ ನನ್ನ ತಂದೆ ನನ್ನ ಹಿಂದಲೆಗೆ ಪೆಟ್ಟು ಕೊಟ್ಟದ್ದುಂಟು. ಆಗ ನನ್ನ ಅಮ್ಮ ಅದೆಲ್ಲಿರುತ್ತಿದ್ದಳೋ ಹಾರಿ ಬಂದು, ನನ್ನನ್ನು ತನ್ನೆದೆಗೆ ಬಲವಾಗಿ ಅವುಚಿಕೊಂಡು ಅಣ್ಣಯ್ಯನಿಗೆ ಜೋರು ಮಾಡುತ್ತಿದ್ದಳು. "ಅಯ್ಯೋ ಅನ್ನೇಕಾರರಿರಾ, ಅದೆಷ್ಟು ಸಾರಿ ಹೇಳೋದು ? ಮಗೂಗೆ ಬೈತಲೆ ತೆಗೆದು ಎರಡು ಜಡೆ ಹಾಕಿರ್ತೀನಿ, ಆ ಬೈತಲೆ ಮೇಲೆ ಹೊಡೀಬೇಡಿ, ಮಗೂಗೆ ನೋವಾಗುತ್ತೆ ಅಂತ ?"

ನನ್ನ ತಂದೆ ಮಹಿಳೆಯ ಸಮಸ್ತ ಅಭ್ಯುದಯವನ್ನು, ವೈಚಾರಿಕ ನಡಾವಳಿಗಳನ್ನು ಪ್ರಾಮಾಣಿಕವಾಗಿ ಬೆಂಬಲಿಸಿದರೂ ಮನಸ್ಸಿನೊಂದು ಮೂಲೆಯಲ್ಲಿ ಅವರು ಪುರುಷಪ್ರಾಧಾನ್ಯವನ್ನು ಮೆಚ್ಚುವವರೇ. ನನ್ನ ಅಮ್ಮನ ಬಗೆಗಂತೂ (ಆವಳೋರ್ವ ಮುಗ್ಧೆ, ಪ್ರೇಮಮಯಿ ಎಂಬುದನ್ನು ಬಿಟ್ಟರೆ) ಅವರಿಗೆ ಅಭಿಪ್ರಾಯಗಳೇ ಇರಲಿಲ್ಲ. ಅವರೋರ್ವ ಶೀಘ್ರಕೋಪಿ, ಸರ್ವಾಧಿಕಾರಿ. ಅಂತಹ ದುರ್ವಾಸ ಮುನಿ, ನಮ್ಮಪ್ಪ, ನನ್ನಮ್ಮನ ಆಗ್ರಹ–ಆವೇಶಗಳಿಗೆ ಸಂಪೂರ್ಣವಾಗಿ ಮೆತ್ತಗಾಗಿ, ನನ್ನನ್ನು ಹೊಡೆಯುವುದನ್ನು ನಿಲ್ಲಿಸಿ, ರೂಮನ್ನು ಸೇರಿಕೊಂಡು ಬಿಡುತ್ತಿದ್ದರು. ತಾಯ್ತನದ ಶಕ್ತಿ ಅಂಥದ್ದು.

ಅಣ್ಣಯ್ಯ ಒಬ್ಬ ಸರ್ವಾಧಿಕಾರಿ ಎಂದು ಹೇಳಿದ್ದಾಯಿತು. ಹಾಗಾದರೆ ಇಂತಹ ವ್ಯಕ್ತಿಯೊಡನೆ ನಾವು ಹೇಗೆ ಬಾಳಿದೆವು, ಯಾಕೆ ಅವರನ್ನು ಪ್ರೀತಿಸಿದೆವು ಎಂಬ ಪ್ರಶ್ನೆ ಏಳಬಹುದು. ತನ್ನ ತತ್ತ್ವಗಳಲ್ಲಿ, ತನ್ನ ಧ್ಯೇಯಗಳಲ್ಲಿ ಅಣ್ಣಯ್ಯ ಅಚಲರು ನಿಜ. ಆದರೆ ಅವರ ಯಾವುದೇ ನಡೆವಳಿಕೆಯಲ್ಲಿ ನಮಗೆ ತಪ್ಪುಗಳು ಕಾಣುತ್ತಿರಲಿಲ್ಲ. ಅವರೊಬ್ಬ ಗಾಂಧೀವಾದಿ ; ಮೇಲಾಗಿ ಸ್ವಾರ್ಥತ್ಯಾಗಿ. ಅವರು ಮನೆಯನ್ನು ಪ್ರೀತಿಸಿದರು: ಮಕ್ಕಳಿಗಾಗಿ ಬಾಳಿದರು. ನೆಗಡಿ, ಕೆಮ್ಮುಗಳಂತಹ ಸಣ್ಣಪುಟ್ಟ ಕಾಯಿಲೆ ಮಕ್ಕಳನ್ನು ಕಾಡಿದರೂ ಅವರು ವಿವಶರಾಗಿ ಕಣ್ಣೀರು ಸುರಿಸುತ್ತಾ ಮಕ್ಕಳ ಹಾಸಿಗೆಯ ಬಳಿ ಕುಳಿತುಬಿಟ್ಟ ಆ ಆತ್ಮೀಯ ಚಿತ್ರಣ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಅಷ್ಟೇಕೆ ? ಮನೆಯ ಹೆಣ್ಣುಮಕ್ಕಳು ದೊಡ್ಡವರಾದಾಗ ಅವರು ತೋರಿದ ವೈಜ್ಞಾನಿಕ ನಿಲುವು ಶ್ಲಾಘನೀಯವಾದುದು. ಅವರು ನಗುನಗುತ್ತ ಅಮ್ಮನನ್ನು ಎಚ್ಚರಿಸಿದರು. "ಲೇ, ನೀನು ನಿನ್ನ ಹಳ್ಳಿ ಮಡಿವರಸೆಗಳನ್ನೆಲ್ಲ ತೆಗೆದುಬಿಡಬೇಡ. ಹೆಣ್ಣುಮಕ್ಕಳಿಗೆ ಎಲ್ಲ ಸಮಯಕ್ಕಿಂತ ಹೆಚ್ಚಿನ ರಕ್ಷಣೆ, ಪೋಷಣೆ ಬೇಕಾಗಿರೋದೇ ಈಗ. ಅವರನ್ನು ದೂರ ಹಾಕೋದು, ಚಾಪೆ ಮೇಲೆ ಚಳೀಲಿ ಮಲಗಿಸೋದು ಇವೆಲ್ಲ ನಾನು ಸಹಿಸೋಲ್ಲ. ನನ್ನ ಮಕ್ಕಳು ಬೆಚ್ಚಗಿರ್ಬೇಕು. ಸುಖವಾಗಿರ್ಬೇಕು." ಅಂತಹ ಎಷ್ಟೋ ಸಂದರ್ಭಗಳಲ್ಲಿ ನಮ್ಮ ತಂದೆಯೇ ನಮಗೆ ಹಾಸಿಗೆಯನ್ನು ಹಾಸಿಕೊಟ್ಟದ್ದಿದೆ. ಇದು ನಮ್ಮ ತಂದೆ ನಮಗೆ ತೋರುತ್ತಿದ್ದ ಅಸೀಮ ಪಿತೃವಾತ್ಸಲ್ಯದ ಸಣ್ಣದೊಂದು ಉದಾಹರಣೆ. ಇಂಥ ಹೃದಯವಂತಿಕೆಯ ವ್ಯಕ್ತಿಯ ಸರ್ವಾಧಿಕಾರವನ್ನು ನಾವು ಸಹಿಸದೆ ಹೋಗುವುದಾದರೂ ಹೇಗೆ ?

ನನ್ನ ತಂದೆಯನ್ನು ನಾನು ಅತ್ಯಂತ ಗೌರವಿಸುವುದಕ್ಕೆ ಕಾರಣವೆಂದರೆ, ಕಾಯಾ ವಾಚಾ ಮನಸಾ ಅವರು ಶುಚಿರ್ಭೂತರು, ಸತ್ಯಸಂಧರು, ಸನ್ನಡತೆಯವರು. ಅವರು ಮತ್ತೊಬ್ಬರನ್ನು ಆಡಿಕೊಂಡು ನಕ್ಕದ್ದನ್ನಾಗಲೀ, ಇನ್ನೊಬ್ಬರಿಗೆ–ಮನಸ್ಸಿನಲ್ಲಿ ಯಾದರೂ–ಕೆಡುಕನ್ನು ಬಯಸಿದ್ದನ್ನಾಗಲೀ ನಾವು ಎಂದೂ ಕಂಡದ್ದಿಲ್ಲ. ತಾವಾಯಿತು, ತಮ್ಮ ಕೆಲಸವಾಯಿತು. ಆ ಕೆಲಸಗಳಿಗೂ ಹಾಗೆಯೇ ; ಅತ್ಯಂತ ಅಚ್ಚುಕಟ್ಟು, ಅತ್ಯಂತ ಶುಭ್ರ. ಅವರ ಅಚ್ಚುಕಟ್ಟನ್ನೂ, ಶ್ರದ್ಧೆಯನ್ನೂ ಅನುಸರಿಸದೆ ಸೋಮಾರಿಯಾದ ನನಗೆ ಕೆಲವೊಮ್ಮೆ ಅವರಿಂದ ಗುದ್ದುಗಳು ಸಂದಿವೆ. ನನ್ನ ಆಲಸ್ಯ ಸ್ವಭಾವಕ್ಕೆ ಸಂದ ಬಹುಮಾನಗಳು ಅವು ಎಂದು ನಾನವುಗಳನ್ನು ಒಪ್ಪಿಕೊಂಡಿದ್ದೇನೆ.

ಅಣ್ಣಯ್ಯನ ಸ್ವಭಾವ ಬಲು ದರ್ಪದಿಂದ ಕೂಡಿದ್ದು. ಅವರ ಕಂಠಶ್ರೀ ಬಲು ಜೋರು ಹಾಗೂ ಸುಸ್ಪಷ್ಟ. ''ಮಧ್ಯರಾತ್ರೀಲಿ ಗಾಢನಿದ್ದೆಯಿಂದ ಎಬ್ಬಿಸಿ ಮಾತನಾಡಿಸಿದರೂ ಘಂಟಾಘೋಷವಾಗಿ, ಖಚಿತವಾಗಿ ಭಾಷಣ ಮಾಡ್ತಾರೆ ನಿಮ್ಮಪ್ಪ. ನಮ್ಮಗಳ ಹಾಗೆ ನಿದ್ದೆಗಣ್ಣಲ್ಲಿ ನಾಲಗೆ ತೊದಲೋದೇ ಇಲ್ಲ ಅವ್ರಿಗೆ''–ನನ್ನ ಅಮ್ಮನ ಒಂದು ತುಂಟ ಉವಾಚ ಇದು. ಮಕ್ಕಳು ಮರಿಗಳನ್ನು ಹೀಗೆ ಮಾತನಾಡಿಸುವುದು ಹಾಗಿರಲಿ, ಅವರು ದೇವರಿಗೆ ಪ್ರಾರ್ಥನೆ ಸಲ್ಲಿಸುವುದೂ ಹಾಗೆಯೇ. ಗಟ್ಟಿಯಾದ ಸ್ವರದಲ್ಲಿ ''ಅಪ್ಪಾ ಭಗವಂತಾ! ಶ್ರೀ ರಾಮಾ! ಬಾರೋ, ನನ್ನ ಕಾಪಾಡೋ!" ಎಂದು ತಮ್ಮನ್ನು ಕಾಪಾಡಲು ಅವನಿಗೆ ಆಜ್ಞೆ ಮಾಡುತ್ತಾರೆ! ತನ್ನದೇ ಹೆಸರಿನ ಈ ಭಕ್ತನ ಗುಣಾವಗುಣಗಳ ಬಗ್ಗೆ ರಾಮನಿಗೆ ಕರುಣೆಯಿದ್ದ ಹಾಗೆ ಕಾಣುತ್ತದೆ.

ಮನುಷ್ಯನಿಗೆ ಸ್ವಲ್ಪ ಮಟ್ಟಿಗೆ ಸ್ವಾಭಿಮಾನವಿರಬೇಕಾದ್ದು ಸರಿ. ಆದರೆ ಅಣ್ಣಯ್ಯನ ಅತಿ ಸ್ವಾಭಿಮಾನ ಅವರ ಪ್ರಗತಿಗೆ ಮಾರಕವಾಗಿರಬೇಕೆಂಬ ಗುಮಾನಿ ನನಗಿದೆ. ಆದರೆ ಅಣ್ಣಯ್ಯ ಈ ಮಾತನ್ನು ಸರ್ವಥಾ ಒಪ್ಪಿಕೊಳ್ಳುವುದಿಲ್ಲ.

ಇನ್ನು ಅಣ್ಣಯ್ಯನ ಕೋಪ: ಇದು ನಮ್ಮ ವಂಶದಲ್ಲಿಯೇ ಸುಪ್ರಸಿದ್ಧವಾದುದು. ಅವರ ಸಂಬಂಧಿಕರು ಅವರನ್ನು ಬೆಂಕಿನವಾಬ ಎಂದೇ ಕರೆಯುತ್ತಾರೆ. ಅಣ್ಣಯ್ಯನದು ಬಹಳ ಶುಭ್ರವಾದ ಕೆಂಪು ಚರ್ಮ (''ಅಣ್ಣಯ್ಯನ ಕಾಲಿಗೆ ಇರುವ ಬಣ್ಣ ನಮ್ಮಗಳ ಮುಖಕ್ಕೆ ಇರಬಾರದಿತ್ತೇ" ಚಿಕ್ಕಂದಿನಲ್ಲಿ ನನ್ನ ತಮ್ಮ ಹಲುಬುತ್ತಿದ್ದ.) ಕೋಪಬಂದಾಗ ಅದು ಇನ್ನೂ ತೀವ್ರವರ್ಣವನ್ನು ತಾಳಿ ಬಿಡುತ್ತಿತ್ತು. ಕಿವಿಗಳಂತೂ ಅವು ರಕ್ತವನ್ನು ತೊಟ್ಟಿಕ್ಕಿಸುತ್ತಿವೆಯೋ ಎಂಬಂತೆ ಕಂಡು ಬರುತ್ತಿದ್ದವು. ನಾನಂತೂ ಅಣ್ಣಯ್ಯನಿಗೆ ಕೋಪ ಬಂದಾಗ ಆದೆಲ್ಲಿ ಅಡಗಿ ಬಿಟ್ಟಿರುತ್ತಿದ್ದೆನೋ! ತನ್ನ ಪತಿರಾಯರ ಕೋಪದ ಬಗ್ಗೆ (ಅವರು ಶಾಂತರಾಗಿರುವ ಸಮಯದಲ್ಲಿ) ಅಮ್ಮ ಕುಚೇಷ್ಟೆ ಮಾಡುತ್ತಿದ್ದಳು. "ಹೆರಿಗೆ ಕಷ್ಟವಾಗಿರೋ ಚೊಚ್ಚಲು ಬಸುರೀನ ನಿಮ್ಮಪ್ಪನ ಮುಂದೆ ನಿಲ್ಲಿಸಿದ್ರೆ ಸಾಕು. ಹೆದ್ರಿಕೆಗೆ ಅವಳ್ಗೆ ಅಲ್ಲೇ ಸಲೀಸಾಗಿ ಹೆರ್ಗೆ ಆಗಿ ಬಿಡುತ್ತೆ."

ಹೀಗೆ ಅಣ್ಣಯ್ಯನಿಗೆ ಒಂದು ಸಾರಿ ಅಕ್ಕ ಮತ್ತು ಅಣ್ಣನ ಮೇಲೆ ಎಣೆಯಿಲ್ಲದ ಕೋಪ ಬಂತು. ಅವರು ಬೇಕಾದ ಹಾಗೆ ಆರ್ಭಟಿಸಿದರು. ಅವರಿಬ್ಬರನ್ನು ಹೊಡೆಯಲು ಸ್ಕೇಲನ್ನು ಕೈಗೆತ್ತಿಕೊಂಡರು. ಅಣ್ಣ ಒಂದು ಮೂಲೆಯಲ್ಲಿ ಅಕ್ಕ ಇನ್ನೊಂದು ಮೂಲೆಯಲ್ಲಿ ಮುದುರಿ ನಿಂತರು. ನನಗೆ ಅಡಗಿಕೊಳ್ಳಲು ಮೂಲೆ ಸಿಗಲಿಲ್ಲ, ಆದರೂ ಸಮಯ ಸ್ಫೂರ್ತಿ ನನ್ನನ್ನು ಕಾಪಾಡಿತು. ತಕ್ಷಣ ಅಲ್ಲೇ ಬಿದ್ದಿದ್ದ ಪುಸ್ತಕವೊಂದನ್ನು ಹಿಡಿದು ಬಲು ಶ್ರದ್ಧೆಯಿಂದ ಅದನ್ನೋದುತ್ತಿರುವವಳಂತೆ ನಟಿಸಿದೆ. ಅಕ್ಕನನ್ನೂ, ಅಣ್ಣನನ್ನೂ ಹೊಡೆಯಲು ಧಾವಿಸುತ್ತಿದ್ದ ಅಣ್ಣಯ್ಯ ನನ್ನನ್ನು ಗಮನಿಸಿದರು. ಅವರಿಗೆ ಸಂತೋಷವಾಗಿರಬೇಕು. "ನೋಡಿ, ಈ ಮಗು ಎಷ್ಟು ಜಾಣೆ! ಅವಳ ಪಾಡಿಗೆ ಅವಳು ಓದಿಕೊಳ್ಳುತ್ತಾ ಇದ್ದಾಳೆ" ಎಂದು ನಾನು ಓದುತ್ತಿದ್ದ ಪುಸ್ತಕವನ್ನು ಪರೀಕ್ಷಿಸಲು ನನ್ನ ಪಕ್ಕ ಕುಳಿತರು. ಮರುಕ್ಷಣ ಅಣ್ಣಯ್ಯನಿಂದ ದೊಡ್ಡದೊಂದು ನಗೆ ಆಸ್ಫೋಟವಾಗಿ

ಹೋಯಿತು. ಎರಡನೆ ತರಗತಿಯ ನಾನು ಓದುತ್ತಿದ್ದದ್ದು ಹೈಸ್ಕೂಲಿನ ನನ್ನ ಅಕ್ಕನ ಸಂಸ್ಕೃತ ಪುಸ್ತಕವನ್ನು; ಅದೂ ತಲೆಕೆಳಗಾಗಿ ಹಿಡಿದು! ಅಮ್ಮ ನನ್ನು ಕರೆದು ಅಣ್ಣಯ್ಯ ನನ್ನನ್ನು ತೋರಿಸಿದರು. ಆಮೇಲೆ ಹೆದರಿ ದೂರ ನಿಂತಿದ್ದ ಅಕ್ಕನನ್ನೂ ಅಣ್ಣನನ್ನೂ ಹತ್ತಿರ ಕರೆದು ತಬ್ಬಿಕೊಂಡರು. ತಲೆ ನೇವರಿಸಿದರು. "ನನಗೆ ಯಾಕೆ ಕೋಪ ಬರಿಸುತ್ತೀರಿ ?" ಕಕ್ಕುಲತೆಯಿಂದ ನುಡಿದರು. ಆಮೇಲೆ ಎಲ್ಲರೂ ಸಮಾಧಾನವಾಗಿ ಕುಳಿತು ಊಟ ಮಾಡಿದೆವು.

ಒಮ್ಮೊಮ್ಮೆ ಯಾವಾಗಲಾದರೂ–ಬರವಣಿಗೆ ಕೆಲಸ ಏನೂ ಇಲ್ಲದಿದ್ದಾಗ–ಅಣ್ಣಯ್ಯನ ಲಹರಿ ಅಡಿಗೆ ಮನೆಯತ್ತ ಸಾಗುವುದು. ಪರಮ ಸಂಭ್ರಮದಿಂದ ಪಂಚೆಯನ್ನು ಮೇಲೆತ್ತಿ ಕಟ್ಟಿ, ಅಮ್ಮನ ಆಪ್ತ ಅಂತಃಗೃಹಕ್ಕೆ ಧಾಳಿಯಿಡುವರು. ಗೋಡೆಗಳ, ಗೂಡುಗಳ ಧೂಳು, ಕಸ ಝಾಡಿಸುವರು. ಡಬ್ಬಗಳನ್ನೆಲ್ಲ ಹೊರತೆಗೆದು ಮತ್ತೆ ಓರಣವಾಗಿ ಜೋಡಿಸುವರು ಮಧ್ಯೆ ಮಧ್ಯೆಯೋ. . . , .ಸತತ ಮಂತ್ರೋಚ್ಚಾರಣೆ! "ಇವಳು ಇಷ್ಟು ವರ್ಷ ನನ್ನ ಜತೆ ಸಂಸಾರ ಮಾಡಿದ್ದಾಳೆ. ಆದರೇನು? ಒಂದಿಷ್ಟಾದರೂ ನಯ–ನಾಜೂಕು ಕಲಿತಳೇ ? ಇಲ್ಲವಲ್ಲ !" ಇತ್ಯಾದಿ ಇತ್ಯಾದಿ. ವಾಸ್ತವವಾಗಿ ಅಮ್ಮನ ಮೇಲೆ ಅಣ್ಣಯ್ಯನದು ಮಿಥ್ಯಾರೋಪ. ಆಕೆ ಮನೆಗೆಲಸಗಳಲ್ಲಿ, ಅಡಿಗೆಯಲ್ಲಿ ಬಹಳ ಅಚ್ಚುಕಟ್ಟು. ಆದ್ದರಿಂದ ಆಕೆ ದಿವ್ಯ ನಿರ್ಲಕ್ಷ್ಯಭಾವದ ಮುಸಿನಗೆಯೊಂದರಿಂದ ಪತಿರಾಯರ ಸಡಗರವನ್ನು, ಅವಾಂತರಗಳನ್ನು ಅವಲೋಕಿಸುತ್ತಿದ್ದಳು. ಆದರೂ ಆಕೆ ಭೂಮಿ ತೂಕದ ವ್ಯಕ್ತಿ. ಕೆಲಸವೆಲ್ಲ ಮುಗಿದ ಮೇಲೆ ಗಂಡನಿಗೆ 'ಸರ್ಟಿಫಿಕೇಟ್' ಕೊಡದೆ ಬಿಡುತ್ತಿರಲಿಲ್ಲ. "ಏನೂಂದ್ರೆ, ನಿಮ್ಮ ಕೋಪ ಅತ್ತ ಕಡೆ ಹ್ಯಾಗಾದ್ರೂ ಇರ್ಲಿ. ನಿಮ್ಮ ಕೆಲ್ಸ ಮಾತ್ರ ತುಂಬ ಅಚ್ಚುಕಟ್ಟು." ಹೆಂಡತಿಯ ಪ್ರಶಂಸೆಗೆ ಮೈಯುಬ್ಬದ ಪುರುಷನೂ ಪ್ರಪಂಚದಲ್ಲುಂಟೆ ? ಇಲ್ಲದ ಮೀಸೆಯನ್ನು ಹೆಮ್ಮೆಯಿಂದ ತಿರುಗಿಸುತ್ತಾ ಅಣ್ಣಯ್ಯ "ಇನ್ನೊಂದು ಸಾರಿ ಹೇಳು ಆ ಮಾತನ್ನ ಅಷ್ಟ್ಯಾಕೆ, ನನ್ನ ಮಕ್ಳನ್ನ ನೋಡಿದ್ರೇನೇ ನಿಂಗೆ ಆ ವಿಷ್ಯ ಗೊತ್ತಾಗೊಲ್ವೇ ? " ವಿಜೃಂಭಿಸುತ್ತಿದ್ದರು. ಗಂಡ ಹೆಂಡಿರ ಈ ಸಂಭಾಷಣೆ ಮಕ್ಕಳಾದ ನಮ್ಮ ಮುಂದೆಯೇ ನಡೆಯುತ್ತಿತ್ತಾಗಿ ಅಮ್ಮ ವಿಪರೀತ ನಾಚಿ ಒಳಗೆ ಸರಿದು ಬಿಡುತ್ತಿದ್ದಳು. ಹಣ್ಣುಹರೆಯದಲ್ಲಿ ಕೂಡ ನಾಚಿಕೊಳ್ಳುವ ಮುಗ್ಧತೆಯನ್ನು ಅಮ್ಮ ಉಳಿಸಿಕೊಂಡಿದ್ದಳು.

ತೋಟಗಾರಿಕೆಯಲ್ಲಿ ಅಣ್ಣಯ್ಯನಿಗೆ ಇರುವ ಆಸಕ್ತಿ, ಪರಿಶ್ರಮಗಳನ್ನು ನಾನು ಹೇಳಲೇ ಬೇಕು. ಅವರೊಬ್ಬ ಶ್ರದ್ಧಾವಂತ ರೈತ ಎಂದು ಧಾರಾಳವಾಗಿ ಹೇಳಬಹುದು. ತಾವು ಎಲ್ಲಿಯೇ ಹೋಗಲಿ, ಮನೆಯ ಸುತ್ತ ಸಿಕ್ಕಷ್ಟು ಜಾಗದಲ್ಲಿ ಅಚ್ಚುಕಟ್ಟಾಗಿ ಕೈತೋಟ ಮಾಡಿಕೊಳ್ಳುವರು ; ತರಕಾರಿ, ಹೂವು ಬೆಳೆಯುವರು. ರಾಮನಗರದಲ್ಲಿ ನಾನು ತೀರಾ ಸಣ್ಣವಳಾದರೂ, ಹಿತ್ತಲ ತೋಟದ ನಡುವೆ ಅಣ್ಣಯ್ಯ ಬೆಳೆಸಿದ್ದ ಹುಲುಸಾದ ಪಡುವಲಕಾಯಿಯ ಬಳ್ಳಿ ನನಗೆ ಚೆನ್ನಾಗಿ ನೆನಪಿದೆ. ಅಣ್ಣಯ್ಯ ಶ್ರದ್ಧೆಯಿಂದ ಅದಕ್ಕೆ ಎತ್ತರವಾದ ಚಪ್ಪರವೊಂದನ್ನು ನಿರ್ಮಿಸಿದ್ದರು. ಚಪ್ಪರದಿಂದ ಹೊರಟು ನೆಲ

ಮುಟ್ಟುವ ತನಕ ಇಳಿಬಿದ್ದಿದ್ದ ಮಾರುದ್ದದ ಪಡುವಲಕಾಯಿಗಳು ನನ್ನ ಕಣ್ಣಿಗೆ ಕಟ್ಟಿದಂತಿದೆ. "ನಮ್ಮೆಜವಾನ್ರು ಆಳುದ್ದದ ಪಡುವಲಕಾಯಿಗಳನ್ನು ಬೆಳ್ದಿದಾರೆ" ಅಮ್ಮ ಹೆಮ್ಮೆಯಿಂದ ಅವುಗಳನ್ನು ತನ್ನ ಗೆಳತಿಯರ ಮನೆಗಳಿಗೆ ಸಾಗಿಸಿದ್ದೇ ಸಾಗಿಸಿದ್ದು. ಪಾಂಡವಪುರದಲ್ಲಿಯೂ ಮನೆಯ ಮುಂದೆ ಸಾಕಷ್ಟು ಜಾಗವಿತ್ತು. ಪಪಾಯಿ, ಮಲ್ಲಿಗೆ, ತುಳಸಿ ಮುಂತಾದ ಗಿಡಗಳ ಜತೆಗೆ ಹಸಿರು ಹೊನ್ನಗೊನೆ ಮತ್ತು ಮರುಗದ ಕಿರುಪೊದೆಗಳನ್ನೇ ಅಣ್ಣಯ್ಯ ಬೆಳೆಸಿ ಬಿಟ್ಟಿದ್ದರು.

ಈ ಪೊದೆಗಳಿಗೆ ಮಾಟವಾದ ಆಕಾರಗಳನ್ನು ಕೊಡಲು ಆಗಿಂದಾಗ್ಗೆ ಆ ಗಿಡಗಳನ್ನು ಅಲ್ಲಲ್ಲಿ ಗುಂಡಗೆ ಕತ್ತರಿಸುತ್ತಿದ್ದರು. ಲಹರಿ ಬಂದಾಗ ಒಂದೆರಡು ಮರುಗದ ಕುಡಿಗಳನ್ನು ಕಿತ್ತು ದಿಂಬಿನಡಿ ಹಾಕಿಕೊಂಡು, ಅದರ ಪರಿಮಳವನ್ನು ಆಸ್ವಾದಿಸುತ್ತಾ ಸುಖಿಗಳಾಗುತ್ತಾ ಇದ್ದದ್ದೂ ಉಂಟು. ಒಂದುಸಾರಿ ನಾವು ಮೇಲುಕೋಟೆಗೆ ಹೋಗಿದ್ದಾಗ ದೇವರಿಗೆ ಅಮ್ಮ ಒತ್ತೊತ್ತಾಗಿ ದಂಡೆಯಂತೆ ಕಟ್ಟಿದ್ದ ಆಳೆತ್ತರದ ಮರುಗ ತುಳಸಿ ಮಾಲೆಗಳನ್ನು ಅರ್ಪಿಸಿದ್ದಳು. ಅದನ್ನು ನೋಡಿ ಅರ್ಚಕರು ಎಷ್ಟೊಂದು ಸಂತೋಷಪಟ್ಟಿದ್ದರೆಂದು ಹೇಳುವುದಕ್ಕಿಲ್ಲ. ಅಮ್ಮ-ಅಣ್ಣಯ್ಯನೂ ಆ ಸಂತೋಷದಲ್ಲಿ ಸಮಭಾಗಿಗಳಾದರು. ಯಾಕೆಂದರೆ ಈ ವಿಷಯವಾಗಿ ಹಿಂದಿನ ದಿನ ಅವರಿಬ್ಬರೂ ಪಟ್ಟಿದ್ದ ಸಡಗರ ಹೇಳತೀರದು. ಮರುಗ, ತುಳಸಿಯನ್ನು ರಾಶಿ ರಾಶಿ ಹಾಕಿಕೊಂಡು ಅಣ್ಣಯ್ಯ ಅವುಗಳ ಕುಡಿಗಳನ್ನು ಸಮನಾಗಿ ಕತ್ತರಿಸಿ ಕತ್ತರಿಸಿ ಕೊಡುವುದು ; ಅಮ್ಮ ನಗುನಗುತ್ತ ಕಟ್ಟಿ ಕಟ್ಟಿ ಇಡುವುದು. ಗಂಡ-ಹೆಂಡಿರ ಮಾಲೆಕಟ್ಟುವ ಕಾಯಕ ಇಡೀ ರಾತ್ರಿ ನಡೆದಿತ್ತು.

ಅಣ್ಣಯ್ಯನ ಕೃಷಿಗೆ ವಿಶಾಲವಾದ ಅವಕಾಶವಾದದ್ದು ನಮ್ಮ (ಮಂಡ್ಯದ) ಕಲ್ಲಹಳ್ಳಿಯ ಮನೆಯಲ್ಲಿ. ಅದೊಂದು ಬಹುದೊಡ್ಡ ನಿವೇಶನ. ಮನೆಯ ಸುತ್ತ ವಿಸ್ತಾರವಾದ ಜಾಗವಿತ್ತು. ಅಲ್ಲಿ ಅಣ್ಣಯ್ಯನ ತೋಟಗಾರಿಕೆಯ ಸಂಭ್ರಮವನ್ನು ಏನು ಹೇಳೋಣ ? ಬೆಂಡೆ, ಬದನೆ, ತೊಗರಿ, ಹುರುಳಿಕಾಯಿ, ತೆರತೆರನಸೊಪ್ಪು, ಬಟಾಣಿ, ಆಲೂಗಡ್ಡೆ, ಮುಸುಕಿನ ಜೋಳ ಇವೆಲ್ಲವನ್ನು ರಾಶಿ ರಾಶಿ ಬೆಳೆದರು. ಅವರೆಕಾಯಿಯ ಕಾಲದಲ್ಲಿ ಸಮೃದ್ಧವಾಗಿ ಅವರೆಕಾಯಿಯನ್ನೂ ಬೆಳೆದರು. ಅಮ್ಮನೂ ಹಳ್ಳಿಯೊಂದರಿಂದ ಬಂದ ಹೆಣ್ಣುಮಗಳೇ ಆದ್ದರಿಂದ ಆಕೆಗೂ ಗಂಡನ ಬೇಸಾಯದಲ್ಲಿ ಬಲುಪ್ರೀತಿ. ಸೋನೆಬಿಸಿರುತ್ತಿದ್ದ ಆ ಸೊಗಡುಕಾಯಿಗಳನ್ನು ಸಡಗರದಿಂದ ಕಿತ್ತು ಸ್ವಾದಿಷ್ಟವಾದ ಸಾರನ್ನು ಮಾಡುತ್ತಿದ್ದಳು. ಅಣ್ಣಯ್ಯನ ಶ್ರಮ, ಅಮ್ಮನ ಪ್ರೀತಿ ಮಿಳಿತವಾದ ಅವರೆಕಾಳಿನ ಸಾರಿನ ರುಚಿಯ ಆ ದಿನಗಳು ಇನ್ನೆಲ್ಲಿ ?

ಕಲ್ಲಹಳ್ಳಿ ಮನೆಯಲ್ಲಿ ಅಣ್ಣಯ್ಯ ತುಪ್ಪದ ಹೀರೆ ಬೀಜವೊಂದನ್ನು ಅದೆಲ್ಲಿಂದಲೋ ತಂದು ಪಾತಿಮಾಡಿ ನೆಟ್ಟರು. ಗೊಬ್ಬರ ಹಾಕಿದರು. ಸಮೃದ್ಧವಾಗಿ ನೀರುಣಿಸಿದರು. ಅದೋ, ಈ ಅತಿ ಉಪಚಾರದಿಂದ ಹಿಗ್ಗಿ ಹೀರೆಯಕಾಯಿತು ; ರಾಕ್ಷಸನಂತೆ ಬೆಳೆಯಿತು. ರಾಶಿ ರಾಶಿ ಕಾಯಿಗಳನ್ನು ಸುರಿಸಿತು. ಅದನ್ನು ತಿಂದು ತಿಂದು ನಮಗೆ ಬೇಸರಿಕೆಯೂ

ಬಂದಿತು. ತಿನ್ನುವುದು ಹಾಗಿರಲಿ, ಕ್ರಮೇಣ ಅದನ್ನು ಅಡಿಗೆ ಮಾಡುವುದಕ್ಕೂ ಅಮ್ಮನಿಗೆ ಬೇಸರ ಬಂತು. ಇಷ್ಟಾಗಿಯೂ ಆ ಬಳ್ಳಿಯ ಆಯುಷ್ಯ ಮಾತ್ರ ಮುಗಿಯುವಂತೆ ತೋರಲಿಲ್ಲ. ಅಜರಾಮರದಂತೆ ದಿನದಿನವೂ ಬೆಳೆಯಿತು ; ಹೆಚ್ಚು ಹೆಚ್ಚು ಕಾಯಿಗಳನ್ನು ತಳ್ಳಿತು. ಅಣ್ಣಯ್ಯ ಪ್ರತಿ ಮುಂಜಾನೆ ತೋಟದ ಆರೈಕೆಗೆ ಎದ್ದವರು "ಅನ್ಯಾಯವಾಗಿ ಬಲಿತುಹೋಗುತ್ತೆ ಕಣೇ. ಎಳೇದಾಗಿರೋವಾಗ್ಲೇ ಮಾಡಿಬಿಡು ರುಚಿಯಾಗಿರುತ್ತೆ. ಆರೋಗ್ಯಕ್ಕೂ ಒಳ್ಳೇದು." ಎಂದ ನಾಲ್ಕಾರು ತುಪ್ಪದ ಹೀರೆಗಳನ್ನು ತಪ್ಪದೆ ತಂದು ಅಡಿಗೆ ಮನೆಯಲ್ಲಿಟ್ಟು ಬಿಡುವರು. ಈ ತರಕಾರಿ ಕಾಟ ಮನೆಯಲ್ಲಿ ವಿಪರೀತಕ್ಕಿಟ್ಟು ಕೊಂಡಿತು. "ತುಪ್ಪದ ಹೀರೆ ಮಾಡಿದ ದಿವಸ ನಾವು ಊಟ ಮಾಡೋಲ್ಲ." ನಾನೂ ನನ್ನ ತಮ್ಮನೂ ಮುಷ್ಕರ ಹೂಡಿದೆವು. ಕಡೆಗೆ ಅಮ್ಮ ಒಂದು ಉಪಾಯ ಮಾಡಿದಳು. ಒಂದು ದಿನ ಅಣ್ಣಯ್ಯ ಆಫೀಸಿಗೆ ಹೋಗಿದ್ದಾಗ ಮೆಲ್ಲಗೆ ಆ ಗಿಡದ ಬಳಿ ಹೋಗಿ ಬಳ್ಳಿಯ ತೆಳುಬುಡುವನ್ನು ಬ್ಲೇಡಿನಿಂದ ಕತ್ತರಿಸಿಬಿಟ್ಟಳು. ಕತ್ತರಿಸಿದ್ದು ಗೊತ್ತಾಗದ ಹಾಗೆ ಆ ತುಂಡುಗಳನ್ನು ಮತ್ತೆ ಹಾಗೆಯೇ ಜೋಡಿಸಿಟ್ಟುಬಿಟ್ಟಳು. ಒಂದೆರಡು ದಿನಗಳಲ್ಲಿ ಬಳ್ಳಿ ಪೂರ್ತಿಯಾಗಿ ಬಾಡಿ ಹೋಯಿತು. ಅಣ್ಣಯ್ಯ ಎಷ್ಟು ನೀರು ಹಾಕಿದರೂ ಅಷ್ಟೇ ; ಎಷ್ಟು ಗೊಬ್ಬರ ಹಾಕಿದರೂ ಅಷ್ಟೇ. "ಅಯ್ಯಯ್ಯೋ ಅಷ್ಟೊಂದು ಸೊಂಪಾಗಿದ್ದ ಗಿಡ ಇದ್ದಕ್ಕಿದ್ದ ಹಾಗೆ ಬಾಡಿ ಹೋಯಿತಲ್ಲ ! ಪಾಪ ಏನು ಕಾಯಿಲೆಯೋ ಏನೋ !" ಅಣ್ಣಯ್ಯ ಮಮ್ಮಲ ಮರುಗಿದರೆ, ಅಮ್ಮ ಮೆಲ್ಲನೆ ನಮ್ಮತ್ತ ನೋಡಿ ಮುಸಿಮುಸಿ ನಕ್ಕಳು. ನಂತರ ಒಂದು ಸಂಜೆ ತಾನು ಮಾಡಿಕೊಟ್ಟ ಉದ್ದಿನೊಡೆ–ಕಾಯಿ ಚಟ್ನಿ ಮೆದ್ದು ಅಣ್ಣಯ್ಯ ಸಂತೃಪ್ತರಾಗಿದ್ದ ಸಮಯದಲ್ಲಿ ಅಮ್ಮ ತುಪ್ಪದ ಹೀರೆ ಬಳ್ಳಿಗೆ ತಾನು ಕರುಣಿಸಿದ ಮೋಕ್ಷವನ್ನು ಬಣ್ಣಬಣ್ಣವಾಗಿ ವಿವರಿಸಿದಳು. ಅಣ್ಣಯ್ಯ ಹೊಟ್ಟೆಹಿಡಿದು 'ಹೋ !' ಎಂದು ನಕ್ಕರು. "ಲೇ, ಬಲು ಕಿಲಾಡಿ ಕಣೇ ನೀನು" ಬಿರುದನ್ನೂ ದಯಪಾಲಿಸಿದರು.

ಮೈಸೂರಿನ ಬನ್ನಿಮಂಟಪದ ಮನೆಯಲ್ಲಿದ್ದಾಗ ಹಿತ್ತಲಿನಲ್ಲಿ ಅಣ್ಣಯ್ಯ ಒಂದು ಈರನಗೆರೆ ಬದನೆಸಸಿಯನ್ನು ನೆಟ್ಟರು. ಅದೂ ಹಾಗೆಯೇ ; ಬೆಳೆಯಿತು, ಬೆಳೆಯಿತು, ಅಣ್ಣಯ್ಯನ ಎತ್ತರವನ್ನೂ ಮೀರಿ ಬೆಳೆಯಿತು. ನಾವೆಲ್ಲ ಅದಕ್ಕೆ ಬದನೆಯ ಮರ ಎಂದೇ ಹೆಸರಿಟ್ಟುಬಿಟ್ಟೆವು. ಗಿಡ ಬಲಿತರೇನು ? ಅದುಕೊಡುತ್ತಿದ್ದ ಹಚ್ಚ ಹಸಿರು ಕಾಯಿ ಬೆಣ್ಣೆಯಷ್ಟು ಮೃದು. ಅಮ್ಮ ಆ ಕಾಯಿಗಳಿಂದ ಅದ್ಭುತವಾದ ಎಣ್ಣೆಗಾಯಿ ಮಾಡುತ್ತಿದ್ದಳು ; ವಾಂಗೀಭಾತ್ ತಯಾರಿಸುತ್ತಿದ್ದಳು ; ಸೊಗಸಾದ ರಾಯತ, ಘಮ ಘಮ ಬೇಳೆಹುಳಿ, ಗೊಜ್ಜುಗಳನ್ನು ಮಾಡುತ್ತಿದ್ದಳು. ಅಂತೂ, ಆಗ ನಮ್ಮ ಮನೆಯಲ್ಲಿ ಬದನೆಯ ವೈವಿಧ್ಯವೋ ವೈವಿಧ್ಯ. ಈ ಬದನೆಮರದ ಬಗ್ಗೆ ಅಮ್ಮನಿಗೆ ವಿಪರೀತ ಹೆಮ್ಮೆ "ನಿಮ್ಮ ಅಣ್ಣಯ್ಯ ಬೆಳೆಸಿರೋ ಬದನೆಗಿಡ ಕಾಮಧೇನು ಕಣ್ರೋ . . ತರಕಾರಿ ಏನೂ ಇಲ್ಲದಿದ್ದಾಗ ಗಿಡದ ಹತ್ತಿರ ಹೋಗಿ ಸುತ್ತ ಕಣ್ಣಾಡಿಸಿದರೆ ಸಾಕು. ನಾಲ್ಕಾರು ಕಾಯಿಗಳನ್ನಾದ್ರೂ ಕೊಟ್ಟೇ ಕೊಡುತ್ತೆ."

ಇತ್ತೀಚೆಗೆ ಅಣ್ಣಯ್ಯ ಮೈಸೂರಿನ ಗೋಕುಲದ ಮನೆಯಲ್ಲಿ ಶಾಶ್ವತವಾಗಿ ನೆಲೆಯಾದ ಮೇಲೆ ಅವರ ತೋಟಗಾರಿಕೆ ಹಿಂದೆಂದಿಗಿಂತ ಹೆಚ್ಚು ವಿಜೃಂಭಿಸಿದೆ. ಅವರ ಇಳಿ ವಯಸ್ಸು ಅದಕ್ಕೆ ಯತ್ಕಿಂಚಿತ್ತೂ ಭಂಗ ತಂದಿಲ್ಲ.

ಇಷ್ಟಾಗಿಯೂ ಅಣ್ಣಯ್ಯನಿಗೆ ಗಿಡಗಳ ಪ್ರೇಮ ಅಪಾರವಾಗಿಯೇ ಇದೆ. ಬೆಂಗಳೂರಿನ ನಮ್ಮ ಮನೆಗೆ ಬಂದಾಗಲೆಲ್ಲ ನಾನು ಬೆಳೆಸಿರುವ ಕುಬ್ಜ ವೃಕ್ಷಗಳನ್ನು ಕೂಲಂಕಷವಾಗಿ ಅವಲೋಕಿಸುತ್ತಾರೆ. ಅವುಗಳ ಸೌಂದರ್ಯವನ್ನು ನಿಂತು ನಿಂತು ನೋಡುತ್ತಾರೆ. ಸಂತೋಷಪಡುತ್ತಾರೆ. "ತಾಳು ಒಂದು ದಿನ ಲಾರಿ ತಂದು ನಿನ್ನ ಗಿಡಗಳನ್ನೆಲ್ಲ ಕದ್ದುಕೊಂಡು ಹೋಗುತ್ತೀನಿ." ನಗುನಗುತ್ತ ಹೇಳುತ್ತಾರೆ.

ಮತ್ತೆ ನಮ್ಮ ಬಾಲ್ಯಕಾಲಕ್ಕೆ ಹಿಂತಿರುಗುವುದಾದರೆ, ನಾವೆಲ್ಲ ಸಣ್ಣವರಾಗಿದ್ದಾಗ ಅಮ್ಮನಿಗೆ ಸೀರೆ ತರುವುದರಿಂದ ಹಿಡಿದು–ನಮ್ಮೆಲ್ಲರಿಗೂ ಪೇಟೆಯಿಂದ ಬಟ್ಟೆಗಳನ್ನು ಹೊತ್ತು ತರುವುದು ಅಣ್ಣಯ್ಯನಿಗೆ ಪ್ರಿಯವಾದ ಕೆಲಸ. ಎಷ್ಟೋ ಸಾರಿ ಅವರ ಆಯ್ಕೆ ಅಭಿರುಚಿ ನಮಗೆ ಹಿಡಿಸುತ್ತಿರಲಿಲ್ಲ. ಆದರೆ ಎದುರು ವಾದಿಸುವ ಎದೆಗಾರಿಕೆಯಾದರೂ ಯಾರಿಗಿತ್ತು ? ಒಳಗೊಳಗೇ ಗೊಣಗಿಕೊಂಡು ಸುಮ್ಮನಾಗುತ್ತಿದ್ದೆವು. ಒಂದು ಸಾರಿ ಮಾತ್ರ ಸಹನೆ ಮೀರಿ ನಾನು ತೀವ್ರವಾಗಿ ಪ್ರತಿಭಟಿಸಿಬಿಟ್ಟೆ. ನಾನು ಪಿ.ಯು.ಸಿ.ಗೆ ಸೇರಿದಾಗ ಅಣ್ಣಯ್ಯ ನನಗೆ ಹೊಸಲಂಗದ ಬಟ್ಟೆಯನ್ನು ತರುತ್ತೇನೆಂದು ಪೇಟೆಗೆ ಹೋದರು. ನಾನೂ ಸಂತಸದಿಂದಲೇ ದಾರಿ ಕಾಯುತ್ತಿದ್ದೆ. ನನ್ನ ಸ್ನೇಹಿತೆಯರು ಹಾಕಿಕೊಳ್ಳುವಂತಹ ಬಣ್ಣಬಣ್ಣದ ಬಟ್ಟೆಗಳನ್ನು ನಿರೀಕ್ಷಿಸಿದ್ದ ನನಗೆ ಅಂದು ತುಂಬ ನಿರಾಶೆಯಾಯಿತು. ಅಣ್ಣಯ್ಯ ತಂದಿದ್ದ ಅಷ್ಟೂ ಬಟ್ಟೆಗಳು ಅಚ್ಚ ಬಿಳಿಯ ಬಣ್ಣದವು. ಅವುಗಳ ಮೇಲಿದ್ದ ಹೂಗಳು ಮಾತ್ರ ಬೇರೆ ಬೇರೆ ಬಣ್ಣದವೇ ಆಗಿದ್ದರೂ, ಆ ಹೂಗಳು ಕೂಡ ಬಲು ಚಿಕ್ಕದಾಗಿದ್ದು, ಅತ್ಯಂತ ತಿಳಿ ಬಣ್ಣದವಾಗಿದ್ದವು. ದೂರದಿಂದ ನೋಡಿದರೆ ಎಲ್ಲವೂ ಒಂದೇ ರೀತಿ ಕಾಣುತ್ತಿದ್ದವು. ನಾನು ತಡೆಯಲಾಗದ ನಿರಾಶೆ, ಸಿಟ್ಟುಗಳಿಂದ "ಯಾವಾಗ್ಲೂ ಬಿಳೀ ಬಟ್ಟೇನೇ ತರ್ತಾರೆ ಈ ಅಣ್ಣಯ್ಯ! ನಂಗೆ ಬೇಡ ! ನಾನು ಹಾಕಿಕೊಳ್ಳೊಲ್ಲ !" ಕೂಗಾಡಿ ಬಿಟ್ಟೆ. ಆಗ ಬಂತಪ್ಪ ನಮ್ಮ ಅಣ್ಣಯ್ಯನಿಗೆ ಸಿಟ್ಟು! ರಕ್ತವರ್ಣವಾಗಿ ಹೋದವು ಅವರ ಕೆನ್ನೆ ಕಿವಿಗಳು ! ಥರಥರನೆ ನಡುಗುತ್ತ ಎದ್ದು ನಿಂತರು. "ಚೋಟುದ್ದ ಇದಾಳೆ, ನಂಗೇ ದಬಾಯಿಸ್ತಾಳೆ ! ಎಷ್ಟು ಸೊಕ್ಕು ಇವಳಿಗೆ ! ಈ ಬಟ್ಟೆ ಈಗಲೇ ಸರ್ವನಾಶವಾಗಿ ಹೋಗಲಿ ! ಇದನ್ನ ಇವಳು ಹಾಕ್ಕೊಳ್ಳೋದೇ ಬೇಡ !" ಧುಡು ಧುಡು ಓಡಿಹೋಗಿ ಆ ಇಡೀ ಪೊಟ್ಟಣವನ್ನು ಬಚ್ಚಲು ಒಲೆಗೆ ತುರುಕಿದರು, ಕೋಪೋದ್ರಿಕ್ತರಾಗಿ ಬೆಂಕಿ ಪೊಟ್ಟಣಕ್ಕಾಗಿ ಸುತ್ತ ಮುತ್ತ ಹುಡುಕಾಡಿದರು. ಆದರೆ ಅದೆಲ್ಲಿದೆ? ಅಣ್ಣಯ್ಯನ ನರ–ನಾಡಿಗಳನ್ನು ಬಲು ಚೆನ್ನಾಗಿ ಬಲ್ಲ ನನ್ನ ಅಮ್ಮ ಅದನ್ನಾಗಲೇ ಇನ್ನೆಲ್ಲೋ ಬಚ್ಚಿಟ್ಟಾಗಿತ್ತು! ಅಣ್ಣಯ್ಯ ಮತ್ತಷ್ಟು ಸಿಟ್ಟಿನಿಂದ ಅವುಡುಗಚ್ಚುತ್ತಾ "ಬೆಂಕಿ ಬಿದ್ದುಹೋಗ್ಲಿ... ನಂಗೇನು ?" ಕೋಣೆ ಸೇರಿ ಮಂಚದ ಮೇಲೆ ಧೊಪ್ಪನೆ ಕೆಡೆದರು ! ಅವತ್ತೆಲ್ಲ ನನಗೆ ಅಣ್ಣಯ್ಯನ ಮೇಲೆ ಅಸಮಾಧಾನವೇ.

ಇದೇ ಅಣ್ಣಯ್ಯ ನಾನು ಎಂ.ಎ. ಸೇರಿದ ಹೊಸತರಲ್ಲಿ ಒಂದು ದಿನ ಉಲ್ಲಸಿತ ರಾಗಿ ಹೊರಗಡೆಗೆ ಹೊರಟರು. ತಾನು ಎಲ್ಲಿಗೆ, ಯಾತಕ್ಕೆ ಹೋಗುತ್ತಿದ್ದೇನೆ ಎಂದು ಅವರು ಯಾರಿಗೂ ಹೇಳಲಿಲ್ಲ. ಆದರೂ ಅಮ್ಮನಿಗೆ ಒಳಗೊಳಗೇ ಗುಮಾನಿ. "ಪುಟ್ಟೀ, ಬಹುಶಃ ಇವತ್ತು ನಿಂಗೆ ಏನೋ ಹೊತ್ಕೊಂಡು ಬರ್ತಾರೆ." ಅಂದಳಾಕೆ ಮುಸಿ ಮುಸಿ ನಗುತ್ತಾ. ಅಮ್ಮನ ಎಣಿಕೆ ನಿಜವೇ ಆಯಿತು. ಊಟದ ವೇಳೆಗೆ ಉಸ್ಸೆಂದು ಮನೆಗೆ ಬಂದ ಅಣ್ಣಯ್ಯ ಕಂಕುಳಲ್ಲಿದ್ದ ಪೊಟ್ಟಣವನ್ನು ಬಿಚ್ಚಿ ಸಾಲಾಗಿ ನನ್ನ ಮುಂದೆ ಹರಡಿದರು. ಏಳೆಂಟು ಹೊಸ ಸೀರೆಗಳು! ಅವುಗಳಲ್ಲಿ ಒಂದು ಮಾತ್ರ ಅಚ್ಚ ಬಿಳಿಯ ವಾಯಿಲ್ ಸೀರೆಯಾದರೂ ಉಳಿದೆಲ್ಲ ಮನಮೋಹಕ ವರ್ಣದವು. ನಸುಗುಲಾಬಿ, ತಿಳಿಹಳದಿ, ಗಾಢಕಿತ್ತಳೆ, ಕಡು ಕೆನೆ ಬಣ್ಣದ್ದು ಇತ್ಯಾದಿ ನನ್ನ ಮನಸ್ಸು ಹಿಗ್ಗಿನಿಂದ ಉಬ್ಬಿಹೋಯಿತು. ಆ ದಿನವೆಲ್ಲ ಅದೆಷ್ಟು ಸಾರಿ ಮನಸ್ಸಿನಲ್ಲಿಯೇ ಅಣ್ಣಯ್ಯನಿಗೆ ಕೃತಜ್ಞತೆಯನ್ನು ಅರ್ಪಿಸಿದೆನೋ! ನಾನು ಎಂ.ಎ.ಗೆ ಬಂದ ನಂತರ ಅಣ್ಣಯ್ಯ ನನಗೆ ಬಟ್ಟೆ ತರುವುದನ್ನು ಬಿಟ್ಟು ಬಿಟ್ಟರು. ಅಷ್ಟು ಮಾತ್ರವಲ್ಲ, ಅಮ್ಮನಿಗೆ ಸೀರೆ ತರುವ ಜವಾಬ್ದಾರಿಯನ್ನು ಕೂಡ ನನಗೇ ವಹಿಸಿದರು. ನಾನು ಎಂ,ಎ. ಸೇರಿದ ಮಾತ್ರಕ್ಕೆ ಪ್ರಬುದ್ಧಳಾಗಿ ಬಿಟ್ಟೆನೆಂದು ನನ್ನ ತಂದೆ ಭಾವಿಸಿದರೋ ಏನೋ!

ಸಾಮಾನ್ಯವಾಗಿ ತಾಯಿ–ತಂದೆಯರು ಮಕ್ಕಳ ವಿಷಯವಾಗಿ ಬೆಟ್ಟದಷ್ಟು ಆಸೆಗಳನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಮಕ್ಕಳಾದ ನಾವು ಅವುಗಳಲ್ಲಿ ಅದೆಷ್ಟನ್ನು ಪೂರೈಸಿ ಕೊಡುತ್ತೇವೆ ಎಂಬುದು ಪ್ರಶ್ನೆ. ಎಲ್ಲರ ಹಾಗೆ ನನ್ನ ತಂದೆಯೂ ತಮ್ಮ ಮಕ್ಕಳ ವಿಷಯವಾಗಿ ಬಹಳ ಆಸೆಗಳನ್ನು ಇಟ್ಟುಕೊಂಡಿದ್ದರು. ಆಸೆಯೆಂದರೆ, ಅದು ಸ್ವಾರ್ಥಮೂಲದಿಂದ ಬಂದದ್ದಲ್ಲ. ತಮ್ಮ ಮಕ್ಕಳು ಪ್ರಜ್ಞಾವಂತರಾಗಬೇಕು ; ಬುದ್ಧಿವಂತರಾಗಬೇಕು ; ನಾಲ್ಕು ಜನರಲ್ಲಿ ಅವರು ತಲೆಯೆತ್ತಿ ಬಾಳಬೇಕು ; ತಾನುಂಡಂತಹ ಕಷ್ಟ–ಕಾರ್ಪಣ್ಯಗಳನ್ನು ತನ್ನ ಮಕ್ಕಳು ಅನುಭವಿಸಬಾರದು–ಇಂತಹ ಸಂಭಾವಿತ ಹಂಬಲಗಳು. ನನ್ನ ತಂದೆಯ ಇಂತಹ ಒಂದು ಆಶಯವನ್ನು ನಾನು ಪೂರೈಸಿದ್ದೇನೆಂಬ ತುಂಬು ಸಮಾಧಾನ ನನಗಿದೆ. ಚಿಕ್ಕಂದಿನಿಂದಲೂ ತಾವು ಎಂ.ಎ. ಪದವೀಧರರಾಗಬೇಕೆಂಬುದು ನನ್ನ ತಂದೆಯ ಅದಮ್ಯ ಅಭೀಪ್ಸೆ. ಆದರೆ ವಯಸ್ಸಿಗೆ ಮೀರಿದ ಜವಾಬ್ದಾರಿ, ಸಂಸಾರದ ಬವಣೆಗಳಿಂದ ಅವರಿಗೆ ಅದು ಸಾಧ್ಯವಾಗಲಿಲ್ಲ. ಆ ನಿರಾಶೆ ಅವರನ್ನು ಬಹುವಾಗಿ ಕಾಡಿತ್ತಾದರೂ, ಆಗಾಗ ನನ್ನನ್ನು ನೋಡಿ "ನಾನು ಎಂ.ಎ. ಮಾಡದಿದ್ದರೇನು ? ಈ ನನ್ನ ಮಗು ಎಂ.ಎ. ಮಾಡ್ತಾಳೆ. ನಂಗೆ ಸಂತೋಷ ಕೊಡ್ತಾಳೆ." ಎಂದು ಹಂಬಲಿಸುತ್ತಿದ್ದರು. ಪುಣ್ಯವಶಾತ್ ಅಧ್ಯಯನದಲ್ಲಿ ಆನಂದವನ್ನು ಕಂಡುಕೊಳ್ಳುವ ಸ್ವಭಾವ ನನ್ನ ತಂದೆಯಿಂದಲೇ ನನಗೂ ಅಷ್ಟಿಷ್ಟು ಅಂಟಿಕೊಂಡಿತ್ತು. ಹಾಗಾಗಿ ಅವರ ಅಪೇಕ್ಷೆಯ ಮೇರೆಗೆ ನಾನು ಎಂ.ಎ. ಸೇರಿದೆ. ಅಣ್ಣಯ್ಯನ ಆಸೆಯಂತೆ ಎಂ.ಎ. ಗೆ ಸೇರಿದ್ದು ಹೌದಾದರೂ ಇಲ್ಲಿ ಕೂಡ ನಾನು ಸ್ವಲ್ಪ ತಲೆಹರಟೆಯನ್ನೇ ಮಾಡಿದೆ. ಅಣ್ಣಯ್ಯನಿಗೆ ಆಸೆಯಿದ್ದದ್ದು ತಾವು ಮಾಡಲಾಗದ ಕನ್ನಡ ಎಂ.ಎ. ಅನ್ನು ತಮ್ಮ ಮಗಳು ಮಾಡಬೇಕೆಂಬುದು.

ಆದರೆ ನಾನು ತೆಗೆದ ವರಸೆಯೇ ಬೇರೆ. "ಬಿ.ಎ. ತನಕ ಕನ್ನಡ ಓದಿದ್ದೀನಿ. ಒಳ್ಳೊಳ್ಳೆಯ ಗ್ರಂಥಗಳನ್ನು ಓದಿ ತಿಳಿದುಕೊಳ್ಳಲು ಇಷ್ಟರ ಮಟ್ಟಿಗಿನ ತಳಹದಿ ಸಾಕು. ಎಂ.ಎ. ಯಲ್ಲಿ ವಿಷಯ ವೈವಿಧ್ಯ ಇರಲಿ. ನಾನು ತತ್ತ್ವಶಾಸ್ತ್ರದ ಎಂ.ಎ. ಮಾಡುತ್ತೇನೆ." ಇಂತಹ ವಿಷಯಗಳಲ್ಲಿ ನನ್ನ ತಂದೆಯ ಸ್ವಭಾವ ಉದಾತ್ತವಾದದ್ದು. ನನ್ನ ಮಾತಿಗೆ ಅವರು ಅಡ್ಡಿ ಹೇಳಲಿಲ್ಲ. "ಸರಿಯಮ್ಮ ನಿನ್ನಿಷ್ಟ" ಅಂದುಬಿಟ್ಟರು. ನಾನು ಕನ್ನಡ ಎಂ.ಎ. ಗೆ ಸೇರಿಕೊಳ್ಳಲಿಲ್ಲವೆಂದು ಅವರಿಗೆ ಸಾಕಷ್ಟು ನಿರಾಶೆಯೇ ಆಗಿರಬೇಕು. ಆದರೆ ನನ್ನ ಬಿಸಿ ರಕ್ತ ಅದನ್ನು ಗಣಿಸದೆ ಹೋಗಿರಬೇಕು.

ನಾನು ಎಂ.ಎ. ಮಾಡುವ ವಿಷಯವಾಗಿ ನನ್ನ ತಂದೆಗೆ ಅದೆಷ್ಟು ಹಿಗ್ಗು, ಅದೆಷ್ಟು ಸಂಭ್ರಮ ! ತಾವು ಯಾರಿಗಾದರೂ ಇಂಗ್ಲಿಷಿನಲ್ಲಿ ಪತ್ರಗಳನ್ನು ಬರೆದರೆ "ಈ ಸಾಹೇಬ್ರು ಎಂ.ಎ. ಮಾಡ್ತಾ ಇದಾರಪ್ಪ ! ಇವರಿಗೆ ಒಂದು ಸಾರಿ ತೋರಿಸಿ ಬಿಡೋಣ" ಎಂದು ನನ್ನನ್ನು ಕರೆದು ಆ ಪತ್ರಗಳನ್ನು ತೋರಿಸುತ್ತಿದ್ದರು. ನನ್ನ ಅಣ್ಣಯ್ಯನ ಬರವಣಿಗೆ ಯನ್ನು ವಿಮರ್ಶಿಸುವ ಯೋಗ್ಯತೆ, ಉದ್ಧಟತನ ನನಗೆಂದಿಗಾದರೂ ಬರಬಹುದೆ ? ಸುಮ್ಮನೆ ಅವರ ಸಮಾಧಾನಕ್ಕಾಗಿ ಕಣ್ಣಾಡಿಸುತ್ತಿದ್ದೆ. ಅಣ್ಣಯ್ಯನ ನಿರಹಂಕಾರ, ಸರಳ ತನ ಮನಸ್ಸು ತುಂಬುತ್ತಿದ್ದವು. ನನ್ನ ಸ್ನಾತಕೋತ್ತರ ವ್ಯಾಸಂಗ ಯಶಸ್ವಿಯಾಗಿ ಮುಗಿ ದಾಗ ಅಣ್ಣಯ್ಯ ಪಟ್ಟ ಸಂತೋಷ, ಹೆಮ್ಮೆ ಅದೆಷ್ಟು ? ಆ ಸನ್ನಿವೇಶವನ್ನು ನೆನೆಸಿ ಕೊಂಡರೆ ನನ್ನ ಕಣ್ಣು ಒದ್ದೆಯಾಗುತ್ತದೆ.

ಈ ಸಂದರ್ಭದಲ್ಲಿ ನನ್ನ ತಂದೆಯ ಹೃದಯವೈಶಾಲ್ಯವನ್ನು ಬಿಂಬಿಸುವ ಘಟನೆ ಯೊಂದನ್ನು ಹೇಳಬೇಕು. ನಾನು ಅಂತಿಮ ಬಿ.ಎ. ಓದುವಾಗ ನಮ್ಮ ಕಾಲೇಜಿನ ಅಧ್ಯಾಪಕ ವರ್ಗದಲ್ಲಿ ಅಸಾಧ್ಯ ಏರುಪೇರು ಉಂಟಾಯಿತು. ಸೊಗಸಾಗಿ ಪಾಠಮಾಡಿ ಸಾಹಿತ್ಯದಲ್ಲಿ ನನಗೆ ಅಭಿರುಚಿಯನ್ನೂ, ಆಸಕ್ತಿಯನ್ನೂ ಹುಟ್ಟಿಸಿದ ನನ್ನ ನೆಚ್ಚಿನ ಗುರು ಗಳೆಲ್ಲ ಬೇರೆಡೆಗೆ ವರ್ಗವಾದರು. ನಮಗೆ ಪಾಠ ಮಾಡಲು ಉಳಿದುಕೊಂಡವರು ಪಾಂಡಿತ್ಯವಾಗಲೀ, ಪ್ರತಿಭೆಯಾಗಲೀ ಯತ್ಕಿಂಚಿತ್ತೂ ಇಲ್ಲದವರು. ನನಗೆ ಇದು ಸಂಕ ಟದ ಮಾತಾಯಿತು. ನನ್ನ ತಂದೆಯಲ್ಲಿ ಗಲಾಟೆ ಮಾಡಿದೆ. "ಈ ಕಾಲೇಜು ನನಗೆ ಬೇಡ. ಹಾಸ್ಟೆಲಿನಲ್ಲಿ ಇದ್ದಾದರೂ ನಾನು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಓದುತ್ತೇನೆ., ನನ್ನನ್ನು ಅಲ್ಲಿಗೆ ಸೇರಿಸಿ." "ನನ್ನ ಮಗಳು ಬಿ.ಎ.ಲಿ ರ್‍ಯಾಂಕ್ ಬರಬೇಕು. ಅವಳು ಎಂ.ಎ. ಮಾಡಬೇಕು. ನಾವು ಅವಳು ಹೇಳಿದ ಹಾಗೇ ಕೇಳೋಣ." ನನ್ನ ಅಮ್ಮನೂ ದನಿಗೂಡಿಸಿದಳು. ಅಣ್ಣಯ್ಯ "ಅಸ್ತು" ಅಂದರು. ತಾವಿದ್ದ ಊರಿನಲ್ಲಿಯೇ ಕಾಲೇಜಿ ದ್ದರೂ, ಮಗಳ ಆಸೆ ಪೂರೈಸಲು ಅಣ್ಣಯ್ಯ ಬೇರೊಂದು ಊರಿನಲ್ಲಿ ಹಾಸ್ಟೆಲಿಗಾಗಿ ಕೂಡ ಖರ್ಚು ಮಾಡಿದರು. ಅವರಿಗಿದ್ದ ಹಣ-ಕಾಸಿನ ಮಿತಿಯಲ್ಲಿ ಈ ಹೊಸ ಖರ್ಚು ಅವರಿಗೆ ಎಷ್ಟೊಂದು ತಾಪತ್ರಯವನ್ನು ತಂದಿರಬಹುದೆಂದು ಆಗ ನಾನು ಯೋಚಿಸಲೇ ಇಲ್ಲ. "ನನಗೆಷ್ಟಾದರೂ ಕಷ್ಟವಾಗಲಿ ; ಮಗಳು ಮುಂದೆ ಬರಲಿ." ಅಣ್ಣಯ್ಯನ ಅಂತ ರಾಳದ ಆಸೆ ಇದು. ಎಷ್ಟು ದೊಡ್ಡದು ಅವರ ಹೃದಯ !

ಉನ್ನತ ಧ್ಯೇಯಗಳ ವಿಷಯವಾಗಿ ಅಣ್ಣಯ್ಯ ಎಷ್ಟು ಆದರ್ಶಪ್ರಾಯರೋ ಕೆಲವು ಸಣ್ಣಪುಟ್ಟ ಸಾಂಸಾರಿಕ ಸಂಗತಿಗಳಲ್ಲಿ ಅವರು ಅಷ್ಟೇ ಕಠಿಣರು. ನನ್ನ ಮದುವೆಗೆ ಮುನ್ನ ನಮ್ಮ ಮನೆಯಲ್ಲಿ ಅಣ್ಣಯ್ಯನದು ಒಂದು ಸುಗ್ರೀವಾಜ್ಞೆ ಜಾರಿಯಲ್ಲಿತ್ತು. ಹೊರಗಡೆ ಎಲ್ಲಿಯಾದರೂ ಹೋಗಿರಲಿ, ಕತ್ತಲೆಯಾಗುವುದರೊಳಗೆ ನಾನು ಮನೆಯೊಳಗೆ ಇದ್ದುಬಿಡಬೇಕು. "ನೀನು ಒಳ್ಳೆಯವಳೇ. ಆದರೆ ಹೊರಗಡೆ ಕೆಟ್ಟಜನರು ಇರುತ್ತಾರೆ" ಅನ್ನುತ್ತಿದ್ದರು. ಆಕಾಶವಾಣಿಯಲ್ಲಿದ್ದಾಗ ಒಂದು ಸಾರಿ ನನಗೆ ಜನರಲ್ ಡ್ಯೂಟಿ ಇತ್ತು. ಆಫೀಸಿನ ಕೆಲಸವೇನೋ ಸಂಜೆ ಐದು ಗಂಟೆಗೇ ಮುಗಿಯಿತು. ಆದರೆ ನನ್ನ ಗೆಳತಿಯರಾದ ಗೀತಾ ಮತ್ತು ಸುನಂದ ಕೂಡಲೇ ಮನೆಗೆ ಹೋಗಲು ಬಿಡಲಿಲ್ಲ. "ಅದೇನು 'ಮನೆ ಮನೆ' ಅಂತ ಓಡಿಹೋಗ್ತೀ ? ಇವತ್ತೊಂದು ದಿನವಾದ್ರೂ ಸ್ವಲ್ಪ ಆರಾಮವಾಗಿ ಕೂತು ಕಾಫಿ ಕುಡ್ಕೊಂಡು ಹೋಗೋಣ ಬಾರೇ" ಎಂದು ಹತ್ತಿರದ ಹೊಟೇಲಿಗೆ ಕರೆದುಕೊಂಡು ಹೋದರು. ಈ ಆತ್ಮೀಯ ಗೆಳತಿಯರ ಜತೆ ಇದ್ದರೆ ನನಗೆ ಗಂಟೆಗಳು ನಿಮಿಷಗಳಾಗಿ ಭಾಸವಾಗುತ್ತಿತ್ತು. ಅಂದೂ ಹಾಗೆಯೇ. ಪರಮಾನಂದದಿಂದ ಮಾತು–ಕತೆಗಳನ್ನಾಡುತ್ತಾ, ಪುಷ್ಕಳವಾಗಿ ತಿಂಡಿ–ಕಾಫಿ ಸೇವಿಸುತ್ತಾ ಹೊತ್ತು ಕಳೆದೆವು. ನಂತರ ಸಾವಕಾಶವಾಗಿ ಗಡಿಯಾರ ನೋಡಿಕೊಂಡರೆ ಆಗಲೇ ಆರೂವರೆ. ಚಳಿಗಾಲವಾದ್ದರಿಂದ ಕತ್ತಲೆ ಬೇರೆ ತೆರೆ ತೆರೆಯಾಗಿ ಕವಿಯುತ್ತ ಬಂದಿತ್ತು. ಅಣ್ಣಯ್ಯನ ಉಗ್ರ ಸ್ವರೂಪವನ್ನು ನೆನೆದು ನನ್ನ ಗುಂಡಿಗೆ ಹಾರಿತು. ಗೆಳತಿಯರನ್ನು ಬೇಗ ಬೇಗನೆ ಬೀಳ್ಕೊಟ್ಟು ಮನೆಯತ್ತ ದಾಪುಗಾಲು ಹಾಕಿದೆ. ಆಕಾಶವಾಣಿಯಿಂದ ನಮ್ಮ ಮನೆಗೆ ಐದು ನಿಮಿಷದ ಹಾದಿ. ಸರಸರನೆ ನಡೆಯುತ್ತಿದ್ದಂತೆ ಮುಂದಿನ ಬಯಲು ಕಾಲುದಾರಿಯಲ್ಲಿ ವೇಗವಾಗಿ ಧಾವಿಸಿಬರುತ್ತಿದ್ದ ಅಣ್ಣಯ್ಯನ ರೌದ್ರಸ್ವರೂಪ ಕಂಡಿತು. ಉಟ್ಟಬಟ್ಟೆಯಲ್ಲಿ ನನ್ನ ಹುಡುಕಿಕೊಂಡು ಹೊರಟಿದ್ದಾರೆ, ಅಣ್ಣಯ್ಯ ! ದಟ್ಟಿಪಂಚೆ, ಬನಿಯನ್ನು ಅಷ್ಟೇ ! ಸಾಲದ್ದಕ್ಕೆ ಚಪ್ಪಲಿಯೂ ಇಲ್ಲ ; ಬರಿಗಾಲು ! ಅಣ್ಣಯ್ಯನ ಬಿರು ನಡಿಗೆಯನ್ನು, ಬಿರುಸು ಮುಖಭಾವವನ್ನು ಕಂಡು ನಾನು ತಲ್ಲಣಿಸಿ ಹೋದೆ. ಆದರೆ ನನ್ನ ಮುಖವನ್ನು ಕಂಡವರೇ ಅಣ್ಣಯ್ಯ ಏನೂ ಮಾತನಾಡದೆ, ಸರಕ್ಕನೆ ನನ್ನೆಡೆ ಬೆನ್ನು ತಿರುಗಿಸಿ, ಸರಸರನೆ ಮನೆಯ ಕಡೆಗೆ ಹಿಂತಿರುಗಿಬಿಟ್ಟರು. ನಾನು ಮನೆ ತಲುಪಿ, ಬಹು ಮೆಲ್ಲಗೆ ವೆರಾಂಡದಲ್ಲಿ ಚಪ್ಪಲಿ ಕಳಚಿ, ಮನೆಯೊಳಗೆ ಪ್ರವೇಶಿಸುವ ವೇಳೆಗೆ ಸವಾರಿ ತಮ್ಮ ಕೋಣೆಯನ್ನು ಸೇರಿ ಬಾಗಿಲು ಜಡಿದುಕೊಂಡಾಗಿತ್ತು. ನಾನು ಸದ್ದಿಲ್ಲದೆ ನನ್ನ ರೂಮಿನಲ್ಲಿ ಅಡಗಿಕೊಂಡೆ. ಅಣ್ಣಯ್ಯ ಆ ದಿನ ನನ್ನನ್ನೇನೂ ಬೈಯ್ಯಲಿಲ್ಲ. ಆದರೆ ನನಗೆ ದುಃಖವಾದ ಸಂಗತಿಯೆಂದರೆ ಸ್ವಲ್ಪ ಹೊತ್ತಾದ ಮೇಲೆ ಹಿತ್ತಲಕಡೆ ಅಣ್ಣಯ್ಯ ಮುಳ್ಳು ಚುಚ್ಚಿ ಚುಚ್ಚಿ ರಕ್ತವೊಸರುತ್ತಿದ್ದ ಹಿಮ್ಮಡಿಗಳನ್ನು ತಣ್ಣೀರಿನಿಂದ ತೊಳೆದುಕೊಳ್ಳುತ್ತಿದ್ದರು.

ನಾವು ಮೈಸೂರಿನ ಒಂಟಿಕೊಪ್ಪಲಿನಲ್ಲಿ ಇದ್ದಾಗ ನಡೆದ ಇನ್ನೊಂದು ಘಟನೆ. ಒಂದು ಸಂಜೆ ಸುಮಾರು ಏಳೂವರೆ ಗಂಟೆಯ ಸಮಯ. ಅಣ್ಣಯ್ಯ ಮನೆಯ

ಮುಂದಿದ್ದ ವಿಶಾಲ ಅಂಗಳದಲ್ಲಿ ಏನೋ ಯೋಚಿಸುತ್ತಾ ಶತಪಥ ಹಾಕುತ್ತಿದ್ದರು. ನಾನು ಆ ಸಂಜೆಯ ಸೊಬಗನ್ನು, ಬೀಸುತ್ತಿದ್ದ ತಂಗಾಳಿಯ ಸುಖವನ್ನು ಆಸ್ವಾದಿಸುತ್ತಾ ಸುಮ್ಮನೆ ಮೆಟ್ಟಿಲ ಮೇಲೆ ಕುಳಿತಿದ್ದೆ. ಅಣ್ಣಯ್ಯನದೂ ಮಾತಿಲ್ಲ; ನನ್ನದೂ ಮಾತಿಲ್ಲ. ನಮ್ಮ ಮನೆಯಲ್ಲಿ ಅನಗತ್ಯವಾದ ಮಾತುಕತೆಗೆ ಎಂದೂ ಅವಕಾಶವಿರಲಿಲ್ಲ. ಮೇಲಾಗಿ ಮೌನದ ರುಚಿಯನ್ನು ನಮಗೆ ಕಲಿಸಿದವರು (ಅವರ ನಡೆವಳಿಕೆಗಳಿಂದ) ನಮ್ಮ ಅಣ್ಣಯ್ಯನೇ.

ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದ ಅಣ್ಣಯ್ಯ ಸರಸರನೆ ಮನೆಯೊಳಗೆ ಹೋದರು. ಅಂಗಿ–ಚಪ್ಪಲಿ ಧರಿಸಿ, ವಾಕಿಂಗ್‌ಸ್ಟಿಕ್ ಕೈಲಿ ಹಿಡಿದು ಬಹು ವೇಗವಾಗಿ ನಮ್ಮ ಮನೆಗೆ ಸ್ವಲ್ಪ ದೂರದಲ್ಲಿದ್ದ ಬಸ್‌ಸ್ಟಾಪ್ ಕಡೆಗೆ ಹೋದರು. ಅಣ್ಣಯ್ಯನ ನಡೆವಳಿಕೆ ನನಗೆ ಆಶ್ಚರ್ಯವುಂಟು ಮಾಡಿತಾದರೂ, ಅದಕ್ಕೆ ಏನೋ ಕಾರಣವಿದ್ದಿರಬೇಕೆಂದು ಸುಮ್ಮನಾದೆ. ಸುಮಾರು ಇಪ್ಪತ್ತು–ಇಪ್ಪತ್ತೈದು ನಿಮಿಷಗಳ ನಂತರ ಹಿಂತಿರುಗಿದರು. ಮೆಟ್ಟಿಲಮೇಲೆ ನನ್ನ ಪಕ್ಕ ಕುಳಿತು ನಡೆದದ್ದನ್ನು ಸಾದ್ಯಂತವಾಗಿ ವಿವರಿಸಿದರು :

"ಅಂಗಳದಲ್ಲಿ ಓಡಾಡುತ್ತಿದ್ದವನು ಒಂದು ವಿಷಯ ಗಮನಿಸಿದೆ. ರಸ್ತೆಯಲ್ಲಿ ಒಬ್ಬಳು ಪ್ರಾಯದ ಹೆಣ್ಣು ಮಗಳು ಹೋಗುತ್ತಿದ್ದಳು. ಕತ್ತಲಾದ್ದರಿಂದ ಹೆದರಿ ಬೇಗ ಬೇಗ ಹೆಜ್ಜೆ ಹಾಕುತ್ತಿದ್ದಳು. ನಾಲ್ಕಾರು ಪೋಕರಿಗಳು ಅವಳ ಹಿಂದೆ ನಡೆಯುತ್ತಾ ಅವಳನ್ನು ಚುಡಾಯಿಸುತ್ತಿದ್ದರು. ಇದರಿಂದ ಆ ಮಗುವು ಮತ್ತಷ್ಟು ಗಾಬರಿಯಾದಳು. ಬಸ್‌ಸ್ಟಾಪ್ ಕಡೆಗೆ ಓಟದ ನಡಿಗೆಯಲ್ಲಿ ನಡೆದಳು. ಆ ಪೋಕರಿಗಳೂ ಬಿಡದೆ ಅವಳನ್ನು ಹಿಂಬಾಲಿಸಿದರು. ನಾನು ಕೂಡಲೇ ನನ್ನ ವಾಕಿಂಗ್‌ಸ್ಟಿಕ್ ತೆಗೆದುಕೊಂಡು ವೇಗವಾಗಿ ಹೋಗಿ ಆ ಹೆಣ್ಣುಮಗುವಿಗೂ ಪೋಕರಿಗಳಿಗೂ ಮಧ್ಯೆ ನಡೆಯತೊಡಗಿದೆ. ಅವರುಗಳ ಸೊಕ್ಕು ಅಡಗಿಹೋಯಿತು. ಆದರೂ ಬಸ್‌ಸ್ಟಾಪ್‌ನಲ್ಲಾದರೂ ಅವಳನ್ನು ಗೋಳು ಹುಯ್ದುಕೊಳ್ಳಲು ಅವಕಾಶ ಸಿಗಬಹುದೆಂದು ಅವಳ ಎದುರಿಗೇ ನಿಂತರು. ಆದರೆ ನಾನೂ ಅದಕ್ಕೆ ಅವಕಾಶ ಕೊಡಲಿಲ್ಲ. ನಾನೂ ಬಸ್‌ಗಾಗಿ ಕಾಯುವವನಂತೆ ಆ ಮಗುವಿನ ಪಕ್ಕದಲ್ಲೇ ನಿಂತೆ. ಆ ಪೋಕರಿಗಳ ಬಾಯಿ ಪೂರ್ತಿ ಕಟ್ಟಿಹೋಯಿತು. ಸ್ವಲ್ಪ ಹೊತ್ತಾದ ಮೇಲೆ ಆ ಹೆಣ್ಣುಮಗು ಹೋಗಬೇಕಾಗಿದ್ದ ಬಸ್ ಬಂತು. ಅವಳು ಹತ್ತಿಕೊಂಡು ಹೊರಟುಹೋದ ಮೇಲೆ ನಾನು ನಿರಾಳವಾಗಿ ಮನೆಗೆ ಬಂದೆ."

ನಾನು ಆಕಾಶವಾಣಿಯ ಕೆಲಸಕ್ಕೆ ಆಗತಾನೇ ರಾಜೀನಾಮೆ ಕೊಟ್ಟಿದ್ದೆ. ಮನೆಯಲ್ಲಿ ನನ್ನ ಮದುವೆಯ ಪ್ರಯತ್ನಗಳು ಭರದಿಂದ ಸಾಗಿದ್ದವು. ಅನೇಕ ಸಂಬಂಧಗಳು ಬಂದರೂ, ಯಾವುದೂ ಸರಿ ಬಂದಿರಲಿಲ್ಲ. ನನ್ನ ತಂದೆಗೆ ನನ್ನ ಮದುವೆಯ ಯೋಚನೆಯೇ ತುಂಬಿ ಹೋಗಿತ್ತೆಂದೂ ಕಾಣುತ್ತದೆ. ಒಂದು ಮಧ್ಯಾಹ್ನ ಅವರು ನನ್ನನ್ನು ಹತ್ತಿರಕ್ಕೆ ಕರೆದು. "ಮರೀ, ಒಂದು ವಿಷಯ" ಅಂದರು. "ಏನಣ್ಣಯ್ಯ?" ಅಂದೆ "ನಿನ್ನ ಬಾಳ ಸಂಗಾತಿಯ ಆಯ್ಕೆಗೆ ನಾನು ನಿನಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿ

ದ್ದೇನೆ." ಅಂದರು. ನನಗೆ ವಿಷಯ ಸರಿಯಾಗಿ ಅರ್ಥವಾಗಲಿಲ್ಲ. ಅಣ್ಣಯ್ಯ ವಿವರಿಸಿದರು "ಅಲ್ಲ ಮರೀ, ಯುಗ ಯುಗಗಳ ಹಿಂದೆಯೇ ಸಾವಿತ್ರಿಯ ಅಪ್ಪ ತನ್ನ ಮಗಳಿಗೆ ಈ ಸ್ವಾತಂತ್ರ್ಯವನ್ನು ಕೊಟ್ಟಿದ್ದ. ತಂದೆಯ ಅಪ್ಪಣೆಯಂತೆ ಅವಳು ರಥ ಏರಿ ಊರೂರು ಸುತ್ತಿ ಸತ್ಯವಾನನ್ನು ಹುಡುಕಿಕೊಂಡಳು. ನಿನಗೂ ಈಗ ಹಾಗೆಯೇ. ನಿನ್ನ ಗಂಡನನ್ನು ನೀನು ಹುಡುಕಿಕೊಳ್ಳಲು ಪೂರ್ತಿ ಸ್ವಾತಂತ್ರ್ಯವುಂಟು. ನಿನ್ನಲ್ಲಿ ನನಗೆ ನಂಬಿಕೆಯಿದೆ. ನೀನು ಸಂಗಾತಿಯನ್ನು ಆರಿಸಿಕೊಳ್ಳುವ ವಿಷಯವಾಗಿ ನನ್ನ ಅಭ್ಯಂತರ ಏನೇನೂ ಇಲ್ಲ." ನಮ್ಮ ಸನಾತನ ಹಿಂದೂ ಕುಟುಂಬ ಪದ್ಧತಿಗಳ ಹಿನ್ನೆಲೆಯಲ್ಲಿ ಅಣ್ಣಯ್ಯನ ಈ ಆದರ್ಶ ಅತ್ಯದ್ಭುತವಾಗಿತ್ತು. ಆದರೆ ಈ ಮಹದಾದರ್ಶವನ್ನು ಅನುಷ್ಠಾನಕ್ಕೆ ತರುವಷ್ಟು ಸಾಹಸಿಯೂ, ಉತ್ಸಾಹಿಯೂ ನಾನಾಗಿರದಿದ್ದುದರಿಂದ ಆ ವಿಷಯವನ್ನು ಈ ಕಿವಿಯಲ್ಲಿ ಕೇಳಿ ಆ ಕಿವಿಯಿಂದ ಹೊರಗೆ ತೂರಿಬಿಟ್ಟೆ.

ನನ್ನ ಮದುವೆಯ ವಿಷಯದಲ್ಲಿ ಅಣ್ಣಯ್ಯ ಅತ್ಯಂತ ಉದಾತ್ತವಾಗಿ ನಡೆದುಕೊಂಡಿದ್ದಾರೆ. ಬಹಳಷ್ಟು ಸಂಬಂಧಗಳನ್ನು ನಾನಾ ಕಾರಣಗಳಿಗಾಗಿ ನಾನು ತಿರಸ್ಕರಿಸಿದೆ. ಯಾವುದೇ ಸಂದರ್ಭದಲ್ಲಿಯೂ ಅಣ್ಣಯ್ಯ ನನ್ನನ್ನು ಒತ್ತಾಯ ಮಾಡಲಿಲ್ಲ. "ಹುಡುಗ ನಿನಗೆ ಒಪ್ಪಿಗೆಯೆ ?" ಕೇಳುತ್ತಿದ್ದರು. ನಾನು "ಇಲ್ಲ" ಎಂದ ಕೂಡಲೇ ವಿಷಯ ಮುಗಿದು ಹೋಗುತ್ತಿತ್ತು. "ಯಾಕೆ ? ಏನು ?" ಪ್ರಶ್ನೆಗಳಿಂದ ನನ್ನನ್ನು ಕಾಡುತ್ತಿರಲಿಲ್ಲ. "ಮದುವೆ ಅವಳ ಸ್ವಂತ ವಿಷಯ, ಬಲವಂತ ಮಾಡುವುದು ಅನಾಗರಿಕತನ" ಎನ್ನುತ್ತಿದ್ದರು. ಅಮ್ಮನಂತೂ ಸ್ಥಿತಪ್ರಜ್ಞಳು "ಮದುವೆ ಅನ್ನೋದು ಋಣಾನುಬಂಧ ಅದು ಕೂಡಿ ಬರೋವರೆಗೂ ನಾವೆಷ್ಟು ಅಲವತ್ತು ಕೊಂಡರೂ ಅಷ್ಟೇ" ಅನು ತ್ತಿದ್ದಳಾಕೆ. ಏನಾದರಾಗಲೀ, ತಾಯಿ ತಂದೆಯರ ಒಳ್ಳೆಯತನ ಮಕ್ಕಳಿಗೆ ಶ್ರೀ ರಕ್ಷೆ. ನಾನಿಂದು ಸಂಸಾರದಲ್ಲಿ ಸಮಾಧಾನವಾಗಿ ನೆಲೆಯಾಗಿದ್ದೇನೆ.

ನನ್ನ ತಂದೆ ನನ್ನ ಬರವಣಿಗೆಯ ಕಟುವಿಮರ್ಶಕರೂ ಹೌದು. ನಾನು ಅವರ ಮಗಳೆಂದು ನಾನು ಬರೆದಿದ್ದನ್ನೆಲ್ಲ ಅವರು ಮೆಚ್ಚಿಕೊಳ್ಳುವವರೂ ಅಲ್ಲ. ೧೯೫೩ರಲ್ಲಿ ಬರವಣಿಗೆಯನ್ನು ಆರಂಭಿಸಿದ ಹೊಸತರಲ್ಲಿ ನಾನೊಂದು ಕತೆಯನ್ನು ಬರೆದಿದ್ದೆ. ಅದನ್ನು ಅಣ್ಣಯ್ಯನಿಗೆ ಓದಿ ಹೇಳಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ನನಗೆ ಆಸೆ. "ಆಯಿತು ಓದಿ ಹೇಳು" ಅಂದರು. ಶ್ರದ್ಧೆಯಿಂದ ಎಲೆಯಡಿಕೆ ಮೆಲ್ಲುತ್ತಿದ್ದರು ಅಣ್ಣಯ್ಯ. ನಾನು ಕತೆಯನ್ನು ಓದಿಹೇಳಿದೆ. ಅಣ್ಣಯ್ಯನಿಗೆ ಅದು ಸ್ವಲ್ಪವೂ ಹಿಡಿಸಲಿಲ್ಲ. ಮೊದಲಿನಿಂದಲೂ ಹುಸಿನಗೆಯಿಂದ ಆಲಿಸುತ್ತಿದ್ದವರು ಕತೆ ಮುಗಿದ ಮೇಲೆ "ನಾವು ಕತೆ ಹೇಳುವ ರೀತಿ ಸರಾಗವಾಗಿರಬೇಕು; ಸುಲಭವಾಗಿ ಓದಿಸಿಕೊಂಡು ಹೋಗಬೇಕು. ತಿಣುಕಿ ತಿಣುಕಿ ಹೇಳುವುದು ಕತೆಯಾಗುವುದಿಲ್ಲ." ಎಂದುಬಿಟ್ಟರು. ಅಣ್ಣಯ್ಯನ ಸತ್ಯಸಂಧತೆಯಲ್ಲಿ ನನಗೆ ಪೂರ್ಣವಿಶ್ವಾಸ. ಹಾಗಾಗಿ ನನ್ನ ಕತೆಯ ಇತಿಮಿತಿ ನನಗೆ ಅರ್ಥವಾಗಿ ಹೋಯಿತು.

ಹಾಗೆಂದು ನನ್ನ ಬರವಣಿಗೆಯಲ್ಲಿ ಅವರಿಗೆ ಹಿಡಿಸುವ ಗುಣಗಳು ಕಂಡುಬಂದಲ್ಲಿ

ಕೂಡಲೇ ನನಗೆ ತಿಳಿಸುತ್ತಾರೆ. ಈಗ ಕೆಲವು ತಿಂಗಳುಗಳ ಹಿಂದೆ 'ಸುಧಾ' ವಾರಪತ್ರಿಕೆಯಲ್ಲಿ 'ನಾನು ಹುಡುಗನಾದದ್ದು' ಎನ್ನುವ ಪ್ರಬಂಧ ಪ್ರಕಟವಾಗಿತ್ತು. 'ಸುಧಾ' ಬರುವುದು ಗುರುವಾರ. ಶುಕ್ರವಾರ ಮಧ್ಯಾಹ್ನ ಅಣ್ಣಯ್ಯನಿಂದ ನನಗೆ ದೊಡ್ಡದೊಂದು ಪತ್ರ! ನನ್ನ ಪ್ರಬಂಧವನ್ನು ಬಹುವಾಗಿ ಶ್ಲಾಘಿಸಿದ್ದರು. "ನೀನು ಎತ್ತರಕ್ಕೇರುವುದನ್ನು ಕಾಣುವ ಆಸೆ ಇರಿಸಿಕೊಂಡಿದ್ದೇನೆ." ಎಂದು ಬರೆದಿದ್ದರು ಅಣ್ಣಯ್ಯನ ಈ ಪ್ರಶಂಸೆಯಿಂದ ನನ್ನ ಹೃದಯ ಹಿಗ್ಗಿ ಹೋಯಿತು. ಅಣ್ಣಯ್ಯ ಏನನ್ನಾದರೂ ಮನಸಾರೆ ಮೆಚ್ಚಿಕೊಂಡರೆಂದರೆ ಮುಗಿಯಿತು. ಅದಕ್ಕೆ ಬೇರಾವ ಪ್ರಶಸ್ತಿಯೂ ಬೇಡ.

ನಾನು ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರ ಜೀವನ ಚರಿತ್ರೆಯನ್ನು ಬರೆದ ಸಂದರ್ಭದಲ್ಲಿ ಅದು ಪೂರ್ತಿಯಾದ ಮೇಲೆ, ಹಸ್ತಪ್ರತಿಯನ್ನು ತೆಗೆದುಕೊಂಡು ಮೈಸೂರಿಗೆ ಹೋಗಿ ಅಣ್ಣಯ್ಯನ ಪರಾಮರ್ಶೆಗಾಗಿ ಒಪ್ಪಿಸಿದೆ. ನಾನವರಿಗೆ ಅದನ್ನು ಕೊಟ್ಟಾಗ ರಾತ್ರಿ ಒಂಭತ್ತು ಗಂಟೆ. "ಸರಿಯಮ್ಮ ಓದಿನೋಡುತ್ತೇನೆ" ಎಂದು ಹಸ್ತಪ್ರತಿಯನ್ನು ತೆಗೆದುಕೊಂಡು ತಮ್ಮ ಕೋಣೆಗೆ ಹೋದರು. ನಾವು ಅಣ್ಣಯ್ಯನ ಮಕ್ಕಳು ಅವರೆಲ್ಲರ ಕುಟುಂಬ ವರ್ಗ ಹರಟೆ–ವಿನೋದಗಳಲ್ಲಿ ಮಗ್ನರಾದೆವು. ನನ್ನ ಅಣ್ಣನಿಗಂತೂ ನಾವೆಲ್ಲರೂ ಒಟ್ಟು ಸೇರಿದಾಗ ಪರಮಾನಂದ. ಅಕ್ಷರಶಃ ಕಣ್ಣು–ಬಾಯಿ ಬಿಟ್ಟುಕೊಂಡು ನಮ್ಮೆಲ್ಲರ ಮಾತುಗಳನ್ನು ಆಲಿಸುತ್ತಾನೆ. ನಿದ್ದೆ ಬಂದರೂ ಎದ್ದು ಹೋಗುವುದಿಲ್ಲ. ಮಹಾಸಭೆಯ ನಡುವೆಯೇ ಕಿರುಗೊರಕೆಗಳನ್ನು ಹೊಡೆಯುತ್ತಾನೆ ; ಮತ್ತೆ ಬೆಚ್ಚಿ ಬಿದ್ದೆದ್ದು "ಅ್ಞ, ಏನು ಹೇಳ್ತಾ ಇದ್ದೀ ?" ಮಾತುಕತೆ ಮುಂದುವರಿಸುತ್ತಾನೆ. ಅಣ್ಣನದು ಹೀಗಾಯಿತಲ್ಲ ; ನನ್ನ ಅಕ್ಕನದು ಇನ್ನೂ ಒಂದು ಕೈ ಜಾಸ್ತಿ. ನಮ್ಮೆಲ್ಲರನ್ನು ಕಂಡೊಡನೆ ಪರಮಾನಂದದ ಉದ್ವೇಗ ಬುಡದಿಂದ ಒತ್ತಿಕೊಂಡು ಬರುತ್ತದೆ ಅವಳಿಗೆ ! ಪಾಪ, ಆ ಒತ್ತಡವನ್ನು ತಾಳಿಕೊಳ್ಳಲಾಗದೆ "ಒಂದು ನಿಮಿಷ ಬಂದೆ !" ಎಂದು ಹಿತ್ತಲಿಗೆ ಓಡುತ್ತಾಳೆ.

ಅಂದು ನಾವೆಲ್ಲರೂ ಹರಟೆ ಮುಗಿಸಿ ಮಲಗಲು ಎದ್ದಾಗ ರಾತ್ರಿ ಹನ್ನೊಂದೂವರೆ. ಮೆಟ್ಟಿಲು ಹತ್ತುತ್ತಿದ್ದವಳು ಅಣ್ಣಯ್ಯನ ಕೋಣೆಯತ್ತ ಇಣುಕು ಹಾಕಿದೆ. ಕೋಣೆಯಲ್ಲಿ ದೀಪ ಉರಿಯುತ್ತಿತ್ತು. ಮೇಜಿನ ಮೇಲೆ ಹಸ್ತಪ್ರತಿಯನ್ನು ಹರಡಿಕೊಂಡು ನೆಟ್ಟಗೆ ಕುಳಿತು ಅಣ್ಣಯ್ಯ ಓದುವುದರಲ್ಲಿ ತಲ್ಲೀನರಾಗಿದ್ದರು. ಕಾಲಿಗೆ ಕಾಲುಚೀಲ, ಮೈತುಂಬ ಸ್ವೆಟರ್, ತಲೆಯನ್ನು ಬೆಚ್ಚಗೆ ಅಲಂಕರಿಸಿದ್ದ ಉಣ್ಣೆಯ ಮಫ್ಲರು, ಇವುಗಳನ್ನು ಕಂಡರೆ ಇನ್ನೂ ಬಹಳ ಹೊತ್ತು ಓದಲು ಅಣ್ಣಯ್ಯ ಸರ್ವ ಸನ್ನದ್ಧರಾದಂತೆ ಕಂಡಿತು. ಮತ್ತೆ ಮರುದಿನ ಬೆಳಿಗ್ಗೆ ಆರುಗಂಟೆಗೆ ಮಹಡಿಯಿಂದಿಳಿಯುತ್ತ ಅಣ್ಣಯ್ಯನ ಕೋಣೆಯತ್ತ ದೃಷ್ಟಿ ಹಾಯಿಸಿದರೆ ದೀಪ ಉರಿಯುತ್ತಲೇ ಇದೆ! ಮೇಜಿನ ಮುಂದೆ ಅದೇ ರೀತಿ ಕಂಗೊಳಿಸುತ್ತಿದೆ ಅಣ್ಣಯ್ಯನ ಧೀರಗಂಭೀರ ಮೂರ್ತಿ ! ಅವರು ಯಾವಾಗ ನಿದ್ರಿಸಿದರೋ ಎಷ್ಟು ಹೊತ್ತು ನಿದ್ರಿಸಿದರೋ ತಿಳಿಯದು.

ಹಜಾರದಲ್ಲಿ ನಾವೆಲ್ಲ ತಿಂಡಿ ತಿನ್ನುತ್ತಾ ಕುಳಿತಾಗ ಅಣ್ಣಯ್ಯ ನನ್ನ ಹತ್ತಿರ

ಬಂದರು. ಪ್ರೀತಿಯಿಂದ ಹಲ್ಲುಮುಡಿ ಕಚ್ಚುತ್ತಾ ನನ್ನ ಭುಜಗಳನ್ನು ಸವರಿದರು. "ಸೊಗಸಾಗಿ ಬರೆದಿದ್ದೀ ! ಎಷ್ಟೊಂದು ಸ್ವಾರಸ್ಯಕರ ಪ್ರಸಂಗಗಳು ! ವೆಂಕಟಗಿರಿಯಪ್ಪ ನವರ ವ್ಯಕ್ತಿತ್ವದ ವರ್ಣನೆ ಓದಿ ನನಗೆ ಕಣ್ಣೀರು ಬಂತು. ಹಾಗೆಯೇ ಅನೇಕ ಹಾಸ್ಯ ಪ್ರಸಂಗಗಳನ್ನು ಓದಿ ಮನಸಾರೆ ನಕ್ಕೆ. ದೊರೆಸ್ವಾಮಿ ಅಯ್ಯಂಗಾರ್ಯರಂತಹ ಒಬ್ಬ ಗಣ್ಯ ವ್ಯಕ್ತಿಯ ಜೀವನ ಚರಿತ್ರೆಯನ್ನು ನೀನು ಬರೆದೆಯಲ್ಲ, ನನಗೆ ತುಂಬ ಸಂತೋಷ. ನೋಡ್ತಾ ಇರು, ನಮ್ಮ ಜನ ಇದನ್ನ ಹೇಗೆ ಸ್ವಾಗತಿಸುತ್ತಾರೆ ಅಂತ !" ಅಣ್ಣಯ್ಯನ ಕಣ್ಣುಗಳಲ್ಲಿ ಹೆಮ್ಮೆ ತುಳುಕಿತ್ತು !

ಅಣ್ಣಯ್ಯನ ಈ ಅಭಿಪ್ರಾಯವನ್ನು ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರಿಗೆ ತಿಳಿಸಿದೆ. ಅವರು ಸಂತೋಷವನ್ನು ಪಟ್ಟುಕೊಂಡರು.

ಇತ್ತೀಚಿನ ದಿನಗಳಲ್ಲಿ ಅಣ್ಣಯ್ಯ ನನ್ನ ಬರವಣಿಗೆಯ ಬಗ್ಗೆ ಅಭಿಮಾನವನ್ನೇ ಇರಿಸಿಕೊಂಡ ಹಾಗೆ ಕಾಣುತ್ತದೆ. ನಿನ್ನ ಭಾಷೆ ನನಗೆ ಹಿಡಿಸಿದೆ. ಈ ಶೈಲಿಯನ್ನು ಉಳಿಸಿಕೊ ; ಮತ್ತಷ್ಟು ಸುಧಾರಿಸಿಕೋ. ಯಾವುದೇ ಕಾರಣಕ್ಕೂ ಭಾಷೆಯ ವಿಷಯವಾಗಿ ಹೊಂದಾಣಿಕೆ ಮಾತ್ರ ಮಾಡಿಕೊಳ್ಳಬೇಡ" ಎಂದು ಆಗಾಗ ಹೇಳುತ್ತಾರೆ. ನಮ್ಮ ಮನೆಗೆ ಬಂದಾಗಲೆಲ್ಲ "ಬಾ ಇಲ್ಲಿ. ಇತ್ತೀಚೆಗೆ ಏನು ಬರೆದಿದ್ದೀ ? ಓದಿ ಹೇಳು ಬಾ" ಎಂದು ಕರೆಯುತ್ತಾರೆ. ಕೆಲವು ಸಾರಿ ಓದಿ ಹೇಳಲು ನನಗೆ ಮನಸ್ಸಿರುವುದಿಲ್ಲ. ಅವರ ಕನ್ನಡಕವನ್ನೂ, ನನ್ನ ಲೇಖನಗಳನ್ನೂ ಕೊಟ್ಟು "ನೀವೇ ಓದಿ ಕೊಳ್ಳಿ ಅಣ್ಣಯ್ಯ" ಅಂದರೆ, ಅದಕ್ಕೆ ಅವರು ಒಪ್ಪುವುದಿಲ್ಲ. "ಇಲ್ಲ, ಇಲ್ಲ. ಅದಾಗೋಲ್ಲ. ಬಾ ಇಲ್ಲಿ, ಹತ್ತಿರ ಕೂತ್ಕೋ. ನೀನೇ ಓದಿ ಹೇಳು." ಜೋರುಮಾಡಿ ಹತ್ತಿರ ಕೂರಿಸಿಕೊಂಡು ಓದಿಸುತ್ತಾರೆ. ಉದ್ದಕ್ಕೂ ಹಸನ್ಮುಖರಾಗಿ ಆಲಿಸುತ್ತಾರೆ. ಕೆಲವು ಹಾಸ್ಯದ ಮಾತುಗಳು ಅವರಿಗೆ ವಿಪರೀತ ಹಿಡಿಸುತ್ತವೆ ; ಬಿದ್ದು ಬಿದ್ದು ನಗುತ್ತಾರೆ. ಕಣ್ಣುಗಳಲ್ಲಿ ನೀರು ಕೂಡ ಬಂದುಬಿಡುತ್ತದೆ.

ನಾನು ಲೇಖನವನ್ನು ಪೂರ್ತಿ ಓದಿಯಾದ ಮೇಲೆ ಸ್ವಲ್ಪ ಹೊತ್ತು ಅಣ್ಣಯ್ಯ ಏನೂ ಮಾತನಾಡುವುದಿಲ್ಲ. ಸುಮ್ಮನೆ ನನ್ನ ಭುಜವನ್ನು ಆಪ್ಯಾಯತೆಯಿಂದ ಸವರುತ್ತ ಕುಳಿತು ಬಿಡುತ್ತಾರೆ. ಅಣ್ಣಯ್ಯನ ಕರಸ್ಪರ್ಶ ನನ್ನ ಅಮ್ಮನದರ ಹಾಗೆಯೇ... ಶೀತಲ, ಸುಕೋಮಲ! ಇನ್ನೊಂದು ಆಶ್ಚರ್ಯದ ಮಾತೆಂದರೆ ನಾನು ಇಬ್ಬರು ಬೆಳೆದ ಹೆಣ್ಣು ಮಕ್ಕಳ ತಾಯಿಯಾದರೂ ನನ್ನ ತಂದೆಯ ಪಾಲಿಗೆ ನಾನು ಬಾಲ್ಯದ ಭಾರತಿಯೇ. 'ಮರಿ' ಎನ್ನುವುದು,ಪ್ರೀತಿ ಮತ್ತು ಅಭಿಮಾನದ ಮುಖ ಚಹರೆಗಳನ್ನು ಮಾಡುವುದು, ಮೈದಡವಿ ಮುದ್ದು–ಮಾಡುವುದು ಇವೆಲ್ಲ ಮಾಡುತ್ತಾರೆ. ಎಂಭತ್ತರ ಪಕ್ವ ವಯಸ್ಸಿನಲ್ಲಿಯೂ ಮಗುವಿನಂತಹ ಮುಗ್ಧ ಮನಸ್ಸನ್ನು ಉಳಿಸಿಕೊಂಡಿರುವ ನನ್ನ ತಂದೆಯ ಬಗ್ಗೆ ನನಗೆ ಹೆಮ್ಮೆಯೆನಿಸುತ್ತದೆ.

ಇನ್ನೊಂದು ಮಾತು ಅಣ್ಣಯ್ಯನಿಗೆ ಸಂತೋಷಕ್ಕೂ ಕಣ್ಣೀರು ಬರುತ್ತದೆ; ದುಃಖಕ್ಕೂ ಕಣ್ಣೀರು ಬರುತ್ತದೆ. ಕೆಲವು ಬಾರಿ ಸಂತೋಷ ದುಃಖಗಳ ಭಾವಾವೇಶ

ಒತ್ತಿಕೊಂಡು ಬಂದಾಗ ಅದನ್ನು ನಿಯಂತ್ರಿಸಲು ಮುಖವನ್ನು ಅದೊಂದು ರೀತಿ ಚೂಪಾಗಿ ಮಾಡಿಕೊಳ್ಳುತ್ತಾರೆ. ಅವರ ಇಂತಹ ಮುಖಭಾವ ನಮ್ಮ ಮನೆಯಲ್ಲಿ 'ಅಣ್ಣಯ್ಯನ ಮೂತಿ ಚೂಪು' ಎಂದೇ ಪ್ರಸಿದ್ಧವಾಗಿದೆ. ಸಾಮಾನ್ಯವಾಗಿ ಮಕ್ಕಳು ಅವರ ಕಾಲಿಗೆರಗಿದಾಗ; ಅವರ ಅಂಕಪಟ್ಟಿಗಳನ್ನು, ಬಹುಮಾನಗಳನ್ನು ಕಂಡಾಗ; ಅತಿ ಒಳ್ಳೆಯ ತನ ಮನದಟ್ಟಾದಾಗ; ಹೆರವರ ಸಂಕಷ್ಟಗಳನ್ನು ಕೇಳಿದಾಗ ಅಣ್ಣಯ್ಯನ ಮೂತಿ ಚೂಪುಗಳು ಏರ್ಪಡುತ್ತವೆ.

ನನ್ನ ಅಣ್ಣಯ್ಯ ಹೇಗೆ ಒಬ್ಬ ಅತ್ಯುತ್ತಮ ತಂದೆಯಾಗಿ ನನಗೆ ಕಂಡಿದ್ದಾರೆ ಅನ್ನುವುದನ್ನು ಇದುವರೆಗೂ ಚರ್ಚಿಸಿದ್ದೇನೆ. ಆದರೆ ಅವರು ಅದಷ್ಟೇ ಅಲ್ಲ. ಅವರಿಗೆ ಇನ್ನೊಂದು ಮುಖವೂ ಇದೆ. ಸಮಾಜದಲ್ಲಿ ಅವರಿಗೆ ವಿಶಿಷ್ಟ ಸ್ಥಾನವಿವೆ. ನನ್ನ ತಂದೆ ಒಬ್ಬ ಶ್ರದ್ಧಾವಂತ ಸಾಹಿತಿಯೂ ಹೌದು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು ಸಲ್ಲಿಸಿ ರುವ ಕೊಡುಗೆ ಗಣನೀಯವಾದದ್ದು. ಈ ಮಾತನ್ನು ನಾನು ಅವರ ಮಗಳಾಗಿ ಹೇಳುತ್ತಿಲ್ಲ. ಕನ್ನಡದ ಒಬ್ಬ ಓದುಗಳಾಗಿ ಹೇಳುತ್ತಿದ್ದೇನೆ. ಓದು–ಬರಹಗಳನ್ನು ಬಿಟ್ಟು ಮತ್ತಾವುದೇ ವಿಷಯಕ್ಕೂ ಅವರು ಮಹತ್ವವನ್ನು ಕೊಡಲೇ ಇಲ್ಲ. ಒಬ್ಬ ವ್ಯಕ್ತಿ ಜೀವನದ ಬಹುಭಾಗವನ್ನು ಸಾಹಿತ್ಯ ಸೇವೆಗೆ ಮೀಸಲಾಗಿಡುವುದು ಕಡೆಗಣಿಸುವ ಮಾತಲ್ಲ.

ಕಡೆಯದಾಗಿ ಒಂದು ಮಾತು. ನಮ್ಮ ಅಣ್ಣಯ್ಯ ಬಹಳ ಸುಂದರ ವ್ಯಕ್ತಿ ಎಂದು ಹೇಳಿದ್ದೇನೆ. ಹೌದು: ಅವರದು ಬಹು ಸುಂದರವಾದ, ಬಣ್ಣದಲ್ಲಿ ಕೆಂಪನೆಯ ವ್ಯಕ್ತಿತ್ವ. ಆದರೆ ಸುಂದರವಾದ ಕೆಂಪು ಗುಲಗಂಜಿಗೂ ಒಂದು ಕಪ್ಪು ಮಚ್ಚೆಯಿದೆ. ಹಾಗೆಯೇ ಅಣ್ಣಯ್ಯನಲ್ಲಿಯೂ ಒಂದು ದೌರ್ಬಲ್ಯವಿದೆ. ಮಹಿಳೆಯು ಪುರುಷನಿಗೆ ಸಮಳು ಎಂಬ ಮಾತನ್ನು ಅವರು ಒಪ್ಪುವುದಿಲ್ಲ. ಈ ತಮ್ಮ ದೌರ್ಬಲ್ಯವನ್ನು ಪ್ರಾಮಾಣಿಕ ವಾಗಿ ಒಪ್ಪಿಕೊಂಡುಬಿಡುತ್ತಾರೆ ಬೇರೆ! "ಹೌದು ಮಗಳ ರೇಷ್ಮೆ ಸೀರೆಗಿಂತ ಮಗನ ಹಳೆ ಪಂಚೆಯೇ ಮೇಲು ಅಂತ ಗಾದೆಯೇ ಇದೆಯಲ್ಲ!" ವಾದಿಸುತ್ತಾರೆ. ಆದರೆ ಇಂತಹ ಗಾದೆಗಳನ್ನು ಸೃಷ್ಟಿಸಿದವರು ಅಣ್ಣಯ್ಯನದೇ ಸ್ವಭಾವದ ಕೆಲವು ಪುರುಷ ಪ್ರಧಾನ ವ್ಯವಸ್ಥೆಯ ಪ್ರವಾದಿಗಳು ಎನ್ನುವ ಮಾತನ್ನು ಅವರು ಮನ್ನಿಸುವುದಿಲ್ಲ. ಅಣ್ಣಯ್ಯನ ಈ ನಿಲುವು ನನಗೆ ಒಪ್ಪಿಗೆ ಇಲ್ಲದಿದ್ದರೂ ಅವರ ಉಳಿದೆಲ್ಲ ಅಗಣಿತ ಸದ್ಗುಣಗಳ ಮುಂದೆ ಇದು ಗೌಣ. ಆದ್ದರಿಂದಲೇ ನಾನು ಅವರನ್ನು ಮಿಗಿಲಾಗಿ ಗೌರ ವಿಸುತ್ತೇನೆ; ಪ್ರೀತಿಸುತ್ತೇನೆ. ಈ ವಿಷಯ ಅಣ್ಣಯ್ಯನಿಗೂ ಗೊತ್ತಿದೆ.

ಈ ಸಂದರ್ಭದಲ್ಲಿ ನನ್ನ ಅಮ್ಮನ ನೆನಪು ಅತ್ಯಂತ ಪ್ರಸ್ತುತ. ಅರ್ಧ ಶತಮಾ ನಕ್ಕೂ ಹೆಚ್ಚು ಕಾಲ ಅಣ್ಣಯ್ಯನ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡವಳು, ಒಬ್ಬ ಸದ್ದಿಲ್ಲದ ಸಂಗಾತಿಯಾಗಿ ಆಗಿ ಹೋದವಳು ನನ್ನ ಅಮ್ಮ. ಅಣ್ಣಯ್ಯನೊಂದಿಗಿನ ಜೀವನದುದ್ದಕ್ಕೂ ಒಬ್ಬ ತಾಯಿಯಾಗಿ, ಮಮತಾಮಯಿಯಾಗಿ ಅಣ್ಣಯ್ಯನನ್ನು ಸಲಹಿದವಳು ಆಕೆಯೇ. ಅಣ್ಣಯ್ಯನ ಇಂದಿನ ಎಲ್ಲ ಯಶಸ್ಸಿನಲ್ಲಿ ಆಕೆಗೆ ಸಮಪಾಲಿದೆ.

ಮಿತವ್ಯಯಿ-ಅಣ್ಣಯ್ಯ

ಜಿ. ರವಿ

ಈಗ್ಗೆ ಕೆಲ ವರ್ಷಗಳ ಹಿಂದೆ ನನ್ನ ತಾತ ಶ್ರೀ ಸಮೇತನಹಳ್ಳಿ ರಾಮರಾಯರು ತೋರಿಸಿ ಕೊಟ್ಟ ಜೀವನದ ಒಂದು ಅನುಭವ ಪಾಠವನ್ನು ನಾನು ಮರೆತಿಲ್ಲ. ಅವರ ಜೀವನದ ತತ್ವಗಳು ನನ್ನನ್ನು ಸ್ವಲ್ಪ ಮಟ್ಟಿಗಾದರೂ ಬದಲಿಸಿವೆ.

ನನ್ನ ಈ ಮೂವತ್ತೆರಡು ವರುಷಗಳ, ಇನ್ನೂ ಏನೂ ಸಾಧಿಸಲಾಗದ ಜೀವನದಲ್ಲಿ ಕಡೆಯ ಪಕ್ಷ ೧೬ ವರ್ಷಗಳನ್ನೂ ನನ್ನ ತಾತನವರೊಡನೆ ಕಳೆದಿದ್ದೇನೆ. ಅತಿ ನಿಕಟವಾಗಿ ಅವರ ಜೀವನ ವಾತ್ಸಲ್ಯಗಳನ್ನು ಕಂಡುಕೊಂಡಿದ್ದೇನೆ. ಆದರೆ ಸರಿಯಾಗಿ ಅರಿತಿಲ್ಲ. ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಿದ್ದರೆ ಅವರ ಉದಾತ್ತಧ್ಯೇಯಗಳನ್ನೂ, ಜೀವನ ಮೌಲ್ಯಗಳನ್ನೂ ನನ್ನ ಜೀವನಕ್ಕೆ ಅಳವಡಿಸಿಕೊಂಡಿದ್ದಿದ್ದರೆ ಅವರು ಜೀವನದ ರೀತಿ ನೀತಿಗಳನ್ನು ಕಲಿಸಲು ಹೊರಟಾಗ ಕಲಿತಿದ್ದಿದ್ದರೆ : ಇಂದು ನಾನೊಬ್ಬ ವ್ಯಕ್ತಿ ಅಲ್ಲ, ಉತ್ತಮ ವ್ಯಕ್ತಿ ಆಗಿ ಬಿಟ್ಟಿರುತ್ತಿದ್ದೆ. ಎಲ್ಲೋ, ನನ್ನ ರಕ್ತದ ಒಂದೊಂದು ಕಣದಲ್ಲಿ ಅವರ ಅನುವಂಶೀಯ ಗುಣವಿರುವುದರಿಂದೋ, ಏನೋ ಎಂಬಂತೆ, ಒಂದೆರಡು . . . ನನ್ನಲ್ಲಾಗಿರುವ ಪ್ರೇರೇಪಣೆ, ಉತ್ತೇಜನಗಳನ್ನು ಓದುಗರ ಮುಂದೆ ಗೌರವ, ಪ್ರೀತಿ, ಭಯಗಳೊಡನೆ ಬರೆಯುತ್ತಿದ್ದೇನೆ.

ಆಗ ನಾನು ಕಾಲೇಜು ವಿದ್ಯಾರ್ಥಿ . . . ಒಮ್ಮೆ ನನ್ನ ತಾತ ಆಟೋ ಒಂದರಲ್ಲಿ ಬಂದಿಳಿದರು. ನಾನು ನನ್ನ ಮಾಮೂಲು ಹುಡುಗಾಟದ ಬುದ್ಧಿಯಲ್ಲಿ "ಅಣ್ಣಯ್ಯ, ನೀವು ?! ಆಟೋದಲ್ಲಿ ?!" ಎಂದು ಕೇಳಿ ಬಿಟ್ಟೆ. ಅವರು, ಆಟೋದವನು ಅಲ್ಲಿಂದ ಕದಲುವವರೆಗೆ ಸುಮ್ಮನಿದ್ದು ಅನಂತರ ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. ಆಗಾಗ ಅವರು ಹೇಳುತ್ತಿದ್ದ ಮಾತು "ಪ್ರತಿಯೊಂದು ರೂಪಾಯಿಯನ್ನು ಹಿಡಿದು ನೋಡೊ, ಅವರ ಹಿಂದೆ ನಾನಾ ಕತೆಗಳು ತುಂಬಿರುತ್ತವೆ." ನಾನು ಪೆದ್ದು ಪೆದ್ದಾಗಿ ನೋಟನ್ನು ಹಿಡಿದುಕೊಂಡು ಘಂಟೆ ಗಟ್ಟಲೆ ಹಿಂದೆ ಮುಂದೆ ತಿರುಗಿಸಿ ನೋಡುತ್ತಲೇ ಇರುತ್ತಿದ್ದೆ. ಏನೂ ಅರ್ಥವಾಗದೆ ಸುಮ್ಮನಾಗುತ್ತಿದ್ದೆ. ಬಹುಶಃ ಅವರಾಡುತ್ತಿದ್ದ ಮಾತಿನ ಅರ್ಥವನ್ನು ನಾನು ಸರಿಯಾಗಿ ಮಾಡಿಕೊಂಡಿದ್ದಿದ್ದರೆ, ಅಪರೂಪಕ್ಕೆ ಅವರು ಆಟೋ ಬಳಸಿದ್ದನ್ನು ನಾನು ಮೂದಲಿಸುತ್ತಿರಲಿಲ್ಲ. ಇಂದಿಗೂ ಅವರು ಎಲ್ಲಿಂದ ಎಲ್ಲಿಗಾದರೂ ಸರಿ ಸಿಟಿಬಸ್ ಅಥವಾ ನಡೆದೇ ಹೋಗುತ್ತಾರೆಯೇ ಹೊರತು ಆಟೋ ಪ್ರಯಾಣ ಮಾಡುವುದಿಲ್ಲ. ಅನವಶ್ಯಕ ಖರ್ಚು ಮಾಡುವುದಿಲ್ಲ. ತೀರ ಅವಶ್ಯಕತೆ ಇದ್ದಾಗ ಮಾತ್ರ

ಆಟೋಗೆ ಖರ್ಚು ಮಾಡುತ್ತಾರೆ. ಅವರ ದೃಷ್ಟಿಯಲ್ಲಿ ಅದು ಒಂದು ದುಂದು ವೆಚ್ಚ. ಈ ವಿಷಯಕ್ಕಾಗಿ ನಮ್ಮೊಡನೆ ಅವರು ಬೇಕಾದಷ್ಟು ವಾಗ್ಯುದ್ಧ ಮಾಡಿದ್ದಾರೆ. ಅವರ ಹಠವನ್ನು ಅವರು ಬಿಡುವುದಿಲ್ಲ. ಹಾಗೆಂದು ಅವರು ಜಿಪುಣರಲ್ಲ. ಚೆನ್ನಾಗಿ ಯೋಚಿಸಿ, ಯಾವುದಕ್ಕೆ ಯಾವ ರೀತಿ ಎಷ್ಟು ಖರ್ಚು ಮಾಡಬೇಕೋ ಅದಕ್ಕೆ ಅಷ್ಟು ಖರ್ಚನ್ನೂ ಧಾರಾಳವಾಗಿ ಮಾಡುತ್ತಾರೆ.

ಉಪಯೋಗಿಸಿದ ನಂತರವೂ ನಿಲ್ಲಿಸದೇ ಇರುವ ನಲ್ಲಿ ; ಅವಶ್ಯಕತೆ ಇಲ್ಲದಿರುವಾಗಲೂ ಉರಿಸುತ್ತಿರುವ ಲೈಟ್ : ಮುದುರಿ ಬಿಸಾಕಿರುವ ಖಾಲಿ ಕಾಗದ : ಇವುಗಳನ್ನು ಕಂಡಾಗ ಕೆಂಡಾಮಂಡಲವಾಗಿ ಬಿಡುತ್ತಾರೆ : ನನ್ನ ತಾತ : ಅವರ ಈ ಒಂದು ತತ್ವ, ಹಾಗೂ ಪ್ರವೃತ್ತಿ, ನನ್ನ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂದರೆ ಪ್ರತಿಯೊಮ್ಮೆ ನಾನು ಆಟೋ ಹತ್ತಿದಾಗಲೂ ತಪ್ಪಿತಸ್ಥ ಮನೋಭಾವನೆ ಸುಳಿಯುತ್ತದೆ.

ಸಂಸ್ಕೃತ ಮಹಾವಾಕ್ಯಗಳೂ, ಇಂಗ್ಲಿಷ್ ಪ್ರಸಿದ್ಧ ವಾಕ್ಯಗಳೂ ಶ್ರೀರಾಮರಾಯರ ಕವಿತೆಯಲ್ಲಿ ನಿರರ್ಗಳವಾಗಿ ಹರಿದು ಹೊಸ ಅರ್ಥಗಳನ್ನು ಪಡೆಯುತ್ತವೆ. . . . ಶಾಕುಂತಲಾ ಕಾವ್ಯವನ್ನೋದುವವರಿಗೆ ಆಗುವ ರಸದೌತಣ, ಶ್ರೀ ರಾಮರಾಯರ ಪಾಂಡಿತ್ಯ, ಪದಗಳ ಮೇಲಿನ ಹತೋಟಿ, ನಿರರ್ಗಳವಾಗಿ ಹರಿಯುವ ಕಾವ್ಯಝರಿಯ ಮಂಜುಳ ನಿನಾದ ಯಾವ ಪುಟ ತೆರೆದು ಓದಿದರೂ ಇದರ ಅನುಭವವಾಗುತ್ತದೆ.

ಫೆಬ್ರವರಿ ೧೯೬೯

ಕೈವಾರ ರಾಜಾರಾವ್

ನಾನು ಕಂಡಂತೆ-ಅಣ್ಣಯ್ಯ

ಸರಸ್ವತಿ ಜಿ. ರವಿ

ನಾನು, ನಮ್ಮ ಅಣ್ಣಯ್ಯನವರ ಬಗ್ಗೆ ಹೇಳಲು ಎಲ್ಲ ರೀತಿಯಲ್ಲೂ ಚಿಕ್ಕವಳು. ಆದರೂ ಅಣ್ಣಯ್ಯನವರ ಬಗ್ಗೆ ಬರೆಯಲು ಇಷ್ಟ ಪಡುತ್ತೇನೆ. ಆಸೆಯಿಂದ ಬರೆಯುತ್ತೇನೆ.

ಅಣ್ಣಯ್ಯನವರ ಮಗಳ ಮಗನ ಹೆಂಡತಿ ನಾನು. ಇವರನ್ನು ಕೋಪಿಷ್ಟರೆಂದು ತಿಳಿದಿದ್ದೆ. ಆದರೆ ಮೃದುಹೃದಯದ ಇವರ ಮುಂದೆ ಕೋಪಿಷ್ಟರೆಂಬ ಪದವು ಎಲ್ಲೋ ಓಡಿಹೋಗಿರುತ್ತದೆ. ಮಕ್ಕಳು, ಮೊಮ್ಮಕ್ಕಳ ಬಗ್ಗೆ ಅವರಿಗೆ ಇರುವ ಪ್ರೀತಿ ವಿಶ್ವಾಸಗಳು, ಮೊಮ್ಮಕ್ಕಳ ಓದಿನ ಬಗ್ಗೆ ಅವರು ತೋರಿಸುವ ಕಾಳಜಿ, ಇವು ಅವರಿಗೆ ಅತಿ ಸಂತೋಷ ತರುತ್ತವೆ. ದುಃಖ ಬಂದಾಗ ಅವರು ಚಿಕ್ಕ ಮಕ್ಕಳಂತೆ ಅಳುವುದು ನನಗೆ ಅವರ ಒಳ್ಳೆಯ ತನದ ಸ್ವಭಾವವನ್ನು ಮತ್ತೆ ಮತ್ತೆ ಪರಿಚಯಿಸುತ್ತಿರುತ್ತದೆ. ಅವರ ಮನೆಯಲ್ಲಿ ಎಲ್ಲರೂ ಸೇರಿದಾಗ ಅವರು ಪಡುವ ಸಂಭ್ರಮ ಅತ್ಯಂತ ಸಂತೋಷವನ್ನು ಉಂಟುಮಾಡುತ್ತದೆ.

ಸಾಮಾನ್ಯವಾಗಿ ನನ್ನನ್ನು ಎಲ್ಲರೂ 'ಸರೂ' ಎಂದೇ ಕರೆಯುತ್ತಾರೆ. ಆದರೆ ನನ್ನ ತಾತ ಅಣ್ಣಯ್ಯನವರು, ನನ್ನನ್ನು "ಬಾಮ್ಮಾ ಸರಸ್ವತಿ" ಎಂದು ಪ್ರೀತಿಯಿಂದ ಕರೆಯುತ್ತಾರೆ. ಅದು ನನಗೆ ಮತ್ತೆ ಮತ್ತೆ ನೆನಪಾದಾಗಲೆಲ್ಲ ತುಂಬ ಸಂತೋಷವಾಗುತ್ತದೆ. ಅಣ್ಣಯ್ಯನವರಿಗೆ ಹೆಣ್ಣುಮಕ್ಕಳ ವಿವಿಧ ಉಡುಪುಗಳ ಬಗ್ಗೆ ಅಷ್ಟೇನೂ ಒಲವಿಲ್ಲ. ನಾನು ಸೀರೆ ಉಟ್ಟುಕೊಂಡುಹೋದರೆ ತುಂಬಾ ಇಷ್ಟಪಡುತ್ತಾರೆ. ಬಾಯಿತುಂಬಾ ಮೆಚ್ಚಿಗೆ ಸೂಚಿಸುತ್ತಾರೆ. ಎಲ್ಲಾ ಉಡುಪುಗಳಿಗಿಂತಾ, ಹೆಣ್ಣು ಮಕ್ಕಳಿಗೆ ಸೀರೆ ಚೆನ್ನ ಎಂದು ಹೇಳುತ್ತಾರೆ. ಅವರು ನನ್ನನ್ನು ಸೀರೆಯ ಉಡುಗೆಯಲ್ಲಿ ಹೊಗಳಿದಾಗ ನನಗೆ ಎಲ್ಲಿಲ್ಲದ ಸಂತೋಷ.

ಇವರ ಶುದ್ಧವಾದ ಕಾರ್ಯನಿಷ್ಠೆ, ಜೊತೆಗೆ ಒಳ್ಳೆಯ ತನದಲ್ಲಿಯೇ ಮುಂದೆ ಬಂದ ರೀತಿ ಇವೆಲ್ಲವನ್ನೂ ಕೇಳಿದ್ದೇನೆ. ಜೊತೆಗೆ ನೋಡುತ್ತ ಇದ್ದೇನೆ. ಈಗಲೂ ನಮ್ಮ ಅಣ್ಣಯ್ಯನವರು ಬೆಳಿಗ್ಗೆ ಬೇಗನೆ ಏಳುತ್ತಾರೆ. ಸತತವಾಗಿ ಕ್ರಿಯಾಶೀಲ ವ್ಯಕ್ತಿ ಆಗಿರುತ್ತಾರೆ. ಅವರ ದೈನಂದಿನ ಜೀವನದ ರೀತಿ ನೀತಿಗಳು, ನನ್ನಲ್ಲಿ, ಏನನ್ನಾದರೂ ಸಾಧಿಸಬೇಕೆಂಬ ಆಸೆಯನ್ನು ಹುಟ್ಟಿಸಿವೆ. ಒಟ್ಟಾರೆ ಹೇಳಬೇಕಾದರೆ ಈ ಪೂಜ್ಯ ಹಿರಿಯರನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಎಲ್ಲರೂ ಇವರಂತೆ ಬದುಕಲು ಪ್ರಯತ್ನಪಟ್ಟರೆ

ಏನನ್ನಾದರೂ ಸಾಧಿಸಬಹುದು ಎಂದು ನನ್ನ ಅನಿಸಿಕೆ. ನಾನಾದರೂ ಈ ದಿಶೆಯಲ್ಲಿ ಜೀವನವನ್ನು ಅರ್ಥಪೂರ್ಣ ಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ. ಓದುಗರ ಪ್ರೋತ್ಸಾಹ, ಭಗವಂತನ ಕೃಪೆ ದೊರೆಯಲೆಂದು ಪ್ರಾರ್ಥಿಸುತ್ತೇನೆ.

ನಿಮ್ಮ ಕಲ್ಪನೆಯ 'ಶಾಕುಂತಲಾ' ಓದಿ ಮುಗಿಸಿದೆ. ದಿನಕ್ಕೊಂದು ನಿರ್ಣಯದಂತೆ ಅಧ್ಯಯ ನಾಂಗ, ವ್ಯವಹಾರಾಂಗಗಳನ್ನು ಓದಿದೆ. ಕೆಲವು ವ್ರತಗಳನ್ನು ನಲವತ್ತೆಂಟು ದಿವಸಗಳ ಕಾಲ ಆಚರಿಸುವ ಪರಿಪಾಠವುಂಟು. ಈ ನನ್ನ ಕಾವ್ಯ ಪಠನವೂ ಹಾಗೆಯೇ ಆಯಿತು.

ನಿಮ್ಮ ಶುಚಿಯಾದ ಮನದ ಪ್ರಾರ್ಥನೆಯಂತೆ 'ಎಲ್ಲ ಕಲ್ಯಾಣ ಶಕ್ತಿಗಳ್ ಒಲಿ'ದಿವೆ ಈ ಕಾವ್ಯ ನಿರ್ಮಾಣದಲ್ಲಿ. ಕಾವ್ಯ 'ಅಕ್ಷರ' ರಾಕ್ಷಸಿಯಾಗದೆ 'ಅಕ್ಷರ' ದೇವತೆಯಾಗಿ ರೂಪಿತವಾಗಿದೆ. ಸದ್ಭಾವ ಗಳ ಭವ್ಯ ಸುಂದರ ಕಲ್ಪನೆಗೆ ಯುಕ್ತವಾದ ಪದಮೇಳ ಕಾವ್ಯದುದ್ದಕ್ಕೂ ಎದ್ದು ಕಾಣುತ್ತದೆ. ಮೂಲದ ಕಥೆಗೆ ನೀವು ಕೊಟ್ಟಿರುವ ತಿರುವು ಸರ್ವಗ್ರಾಹ್ಯ ಎನಿಸಲಾರದಾದರೂ 'ಶಾಕುಂತಲಾ' ಧೀರೆಯ ಸಂಯಮ ಶ್ರದ್ಧೆಗಳು ಮನಮೆಚ್ಚಿಕೆಯಾಗೇ ಆಗುತ್ತವೆ. ಅದೇ ತಾನೇ ರಚಯಿತ ಬಯಸುವ ಸಾರ್ಥಕ್ಯ?

೪–೯–೭೨ **ಸಿ. ಕೆ. ನಾಗರಾಜರಾವ್**

ದಾರಿ ದೀಪ

ಎಸ್. ಕೆ. ಯಶೋವರ್ಧನ

ನಿಮಗೆಲ್ಲ ಗೊತ್ತಿರುವ ಸಮೇತನಹಳ್ಳಿ ರಾಮರಾಯರು ನನಗೆ ಪರಿಚಯವೇ ಇಲ್ಲ. ನನಗೆ ಗೊತ್ತಿರುವುದು ಸಿಟ್ಟಿನ, ಮೃದುಸ್ವಭಾವದ, ಬಯ್ಯುವ, ಪ್ರೀತಿಸುವ, ಅನವರತ ದುಡಿಯುವ ನಮ್ಮ ಅಣ್ಣಯ್ಯ.

ಅಣ್ಣಯ್ಯ ನನ್ನ ತಂದೆಯ ತಂದೆ, ಅಂದರೆ ತಾತ. ಅಣ್ಣಯ್ಯನ ತಮ್ಮಂದಿರು ಅವರನ್ನು ಅಣ್ಣಯ್ಯ ಎಂದು ಕರೆಯಲು ಆರಂಭ ಮಾಡಿದಾಗಿನಿಂದ, ಅವರಿಗಿಂತ ಕಿರಿಯ ರಾದ ನಮ್ಮ ಕುಟುಂಬದ ಪ್ರತಿಯೊಬ್ಬರಿಗೂ ಅವರು 'ಅಣ್ಣಯ್ಯ'ನೇ ಆಗಿದ್ದಾರೆ. ಅವರ ವಯಸ್ಸಿನ ಮತ್ತು ಅವರಿಗಿಂತ ಹಿರಿಯರಾದ ಅವರ ಮಿತ್ರರಿಗೆ 'ರಾಮಣ್ಣಯ್ಯ' ಆಗಿ ದ್ದಾರೆ. 'ಸಮೇತನಹಳ್ಳಿ ರಾಮರಾಯ'ರೆಂದರೆ 'ಅಣ್ಣಯ್ಯ' ಎಂದೇ ಪ್ರತಿಯೊಬ್ಬರ ಮನಸ್ಸಿಗೂ ಬರುವುದು. ಇಷ್ಟೆಲ್ಲಾ ಪೀಠಿಕೆ ಏಕೆಂದರೆ ನಾನು ಬಹಳ ಚಿಕ್ಕವನಿದ್ದಾಗ ನನ್ನ ಮಿತ್ರನೊಬ್ಬ ನನ್ನನ್ನು ಕೇಳಿದ್ದುಂಟು, 'ನಿನ್ನ ತಾತನ ಹೆಸರೇನು ?' ಎಂದು. ಆಗ ನನಗೆ ತಬ್ಬಿಬ್ಬು. 'ತಾತ ಎಂದರೇನು ?' ನಮ್ಮ ಮನೆಯಲ್ಲಿ ಅಪ್ಪ, ಅಮ್ಮ, ಅಜ್ಜಿಯ ಜತೆಗೆ 'ಅಣ್ಣಯ್ಯ' ಎಂಬವರು ಇದ್ದರು. ಹಾಗಾಗಿ ನನಗೆ ಉತ್ತರ ಹೇಳಲು ಆಗಲಿಲ್ಲ. ಮನೆಗೆ ಹೋಗಿ ರಂಪ ಮಾಡಿದೆ, 'ನನ್ನ ಗೆಳೆಯನಿಗೆ ತಾತ ಇದ್ದಾರೆ. ನನಗೆ ಯಾಕಿಲ್ಲ ?' ಎಂದು. ಆಗ ನನಗೆ ನನ್ನ ಅಜ್ಜಿ ಹೇಳಿದ್ದರು, ನಮ್ಮ ಮನೆಯ ಅಣ್ಣಯ್ಯನೇ ನಿನ್ನ ತಾತ ಎಂದು.

ನಾನು ಹುಟ್ಟುವಾಗಲೇ ಮಧ್ಯಪ್ರಾಚ್ಯ ದೇಶಕ್ಕೆ ಹೋದ ತಂದೆಯ ಸ್ಥಾನವನ್ನು ತುಂಬಿದವರು ಅಣ್ಣಯ್ಯ. ನನಗೆ ಅಥವಾ ನನ್ನ ತಮ್ಮನಿಗೆ ಏನಾದರೂ ಬೇಡಿಕೆ ಇದ್ದರೆ, ಅವರಿಗೆ ಅದು ಸರಿ ಎನ್ನಿಸಿದರೆ, ಇದುವರೆಗೆ ಅವರು ಅದನ್ನು ಪೂರೈಸದೆ ಹೋಗಿಲ್ಲ. ನಾನು ಏಳನೆಯ ತರಗತಿಯಲ್ಲಿದ್ದಾಗ ಮನೆಯಲ್ಲಿದ್ದ ಒಂದೇ ಸೈಕಲ್ಲಿಗಾಗಿ ನಾನು, ನನ್ನ ತಮ್ಮ ಜಗಳವಾಡುವುದು ನಡೆದೇ ಇತ್ತು. ಒಂದು ದಿನ ನಾನು ಗೊಣಗುತ್ತಲೇ ಶಾಲೆಗೆ ಹೋಗಿದ್ದೆ. 'ಇನ್ನೊಂದು ಸೈಕಲ್ಲು ಮನೆಗೆ ಬೇಕು' ಎಂದು. ಸಂಜೆ ಶಾಲೆಯಿಂದ ಮನೆಗೆ ಬರುವಾಗ ನಮ್ಮನ್ನು ಸ್ವಾಗತಿಸಿದ್ದು ಅಂಗಳದಲ್ಲಿದ್ದ ಹೊಚ್ಚ ಹೊಸ ಸೈಕಲ್. ನಮ್ಮ ಆನಂದದ ಮುಖಗಳನ್ನು ನೋಡಿದ ಅಣ್ಣಯ್ಯನ ಸಂಭ್ರಮ ಹೇಳತೀರದು.

ಒಬ್ಬ ವ್ಯಕ್ತಿಗೆ ಶಿಸ್ತೆಂದರೇನು ? ಸಮಯವನ್ನು ಹೇಗೆ ಉಪಯೋಗಿಸಿಕೊಳ್ಳ ಬೇಕು ಎಂದು ಕಲಿಯಬೇಕಿದ್ದರೆ ನಮ್ಮ ಅಣ್ಣಯ್ಯನಿಂದ ಕಲಿಯಬೇಕು. ಈ ಇಳಿ

ವಯಸ್ಸಿನಲ್ಲಿಯೂ ನಾನು ಅವರಲ್ಲಿ ಆಲಸ್ಯದ ಒಂದು ಎಳೆಯನ್ನೂ ಕಂಡಿಲ್ಲ. ಎಷ್ಟೋಂದು ಬಾರಿ ಬೆಳಗಿನ ಜಾವ ಐದು ಗಂಟೆಗೆ ಎದ್ದು ಅವರು ಓದುವುದನ್ನು ಬರೆಯುವುದನ್ನು ಕಂಡು ನಾನು ನಾಚಿದ್ದೇನೆ.

ಶಾಲೆಯಲ್ಲಿದ್ದಾಗ ನಾವು ಪ್ರತಿವರ್ಷ ಪ್ರವಾಸಗಳಿಗೆ ಹೋಗುತ್ತಿದ್ದೆವು. ಶಾಲೆಯ ಆವರಣದಲ್ಲಿ ನಾವು ಐದೂವರೆ ಅಥವಾ ಆರುಗಂಟೆಗೆ ಬಸನ್ನು ಹತ್ತುತ್ತಿದ್ದೆವು. ಬೆಳಿಗ್ಗೆ ಐದಕ್ಕೆ ಎದ್ದು ತಯಾರಾದರೆ ಸಾಕೆಂದುಕೊಂಡು ನಾನು ಮಲಗಿದರೆ, ಅಣ್ಣಯ್ಯ ಮೂರು ಗಂಟೆಗೇ ಬಂದು ಎಬ್ಬಿಸುತ್ತಿದ್ದರು. 'ಇಷ್ಟು ಬೇಗ ಏಕೆ ಎಬ್ಬಿಸಿದಿರಿ' ಎಂದು ಕೇಳಿದರೆ "ನೋಡು ಯಶಣ್ಣ, ನಮ್ಮಿಂದ ಯಾರಿಗೂ ತೊಂದರೆಯಾಗಕೂಡದು. ಅರ್ಧ ಘಂಟೆ ಮುಂಚೆಯೇ ಬೇಕಾದರೆ ಹೋಗಬಹುದು, ಆದರೆ ಒಂದು ನಿಮಿಷವೂ ತಡವಾಗಿ ಹೋಗಬಾರದು" ಎಂದು ಹೇಳಿ ನನ್ನನ್ನು ತಯಾರು ಮಾಡಿಸುತ್ತಿದ್ದರು. ಹಾಗೆಯೇ ನಾವೆಲ್ಲಾದರೂ ಹೊರಗೆ ಹೋಗಿ ಬರುವುದು ತಡವಾಗಿಬಿಟ್ಟರೆ, ನಾವು ಬಂದು ಗೇಟ್ ತೆಗೆಯುತ್ತಿದ್ದಾಗಲೇ ಮನೆಯೊಳಗಿನಿಂದ ಗುಡುಗಿನ ಸದ್ದು !

ಅಣ್ಣಯ್ಯನ ಸಾಹಿತ್ಯದ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ. ಆದರೆ ಅವರು ಬಹಳ ಓದುತ್ತಾರೆ. ನಮ್ಮ ಮನೆಯಲ್ಲಿ ಅವರು ಸಂಗ್ರಹಿಸಿದ ಸುಮಾರು ಎರಡು ಸಾವಿರದಷ್ಟು ಪುಸ್ತಕಗಳಿವೆ. ನಾವು ಹೋಗಿ ಅವರನ್ನು ಯಾವುದೇ ಒಂದು ಪುಸ್ತಕ ಎಲ್ಲಿದೆ ? ಎಂದು ಕೇಳಿದಾಗ, ಅವರು "ಆ ರ್‍ಯಾಕಿನ, ಆ shelf ಇನ ಈ ಕಡೆಯಿಂದ–ನೇ ಪುಸ್ತಕ" ಎಂದು ಸರಾಗವಾಗಿ ಹೇಳಿಬಿಡುತ್ತಾರೆ. ಪ್ರತಿಯೊಂದು ಪುಸ್ತಕದಲ್ಲಿಯೂ ಪುಟಗಳ ಪಕ್ಕದಲ್ಲಿ ಅವರ ಟಿಪ್ಪಣಿಗಳನ್ನು ಕಾಣಬಹುದು. ಹಾಗಾಗಿಯೇ, ನಾವು ಯಾರಾದರೂ ಒಂದು ಪುಸ್ತಕವನ್ನು ತೆಗೆದರೆ, ಮತ್ತೆ ಅದೇ ಜಾಗದಲ್ಲಿಯೇ ಇಡಬೇಕು. ಇಡದಿದ್ದರೆ ಮನೆಯೆಲ್ಲ ಅಲ್ಲೋಲ ಕಲ್ಲೋಲ !

ಮನುಷ್ಯನಲ್ಲಿ ತೃಪ್ತಿ ಬಂದರೆ ಮಾತ್ರ ಸೋಮಾರಿತನ ಬರುವುದು ಎಂದು ಅಣ್ಣಯ್ಯ ಹೇಳುತ್ತಾರೆ. ನಾನು ಅವರಿಗೆ ನನ್ನ ಪರೀಕ್ಷೆಯ ಅಂಕಗಳನ್ನು ತೋರಿಸಿ, ತರಗತಿಯಲ್ಲೇ ನನ್ನದು ಅತಿ ಹೆಚ್ಚು ಎಂದು ಹೇಳಿದರೂ, ಇನ್ನಷ್ಟು ಏಕೆ ಬರಲಿಲ್ಲ ? ಎನ್ನುತ್ತಾರೆ. ಆದರೂ, ಹಾಗೆ ಮತ್ತೊಂದು ಕಡೆಗೆ ತಿರುಗಿದಾಗ, ಅವರ ಮುಖ ಹೆಮ್ಮೆಯಿಂದ ಬೀಗುತ್ತಿರುತ್ತದೆ.

ಅಣ್ಣಯ್ಯ ತನಗೆ ಏನು ಅಗತ್ಯವೋ ಅದನ್ನು ಮಾತ್ರ ತಿಳಿದುಕೊಳ್ಳುತ್ತಾರೆ. ಸಾಹಿತ್ಯದಲ್ಲಿ, ಇತಿಹಾಸದಲ್ಲಿ ಬಹಳ ಆಸಕ್ತಿ ಇದೆ. ಅದರ ಬಗ್ಗೆ ತುಂಬ ಓದುತ್ತಾರೆ. ಪತ್ರಿಕೆಯನ್ನು ಗಮನವಿಟ್ಟು ಓದಿ, ಕ್ರೀಡಾ ವಿಭಾಗ ಬಂದಾಗ ತಕ್ಷಣ ಮುಚ್ಚಿಡುತ್ತಾರೆ. ನಮ್ಮ ಮನೆಗೆ ಟಿ.ವಿ. ಬಂದು ತುಂಬ ವರ್ಷಗಳಾಗಿದ್ದರೂ, ಅವರಿಗೆ ಇನ್ನೂ ಅದರ ಬಗ್ಗೆ ಏನೂ ತಿಳಿಯದು–ಏಕೆಂದರೆ ಅವರಿಗೆ ಅದರಲ್ಲಿ ಆಸಕ್ತಿಯಿಲ್ಲ. ಮೂವತ್ತು ವರ್ಷದ ಹಳೆಯ ರೇಡಿಯೋ ಒಂದನ್ನು ಇಟ್ಟುಕೊಂಡು, ಅದನ್ನು ಕೇಳಿ ಆನಂದಿಸುತ್ತಾರೆ.

ಅಣ್ಣಯ್ಯನ ಕೋಪ ನಮ್ಮ ಕುಟುಂಬದಲ್ಲೆಲ್ಲಾ ಪ್ರಖ್ಯಾತಿಯನ್ನು ಗಳಿಸಿದೆ. ಅವರ

ಮಕ್ಕಳೂ ಸಹ ಅವರ ಕೋಣೆಯೊಳಗೆ ಹೋಗಲು ಹೆದರುತ್ತಿದ್ದರಂತೆ. ಅಣ್ಣಯ್ಯ ಯಾವ ಮಗುವನ್ನೂ ಎತ್ತಿ ಮುದ್ದಾಡಿದವರಲ್ಲವಂತೆ. ಆದರೆ, ನಾನು ಬಹಳ ಚಿಕ್ಕವನಾಗಿದ್ದಾಗ, ಅವರು ಹಾಸಿಗೆಯ ಮೇಲೆ ಮಲಗಿದ್ದರೆ, ಅವರ ಹೊಟ್ಟೆಯ ಮೇಲೆ ಹೋಗಿ ಕುಳಿತರೇ ನನಗೆ ಸಮಾಧಾನವಂತೆ. ನಾನು, ನನ್ನ ತಮ್ಮ ಈಗ ಹೋಗಿ ಅವರ ಕೋಣೆಯನ್ನು ಏನು ಬೇಕಾದರೂ ಮಾಡಬಹುದು. ಅವರು ಏನೂ ಹೇಳುವುದಿಲ್ಲ. ಆದರೆ ನಮ್ಮ ತಂದೆಯೊ–ತಾಯಿಯೋ ಹೋಗಿ, ಅವರ ಒಂದು ಪುಸ್ತಕವನ್ನು ತಪ್ಪು ಜಾಗದಲ್ಲಿಟ್ಟರೆ ಅವರಿಗೆ ಎಲ್ಲಿಲ್ಲದ ಕೋಪ. ಕೋಪ ಎಷ್ಟಿದ್ದರೂ, ಹೃದಯ ಬಹಳ ಮೃದು. ಮೊಮ್ಮಗನಿಗೆ, ಅಂದರೆ ನನಗೆ ಮೈಸೂರಿನಲ್ಲಿಯೇ ಎಂಜಿನಿಯರಿಂಗ್ ಸೀಟ್ ಸಿಕ್ಕಿತು ಎಂದು ಕೇಳಿದಾಗ ಅವರಿಗೆ ಆನಂದದಿಂದ ಕಣ್ಣೀರು ಸುರಿದಿತ್ತು. ಮೃದು ಎಂದಾಗ, ಇನ್ನೊಂದು ನೆನಪಿಗೆ ಬರುತ್ತದೆ. ನಾನು, ನನ್ನ ಅಮ್ಮ ನಮ್ಮ ತಂದೆಯಿದ್ದಲ್ಲಿಗೆ ಹೊರಟಾಗ, ಅಣ್ಣಯ್ಯ ನಮ್ಮನ್ನು ಮುಂಬಯಿಯವರೆಗೆ ನಮ್ಮ ಜೊತೆ ಬರುವುದೆಂದು ತೀರ್ಮಾನವಾಯಿತು. ಮನೆಯಿಂದ ಹೊರಟಾಗ ಮನೆಮಂದಿಯ ಜೊತೆಗೆ ಅಣ್ಣಯ್ಯ ಸ್ವಲ್ಪ ಅತ್ತರು. ಬೆಂಗಳೂರಿನಿಂದ ಹೊರಟಾಗ, ನಮ್ಮ ಸೋದರತ್ತೆಯ ಜೊತೆಗೆ ಇನ್ನಷ್ಟು ಅತ್ತರು. ರೈಲಿನಲ್ಲಿ ಇಡೀ ದಾರಿ ಮುಸಿಮುಸಿಯೆಂದು ಕಣ್ಣೀರನ್ನು ಒರೆಸುತ್ತಲೇ ಬಂದರು. ಮುಂಬಯಿಯ ವಿಮಾನ ನಿಲ್ದಾಣದಲ್ಲಿ ಧಾರಾಳವಾಗಿ ಅತ್ತದ್ದಾಯಿತು. ಈ ವಿಷಯವನ್ನು ಹೇಳಿ ಈಗಲೂ ನಾವು ಅವರನ್ನು ತಮಾಷೆ ಮಾಡುತ್ತೇವೆ. "ಇನ್ನೂ ಎರಡು ದಿನ ನಮ್ಮೊಂದಿಗೆ ಇದ್ದು, ಕೊನೆಗೆ ಮುಂಬಯಿಯಲ್ಲೆ ಎಲ್ಲಾ ಒಟ್ಟಿಗೆ ಮುಗಿಸಬಹುದಿತ್ತಲ್ಲಾ" ಎಂದು.

ನಾನು ನನಗೆ ಕಂಡ ಅಣ್ಣಯ್ಯನನ್ನು ಇದುವರೆಗೆ ಚೆನ್ನಾಗಿ ಚಿತ್ರಿಸಿದೆನೋ ಇಲ್ಲವೋ ಗೊತ್ತಿಲ್ಲ. ಅವರ ವ್ಯಕ್ತಿತ್ವದ ಬಗ್ಗೆ ಹೇಳುವುದು ಬಹಳ ಕಷ್ಟದ ಕೆಲಸ. ಆದರೂ ಈಗ ನಾನು ಮುಗಿಸಬೇಕಾಗಿದೆ. ಏನೇ ಆಗಲಿ, ನಮ್ಮ ಅಣ್ಣಯ್ಯ, ನಮ್ಮ ಅಣ್ಣಯ್ಯನೇ. "ಯಶು ಮರಿ ಬಂತಾ ?" ಎಂದು ಅಣ್ಣಯ್ಯ ಕರೆಯುವುದು ಕೇಳುತ್ತಿದೆ. ಕೂಡಲೇ ಓಡಬೇಕು, ಇಲ್ಲವಾದರೆ ದುರ್ವಾಸನ ಅವತಾರ ತಾಳುತ್ತಾರೆ.

. . . ಕೃಷ್ಣ ಅಷ್ಟು ಜನ ಗೋಪಿಯರನ್ನು ರಮಿಸಿದುದು ತಪ್ಪಲ್ಲವೇ ಎಂಬುದು ಅನೇಕ ವಿದ್ವಾಂಸರ ತಲೆ ತಿಂದಿದೆ. ಇದನ್ನು ಲೇಖಕರು 'ರಾಸಲೀಲೆ'ಯಲ್ಲಿ ಸಮರ್ಪಕವಾಗಿ ಬಗೆ ಹರಿಸಿದ್ದಾರೆ. . . . 'ರಾಸಲೀಲೆ'ಯ ಭಾವ ಛಂದಸ್ಸು ಎಲ್ಲವೂ ನಿರ್ದುಷ್ಟವಾಗಿ ರಸಭರಿತವಾದ ಗೀತರೂಪಕವಾಗಿದೆ. ಹೊಸಗನ್ನಡ ಗೀತರೂಪಕ ಸಾಹಿತ್ಯ ಪ್ರಕಾರಕ್ಕೆ ಇದೊಂದು ಉತ್ತಮ ಕೊಡುಗೆಯಾಗಿದೆ.

೨೪–೩–೧೯೬೮ **ಗುಂಡ್ಮಿ ಚಂದ್ರಶೇಖರ ಐತಾಳ**

ಗುರು-ಮಾರ್ಗದರ್ಶಿ

ಎಸ್. ಕೆ. ತೇಜೋವರ್ಧನ

ನಮ್ಮ ಅಣ್ಣಯ್ಯನ ಬಗ್ಗೆ ಬರೆಯಬೇಕಾದರೆ, ಎಲ್ಲಿಂದ ಪ್ರಾರಂಭಿಸಲಿ ಎಂದು ಗೊತ್ತಾಗುವುದೇ ಇಲ್ಲ. ಯಾವ ಯಾವ ಘಟನೆಗಳನ್ನು ಜ್ಞಾಪಿಸಿಕೊಳ್ಳಬೇಕೆಂದೇ ತಿಳಿಯುತ್ತಿಲ್ಲ. ನಮ್ಮ ತಂದೆ ಹೆಚ್ಚಿನ ಕಾಲ ವಿದೇಶದಲ್ಲಿರುವುದರಿಂದ ತಂದೆಯ ಪ್ರೀತಿ, ಮಾರ್ಗದರ್ಶನವನ್ನೆಲ್ಲಾ ನಮ್ಮ ಅಣ್ಣಯ್ಯನೇ ನೀಡುತ್ತಾ ಬಂದಿದ್ದಾರೆ. ಈ ನನ್ನ ಹದಿನೈದು ವರ್ಷದ ಜೀವನದಲ್ಲಿ ನಡೆದ ಘಟನೆಗಳನ್ನು ಹೇಳಿದರೂ, ಅದು ಒಂದು ಬಹು ದೊಡ್ಡ ಸಮುದ್ರದ ಕೆಲವೇ ಹನಿಗಳಾಗಿರುತ್ತವೆ.

ನಾನು ಒಂದನೇ, ಎರಡನೇ ತರಗತಿಯಲ್ಲಿದ್ದಾಗ ನನ್ನ ಹತ್ತಾರು ಪುಸ್ತಕಗಳನ್ನು bind ಮಾಡುತ್ತಾ, ಅದು ಹೇಗೆ ಮಾಡುವುದು ಎಂದು ಹೇಳಿಕೊಡುತ್ತಾ ಬಂದು ಅವರು ಇಂದಿಗೂ ನಾವು ಶಿಸ್ತಿನಿಂದ ನ್ಯಾಯವಾಗಿ, ದೊಡ್ಡ ಗುರಿಗಳನ್ನು ಹೊತ್ತು ಹೇಗೆ ಬದುಕಬೇಕೆಂದು ಹೇಳಿಕೊಡುತ್ತಲೇ ಬಂದಿದ್ದಾರೆ. ಅವರು ಮೊದಲಿನಿಂದಲೂ ಹೇಳುತ್ತಿದ್ದುದು ಒಂದೇ. "ಜೀವನದಲ್ಲಿ ಯಾವಾಗಲೂ ಒಂದು ಗುರಿಯನ್ನಿಟ್ಟುಕೊಂಡು, ನಮ್ಮ ತನುಮನಗಳನ್ನು ಆ ಗುರಿಯ ಸಾಧನೆಗೇ ಅರ್ಪಿಸಬೇಕು", ಎಂದು. ಶ್ರಮ ಜೀವಿಗಳಾದ ಅವರು ನಮಗೆ ಅನೇಕ ರೀತಿಗಳಲ್ಲಿ ಮಾದರಿಯಾಗಿದ್ದಾರೆ. ನಾನು ನೋಡಿದಾಗಲಿಂದಲೂ ಅವರು ಊಟ ತಿಂಡಿಯ ಬಗ್ಗೆ ಕಟ್ಟುನಿಟ್ಟಾದ ನಿಯಮವನ್ನು ಪಾಲಿಸುತ್ತಾ ಬಂದಿದ್ದಾರೆ. ಇದೊಂದನ್ನೇ ಅಲ್ಲ ನಾವೆಲ್ಲರೂ ಅಣ್ಣಯ್ಯನಿಂದ ಇವತ್ತಿಗೂ ಕಲಿಯಲು ಅನೇಕ ವಿಷಯಗಳಿವೆ.

ನಾವು ಈಗ ಇರುವ ಮನೆಯನ್ನು ೧೯೮೪ ರಲ್ಲಿ ಪ್ರಾರಂಭಿಸಿ ೧೯೮೭ ರಲ್ಲಿ ಕಟ್ಟಿ ಮುಗಿಸಿದೆವು. ಇದಕ್ಕೆ ಮುಂಚೆ ನಾವು ಬಾಡಿಗೆ ಮನೆಯಲ್ಲಿದ್ದೆವು. ಮನೆ ಕಟ್ಟುವಾಗ ನಮ್ಮ ಅಪ್ಪ ದುಬೈನಲ್ಲಿ ಇದ್ದರು; ಹಾಗೂ ನಮ್ಮ ತಾಯಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ನಡೆಯುವುದನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಅಣ್ಣಯ್ಯ ಹೊತ್ತರು. ಎಷ್ಟೋ ಬಾರಿ ಬೆಳಿಗ್ಗೆ ನಾವು ಏಳುವ ಮುಂಚೆ ಹೋದ ಅವರು ನಾವು ಮಲಗಿದ ಮೇಲೆ ಹಿಂತಿರುಗುವರು. ಅವರಿಗೆ ಕೆಲಸಗಾರರಲ್ಲಿ ಕಿಂಚಿತ್ತು ನಂಬಿಕೆಯಿರಲಿಲ್ಲ. ಆದರೂ ಮನೆ ಕಟ್ಟುವಿಕೆಯ ಬಗ್ಗೆ ಹೆಚ್ಚು ತಿಳಿಯದ ಅಣ್ಣಯ್ಯ, ಅನೇಕ ಬಾರಿ ಮೋಸ ಹೋದರು. ಕೊನೆಗೆ ರೋಸಿ ಹೋಗಿ, ಕೆಲಸವನ್ನು ಕೆಲವು ತಿಂಗಳುಗಳ ಕಾಲ ನಿಲ್ಲಿಸಿಯೇ ಬಿಟ್ಟರು. ನಮ್ಮ ಮನೆಗೆ ನನ್ನ ತಂದೆ-ತಾಯಿಯರು ಹಣ ಕೊಟ್ಟಿದ್ದು ಎಷ್ಟೋ ಅಷ್ಟೆ.

ಉಳಿದದ್ದೆಲ್ಲ ಅಣ್ಣಯ್ಯ ನೋಡಿಕೊಳ್ಳುತ್ತಿದ್ದರು. ನಮ್ಮ ಮನೆಯ ಪ್ರತಿಯೊಂದು ಗೋಡೆಯಲ್ಲೂ, ಪ್ರತಿಯೊಂದು ಇಟ್ಟಿಗೆಯಲ್ಲೂ ಅಣ್ಣಯ್ಯನ ಶ್ರಮವನ್ನು ನಾವು ಕಾಣ ಬಹುದು. ದುಡ್ಡು ಖರ್ಚಾದದ್ದೆಲ್ಲಾ, ಅಚ್ಚುಕಟ್ಟಾಗಿ, ಲೆಕ್ಕಾಚಾರಗಳನ್ನು ಮಾಡಿ ನಮ್ಮ ತಂದೆಗೆ ತೋರಿಸಲು ಇಡುತ್ತಿದ್ದರು. ಆದರೆ ನಮ್ಮ ತಂದೆ–ತಾಯಿಯರು ಅದನ್ನು ಇಂದಿಗೂ ನೋಡಿಲ್ಲ. ಹೀಗೆ ಎಲ್ಲರಿಗೂ ಅಣ್ಣಯ್ಯನಲ್ಲಿ ಅಪಾರ ನಂಬಿಕೆ.

ಅಣ್ಣಯ್ಯನ ಶಿಸ್ತಿನ ಬಾಳನ್ನು ನೋಡಿ ಯಾವ ವಿದ್ಯಾರ್ಥಿಯೂ ನಾಚಿಕೆ ಪಡ ಬೇಕು. ಬೆಳಗಿನ ಜಾವ ಬೇಗ ಎದ್ದು ತಮ್ಮ ತೋಟಗಾರಿಕೆಯನ್ನು ಮುಗಿಸಿ, ಬರವಣಿ ಗೆಯ ಕೆಲಸವನ್ನು ಪ್ರಾರಂಭಿಸುತ್ತಾರೆ. ಅವರು ಬರೆದ ಎಷ್ಟೋ ಪುಸ್ತಕಗಳು ನನಗೆ ತಲೆಬುಡ ಅರ್ಥವಾಗುವುದಿಲ್ಲ. ಆದರೆ ಅನೇಕ ಜನರ ಮೆಚ್ಚುಗೆಯನ್ನು ಕಂಡು, ಅವರು ಒಳ್ಳೆಯ ಬರಹಗಾರರೇ ಆಗಿರಬೇಕು ಎಂದು ನಂಬಿದ್ದೇನೆ. ಅಣ್ಣಯ್ಯ ತಮ್ಮ ಎಲ್ಲಾ ಮಕ್ಕಳು, ಮೊಮ್ಮಕ್ಕಳನ್ನು ತುಂಬಾ ಪ್ರೀತಿಸುತ್ತಾರೆ. ಅವರು ಯಾವಾಗಲೂ 'ನಾನು ಬದುಕುತ್ತಿರುವುದೇ ನಿಮಗಾಗಿ' ಎಂದು ಹೇಳುತ್ತಿರುತ್ತಾರೆ. ಅಣ್ಣಯ್ಯ ಬಹಳ ಬೇಗ ಭಾವುಕರಾಗಿ ಬಿಡುತ್ತಾರೆ. ಅವರು ಯಾವ ಜಗಳವನ್ನೂ ಸಹಿಸುವುದಿಲ್ಲ, ತಮ್ಮ ವರಿಂದಲೂ ಅಣ್ಣಯ್ಯನಿಗೆ ಅನ್ಯಾಯವಾದರೆ ಅವರು ಬಹಳ ನೊಂದುಬಿಡುತ್ತಾರೆ. ಆದ್ದರಿಂದ, ಎಷ್ಟೋ ಬಾರಿ ಅಣ್ಣಯ್ಯನ ತಲೆಮಾರು ಅಂತರದ ಯೋಚನಾ ರೀತಿ ಯಿಂದ ನಮಗೆ ಕಷ್ಟವಾದರೂ, ನಾವು ಅವರನ್ನು ಯಾವಾಗಲೂ ಸಂತೋಷವಾಗಿಯೇ ಇಟ್ಟಿರಲು ಪ್ರಯತ್ನಿಸುತ್ತೇವೆ,

ನಾನು ಮೊದಲೇ ಹೇಳಿದಂತೆ ಅಣ್ಣಯ್ಯ ಅನ್ಯಾಯ ಸಹಿಸುವುದಿಲ್ಲ, ಹಾಗು ಅನ್ಯಾಯ ಮಾಡಿದವರನ್ನು ಬಿಡುವುದಿಲ್ಲ. (ಇದಕ್ಕೆ ಅನೇಕ ಜನರ ವರ್ಗಾವಣೆ ಹಾಗು ನ್ಯಾಯಾಲಯಗಳಲ್ಲಿ ಇರುವ ಕೆಲವು ಕೇಸುಗಳೇ ಸಾಕ್ಷಿ !!). ಇದರಿಂದ, ಇಂದಿನ ಪ್ರಪಂಚದಲ್ಲಿ ಅವರಿಗೆ ನಮ್ಮನ್ನು ಬಿಟ್ಟು ಅನೇಕ ಸ್ನೇಹಿತರು ಇಲ್ಲ. ಬಹಳ ಕೋಪಿಷ್ಠ ರಾದ ಅಣ್ಣಯ್ಯನಿಗೆ ಕೋಪ ಬರದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಕೋಪ ಬಂದುಬಿಟ್ಟರೆ, ಅವರ ಮೊಮ್ಮಕ್ಕಳನ್ನು, ಅಂದರೆ ನಮ್ಮನ್ನು ಬಿಟ್ಟು ಬೇರೆ ಯಾರಿಗೂ ಅವರನ್ನು ಮಾತನಾಡಿಸುವ ಧೈರ್ಯವಿರುವುದಿಲ್ಲ. ಸ್ವಾತಂತ್ರ್ಯ ಪೂರ್ವದ ಜನರ ಆದರ್ಶಗಳ, ವೃತ್ತಾಂತಗಳ ಉತ್ತಮ ದೃಷ್ಟಾಂತ ವ್ಯಕ್ತಿ ನಮ್ಮ ಅಣ್ಣಯ್ಯ.

ಕೊನೆಯದಾಗಿ ಹೇಳುವುದಾದರೆ ನಾವೆಲ್ಲರೂ, ಅಣ್ಣಯ್ಯನಿಂದ ಇಷ್ಟರವರೆಗೆ ಕಲಿತದ್ದೆಲ್ಲಾ ಏನೇನೂ ಅಲ್ಲ. ಅವರ ೮೦ ವರ್ಷ ಜೀವನದ ಅನುಭವದ ಮುಂದೆ ನಮ್ಮ ಅನುಭವಗಳು ಏನೇನೂ ಅಲ್ಲ. ನಮ್ಮ ಕುಟುಂಬದಲ್ಲಿ ಅವರಷ್ಟು ಕಷ್ಟ ಪಟ್ಟ ವರು ಹಾಗು ಶ್ರಮಜೀವಿಗಳು ಬೇರೆ ಯಾರೂ ಇಲ್ಲ. ಆದ್ದರಿಂದ ಅವರು ನಮಗೆ ಮಾರ್ಗದರ್ಶನ ನೀಡುತ್ತ ಇನ್ನೂ ಅನೇಕ ವರ್ಷಗಳು ಬದುಕಬೇಕೆಂಬುದೇ ನನ್ನ ಆಸೆ.

ಕೃತಿದರ್ಶನ

ಭೀಷ್ಮ ಸಂಕಲ್ಪ

ಎಲ್. ಎಸ್. ಶೇಷಗಿರಿರಾವ್

ಮಹಾಭಾರತದ ಭವ್ಯ ವ್ಯಕ್ತಿ ಸಮುದಾಯದಲ್ಲಿ ಗೌರೀಶಂಕರದಂತೆ ಅಚಲವಾಗಿ, ಪಾವನನಾಗಿ, ಮಹಿಮಾನ್ವಿತನಾಗಿ ಎದ್ದುತೋರುವ ಪುಣ್ಯಚರಿತ್ರ ವಜ್ರಹೃದಯದ ಗಂಗಾತನಯ. ಹಲವು ತಲೆಮಾರುಗಳ ಬದುಕಿಗೆ ಸಾಕ್ಷಿಯಾಗಿ ಬಾಳಪ್ರವಾಹವನ್ನು ಕಂಡರಿತ ಜೀವನದ ಮಧ್ಯೆ ಇದ್ದು ಆ ಜೀವನದ ಗತಿಯನ್ನು ನಿರ್ದಿಷ್ಟಗೊಳಿಸುವ ಶಕ್ತಿಯಾಗಿದ್ದರೂ ಅದರಿಂದ ದೂರನಾಗಿ ಅದನ್ನು ಮೀರಿನಿಂತ ಮಹಾಪುರುಷ ಆತ. ಆತನ ಬಾಳಿನಲ್ಲಿ ಕೂಡ ದುರಂತ ಗುಪ್ತವಾಹಿನಿಯಾಗಿ ಹರಿದಿದೆ. ಇಂತಹ ವ್ಯಕ್ತಿಯ ಜೀವನ ಉತ್ತಮವಾದ ನಾಟಕಕ್ಕೆ ವಸ್ತುವಾಗಬಲ್ಲುದು.

ಶ್ರೀ ರಾಮರಾಯರು ಈ ಕಾರ್ಯವನ್ನು ಕೈಗೊಂಡಿದ್ದಾರೆ. ನಾಟಕ ಹದಿನೆಂಟು 'ಪ್ರವೇಶ'ಗಳಲ್ಲಿದೆ. ಭೀಷ್ಮನು ತಂದೆಯ ಸುಖಕ್ಕೆಂದು ಆಜನ್ಮ ಬ್ರಹ್ಮಚರ್ಯವ್ರತವನ್ನು ಕೈಗೊಂಡಂದು ನಾಟಕದ ಕತೆ ಆರಂಭವಾಗಿ, ಶರಶಯ್ಯೆಯ ಮೇಲೆ ಶ್ರೀಕೃಷ್ಣನ ದಿವ್ಯ ಸನ್ನಿಧಿಯಲ್ಲಿ ಇಚ್ಛಾಮರಣಿಯ ಸಾವಿನೊಡನೆ ಮುಕ್ತಾಯವಾಗುವುದು. ಭೀಷ್ಮನ ವಜ್ರಸಂಕಲ್ಪ, ಧರ್ಮಾಧರ್ಮ ಪರಿಜ್ಞಾನ, ಕರ್ತವ್ಯನಿಷ್ಠೆ, ಎಣೆಯರಿಯದ ಬಾಹು ಪರಾಕ್ರಮ, ಗುರುಭಕ್ತಿ ಇವುಗಳ ಮೇಲೆ ಬೆಳಕು ಚೆಲ್ಲಿ ಆ ಧರ್ಮನಿಷ್ಠ ತ್ಯಾಗಮೂರ್ತಿಯ ಭವ್ಯ ವ್ಯಕ್ತಿತ್ವದ ಕಲ್ಪನೆಯನ್ನು ಮಾಡಿಕೊಡಲು ನಾಟಕ ಕರ್ತೃಗಳು ಯತ್ನಿಸಿದ್ದಾರೆ. ತಕ್ಕಮಟ್ಟಿಗೆ ಯಶಸ್ವಿಗಳೂ ಆಗಿದ್ದಾರೆ. ಕೃತಿಯ ಭಾಷೆಯು ಗಾಂಭೀರ್ಯದಿಂದ ಕೂಡಿ ಉದಾತ್ತ ವಿಚಾರ ತರ್ಕಕ್ಕೆ ತಕ್ಕುದಾಗಿದೆ.

ಆದರೆ ನಾಟಕದಲ್ಲಿ ಒಂದೆರಡು ಕುಂದುಗಳು ಎದ್ದು ಕಾಣುತ್ತವೆ. ನಾಟಕ ಒಂದು 'ಏಕ' (unit) ವಾಗಿರವಾಗಿರಬೇಕು. ಆದರೆ ಈ ಕೃತಿ ಹೋಳು ಹೋಳಾಗಿ ಬೀಳುತ್ತದೆ. ಪಾತ್ರಗಳಲ್ಲಿ, ಶೈಲಿಯಲ್ಲಿ ವೈವಿಧ್ಯವಿಲ್ಲ. ಇಲ್ಲಿ ಬರುವ ವ್ಯಕ್ತಿಗಳೆಲ್ಲ ಮಹಾಮಹಿಮರು, ಅರಿಕುಲ ಭೈರವರು, ದಿವ್ಯವಂಶ ಸಂಭೂತರು. ಭಾಷೆ ಯಾವಾಗಲೂ ಗಂಭೀರ. ಮೈದಾನವಿದ್ದರೆ ಪರ್ವತದ ಭವ್ಯತೆ ಎದ್ದುಕಾಣಲು ಸಾಧ್ಯ. ಬಿಳುಪಿದ್ದರೆ ಇತರ ವರ್ಣಗಳು ಎದ್ದುತೋರುವುವು. ಆ ವೈವಿಧ್ಯ ಇಲ್ಲಿ ಕಂಡುಬರುವುದಿಲ್ಲ. ಭೀಷ್ಮನ ಪಾತ್ರದ ನಿರೂಪ

ಇದು 'ಕನ್ನಡನುಡಿ'ಯಲ್ಲಿ ಬಂದಿದ್ದ ವಿಮರ್ಶೆ. ವಿಮರ್ಶಿಸಿದ್ದವರು ಪ್ರೊ॥ ಎಲ್.ಎಸ್. ಶೇಷಗಿರಿ ರಾಯರು. ಅದನ್ನು ಇಲ್ಲಿ ಬಳಸಿಕೊಳ್ಳಲು ಅನುಮತಿಯನ್ನು ಕೊಟ್ಟ ರಾಯರಿಗೆ ವಂದನೆಗಳು ಸಲ್ಲುತ್ತಿವೆ.—ಸಂ.

ಣೆಯೂ ಸಮರ್ಪಕವಾಗಿಲ್ಲ. ಇದಕ್ಕೆ ಕಾರಣ ಮತ್ತೆ ಮತ್ತೆ ಭೀಷ್ಮ ಜಗತ್ತಿನ ಪ್ರಶಂಸೆಗಾಗಿ ಮುಗಿಬೀಳುವಂತೆ ತೋರುವುದು. "ನಳ ನಹುಷ ಭರತಾದಿಗಳು ಸಾಧಿಸಿದ ಮಹಾಧ್ಯೇಯಗಳಿಗಿಂತ ವಿಭಿನ್ನವಾದ ಮಹಾಬ್ರಹ್ಮಚರ್ಯದಿಂದ ನಾನು ಈ ಬ್ರಹ್ಮಾಂಡವನ್ನೇ ಏಕೆ ಅಚ್ಚರಿಗೊಳಿಸಬಾರದು?", "ನಾನು ನಿನಗಾಗಿ ಅದಕ್ಕೂ ಮಿಗಿಲಾಗಿ ಹಸ್ತಿನಾವತಿಯ ಮಹಾಪ್ರಜೆಗಳ ಸೇವೆಗಾಗಿ ಹಿಂದೆ ಎಂತಹ ತ್ಯಾಗವೀರನೂ ಮಾಡದಂತಹ ನನ್ನ ಈ ತ್ಯಾಗವನ್ನೇ ತ್ಯಾಗಮಾಡಿ ಮಹಾತ್ಯಾಗಿಯಾಗಿ ಲೋಕಕ್ಕೊಂದು ನಿದರ್ಶನವನ್ನು ಮಾಡಿಕೊಡಬೇಕೆಂದಿದ್ದೆ."—ಈ ಬಗೆಯ ಮಾತುಗಳು ಸರ್ವಗುಣಸಂಪನ್ನ ದೇವವ್ರತನಿಗೆ ಸಲ್ಲವು. ಭೀಷ್ಮನು ಅಂಬೆಯೊಡನೆ ಆಡುವ ಮಾತುಗಳೂ ಅವನ ಭವ್ಯ ವ್ಯಕ್ತಿತ್ವಕ್ಕೆ, ಮೃದು ಹೃದಯಕ್ಕೆ ತಕ್ಕುವೆಂದು ತೋರುವುದಿಲ್ಲ.

ಒಟ್ಟಿನಲ್ಲಿ ಭಾರತದ ಹಿರಿಯ ವ್ಯಕ್ತಿಯೊಬ್ಬನ ಪರಿಚಯುವನ್ನು ನಾಟಕದ ಮೂಲಕ ಮಾಡಿಕೊಡಲು ಯತ್ನಿಸಿದ ಲೇಖಕರು, ಅವರ ಕೃತಿಯನ್ನು ಹೊರಗೆ ತಂದ ಪ್ರಕಾಶಕರು ಅಭಿನಂದನೀಯರು.

ಧೀಮಂತ ಶೈಲಿ, ಪರಿಶುದ್ಧ ಕಲ್ಪನಾ ವಿಲಾಸ, ಭಾವ ಪ್ರಚೋದಕ ಸನ್ನಿವೇಶ ರಚನೆ, ಹೃನ್ಮನಗಳನ್ನು ಸೂರೆಗೊಳ್ಳುವ ಸುಮಧುರ ಭಾಷೆಯಿಂದ ಕೂಡಿದ 'ನಾಟ್ಯ ಮಂದಾರ' ಹೊಯ್ಸಳ ಸಾಮ್ರಾಜ್ಯದ ಇತಿಹಾಸಕ್ಕೆ ಸಂಬಂಧಿಸಿದ ವಸ್ತುವಿನಿಂದ ಕೂಡಿದ ಕೃತಿ . . . ಐತಿಹಾಸಿಕ ಪಾತ್ರಗಳು ಮತ್ತು ಇನ್ನಿತರ ಕಾಲ್ಪನಿಕ ಪಾತ್ರಗಳು ನಾಟಕಕ್ಕೆ ಜೀವ ತುಂಬಿವೆ . . . ಇಂಥ ಸರ್ವಾಂಗ ಸುಂದರ ಕೃತಿ ನಿರ್ಮಿಸಿ ಕನ್ನಡ ಸಾಹಿತ್ಯಕ್ಕೆ ಸತ್ಕಾಣಿಕೆ ಸಲ್ಲಿಸಿದ ಶ್ರೀರಾಮರಾಯರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

೧೮–೯–೧೯೬೭ ಅರ್ಚಕ ವೆಂಕಟೇಶ

ಕಾವ್ಯ ಕಥೆಯ ರಸದೌತಣ - ಮಹಾಶ್ವೇತೆ ನಾಟಕ

ಜಿ. ಅಶ್ವತ್ಥ ನಾರಾಯಣ

ಸಮೇತನಹಳ್ಳಿ ರಾಮರಾಯರು ಇಂದಿನ ತಲೆಮಾರಿನವರಿಗೆ ಅದರಲ್ಲೂ ನವ್ಯ ಕಾವ್ಯ ಯುಗದವರಿಗೆ ಅಷ್ಟಾಗಿ ಪರಿಚಿತರಲ್ಲದ ಸಾಹಿತಿ. ಏಕೆಂದರೆ ಅವರು ಕಳೆದ ಅರ್ಧ ಶತಮಾನದಿಂದ 'ಭೀಷ್ಮಸಂಕಲ್ಪ' ನಾಟಕದಿಂದ (೧೯೪೭) ೧೯೭೦ರಲ್ಲಿ ಪ್ರಕಟವಾದ 'ವಿಕಾಸ' ಸಾಮಾಜಿಕ ಕಾದಂಬರಿಯವರೆಗೆ ಅವರು ರಚಿಸಿದ ಕೃತಿಗಳು ಕೇವಲ ೩೦. ಹೆಚ್ಚುಕಡಿಮೆ ಎರಡು ವರ್ಷಕ್ಕೊಂದು ಕೃತಿ ಹೊರಬಂದಿದೆ. ಅವರು ಪ್ರಚಾರ ಪ್ರಿಯರಲ್ಲ ಮತ್ತು ಸತ್ಯಪ್ರೇಮಿಗಳು ಅಂತೆಯೇ ನಿಷ್ಠುರವಾದಿಗಳು. ತಾವು ನಂಬಿದ ಮತ್ತು ಆಚರಿಸುವ ಮೌಲ್ಯಗಳಿಗೆ ಬದ್ಧರಾದವರು. ಹೀಗಾಗಿ ಅವರು ಶ್ರೇಷ್ಠ ಸಾಹಿತಿ ಆದರೂ 'ಜನಪ್ರಿಯಸಾಹಿತಿ' ಆಗಲಿಲ್ಲ. ಅದೇನೇ ಇರಲಿ. ಅವರು ಕನ್ನಡಕ್ಕೆ ಅಮೂಲ್ಯ ಕೊಡುಗೆಗಳನ್ನಿತ್ತಿದ್ದಾರೆ ಎಂಬುದು ನಿರ್ವಿವಾದ. ಎಲ್ಲದಕ್ಕಿಂತ ಹೆಚ್ಚಾಗಿ ಮಧ್ಯಮವರ್ಗದ ಒಬ್ಬ ಸಾಮಾನ್ಯವ್ಯಕ್ತಿ ಮನೆತನದ ಹಿನ್ನೆಲೆ, ಸಾಹಿತ್ಯಿಕ ಪರಿಸರ ಹಿರಿಯರ ಕೃಪಾಶ್ರಯ ಯಾವುದೂ ಇಲ್ಲದೆ ಸ್ವಪ್ರಯತ್ನ ಸಾಧನೆಗಳಿಂದ ಕಡುಬಡತನದಲ್ಲಿ ನೊಂದು ಬಸವಳಿದು ಬೆಂಡಾದರೂ ತನ್ನ ಸಾಹಿತ್ಯದ ಚಿಲುಮೆಯನ್ನು ಬತ್ತಿಸಿಕೊಳ್ಳದೆ ಚಿಮ್ಮುತ್ತಿರುವಂತೆ ಸಾಧನೆ ಮಾಡಿದ ಮಹಾನ್‌ವ್ಯಕ್ತಿ. ಈ ದೃಷ್ಟಿಯಲ್ಲಿ ಅನೇಕ ಕನ್ನಡ ಸಾಹಿತಿಗಳಿಗಿಂತ ಭಿನ್ನರಾದ ವಿಶಿಷ್ಟ ವ್ಯಕ್ತಿತ್ವದ ಸಾಹಿತಿಗಳಾದ್ದಾರೆ.

ಸಮೇತನಹಳ್ಳಿ ರಾಮರಾಯರು ಕಥೆ, ಕವನ, ಕಾದಂಬರಿ ಅನುವಾದ ಜೀವನ ಚರಿತ್ರೆ, ಆತ್ಮಕಥೆ ಮಹಾಕಾವ್ಯ ಮೊದಲಾದ ಪ್ರಕಾರಗಳಲ್ಲಿ ಕೆಲಸಮಾಡಿ ಪ್ರಸಿದ್ಧ ಕೃತಿಗಳನ್ನು ರಚನೆ ಮಾಡಿದ್ದರೂ ನಾಟಕಕ್ಷೇತ್ರ ಅವರ ಮೆಚ್ಚಿನ ರಂಗವಾಗಿದೆ. ಹಾಗೆ ನೋಡಿದರೆ ಅವರಿಗೆ ರಂಗಾನುಭವ ಅಷ್ಟಾಗಿ ಇದ್ದಂತಿಲ್ಲ.ಸಾಹಿತ್ಯಾಧ್ಯಯನವೇ ಅವರ ಜೀವಾಳ ಆದರೂ ಅವರು ತಮ್ಮ ಪ್ರತಿಭೆಯಿಂದ ನಾಟಕರಂಗದ ಅನುಭವಿ ಕಲಾವಿದರು ಮೆಚ್ಚಿಕೊಂಡು ಅಭಿನಯಿಸಬಲ್ಲಂಥ ನಾಟಕಗಳನ್ನು ಬರೆದಿರುವುದು ಅಚ್ಚರಿಯ ಸಂಗತಿ. ಅವರ ಮೊದಲನೇ ಕೃತಿಯೇ ಭೀಷ್ಮಸಂಕಲ್ಪ ನಾಟಕಕೃತಿ ಆಗಿದೆ (೧೯೪೭) ತಲಕಾಡುಗೊಂಡ, (೧೯೫೭) ಶಿಲ್ಪಸಂಗೀತ (೧೯೫೯) ರಾಸಲೀಲೆ (೧೯೫೯) ದ್ರೋಹಾಡಂಬರ (೧೯೬೪) ನಾಟ್ಯಮಂದಾರ (೧೯೬೭) ಎಂಬ ದೀರ್ಘ ನಾಟಕಗಳನ್ನು ಕಣ್ಣೀರಹಣ್ಣು (೧೯೫೪) ರೂವಾರಿ ದಾಸೋಜ (೧೯೫೪) ಕಲಾರಾಧನೆ (೧೯೫೬) ಹೆಡೆಯನೆರಳು (೧೯೫೪) ಬಂಗಾರದಬೆಳಸು (೧೯೫೪) (ಈ ೫ ಐತಿಹಾಸಿಕ ನಾಟಕಗಳು ಕಲಾರಾಧನೆ ಎಂಬ ಹೆಸರಿ

ನಲ್ಲಿ ಪುಸ್ತಕ ರೂಪದಲ್ಲಿ ೧೯೬೦ ರಲ್ಲಿ ಪ್ರಕಟವಾಗಿದೆ.) ಊರ್ವಶೀ ಪ್ರಸಂಗ (೧೯೫೨) ಶುಭ್ರಶೀಲೆ ಅಹಲ್ಯೆ (೧೯೫೨) ಸ್ವೀಕಾರ (೧೯೫೧) ಅಸ್ತಮಯ (೧೯೪೭) ಸೀತಾ ದರ್ಶನ (೧೯೪೭) (ಈ ೫ ಏಕಾಂಕ ನಾಟಕಗಳು ಪಿನಾಕಿನಿ ಎಂಬ ಹೆಸರಿನಲ್ಲಿ ೧೯೬೨ ರಲ್ಲಿ ಗ್ರಂಥರೂಪದಲ್ಲಿ ಪ್ರಕಟವಾಗಿದೆ.) ಈ ಪ್ರಕಟಿತ ೧೭ ನಾಟಕಗಳನ್ನಲ್ಲದೆ ಗುರು ದ್ರೋಣ(೮೪ ಪುಟಗಳು) ಧನ್ಯಪಾಂಡವ (೪೪ ಪುಟಗಳು) ಭಾರತಸಂಹಿತೆ (೧೨೯ ಪುಟ ಗಳು) ನಾಟಕಗಳು ಹಸ್ತಪ್ರತಿಯಲ್ಲಿ ಪ್ರಕಟನೆಗೆ ಕಾದುಕೂತಿವೆ. ಈ ಎಲ್ಲ ನಾಟಕಗಳನ್ನು ಗಮನಿಸಿದವರಿಗೆ ಒಂದಂಶ ವೇದ್ಯವಾಗುತ್ತದೆ. ರಾಮರಾಯರಿಗೆ ನಾಟಕ ರಚನೆಯ ಕಲೆ ಚೆನ್ನಾಗಿ ಸಿದ್ಧಿಸಿದೆ. ಐತಿಹಾಸಿಕ, ಪೌರಾಣಿಕ ನಾಟಕಗಳನ್ನು ಏಕಾಂಕ ನಾಟಕಗಳನ್ನು ಚೆನ್ನಾಗಿ ಬರೆಯಬಲ್ಲರು. ಅವರ ನಾಟಕೀಯ ಪ್ರತಿಭೆಯನ್ನು ಅವರ ಗದ್ಯಕೃತಿಗಳ ಸಂಭಾಷಣೆಗಳ ಸನ್ನಿವೇಶಗಳಲ್ಲೂ ಕಾಣಬಹುದಾಗಿದೆ. ಅವರ ಎಲ್ಲಾ ನಾಟಕಗಳ ಸಮಗ್ರ ಸಮೀಕ್ಷೆ ಮಾಡಿ ಅವರ ಕೊಡುಗೆ ಕನ್ನಡ ನಾಟಕ ಸಾಹಿತ್ಯಕ್ಕೆ ಎಷ್ಟರ ಮಟ್ಟಿಗೆ ಸಂದಿದೆ ಎಂಬುದನ್ನು ವಿಮರ್ಶಕರು ಮಾಡಬೇಕಾಗಿದೆ.

ಮಹಾಶ್ವೇತಾ ನಾಟಕ ಬಾಣಭಟ್ಟ ಸಂಸ್ಕೃತದಲ್ಲಿ ರಚಿಸಿದ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ ನಾಗವರ್ಮನ ಚಂಪೂಕಾವ್ಯವನ್ನು ಆಧರಿಸಿ ರಚಿಸಿದ ನಾಟಕವಾಗಿದೆ. ಮಹಾಶ್ವೇತೆ ಪಾತ್ರವನ್ನೇ ಗಮನದಲ್ಲಿಟ್ಟುಕೊಂಡು ೧೪ ದೃಶ್ಯಗಳಲ್ಲಿ (೬೪+೮ ಪುಟಗಳು ಪ್ರಕಾಶಕರು ; ಎಚ್. ಎನ್. ರಾವ್, ಬ್ರದರ್ಸ್, ಚಿಕ್ಕಪೇಟೆ ಬೆಂ.–೨, ಬೆಲೆ ೧೪ ಆಣೆಗಳು, ರಚನೆ ೨೮–೩–೧೯೪೭ ಬೆಂಗಳೂರು ಪ್ರಕಟಣೆ ೨೧–೯–೧೯೪೯ ಆಕಾರ ಕಿರೀಟ ಅಷ್ಟದಲ) ರಚಿತವಾದ ಈ ನಾಟಕ ೧೯೪೭ರಲ್ಲಿ ರಚಿತ ವಾಯಿತು. ೧೮೫೩ನೆಯ ಜನವರಿಯಲ್ಲಿ ಹಾಸನದ ಪುರಸಭೆಯವರು ಏರ್ಪಡಿಸಿದ್ದ ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯಲ್ಲಿ ತರೀಕೆರೆಯ ಕಲಾಮಂಡಳಿಯವರು ಅಭಿನಯಿ ಸಿದ ಈ ನಾಟಕಕ್ಕೆ ಪ್ರಥಮ ಬಹುಮಾನ ದೊರೆಯಿತು.

ಕಥೆಯ ಸಾರವನ್ನು ಚೆನ್ನಾಗಿ ನಾಟಕಕ್ಕೆ ಅಳವಡಿಸಿಕೊಂಡಿರುವುದು ಈ ನಾಟಕದ ವಿಶೇಷಗಳಲ್ಲಿ ಒಂದು. "ಕಾವ್ಯದ ತುಂಬಾ ಸಾತ್ತ್ವಿಕ ಸೌಂದರ್ಯವನ್ನು ಹರಡಿ ಚೆಲುವಿ ನಿಂದ ಮೆರೆವ ಪುಣ್ಯ ತಪಸ್ವಿನಿ ಮಹಾಶ್ವೇತೆಯ ಚೆಲುವು, ರಸಿಕತೆ, ಸಹನೆ, ಸಂಯಮ, ಶುದ್ಧ ಶೀಲಗಳನ್ನು" ಚಿತ್ರಿಸಿರುವ ರೀತಿ ಕಂಡಾಗ "ಬಾಣಕವಿಯ ಮೂಲ ಗ್ರಂಥವನ್ನು ಓದಿದ ಜನರಿಗೂ ಈ ನಾಟಕ ಓದುವಾಗ ಬೇಸರವೆನಿಸದು" ಎಂಬ ಮಾತು ಉತ್ಪ್ರೇಕ್ಷೆ ಎನಿಸುವುದಿಲ್ಲ.

ಮೊದಲಿನಿಂದಲೂ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಾಸಕ್ತರಾದ 'ರಾಸ' ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಯಾಗಿ ಹೊರಬಿದ್ದ ಕರ್ನಾಟಕ ಕಾದಂಬರೀ ಸಂಗ್ರಹವನ್ನು ಓದಿ ಅದರ ಸೊಗಸಿಗೆ ಮಾರುಹೋಗಿದ್ದರು. ಅಂಥ ಸಂದ ರ್ಭದಲ್ಲಿ "ಆ ಕಾವ್ಯ ಸಂಗ್ರಹ ಇಂಟರ್ ಮೀಡಿಯೆಟ್ ತರಗತಿಗೆ ಪಠ್ಯವಾಗಿದ್ದಾಗ ವಿಸೀ ಯವರು ಅದನ್ನು ತರಗತಿಯಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಬೋಧಿಸು

ತ್ತಿದ್ದರು. ಅದನ್ನು ಅವರ ವಿದ್ಯಾರ್ಥಿಯೊಬ್ಬನು ನನ್ನ ಕಣ್ಣಿಗೆ ಕಟ್ಟುವಂತೆ ವಿವರಿಸು ತ್ತಿದ್ದನು. ಆ ಇಂಪು, ಮತ್ತು ಸೊಗಸಗಳು ನನ್ನ ಮೈಮನಗಳನ್ನು ತುಂಬಿಕೊಂಡಿದ್ದವು. ಈ ವೇಳೆಗೆ ನನಗೆ ಪದ್ಯದ ಹುಚ್ಚು ಬಿಟ್ಟುಹೋಗಿ ನಾಟಕವನ್ನು ಹೆಣೆಯುವ ಆಟ ಆರಂಭವಾಗಿ ಹೋಗಿತ್ತು. ಈ ಕಾದಂಬರೀ ಕಾವ್ಯದಲ್ಲಿ ಕತೆ ಒಂದರಲ್ಲಿ ಒಂದು ಹೆಣೆದು ಕೊಂಡು ತೊಡರು ತೊಡರಾಗಿ ನನಗೆ ಕಾಣಿಸಿತು. ನಾನು ಈ ಕತೆಗಳೆಲ್ಲವನ್ನೂ ಬಿಡಿಸಿ, ಮೊದಲಿನಿಂದ ಕೊನೆಯವರೆಗೆ ಒಂದೇ ಸಮನೆ ಹರಿದ ನೀರಿನಂತೆ ಬಿಡಿಸಿಡಬಾರ ದೇಕೆ ಎಂಬುದು ಅಂಕುರಿಸಿದಾಗ 'ಮಹಾಶ್ವೇತೆ' ನಾಟಕ ಹುಟ್ಟಿಕೊಂಡಿತು" (೧೯೪೭). ಲೇಖಕರ 'ಆತ್ಮದರ್ಶನ'ವೆಂಬ ಸಂಕ್ಷಿಪ್ತ ಆತ್ಮಕಥನ ಮತ್ತು ಸಾಹಿತ್ಯಿಕ ಹಿನ್ನೆಲೆಯ ಹಸ್ತಪ್ರತಿಯಿಂದ ಉದ್ಧೃತ) ಎಂಬುದಾಗಿ ಈ ನಾಟಕದ ರಚನೆಯ ಹಿನ್ನೆಲೆಯನ್ನು ಲೇಖಕರು ಹೇಳಿಕೊಂಡಿದ್ದಾರೆ. ಈ ನಾಟಕದ ಕಥೆಯನ್ನೇ ನೀಳ್ಗತೆಯನ್ನಾಗಿ 'ಮಹಾ ಶ್ವೇತೆ' ಎಂಬ ಹೆಸರಿನಿಂದಲೇ ೧೯೪೯ರಲ್ಲಿ ರಚಿಸಿದಾಗ ಮೈಸೂರು ಸಂಸ್ಥಾನದ ವಯ ಸ್ಕರ ಶಿಕ್ಷಣ ಸಮಿತಿ ಪ್ರಕಟಿಸಿತು. ಅದು ಜನಪ್ರಿಯವಾಗಿ ೧೯೬೦ರಲ್ಲಿ ಮರುಮುದ್ರಣ ಕಂಡಿತು.

ಇಷ್ಟು ಜನಪ್ರಿಯ ಕಥಾವಸ್ತುವನ್ನು ಒಳಗೊಂಡ ಈ ನಾಟಕದಲ್ಲಿ ಗುರಿ "ಇಂದ್ರಿಯ ಲೋಲುಪದ ಪ್ರೇಮಕ್ಕೆ ಪ್ರಾಯಶ್ಚಿತ್ತ ತಪ್ಪಿದ್ದಲ್ಲ ನೈಜವಾದ ಆತ್ಮ ಸಂಮಿಲನದ ಪ್ರೇಮಕ್ಕೆ ಎಂದಾದರೂ ಜಯವಿದೆ ಎಂಬುದು ಲೇಖಕರು ತೋರಿಸಿ ಕೊಡ ಹೊರಟ ನೀತಿ" ಎಂದು ವಿಮರ್ಶಕರು ಗುರುತಿಸಿದ್ದಾರೆ. ನಾಟಕದ ಭಾಷೆ ಶೈಲಿ ಜಿ. ವರದರಾಜರಾವ್ ಅವರು ಹೇಳಿದಂತೆ "ಗಂಭೀರವಾದ ಭಾಷೆ ; ಬಿಗಿಯಾದ ಶೈಲಿ ; ಭಾವಗರ್ಭಿತವಾದ ಸಮಯ ಸನ್ನಿವೇಶಗಳು ; ಉದಾತ್ತವಾದ ಕಲ್ಪನೆಗಳು ; ಸುಸ್ಕೃತವಾದ ದೃಷ್ಟಿ ಇವುಗಳಿಂದ ಲೇಖಕರ ಈ ಪ್ರಯತ್ನ ಶ್ಲಾಘನೀಯವಾಗಿದೆ." ಕರ್ಣಾಟಕ ಕಾದಂಬರಿಯ ಕಥಾಭಾಗವನ್ನು ನಾಟಕಕ್ಕೆ ಅಳವಡಿಸುವಲ್ಲಿ ಲೇಖಕರು ಮೂಲಕೃತಿಯ ಸ್ವಾರಸ್ಯ, ಸೌಂದರ್ಯಗಳು ಅಳಿಯದಂತೆ ನಾಟಕರೂಪದಲ್ಲಿ ಸರಳವಾಗಿ ಬರೆದು ಯಶಸ್ವಿಗಳಾಗಿದ್ದರೂ, ಬಹುಶಃ ಬರವಣಿಗೆಯಲ್ಲಿ ಸಾಕಷ್ಟು ಪಳಗದಿದ್ದ ಕಾರಣದಿಂದಲೋ ಏನೋ (ಏಕೆಂದರೆ ಇದು ಅವರ ಮರಚಲು ನಾಟಕಕೃತಿ) ರಂಗಾ ನುಭವ ಹೆಚ್ಚಾಗಿಲ್ಲದ ಕಾರಣದಿಂದಲೋ ಅಥವಾ ಸ್ವಯಂ ನಟರಾಗಿ ವಿಶೇಷಾನುಭವ ಇಲ್ಲದಿದ್ದರಿಂದಲೇ ಏನೋ, ಕೆಲವೊಂದು ದೋಷಗಳು ಈ ನಾಟಕದಲ್ಲಿ ಇಣುಕಿವೆ. ಕೆಲವು ದೃಶ್ಯಗಳಲ್ಲಿ ಸಂಭಾಷಣೆಗಳು ತುಸು ದೀರ್ಘ ಸಂಭಾಷಣೆಗಳಾಗಿವೆ. ಯಾವುದಾದರೂ ಒಂದಲ್ಲ ಒಂದು ಬಗೆಯಲ್ಲಿ ನವೀನ ದೃಷ್ಟಿಯೂ ಮಿಳಿತವಾಗದಿರುವ ಕೊರತೆ ಸ್ವಲ್ಪ ಮಟ್ಟಿಗೆ ಕಾಣುತ್ತದೆ. ಹೀಗೆ ಒಂದೆರಡು ಕೊರತೆಗಳು ಈ ನಾಟಕದಲ್ಲಿ ವಿಮರ್ಶಕರ ದೃಷ್ಟಿಗೆ ಕಾಣಬಹುದಾದರೂ ಅವೆಲ್ಲವನ್ನೂ ಮೀರಿ ಸಹೃದಯರ ಓದಿಗೆ, ಕಲಾವಿದರ ಅಭಿನಯ ಪ್ರದರ್ಶನಕ್ಕೆ ಸಾಕ್ಷಿಯಾಗಬಲ್ಲ ನಾಟಕೀಯ ಗುಣದಿಂದ ಕೂಡಿದ ಈ ನಾಟಕ ಸಾಕಷ್ಟು ಯಶಸ್ವಿಕೃತಿಯಾಗಿದೆ. ನಾಗವರ್ಮನ ಕಾದಂಬರಿಯ ವಸ್ತುವನ್ನು ಹೃದಯಂ

ಗಮವಾಗಿ ರಸಿಕರಿಗೆ ಪರಿಚಯು ಮಾಡಿಕೊಡುತ್ತದೆ. ಅರ್ಧಶತಮಾನದ ಹಿಂದೆ ಐವತ್ತರ ದಶಕದಲ್ಲಿ ಕನ್ನಡದಲ್ಲಿ ಬಂದಿರುವ ನಾಟಕಗಳನ್ನು ಗಮನಿಸಿದವರಿಗೆ ಆ ಅವಧಿಯಲ್ಲಿ ಪ್ರಕಟವಾದ ನಾಟಕಗಳಲ್ಲಿ ಇದೊಂದು ಉತ್ತಮ ನಾಟಕವಾಗಿದೆ ಎಂಬುದು ವೇದ್ಯ ವಾಗುತ್ತದೆ.

ಶ್ರೀ ಸಮೇತನಹಳ್ಳಿ ರಾಮರಾಯರು ಕನ್ನಡ ಸಾಹಿತ್ಯ ರಂಗದಲ್ಲಿ ಒಂದು ಪ್ರೌಢ ಗದ್ಯ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ಪೌರಾಣಿಕ ಭಾವ ಸನ್ನಿವೇಶಗಳನ್ನು ಆಧುನಿಕ ಮನೋಭಾವಕ್ಕೆ ಹೊಂದಿಸುವಂತೆ ಹಳಗನ್ನಡದ ಪದ ಬಂಧಗಳಿಂದ ಪ್ರಾಚೀನತೆಯ ಕಳೆ ಕಟ್ಟಿ ಕತೆ ನಾಟಕಗಳನ್ನು ಶ್ರೀಯುತರು ಹೆಣೆಯುತ್ತಾರೆ. ಅವರ ಕೃತಿಗಳನ್ನು ಓದುವಾಗ ಚಿತ್ರರಂಗದಲ್ಲಿ ಪಂಪ ರನ್ನರ ವಾಣಿ ಮೊಳಗಿದಂತೆ ಆಗುತ್ತದೆ . . . 'ಸ್ವರ್ಗಸೋಪಾನ'ವು ತನ್ನ ರಮ್ಯ ಶೈಲಿಯಲ್ಲಿ ಕಾಂತಿಯಿಂದ ಓದುಗರನ್ನು ಸೆರೆ ಹಿಡಿದು ನಿಲ್ಲಿಸುತ್ತದೆ. ವನ ಶ್ರೇಷ್ಠ ಜ್ಯೋತ್ಸ್ನಾ ರಂಗದಲ್ಲಿ ಪ್ರಾತಸ್ಸಂಧ್ಯೆಯಲ್ಲಿ ಚಿತ್ತ ಸಂಚಾರವಾಗಿ ಅನುಪಮ ರಸಾನುಭೂತಿಯುಂಟಾಗುತ್ತದೆ.

೯–೩–೧೯೬೪ ಆರ್. ಜಿ. ಕುಲಕರ್ಣಿ

ಎಲೆಮರೆಯ ಹೂ

ಎಂ. ಆರ್. ಸುನಂದ

ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮ ಸಾಧನೆಗಳಿಂದ, ಪಾಂಡಿತ್ಯದಿಂದ ಒಂದು ಹಿರಿಯ ಸ್ಥಾನವನ್ನು ಸ್ಥಾಪಿಸಿಕೊಂಡವರಾದ ಶ್ರೀ ಸಮೇತನಹಳ್ಳಿ ರಾಮರಾಯರು ಹಿರಿಯರು, ಪೂಜ್ಯರು, ನನಗೆ ತಂದೆಯ ಸಮಾನರಾದಂತವರು. ಅಂತಹ ಹಿರಿಯ ವ್ಯಕ್ತಿಯ ಕಾದಂಬರಿಯ ಬಗ್ಗೆ ನನಗೆ ಅನಿಸಿದ್ದನ್ನು ಬರೆಯಲು ಅವಕಾಶ ಸಿಕ್ಕಿರುವುದು ನನ್ನ ಜೀವನದ ಅತ್ಯಂತ ಮಹತ್ವದ ವಿಷಯವೆಂದು ನಾನು ತಿಳಿದಿದ್ದೇನೆ.

ಶ್ರೀಯುತರು ಕೃಷಿಮಾಡಿರುವ ದೊಡ್ಡ ಕ್ಷೇತ್ರದಲ್ಲಿ 'ಎಲೆ ಮರೆಯ ಹೂ' ಒಂದು ಸರಳ, ಸುಂದರ, ಸಣ್ಣ, ಸಾಮಾಜಿಕ ಕಾದಂಬರಿ. ಐವತ್ತರ ದಶಕದಲ್ಲಿ ರಚಿತವಾಗಿರುವ ಈ ಕಾದಂಬರಿಯ ವಿಷಯ, ಸಹಜವಾಗಿಯೇ ಗಾಂಧೀಜಿಯವರ ವಿಚಾರ, ಆದರ್ಶಗಳಿಂದ ಪ್ರಭಾವಿತವಾಗಿರುವ ರಾಮರಾಜ್ಯದ ಕನಸು, ಬ್ರಿಟಿಷರ ತುಳಿತಕ್ಕೆ ಒಳಗಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಆರ್ಥಿಕವಾಗಿ ತೊಳಲುತ್ತಿದ್ದ ಜನತೆಗೆ. ತಮ್ಮನ್ನು ಮೇಲೆತ್ತುವ ತಿಳುವಳಿಕೆಯುಳ್ಳ, ಒಳ್ಳೆಯ ನಾಯಕತ್ವ ಅಂಶಗಳನ್ನುಳ್ಳ ಯುವಕರ ಆವಶ್ಯಕತೆ ವಿಪರೀತವಾಗಿತ್ತು. ಸದ್ದಿಲ್ಲದ ಸಮಾಜಸೇವೆ ಎಂದಿಗೂ ಅನಿವಾರ್ಯ, ಸ್ವಾಗತಾರ್ಹ.

ಈ ಎಲ್ಲಾ ಅನಿವಾರ್ಯತೆಗಳನ್ನು ಪೂರೈಸಬಲ್ಲ, ಬರಿಯ ಮಾತಿನಲ್ಲಲ್ಲದೆ, ಕೃತಿಯಲ್ಲೂ ಮೇಲ್ಗೈ ಪಡೆದಿದ್ದ, ತಾನು ಹುಟ್ಟಿಬೆಳೆದ ಹಳ್ಳಿಯ ಉದ್ಧಾರಕ್ಕಾಗಿ ಶ್ರಮಿಸಿದ, ಧೀಮಂತ ಯುವಕ ಮುಕುಂದರಾಯನ ಕಥೆಯೇ 'ಎಲೆಮರೆಯ ಹೂ'.

ಕಾದಂಬರಿಯ ಆರಂಭದಲ್ಲೇ ಮುಕುಂದರಾಯ, "ಮಹಾತ್ಮರನ್ನು ಸೆರೆಮನೆಗೆ ಹಾಕಿದ್ದಕ್ಕೆ ರಾಜೀನಾಮೆ ಅಷ್ಟೇ" ಎನ್ನುತ್ತಾನೆ. ಕಾದಂಬರಿ ಸ್ವಾತಂತ್ರ್ಯ ಆಂದೋಳನದ ಬಗ್ಗೆ ಇರಬಹುದು ಎಂಬಷ್ಟು ಶಕ್ತಿಯುತವಾಗಿದೆ, ಈ ವಾಕ್ಯ. ಆದರೆ ಕಾದಂಬರಿ ಈ ನಿಟ್ಟಿನಲ್ಲಿ ಸಾಗುವುದಿಲ್ಲ. ಗ್ರಾಮಗಳೇ ಜೀವಾಳವಾಗಿರುವ ನಮ್ಮ ದೇಶದಲ್ಲಿ ಯಾವುದೇ ಉದ್ಧಾರಕಾರ್ಯವಾಗಬೇಕಾದರೂ ಅದು ಮೂಲದಿಂದಲೇ ಆಗಬೇಕು ಎಂಬ ತಿಳುವಳಿಕೆ

ಈ ಸಾಮಾಜಿಕ ಕಾದಂಬರಿ ೧೯೫೩, ೧೯೫೪, ೧೯೫೭ ಮತ್ತು ೧೯೫೮ರಲ್ಲಿ ಒಟ್ಟು ನಾಲ್ಕು ಮುದ್ರಣಗಳನ್ನು ಕಂಡಿದೆ. ಇದು ೧೯೫೭–೫೮ ಮತ್ತು ೧೯೫೮-೫೯ನೆಯ ವರುಷಗಳಲ್ಲಿ, ಬೆಂಗಳೂರು ಕೋಲಾರ ಮತ್ತು ತುಮಕೂರು ಜಿಲ್ಲೆ ಪ್ರೌಢಶಾಲೆಗಳ ಎರಡನೆಯ ತರಗತಿಯ ಲಘುಪಠ್ಯವಾಗಿ ಅಂಗೀಕಾರವಾಗಿದ್ದಿತು.

ಯುಳ್ಳ ಯುವಕನೊಬ್ಬ ಸುಭದ್ರವಾದ ತನ್ನ ಸರ್ಕಾರಿ ನೌಕರಿಗೆ ರಾಜೀನಾಮೆ ಇತ್ತು, ತನಗೆ ಜನ್ಮ ನೀಡಿ ಬೆಳೆಸಿದ ತಿಳಿತೊರೆ ಗ್ರಾಮದ ಉದ್ಧಾರಕ್ಕಾಗಿ ಅಲ್ಲಿಗೆ ತೆರಳಿ, ಅಲ್ಲಿನ ಜನರನ್ನು ಮೇಲೆತ್ತುವ ಒಂದು ಕ್ರಿಯೆಯೇ ಈ ಕಾದಂಬರಿ. ನಾಯಕ ತನ್ನ ಕೆಲಸಕ್ಕೆ ರಾಜೀನಾಮೆ ಕೊಡುವ ಕ್ರಿಯೆಯಿಂದ ಆರಂಭವಾಗುವ ಈ ಕಾದಂಬರಿ, ಹಂತ ಹಂತ ವಾಗಿ ಆ ಪಾತ್ರವನ್ನು ಬೆಳೆಸುತ್ತಾ, ತನ್ಮೂಲಕ ಗ್ರಾಮಸ್ಥರ ಬದುಕನ್ನು ಬೆಳೆಸುತ್ತಾ ಹೋಗುತ್ತದೆ. ತನ್ನ ಮನೆಯ ಹಿತ್ತಲಲ್ಲೇ ಕೃಷಿ ಆರಂಭ ಮಾಡುವ (ಮನೆಯವರ ವಿರೋಧವಿದ್ದರೂ) ಕೆಲಸದಿಂದ ಆರಂಭವಾಗುವ ಅವನ ಸಮಾಜೋದ್ಧಾರಕ ಕಾರ್ಯ ನಿಧಾನವಾಗಿ ಹೆಚ್ಚುತ್ತಾ, ಕೊನೆಗೆ ಅವನಿಲ್ಲದೆಯೂ ಎಲ್ಲ ಕ್ಷೇತ್ರಗಳ ಕೆಲಸಗಳೂ ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುವಂತಾಗುತ್ತದೆ.

ಕಾದಂಬರಿಯಲ್ಲಿ ಬರುವಂತೆ "ಹಳ್ಳಿಯಲ್ಲಿ ಸಮಾಜದ ಒಂದು ಕಟ್ಟು ಸಡಿಲವಾಗಿ ಒಗ್ಗಟ್ಟಿಲ್ಲದೆ, ಒಮ್ಮತವಿಲ್ಲದೆ, ಹೊಂದಾಣಿಕೆಯಿಲ್ಲದೆ ತಮ್ಮ ನಿತ್ಯ ಜೀವನದ ಎಲ್ಲ ಆವಶ್ಯಕತೆಗಳಿಗೂ ಪರಊರುಗಳನ್ನು ಆಶ್ರಯಿಸಬೇಕಾಯಿತು." ಎನ್ನುವ ವಾಕ್ಯ ಕಾದಂಬರಿಯ ಜೀವಾಳ. ನಾಯಕ ತನ್ನ ಗ್ರಾಮಕ್ಕೆ ಹಿಂದಿರುಗುವವರನ್ನು ತಿಳಿತೊರೆಯ ಲ್ಲಿದ್ದ ಸಾಮಾಜಿಕ ಪರಿಸ್ಥಿತಿಯನ್ನು ಈ ವಾಕ್ಯ ಬಿಂಬಿಸುತ್ತಿದೆ. ಗ್ರಾಮಸ್ಥರಲ್ಲಿ ಒಗ್ಗಟ್ಟು, ಹೊಂದಾಣಿಕೆಗಳನ್ನು ತಂದು ದೈನಂದಿನ ಆವಶ್ಯಕತೆಗಳಿಗೆ ಪರಊರುಗಳನ್ನು ಆಶ್ರಯಿ ಸದೆ, ಸ್ವಾವಲಂಬಿಗಳಾಗಿ ಪರಿಪೂರ್ಣ ಸುಸಂಸ್ಕೃತ ಜೀವನವನ್ನು ನಡೆಸುವಂತೆ ಮಾಡು ವುದೇ ನಾಯಕ ಮುಕುಂದರಾಯನ ಗುರಿಯಾಗುತ್ತದೆ. ಅದೇ ಜೀವನದ ಒಂದು 'ಮಿಷನ್' ಆಗುತ್ತದೆ.

ಎಲ್ಲ ಕಾಲದ, ಎಲ್ಲ ದೇಶದಂತೆ ಈ ಗ್ರಾಮದಲ್ಲೂ ಕುತಂತ್ರಿಗಳು, ಜನಗಳ ಅಜ್ಞಾನವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುವ ರಾಜಕಾರಣಿಗಳು, ಜಾತೀ ಯತೆಯಿಂದುಂಟಾದ ಗುಂಪುಗಾರಿಕೆ, ಒಳ್ಳೆಯ ಕೆಲಸವನ್ನು ಕೆಡಿಸಲೆಂದೇ ಇರುವ ದುಷ್ಟ ಶಕ್ತಿಗಳು—ಇವೆಲ್ಲಾ ತಿಳಿತೊರೆಯಲ್ಲೂ ಇವೆ. ತನ್ನ ಜಾಣತನದಿಂದ, ಒಳ್ಳೆಯತನದಿಂದ ಇವೆಲ್ಲವೂ ಗೌಣವಾಗುವಂತೆ ಮಾಡಿ, ಜನಗಳ ಮನಸ್ಸನ್ನು ಉತ್ತಮ ಜೀವನದತ್ತ ತಿರುಗಿಸುವಂತೆ ಮಾಡುವುದು ಕಥಾನಾಯಕನ ಕ್ರಿಯಾಶಕ್ತಿಗೆ ದ್ಯೋತಕ.

ಕಥಾನಾಯಕ ಸೃಷ್ಟಿಸುವ 'ಒಕ್ಕಲು ಕೂಟ' ಎಲ್ಲ ಪ್ರಗತಿಗೂ ಜೀವಾಳವಾಗು ತ್ತದೆ. ಸಹಕಾರಿ ಪದ್ಧತಿಯಿಂದ ಏನನ್ನಾದರೂ ಸಾಧಿಸಬಹುದು ಎಂಬ ಉನ್ನತ ವಿಚಾರ ಕಾದಂಬರಿಯ ಪ್ರತಿಹಂತದಲ್ಲೂ ಪ್ರತಿಧ್ವನಿಸುತ್ತಾ ಹೋಗುತ್ತದೆ. ಪಟೇಲ ಮರಿಗೌಡ ನಿಗೆ, ಮುಕುಂದರಾಯ ಹೇಳುವ "ಶ್ರದ್ಧೆ ಒಂದಿದ್ದರೆ ಯಾವುದು ತಾನೆ ಅಸಾಧ್ಯ" ಎಂಬ ಮಾತೇ ಗ್ರಾಮೋದ್ಧಾರದ ಮೂಲಮಂತ್ರವಾಗುತ್ತಿದೆ.

ಒಕ್ಕಲುಕೂಟದ ಸ್ಥಾಪನೆ, ಗ್ರಂಥಾಲಯದ ಆರಂಭ, ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದು, ಎಲ್ಲ ವರ್ಣದವರಿಗೂ ಸಂಸ್ಕೃತ ಹೇಳಿಕೊಡುವುದು, ಕೆಂಚಣ್ಣ ಸೊಣ್ಣಪ್ಪರ ಮಧ್ಯೆ ಇದ್ದ ಹಗೆಯನ್ನು ಹೋಗಲಾಡಿಸುವುದು, ವಾರ್ಷಿಕ ಸುಗ್ಗಿಹಬ್ಬಕ್ಕೆ

ಮುಖ್ಯ ಅತಿಥಿಯಾಗಿ ಪಕ್ಕದ ಊರಿನ ಕವಿಗಳನ್ನು ಕರೆಸುವುದು, ಚುನಾವಣಾ ಸಮಯ ದಲ್ಲಿ ಜನ ಕೆಟ್ಟ ಆಮಿಷಗಳಿಗೆ ಬಲಿಯಾಗದಂತೆ ನೋಡಿಕೊಳ್ಳುವುದು–ಇವು ಕಾದಂಬ ರಿಯ ಕೆಲವು ಪ್ರಮುಖ ಹಂತಗಳು. ತಿಳಿವಳಿಕೆ ಇಲ್ಲದ ಜನಗಳ ಮಧ್ಯೆಯೇ ಬದುಕಿ ಈ ಎಲ್ಲ ಕೆಲಸಗಳನ್ನು ಅವರ ಮೂಲಕವೇ ಸುಸೂತ್ರವಾಗಿ ನಡೆಸುವುದು ಎಷ್ಟು ಕಷ್ಟಸಾಧ್ಯ ವೆಂದು ಗ್ರಾಮೀಣ ಬದುಕಿನ ಪರಿಚಯವಿರುವವರೆಲ್ಲರಿಗೂ ತಿಳಿದಿರುವ ಸಂಗತಿ. ವ್ಯಕ್ತಿ ಗಳು ಮಾಡುವ ಕೆಲಸದಿಂದಲೇ ಅವರನ್ನು ಗುರ್ತಿಸುವ ನಿಜ ಅರ್ಥದ ವರ್ಣಾಶ್ರಮ ಧರ್ಮ ಕಾದಂಬರಿಯಲ್ಲಿ ಪ್ರತಿಫಲಿತವಾಗಿದೆ.

ಇಲ್ಲಿನ ಕಥಾನಾಯಕ ತಾನು ಮಾಡುವ ಯಾವುದೇ ಕೆಲಸವನ್ನು ಡಂಗುರ ಹೊಡೆ ಯದೆ ಮಾಡುತ್ತಾನೆ ಎಂಬುದು ಗಮನಿಸಬೇಕಾದ ಅಂಶ. ಉನ್ನತ ಕಾರ್ಯಗಳನ್ನು ಮಾಡುತ್ತಿದ್ದಾನೆಂಬ ಕಲ್ಪನೆಯೇ ಇತರರಿಗೆ ಹುಟ್ಟದಂತೆ ಸತ್ಕಾರ್ಯಗಳನ್ನು ಎಸಗುತ್ತಾ ಹೋಗುತ್ತಾನೆ. ಎಂತಹ ಕ್ಲಿಷ್ಟ ಸಂದರ್ಭದಲ್ಲೂ ಜನರನ್ನು ಉದ್ರಿಕ್ತಗೊಳಿಸದೆ ಕೆಲಸ ನಡೆಸಿಕೊಂಡು ಹೋಗಲು ಪ್ರಯತ್ನಿಸುತ್ತಾನೆ.

ಶ್ರಮ ಜೀವನದಲ್ಲಿ ಅಚಲ ವಿಶ್ವಾಸವಿದ್ದ ಆತ "ಕೈಕೆಸರಾದರೆ ಬಾಯ್ ಮೊಸರು" ಎಂಬ ತತ್ತ್ವವನ್ನು ಅಲ್ಲಿನ ಜನಕ್ಕೆ ಬಿತ್ತುತ್ತಾನೆ. ಆಳರಸರ ಕಲ್ಪನೆಗೆ ಎಡೆಯೇ ಕೊಡದೆ, ಗ್ರಾಮಸ್ಥರ ಪ್ರತಿಕಾರ್ಯದಲ್ಲೂ ತನ್ನನ್ನು ತಾನು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳು ತ್ತಾನೆ.

A Fool at forty is a Fool for Ever' ಎಬ ಆಂಗ್ಲ ನಾಣ್ನುಡಿ ಇದೆ. ಸ್ವಾತಂತ್ರ್ಯ ಬಂದು ೫೦ ವರ್ಷಗಳಾದರೂ, ನಮ್ಮ ಮೂಲಭೂತ ಆವಶ್ಯಕತೆಗಳನ್ನು ಸಹ ಪೂರೈಸಿಕೊಳ್ಳಲು ಸಾಧ್ಯವಾಗದೆ ಬಳಲುತ್ತಿರುವ ನಮಗೆ ಕಾದಂಬರಿಯಲ್ಲಿ ಬರುವ ಅನೇಕ ವಿಚಾರಗಳು ಇಂದಿಗೂ ಪ್ರಸ್ತುತವಾಗಿದೆ.

"ಕಲಿತು ಹಳ್ಳಿಯಿಂದ ದೂರವಾಗುವುದಕ್ಕಿಂತ, ಕಲಿತು ಜನುಮಕೊಟ್ಟ ಭೂಮಿಗೆ. ಬೆಳೆಸಿದ ಜನಕ್ಕೆ, ಒಡ ಬಳೆದ ಒಕ್ಕಲಿಗೆ ಸಾಸುವೆಯಷ್ಟಾದರೂ ಸೇವೆ ಮಾಡುವೆನಾದರೆ. ದೇಶ ಸೇವೆಗೆ, ಈಶ ಸೇವೆಗೆ ಅದೇ ಮೊದಲ ಮೆಟ್ಟಿಲು" ಎಂದು ಕಥಾನಾಯಕ ಹೇಳುವ ಮಾತುಗಳು ಇಂದಿನ ಪ್ರತಿ ಯುವಕ ಯುವತಿಯರೂ ಅನುಸರಿಸಬೇಕಾದ ವಿಷಯ.

ಇಂದು ಕಲಿತ ಯುವ ಜನತೆ ವಿದೇಶಕ್ಕೆ ಹಾರಿ ತಮ್ಮ ಜ್ಞಾನವನ್ನೆಲ್ಲಾ ಹೊರ ದೇಶದ ಉನ್ನತಿಗಾಗಿ ವ್ಯಯಿಸುತ್ತಿರುವ ಇವರಿಂದ ನಮ್ಮ ದೇಶಕ್ಕೆ ಯಾವ ಭವಿಷ್ಯವಿದೆ ಎಂಬುದು ಆಲೋಚನಾ ಶಕ್ತಿ ಇರುವ ಎಲ್ಲರನ್ನೂ ಚಿಂತೆಗೀಡು ಮಾಡಿರುವ ವಿಷಯ. ಬೌದ್ಧಿಕ ಪಲಾಯನ ತಪ್ಪಬೇಕಾದರೆ ಮುಖ್ಯವಾಗಿ ಯುವ ಪೀಳಿಗೆ ಸದಾ ಜನ್ಮಭೂಮಿ ಗಾಗಿ ಶ್ರಮಿಸುತ್ತಲೇ ಇರಬೇಕಾಗುತ್ತದೆ.

ಸ್ಫೋಟಿಸುತ್ತಿರುವ ಜನಸಂಖ್ಯೆ, ಹೊಲಸು ರಾಜಕೀಯ, ನಿರುದ್ಯೋಗ ಸಮಸ್ಯೆ ಗಳಿಂದ ಬಳಲುತ್ತಿರುವ ನಾವು, ಮಾನವ ಸಂಪನ್ಮೂಲ ಮತ್ತು ಪ್ರಕೃತಿ ಸಂಪನ್ಮೂಲ ಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದನ್ನು ಕಥಾನಾಯಕ ಮುಕುಂದನಿಂದ ಕಲಿಯ

ಬಹುದಾಗಿದೆ. ಕೇವಲ ಹಳ್ಳಿಗಳಲ್ಲಷ್ಟೇ ಅಲ್ಲದೆ, ಬೆಂಗಳೂರಿನಂತಹ ಮಹಾ ನಗರಗಳ ಪ್ರತಿ ಬಡಾವಣೆಯಲ್ಲೂ 'ಒಕ್ಕಲುಕೂಟ'ದಂತಹ ಸಹಕಾರೀ ಪದ್ಧತಿಯನ್ನನುಸರಿಸಿ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಳ್ಳಬಹುದಾಗಿದೆ ; ಸ್ವಾವಲಂಬಿಗಳಾಗಬಹುದಾಗಿದೆ.

ಜಾತಿ ಪದ್ಧತಿಯನ್ನೇ ಬಂಡವಾಳವಾಗಿಟ್ಟುಕೊಂಡು, ಜನರ ಮಧ್ಯೆ ವೈಷಮ್ಯವನ್ನು ಬಿತ್ತಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಧೂರ್ತ ರಾಜಕಾರಣಿಗಳಿಂದ ಜನತೆ ಮುಕ್ತಿ ಪಡೆಯಬೇಕಾದರೆ ಕಾದಂಬರಿಯಲ್ಲಿನ ವರ್ಣಾಶ್ರಮ ಪದ್ಧತಿಯನ್ನು ಆದರ್ಶವಾಗಿಟ್ಟುಕೊಳ್ಳಬೇಕಾಗಿದೆ. ಕಾದಂಬರಿಯಲ್ಲಿನ ವ್ಯಕ್ತಿಗಳು ತಮ್ಮ ಕಸುಬಿನಿಂದ ಗುರ್ತಿಸಲ್ಪಡುತ್ತಾರೆಯೇ ಹೊರತು ಜಾತಿಯ ಹೆಸರಿನಿಂದಲ್ಲ. ತೀರಾ ಅನಿವಾರ್ಯ ಸಂದರ್ಭದಲ್ಲಿ ಮಾತ್ರಾ ಲೇಖಕರು 'ಹರಿಜನ' ಪದವನ್ನು ಬಳಸಿರುವುದನ್ನು ನಾವು ಗಮನಿಸಬಹುದು.

ಕಾದಂಬರಿಯಲ್ಲಿ ಬರುವ, "ಕನ್ನಡ ಜನ ಬದುಕಬೇಕಾದರೆ ಕನ್ನಡನಾಡು ಬೆಳೆಯಬೇಕಾದರೆ, ಅದರ ಸನಾತನ ಸಂಸ್ಕೃತಿ ಬೆಳೆಯಬೇಕಾದರೆ ಅದು ಬೆಳೆವ ವಾತಾವರಣ ಅದರದೇ ಆಗಬೇಕಲ್ಲದೆ ದೂರದಲ್ಲಿನ ಮಂಜಿನ ಮಳೆಯನ್ನು ಕರೆಸಿದ್ದರಿಂದ ಆಗಲಾರದು" ಎಂಬುದು ಮುತ್ತಿನಂತಹ ಮಾತು. ವಿದೇಶೀ ಸಂಸ್ಕೃತಿಯ ಅಂಧಾನುಕರಣೆ ಮಾಡುತ್ತಿರುವ ಯುವ ಜನಾಂಗಕ್ಕೆ ಮಾರ್ಗದರ್ಶನ ಮಾಡುವ ಸ್ಥಳೀಯ ಮುಖಂಡರ ಅವಶ್ಯಕತೆ ಇಂದು ಹಿಂದೆಂದಿಗಿಂತ ಹೆಚ್ಚು ಇದೆ.

ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸುಗ್ಗಿ ಉತ್ಸವ–ಅದಕ್ಕೇ ಕವಿಯೊಬ್ಬರು ಮುಖ್ಯ ಅತಿಥಿಯಾಗಿ ಬರುವುದು, ಇದು ಒಂದು ಸುಸಂಸ್ಕೃತ ಘಟನೆ. ಕವಿಯ ಪಾತ್ರ ಹೇಳುವ, "ಸರಕಾರ ನಮ್ಮ ರಕ್ಷಣೆಗಾಗಿ ಇದೆಯಾದರೂ, ಪ್ರತಿಯೊಂದನ್ನೂ ಸರ್ಕಾರ ಮಾಡಬೇಕೆಂದು ಆಶಿಸಿ ಬಾಳಲಾಗದು" ಎನ್ನುವ ಮಾತುಗಳು ಈ ದಿನಕ್ಕೂ ಅನುಕರಣೀಯ. ಪ್ರತಿ ವ್ಯಕ್ತಿಯೂ ಸ್ವಉದ್ಯೋಗಿಯಾಗಿ, ಸ್ವಾವಲಂಬಿಯಾಗಿರಲು ಇರುವ ಅನೇಕ ಮಾರ್ಗಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಾಗಿದೆ.

ನಾಯಕ ಮುಕುಂದರಾಯನಿಗೆ ಒಂದೇ ಮಗು. ಅದೂ ಹೆಣ್ಣು ಮಗು. ಇದು ಲೇಖಕರ ವಿಚಾರವಂತಿಕೆಗೆ ಸಾಕ್ಷಿ. ಇಂದಿಗೂ ಎಲ್ಲರೂ ಅನುಸರಿಸಲೇಬೇಕಾದ ಅಂಶ.

ಇಂದು ಅನುಸರಿಸಲು ಅಸಾಧ್ಯವಾದರೂ ಬಂದರೆ ಎಷ್ಟು ಚೆನ್ನ ಎನ್ನಿಸುವ ಒಂದು ವಿಷಯವೆಂದರೆ ಬಾರ್ಟರ್ ಪದ್ಧತಿ. ಬೆಳೆದ ತರಕಾರಿಯನ್ನು ದುಡ್ಡು ಕೊಟ್ಟುಕೊಂಡು ತಿನ್ನುವ ಶಕ್ತಿ ಜನಗಳಿಗಿದೆಯೇ ಎಂಬ ವಿಷಯ ಬಂದಾಗ ರೈತರು ಹೇಳುವ "ನಮ್ಮಲ್ಲಿರುವುದನ್ನು ಕೊಡುತ್ತೇವೆ, ಇತರರು ಅವರಲ್ಲಿರುವುದನ್ನು ಕೊಡಲಿ" ಎನ್ನುವ ಕಾದಂಬರಿಯ ಮಾತು ಎಷ್ಟು ಸುಂದರ !

"ಭಾರತಕ್ಕೆ ಬಡತನ ಬಡತನ ಎಂದು, ಕೂಗುತ್ತಿದ್ದೇವೆ, ನಮ್ಮತನವನ್ನು ಮರೆತಾಗ ನಮಗೆ ಬಡತನವಲ್ಲದೆ ಒಡೆತನ ಲಭಿಸೀತೇನು ?" ಎನ್ನುವ ಮಾತು ಎಷ್ಟು ಸತ್ವ

ಪೂರ್ಣ! ಬಾಳುವುದಕ್ಕಿಂತ ಬದುಕುವುದೇ ಮುಖ್ಯವಾಗಿ ಹಣದ ಹಿಂದೆ ಮುಗಿಬಿದ್ದಿರುವ ಇಂದಿನ ಪೀಳಿಗೆಗೆ ಇದು ಅತ್ಯಂತ ಎಚ್ಚರಿಕೆ ನೀಡುವ ಮಾತು. ಪ್ರತಿವ್ಯಕ್ತಿಯೂ ತನ್ನ ತನವನ್ನು ಗುರುತಿಸಿಕೊಂಡು ಬೆಳೆಸಿಕೊಳ್ಳುತ್ತಾ ಬಂದರೆ ದೇಶ ತಾನಾಗೇ ಉದ್ಧಾರ ವಾಗುತ್ತದೆ.

'ಎಲೆ ಮರೆಯ ಹೂ' ಕಾದಂಬರಿ, ಉನ್ನತ ತತ್ತ್ವಗಳನ್ನು, ಸಾರ್ವಕಾಲಿಕ ಮೌಲ್ಯಗಳನ್ನು ಸರಳವಾದ ಭಾಷೆಯ ಮೂಲಕ ಎತ್ತಿ ಹಿಡಿದಿರುವುದು ಇದರ ವೈಶಿಷ್ಟ್ಯ. ಭಾಷೆಯ ಆಡಂಬರದಲ್ಲಿ, ಕ್ಲಿಷ್ಟತೆಯಲ್ಲಿ ವಿಚಾರಗಳು ತಲೆಮರೆಸಿಕೊಳ್ಳುವ ಸಂದರ್ಭ ಗಳೇ ಹೆಚ್ಚು. ಅದಕ್ಕೆ ಈ ಕಾದಂಬರಿ ಒಂದು ಅಪವಾದ. ಕಾದಂಬರಿಯ ಪ್ರತಿಸಾಲನ್ನು ಓದಿದಾಗಲೂ ಹಳ್ಳಿಯ ಚಿತ್ರ ನಮ್ಮ ಕಣ್ಣು ಮುಂದೆ ಬರುತ್ತದೆ. ಅಷ್ಟು ಸಹಜವಾಗಿದೆ. ಮುರುಕಾಸು, ಪುಡಿಕಾಸು, ಒಕ್ಕಲು, ಹೆಗಲಾಣಿ, ಬಳೆಸಿದ ಜನ, ಒಡಬೆಳೆದ ಒಕ್ಕಲಿಗ, ಶಾನುಭಾವಿಕೆ, ಜ್ವಾಲೆ ಇಂತಹ ಪದಗಳು, ಗ್ರಾಮೀಣ ಬದುಕನ್ನು ಹೆಚ್ಚು ಶಕ್ತಿಯುತ ವಾಗಿ ಚಿತ್ರಿಸಲು ನೆರವಾಗಿದೆ.

ಕಾದಂಬರಿಯಲ್ಲಿ ಬರುವ ರಾಷ್ಟ್ರ ನಿರ್ಮಾಣದ ಆದರ್ಶಗಳು, ಕನಸುಗಳು, ಸ್ವಾತಂತ್ರ್ಯ ಬಂದು ೫೦ ವರ್ಷಗಳ ನಂತರವೂ ಪ್ರಸ್ತುತವಾಗಿದೆ ಎನ್ನುವುದು ಖೇದ ವಾದರೂ ಸತ್ಯಸಂಗತಿ. ಗಾಂಧೀಜಿಯವರ ಅಂತ್ಯೋದಯದ ಕನಸು ನನಸಾಗದೇ ಉಳಿ ದಿರುವ ಈ ದಿನಗಳಲ್ಲಿ ಕಾದಂಬರಿಯ ಅನೇಕ ಸಂಗತಿಗಳು ಅನಿವಾರ್ಯವಾಗಿದೆ ಎನ್ನುವ ಮಾತನ್ನು ತಳ್ಳಿಹಾಕುವಂತಿಲ್ಲ.

ವಿಜ್ಞಾನ ಮುಂದುವರೆದು ಕಂಪ್ಯೂಟರ್ ಯುಗಕ್ಕೇನೋ ಕಾಲಿಟ್ಟಿದ್ದೇವೆ. ಆದರೆ ಈ ಎಲ್ಲಾ ಸಾಧನೆಗಳು ಸಮಾಜದ ಒಳಿತಿಗೆ ಉಪಯೋಗವಾಗಬೇಕಾದರೆ ಸಹಜೀವಿಗಳ ಬಗ್ಗೆ ಕಾಳಜಿ, ನಿಸ್ವಾರ್ಥ ಮನೋಭಾವ, ಸಹಕಾರ ಧರ್ಮ, ಮಾನವೀಯ ಗುಣಗಳು ಅನಿವಾರ್ಯವಾಗುತ್ತವೆ. ಈ ಸಾರ್ವಕಾಲಿಕ ಮೌಲ್ಯಗಳನ್ನು ಎತ್ತಿಹಿಡಿದಿರುವ ಈ ಕಾದಂಬರಿ ಈ ದೃಷ್ಟಿಯಿಂದಲೇ ಇಂದಿಗೂ ಪ್ರಸ್ತುತ.

ತಲಕಾಡುಗೊಂಡ

ಡಾ || ಪ್ರಧಾನ್ ಗುರುದತ್ತ

ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ–ಇವೇ ಮೊದಲಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಗಮನಾರ್ಹ ಸೇವೆಯನ್ನು ಸಲ್ಲಿಸಿ, ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿರುವ ಹಿರಿಯ ಸಾಹಿತಿಗಳಾದ ಸಮೇತನಹಳ್ಳಿ ರಾಮರಾಯರ ವಿಶಿಷ್ಟ ನಾಟಕಗಳಲ್ಲಿ 'ತಲಕಾಡುಗೊಂಡ' ತನ್ನದೇ ಆದ ಮಹತ್ವದಿಂದ ಮಿಂಚಿ ನಿಲ್ಲುತ್ತದೆ. ಕನ್ನಡದ ಐತಿಹಾಸಿಕ ನಾಟಕಗಳ ಪರಂಪರೆಯಲ್ಲಿ ನಾವು ಪರಿಗಣಿಸಲೇಬೇಕಾಗಿರುವ ಮಹತ್ವದ ಕೃತಿಗಳಲ್ಲಿ ಇದೂ ಒಂದು.

ಹೊಯ್ಸಳ ರಾಜವಂಶದ ಪ್ರತಿಷ್ಠೆಯ ಪ್ರತೀಕವಾಗಿ ಇತಿಹಾಸದಲ್ಲಿ ಅಜರಾಮರನಾಗಿರುವ ವಿಷ್ಣುವರ್ಧನನ ಸಾಮಯಿಕ ವಿಜಯದ ಕಥೆಯನ್ನು ಒಳಗೊಂಡಿರುವ ಈ ಐತಿಹಾಸಿಕ ನಾಟಕ ಇತಿಹಾಸವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಬಹುದಾಗಿರುವ ಬಗೆಗೆ ಒಂದು ಉತ್ತಮ ನಿದರ್ಶನವಾಗಿ ಉಳಿದುಕೊಳ್ಳುತ್ತದೆ. ಚೋಳ ರಾಜನಾದ ರಾಜೇಂದ್ರಚೋಳ ಗಂಗವಂಶದ ರಕ್ಕಸಗಂಗನನ್ನು ಯುದ್ಧದಲ್ಲಿ ಸೋಲಿಸಿ ತಲಕಾಡಿನ ಪ್ರಾಂತ್ಯವನ್ನು ತನ್ನ ಸಾಮ್ರಾಜ್ಯದ ಅಂಗವಾಗಿಸಿಕೊಂಡ. ಇದರ ಪರಿಣಾಮವಾಗಿ 'ಗಂಗೈಕೊಂಡಚೋಳ'–ಅಂದರೆ, ಗಂಗರಾಜ್ಯವನ್ನು ಸೋಲಿಸಿದ ಚೋಳರಾಜ ಎಂಬುದು ರಾಜೇಂದ್ರಚೋಳನ ಬಿರುದಾವಳಿಯ ಅಂಗವೇ ಆಗಿಬಿಟ್ಟಿತು. ಇದು ಚೋಳ ವಂಶದ ಹಿರಿಮೆಯ ಪ್ರತೀಕವಾಗಿ ಉಳಿದಂತೆಯೇ, ಕನ್ನಡಿಗರ ಪ್ರತಿಷ್ಠೆಗೆ ಉಂಟಾದ ಮುಕ್ಕಿನ

ಹೊಯ್ಸಳರ ಇತಿಹಾಸವನ್ನು ಕುರಿತು ಹೇಳುವ ನಾಟಕ ಚಕ್ರದಲ್ಲಿ ಇದು ಎರಡನೆಯದಾಗಿದೆ.

ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ತಲಕಾಡಿನಿಂದ ಹೊಡೆದಟ್ಟಿದ ಕಥಾನಕವನ್ನು ಈ ನಾಟಕ ತೋರಿಸುತ್ತದೆ. ಈ ನಾಟಕ ೧೯೫೮, ೧೯೬೦, ೧೯೬೧ ಮತ್ತು ೧೯೭೦ನೆಯ ವರ್ಷಗಳಲ್ಲಿ ನಾಲ್ಕು ಮುದ್ರಣಗಳನ್ನು ಕಂಡಿತು.

ಪ್ರಶಸ್ತಿ : ಕರ್ನಾಟಕ ಸರಕಾರ ೧೯೫೭ ಮತ್ತು ೧೯೫೮ರಲ್ಲಿ ಏರ್ಪಡಿಸಿದ್ದ ನಾಟಕ ಸ್ಪರ್ಧೆಯಲ್ಲಿ ಇದಕ್ಕೆ ಮೂರನೆಯ ಬಹುಮಾನವಾದ ರೂ. ೫೦೦ ಗಳು ಬಂದಿತು.

ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೧೯೬೦–೧೯೬೧ನೆಯ ವರುಷದ ಬಿ ಎ. ಮತ್ತು ಬಿ.ಎಸ್‌ಸಿ. ಪರೀಕ್ಷೆಗಳಿಗೆ ಪಠ್ಯಪುಸ್ತಕವಾಗಿದ್ದಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೬೧–೬೨ನೇ ವರುಷದಲ್ಲಿ ಪದವಿಪೂರ್ವ ತರಗತಿಗಳಿಗೆ ಪಠ್ಯಪುಸ್ತಕವಾಗಿದ್ದಿತು. ಈ ನಾಟಕದ ಏಳನೆಯ ಪ್ರವೇಶವನ್ನು ಮುಂಬಯಿ ಕರ್ನಾಟಕದ ೧೯೭೦ರ ಎಸ್. ಎಸ್. ಸಿ. ಕನ್ನಡ ಪಠ್ಯಪುಸ್ತಕದಲ್ಲಿ ಸೇರಿಸಿಕೊಳ್ಳಲಾಗಿದ್ದಿತು.

ಸಂಕೇತವಾಗಿಯೂ ಉಳಿದಿತ್ತು. ಮತ್ತೆ ಹೊಯ್ಸಳ ಸಮ್ರಾಟ ವಿಷ್ಣುವರ್ಧನನ ತಲ ಕಾಡಿನ ಪ್ರಾಂತ್ಯವನ್ನು ಅವರಿಂದ ಕಸಿದುಕೊಂಡು ಕನ್ನಡಿಗರ ಸತ್ತ್ವಸಾಮರ್ಥ್ಯಗಳನ್ನು ಪ್ರತಿಷ್ಠಾಪಿಸಿದ. ಅವನ ಈ ಮಹತ್ವದ ವಿಜಯವೇ 'ತಲಕಾಡುಗೊಂಡ' ನಾಟಕದ ವಸ್ತು.

ಈ ಮಹತ್ವದ ಐತಿಹಾಸಿಕ ಘಟನೆ ಕನ್ನಡ ನಾಡಿನ ಇತಿಹಾಸದಲ್ಲಿ, ಶಾಸನಗಳಲ್ಲಿ ಉದ್ಘೋಷಿತವಾಗಿರುವುದನ್ನು ಕಾಣಬಹುದಾಗಿದೆ. " . . . ತೋಳ್‌ವಲ್ಪಿನಿಂ . . . ದಿಶಾಚಕ್ರಮನೊತ್ತಿಕೊಂಡು ತಳಕಾಡಂ ಗಂಗರಾಜ್ಯಕ್ಕೆ ತಾಂ ಮೊದಲಾದಂ ಯದುವಂಶ ವರ್ಧನಕರಂ ಶ್ರೀ ವಿಷ್ಣುಭೂಪಾಳಕಂ" ಎಂಬುದಾಗಿ ಕ್ರಿ. ಶ. ೧೧೧೭ರ ಬೇಲೂರಿನ ಶಿಲಾಶಾಸನ ಈ ವಿಜಯವನ್ನು ಉಲ್ಲೇಖಿಸುತ್ತದೆ. ತಲಕಾಡಿನ ವಿಜಯದ ಈ ವಸ್ತುವೇ 'ತಲಕಾಡುಗೊಂಡ' ಎಂಬ ಸುಂದರ ಐತಿಹಾಸಿಕ ನಾಟಕವಾಗಿ ಮೈದಳೆದಿದೆ. ಕ್ರಿ.ಶ, ೧೧೧೬ರಲ್ಲಿ ವಿಷ್ಣುವರ್ಧನನ ದಂಡನಾಯಕ ಗಂಗರಾಜ ಚೋಳರನ್ನು ಸೋಲಿಸಿ, ತಲ ಕಾಡನ್ನು ವಶಪಡಿಸಿಕೊಂಡಾಗ, ಪರಮ ಪ್ರಭುವಾಗಿದ್ದ ವಿಷ್ಣುವರ್ಧನ 'ತಲಕಾಡು ಗೊಂಡ' ಎಂಬ ಬಿರುದನ್ನು ಧರಿಸಿದ* ಎಂಬುದಾಗಿಯೂ ಹೇಳಲಾಗಿದೆ. ಈ ಕಾರಣ ದಿಂದಾಗಿಯೇ ರಾಮರಾಯರು ತಮ್ಮ ಈ ಐತಿಹಾಸಿಕ ನಾಟಕಕ್ಕೆ 'ತಲುಕಾಡುಗೊಂಡ' ಎಂಬ ಶೀರ್ಷಿಕೆಯನ್ನು ಆಯ್ದುಕೊಂಡಿದ್ದಾರೆ.

ಐತಿಹಾಸಿಕ ವಸ್ತುವನ್ನು ಸಾಹಿತ್ಯಕೃತಿಗೆ ಅಳವಡಿಸಿಕೊಳ್ಳುವಾಗ ಏಳುವ ಮೂಲ ಭೂತ ಪ್ರಶ್ನೆಯೆಂದರೆ ಐತಿಹಾಸಿಕ ಸಂಗತಿಗಳನ್ನು ಯಾವ ಪ್ರಮಾಣದಲ್ಲಿ ಬಳಸಿಕೊಳ್ಳ ಬೇಕು ಎಂಬುದು; ಸಂಪೂರ್ಣವಾಗಿ ಇತಿಹಾಸವನ್ನೇ ಬಳಸಿಕೊಂಡು ಐತಿಹಾಸಿಕ ಸಂಗತಿ ಗಳ ನಿರೂಪಣೆಗೆ ಸಾಹಿತ್ಯವನ್ನು ಮಾಧ್ಯಮವಾಗಿಸಿಕೊಳ್ಳುವುದು ಅಥವಾ ಇತಿಹಾಸ ಮತ್ತು ಕಲ್ಪನೆಗಳನ್ನು ಅರ್ಥಪೂರ್ಣ ರೀತಿಯಲ್ಲಿ ಬೆಸೆಯುವುದು ಅಥವಾ ಇತಿಹಾಸ ವನ್ನು ನಿಮಿತ್ತ ಮಾತ್ರವಾಗಿರಿಸಿಕೊಂಡು ಕಲ್ಪನೆ ವಿಜೃಂಭಿಸುವಂತೆ ಮಾಡುವುದು. ಮೊದಲನೆಯ ವಿಧಾನದಲ್ಲಿ ಸಾಹಿತ್ಯಕೃತಿ ನೀರಸ ಇತಿಹಾಸವಾಗಿ ಸೊರಗಿಹೋಗುವ ಅಪಾಯವಿದ್ದರೆ, ಕೊನೆಯ ವಿಧಾನದಲ್ಲಿ ಸಾಹಿತ್ಯಕೃತಿ ಕಲ್ಪನೆಯ ವಿಲಾಸಮಾತ್ರವಾಗಿ ಪರಿಣಮಿಸುವ ಅಪಾಯವಿರುತ್ತದೆ. ಪ್ರತಿಭಾವಂತರಾಗಿರುವ ಸಾಹಿತಿಗಳು ಇತಿಹಾಸ ವನ್ನು ಸಾಹಿತ್ಯವಾಗಿ ಮಾರ್ಪಡಿಸುವಲ್ಲಿ, ಕಲ್ಪನೆಗೇ ಐತಿಹಾಸಿಕ ಸತ್ಯಾತಿಶಯಗಳು ಸಮನಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿರುವುದಕ್ಕೂ ಸಾಹಿತ್ಯೇತಿಹಾಸದಲ್ಲಿ ಸುಂದರವಾದ ನಿದರ್ಶನಗಳು ದೊರೆಯುತ್ತವೆ. ಇತಿಹಾಸ ಮತ್ತು ಕಲ್ಪನೆಗಳು ಪರ ಸ್ಪರ ಅವಿರುದ್ಧವಾಗಿ ಬೆಸೆದುಕೊಳ್ಳುವಂತೆ ಮಾಡುವ 'ಸುವರ್ಣ ಮಾಧ್ಯಮ'ವೂ ಇದೆ. ರಾಮರಾಯರು ಇಲ್ಲಿ ಈ ಸುವರ್ಣ ಮಾಧ್ಯಮವನ್ನು ಯಶಸ್ವಿಯಾಗಿ ಬಳಸಿಕೊಂಡಿ ದ್ದಾರೆ. ಅದಕ್ಕೆ ತಮ್ಮ ವ್ಯಾಪಕ ಅಧ್ಯಯನ ಮತ್ತು ವ್ಯುತ್ಪತ್ತಿಗಳು ಪೋಷಕವಾಗಿ

---

* 'ಕನ್ನಡ ವಿಶ್ವಕೋಶ', ಸಂಪುಟ ೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾ ನಿಲಯ, ಮೈಸೂರು ೬ ; ೧೯೭೭ ; ಪು. ೧೯೭.

ನಿಲ್ಲುವಂತೆ ನೋಡಿಕೊಂಡಿದ್ದಾರೆ. ಇದರಿಂದಾಗಿ, ಅವರ ಈ ನಾಟಕ ವಿಶಿಷ್ಟ ಪರಿಣಾಮವನ್ನು ಬೀರುವಲ್ಲಿಯೂ ಯಶಸ್ವಿಯಾಗುತ್ತದೆ.

ಆಕರ ಸಾಮಗ್ರಿ, ಕಲ್ಪನೆ ಮತ್ತು ವ್ಯುತ್ಪತ್ತಿಯನ್ನು ರಾಮರಾಯರು ಎಂಥ ಜಾಣ್ಮೆಯಿಂದ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿ, ಒಂದೆರಡು ಪ್ರಸಂಗಗಳನ್ನು ಪರಿಶೀಲಿಸಬಹುದು. ನಾಟಕದ ಆರಂಭ ಸೂತ್ರಧಾರನ ನಾಂದೀಪದ್ಯದೊಂದಿಗೆ ಸಾಂಪ್ರದಾಯಿಕ ರೀತಿಯಲ್ಲೇ ಆಗುತ್ತದೆ. ಆದರೆ, ಈ ಸಂದರ್ಭಕ್ಕೆ ತಮ್ಮದೇ ಆದ ಪ್ರಾರ್ಥನಾ ಪದ್ಯವೊಂದನ್ನು ರಚಿಸಿ ಹಾಕುವುದು ರಾಮರಾಯರಿಗೆ ಕಷ್ಟದ ಸಂಗತಿಯೇನೂ ಆಗಿರಲಿಲ್ಲ. ಹಾಗೆ ಮಾಡದೆ ಅವರು ಶಾಸನ ಪದ್ಯವೊಂದನ್ನು ಈ ಸಂದರ್ಭಕ್ಕೆ ಉಚಿತ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಆ ಪದ್ಯ ಹೀಗಿದೆ :

> ''ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
> ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।
> ಅರ್ಹಂಶ್ಚೇತಿ ಚ ಜೈನಶಾಸನ ಮತಾಃ ಕರ್ಮೇತಿ ಮೀಮಾಂಸಕಾಃ
> ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ॥''

ಧಾರ್ಮಿಕ ಸಾಮರಸ್ಯದ ಹಿರಿಮೆಯನ್ನು ಉದ್ಘೋಷಿಸುವ ಈ ಪದ್ಯ ೧೪ನೆಯ ಶತಮಾನದ ಕೊನೆಯ ವರ್ಷಗಳಲ್ಲಿ (ಕ್ರಿ.ಶ. ೧೩೯೭) ರಚಿತವಾಗಿರುವಂಥದು. ಆದರೆ ರಾಮರಾಯರು ಇದನ್ನು ಬಳಸುವುದು ೧೨ನೆಯ ಶತಮಾನದ ಮೊದಲ (೧೧೧೬) ಚರಣದಲ್ಲಿ ಸಾಧಿತವಾದ ವಿಷ್ಣುವರ್ಧನನ ವಿಜಯವನ್ನು ಸಾರಿಹೇಳುವ ನಾಟಕಕ್ಕೆ. ಬೇರೆಯ ಸಂದರ್ಭವಾಗಿದ್ದರೆ, ಇದೊಂದು ಕಾಲದೋಷವೇ (anachronism) ಆಗಿ ಪರಿಣಮಿಸುತ್ತಿತ್ತು. ಆದರೆ, ವಿಷ್ಣುವರ್ಧನ ಹೇಳಿಕೇಳಿ ಧಾರ್ಮಿಕ ಸಾಮರಸ್ಯ–ಸಹಿಷ್ಣುತೆಗಳ ಪ್ರತೀಕವಾಗಿದ್ದಂಥವನು–ಅವನ ಪತ್ನಿ ಶಾಂತಲೆ ಜೈನಧರ್ಮದ ಅನುಯಾಯಿಯಾಗಿದ್ದಳು ; 'ಬಿಟ್ಟಿದೇವ'ನಾಗಿ ತಾನೂ ಜೈನಧರ್ಮದ ಬಗ್ಗೆ ವಿಶೇಷ ಒಲವನ್ನುಳ್ಳವನಾಗಿದ್ದರೂ, ಚೆನ್ನಕೇಶವನ ದೇವಾಲಯವನ್ನು ನಿರ್ಮಿಸಿ ವೈಷ್ಣವ ಧರ್ಮದ ಬಗೆಗಿನ ಗೌರವವನ್ನು ಮೆರೆದು 'ವಿಷ್ಣುವರ್ಧನ' ನೆನಿಸಿಕೊಂಡವನು. ಹೀಗಾಗಿ, ಅವನ ಸಾಧನೆಯ ಸಂಕೇತವಾಗಿ ಬಳಕೆಯಾಗಿರುವ ಈ ಪದ್ಯ ದೋಷದ ನಿದರ್ಶನವಾಗುವ ಬದಲು ಗುಣವಾಗಿ, ಜಾಣ್ಮೆಯ ನಿದರ್ಶನವಾಗಿ ಪರಿವರ್ತಿತವಾಗಿಬಿಟ್ಟಿದೆ.

ಅಂತೆಯೇ, ಎಂಟನೆಯ ಪ್ರವೇಶದಲ್ಲಿ, ಶಾಂತಲಾದೇವಿಯ ಸನ್ನಿಧಾನದಲ್ಲಿ ಪೋಚಾಂಬಿಕೆ ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ'ವನ್ನು ವಾಚನ ಮಾಡುತ್ತಿರುವ ಪ್ರಸಂಗವನ್ನು ಕಲ್ಪಿಸಿರುವುದೂ ವಿಷ್ಣುವರ್ಧನನ ಆಳ್ವಿಕೆಯ ಅವಧಿಯಲ್ಲಿ ಬೇರುಬಿಟ್ಟಿದ್ದ ಧರ್ಮಸಹಿಷ್ಣುತೆಯ ನಿದರ್ಶನವಾಗಿ ಉಳಿಯುತ್ತದೆ. ನಾಗಚಂದ್ರನ ಕಾಲ ಹನ್ನೊಂದನೆಯ ಶತಮಾನದ ಕಡೆಯ ಭಾಗ ಅಥವಾ ಹನ್ನೆರಡನೆಯ ಶತಮಾನದ ಆದಿಭಾಗವೆಂದು ಭಾವಿಸಲಾಗಿರುವುದರಿಂದ ಈ ಆಕರದ ಬಳಕೆ ಅನುಚಿತವಾಗಿಯೇನೂ ತೋರುವುದಿಲ್ಲ. ನಾಗಚಂದ್ರನ ಕಾವ್ಯ ತನ್ನ ಅಂತಸ್ಸತ್ತ್ವದಿಂದ ವಿಷ್ಣುವರ್ಧನನ ಕಾಲಕ್ಕೆ

ಜನಪ್ರಿಯವಾಗಿದ್ದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ ; ಮೇಲಾಗಿ, ಜೈನ ಧರ್ಮದ ಬಗ್ಗೆ ವಿಶೇಷವಾದ ಒಲವನ್ನು ಬೆಳೆಸಿಕೊಂಡು ಬಂದಿದ್ದ ವಿಷ್ಣುವರ್ಧನನ ಅಂತಃಪುರದಲ್ಲಿ ಸಂಸ್ಕೃತಿಯ ಸಾಕಾರರೂಪವಾಗಿದ್ದ ಶಾಂತಲಾದೇವಿಯ ಸಮ್ಮುಖದಲ್ಲಿ ಅದರ ವಾಚನ ಅಸಹಜವೆಂದೇನೂ ತೋರುವುದಿಲ್ಲ. ಮೇಲಾಗಿ, ಆ ಕಾವ್ಯದಲ್ಲಿನ ರಘು ವೀರನ ವಿಜಯ ಪ್ರಸ್ಥಾನದ ಪ್ರಸಂಗವನ್ನು ಇಲ್ಲಿ ಬಳಸಿಕೊಂಡಿರುವುದು ರಾಮ ರಾಯರ ಔಚಿತ್ಯ ಪ್ರಜ್ಞೆಗೂ, ಪ್ರಸಂಗಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಅವರ ಕೌಶಲಕ್ಕೂ ಸಾಕ್ಷಿಯಾಗಿ ನಿಲ್ಲುತ್ತದೆ. ಏಕೆಂದರೆ, ಆ ಪ್ರಸಂಗ ಈ ನಾಟಕದಲ್ಲಿ ಬಳಕೆಗೊಂಡಿರುವುದು ತಲಕಾಡಿನ ವಿಜಯ ಪ್ರಸ್ಥಾನದ ಸಂದರ್ಭಕ್ಕೆ, ಜೊತೆಗೆ, ಎರೆ ಯಂಗನ ದೇಶಪ್ರೇಮ–ಉತ್ಕಟತೆಯನ್ನು ಮನವರಿಕೆ ಮಾಡಿಕೊಡುವುದಕ್ಕೆ.

ತಲಕಾಡಿನ ವಿಜಯದ ಹಿನ್ನೆಲೆಯನ್ನು–ಅಂದರೆ, ರಾಜೇಂದ್ರಚೋಳನು ರಕ್ಕಸ ಗಂಗನನ್ನು ಸೋಲಿಸಿ, 'ಗಂಗೈಕೊಂಡ ಚೋಳಮಂಡಲ'ವೆಂಬುದಾಗಿ ಆ ಪ್ರದೇಶವನ್ನು ಹೆಸರಿಸತೊಡಗಿದ್ದು, ಅವರ ಅಭಿಮಾನ, ಅಟ್ಟಹಾಸಗಳನ್ನು ಮೆಟ್ಟಿಹಾಕಿ, ಆ ಪ್ರದೇಶ ವನ್ನು ವಿಷ್ಣುವರ್ಧನ ಗೆದ್ದುಕೊಂಡ, ಸಂಗತಿಯನ್ನು–ಕೇಶವಭಟ್ಟನೆಂಬ ಕಾಲ್ಪನಿಕ ಪಾತ್ರವೊಂದರ ಮೂಲಕ ಈ ನಾಟಕದಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ. ಇತಿಹಾಸ ಮತ್ತು ಪುರಾಣಗಳು ಇಲ್ಲಿ ಸಮರಸವಾಗಿ ಬೆರೆತು ಬರುವುದು ಪ್ರಶಂಸನೀಯ ವಾಗಿದೆ. ಆ ಭಾಗ ಹೇಗೆ ಬಂದಿದೆ ಎಂಬುದನ್ನಿಲ್ಲಿ ಸಂಕ್ಷೇಪವಾಗಿ ನೋಡಬಹುದು :

> "ಭರತವರ್ಷದ ತೆಂಕಲಲ್ಲಿ ಗಂಗವಾಡಿ ತೊಂಭತ್ತಾರು ಸಾವಿರದ ನಾಡೆಂದು ಬಹು ವೈಭವದಿಂದ ಮೆರೆದ ಗಂಗರಸರಿಗೆ ಇದು ಸುಮಾರು ಎಂಟು ನೂರು ವರುಷಗಳು ರಾಜಧಾನಿಯಾಗಿದ್ದುದಕ್ಕೆ ನಮ್ಮಲ್ಲಿ ಶಾಸನ ಸಾಹಿತ್ಯವುಂಟು . . . ರಕ್ಕಸಗಂಗರು ರಾಜೇಂದ್ರ ಚೋಳನಿಗೆ ಸೋತು ಹೋದ ಮೇಲೆ . . . ಗಂಗೈ ಕೊಂಡ ಚೋಳಮಂಡಲವೆಂದು ಚೋಳರು ಕರೆದ ಈ ನಾಡನ್ನು ಒಂದು ಗೂಡಿಸಿದಿರಿ. ಗಂಗರಸರ ಆಶಯವನ್ನು ಈಡೇರಿಸಿದಿರಿ. ನಮ್ಮದೇ ಆದ ಕನ್ನಡದ ಗುಡಿಯುಡಿಯಲ್ಲಿ, ಧೀರಪ್ರಭು ವಿನ ಧರ್ಮದಾಳ್ವಿಕೆಯಲ್ಲಿ ನಮ್ಮ ಜೀವನ ಚೆಲುವಾಗುತ್ತದೆ ಎಂಬ ಅಮಿ ತೋತ್ಸಾಹ ನಮ್ಮದೆಲ್ಲ." (ಪು. ೯೬)

ಈ ಸಂದರ್ಭದಲ್ಲಿ ಇನ್ನೊಂದು ವಿಶಿಷ್ಟ ಸಂಗತಿಯನ್ನೂ ನಾವು ಗಮನಿಸ ಬೇಕಾಗಿದೆ. ಇತಿಹಾಸದ ನೈಜ ಪರಿಪ್ರೇಕ್ಷದ ಅರಿವಿಲ್ಲದ, ಐತಿಹಾಸಿಕ ಸ್ಮಾರಕಗಳನ್ನು ಹಾಳುಗೆಡವುವುದರ ಮೂಲಕ ಇತಿಹಾಸದ ಸಂಗತಿಗಳನ್ನು ಅಳಿಸಿಹಾಕಿ ಹೊಸ ಇತಿಹಾಸ ವನ್ನೂ ನಿರ್ಮಿಸುವ ವಿವೇಕ ಸಮ್ಮತವಾಗದ ಬೆಳವಣಿಗೆಗಳನ್ನು ಈ ದಶಕದಲ್ಲಿ ನಾವು ಕಾಣುತ್ತ ಬಂದಿದ್ದೇವಷ್ಟೆ. ಇಂಥ ಸಮೀಪ ದೃಷ್ಟಿಯ ಚೇತನಗಳು ಎಲ್ಲ ಕಾಲದಲ್ಲಿಯೂ ಇದ್ದೇ ಇರುತ್ತವೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಈ ದೃಷ್ಟಿಯಿಂದ, ತಲ ಕಾಡಿನ ವಿಜಯದ ಅನಂತರದಲ್ಲಿ ವಿಷ್ಣುವರ್ಧನನ ಮೂಲಕ ಹೇಳಿಸಿರುವ ಈ ಮಾತು

ಗಳು ರಾಮರಾಯರ ಸದಸದ್ವಿವೇಕಕ್ಕೆ ದೂರದೃಷ್ಟಿಗೆ ಹಾಗೂ ಸಮ್ಯಕ್‌ಚಿಂತನಕ್ಕೆ ಸಾಕ್ಷಿಯಾಗಿವೆ. ಅವರ ಈ ಅರ್ಥಪೂರ್ಣವಾದ ಮಾತುಗಳು ಹೀಗಿವೆ:

("ಚೋಳರು ಬಂದ ಮೇಲೆ . . . ಎಲ್ಲವನ್ನೂ ಚೋಳಮಯವಾಗಿಸಿಬಿಟ್ಟರು . . . ಈಗ ಪ್ರಭುವದನ್ನು ಸರಿಪಡಿಸಿಕೊಡಬೇಕು" ಎಂಬ ಕೇಶವಭಟ್ಟನ ಮಾತಿಗೆ ಉತ್ತರವಾಗಿ) :

"ಅವರಿಲ್ಲಿಗೆ ಬಂದರು, ಆಳಿದರು ಎಂಬುದನ್ನು ಯಾರು ತೊಡೆಯಬಲ್ಲರು; ನೆಲವಿರುವ ತನಕ ಅದು ನಿಲ್ಲಬೇಕು. ಜನ ಮನಸ್ಸು ಮಾಡಿದರೆ ಅವರಿಲ್ಲಿ ಇದ್ದ ಗುರುತುಗಳು ಅವೇನುಂಟು ಅವೆಲ್ಲವನ್ನೂ ಹೇಳ ಹೆಸರಿಲ್ಲದಂತೆ ಒರೆಸಿಬಿಡಬಹುದಾದರೂ ಕಾಲದ ಮಹತ್‌ಗರ್ಭದಲ್ಲಿ ಅವರು ಬಿಟ್ಟಿರುವ ಗುರುತುಗಳನ್ನು ಅಳಿಸಲಳವೆ ? . . . ಅವರ ಬಾಳಿನ ಅದೆಷ್ಟೋ ಸಂಗತಿಗಳು ಈ ನಾಡ ಜನತೆಯ ನಾಡಿನಾಡಿಗಳಲ್ಲಿ ಬೆರೆತಿದ್ದಾವು . . . ಅವರ ಬಾಳಿನ ಒಳತಿನ ಭಾಗವದೆಷ್ಟು ಅದನ್ನು ಕೂಡಿಸೋಣ. ನಮಗೆ ಅದು ಕೊಡಬಹುದಾದ ಪುಷ್ಟಿಯನ್ನು ಕುರಿತು ಮಾತನಾಡೋಣ. ಅವರು ಬಂದು ಹೋದ ಗುರುತು ನಮ್ಮಲ್ಲಿರಲಿ. ಅದರಿಂದ ನಷ್ಟವಿಲ್ಲ." (ಪು. ೯೭–೯೮)

ಇಂಥ ವಸ್ತುನಿಷ್ಠ ಇತಿಹಾಸ ಪ್ರಜ್ಞೆಯೊಂದಿಗೆ ಗತೇತಿಹಾಸದ ಪ್ರಮುಖ ಸಂಗತಿಯೊಂದನ್ನು ನಮ್ಮ ಮುಂದೆ ಜೀವಂತವಾಗಿ ಕಂಡರಿಸುವಲ್ಲಿ ರಾಮರಾಯರು ವಿಷ್ಣುವರ್ಧನ, ಉದಯಾದಿತ್ಯ, ಎರೆಯಂಗ, ನಾಗಯ್ಯ, ಗಂಗರಾಜ, ಏಚಲದೇವಿ, ಶಾಂತಲದೇವಿ, ಮರಿಯಾನೆ, ಕೇತಯನಾಯಕ ಮೊದಲಾದ ಐತಿಹಾಸಿಕ ಪಾತ್ರಗಳನ್ನು ದುಡಿಸಿಕೊಂಡಿರುವುದಲ್ಲದೆ, ಕೇಶವಭಟ್ಟ, ಆಡವಳ್ಳಾನ್, ಬಯಿಚಗೌಡ, ಬಾಸೆಬೋವ, ಪೋಚಾಂಬಿಕೆಯಂಥ ಕಲ್ಪನೆಯ ಪಾತ್ರಗಳಿಂದ ನಾಟಕದ ವಸ್ತುವಿಗೆ ಜೀವಂತಿಕೆಯನ್ನು ತಂದುಕೊಟ್ಟಿದ್ದಾರೆ ; ಐತಿಹಾಸಿಕ ವಾತಾವರಣ ಮೈದುಂಬಿ ನಿಲ್ಲುವಂತೆ ಮಾಡಿದ್ದಾರೆ ; ಸಮಕಾಲೀನ ಇತಿಹಾಸ–ಸಂಸ್ಕೃತಿಯ ಪೋಷಕಾಂಶಗಳು ಮಿಂಚುವಂತೆ ನೋಡಿಕೊಂಡಿದ್ದಾರೆ. ಉದಾಹರಣೆಗೆ, ಸದ್ಧರ್ಮದ, ಸಂಸ್ಕೃತಿಯ, ಸುರಕ್ಷಿತವಾದ ನಾಡು ನಮ್ಮದು ಎನ್ನಬೇಕಾದರೆ, ನಡುರಾತ್ರಿಯಲ್ಲಿಯೂ ಸರ್ವಾಭರಣ ಸಂಪನ್ನೆಯಾದ ಸುಂದರಿ ನಿರ್ಭಯವಾಗಿ ಸಂಚರಿಸಬಹುದಾದಂಥ ಸನ್ನಿವೇಶ ಇರಬೇಕು ಎಂಬುದಾಗಿ ನಮ್ಮ ನಾಡಿನ ಧೀಮಂತ ಚೇತನಗಳು ಘೋಷಿಸುತ್ತಿದ್ದುವಷ್ಟೆ. ಈ ನಾಟಕದ ಆರಂಭ ಆಗುವುದು ಪೋಚಾಂಬಿಕೆಯಂಥ ಇಂಥ ಸುಂದರ ಯುವತಿಗೆ ಎದುರಾಗುವ ಸಂಕಷ್ಟಮಯ ಸನ್ನಿವೇಶದೊಂದಿಗೆ. ನಾಡಿನ ಆಡಳಿತ ಎಂಥ ಅವನತಿಗೆ ಇಳಿದಿದೆ ಎಂಬುದು ಇದರಿಂದ ನಿಚ್ಚಳವಾಗುವಂತೆ ಮಾಡಿದ್ದಾರೆ. ಕನ್ನಡನಾಡಿನ ಮಾಸತಿಯರ ಹಿರಿಮೆಯ ಸಂಕೇತವಾಗಿರುವ ಪೋಚಾಂಬಿಕೆ "ಆತ್ಮದುದ್ಧಾರಕ್ಕೋಸುಗ, ಗಂಡನೊಬ್ಬನನ್ನಲ್ಲ, ಇಡೀ ಲೋಕವನ್ನೇ ಬೇಕಾದರೂ ಬಿಡಬಹುದು" (ಪು. ೧೨) ಎಂಥ ಧೀರೆ ನಿಲುವಿನ ಹೆಣ್ಣು !

ಅಂತೆಯೇ, "ಆರ್ತಳಾಗಿ ಬಂದ ಹೆಣ್ಣದೊಬ್ಬಳ ನೆರವಿಗೆ ನಿಲ್ಲುವುದು ನನ್ನ ಕರ್ತವ್ಯ" (ಪು. ೧೩) ಎಂದು ಭಾವಿಸುವ ಬಪ್ಪಣನಂಥವರು ನಾಡಿಗೆ ಹೇಗೆ ಶ್ರೀರಕ್ಷೆಯಾಗಿರ ಬಲ್ಲರು ಎಂಬುದನ್ನೂ ಸೂಚಿಸಲಾಗಿದೆ. ಹೀಗೆಯೇ "ದೇವರಿಗೆ ಸೇರಿದ ಸಿದ್ಧಾಯವನ್ನು ಸೂರೆಗೊಳ್ಳಲು ಹಲವರು ಹವಣಿಸಿದಾಗ" (ಪು. ೪೨) "ಊರತುರುವನ್ನು ಕಳ್ಳರು ಮುತ್ತಿದಾಗ" (ಅಲ್ಲೇ) ಪ್ರಾಣವನ್ನು ಪಣವಾಗಿಟ್ಟು ಹೋರಾಡಿದಂಥ ಪರಾಕ್ರಮಿಗಳ ಅನೇಕ ಚಿತ್ರಗಳನ್ನು ರಾಮರಾಯರು ಸಮುಚಿತವಾಗಿ ಅನಾವರಣಗೊಳಿಸಿದ್ದಾರೆ. ಆ ಮೂಲಕ ನಾಡಿನ ಹಿರಿಮೆಯನ್ನು ಉದ್ಘೋಷಿಸಿದ್ದಾರೆ. ಇದಕ್ಕೆ ಪೂರಕವಾಗಿ ಶಾಸನ ಸಾಹಿತ್ಯವನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. "ಚತುಸ್ಸೀಮೆಯಲ್ಲಿನ ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣ, ಆಗಾಮಿ, ಸಿದ್ಧಸಾಧ್ಯಂಗಳೆಂಬ ಅಷ್ಟಭೋಗ ತೇಜ ಸ್ವಾಮ್ಯಗಳನ್ನು ಸುಖವಾಗಿ ಅನುಭವಿಸಲಿ" (ಪು. ೪೭) ಎಂಬ ಮಾತುಗಳು ಇದಕ್ಕೆ ಸಾಕ್ಷಿಯಾಗಿವೆ. "ಇಲ್ಲೊಂದು ಕೆರೆಯನ್ನು ಕಟ್ಟಿಸಿ, ಒಟ್ಟಬಯಲಲ್ಲಿ ನಿಂತಿರುವ ಕುಸು ಮೇಶ್ವರನಿಗೊಂದು ಗುಡಿಯನ್ನೆತ್ತಿಸಿ" (ಅದೇ) ಮೊದಲಾದ ಮಾತುಗಳು "ಕೆಱೆಯಂ ಕಟ್ಟಿಸುತಿರ್ಪುದುಮಱವಂಟಿಗೆಯಿಡಿಸುತಿರ್ಪುದೆಸೆವಾರವೆಯುಂ ನೆಱೆಮಾಡಿಸುವುದಲ್ಲದೆ ಪೆಱತೊಂದಿಲ್ಲಾದಿಗೌಂಡನುಜ್ಜಗಮೆಂದುಂ" (ಶಾಸನ ಪದ್ಯಮಂಜರಿ, ಬೇಲೂರು ೧೩೭) ಎಂಬ ಮಾತುಗಳನ್ನಾಗಲೀ, ತುಂಬ ಪ್ರಸಿದ್ಧವಾದ :

''ಕೆಱೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ ನಂಬಿದ ।
ಗ್ರ್ಗೆಱೆವೆಟ್ಟಾಗಿರು ಶಿಷ್ಟರಂ ಪೊರೆಯೆನ್ನುತ್ತಿಂತೆಲ್ಲವಂ ಪಿಂದೆ ತಾಂ
ಮೆಱದಳ್ವಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥''

ಎಂಬ ಲಕ್ಷ್ಮೀಧರನ ಶಾಸನ* ಏನೇ ಆಗಲಿ ನೆನಪಿಗೆ ತಾರದೇ ಇರುವುದಿಲ್ಲ. ಅಂತೆಯೇ, "ತಲೆಗುಡಲೆಂದು ಬಲಿಯಾಗಿ ಬಂದ ಕೋಣವು ಬಲಿಗಂಬದ ಮಾವಿನ ಸೊಪ್ಪನ್ನು ಇನ್ನೂ ಬದುಕಬೇಕೆಂಬಾಸೆಯಿಂದ ಗೋಣನ್ನು ನೀಡಿ ನಾಲಗೆಯನ್ನು ಚಾಚಿ, ಬಾಯಿಗೆ ಎಳೆದುಕೊಳ್ಳುವಂತೆ ಇವನ ಇರವು" ಎಂಬ ಮಾತುಗಳು (ಪು.೮೦.) "ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ಕಟ್ಟಿದ ತಳಿರ ಮೇಯಿತ್ತು" ಎಂಬವೇ ಮೊದಲಾದ ವಚನಕಾರರ ಮಾತುಗಳನ್ನು ನೆನಪಿಗೆ ತಂದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಇವೆಲ್ಲ ರಾಮರಾಯರ ಅಧ್ಯಯನ ಮತ್ತು ವ್ಯುತ್ಪತ್ತಿಯ ಹರಹನ್ನೂ ಸಾರ್ಥಕವಾಗಿ ಅವನ್ನು ಬಳಸಿಕೊಳ್ಳುವ ಅವರ ಜಾಣ್ಮೆಯನ್ನೂ ನಮಗೆ ಪರಿಚಯಿಸಿಕೊಡುತ್ತವೆ. ಇಂಥ ಸಂದರ್ಭಗಳನ್ನು ಬಳಸಿಕೊಳ್ಳುವಲ್ಲಿಯೂ ಸಾಮಾನ್ಯವಾಗಿ ಕಂಡುಬರುವಂಥ ಲೋಪ ದೋಷಗಳಿಂದ ಅವರು ಮುಕ್ತರಾಗುತ್ತಾರೆ. ಉದಾಹರಣೆಗೆ ಎಲ್ಲವೂ ಸ್ವರಾಂತ್ಯವೇ

---

* 'ಶಾಸನ ಸಂಗ್ರಹ' ಸಂ. ಎ. ಎಂ. ಅಣ್ಣಿಗೇರಿ ; ಆರ್. ಶೇಷಶಾಸ್ತ್ರಿ ; ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮, ೧೯೮೨ (ಎರಡನೆಯ ಮುದ್ರಣ); ಪು. ೧೦೨.

ಆಗಿರಬೇಕೆಂಬ ಭ್ರಮೆಯಿಂದ "ಕಾಯಾ ವಾಚಾ ಮನಸಾ" ಎಂದು ತಪ್ಪಾಗಿ ಬಳಸುವುದಕ್ಕೆ ಬದಲಾಗಿ "ಕಾಯೇನ ವಾಚಾ ಮನಸಾ" (ಪು ೯೭) ಎಂಬ ಸರಿಯಾದ ಪಾಠವನ್ನೇ ಅವರು ಕೊಡುತ್ತಾರೆ. ಇವುಗಳನ್ನು ಪಾತ್ರೋಚಿತವಾಗಿ ಅಳವಡಿಸುವುದರಲ್ಲಿಯೂ ಅವರು ಮಿಂಚುತ್ತಾರೆ.

ಇಂಥ ಸಣ್ಣ–ಪುಟ್ಟ ಪಾತ್ರಗಳನ್ನು ಕಲ್ಪಿಸುವಲ್ಲಿ ಮಾತ್ರವಲ್ಲದ, ಪ್ರಮುಖ ಪಾತ್ರಗಳನ್ನು ಸೃಷ್ಟಿಸುವಲ್ಲಿಯೂ ಅವರು ಗಾಂಭೀರ್ಯ–ಔಚಿತ್ಯಗಳನ್ನು ಮೆರೆಯುತ್ತಾರೆ. ಇದಕ್ಕೆ ಉದಾಹರಣೆಯಾಗಿ ವಿಷ್ಣುವರ್ಧನ ಶಾಂತಲಾದೇವಿಯಂಥ ಪಾತ್ರಗಳನ್ನು ಗಮನಿಸಬಹುದು. "ಜೀವನೋಪಾಯಕ್ಕಾಗಿ ಸೇವಾಧರ್ಮವನ್ನವಲಂಬಿಸಬೇಕು ನಿಜ. ಅದರ ಹೆಸರಿನಲ್ಲಿ ನಿನ್ನ ಮಾನವನ್ನೂ, ಮರ್ಯಾದೆಯನ್ನೂ ಮಾರಿಕೊಳ್ಳಬೇಕು ಎಂದೇನಾದರೂ ಉಂಟೆ ? ಅಳಿದ ಮೇಲೆ ಉಳಿವುದು ಒಂದೇ. ಅದು ನೀನು ಬಾಳಿದ ನಿನ್ನ ಜೀವನದ ರೀತಿ, ಐಶ್ವರ್ಯವಲ್ಲ ; ಅಧಿಕಾರವಲ್ಲ. (ಪು. ೩೭) ಎಂದು ಅಮಿತಯ್ಯನಿಗೆ ಸದ್ಧರ್ಮದ ಅರಿವನ್ನುಂಟುಮಾಡಿಕೊಡುವ ಸಂದರ್ಭದಲ್ಲಿಯಾಗಲೀ, ಅವಿನಯವನ್ನು ಮೆರೆದ ರಾಜಪ್ರತಿನಿಧಿಗೆ ಸನ್ನಡತೆಯನ್ನು ತಿಳಿಯಹೇಳುವ "ಅಯ್ಯ, ವೀರನಿಗೆ ವಿನಯವೇ ಒಂದು ದೊಡ್ಡಗುಣ. . . ಯಾವೊಂದು ನಾಡಿಗಾಗಲಿ ಅಥವಾ ಮಾನವೀಯತೆಯನ್ನುಳಿಸಿಕೊಂಡು ಬಾಳಲೆಳಸುವ ಸುಸಂಸ್ಕೃತವಾದ ಅದಾವ ನೆಲಕ್ಕೇ ಆಗಲಿ, ಈ ನಿನ್ನ ನಡತೆ ಗೌರವವನ್ನು ತರುವಂತಹುದಲ್ಲ" (ಪು. ೫೬) ಎಂಬ ಮಾತುಗಳಲ್ಲಾಗಲೀ, ಚೋಳರಾಜನಿಗೆ ಸಂದೇಶವನ್ನು ಕಳಿಸುವ ಸಂದರ್ಭದಲ್ಲಿ ಆಡುವ "ಮಹಾರಾಜರು ಎಂದೆನ್ನಿಸಿಕೊಂಡ ಅದಾರಿಗೇ ಆದರೂ ನಾಡಜನದ ಕ್ಷೇಮಚಿಂತನೆ ಅವರ ಜೀವದ ಜೀವಾಳವಾಗಿರಬೇಕು" ಎಂಬ ಮಾತಿನಲ್ಲಾಗಲೀ, ಪೊಳ್ಳುಬೆದರಿಕೆಗಳಿಗೆ ಮಣಿಯುವಂಥ ಚೇತನ ತನ್ನದಲ್ಲವೆಂಬುದನ್ನು ಸ್ಪಷ್ಟಪಡಿಸುವ "ನಮಗೇನು ರಕ್ತಪಾತದಿಂದ ತಣಿವ ಆಸೆಯದೇನಿಲ್ಲ. ಆದರೆ, ಒಂದು ನಾಡಿನ ಹಿತಕ್ಕಾಗಿ ಹಲವಾರು ಮಂದಿಯ ಕೊಲೆ ಅನಿವಾರ್ಯವಾದರೆ ನಾವು ಅದಕ್ಕೂ ಹಿಂಜರಿವವರಲ್ಲ." (ಪು. ೬೦) ಎಂಬ ಮಾತುಗಳಲ್ಲಾಗಲೀ, ಗಂಗರಾಜನಿಗೆ ಕಾಣಿಕೆ ನೀಡುವ ಸಂದರ್ಭದಲ್ಲಿನ "ನಮ್ಮ ಕಾಲದ ಭೀಷ್ಮರು ನೀವು. ನಿಮ್ಮ ಉಜ್ವಲವಾದ ತೇಜಸ್ಸು ನಮ್ಮನ್ನು ಹೀಗೆ ಇಲ್ಲಿ ನಿಲ್ಲಿಸಿದೆ" (ಪು ೬೭) ಎಂಬ ವಿನಯೋಕ್ತಿಯಾಗಲೀ, ವಿಜಯ ಸಾಧನೆಯನ್ನು ಅದಕ್ಕಾಗಿ ದುಡಿದ–ಮಡಿದ ವೀರರಿಗೆ ಅರ್ಪಿಸುವ "ನಿಮ್ಮ ಬಲುಹಿನ ನಡುವೆ ನಾವು ದೊಡ್ಡವರಾಗಿರುವೆವು" (ಪು. ೮೯) ಎಂಬ ಸೌಜನ್ಯದಲ್ಲಿಯಾಗಲೀ ವಿಷ್ಣುವರ್ಧನನ ವಿನಯೋನ್ನತಿ ಮತ್ತು ಕ್ಷಾತ್ರತೇಜಸ್ಸುಗಳು ಮೆರೆಯುವುದನ್ನೇ ಕಾಣಬಹುದಾಗಿದೆ. ಈ ನಾಟಕದ ಕೇಂದ್ರಪಾತ್ರವಾಗಿ ಅದಕ್ಕೆ ಸಲ್ಲಬೇಕಾಗಿರುವ ಹಿರಿಮೆ–ಗರಿಮೆಗಳನ್ನು ತಂದುಕೊಡುವಲ್ಲಿ ರಾಮರಾಯರು ಖಂಡಿತವಾಗಿಯೂ ಯಶಸ್ವಿಯಾಗಿದ್ದಾರೆ. ಅಂತೆಯೇ ಸಂಗೀತ ಸಾಹಿತ್ಯಾದಿ ಲಲಿತಕಲೆಗಳ, ಸುಸಂಸ್ಕೃತಿಯ ಮಾತೃತ್ವದ ಮಾರ್ದವತೆಯ ಪ್ರತೀಕವಾಗಿರುವ ಶಾಂತಲಾದೇವಿಯ ಪಾತ್ರವೂ ಚೆಲುವು ತುಂಬಿ ಮೈದಳೆದಿದೆ. "ಹಿರಿ

ಯರೆಂದುದನ್ನು ಹಸಾದವೆಂದು ನಡೆಸುವುದೂ ಉತ್ತಮ ನಾಡಿಗನ ಸಲ್ಲಕ್ಷಣ"(ಪು. ೬೬) ವೆನ್ನುವ ಆಕೆ ಅದರ ಪ್ರತೀಕವೇ ಆಗಿದ್ದಾಳೆ. ಈ ರಾಜದಂಪತಿಗಳ ನಡುವಣ ಸಾಮರಸ್ಯ ಎಂಥದೆಂದರೆ, ಎರೆಯಂಗ ಹೇಳುವಂತೆ, "ನಿಮ್ಮ ಬಾಯಿಂದ ಬಂದ ಮಾತು ದೊಡ್ಡಪ್ಪಾಜಿಯವರ ಮನಸ್ಸಿನಲ್ಲಿ ಬಿದ್ದರೆ ಮುತ್ತಾಗುತ್ತದೆ." (ಅದೇ) ಅಷ್ಟೇ ಅಲ್ಲ, ಅವಳು ರಾಜಮಾತೆ ಏಚಲದೇವಿ ಹೇಳುವಂತೆ"ದೊರೆಯ ಜೀವನದಲ್ಲಿ ಬೆರೆತವಳು."(ಪು. ೭೦) ಹೀಗಾಗಿ "ಕಾಳೆಗದ ಪಾಳಯದಲ್ಲಿ ನಿನ್ನವನ ಯೋಗಕ್ಷೇಮವನ್ನು ನೋಡಿಕೊಳ್ಳುವುದರ ಜತೆಗೆ ಇಡೀ ಬಲದ ತಾಯಿಯಾಗಿಯೂ ನಿಲ್ಲುವೆ. ಅದು ನಮ್ಮೆಲ್ಲರ ಪುಣ್ಯ" (ಪು ೭೦) ಎಂಬ ರಾಜಮಾತೆಯ ಆಶೀರ್ವಾದ ಆಕೆಯ ಬಾಳಿಗೇ ಬರೆದ ಭಾಷ್ಯವೆನಿಸುತ್ತದೆ.

ಇಷ್ಟಾಗಿಯೂ ವಿಷ್ಣುವರ್ಧನನ ಪಾತ್ರಕ್ಕೆ ಸಹಜವಾಗಿಯೇ ದೊರೆತಿರುವ ಪ್ರಾಧಾನ್ಯದಿಂದಾಗಿ, ಶಾಂತಲಾದೇವಿ, ಹಿನ್ನೆಲೆಯ ಪ್ರೇರಕ ಶಕ್ತಿ ಎಂಬಂತೆ ಚಿತ್ರಿತಳಾಗಿದ್ದಾಳೆನ್ನಬೇಕು. ರಾಜಮಾತೆಯಾದ ಏಚಲದೇವಿಯ ಪಾತ್ರ ಶಾಂತಲೆಯದಕ್ಕಿಂತಲೂ ಉಜ್ವಲವಾಗಿ ಮೂಡಿಬಂದಿದೆ ಎನ್ನಿಸುತ್ತದೆ. ಏಕೆಂದರೆ, ವಿಷ್ಣುವರ್ಧನನನ್ನು ಮೊದಲಿನಿಂದಲೂ ಸದ್ಧರ್ಮದ ಹಾದಿಯಲ್ಲಿ ನಡೆಸಿಕೊಂಡು ಬಂದಿರುವ ಶಕ್ತಿ ಆಕೆ, ಕಾಳಗ ಅನಿವಾರ್ಯವಾದುದರಿಂದ, ತನ್ನನ್ನು ಹರಸಬೇಕೆಂದು ವಿಷ್ಣುವರ್ಧನ ಕೋರಿದಾಗ, "ನೀವೆತ್ತಿಕೊಂಡಿರುವ ಪವಿತ್ರ ಉದ್ದೇಶ ನಿಮಗೆ ರಕ್ಷೆಯಾಗಿರುತ್ತದೆ" (ಪು–೬೯) ಎಂದು ಹರಸುವ ಆಕೆಯ ಈ ಉಪದೇಶ ಸದ್ಧರ್ಮದ ಆಣಿಮುತ್ತಿನಂತಿದೆ. "ಕತ್ತಿಯನ್ನು ಹಿಡಿದ ನೀವು ಎಂಥದೇ ಆಪತ್ತಿನಲ್ಲಿಯೂ ದಯೆ–ಧರ್ಮಗಳನ್ನು ಮರೆಯದಿರಿ. . . ರಾಜಸಶಕ್ತಿಯದು ನಿಮ್ಮಲ್ಲಿ ಮೆರೆಯಲು ಎಂದಿಗೂ ದಾರಿಮಾಡಿಕೊಡದಿರಿ. ಆಸೆ ಆಭಿಲಾಷೆಗಳು ಮಳೆಗಾಲದ ಬಿರುಹೊನಲಂತೆ ಕೊಚ್ಚಿಬರುವುವು; ಮುತ್ತಿಬರುವುವು. ಅವು ಹರಿದುಬರುವ ಪಾತ್ರದಿಂದೆದ್ದು ಬಿಡಿಸಿಕೊಂಡು ದಡದಲ್ಲಿ ನಿಲ್ಲಿರಿ. . . ಲೋಕ ಜೀವನವನ್ನು ಜೋಪಾನ ಮಾಡುವ ದಿವ್ಯ ದೇವತೆ ಹೆಣ್ಣು. ಅಂತಹ ತಾಯಿಗೆ ಸಲ್ಲಬೇಕಾದ ಗೌರವವನ್ನು ಸರ್ವಕಾಲದಲ್ಲಿ, ಸರ್ವಾತ್ಮನಾ ಸಲ್ಲಿಸಿರಿ. . . ರಣೋತ್ಸಾಹದಿಂದ ಮೈಮರೆತು ಹೊರಟಿರುವ ನೀವು ದುಂಬಿಗಳಂತಾಗಿರಿ. ಜನಜೀವನಕ್ಕೆ ನಿಮ್ಮಿಂದ ಕಾವು ತಟ್ಟದಂತೆ ಧರ್ಮದ ಆ ಹನಿಜೇನನ್ನು ಕೊಡಿಸಿ ತನ್ನಿರಿ, ಅವರದೇ ಔತಣಕ್ಕಾಗಿ" (ಪು. ೭೨)

ಈ ನಾಟಕದ ಭಾಷೆಯ ಬಗ್ಗೆಯೂ ಒಂದು ಮಾತನ್ನು ಹೇಳಬೇಕು. ಹಳಗನ್ನಡ ಶಬ್ದರೂಪಗಳ ಮೇಲೆ ರಾಮರಾಯರಿಗೆ ಇರುವ ಪ್ರಭುತ್ವ ಹಾಗೂ ಒಲವುಗಳೆರಡಕ್ಕು ಅವರ ಭಾಷೆ ನಿದರ್ಶನವಾಗಿದೆ. ಹಳಯಿಗೆ, ತಕ್ಕುಮೆ, ಸೇರೆಗೈ, ನಾಲಗೆದೀಣ್ಟೆ, ಕೂರಾಳ್, ಕುಡುತೆ, ಕಟ್ಟುವಡೆ, ಸಾವಗಿಸು, ಕೋಳುಗೊಡು, ಗಳಂತಿಗೆ, ಆರಯ್, ಸಾಯಿರ, ಮಗಸಿತಿ, ತಾರು, ಗೆಲ್ಲವೆಣ್ಣು, ಬೆದ್ದಲು, ಹಂದೆ, ಬಿತ್ತರಿಗೆ, ನಚ್ಚಣಿ, ಅಂಕವರೆ, ಪಂದಲೆ ಮಲಕು, ಬೆಮೆ, ಉರವಣೆ, ಬಾಹೆ, ಕಟ್ಟುಕ, ಮಾಟ, ಮೂಡಿಗೆ, ಈಯವತೆ–ಇವೇ ಮೊದಲಾದ ಪದಗಳು ಇದಕ್ಕೆ ಸಾಕ್ಷಿಯಾಗಿವೆ. ಆದರೆ, ಅಲ್ಲಲ್ಲಿ ಬರುವ ಇಂಥ ಶಬ್ದಗಳು

ಮತ್ತು ನುಡಿಗಟ್ಟುಗಳನ್ನು ಶಾಸನೋಲ್ಲೇಖಿಗಳನ್ನು ಉದ್ಧೃತಿಗಳನ್ನು ಬಿಟ್ಟರೆ, ಉಳಿದಂತೆ ಭಾಷೆ ಹೊಸಗನ್ನಡಕ್ಕೆ ಹತ್ತಿರವಾಗಿಯೇ ಇದೆ. "ಕೈ ಮುಗಿದು ಹೊರಡುವನು" (ಪು. ೪೮) ಎಂದು ಹೇಳಿದ ಅವರೇ ಎರಡು ಸಾಲುಗಳನಂತರ "ಕರಗಳನ್ನು ಮುಗಿದಿರುವರು" (ಅದೇ) ಎನ್ನುತ್ತಾರೆ. ಗಾಂಭೀರ್ಯಯುಕ್ತ ಸನ್ನಿವೇಶದಲ್ಲಿ ಭಾಷೆಯನ್ನು ಶಕ್ತಿಯುತವಾಗಿ ಬಳಸುವಷ್ಟು ಪರಿಣಾಮಕಾರಿಯಾಗಿ ಜನಸಾಮಾನ್ಯರ ಆಡುಭಾಷೆಯನ್ನು ಬಳಸಲಾರದೆ ಹೋಗಿದ್ದಾರೆಂದೂ ಅನ್ನಿಸಬಹುದು–ವಿಶೇಷವಾಗಿ ಅರನೆಯ ಪ್ರವೇಶದಲ್ಲಿ : "ಏ ಕೇತಬೋವ, ನೀ ಬಾರೆಲಾ, ಹಿರೇ ದಣಾಯಕರಲ್ಲಿ ನಿನ್ನ ಬಿನ್ನವತ್ತಳೆ ಅದೇನುಂಟು ಒಪ್ಪಿಸಿಕೋ" (ಪು. ೩೯) ಎಂಬ ಬಯಿಚ ಗೌಡನೇ "ನಾಡಮಂದಿ ನಾಡನ್ನು ಕಟ್ಟುವ ಈ ಒಂದು ಗೆಯ್ಮೆಯಲ್ಲಿ ಅಷ್ಟೊಂದು ಅಕ್ಕರೆ ತೋರುತ್ತಿರುವಾಗ, ನೆಲದ ಋಣವನ್ನು ಹೊತ್ತಿರುವ ನಾವು ಅವರನ್ನು ಕಂಡು, ಎರಡು ಮಾತನ್ನು ಆಡಲಾರೆವಾದರೆ ನಮ್ಮ ಗೆಯ್ಮೆಯಾದರೂ ಅದೆಂಥದು !" ಎಂದೂ "ನಮ್ಮೂರ ಪಾಂಚಾಳರ ಹೊಯ್ಸಳಾಚಾರಿಯ ಸೊಸೆ, ಕಾನ ಸೆರಗಿನಲ್ಲಿ ಹೊಂಡಕ್ಕೆ ಗೆಳತಿಯರೊಡನೆ ನೀರಿಗೆಂದು ಹರಿವೆಯನ್ನೆತ್ತಿ ಹೊರಟಾಗ, ಬೂಚಿನಾಯಕ ಸಿಡಿಲೆರಗಿದಂತೆ ಆ ಹೆಮ್ಮಕ್ಕಳ ಮೇಲೆ ಎರಗಿ ಉಡೆ ಉರ್ಚಲೆಂದಿದ್ದನಂತೆ. ಅಲ್ಲಿಯೇ ನೇರಿಲೆಯ ಮರದ ತೂರಲ್ಗೊಂಬಿನ ಚಿಟ್ಟೆ ಜೇನನ್ನು ಹೀರುತ್ತಿದ್ದ ಇವನ ಕಣ್ಣಿಗೆ ಅದು ಬಿದ್ದಾಗ, ಇವನು ಸಿಂಹದಂತೆರಗಿ ಅವರ ಮಾನವ ಕಾಯ್ದ (ನಂತೆ) . . ." ಎಂದೆಲ್ಲ ಉದ್ಗರಿಸುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಅಂತೆಯೇ ಸರ್ವನಾಮ ಮತ್ತು ನಿರ್ದೇಶಕ ಸರ್ವನಾಮಗಳನ್ನು ಬಳಸುವ ರಾಮರಾಯರ ಪರಿಯೂ ಸ್ವಲ್ಪ ಕೃತಕವಾಗಿ ತೋರುತ್ತದೆ. ಉದಾಹರಣೆಗೆ: "ಆ ಅವನಿಂದು ತನ್ನೊಡಲನ್ನು . . . ಅರ್ಪಿಸುತ್ತಿದ್ದಾನೆ" (ಪು.೩) ; " . . ಈ ಇವನ ಪ್ರಾಣಗಳನ್ನುಳಿಸಿಕೊಡು". (ಪು, ೪) ; "ಆ ಅವಳಿಗೆ ಈ ಊರಿನವರು ನೀವು . . . . . . ಸತ್ಕರಿಸಿ ಕಳುಹಿದಿರಿ . . ." (ಪು. ೧೯) ; "ಆ ಅವೆಲ್ಲವುಗಳ ಅವಲಂಬನೆಯಿಂದ . . . ಗಳಹುತ್ತಿರುವಿರಿ" (ಪು. ೨೦) ; "ಆ ಹುಡುಗೆಯುವಳನ್ನು ಅದೆಲ್ಲಿ ಹುದುಗಿಸಿಟ್ಟಿರುವೆ " (ಪು. ೨೧) ; "ಆ ಅವರು ಗಡಿಯೊಳಕ್ಕೆ . . . ಹೊರಟು ಹೋಗಿದ್ದರು" (ಪು. ೨೫) " , . . ಆ ಅವರು ಗಡಿಯೊಳಕ್ಕೆ (ಅದೇ) . . .", "ಈ ಇವರು ನಿನ್ನ ತಂದೆ . . . ಆ ಅವರ ಜೀವನವೇ ಒಂದು ಮಹಾತಪಸ್ಸು . . . ಆ ಅವರ ವೀರ್ಯವಿದ್ಯೆಗಳೇ ಒಂದು ಶಕ್ತಿ . . ." (ಪು. ೨೯) ಇತ್ಯಾದಿ. ಆದರೆ ಇವು ಯಾವುವೂ ಭಾಷೆಯನ್ನು ಪರಿಣಾಮಕಾರಿಯಾಗಿ ಹಾಗೂ ಕಾವ್ಯಮಯವಾಗಿ ಬಳಸುವ ಅವರ ಮೂಲಭೂತ ಸಾಮರ್ಥ್ಯಕ್ಕೆ ಅಡ್ಡಿಯಾಗಲಾರವು. ಉದಾಹರಣೆಗೆ ತಲಕಾಡಿನ ಭೀಕರ ಯುದ್ಧದ ಈ ವರ್ಣನೆಯನ್ನು ನೋಡಬಹುದು. "ಇಲ್ಲಿಂದ ಕೂಡಿ ನದಿಯೊಳಕ್ಕೆ ಹರಿಯುತ್ತಿರುವ ಕೆನ್ನೀರ ಕಡಲನ್ನು ನೋಡಿದರೆ, ಕಾವೇರಿಯಿವಳು ತಲಕಾವೇರಿಯಲ್ಲಿ ಹುಟ್ಟದೆ, ಈ ಕಾಳೆಗದ ಕಣದಿಂದಲೇ ಹುಟ್ಟಿ ಹರಿಯುತ್ತಿರುವಳೇನೋ ಎಂಬ ಬೆಮೆ ಹುಟ್ಟುತ್ತದೆ ನನಗೆ." (ಪು. ೭೬), ಅಂತೆಯೇ, ವಿಜಯದ ಪರಿಣಾಮವನ್ನು ವರ್ಣಿಸುವ

ಅಮಿತಯ್ಯನ ಈ ಮಾತುಗಳಾದರೂ ಅಷ್ಟೆ : "ಸಂಸ್ಕೃತವಾದ ಬಾಳು ತನ್ನ ಸನಿಯಕ್ಕೆ ಬಂದ ಒಂದೊಂದು ಜೀವನವನ್ನು ತನ್ನಂತೆಯೇ ಹದವಾಗಿಸಿಕೊಂಡು ಅಂಥದೇ ಶಕ್ತಿಯನ್ನು ಕೊಡುತ್ತದೆ ; ಲೋಕಕಲ್ಯಾಣವನ್ನು ಸಾಧಿಸುತ್ತದೆ." (ಪು. ೮೧) ದಾಪೋದರನೇ ಪಶ್ಚಾತ್ತಾಪದ ತೀವ್ರತೆಯನ್ನು ಸೂಚಿಸುವ ಈ ಮಾತುಗಳಾಗಲೀ–"ನಿನ್ನಂತಹ ವೀರರಮಣಿಯ ಪದತಲದಲ್ಲಿ ಹೊರಳಿ ದಿಂಡುಗೆಡುವುದು, ಕಾಳಗದ ಕಣದಲ್ಲಿ ಮಡಿದು ವೀರಸ್ವರ್ಗವನ್ನು ಏರುವುದಕ್ಕಿಂತಲೂ ಹೆಚ್ಚಿನ ಶ್ರೇಯಸ್ಸು. ನಿನ್ನ ಪದತಾಡನದಿಂದ ವಿದ್ಯುತ್ ಕಣಗಳಾಗಿರುವ ನೆಲದ ಮಣ್ಣ ಕಣಗಳ ಕಿರಣಗಳು ನನ್ನ ಒಡಲಲ್ಲಿ, ಆತ್ಮದಲ್ಲಿ ಅಡಗಿರುವ ಲೋಕಭಯಂಕರವಾದ ದುಷ್ಟ ಗುಣಗಳನ್ನು ಸುಟ್ಟು, ಉರಿಸಿ, ಪವಿತ್ರವಾಗಿಸಿ, ಧರ್ಮದಾಳ್ವಿಕೆಯೊಂದು ವಿಧಿಸಬಹುದಾದ ಧರ್ಮದಂಡನೆಯನ್ನು ಸ್ವೀಕರಿಸಲು ಅರ್ಹವಾಗಿ ನಿಲ್ಲುವಂತೆ ಮಾಡುತ್ತವೆ." (ಪು. ೯೦) ಹಿರಿತನ ಅಥವಾ ಕಿರಿತನದ ಬಗೆಗಿನ ಅವನ ವ್ಯಾಖ್ಯೆಯಾಗಲೀ–"ಲೋಕಜೀವಿಯ ಬದುಕಿನಾಳವನ್ನು ಅಳೆವುದು ಅವನ ವಯಸ್ಸಿನ ಮಾನದಂಡದಿಂದಲ್ಲ. ಐಶ್ವರ್ಯ ಅಧಿಕಾರಿಗಳಿಂದಲೂ ಅಲ್ಲ . . . ಹಿರಿಯನಾಗುವುದು ಅಥವಾ ಕಿರಿಯನಾಗುವುದು ಅವನವನ ಬಾಳಿನ ಸೌಜನ್ಯದಿಂದ, ಶೀಲದಿಂದ, ಸಂಸ್ಕೃತಿಯಿಂದ ಮತ್ತು ಸತ್ವದಿಂದ. ಒಂದು ಆಯುಃ ಪರಿಮಿತಿಯಲ್ಲಿ ಲೋಕಕಲ್ಯಾಣಕ್ಕೆ ಬಾಳು ಎಷ್ಟು ಸವೆಯಿತು ಎಂಬುದರ ದೃಷ್ಟಿಯಿಂದ ದೊಡ್ಡತನವನ್ನಳೆಯಬೇಕು." (ಪು. ೬೧)

ತಂತ್ರದ ದೃಷ್ಟಿಯಿಂದಲೂ ಈ ನಾಟಕ ತುಂಬ ಯಶಸ್ವಿಯಾಗಿದೆ. ಚೋಳರ ಆಳ್ವಿಕೆಯ ಅಭದ್ರತೆ ಅತಂತ್ರಗಳಿಂದ ಕೂಡಿದ ಪರಿಸ್ಥಿತಿಯ ಅನಾವರಣದೊಂದಿಗೆ ಆರಂಭಗೊಳ್ಳುವ ಈ ನಾಟಕ ಸಹಜವೆಂಬಂತೆ ಆ ಆಳ್ವಿಕೆಯ ಹಲವು ಮುಖಗಳನ್ನು ಹಾಗೂ ಅದಕ್ಕೆ ವೈದೃಶ್ಯವೆಂಬಂತಿರುವ ಹೊಯ್ಸಳರ ನಾಡಿನ ಸುಭದ್ರತೆ ಮತ್ತು ಸುತಂತ್ರಗಳನ್ನು ಪರಿಚಯಿಸುತ್ತ, ಚೋಳರ ಅಹಂಕಾರದ ಹೆಡೆಯನ್ನು ಮೆಟ್ಟಿನಿಲ್ಲುವ ವಿಷ್ಣುವರ್ಧನನ ಶೌರ್ಯ–ಪರಾಕ್ರಮಗಳನ್ನು, ಅಂತಿಮವಾಗಿ ತಲಕಾಡಿನಲ್ಲಿ ಸಾಧಿಸಿದ ವಿಜಯವನ್ನು ತುಂಬ ಪರಿಣಾಮಕಾರಿಯಾಗಿ ಮುಂದಿರಿಸುತ್ತದೆ. ಹೀಗಾಗಿ ಈ ನಾಟಕದ ಆದಿ, ಮಧ್ಯ ಮತ್ತು ಅಂತ್ಯಗಳು ತರ್ಕಬದ್ಧವಾದ ಮುಡಿವನ್ನೇ ಪಡೆದುಕೊಳ್ಳುತ್ತವೆ. ನಾಟಕಶಕ್ತಿಯೆ ಸುಯೋಜಿತವಾಗಿ ಸಾಗಿ ಪರಿಣಾಮ ರಮಣೀಯತೆಯನ್ನು ಸಾಧಿಸಿಕೊಳ್ಳುತ್ತದೆ. ತಲಕಾಡಿನ ಮರು ಸ್ವಾಧೀನದ ಸಾಹಸದ ಆ ರೋಮಾಂಚಕ ಇತಿಹಾಸ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಮನಸ್ಸನ್ನು ಸೆಳೆದುಕೊಳ್ಳುವಷ್ಟು ಆಕರ್ಷಣೀಯವಾದ ಬಗೆಯಲ್ಲಿ ಪುನಸ್ಸೃಷ್ಟಿಗೊಳ್ಳುತ್ತದೆ.

ನಾಟಕಪ್ರಕಾರ ಕನ್ನಡದಲ್ಲಿ ಅಂಥ ಸಮೃದ್ಧಿಯನ್ನೇನೂ ಕಂಡಿಲ್ಲ. ಐತಿಹಾಸಿಕ ನಾಟಕಗಳ ಕ್ಷೇತ್ರವಂತೂ ಬಡವಾಗಿರುವ ಕ್ಷೇತ್ರವೇ. ಆದರೂ ಅಲ್ಲಿಯ ವಿರಳವಾದ ಉತ್ತಮ ನಾಟಕಗಳಲ್ಲಿ 'ತಲಕಾಡುಗೊಂಡ' ಖಂಡಿತವಾಗಿಯೂ ಒಂದೆನ್ನಿಸಿಕೊಳ್ಳುತ್ತದೆ. ವಸ್ತು, ಪಾತ್ರ, ಭಾಷೆ, ತಂತ್ರ, ನಿರ್ವಹಣೆ–ಈ ಎಲ್ಲ ದೃಷ್ಟಿಗಳಿಂದಲೂ ತುಂಬ ಗಮ

ನಾರ್ಹವಾದ ಕೃತಿ ಎಂಬ ಕೀರ್ತಿಗೆ ಅರ್ಹವಾಗುತ್ತದೆ. ರಾಮರಾಯರ ಒಟ್ಟಾರೆ ಸಾಹಿತ್ಯದಲ್ಲಿ ಈ ನಾಟಕ ಮಹತ್ವದ ಕೃತಿಯೆನ್ನಿಸಿಕೊಳ್ಳುತ್ತದೆ. ಇಂಥ ಒಂದು ಉತ್ತಮ ಐತಿಹಾಸಿಕ ನಾಟಕವನ್ನು ನೀಡಿರುವುದಕ್ಕಾಗಿ ಅವರು ಅಭಿನಂದನೀಯರೂ ಆಗುತ್ತಾರೆ.

ಕಥೆ (ಸ್ವರ್ಗಸೋಪಾನ) ಅತ್ಯಂತ ಕಲಾತ್ಮಕವಾಗಿದೆ. ವಾಲ್ಮೀಕಿ ರಾಮಾಯಣದ ಶ್ರೀರಾಮ ಲಕ್ಷ್ಮಣ ಸೀತೆಯರಿಗಿಂತಲೂ ಇಲ್ಲಿನ ಸೀತಾರಾಮಲಕ್ಷ್ಮಣರು ನಮ್ಮ ಆದರಾಭಿಮಾನಗಳಿಗೆ ಹೆಚ್ಚು ಪಾತ್ರರಾಗುತ್ತಾರೆ. ಅವರ ಬಾಯಿಂದ ಬರುವ ಒಂದೊಂದು ಮಾತೂ ನಮ್ಮ ಹಿರಿಯ ಸಂಸ್ಕೃತಿಯ ಸಾರಸರ್ವಸ್ವದ ಪ್ರತೀಕವಾಗಿವೆ ; ಆದರ ಸುಸಂಸ್ಕೃತದ ಹೃದಯದ ತಂಪನ್ನು ಹೊರಸೂಸುತ್ತಿದೆ ; ಮಾನವನ ಜೀವಿತದ ಸರ್ವಶ್ರೇಷ್ಠ ಆದರ್ಶವನ್ನು ಸಾರುತ್ತಿದೆ.

ಶೋಭಕೃತು, ಆಶ್ವಯುಜ

ಕೆ. ನಾಗೇಂದ್ರಪ್ಪ

ಶಿಲ್ಪ ಸಂಗೀತ

ಆಶಾ ಹೆಗಡೆ

ಹೊಯ್ಸಳರ ಕಾಲದ ಇತಿಹಾಸದ ಒಂದು ಭಾಗವನ್ನು ಲೇಖಕರು ನಾಟಕದ ವಸ್ತುವನ್ನಾಗಿ ಆಯ್ದುಕೊಂಡಿದ್ದಾರೆ.

ಮೊದಲನೆಯ ಪ್ರವೇಶ ಹೊಯ್ಸಳ ಅರಸ ವಿಷ್ಣುವರ್ಧನನ ಒಡ್ಡೋಲಗದ ಕುರಿತಾಗಿದೆ. ಅರಸ ವಿಷ್ಣುವರ್ಧನ, ಯುವರಾಜ ಉದಯಾದಿತ್ಯ, ಯುವರಾಜ ಕುಮಾರ ಎರೆಯಂಗ—ಆಸ್ಥಾನದಲ್ಲಿ ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸುತ್ತಾರೆ.

ಚೋಳರು, ರಾಜ ವಿಷ್ಣುವರ್ಧನನ ತಾಯಿಯ ತೌರಾದ ಗಂಗ ವಂಶಕ್ಕೆ ಮುತ್ತಿಗೆ ಹಾಕಿದಾಗ, ಅದನ್ನು ಸಹಿಸದೆ ಗಂಗ ರಾಜಧಾನಿಯಾದ ಹಳೆಯ ತಲಕಾಡನ್ನು ಮುತ್ತಿಗೆ ಹಾಕುವ ನಿರ್ಧಾರ ತಳೆದಾಗ, ಆತನ ನಿರ್ಧಾರಕ್ಕೆ ಸಂಪೂರ್ಣ ಜನ ಬೆಂಬಲ ದೊರಕಿತು. ನಾಡಿನ ಸೇವೆಗೈದವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಅಂದಿನ ಸಭೆಯನ್ನು ಏರ್ಪಡಿಸಲಾಗಿತ್ತು.

ಯುದ್ಧದಲ್ಲಿ ವೀರಾವೇಶದಿಂದ ಕಾದಾಡಿದ ಶೂರರಿಗೆ ನೆನಪಿನ ಕಾಣಿಕೆಯನ್ನು ನೀಡಲಾಯಿತು. ಸಭೆಯಲ್ಲಿ ಪಾಲ್ಗೊಂಡಿದ್ದವರೆಲ್ಲರೂ ಅತ್ಯುತ್ಸಾಹದಿಂದ ತಲ್ಲೀನರಾಗಿದ್ದಾಗ, ಕುಮಾರ ಎರೆಯಂಗನು ಸಿಟ್ಟಿನಿಂದ ಕೆಂಪಡರಿದ ಮುಖದೊಂದಿಗೆ, ತನ್ನ ತಂದೆ ಕರೆಯುತ್ತಿರುವುದನ್ನೂ ಲೆಕ್ಕಿಸದೆ ಸಭೆಯಿಂದ ರೊಯ್ಯನೆ ಹೊರಟುಹೋಗುತ್ತಾನೆ.

ಇದರಿಂದ ಅಸಮಾಧಾನಗೊಂಡ ರಾಜನು "ರಾಜಸಭೆಗೆ ಅವಮಾನ ಮಾಡಿದವರಿಗೆ ಶಿಕ್ಷೆ ಯಾವುದು ?" ಎಂದು ಮಂತ್ರಿ ನಾಗಯ್ಯನನ್ನು ಪ್ರಶ್ನಿಸುತ್ತಾನೆ. ಮಂತ್ರಿ "ಶಿಕ್ಷೆ ಕೊಡಬೇಕು–ಆದರೂ–ತಮ್ಮವರೇ–ಪ್ರಾಯದಲ್ಲೂ ಕಿರಿಯವರು ಅಲ್ಲವೇ" ಎಂಬ ಅರ್ಥದಲ್ಲಿ ಮಾತನಾಡಿದರೂ, "ಅರಮನೆಯವನಾದರೂ, ಆತ ನಾಡ ಶಾಸನದಿಂದೇನೂ ಹೊರತಲ್ಲ !" ಎಂದು ರಾಜ ಕಟುವಾಗಿ ನುಡಿಯುತ್ತಾನೆ.

ಕರ್ನಾಟಕ ಹೊಯ್ಸಳ ಕಾಲದ ಇತಿಹಾಸವನ್ನು ಚಿತ್ರಿಸುವ ನಾಟಕ ಚಕ್ರದಲ್ಲಿ ಮೊದಲನೆಯದಾಗಿದೆ. ಇದು ೧೯೫೯ ಮತ್ತು ೧೯೬೯ರಲ್ಲಿ ಎರಡು ಪ್ರಕಟಣೆಗಳನ್ನು ಕಂಡಿದೆ. ಕನ್ನಡ ಸಾಹಿತ್ಯ ಪರಿಷತ್ತು ೧೯೫೫–೫೬ರಲ್ಲಿ ಏರ್ಪಡಿಸಿದ್ದ ನಾಟಕ ಸ್ಪರ್ಧೆಯಲ್ಲಿ ಇದಕ್ಕೆ ತೃತೀಯ ಬಹುಮಾನ ಲಭ್ಯವಾಯಿತು. ಈ ನಾಟಕದ ಎರಡನೆಯ ಪ್ರವೇಶವನ್ನು ಕರ್ನಾಟಕ ರಾಜ್ಯದ ಏಳನೆಯ ರೀಡರಿನಲ್ಲಿ ಅಳವಡಿಸಲಾಗಿದ್ದಿತು. ಸಂ.

ಅಂದಿನ ರಾಜರ ನ್ಯಾಯೋಚಿತ ಮಾರ್ಗಕ್ಕೂ ಇಂದಿನ ಸರಕಾರದ ಡಂಭಾಚಾರಕ್ಕೂ ಎಷ್ಟು ವ್ಯತ್ಯಾಸ ?

ವಿಜಯೋತ್ಸವದ ಕುರುಹಾಗಿ ನಾಡಿನಲ್ಲಿ ೩ ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳೇರ್ಪಟ್ಟಿರುತ್ತವೆ. ಆ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಲಿ ಎಂದು ಹಾರೈಸಲು ರಾಜನ ಪಟ್ಟದರಸಿ ಶಾಂತಲಾದೇವಿ ಸಭೆಗೆ ಬರುತ್ತಾರೆ.

ತಾಯಿಯಿಲ್ಲದ ಮಗು ಎರೆಯಂಗನನ್ನು ಶಾಂತಲಾದೇವಿ ಸಾಕಿರುತ್ತಾಳೆ. ಸಭೆಯಲ್ಲಿ ಮುನಿಸಿಕೊಂಡು ಹೊರಟು ಹೋಗಿದ್ದ ಎರೆಯಂಗ ಆಹಾರವನ್ನೂ ಸೇವಿಸದಿದ್ದಾಗ, ಶಾಂತಲಾದೇವಿ ಆತನ ನಿರ್ಗಮನದ ಕಾರಣವನ್ನು ಪ್ರಶ್ನಿಸಿ, ರಾಜನಾದವನ, ಆಗುವವನ ಹಕ್ಕು, ಕರ್ತವ್ಯಗಳನ್ನು ಜ್ಞಾಪಿಸುತ್ತಾಳೆ.

ಅಂದು ರಾಜಸಭೆಯಲ್ಲಿ ಮುನಿಸಿಕೊಂಡು ಎದ್ದು ಹೋದ ಎರೆಯಂಗ ಪಶ್ಚಾತ್ತಾಪದಿಂದ ಕುಸಿದುಹೋಗಿದ್ದ. ಮನಸ್ಸಿನ ಒಂದು ಕ್ಷುಲ್ಲಕ ಆವೇಗವನ್ನೇ ತಡೆಯಲಾಗದ ತನ್ನ ಕೈಯಲ್ಲಿ ನಾಡಿನ ಸುರಕ್ಷತೆ ಆಗುವದಾದರೂ ಹೇಗೆ ? ಎಂದು ತನ್ನ ಮನದ ಅಳಲನ್ನು ತೋಡಿಕೊಳ್ಳುವುದರ ವಿವರಣೆ ಎರಡನೆಯ ಪ್ರವೇಶದಲ್ಲಿದೆ.

ಆಹಾ ! ಕೃತಿಕಾರನ ಕಲ್ಪನೆ ಎಷ್ಟು ಸೊಗಸಾಗಿದೆ! ರಾಜರ ಆಳ್ವಿಕೆಯಲ್ಲಿ ಪರಹಿತ ಸಾಧನೆಗೆ ಎಷ್ಟೊಂದು ಅಗ್ರಸ್ಥಾನವಿತ್ತು ? ಪ್ರಜೆಗಳ ಹಿತವೇ ತಮ್ಮ ಹಿತ ಎಂಬ ಮಾತನ್ನು ಮನಸಾ, ಶಿರಸಾವಹಿಸಿ ಪಾಲಿಸುವ ಕ್ರಮ ಹೇಗೆ ಅರ್ಥಪೂರ್ಣವಾಗಿತ್ತು ?

೩ನೆಯ ಪ್ರವೇಶದಲ್ಲಿ ಶಾಂತಲಾದೇವಿ ನೃತ್ಯಕ್ಕಾಗಿ ಸರ್ವಾಲಂಕಾರ ಭೂಷಿತೆಯಾಗಿದ್ದಾಳೆ. ಮೇಳದ ನಾಯಕಿ ನಾಗವ್ವೆ ಆನಂದತುಂದಿಲಳಾಗಿ ಮೈಮೇಲಿನ ಪರಿವೆಯೇ ಇಲ್ಲದೆ ಓಡಾಡುತ್ತಿದ್ದಾಳೆ. ಮಹಾರಾಣಿ ಬರುವ ಬಾಗಿಲಿನಲ್ಲೇ ಪರಿಚಾರಿಕೆಯರು ಇದಿರ್ಗೊಳ್ಳಲು ಕಾಯುತ್ತಿದ್ದರೂ ನಾಗವ್ವೆ ಬೇರೊಂದು ಬಾಗಿಲನ್ನು ನೋಡಿಕೊಂಡು, ಅಲ್ಲಿ ಯಾರೂ ಇಲ್ಲದಿರುವ ಬಗ್ಗೆ ಅವರನ್ನೆಲ್ಲ ಕರೆದು ಗದರುತ್ತಿದ್ದಾಳೆ.

ಆಕೆಯ ಭಾವಪರವಶತೆಗೆ ಕಾರಣ ಅಂದು ಯೋಜಿತವಾಗಿರುವ ರಾಣಿಯವರ ನೃತ್ಯ ಪ್ರದರ್ಶನ ! ಸರ್ವಾಲಂಕೃತೆಯಾಗಿರುವ ಆಕೆಯನ್ನು ದಿಟ್ಟಿಸುವುದೇ ಕಣ್ಣಿಗೆ ಹಬ್ಬ! ಆಕೆಯ ಸೌಂದರ್ಯದ ಬಗ್ಗೆ ನಾಗವ್ವೆಗೆ ಇರುವ ಅಪಾರ ಅಭಿಮಾನದ ಚಿತ್ರಣವನ್ನು ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಅಷ್ಟರಲ್ಲೇ ಕುಮಾರ ಎರೆಯಂಗನು ಇನ್ನಿಲ್ಲವಾಗುವ ಸುದ್ದಿ ಅರಮನೆಯನ್ನು ಮುಟ್ಟುತ್ತದೆ. ಅರಮನೆಯ ಪರಿವಾರ ಅಪ್ರತಿಭರಾದಂತೆ ಕಂಡಾಗ ರಾಜನು, ಮನದಾಳದ ನೋವು ಸಭಿಕರಿಗೆ ತಲಪಬಾರದೆಂದು ಕಟ್ಟಪ್ಪಣೆ ಹೊರಡಿಸುತ್ತಾನೆ.

ಆಗಿನ ಕಾಲದ ನಿಃಸ್ವಾರ್ಥ ರಾಜ್ಯ ಪರಿಪಾಲನೆಯ ಕ್ರಮ ಲೇಖಕರ ಈ ವಾಕ್ಯದಲ್ಲೇ ವ್ಯಕ್ತ ಗೊಳ್ಳುತ್ತದೆ.

ನಾಲ್ಕನೆಯ ಪ್ರವೇಶದಲ್ಲಿ ಶಾಂತಲಾದೇವಿಯ ಧರ್ಮಗುರು ಪ್ರಭಾಚಂದ್ರರು ರಾಣಿಯನ್ನು ಸಮಾಧಾನಗೊಳಿಸುವ ವಿವರಣೆ ಇದೆ.

ಪ್ರಭಾಚಂದ್ರರು ಎರೆಯಂಗ ಜೀವವನ್ನು ಕಳೆದುಕೊಂಡಿರುವ ಕುರಿತೇ ಸಂಶಯ ವನ್ನು ವ್ಯಕ್ತಪಡಿಸುತ್ತಾರೆ. ಕೆರೆಯ ದಡದಲ್ಲಿ ಈತನ ಉಡುಗೆ, ಉಷ್ಣೀಷಗಳು ಇದ್ದ ಮಾತ್ರಕ್ಕೆ ಕೆರೆಯಲ್ಲಿ ಹಾರಿಕೊಂಡನೆಂಬದು ಒಪ್ಪತಕ್ಕ ಮಾತಲ್ಲ ಎಂದು ಸಂತೈಸುತ್ತಾರೆ.

ಐದನೆಯ ಪ್ರವೇಶದಲ್ಲಿ ಕುಮಾರ ಎರೆಯಂಗನು ಕುಮಾರ ಯೋಗಿಯಾಗಿ ಧ್ಯಾನಾಸಕ್ತನಾಗಿರುತ್ತಾನೆ. ಆತನನ್ನು ಅನುಸರಿಸುತ್ತಾ ಮಣಲೂರು ನಾಡಿನ ಭರಮ ಹೆಗಡೆಯ ಆಸ್ಥಾನದ ಕಂಬಿಗನೊಬ್ಬನ ಮಗ ಸಂಕಮನು ಬರುತ್ತಾನೆ.

"ನೀವು ಕುಳಿತು ನಮ್ಮ ಒಳಿತನ್ನು ನೆನೆವುದೇ ನಮ್ಮ ಶ್ರೇಯಸ್ಸು" ಎಂದ ಸಂಕ ಮನ ಮಾತಿಗೆ "ಕೇವಲ ನೆನೆಸಿಕೊಂಡರೆ ಏನು ಪ್ರಯೋಜನ, ಹಾಗೆ ನೆನೆದುದನ್ನು ಜನಪದದ ಬಾಳಿನಲ್ಲಿ ಬೆರೆಸಬೇಡವೆ ? ಬೆರೆಸದ ದಿವಸ ಜೀವ ಜೀವಗಳ ಸಂಪರ್ಕ ಕಡಿದು ಹೋಗುತ್ತದೆ, ಲೋಕದ ನಡೆ ಕುಸಿದು ಬೀಳುತ್ತದೆ. ವಿರಕ್ತನಾದ ಮಾತ್ರಕ್ಕೆ ಲೋಕ ಧರ್ಮವನ್ನು ಕೆಡಿಸಬೇಕು ಎಂದಲ್ಲ. ಒಂದು ವೇಳೆ ಕೆಡಿಸಿದನೋ ಅವನ ಒಡಲು ಬುವಿಗೆ ಹೊರೆ" ಎನ್ನುತ್ತಾನೆ ಕುಮಾರಯೋಗಿ.

ಇಲ್ಲಿ ಸನ್ಯಾಸಿಯಾದವನ ನಿಜವಾದ ಕರ್ತವ್ಯವನ್ನು ಲೇಖಕರು ಜ್ಞಾಪಿಸುತ್ತಿದ್ದಾರೆ. ನಿಷ್ಕಾಮ ಕರ್ಮದ ಆಚರಣೆಗೆ ಕುಮಾರ ಯೋಗಿಯ ಈ ಮಾತುಗಳು ಉತ್ತಮ ಉದಾಹರಣೆ.

ಆರನೆಯ ಪ್ರವೇಶದಲ್ಲಿ ಬೇಲೂರ ಚೆನ್ನಕೇಶವನ ಸನ್ನಿಧಿಯಲ್ಲಿ ಶಾಂತಲಾ ದೇವಿಯ ನೃತ್ಯಕ್ಕೆ ರಂಗಸ್ಥಳ ಸಜ್ಜಾಗುತ್ತಿದೆ. ಕಡತ, ಬಳಪಗಳನ್ನು ಹಿಡಿದು ಪ್ರವೇಶಿಸಿದ ದಾಸೋಜ ನಾಟ್ಯರಂಗದಿಂದ ಅಷ್ಟಷ್ಟು ದೂರಗಳಲ್ಲಿ ಬೇರೆ ಬೇರೆ ಕೋನಗಳಲ್ಲಿ ನಿಂತು ನೋಡಿ, ಅಳತೆ ಹಾಕಿ, ಏನೇನನ್ನೊ ಗುಣಿಸಿಕೊಳ್ಳುವನು.

ಆತ ವಯೋವೃದ್ಧ.ಆತನ ಕಲಿಕೆಯ ದಾಹಕ್ಕೆ ಕೊನೆ ಎಂಬುದೇ ಇಲ್ಲ.ಶಾಂತಲಾ ದೇವಿ ಆತ ಲೆಕ್ಕ ಹಾಕಿದುದೇನೆಂಬುದನ್ನು ಪ್ರಶ್ನಿಸಿಸುವುದಕ್ಕೆ ಆತ ಈ ರೀತಿ ಉತ್ತರಿಸುತ್ತಾನೆ :

"ನಮಗೆ ಒಲಿದಿರುವ ಶ್ರೀದೇವಿ ಶಾಂತಲಾದೇವಿ ಭಕ್ತಿಪರವಶತೆಯಲ್ಲಿ ನಾನು ಕಾಣದ ಕುಣಿತವನ್ನು ಕುಣಿದಾಳು. ಆ ಹೊಸದನ್ನು ಗುರುತು ಹಾಕಿಕೊಳ್ಳದೆ ಬಿಟ್ಟರೆ, ನಾಳೆ ಜನ ನನ್ನನ್ನು ಏನೆಂದಾರು? ಅದನ್ನು ಅಚ್ಚಳಿಯದಂತೆ ನಿಲ್ಲಿಸದಿದ್ದರೆ ದೇಶಕ್ಕೆ ದ್ರೋಹ ಮಾಡಿದಂತಾಗದೆ? ಆ ತಾಯಿ ಕುಣಿತದಲ್ಲಿ ಒಲೆದು, ಅಲೆಯಾಗಿ ತೇಲುವಾಗ, ನಾವು ರೂವಾರಿಗಳು ಯಾರು ಯಾರು ಎಲ್ಲೆಲ್ಲಿ ಹೇಗೆ ನಿಲ್ಲಬೇಕು ಎಂಬ ಲೆಕ್ಕ ಬೇಕಲ್ಲ?"

ಕಲೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಬೇಕೆನ್ನುವ ಎಂತಹ ಛಲ ಆ ಇಳಿ ವಯಸ್ಸಿನಲ್ಲೂ!

ಅಂತಹ ಉತ್ಸಾಹ ಈಗಿನ ಯುವಕರಲ್ಲೂ ಇದ್ದಿದ್ದರೆ, ನಮ್ಮ ದೇಶವೂ ಮುಂದುವರಿದ ರಾಷ್ಟ್ರವಾಗಬಹುದಿತ್ತು ಎನ್ನುವ ಲೇಖಕರ ಒಳಧ್ವನಿ ಎಷ್ಟು ಸಮಂಜಸ!

ಏಳನೆಯ ಸಂಜೆ ಶಾಂತಲಾದೇವಿ ಮತ್ತು ಇತರ ಹೆಣ್ಣುಗಳ ನೃತ್ಯದ ಕುರಿತು

ಅಪಾರ ಜನಸ್ತೋಮ ಶಾಂತಲಾದೇವಿಯ ಅಪೂರ್ವ ನೃತ್ಯದಿಂದ ಮೈ ಮರೆಯುತ್ತಾರೆ ದಾಸೋಜನು ಹೊಸಕುಣಿತಗಳ ಅದ್ಭುತ ಭಾವನೆಗಳನ್ನು ಕೆತ್ತನೆಗಳಲ್ಲಿ ತೋರಿಸುವ ತನ್ನ ಮನದಿಚ್ಛೆಯನ್ನು ವ್ಯಕ್ತಪಡಿಸುತ್ತಾನೆ.

ಈ ನಡುವೆ ಮಣಲೂರ ನಾಡ ಹೆಗ್ಗಡೆ, ಉತ್ಸವ ಇನ್ನೇನು ಆರಂಭವಾಗಬೇಕು ಎನ್ನುವಾಗ, ಆ ಸ್ಥಳದಿಂದ ನಿರ್ಗಮಿಸುತ್ತಾನೆ. ಈತ ಚೋಳ ಸಾಮಂತನಾಗಿದ್ದಾಗ, ಅವರಿಗೆ ಬಹು ನಿಷ್ಠನಾಗಿದ್ದವನು ಈಗ ಹೊಯ್ಸಳರ ಗೆಲುವಾದೊಡನೆ ಇತ್ತ ಕಡೆ ವಾಲಿದವನು.

ಎಂಟನೆಯ ಸಂಜೆಯಲ್ಲಿ ಸಂಕಮ ಕುಮಾರಸ್ವಾಮಿ (ಎರೆಯಂಗ)ಯ ಸನ್ನಿಧಿಯಿಂದ ಮನೆಗೆ ಬಂದಿರುತ್ತಾನೆ. ತಾಯಿಯೊಡನೆ ಭರಮ ಹೆಗ್ಗಡೆಯ ಚಲನವಲನಗಳ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾನೆ.

ಕುಮಾರ ಸ್ವಾಮಿಯ ಆಣಿ ಮುತ್ತುಗಳು ಆತನಿಗೆ ಅಮೃತಪಾನದಂತೆ ! ಆ ಸೆಳೆತದಿಂದಾಗಿಯೇ ಆತ ಬೇಟೆಯ ನೆವದಿಂದ ಮನೆಯಲ್ಲಿ ಹೆಚ್ಚು ಸಮಯ ನಿಲ್ಲದೆ ಹೊರಟು ಬಿಡುತ್ತಾನೆ.

ರಾಜರ ಆಳ್ವಿಕೆಯಲ್ಲಿ ಎಳೆಯ ಯುವಕರಲ್ಲೂ, ಬದುಕನ್ನು ಹಸನುಗೊಳಿಸಬಲ್ಲ ಮಾರ್ಗದತ್ತ ನಡೆಯಬೇಕೆನ್ನುವ ಪ್ರಮಾಣಿಕತೆ ಕಂಡುಬರುತ್ತಿತ್ತು. ಅದರ ಒಂದು ಉದಾಹರಣೆಯನ್ನು ಲೇಖಕರು ಈ ಘಟನೆಯಲ್ಲಿ ಹೆಣೆದಿದ್ದಾರೆ.

೯ನೆಯ ಪ್ರವೇಶದಲ್ಲಿ ಚೋಳ ನಾಡಿನವರು ಹೊಯ್ಸಳ ದೇಶದ ಇಬ್ಬರಿಗೆ, ಹೊನ್ನಿನ ಮಳೆಗರೆದು, ದೇಶದ ಒಳಗುಟ್ಟನ್ನು ತಿಳಿಸುವ ವ್ಯವಸ್ಥೆ ಮಾಡಿರುತ್ತಾರೆ. ಹೊನ್ನಿನಾಶೆಗೋಸ್ಕರ ಉಂಡ ಮನೆಗೇ ದ್ರೋಹ ಬಗೆಯುವ ಸನ್ನಾಹದಲ್ಲಿ ಕಪಟ ವೇಷ ಧಾರಿಗಳಾದ, ಆ ಇಬ್ಬರನ್ನು ಹಿಡಿದು, ನಾಡಿಗೆ ತನ್ನ ನಿಷ್ಠೆಯನ್ನು ಸಂಕಮನು ಒಪ್ಪಿಸುತ್ತಾನೆ.

ಸಂಕಮ ಒಬ್ಬ ಪ್ರಜ್ಞಾವಂತ ನಾಗರಿಕ. ಸುಭಿಕ್ಷ ನಾಡಿನ ಕಲ್ಪನೆಯ ವಿವರಣೆ ಲೇಖಕರ ಲೇಖನಿಯಿಂದ ನಿರರ್ಗಳವಾಗಿ ಹರಿದು ಬಂದಿದೆ. ಆ ಕಲ್ಪನೆಯಂತೆ ದೇಶ ನಡೆಯಬಹುದಾದರೆ, "ರಾಮರಾಜ್ಯ"ವಾಗುವದರಲ್ಲಿ ಸಂಶಯವಿಲ್ಲ. ಯುವಶಕ್ತಿಯ ರಕ್ತದ ಕಣಕಣದಲ್ಲಿ 'ದೇಶಭಕ್ತಿ'ಯನ್ನು ತುಂಬುವ ಲೇಖಕರ ಪ್ರಯತ್ನ ಶ್ಲಾಘನೀಯ!

೧೦ನೆಯ ಪ್ರವೇಶದಲ್ಲಿ ಮಣಲೂರ ನಾಡ ಹೆಗ್ಗಡೆ, ಭರಮಹೆಗ್ಗಡೆ, ಊರಿನ ಗೌಡರನ್ನು ಭೇಟಿಯಾಗಿ, ದೇಶದ್ರೋಹಿ ಕೆಲಸದಲ್ಲಿ ತನ್ನ ಪಡೆಗೆ ಸೇರಲು ಬಯಸುವ ಮಂದಿಯ ಸಂಖ್ಯಾಬಲ ಕೇವಲ ಐದು ಜನರಿರುವದನ್ನು ನೋಡಿ, ಕನಿಷ್ಠ ೧೦ ಜನ ರನ್ನು ಹೊಂದಿಸಲಾಗದ ಗೌಡನ 'ನಿಷ್ಕ್ರಿಯತೆ'ಯ ಬಗ್ಗೆ ಕ್ರೋಧಗೊಳ್ಳುತ್ತಾನೆ.

ಗೌಡನಿಗೆ ಬಿಸಿ ತುಪ್ಪ ನುಂಗಲಾರದ, ಉಗಿಯಲಾರದ ಸ್ಥಿತಿ ! ನಾಡಿನ ಗಿಡ ಗಿಡಗಳು, ವಿಷ್ಣುವರ್ಧನನ ಅವ್ಯಾಜ ಪ್ರೇಮದ ನೆರಳಿನಲ್ಲಿ ಸೊಂಪಾಗಿ ಬೆಳೆಯುತ್ತಿರುವಾಗ ಅದೇ ನೆಮ್ಮದಿಯ ತಂಪು ಗಾಳಿ ತನ್ನ ಮೇಲೂ ಸೋಕಿದೆ. ಕೃತಜ್ಞತೆಯಿಂದ ಕುಗ್ಗ

ಬೇಕಾದ ತಾನು ಕೃತಘ್ನನಾಗಿ ದೇಶದ್ರೋಹಿ ಕೆಲಸವನ್ನು ಮಾಡಬೇಕಾದ ಪರಿಸ್ಥಿತಿಯಿಂದಾಗಿ ಸಂಕಷ್ಟದಲ್ಲಿ ಸಿಲುಕಿ ನರಳುತ್ತಿದ್ದಾನೆ.

ಈ ಸನ್ನಿವೇಶದ ಚಿತ್ರಣ ಮನೋಜ್ಞವಾಗಿ ಮೂಡಿ ಬಂದಿದೆ.

೧೧ನೆಯ ಪ್ರವೇಶ, ಕುಮಾರ ಯೋಗಿ, ಕೇವಲ ಸಣ್ಣ ತಪ್ಪಿನ ಪ್ರಶ್ಚಾತ್ತಾಪದಿಂದಾಗಿ, ಸನ್ಯಾಸಿ ದೀಕ್ಷೆಯನ್ನು–ಪಡೆದುಕೊಂಡು ಅಯಾಚಿತವಾಗಿ ಕೂಡಿ ಬಂದ ಶಿಷ್ಯರೊಂದಿಗೆ ದೇಶದ ಆಗುಹೋಗುಗಳನ್ನು ತಿಳಿದುಕೊಂಡು ದೇಶೋದ್ಧಾರಕ್ಕಾಗಿ ಶ್ರಮಿಸುವ ವಿವರಣೆ ಇದೆ.

ಈ ವೇಳೆಗಾಗಿಯೇ ಆತನಿಗೆ ಸಾಕಷ್ಟು ಭಕ್ತ ಸಮೂಹ ಒಟ್ಟುಗೂಡಿರುತ್ತದೆ. ಪ್ರತಿಯೊಬ್ಬರ ನಿವೇದನೆಗಳನ್ನು ತಾಳ್ಮೆಯಿಂದ ಆಲಿಸುತ್ತಾನೆ.

"ನಿಜವಾಗಿಯೂ ನೀವು ಹೊಯ್ಸಳೇಶ್ವರನ ಆಳ್ವಿಕೆಯಲ್ಲಿ ಸುಖವಾಗಿದ್ದೀರಾ ?" ಎಂಬುದನ್ನು ಮನಃಪೂರ್ವಕವಾಗಿ ಹೇಳಬೇಕು. ರಾಜನ ಮೇಲಿನ ಭಕ್ತಿಯಿಂದಾಗಿಯೋ ಅಥವಾ ಭಯದಿಂದಾಗಿಯೋ "ಸೊಗಸಾಗಿದೆ" ಎಂದು ನುಡಿಯಬಾರದು ಎಂದು ಅವರಿಗೆ ನಿರ್ಭೀತಿಯಿಂದ ಉತ್ತರಿಸುವ ಸ್ವಾತಂತ್ರ್ಯವನ್ನು ಕೊಡುತ್ತಾನೆ.

ನಿಜವಾದ 'ಪ್ರಜಾಪ್ರಭುತ್ವ' ಎಂದರೆ ಹೀಗಿರಬೇಕು. ಈಗಿನ ರಾಜಕಾರಣದಲ್ಲಿ ನ್ಯಾಯಬದ್ಧವಾದುದನ್ನು ಯಾರಾದರೂ ಮಾತನಾಡಿದರೂ ಅವರಿಗೆ ಸೆರೆಮನೆ ವಾಸವೇ ಗತಿ ! ಲೇಖಕರ ವಿಶ್ಲೇಷಣೆ ಸೊಗಸಾಗಿದೆ !

"ನಾವು ಮಕ್ಕಳು ಮರಿಗಳೊಡನೆ ಹೊಟ್ಟೆ ತುಂಬ ಉಣ್ಣುತ್ತೇವೆ, ಮೈ ತುಂಬ ಬಟ್ಟೆ ಹೊದೆಯುತ್ತೇವೆ, ಪ್ರಭುತ್ವ ನಮ್ಮನ್ನು ಚೆನ್ನಾಗಿ ನೋಡಿಕೊಂಡಿದೆ. ಆ ಮನೆ ಹೀಗೆಯೇ ಶಾಶ್ವತವಾಗಿ ನಿಲ್ಲಲಿ" ಎಂದು ಹರಸುತ್ತಾನೆ.

ಮತ್ತೊಬ್ಬ, "ನನಗೆ ನನ್ನ ಮಗುವನ್ನು ಮತ್ತೆ ಕೊಡಿಸಿಕೊಡುವ ದೊಡ್ಡ ಮನಸ್ಸು ಮಾಡಬೇಕು" ಎಂದು ಮೊಣಕಾಲೂರಿ ಬೇಡುತ್ತಾನೆ.

ಆತನ ಮಗನೂ ಕುಮಾರ ಯೋಗಿಯ ಸಂಗದಲ್ಲಿ ಮೈ ಮರೆತು ಇಳಿ ವಯಸ್ಸಿನ ತನ್ನನ್ನು ಮರೆತಿದ್ದಾನೆ ಎಂಬುದು ಆತನ ದೂರು.

ಎಲ್ಲರನ್ನೂ ಸಮಾಧಾನಿಸಿ ಕಳುಹಿಸಿ. ಸಂಕಮನೊಡನೆ ಯುದ್ಧ ಸನ್ನದ್ಧರಾಗುವ ಕುರಿತು ಚರ್ಚಿಸುತ್ತಾನೆ. ಜೊತೆಗೆ ಜೀವಬಲಿ ಆಗದಿರುವ ಕುರಿತೂ ಎಚ್ಚರಿಸುತ್ತಾನೆ.

೧೨ನೆಯ ಪ್ರವೇಶದಲ್ಲಿ, ದೇಶದ್ರೋಹಿ ಕೆಲಸ ಮಾಡುತ್ತಿರುವ ದುಗ್ಗವೆಗ್ಗಡೆ ಕಾವೇರಿ ತೀರದ ಒಂದು ಕಾಡಿನಲ್ಲಿ ಬಿಡಾರ ಮಾಡಿಕೊಂಡು, ಚೋಳರಿಗೆ ತಮ್ಮ ನಾಡಿನೊಳಗೆ ಪ್ರವೇಶ ಕಲ್ಪಿಸುವ ಸಲುವಾಗಿ ತಿರುಗಾಡುತ್ತಿರುತ್ತಾನೆ. ಭರಮಯ್ಯನೂ ಅಲ್ಲಿ ಬಂದು ಆತನನ್ನು ಭೇಟಿಯಾಗುತ್ತಾನೆ.

ಇಬ್ಬರೂ ಸಂಚು ನಡೆಸಿ, ಚೋಳರೊಡನೆ ನಡೆಸಿದ ಮಾತುಕತೆಯಂತೆ "ತಾವು ಕೇಳಿದ್ದ ವಸ್ತುಗಳು ಬಂದು ತಲುಪಿವೆಯೋ ಎಂಬುದನ್ನು ದೃಢಪಡಿಸಿಕೊಂಡು, ಭರಮಯ್ಯನು ದುಗ್ಗವೆಗ್ಗಡೆಯ ಅಂತರಾತ್ಮ ತಪ್ಪಿತಸ್ಥ ಭಾವನೆಯಿಂದ ದುಗುಡಗೊಂಡಿರು

ವಾಗ, "ಭಯದ ಶೈತ್ಯದಿಂದ ಹೆಪ್ಪುಗಟ್ಟಿರುವ ನಿನ್ನ ರಕುತಕ್ಕೊಂದಿಷ್ಟು ಎದೆಗಾರಿಕೆಯ ಬಿಸಿಯುಸಿರನ್ನೂದಿ ಬೆಚ್ಚಗಾಗಿಸಿ, ನಿನ್ನನ್ನು ನೆಟ್ಟಗೆ ನಿಲ್ಲಿಸುವ ಎಂದು ನಾನೇ ಬಂದೆ" ಎನ್ನುತ್ತಾನೆ.

ದುಗ್ಗವೆಗ್ಗಡೆ ಮತ್ತು ಭರಮಯ್ಯ ಬಹಳ ವ್ಯವಸ್ಥಿತವಾಗಿ ಸಂಚನ್ನು ಹೂಡಿರುತ್ತಾರೆ. ನಾವು ಅಲ್ಲೇ ನಿಂತು ಎಲ್ಲವನ್ನು ನೋಡುತ್ತಿದ್ದೇವೇನೋ ಎಂಬಷ್ಟು ಆ ಚಿತ್ರಣವನ್ನು ನಮ್ಮ ಮುಂದೆ ಬಿಡಿಸಿದ್ದಾರೆ.

ಆದರೆ ಅನ್ಯಾಯ ಎಷ್ಟೇ ಪ್ರಬಲವಾಗಿದ್ದರೂ ನ್ಯಾಯದ ಮುಂದೆ ಅದು ತಲೆ ಬಾಗಲೇಬೇಕು. ಭರಮಯ್ಯ ದುಗ್ಗವೆಗ್ಗಡೆಗೆ ಧೈರ್ಯ ತುಂಬಿ ಅತ್ತ ಹೋದೊಡನೆ ದೂರದಲ್ಲಿ ಕುಮಾರಯೋಗಿ ಬರುತ್ತಿರುವುದನ್ನು ಕಾಣುತ್ತಾನೆ. "ಹೊಯ್ಸಳರಾಳ್ವಿಕೆಯಲ್ಲಿ ಎಲ್ಲಿ ನೋಡಿದರೂ ಸ್ವಾಮಿಗಳು ಹೊಸಹೊಸದಾಗಿ ಹುಟ್ಟಿಕೊಂಡು ನಾಡಿನ ಸ್ವಾಮಿತ್ವವನ್ನೇ ವಹಿಸಿಕೊಂಡುಬಿಟ್ಟಂತಿದೆ ! ಎಲ್ಲಿ ನೋಡಿದರಲ್ಲಿ ಒಂದು ಕುಣಿವ ಗೊಂಬೆಯನ್ನೋ ಕಲ್ಲು ಗುಡಿಯನ್ನೋ ಎತ್ತಿ ನಿಲ್ಲಿಸಿಬಿಟ್ಟು ತಮ್ಮ ಸಂಸ್ಕೃತಿಯ ಉದ್ಧಾರವಾಯಿತು ಎಂದು ಬೆನ್ನು ಚಪ್ಪರಿಸಿಕೊಳ್ಳುವದರಲ್ಲಿಯೇ ಆಯ್ತು ಇವರ ಬಡಿವಾರ !" ಎಂದು ಸ್ವಗತವಾಡಿಕೊಳ್ಳುತ್ತಾನೆ. ಆದರೆ ಕುಮಾರಯೋಗಿಯ ನೈಜ ಸ್ವರೂಪ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ.

ದುಗ್ಗವೆಗ್ಗಡೆ, ಕುಮಾರ ಯೋಗಿ–ಸಂಕಮರ ನಡುವೆ ವಾಗ್ಯುದ್ಧವಾಗುತ್ತಿರುವಾಗ, ಒಂದೆಡೆ, ದುಗ್ಗವೆಗ್ಗಡೆ "ಸಂಕಮನಿಗೆ ಹೊಯ್ಸಳ ಸೇನೆಯ ದಣಾಯಕನ ಅಧಿಕಾರವನ್ನಿತ್ತ ರಾಜಪ್ರತಿನಿಧಿಯಾದರೂ ಯಾವನವನು ?" ಎಂದು ಪ್ರಶ್ನಿಸಿದುದಕ್ಕೆ ಸಂಕಮನು, "ನಿನ್ನಂತಹ ಪರಮದ್ರೋಹಿಗಾದರೂ ಪ್ರಾಣಕೊಟ್ಟು ಉದ್ಧರಿಸಲು ಬಂದಿರುವ ಇದೋ, ಈ ಮಹಾನುಭಾವನೆ" ಎಂದು ಕುಮಾರಯೋಗಿಯನ್ನು ತೋರಿಸುತ್ತಾನೆ.

ಎಂತಹ ಮಾರ್ಮಿಕ ನುಡಿಗಳು ! ತಮ್ಮ ಮೇಲೆಯೇ ದ್ವೇಷದ ಕಿಡಿಕಾರುತ್ತಿದ್ದರೂ ಅವರನ್ನು ರಕ್ಷಿಸುವ ಪ್ರಕಾಂಡ ಸಾತ್ವಿಕತೆಯ ದರ್ಶನ ನಮಗಾಗುತ್ತದೆ.

೧೩ನೆಯ ಹಾಗೂ ಕೊನೆಯ ಪ್ರವೇಶ, ಯುದ್ಧಾನಂತರದ ದೃಶ್ಯ. ಯುದ್ಧದಲ್ಲಿ ನಾಡ ನಿಷ್ಠೆಯನ್ನು ಮೆರೆದವರೊಡನೆ ಕುಮಾರಯೋಗಿ ತೃಪ್ತಿಯ ನುಡಿಗಳನ್ನಾಡುತ್ತಿರುತ್ತಾನೆ.

ನಾಟಕದಲ್ಲಿನ ಒಟ್ಟಾರೆ ಪಾತ್ರಗಳಲ್ಲಿ ಕುಮಾರ ಎರೆಯಾಂಗನ ಪಾತ್ರ ಆರಂಭದಿಂದ ಕೊನೆಯವರೆಗೂ ಆಕರ್ಷಕವಾಗಿದೆ. ನಾಟಕದ ಕೇಂದ್ರಬಿಂದುವೇ ಆತ !

ವಿಜಯೋತ್ಸವದ ಸಭೆಯಲ್ಲಿ ತನಗೆ ಕಾಣಿಕೆ ನೀಡಲಿಲ್ಲ ಎಂಬ ಸಣ್ಣ ಕಾರಣಕ್ಕೇ ಅಪಕ್ವ ಬುದ್ಧಿಯ ಎರೆಯಂಗನು ಸಭಾತ್ಯಾಗ ಮಾಡಿರುತ್ತಾನೆ. ಆತನ ಆ ಕೃತ್ಯಕ್ಕಾಗಿ ರಾಜ ವಿಧಿಸಬೇಕಾಗಿದ್ದ ಶಿಕ್ಷೆಯು, ಕುಮಾರನ ಮೇಲಿನ ಅಪಾರ ಜನಸ್ತೋಮದ ಮಮತೆಯಿಂದಾಗಿ ತಪ್ಪಿತ್ತು. ತನ್ನ ಮೇಲಿನ ನಿಜವಾದ ಪ್ರೇಮವನ್ನು ಪರೀಕ್ಷಿಸುವ

ಸಲುವಾಗಿ ಕುಮಾರನು ಅರಮನೆಯನ್ನು ತೊರೆದು ಹೋಗಿರುತ್ತಾನೆ. ಆದರೆ ಅದೇ ಆತ ಪರಿ ಪಕ್ವಗೊಳ್ಳಲು, ಕರ್ತವ್ಯಪರನಾಗಲು, ಜ್ಞಾನಿಯಾಗಲು ಮೂಲವಾಗುತ್ತದೆ.

ದೇಶದ್ರೋಹಿಗಳನ್ನು ಸೆರೆಹಿಡಿದು, ತಕ್ಕ ಶಿಕ್ಷೆ ವಿಧಿಸಿ, ತನ್ನ ಕರ್ತವ್ಯ ನಿಷ್ಠೆಯನ್ನು ತೋರುತ್ತಾನಲ್ಲದೆ, ಅಧಿಕಾರಕ್ಕಾಗಿ ಎಳ್ಳಷ್ಟೂ ಆಶಿಸುವುದಿಲ್ಲ. ಎಂತಹ ನಿರ್ವ್ಯಾಮೋಹ, ಸ್ಥಿತ ಪ್ರಜ್ಞತೆ!

ನಾಟಕದುದ್ದಕ್ಕೂ ಘಟನೆಗಳಿಗನುಗುಣವಾಗಿ ಲೇಖಕರ ಭಾಷೆ ಬಿಗುವನ್ನು ಉಳಿಸಿಕೊಂಡಿದೆ. ವಿಷಯದ ಆಯ್ಕೆ ಗಂಭೀರವಾಗಿದ್ದರೂ, ಓದಿಸಿಕೊಂಡುಹೋಗುತ್ತದೆ.

ಕೇವಲ ಅಧಿಕಾರ ದಾಹದಿಂದ ಹೊಡೆದಾಡುವ ಇಂದಿನ ರಾಜಕಾರಣಿಗಳಿಗೆ ಇದು ನಿಜಕ್ಕೂ ಅಧ್ಯಯನ ಯೋಗ್ಯ ಪುಸ್ತಕವಾಗುವದರಲ್ಲಿ ಸಂಶಯವಿಲ್ಲ.

ಇಂತಹ ಜನೋಪಯೋಗಿ ಕೃತಿಗಳು ಲೇಖಕರಿಂದ ಇನ್ನಷ್ಟು ಮೂಡಿ ಬರಲಿ.

ನಾನು ಹೈಸ್ಕೂಲಿನಲ್ಲಿದ್ದಾಗ ನಿಮ್ಮ 'ಎಲೆಮರೆ .ಹೂ' ಕಾದಂಬರಿಯನ್ನು ಪಠ್ಯವಾಗಿ ಓದಿದ್ದ ನೆನಪು. ಅದರ ಕಥಾನಾಯಕ ಬಹುಕಾಲ ನನಗೆ ಉನ್ನತ ಆದರ್ಶದ ಪ್ರತೀಕವಾಗಿದ್ದ. ಆಗ ನಮ್ಮ ರಾಜಕೀಯ ಜೀವನವೂ ಇಷ್ಟು ಅಧೋಗತಿಗೆ ಇಳಿದಿರಲಿಲ್ಲವೆನ್ನಿ. ಆದ್ದರಿಂದಲೇ ನಿಮ್ಮ ಆ ಕಾದಂಬರಿ ನನ್ನಂತಹ ಭಾವುಕ ತರುಣರ ಮೇಲೆ ತುಂಬ ಪ್ರಭಾವ ಬೀರಿತ್ತು.

೨-೩-೯೩

ಎಸ್. ದಿವಾಕರ್

ರಾಸಲೀಲೆ : ಒಂದು ಅವಲೋಕನ

ಪ್ರೊ॥ ದೊಡ್ಡ ರಂಗೇಗೌಡ

ಸಮೇತನಹಳ್ಳಿ ಶ್ರೀ ರಾಮರಾಯರು ನವೋದಯ ಸಾಹಿತ್ಯ ಪರಂಪರೆಯಲ್ಲಿ ಮೂಡಿಬಂದ ಶುದ್ಧ ಅಭಿರುಚಿಯ ಶ್ರೇಷ್ಠ ನಾಟಕಕಾರರು; ಅಭಿಜಾತ ಶೈಲಿಯ ಲೇಖಕರು; ಸಂಪ್ರದಾಯಕ್ಕೆ ಮನ್ನಣೆಯನ್ನಿತ್ತ ಸುಸಂಸ್ಕೃತವಂತರು.

ಅವರ ಬರವಣಿಗೆಯನ್ನು ಓದುವುದೆಂದರೆ–ಸೀಕರಣೆ ಸವಿದಂತೆ ; ಬಹುಶಃ ಈ ಮಾತು "ಶ್ರೀ" ಅವರಿಂದ ಪ್ರಾರಂಭವಾದ ರಮ್ಯವಾದೀ ಬರಹಗಾರರಾದ ಕುವೆಂಪು, ಬೇಂದ್ರೆ, ಪು.ತಿ.ನ. ಅವರಿಗೂ ಅನ್ವಯಿಸಬಹುದು. ಅಥವಾ ಇನ್ನೊಂದು ಬಗೆಯಲ್ಲಿ ವ್ಯಾಖ್ಯಾನಿಸಬಹುದಾದರೆ 'ಶ್ರೀ' ಅವರಿಂದ ಪ್ರಭಾವಿತವಾದ ತಲೆಮಾರಿನ ಪ್ರಮುಖ ಲೇಖಕರೆಲ್ಲಾ (Rhetoric Style) ಅಲಂಕಾರಿಕ ಶೈಲಿಯಲ್ಲೇ ಬರೆಯುತ್ತಾ ಹೋದವರು. ಆ ಪಂಥವನ್ನು ಶ್ರೀ ರಾಮರಾಯರೂ ಒಪ್ಪಿಕೊಂಡವರು. ಅಂಥ ರಮ್ಯ ಮಾರ್ಗದಲ್ಲಿ ಯಶಸ್ವಿಯಾಗಿ ಕೃತಿಗಳನ್ನು ರಚಿಸಿದವರು. ಅಭಿಜಾತ ಶೈಲಿಯಲ್ಲಿ ಮುನ್ನಡೆದು ಔನ್ನತ್ಯ ಸಾಧಿಸಿದವರು. ಮೌಲ್ಯಗಳ ಬಗ್ಗೆ ಅಪಾರ ಕಾಳಜಿ ತೋರಿದವರು; ಆದರ್ಶಗಳ ಬಗೆಗೆ ಅಕ್ಕರೆ ತೋರಿದವರು; ಸಾಹಿತ್ಯ ಕೃತಿ ಮೂಲತಃ ಕಲಾಕೃತಿಯೂ ಆಗಿರಬೇಕೆಂದು ಜಾಗ್ರತಿ ವಹಿಸಿದವರು.

' ನವೋದಯ ' ಮಾರ್ಗದಲ್ಲಿ ಅತ್ಯುತ್ಕೃಷ್ಟ ಕೃತಿಗಳನ್ನು ಕೊಟ್ಟ ಹಿರಿಯ ಲೇಖಕರಲ್ಲಿ ರಾಮರಾಯರ ಹೆಸರೂ ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ. "ಶಾಕುಂತಲಾ" ಒಂದು ಸಾಕು ನನ್ನ ಈ ಮಾತನ್ನು ಸ್ಪಷ್ಟ ಪಡಿಸಲು; "ಸವತಿ ಗಂಧವಾರಣೆ"ಯಂಥ ಕೃತಿಗಳನ್ನು ಎಲ್ಲರೂ ಬರೆಯಲಾಗದು. ' ಕೋಟೆ ಮನೆ ' ಯಂಥ ಕೃತಿ ಲೇಖಕರ ಬಗ್ಗೆ ಗೌರವ ಮೂಡಿಸುತ್ತದೆ. ಸಹೃದಯನ ಮನೋ ವಿಕಾಸ ಮತ್ತು ರಸಾನಂದ ನೀಡುವ ಇಂಥ ಕೃತಿಕಾರರ ಬಗ್ಗೆ ಎಲ್ಲಿಲ್ಲದ ಅಭಿಮಾನವೂ ಬೆಳೆಯುತ್ತದೆ.

"ಗೀತನಾಟಕ"ಗಳ ಶೈಲಿಗೆ ಒಲಿದ ಮನಸ್ಸು ರಾಮರಾಯರದು; ಮಹಾಕಾವ್ಯಗಳ ಮೆಚ್ಚಿಕೊಂಡ ಹೃದಯ ಅವರದು; ಆದ್ದರಿಂದಲೇ ಅವರ ಹಳಗನ್ನಡದ ಕಾವ್ಯಾತ್ಮಕ ಶೈಲಿಯ ಪರಿಪಾಕ ಸಹೃದಯನಿಗೆ ಮುದ ನೀಡುತ್ತದೆ.

ನೀಲವರ್ಣದ ಕಿಂಕಿಣಿ ಕಿರುಗೆಜ್ಜೆ ಪೋಣಿಸಿದ ಸುಂದರ ಸುಕೋಮಲ ಒಡ್ಯಾಣದ ಬೆಣ್ಣೆ ಕದಿವ ಕೃಷ್ಣನ ಚಿತ್ರ ಭಾರತೀಯರ ಮನೋಮಂಡಲದಲ್ಲಿ ಅಚ್ಚೊತ್ತಿ ನಿಲ್ಲುವಷ್ಟು ನಮ್ಮ "ಮಹಾ ಕಾವ್ಯ" ಪರಂಪರೆ ಗಟ್ಟಿಯಾದದ್ದು. ಪ್ರಭಾವಯುತವಾದದ್ದು.

ನಂದಗೋಪ ಸುತನೂ ನವನೀತ ಚೋರನೂ ಆದ ಶ್ರೀ ಬಾಲಕೃಷ್ಣನ ಹಸನ್ಮುಖ ಹೃತ್ಪೂರ್ವಕ ಆರಾಧಿಸುವಂಥಾದ್ದು !

ಶ್ರೀಕೃಷ್ಣ ಭಗವದವತಾರಿ ; ಅವನ ಜೀವನ ವಿವರಗಳ ಸುತ್ತ ಅತ್ಯದ್ಭುತವೂ ಅಲೌಕಿಕವೂ ಅಮಾನುಷವೂ ಆದ ಅನಂತ ಚರಿತ್ರೆಯೂ ಹೆಣೆದುಕೊಂಡಿದೆ. ಶ್ರೀಕೃಷ್ಣ ನಮ್ಮೆಲ್ಲರ ಕಲ್ಪನೆಗೂ ಅತೀತವಾದವನು ಎಂಬುದನ್ನು ಸಹೃದಯರು ಎಂದೂ ಮರೆಯುವ ಹಾಗಿಲ್ಲ.

ಶ್ರೀಕೃಷ್ಣನ ಅಲೌಕಿಕ ಉದಾತ್ತತೆಯ ಅರಿವಿಲ್ಲದಿದ್ದರೆ ಅವನ ಲೀಲೆಗಳಾಗಲೀ ರಾಸಲೀಲೆಯ ಲೀಲಾ ವಿನೋದದ ಮಹತ್ವವಾಗಲೀ ಅರಿವಾಗುವುದಿಲ್ಲ.

ಭಾಗವತ ಓದಿದವರಿಗೆ ಶ್ರೀ ಕೃಷ್ಣ ಲೀಲಾ ನಾಟಕದ ಪ್ರಭಾವಶಾಲಿ ಪಾತ್ರಧಾರಿಯಂತೆ ಕಾಣುವುದು ಸಹಜ. ಜಾರತ್ವವಾಗಲೀ ಚೋರತ್ವವಾಗಲಿ ಲೌಕಿಕದ ಕೂದಲು ಸೀಳುವ ವಿಮರ್ಶೆಯಿಂದ ಯಾವುದೇ ಲಾಭವಾಗದು. ರಸಿಕರಿಗೆ ರಸಾನಂದವೂ ದೊರೆಯದು.

ಭಾಗವತದಲ್ಲಂತೂ ಹದಿನಾರು ಸಾವಿರದ ನೂರು ಮಂದಿ ರಾಜ ಕನ್ಯೆಯರೊಂದಿಗೆ ವೈವಾಹಿಕ ಸಂಬಂಧ ಇದ್ದ ಹಾಗೆ ಚಿತ್ರಣ ಕಾಣುತ್ತದೆ. ಏಕಕಾಲದಲ್ಲಿ ಶ್ರೀ ಕೃಷ್ಣನು ಸ್ವತಃ ಅವರೆಲ್ಲರೊಡನೆಯೂ ಪ್ರೀತಿ ಪೂರ್ವಕ ಸಂಬಂಧ ಕಂಡುಕೊಂಡಿರುವುದು ಮಾನವಲೀಲೆಯಲ್ಲ. . . ಕೃಷ್ಣಲೀಲೆ. . .ಅರ್ಥಾತ್ ಭಕ್ತಲೀಲೆ! ಇನ್ನೂ ಸರಿಯಾಗಿ ವಿವಕ್ಷೆ ಮಾಡಿ ಹೇಳಬೇಕೆಂದರೆ–ಆಧ್ಯಾತ್ಮಲೀಲೆ !

ರಾಮರಾಯರ ಪ್ರಕಾರ ಶ್ರೀ ಕೃಷ್ಣ ಸಂಘ ಜೀವಿ; ಸಮಾಜ ಜೀವಿ ! ಅವನ ಸ್ನೇಹದಲ್ಲಿ ಎಲ್ಲವೂ ಪ್ರೀತಿ ಸವಿ ! ಅದಕ್ಕೆ ಮುಖ್ಯ ಕಾರಣ–ಅವನು ಚಿರಂತನ ಲೋಕ ಪ್ರೇಮಿ !

ಅವನ ತುಂಟತನಗಳು ಲಂಪಟತನದಿಂದ ಉದಿಸಿದ ಸಾಮಾನ್ಯ ಕ್ರಿಯೆಗಳಲ್ಲ. ಅವನು ಗೋಪಿಕೆಯರ ವಸ್ತ್ರಗಳನ್ನು ಕದಿವ ಕ್ರಿಯೆ ಅಹಂಕಾರ ಮಮಕಾರಗಳನ್ನು ಕಳಚಿ ನೋಡುವ ಪ್ರಕ್ರಿಯೆ !

ಇನ್ನೂ ಶ್ರೀಕೃಷ್ಣನ ಕೊಳಲು–ಮುಕ್ತಾತ್ಮ ; ಹೀಗೆ ಅರ್ಥೈಸುವುದೇ ಸರಿ. 'ರೂಪಕ' ದಂತೆ ಕಾಣುವುದರಲ್ಲಿದೆ ಶ್ರೀ ಕೃಷ್ಣನ ಅಗಾಧ ಮಹಿಮಾ ಪರಿ ! ಗೋಪಿಕೆಯರೂ ಮುಕ್ತಾತ್ಮರಲ್ಲವೇನು ? ಅವರಿಗೆ ಅವನ ಸವಿ ಸ್ಮರಣೆ ಇರುವ ತನಕ ಆನಂದ ವಿಹಾರ : ರಾಸಲೀಲಾ ಮನೋಹರ ಸಂಚಾರ !

ಗೋಪಿಕಾ ರಾಸ ಕ್ರೀಡೆ–ಅಕ್ಕರೆಯ ಮಿಂಚಿನ ಬೆಳ್ಗೊಡೆ ನೆಲದಗಲ ಮುಗಿಲಗಲ ನಲ್ಮೆ ಬೆಳಕಾದಂತೆ ವಿಶಾಲ. ಗೋಪಿಯರ ಭಕ್ತಿಯ ಪರಾಕಾಷ್ಠೆಯಲ್ಲಿ ಗೋಪಾಲ ಕೃಷ್ಣನ ಅನುಪಮ ದರ್ಶನವಿದೆ! ತಮ್ಮನ್ನೇ ತಾವು ಅಂಥ ಜಗನ್ಮಹಿಮನಿಗೆ ಗೋಪಿಕೆಯರು ಅರ್ಪಿಸಿಕೊಂಡದ್ದು ಒಂದು ಸಂಕೇತ,

ರಾಸಲೀಲೆಯೂ ಒಂದು ಅನುಪಮ ಅಧ್ಯಾತ್ಮ ತತ್ವ. ವಾಸ್ತವವಾಗಿ ಅದನ್ನು

ಸೀಮಿತ ದೃಷ್ಟಿಕೋನದಿಂದ ನೋಡುವುದೂ ಸರಿಯಲ್ಲ. ಅದು ಮೈಯ ಮೈಥುನದ ಮೋಹಕ ವ್ಯಾಪಾರವಲ್ಲ ! ಭಾಗವತ ದೃಷ್ಟಿಯಂತೆ–ಜೀವಾತ್ಮ ಪರಮಾತ್ಮಗಳ ಶುಭ ಸಮ್ಮಿಲನ. ಶ್ರೀ ಕೃಷ್ಣ ಏಕ ! ಗೋಪಿಕಾ ಸ್ತ್ರೀಯರು ಅನೇಕ. ಏಕವು ಅನೇಕದಲ್ಲಿ ಲೀನ ವಾಗುವುದು ಭಗವದ್‌ಲೀಲೆ.

ಸ್ಪರ್ಶಸುಖದಿಂದ ಗೋಪಿಕೆಯರು ಇಹವನ್ನು ಪೂರಾ ಮರೆತರೂ. . . ಅವರೆಲ್ಲ ರಿಗೂ ಅವರ ಮಿತಿಗಳು ಖಚಿತವಾಗಿ ಅರಿವಾಗಲೆಂದು ಅಂತರ್ಧಾನವಾಗುವ ಶ್ರೀಕೃಷ್ಣನ ಲೀಲೆ ರಾಸಲೀಲೆಯ ಒಂದಂಗ ! ಮಾಯವಾದ ಕೃಷ್ಣನ ಹುಡುಕಾಟ ಒಂದು ಚೋದ್ಯ ಕ್ರಿಯೆ. ಗೋಪಿಕೆಯರ ಸೋಜಿಗದಲ್ಲೂ ವಿರಹ ವ್ಯಥೆ : ಅಳಲಲ್ಲೂ ವಿರಹ ತಾಪದ ತಪ್ತತೆ ; ಕೋಪದಲ್ಲೂ ವಿರಹದ ಉತ್ಕಂಠಿತ ತುರೀಯ ಸ್ಥಿತಿ ! ಅವನು ಸಂಚರಿಸಿದ ಮಣ್ಣ ಕಣಕಣದಲ್ಲಿ ಹೊರಳಿ ತಮ್ಮ ಅನನ್ಯ ಪ್ರೀತಿ ವ್ಯಕ್ತ ಮಾಡಬಲ್ಲ ಗೋಪಿಕೆಯರ ಒಲುಮೆ ವೈಭವೀಕರಣದ ಉತ್ತುಂಗ ಕಲ್ಪನೆ !

ಶ್ರೀ ಕೃಷ್ಣನನ್ನು ಜಾರ, ಚೋರ, ವಂಚಕ ಗೋಪೀಜನ ವಸ್ತ್ರಾಪಹಾರಕ ಎಂದೆಲ್ಲಾ ಅರ್ಥೈಸುವುದು ನಮ್ಮ ಅಲ್ಪತನ! ಅವನು ಬರೀ ಕೃಷ್ಣನಲ್ಲ, ಮಹಿಮಾ ಮಾಧವ. ಸಮೇತನಹಳ್ಳಿ ರಾಮರಾಯರ–ನಾಟಕ 'ರಾಸಲೀಲೆ' ಒಂದು ಪದ್ಯನಾಟಕ. ಶ್ರೀಕೃಷ್ಣ ಪೌರಾಣಿಕ ವ್ಯಕ್ತಿ. ಆದ್ದರಿಂದಲೇ ಇಲ್ಲಿ ನಾಟಕಕಾರರು ಶ್ರೀ ಕೃಷ್ಣನನ್ನು ಕಾವ್ಯಾತ್ಮಕವಾಗಿ ಮಾತಾಡಿಸುತ್ತಾರೆ. ಈಗಿನವರ ದೃಷ್ಟಿಯಲ್ಲಿ ಇದು ಅವಾಸ್ತವ ಅನ್ನಿ ಸಿದರೂ ಕಲಾತ್ಮಕತೆಯ ರೀತಿಯಿಂದ ಇದು ಸರಿ. ಶ್ರೇಷ್ಠ. ಇದರಿಂದ ಸಾಹಿತ್ಯದ ರಮ್ಯತೆಗೆ ಇನಿತೂ ಕುಂದು ಬಂದಿಲ್ಲ :

ರಾಮರಾಯರು ಶ್ರೀಕೃಷ್ಣನ ರಾಸಲೀಲೆಯ ಸಂದರ್ಭದಲ್ಲೂ ಪ್ರಕೃತಿ ವರ್ಣನೆಗೆ ಮೊರೆ ಹೋಗುವುದು, ಕೃಷ್ಣನ ಪಾತ್ರದ ಅಂತರಂಗ ಚಿತ್ರಣಕ್ಕೆ ಮಹತ್ವ ನೀಡುವುದು ಒಳ್ಳೆಯ ಕೃತಿಕಾರನ ಪ್ರಬುದ್ಧ ಸಂವಿಧಾನ. . .ಯಾವುದೇ ಲೇಖಕನಿಗೆ ತಾನು ಆಯ್ಕೆ ಮಾಡಿಕೊಂಡ ವಸ್ತು ಬಗ್ಗೆ ಗೌರವ ಇರಬೇಕು, ಅಭಿಮಾನ ಇರಬೇಕು; ಅಧ್ಯಯನದ ವ್ಯಾಪ್ತಿ ಇರಬೇಕು ; ಲೇಖಕನ ಇಂಥ 'ವ್ಯುತ್ಪತ್ತಿ' ಯಿಂದ ಕಲಾಕೃತಿಯ ಹರಹು ಶೋಭಿತವಾಗುತ್ತದೆ.

ಶ್ರೀಕೃಷ್ಣನ ಕುರಿತು ಶ್ರೀ ಸಮೇತನಹಳ್ಳಿ ರಾಮರಾಯರು–ಈ 'ರಾಸಲೀಲೆ' ಕೃತಿ ಜೊತೆಗೆ–'ವ್ಯಾಸರ ವಾಸುದೇವ' ಬರೆದಿದ್ದಾರೆ; "ಶ್ರೀ ಕೃಷ್ಣದರ್ಶನ"ವನ್ನೂ ರಚಿಸಿದ್ದಾರೆ. "ಭಾರತದ ಬೇರೊಂದು ತಿರುವು–" ಎಂಬ ಸಣ್ಣ ಕಥೆಯನ್ನೂ ಹೆಣೆದಿ ದ್ದಾರೆ.) ಇದೆಲ್ಲವೂ ಲೇಖಕರ ಶ್ರೀಕೃಷ್ಣ ಕಾಳಜಿ ತೋರುತ್ತದೆ. ಆ ಪಾತ್ರದ ಬಗೆಗಿನ ಹೃತ್ಪೂರ್ವಕ ನಲ್ಮೆ ಗೊತ್ತಾಗುತ್ತದೆ. ಶ್ರೀಕೃಷ್ಣನ ಬಗೆಗೆ ಭಕ್ತಿ ಇರುವುದರಿಂದಲೇ ಇಂಥ ಸಾಹಿತ್ಯ ಕೈಂಕರ್ಯ ಸಾಧ್ಯವಾಗಿರುವುದು.–

ಹಿರಿಯ ಸಾಹಿತಿಗಳಾದ ಶ್ರೀ ರಾಮರಾಯರ ಗ್ರಹಿಕೆಯೇ ಸೊಗಸು–ಅವರು ಕೃತಿಯ ಪ್ರಾರಂಭದಲ್ಲಿ ಹೀಗೆ ಅರಿಕೆ ಮಾಡಿಕೊಂಡಿದ್ದಾರೆ :

"ಒಂದು ಯುಗದ ಧರ್ಮವನ್ನೇ ಸಲಹಿದ, ನಡೆಸಿದ. ಅದರ ಉಚ್ಚ ಪರಂಪರೆ ಯನ್ನು ಪೀಳಿಗೆಯಿಂದ ಪೀಳಿಗೆಗೆ ಹರಿಯಬಿಟ್ಟ, ಲೋಕ ಹಿತೈಷಿಯೂ ನ್ಯಾಯ ನಿಷ್ಠನೂ. ಶಾಸನ ಕರ್ತನೂ, ಯೋಗಿಯೂ, ತಪಸ್ವಿಯೂ ಆದ ಶ್ರೀ ಕೃಷ್ಣನ ನಡೆ, ನುಡಿ, ಭಾವ ಗಳು ಏನೆಂತಹ ಉದಾತ್ತವಾಗಿದ್ದುವೆಂಬುದನ್ನು ನಾವು ಅರಿಯಬೇಕು ; ಅವುಗಳ ಅನು ಶೀಲನ ಪ್ರಸ್ಫೂರಣಗಳೇ ಮಾನವ ಜೀವನದ ಸಾರ್ಥಕತೆ"

ಲೇಖಕರ ಈ ಬಗೆ ಅವರ ಉದಾತ್ತ ದೃಷ್ಟಿಕೋನವನ್ನೇ ನೈಜವಾಗಿ ಬಿಂಬಿಸಿದೆ. ಹೆಜ್ಜೆ ಹೆಜ್ಜೆಗೆ ರಾಸಲೀಲೆಯಲ್ಲಿ ಚಿತ್ರಿತವಾಗಿರುವ ಶ್ರೀ ಕೃಷ್ಣ ವಿಶುದ್ಧ ; ಪುಣ್ಯಮಯ; ಪ್ರೀತಿಮಯ ; ಕರ್ತವ್ಯ ನಿಷ್ಠ ; ಮಾನವ ಕಲ್ಯಾಣ ಸಾಧಕ ; ಆದರ್ಶ ಪುರುಷ. ಇಂಥ ಪವಿತ್ರ ಭಾವನೆಯೇ ಈ ನಾಟಕವನ್ನು ಶ್ರೇಷ್ಠತೆಯ ಶಿಲ್ಪ ಮೂಡಿಸಲು ಸ್ಫೂರ್ತಿ ನೀಡಿದೆ.

ಪರಿವ್ರಾಜಕ ಸಂತ ಹರಿಹರಾನಂದ ಸರಸ್ವತಿ ಅವರ ಅಭಿಮತದಂತೆ–ಸಾಕ್ಷಾತ್ ಋಷಿ ಚೇತನರು–ಈ ಗೋಪಿಯರು ; ಗೋಪಿಕೆಯರ ಹಾಗೂ ಶ್ರೀ ಕೃಷ್ಣನ ಸಂಬಂಧ "ಪವಿತ್ರವಾದ ಪರಿಶುದ್ಧವಾದ ವಾಸನಾರಹಿತವಾದ ಸಂಬಂಧ"

"ಕೃಷ್ಣಾತ್ಪರಂ ಕಿಮಪಿ ತತ್ವಂ ಅಹಂ ನ ಜಾನೇ"–ಇದು ಪ್ರತಿಯೋರ್ವ ಗೋಪಿಯ ಘೋಷಣೆ. ಒಂದೆಡೆ ನಿರಕ್ಷರ ಕುಕ್ಷಿ ಗೋಪಿಕಾ ಸಮೂಹ–ಮತ್ತೊಂದೆಡೆ ಸರ್ವಜ್ಞಾನಿ ಶ್ರೀ ಚೈತನ್ಯ. ಈ ಅನುಪಮ ಆಕರ್ಷಣೆಯ ಹಿನ್ನೆಲೆ–ಮರ್ಯಾದಾ ಪುರುಷೋತ್ತಮ ಶ್ರೀ ರಾಮನಲ್ಲಿ ವನವಾಸಿ ಋಷಿ ಮುನಿಗಳ ಮನವಿ. ಶ್ರೀರಾಮನನ್ನು ಆಲಿಂಗನ ಮಾಡಿ ಕೊಳ್ಳಬೇಕೆಂಬ ಅಭೀಪ್ಸೆ ಆ ಮುನಿಗಳಿಗೆ ಮುಂದೆ ದ್ವಾಪರ ಯುಗದಲ್ಲಿ ಆ ತಾಪ ಸೋತ್ತಮರೇ ಶ್ರೀರಾಮಚಂದ್ರನ ಆದೇಶದಂತೆ–ಗೋಪಿಕೆಯರಾದರು. ಶ್ರೀರಾಮನೇ ಮುಂದೆ ಶ್ರೀ ಕೃಷ್ಣನಾಗಿ ಅವತರಿಸಿದನು–

'ರಾಸಲೀಲೆ'ಯ ಪೂರ್ವಾರ್ಧದಲ್ಲಿ ದೇವರಾಜ ಇಂದ್ರನ ಆಸ್ಥಾನದಲ್ಲಿ "ರಂಭೆ" ತನ್ನ ನರ್ತನದ ಸಂದರ್ಭದಲ್ಲಿ . . . 'ಎದೆಯಾಸೆಯನೆ ನೆನೆದು ನೆನೆದು ಹೆಜ್ಜೆಯನ್ನು ಮರೆತು' ಹಾಳ್ಗೈಯುತ್ತಾಳೆ. ನಾಟ್ಯದ ಔನ್ನತ್ಯವನ್ನು . . . ಹೀಗಾಗಿ ಇಂದ್ರನ ಕೋಪಕ್ಕೆ ಗುರಿಯಾಗುತ್ತಾಳೆ . . .

"ನಿನ್ನೊಬ್ಬಳಾಸೆಯನೆ ಹಿರಿದಾಗಿಸಿದೆ ಎತ್ತಿ . .
ಅದಕ್ಕೆ ದಣ್ಡಣೆಯುಂಟು . . .ನಡೆ ನೆಲಕೆ !
ಮಂಕು ಕವಿಯಲಿ ನಿನಗೆ ಅಲ್ಲಿ . . .
ನಿನ್ನಾಸೆಯನು ಕಂಡೊಡನೆ"

ಎಂದು ದೇವರಾಜನಿಂದ ಶಾಪಗ್ರಸ್ತಳಾಗಿ ಇಳೆಗಿಳಿಯುತ್ತಾಳೆ–ಇದು ಪೂರ್ವ ಕಥೆ. ಅವ ನಿಂದಲೇ ಶಾಪ ವಿಮೋಚನೆಯ ಸೂಚನೆಯನ್ನು ಪಡೆಯುತ್ತಾಳೆ. "ಒಂದಿನಿತು ದಿನ ನೊಂದ ಬಳಿಕ ಅವನ ಸೇರುವೆ ಹೋಗು" . . . ಹೀಗೆ ಶಾಪವನ್ನು ಅದರಿಂದ ಬಿಡು ಗಡೆಯನ್ನು ಪಡೆದ ರಂಭೆ–"ಕೃಷ್ಣೆ"ಯಾಗಿ ಯಮುನೆಯ ತಟದಲ್ಲಿ ಬಂದಿಳಿಯುತ್ತಾಳೆ,

[ಈ "ಕೃಷ್ಣೆ" ಮಹಾಭಾರದಲ್ಲಿ ಬರುವ ದ್ರೌಪದಿ ಕೃಷ್ಣೆಯಲ್ಲ ಎಂಬುದು ನಮ್ಮ ಅರಿವಿನಲ್ಲಿರಬೇಕಾಗುತ್ತದೆ. ಲೇಖಕರು ಈ ಹೆಸರನ್ನು ಬೇರೊಂದು ಹೆಸರಿಂದ ಕರೆದಿದ್ದರೆ. . . ಸಾಮಾನ್ಯ ವಾಚಕರ ಗೊಂದಲ ಕಡಿಮೆಯಾಗುತ್ತಿತ್ತು !]

ಪರಿಸರ ನಿರ್ಮಾಣದಲ್ಲಿ ಶ್ರೀ ಸಮೇತನಹಳ್ಳಿರಾಮರಾಯರು ಎತ್ತಿದ ಕೈ. ಸೂಕ್ತ ಪದಾವಳಿಗಳಿಂದ ಹಿತಮಿಮಿತವಾದ ಸವಿರು ವರ್ಣನೆಗಳಿಂದ ಬಹಳ ಚೆನ್ನಾಗಿ ಸನ್ನಿವೇಶ ನಿರ್ಮಾಣ ಮಾಡುವ ಕಲೆ ಅವರಿಗೆ ಸಾಧಿತವಾಗಿದೆ–

''ತುರುಕರುಗಳನಿತುವನು ಕಟ್ಟದೆಯ ಬಿಟ್ಟು
ಕೊಳಲದನಿಯಾಲಿಸುತ ನಡೆದ ಬಿನುಗಿನ ಬಳಗ !
ಏನುಮಾಟ ! ಮೈಮರೆತೆನಚ್ಚರಿಗೆ !''

ಇನ್ನು ರಾಯರು ಚಿತ್ರಿಸುವ ಕೃಷ್ಣನೂ ಕಣ್ಣಿಗೆ ಕಟ್ಟುವಂತಿದೆ. "ಹೆಣ್ಣುಗಳಿಗೆಲ್ಲಾ ಹುಚ್ಚು ಹಿಡಿಸಿದ ಕೃಷ್ಣ" "ಚೆಲುವನೇನೋ ಅಹುದು ; ಮುದ್ದು ಬೀರುವ ಮಾಟ." ಹೀಗೆ ಮುಂದುವರೆದ ಲೇಖಕರ ಶೈಲಿ ಇನ್ನಷ್ಟು ಆಪ್ಯಾಯಮಾನವಾಗಿ 'ರಾಸಲೀಲೆ' ಯಲ್ಲಿ ಮೂಡಿಬಂದ ನುಡಿ ಚಿತ್ರ ಮುತ್ತುಹವಳ ಕೋದಂತೆ ಮನೋಹರ.

''ಕಣ್ಣಸೆರೆ ಹಿಡಿವಂತೆ ನಗು ಚಿಗುರಿ ನಿಲ್ಲುವುದು
ಬಾನ ನೀಲಿಯ ಮೆಯ್ಗೆ ಬಳ್ಳಿ ಬಳುಕುವ ಒನಪು
ಆ ನಡಿಗೆ ನವಿಲು ಗರಿ''

* * *

''ಚೆದುರ ನವನೆಲ್ಲರಂತಲ್ಲ''

ಅದು ಕೃಷ್ಣನ ಬಾಳ ಪರಿ

* * *

''ಒಗ್ಗಿದರೆ ಬಿಡನಮ್ಮ ತಾನ್ ನಲಿದು ನಲಿಸುವನು''

ಹೀಗೆ ಮುದ್ದುಕೃಷ್ಣನ ಮೋಹಕ ಬಣ್ಣನೆಯನ್ನು ಮಾಡುವ ನಾಟಕಕಾರರು ಬೇರೆ ಪಾತ್ರಗಳನ್ನು ಕಡೆಗೂ ಅಷ್ಟೇ ಗಮನವನ್ನೂ ಕೊಟ್ಟಿದ್ದಾರೆಂಬುದು ಸಂತಸದ ಸಂಗತಿ.

"ರಂಭೆ"ಯೂ ಸಾಮಾನ್ಯಳೇನಲ್ಲ . . "ಎಲ್ಲ ಕಲೆಗಳ ಕಲಿತ ಸುಪ್ರೌಢೆ ; ಬಹು ಜಾಣೆ." ಆದರೆ ಒಂದಿರುಳು ನಾಟ್ಯರಂಗದಲ್ಲಿ ಹೆಜ್ಜೆ ತಪ್ಪಿ ಇಂದ್ರನ ಕೋಪಕ್ಕೆ ಗುರಿಯಾಗಿ ಅವಳ ಪಾಡು ಬೇರೊಂದು ಬಗೆಯಾಯ್ತು. ಇಂಥ ಕಥಾನಕ ಬಹಳ ಸುಂದರವಾಗಿ ಒಂಭತ್ತು ಪರ್ವಗಳಲ್ಲಿ ರೋಚಕವಾಗಿ ನದಿ ಹರಿದಂತೆ, ಹೂ ಅರಳಿದಂತೆ, ಗಾಳಿ ಬೀಸಿದಂತೆ–ಅತ್ಯಂತ ಸಹಜವಾಗಿ ಪಲ್ಲವಿಸಿ ಓದುಗರ (ನೋಟಕರ) ಚಿತ್ತವನ್ನು ಅಪಹರಿಸುತ್ತದೆ. ಮುಖ್ಯವಾಗಿ ನಾಟಕಕಾರರಿಗೆ ಪ್ರೇಕ್ಷಕರನ್ನು ಹಿಡಿದು ಕೂಡಿಸುವ ಕಲೆ ಸಿದ್ಧಿಸಿರುವುದರಿಂದ 'ರಾಸಲೀಲೆ' ಸಾಮಾನ್ಯರಿಗೂ ಕುತೂಹಲದ ಕಥೆಯಾಗಿದೆ—

ರಾಮರಾಯರದು ಸೊಗಸಾದ ಕಲ್ಪನೆ ; ನಮ್ಮ ಮಹಾಕಾವ್ಯ ಪರಂಪರೆ ಅರಿತ

ಪ್ರಾಜ್ಞರು ಅವರು ; ಆದ್ದರಿಂದಲೇ ಅವರು ಅಭಿಜಾತ ಕಾವ್ಯನಿರ್ಮಾಣ ಶೈಲಿಯಿಂದ ಸಂಸ್ಕೃತದ ಪೂರ್ವಸೂರಿಗಳಿಂದ ಪ್ರಭಾವಿತರಾಗಿ ಅತ್ಯಂತ ರಮ್ಯವಾಗಿ ಬಹು ನವಿರಾಗಿ ತಮ್ಮ ಕಲ್ಪನಾ ಹಂದರವನ್ನು ಹೆಣೆಯುತ್ತಾರೆ. ಉದಾಹರಣೆಗೆ ಗೋಕುಲದ ಗೋಪಿಕೆಯರ ಹರ್ಷಾತಿರೇಕದ ಉನ್ಮಾದಲೋಕವನ್ನು ಬಹಳ ಸಮರ್ಥವಾಗಿ ಸೃಜಿಸುತ್ತಾರೆ.

ಎಲ್ಲ ಗೋಪಿಕೆಯರೂ ಕೃಷ್ಣನನ್ನು ಸುತ್ತುವರೆದು ಹೇಳುವ ಗೀತೆಗಳು ಅತ್ಯುತ್ತಮ ಕಾವ್ಯಾತ್ಮಕ ಸಾಲುಗಳಾಗಿವೆ. ಅಲ್ಲಿಯ ಭಾವುಕ ಲೋಕ ಹೀಗಿದೆ–

"ತಾರತಮ್ಯಗಳೆಮ್ಮ ನಾಡಿನೊಳಗಿಲ್ಲಾ
ಆನಂದದೊಳಗಾತ್ಮವನು ತೇಯ್ವೆವೆಲ್ಲಾ !"

ಆಗಿನ ಕಾಲಕ್ಕೂ ಅಡಿಕೊಳ್ಳುವವರಿದ್ದರೆಂದು ಕಾಣುತ್ತದೆ. ಒಬ್ಬ ಪಾಶ್ಚಾತ್ಯ ಸಾಹಿತ್ಯ ವಿಮರ್ಶಕ ಹೇಳುವಂತೆ "Uncriticised Life is not Worth Living"–ಟೀಕೆಗೊಳಗಾಗದ ಬದುಕು ಬದುಕೇ ಅಲ್ಲ" ಎಂಬಂತೆ . . . ಶ್ರೀಕೃಷ್ಣನೂ ಗೋಪಿಕೆಯರಿಗೆ ಈ ಸೂಚನೆಯನ್ನು ಕೊಡುತ್ತಾನೆ,

"ಎಲ್ಲ ನಿಂದೆಯ ಸಹಿಸಿ ನನ್ನ ಕೂಡುವಿರೇಕೋ ?"

ಅದಕ್ಕೆ ಕೃಷ್ಣನನ್ನು ಹೃನ್ಮನದಲ್ಲಿ ಹಗಲಿರುಳು ತುಂಬಿಕೊಂಡ ಆ ಎಲ್ಲ ಗೋಪಿಕೆಯರೂ ಕೊಡುವ ಉತ್ತರವೂ ಚೆನ್ನಾಗಿದೆ.

"ಬದುಕಿನಮೃತವೇ ನೀನು ಕಣಾ !"

ದಿವದ ಭಾಗ್ಯವೇ ಕೃಷ್ಣನೆಂದು ತಿಳಿದವರು ಗೋಪಿಕೆಯರು. ಕಾಳಿಂದಿಯು ಕೃಷ್ಣೆಯನ್ನು ನಡೆಸಿಕೊಂಡಾಗ ಕೃಷ್ಣೆ ಕಮನೀಯ ಕೃಷ್ಣನನ್ನು ಆತ್ಮವಾಗಿ ಮೊರೆ ಇಡುವ ಸನ್ನಿವೇಶವನ್ನು ಲೇಖಕರು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ . . .

ಕೃಷ್ಣಾವತಾರ ಏಕಾಗಿದೆ ಎಂಬ ಘನೀಭೂತ ಚಿಂತನೆಯೂ 'ರಾಸಲೀಲೆ' ನಾಟಕದ ಕಕ್ಷೆಯಲ್ಲಿ ಚರ್ಚಿತವಾಗಿದೆ. ಅಲ್ಲೆಲ್ಲಾ ರಾಮರಾಯರ ಚಿಂತನ–ಮಂಥನ, ಅಭಿವ್ಯಕ್ತಿಯ ಸಂಪನ್ನಗುಣ–ಎಲ್ಲವನ್ನೂ ಓದುಗರು ಗ್ರಹಿಸಬಹುದು.

"ಎಲ್ಲರೆದೆಗಳ ತಣಿಸಿ ಮೆರೆಸಲೆಂದೇ ಕೃಷ್ಣನವತಾರ" . . . ಬೇರೆ ಬೇರೆ ಪಾತ್ರಗಳ ಮೂಲಕ ಶ್ರೀಕೃಷ್ಣನ ಗುಣಗಾನ ಕೃತಿಯಲ್ಲಿ ನಿರಂತರ ಸಾಗುತ್ತದೆ. ಅದೆಲ್ಲವೂ ಸದಭಿರುಚಿಯ ಸುಂದರಭಾವನದಿಯಂತೆ "ರಾಸಲೀಲೆ"ಯಲ್ಲಿ ತಿಳಿಯಾಗಿ ಪ್ರವಹಿಸಿದೆ ; ಅಲ್ಲೆಲ್ಲಾ ಕನ್ನಡ ನುಡಿಯ ಕಂಪು ಚಿಮ್ಮಿದೆ.

ಕೃಷ್ಣೆ ಕೂಡ ಶ್ರೀಕೃಷ್ಣನನ್ನು ಪರಿಪರಿಯಾಗಿ ಬಣ್ಣಿಸುವುದನ್ನು ನಾವು ಕಾಣುತ್ತೇವೆ . . .

ಸಕಲ ಪರಿವೇಷ್ಟಿತನು . . .
ಸರ್ವಶುಭದಾಗರನು,

ಗೋಪಾಲ ನಾಯಕನು–
ಗೋಪಿಯರ ಮನ್ಮಥನು !

ನಾಟಕದ "ಮೂರನೆಯ ಪರ್ವ"ದಲ್ಲಿ ಶ್ರೀಕೃಷ್ಣನ ಮುಖಾಂತರವೇ ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುವ ಅದ್ಭುತ ಕೃಷ್ಣ ಕಥೆ ಮನೋಹರವಾಗಿದೆ.

ಅವನು ಗೋಪಿಕೆಯರ ಬಳಿ ಸರಸವಾಡುವುದು–"ಒಳಗ ನೀಕ್ಷಿಸಲು" ಅವನ ಪ್ರಕಾರ–"ಗೋಕಲ ಎಲ್ಲರದು"–ಸಮತಾಭಾವ ಕೃಷ್ಣನ ಶ್ರೇಷ್ಠ ಮನೋಧರ್ಮವಾಗಿತ್ತೆಂಬ ಅಭಿಮತ ಲೇಖಕರದು.ಇದು ಇತ್ಯಾತ್ಮಕ ದೃಷ್ಟಿಕೋನ. ಇಂಥ(+ve Writers) ಸುಗುಣಾತ್ಮಕ ಲೇಖಕರು ನಾಡಿಗೆ ಇಂದು ಬೇಕಾಗಿದೆ ; ಗೋಕುಲದಲ್ಲಿ ಭೇಗ ಭಾವವಿಲ್ಲ ; ಉಚ್ಚ ನೀಚ ಕಲ್ಪನೆಯಿಲ್ಲ . . ಸಹಮತ, ಸಹಚಿಂತನ, ಸಹಬಾಳ್ವೆ, ಆದ್ದರಿಂದ ರೂಕ್ಷತೆ ಅಲ್ಲಿಲ್ಲ! ಕ್ರೂರತೆ ಅಲ್ಲಿಂದ ಗಾವುದ ಗಾವುದ ದೂರ. ಅದಕ್ಕೆಲ್ಲಾ ಕೃಷ್ಣ ಕಾರಣ, ಅವನ ಕೊಳಲೂ ಪ್ರೇರಣ. ಅದು ನಿರ್ದೋಷ !

ಶ್ರೀಕೃಷ್ಣನ ವಿಶಾಲಗುರಿ, ಮನೋಭಾವ–ಎಲ್ಲವೂ ನಾಟಕದಲ್ಲಿ ಸೂರ್ಯಸ್ಪಷ್ಟವಾಗಿ ಬಿಂಬಿತ . . .

"ನಾಲ್ಕನೆಯ ಪರ್ವ" ಶ್ರೀಕೃಷ್ಣ ಸಂಕೀರ್ತನ ; ಒಮ್ಮೆಗೇ ಓದುವವರಿಗೆ ಭಾವದ ಭೋರ್ಗರೆವ ಜಲಪಾತ ! ಉತ್ಕೃಷ್ಟಭಾವ ಗೀತ . . . ಪಾತ್ರಗಳು ಯಾವುವೇ ಇರಲಿ–ಅವರೆಲ್ಲ ಗಮನ ಒಂದೇ, ಶ್ರೀಕೃಷ್ಣಾಭಿಮುಖ ; ಎಲ್ಲರಿಗೂ ಕೃಷ್ಣ ಸಖ. ಅವನ ಸ್ನೇಹದಿಂದ ನಿರ್ಮಲ ಮಾನಸಿಕ ಸುಖ !

ಆ ಬಣ್ಣನೆ ಹೇಗೆ ಹೇಗೆ ಮೂಡಿದೆ ಎಂದರೆ–ಶ್ರೀ ಸಮೇತನಹಳ್ಳಿ ರಾಮರಾಯರು ಒಳ್ಳೆಯ ನವೋದಯ ಕವಿಗಳು ಅನ್ನಿಸಿಬಿಡುತ್ತದೆ–

ಶೃಂಗಾರ ಸಾಗರನೇ
ಆನಂದದ ಆಗರವೇ . . .
ರಸಲೋಕವನು ಕಡೆವ–
ಓ ! ಕೊಳಲ ಮಂಜುಳವೇ . . .
ಎದೆಗೆ ಸೊಗವನು ತಾರ
ರಾಸಲೀಲಾ ಮಾರ !

ಇಲ್ಲೆಲ್ಲಾ ಉತ್ಕೃಷ್ಟ ಕಾವ್ಯಶೈಲಿ ಲೀಲಾಜಾಲವಾಗಿ ಹರಿದಿದೆ. ಗೋಪಿಕೆಯರ ಆರ್ತಮೊರೆಯ ಭಾಗವೂ ಅಷ್ಟೇ ಉತ್ಕಂಠಿತವಾಗಿದೆ.

ಓ ! ಕೃಷ್ಣ . . . ಶ್ರೀಕೃಷ್ಣ . . . ಇನ್ನೇಸು ದಿನಕೆ,
ತುರು ಕರುವ ತೊರೆ ತಳಿರ ಕೊಳಲ ಬಿನದಕ್ಕೆ . . .
ಕುಣಿಸುತ್ತ ಮೈಮರೆಸಿ ಮುದವ ನೀ ತರುವೆ ?
ನಿನ್ನ ನಲವಿನ ಸುಖವ ಗೋಕುಲಕೆ ಕೊಡುವೆ ?

ಇಲ್ಲೆಲ್ಲಾ ರಮ್ಯ ಭಾವಲಹರಿ ಚೆಲುವಾದ ಗಂಗೆಯು ಹಾಗೆ ಓತಪ್ರೋತ ಪ್ರವಹಿಸಿ ಈ

ಗೀತ ನಾಟಕ ತನ್ನ ಅಭಿಜಾತ ಗುಣದಿಂದ ಮೆರೆದಿದೆ.

ಇಡೀ ನಾಟಕದ ಕೇಂದ್ರಬಿಂದು ಸಂಗ್ರಹವಾಗಿ ಕೆಲವೇ ಕಾವ್ಯಾತ್ಮಕ ಸಾಲುಗಳಲ್ಲಿ ವಜ್ರ ಸದೃಶ ಮೂಡಿದೆ–

ಸೃಷ್ಟಿ ಚೇತನಕೆಲ್ಲ ಒಲವೆ ಹೊಸ ಶಕ್ತಿ
ಅದನುಳಿದ ಜೀವ ಚಕ್ರಕ್ಕೆಂತೋ ಮುಕ್ತಿ !

ಐದನೆಯ ಪರ್ವದಲ್ಲಿ ಮಿಲನದ ಸಮ್ಮೋಹನವಿದೆ ; ಗೋಪಿಯರು ಕೂಗಿ ಹೇಳುತ್ತಾರೆ–

ಚಾರು ಸುಂದರ ರೂಪ ಮೀನ ಕೇತನನೇ
ಮೈದೋರಿ ಗೋಕುಲದಿ ಹರಿಸು ಹಾಲ್ಪೊಣೆ !
ಹಾ ಕಪ್ಪು ! ಸುಡುಕಪ್ಪು, ಹೊರಗೊಳಗೆ ಕಾಣು
ಕಣ್ಣೆವೆಗಳನು ಬಿಡಿಸು ಈ ಬದಕು ಗೇಣು !

"ಈ ಬದುಕು ಗೇಣು" ಎಂಬಲ್ಲಿ ಸಮೇತನಹಳ್ಳಿ ರಾಮರಾಯರ ಜೀವನದ ತಾತ್ವಿಕ ಚಿಂತನೆಯೋ ಕೆನೆಗಟ್ಟಿದೆ. ಗಾದೆಗಳ ಕೋಶಕ್ಕೆ ಈ ಲೇಖಕರಿಂದ ಇಂಥ ಎಷ್ಟೋ ಮುಕ್ತಾ ಫಲಗಳು ಈ ಕೃತಿಯಲ್ಲಿವೆ ಎಂದು ಕಂಡಾಗ ಈ ಲೇಖಕನಿಗಾದ ಆನಂದ ಹಿಮಾಲಯದ ಬೆಳ್ಳಿ ಬೆಟ್ಟ ಏರಿದಷ್ಟು ಸಂತೋಷ. ಕನ್ನಡದ ಸೊಗಡು ಇಲ್ಲಿ ಅತ್ಯುನ್ನತ ಎತ್ತರದಲ್ಲಿ ಪಸರಿಸಿದೆ. ಕನ್ನಡ ಭಾಷಾಭಿವ್ಯಕ್ತಿ, ಕನ್ನಡ ಕವಿಗಳ ಕೈಯಲ್ಲಿ ಇಷ್ಟು ನೈಪುಣ್ಯದಲ್ಲಿ ಮಿನುಗಿದೆ. ಇದು ಕನ್ನಡದ ಕನ್ನಡಿಗರ ಹೆಮ್ಮೆಯ ವಿಷಯ.

"ಕಾರಿರುಳಿನೊಳಗಲ್ತೆ ಅರಿಲ ನಗೆ–ಬಾಳು ?" ತತ್ವಶಾಸ್ತ್ರಜ್ಞರಂತೆ ಈ ನಾಟಕ ಕಾರರು ಮುಕ್ತವಾಗಿ ಗಂಭೀರವಾಗಿ ಸಾಂದ್ರವಾಗಿ ಅಭಿವ್ಯಕ್ತಿಸುತ್ತಾರೆ. ಆದ್ದರಿಂದಲೇ ಇಲ್ಲಿ ಮುಂದಿನ ಎರಡು ಪರ್ವಗಳಲ್ಲೂ ಶ್ರೀಕೃಷ್ಣನ ಸಂಪೂರ್ಣ ವ್ಯಕ್ತಿತ್ವ ದರ್ಶನ . . . ಕೃಷ್ಣೆಯ ಪ್ರಕಾರ ಬಾಳ್ ತಿಳಿವ ಹೊಸ ಹೊಸದು ರಮ್ಯದರ್ಶನ. ತನ್ಮೂಲಕ ಓದುಗ ರಿಗೂ ಗೋಕುಲದ ಮೋಹಕ ದರ್ಶನ . . . ಮೋಹನಮುರಳಿಯ ದಿವ್ಯ ದರ್ಶನ . . . ಆತ್ಮಾಲೀನವಾದ ಆನಂದದ ದರ್ಶನ . . . ತನ್ಮೂಲಕ ರಾಸರಂಗದ . . . ಗಾನಾನಂದದ ರಸಪ್ರವಾಹದ ಚೆಲುವಿನ ದರ್ಶನ !

ಆರನೆಯ ಪರ್ವದಲ್ಲಿ ಕೃಷ್ಣೆ ತನ್ನ ಅನುಭವ ಹೇಳುವ ರೀತಿಯಲ್ಲೂ ಲೇಖಕರ ಜಾಣ್ಮೆ, ಪ್ರತಿಭೆ, ಅಭಿವ್ಯಕ್ತಿಯ ಸಾಫಲ್ಯ ಎಲ್ಲವೂ ಪಾರದರ್ಶಕವಾಗಿ ಪ್ರಕಟವಾಗಿದೆ.

ಕಾಳಿಂದಿ ಕೇಳುತ್ತಾಳೆ : "ಏನಕ್ಕ ಏನಾಯ್ತೋ ಹೇಳಬಾರದೆ, ನನಗೆ ?" ಕೃಷ್ಣೆ ತನ್ನ ಬೀಡಿನಲ್ಲಿ ಅಂದು ಏನಾಯ್ತೆಂದು ವಿವರಿಸುತ್ತಾ ತನ್ಮಯವಾಗಿ ಎಲ್ಲವನ್ನೂ ಅರು ಹುವ ಸನ್ನಿವೇಶವೂ ಮನೋಜ್ಞವಾಗಿದೆ_

ಸುಪ್ತ ಚೇತನವೊಂದು ಹೊರಹೊಮ್ಮಿ–
ಹೊನಲಾಗಿ ನುಂಗಿತೆಲ್ಲವನು ;
ನನ್ನ ತಿಳಿವೇ ಅಳಿದು ಕಣ್ಣುಮುಚ್ಚಿದೆ ಸುಖಿಸಿ . . .

. . . ಹೀಗೆ ಹೇಳುತ್ತಾ "ಕೃಷ್ಣ ದರ್ಶನ"ದ ಅನನ್ಯ ಆಯಾಮವನ್ನು ನುಡಿ ನುಡಿಯಲ್ಲೂ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸುತ್ತಾಳೆ . . .

ಚೆಲುವ ದೇವರು ಆಹ !
ಮುಡಿ ಕಿರೀಟವು ಹಾರ ಕೌಸ್ತುಭವು ಗೆಜ್ಜೆ !
ಕವಲಾಯ್ತು ತೋಳು . . .
ಗದೆ ಶಂಖ ಚಕ್ರಗಳ ಧರಿಸಿದನು ಸ್ವಾಮಿ ವಿಷ್ಣು . . .

"ರಾಸಲೀಲೆ" ಕೃತಿಯ ಈ ಭಾಗ (ಪುಟ ೩೬ ಮತ್ತು ೩೭) ಕೇವಲ ನಾಟಕೀಯ ಸಂಭಾಷಣೆಯಲ್ಲ . . . ಕಾವ್ಯ ಓಘ ತುಂಬ ಪ್ರವಾಹವಾಗಿ ಹರಿಯುತ್ತದೆ ವಾಗರ್ಥಗಳ ಸುಂದರ ಸಂಯೋಗದಿಂದ ! ಒಂದು ಅಪೂರ್ವ ಅನುಭವ ಇಲ್ಲಿದೆ ; ಅಸೀಮ ವಾತಾವರಣ ಸೃಷ್ಟಿ ಇಲ್ಲಿ ಅಯಾಚಿತವಾಗಿ ಕಣ್ಮುಂದೆ ಪಲ್ಲವಿಸುವುದು ಲೇಖಕರ ಲೇಖನಿಯಿಂದ ಸಾಧ್ಯವಾಗಿದೆ. ಸಹೃದಯರಿಗೂ ಬೃಂದಾವನದ ಭವ್ಯ ದರ್ಶನ, ತನ್ಮೂಲಕ ಕಲ್ಪನಾತ್ಮಕ ನಾಟಕೀಯ ಕಾವ್ಯದ (Dramatic Irony) ವ್ಯಂಗ್ಯ ಪ್ರಾಪ್ತವಾಗುತ್ತದೆ.

ಈ ಘಟ್ಟದಲ್ಲಿ ಸಮೇತನಹಳ್ಳಿ ರಾಮರಾಯರು ಕೃಷ್ಣೆಯ ಸಂಪೂರ್ಣ ಅಂತರಂಗವನ್ನು ತೆರೆದಿಡುತ್ತಾರೆ.

ಹೊಸ ಹಣತೆ ಹೊಸ ಬೆಳಕು–
ಹೊಸ ಭಾವ ನಿಜವಹುದು !
ಆ ಕೃಷ್ಣನಾನಂದಕಿಂದೆತ್ತಿದೆನು ದೇವಿ–
ಪ್ರೇಮದಾನಂದ ದೀವಿಗೆಯನ್ನು !

ಹೀಗೆ ಸವಿಯೂ ಸೌಖ್ಯವೂ ಸೌಂದರ್ಯವೂ ಮುಪ್ಪುರಿಗೊಂಡು ಓದುಗರಿಗೆ ಈ ಕೃತಿ ಅಪೂರ್ವ ಆನಂದವನ್ನು ನೀಡುತ್ತದೆ. ಸಂಗೀತ ಸಾಹಿತ್ಯ ಎರಡನ್ನೂ ಚೆನ್ನಾಗಿಬಲ್ಲ ನಿರ್ದೇಶಕ ಒಳ್ಳೆಯ ಕಲಾವಿದರಿಂದ ಅತ್ಯುತ್ತಮವಾದ "ಗೀತ ನಾಟಕ"ವನ್ನು ರಂಗದಲ್ಲಿ ನೀಡುವುದು ಸಾಧ್ಯ. ಅಂಥ ಅನಂತ ಸಾಧ್ಯತೆಗಳಿಗೆ ರಂಗಪ್ರಜ್ಞೆಯಿಂದ ತುಂಬಿದ ಈ ಕೃತಿ ಒಂದು ಅತ್ಯುತ್ತಮ 'ರಂಗಪ್ರತಿ'ಯೂ ಆಗಿದೆ ಎಂಬುದು ನನ್ನ ಅಭಿಮತ.

ನಾಟಕದ ಕೊನೆಯ ಭಾಗದಲ್ಲಿ ಕೃಷ್ಣೆ ಸಂಪೂರ್ಣವಾಗಿ ಶ್ರೀಕೃಷ್ಣನನ್ನು ಅರ್ಥ ಮಾಡಿಕೊಂಡ ಬಗೆಯನ್ನು ಸಾರಿ ಹೇಳುತ್ತದೆ. ಲೇಖಕರು ಒಂದು ಪಾತ್ರದ ಮೂಲಕ (ಕಾಮ) ಹೇಳಿಸಿರುವಂತೆ . . . "ರಾಸಲೀಲೆ"ಯೂ ನುಡಿಗೆ ನಿಲುಕದ ಸೊಗವು !

ಅಂತ್ಯಭಾಗದಲ್ಲಿ "ಐಕ್ಯದ" ಪ್ರಸ್ತಾಪ ಸಾಕಷ್ಟು ಮಾರ್ಮಿಕ. "ಎಲ್ಲ ತಪಕೂ ಮಿಗಿಲು ಉತ್ತಮೋತ್ತಮ ಮಧುರ ಭಾವದ ದಾರಿ . . . " ಇಲ್ಲಿ ಕೃತಿಯ ಆಶಯವೂ "ಮಧುರ ಭಾವದ ದಾರಿ" ಎಂಬುದು ಸ್ಪಷ್ಟ. ಆ ದಿಸೆಯಲ್ಲಿ ಕೃತಿ ಅರ್ಥಪೂರ್ಣ. ಅಲ್ಲಿ "ಜ್ಯೋತ್ಸ್ನೆಯಲಿ ಆತ್ಮ ಕರಗಿದ ಸಾರ್ಥಕ್ಯಪರಿ"ಯೂ ನಿಚ್ಚಳವಾಗಿ ಪ್ರಕಟ. ಹೀಗೆ ಭಾಗವತ, ಮಹಾಭಾರತಗಳ ಆಳ ಅಭ್ಯಾಸದಿಂದ ಕತೆಗಾರಿಕೆಯ ಸೊಗಸಿನಿಂದ, ನಾಟಕೀಯ ದೃಷ್ಟಿಯಿಂದ, ಉತ್ತಮ ಗೀತಗಾರಿಕೆಯಿಂದ "ರಾಸಲೀಲೆ" ಒಂದು ಅತ್ಯುತ್ತಮ ಕಲಾನಿರ್ಮಿತಿ.

ರಾಸಲೀಲೆ

ಡಾ|| ಟಿ. ಎನ್. ನಾಗರತ್ನ

ಭಾರತದಲ್ಲಿ ಪುರಾಣಗಳನ್ನು, ಅದರಲ್ಲೂ ಭಾಗವತ ಪುರಾಣವನ್ನು ವಸ್ತುವಾಗಿ ಬಳಿಸಿಕೊಳ್ಳದ ಕವಿ-ಕಲಾವಿದರು ಇಲ್ಲವೆಂದರೂ ಸಲ್ಲುತ್ತದೆ; ಭಗವಾನ್ ಕೃಷ್ಣನ ಕಥೆಯೆ ಆಗಿರುವ ಭಾಗವತಪುರಾಣ ಭಾರತೀಯರ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಕಾರಣ ಭಾಗವತದ ಕೃಷ್ಣ ಕೇವಲ ಒಂದು ಕಲ್ಪಿತ ಪಾತ್ರ ಮಾತ್ರವಲ್ಲ ; ದಯೆ ಧರ್ಮ ದಕ್ಷತೆಗಳ ಪ್ರತೀಕ. ಪ್ರೀತಿ ಪ್ರೇಮ ಸೌಂದರ್ಯಗಳ ಸಮರ್ಥ ಪ್ರತಿನಿಧಿ, ಕರ್ತವ್ಯನಿಷ್ಠ. ನಡೆ ನುಡಿ ಭಾವಭಾವನೆಗಳು ಒಂದಾದ ಬದುಕು ಅವನದು. ಅವನ ಜೀವನದ ಆ ಉದಾತ್ತ ಮೌಲ್ಯಗಳೇ ಅವನನ್ನು ಸಾಮಾನ್ಯರ ಕಣ್ಣಿನಲ್ಲಿ ದೈವತ್ವಕೇರಿಸಿವೆಯೆಂಬುದನ್ನು ಸ್ಥಿರೀಕರಿಸುವುದೇ ಇಲ್ಲಿ ನಾಟಕಕಾರರ ಆಶಯ. ಆ ದೃಷ್ಟಿಯಿಂದ ಭಾಗವತದಲ್ಲಿ ಪ್ರೀತಿ ಕರುಣೆ ಔದಾರ್ಯ ಆತ್ಮನಿವೇದನೆಗಳ ಮೊತ್ತವೇ ಆಗಿರುವ ರಾಸಲೀಲೆಯ ಸಂದರ್ಭವನ್ನು ಈ ನಾಟಕದ ವಸ್ತುವಾಗಿ ಆರಿಸಿಕೊಳ್ಳಲಾಗಿದೆ. ನಾಟಕದಲ್ಲಿ ಶ್ರೀಕೃಷ್ಣ, ಕಾಮದೇವ, ದೇವರಾಜ ಮೊದಲಾದ ಹನ್ನೆರಡು ಪಾತ್ರಗಳೂ ಮತ್ತು ಇತರೆ ಗೋಪಿಯರು ಪಾತ್ರಗಳೂ ಬರುತ್ತವಾದರೂ ಒಟ್ಟಾರೆ ಸ್ತ್ರೀ ಪಾತ್ರ ಪ್ರಧಾನವಾದ ಪದ್ಯ ನಾಟಕವಿದು. ಕನ್ನಡದಲ್ಲಿ ಪೌರಾಣಿಕ ನಾಟಕಗಳು ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದರೂ ಬೆಳಗಾನ ಕುಳಿತು ನೋಡುವಂಥ ಚಂಪೂಶೈಲಿಯ ನಾಟಕಗಳೇ ಹೆಚ್ಚು. ಆದರೆ ೧೯೫೦ರ ದಶಕದಲ್ಲಿ ಮತ್ತು ಅನಂತರ ಬಂದ ಬಹುತೇಕ ಪೌರಾಣಿಕ ನಾಟಕಗಳು ಪದ್ಯ ನಾಟಕಗಳಾಗಿವೆ. ಕಾರಣ ; ವಸ್ತು ಸಮಕಾಲೀನವಲ್ಲವಾದಾಗ ಪದ್ಯನಾಟಕ ರೂಪದಲ್ಲಿ ಸಂಭಾಷಣೆ ತಂತಾನೇ ಸಹಜವಾಗಿ ಬಿಡುತ್ತದೆ ; ಕಾಲದ ಕಂದಕವನ್ನು ಮುಚ್ಚುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ.

ಇಡೀ ನಾಟಕ ಒಂಬತ್ತು 'ಪ್ರವೇಶ'ಗಳಾಗಿ ಅರಳಿದೆ. ಒಂದೊಂದು ಪ್ರತ್ಯೇಕ ದೃಶ್ಯವನ್ನೂ ಒಂದೊಂದು ಪ್ರವೇಶವೆಂದು ಕರೆಯಲಾಗಿದೆ. ರಮ್ಯ ನಿಸರ್ಗ ಸೌಂದರ್ಯದ ರಮಣೀಯ ವಾತಾವರಣದ ನಡುವೆ, ಗೋಕುಲದ ಪರಿಸರದಲ್ಲಿ ಇಡೀ ನಾಟಕ ನಡೆದಿದೆ. ಸ್ವರ್ಗಲೋಕದ ರಂಭೆ ತನ್ನ ಅತಿಕಾಮುಕತೆಯ ನಿಮಿತ್ತವಾಗಿ ಭರತಮುನಿಯಿಂದ ಶಾಪಗ್ರಸ್ತೆಯಾಗಿ ಭೂಲೋಕದ ಗೋಕುಲದಲ್ಲಿ ಕೃಷ್ಣೆಯಾಗಿ ಅವತರಿಸುವಳು. ಶೀಲ ಪಾತಿವ್ರತ್ಯಾದಿ ಮೌಲ್ಯಗಳನ್ನು ಗೌರವಿಸುತ್ತ, ಅವುಗಳಿಗೆ ಬದ್ಧಳಾಗಿ ಬಾಳುಸಾಗಿಸುತ್ತಿರುವಳು. ಅದೇ ಗೋಕುಲದಲ್ಲಿ ಬೆಳೆಯುತ್ತಿದ್ದ ಭಗವಾನ್ ಶ್ರೀ ಕೃಷ್ಣ ಇಲ್ಲಿಯ

ಧೀರ-ಲಲಿತ ನಾಯಕ. ತನ್ನ ಪ್ರೇಮ ಕರುಣೆಗಳ ಔನ್ನತ್ಯದಿಂದ ಗೋಕುಲದ ಹೆಣ್ಣು ಮಕ್ಕಳನ್ನೆಲ್ಲ ತನ್ನೆಡೆಗೆ ಆಕರ್ಷಿಸಿ, ಅವರನ್ನೂ ಸಂತೋಷಪಡಿಸಿ ಅವರ ಪ್ರೀತಿಯಲ್ಲಿ ಮಿಂದು ತಾನೂ ಸುಖಿಸುತ್ತಿದ್ದನು. ಅವನ ಕೊಳಲ ನಿನಾದಕ್ಕೆ ಮೋಹಗೊಂಡ ಹೆಣ್ಣು ಗಳು ಬಿಟ್ಟ ಕೆಲಸವನ್ನು ಬಿಟ್ಟು ನೆಟ್ಟ ದೃಷ್ಟಿಯಿಂದ ಅವನೆಡೆಗೆ ಧಾವಿಸುತ್ತಿದ್ದರು. ಹೆಣ್ಣುಹಾಗಿರಲಿ. ಗಂಡೂ ಹೆಣ್ಣಭಾವದಲಿ, ಮಧುರಭಾವದಿಂದ ಅವನನ್ನು ನೋಡು ವನು. ಆ ಜೀವ ಸಮಾಗಮವನ್ನು ಕಾಣುವುದೇ ಒಂದು ಸೊಗಸು, ಗಾಯಿತ್ರಿ ದೇವ ರಾಜ ಮೊದಲಾದ ದೇವತೆಗಳ ದೃಷ್ಟಿಯಲ್ಲಿ.

ಆದರೆ ಆ ಆಕರ್ಷಣೆಯನ್ನು ಲೌಕಿಕ ಹಂತದಲ್ಲೇ ಪರಿಗಣಿಸುತ್ತಿದ್ದ ಕೃಷ್ಣೆಗೆ ತನ್ನ ತಂಗಿ ಕಾಳಿಂದಿಯೂ ಕೃಷ್ಣನೆಡೆಗೆ ಧಾವಿಸುತ್ತಿದ್ದುದು ಸರಿಕಾಣುತ್ತಿರಲಿಲ್ಲ. ಅವಳಿಗೆ ಮನೆತನದ ಮರ್ಯಾದೆಯ ಪ್ರಶ್ನೆಯದು. ಮಾನ ಕಳೆದಳೆಂದು ಹೀಯಾಳಿಸಿ ದಂಡಿಸಿ ಹೋಗದಂತೆ ಕೊಠಡಿಯಲ್ಲಿ ಕೂಡಿಹಾಕಿ ಕಾವಲುಕಾಯುವಳು. ಒಬ್ಬ ಕೃಷ್ಣನೆಡೆಗೆ ನೂರಾರು ಗೋಪಿಯರು ಹೋಗುವುದೆ ? ಇದು ಅನೀತಿ, ಅನ್ಯಾಯ. ಅದ ರಲ್ಲೂ ಗಂಡನುಳ್ಳಗರತಿಯರು ಆ ಚಿಗುರು ಮೀಸೆ ಪೋರನೊಡನೆ ಚೆಲ್ಲಾಟವಾಡುವು ದೆಂದರೇನು–ಇದು ಕೃಷ್ಣೆಯ ಆಲೋಚನಾಪರಿ ಅರ್ಥಾತ್ ಕೃಷ್ಣಭಕ್ತರಲ್ಲದವರು ಕೃಷ್ಣನನ್ನು ಕಾಣುವ, ಅವನ ಲೀಲೆಗಳನ್ನು ಅರ್ಥೈಸುವ ರೀತಿ.

ಈ ದೃಷ್ಟಿಯಿಂದ ಕೃಷ್ಣೆ ತನ್ನ ತಂಗಿ ಕಾಳಿಂದಿಯನ್ನು ಕೃಷ್ಣನೆಡೆಗೆ ಹೋಗದಂತೆ ತಡೆದುದರ ಪರಿಣಾಮ ಕೃಷ್ಣನಿಗೆ ವಿರಹವೇದನೆ. ಗೋಕುಲದ ವಾತಾವರಣವೇ ವಿರ ಹಾಗ್ನಿಯಲ್ಲಿ ಬೆಂದು ಬೆಂಡಾಗಿದೆ. ಎಲ್ಲರ ಮುಖಗಳಲ್ಲೂ ಆತಂಕ, ಭಯ, ಸಿಟ್ಟುಗಳು ತನ್ನೆಡೆಗೆ ಹಾರಿಬರಲು ತವಕಿಸುವ ಜೀವದ ತುಡಿತವನ್ನು, ವೇದನೆಯನ್ನು ಕೃಷ್ಣನೂ ಬಲ್ಲ. ತನ್ನಿಂದೇನಾದರೂ ತಪ್ಪಾಯಿತೋ ಎಂದು ವಿಚಾರಿಸುವನು. ಕಾಳಿಂದಿ ತನ್ನ ಅಕ್ಕನಿಂದ ಉಗ್ರಶಿಕ್ಷೆಗೆ ಒಳಗಾಗಿರುವಳೆಂದೂ, ಕೋಣೆಯಲ್ಲಿ ಬಂದಿಯಾಗಿರುವಳೆಂದೂ ತಿಳಿದು ಕೃಷ್ಣ ಅವಳನ್ನು ಬಿಡಿಸಿಕೊಳ್ಳುವ ಸಲುವಾಗಿ ಕೃಷ್ಣೆಯಲ್ಲಿಗೆ ಬರುವನು.

ಕೃಷ್ಣೆ ಬಲು ದಿಟ್ಟೆ; ನಿಷ್ಠೆ; ಛಲಗಾರ್ತಿ; ಸ್ವಾಭಿಮಾನಿ, ನೀತಿ–ಅನೀತಿಯೇ ಮೊದಲಾದ ಮೌಲ್ಯಗಳಿಗನುಗುಣವಾಗಿ ಬದುಕುವವಳು, ಸಕಲಕಲಾನಿಪುಣೆ, ನೇರನಡೆ ನುಡಿಯ ಸುಪ್ರೌಢೆ. ದೇವೇಂದ್ರನನ್ನೇ ಒಲಿಸಿಕೊಂಡವಳು. ಗೋಪಿಯರೆಲ್ಲ ಒಕ್ಕೊರಲಿ ನಿಂದ ಕೃಷ್ಣೆ 'ಒಲಿತವಳು ಅರಿತವಳು' ಎಂದು ಕೃಷ್ಣನಿಗೆ ಹೇಳಿ 'ಹೆಚ್ಚು ಸುಖವನು ಬಯಸಿ ಎಲ್ಲವನು ಕೊಲೆಗೊಟ್ಟು ಬಲಿಯಾಗಿ ಬಯಲಾಗದಿರು ಕೃಷ್ಣ'–ಎಂದು ಎಚ್ಚ ರಿಸಿ ಕೃಷ್ಣೆಯಲ್ಲಿಗೆ ಕಳುಹುವರು. ಸ್ವರ್ಗಲೋಕದಲ್ಲಿ ಸಾಕ್ಷಾತ್ ದೇವರಾಜನನ್ನೇ ಒಲಿಸಿ ಕೊಂಡ ಇಂತಹ ಅಸಾಮಾನ್ಯ ಹೆಣ್ಣನ್ನು ಒಲಿಸಿಕೊಳ್ಳಲು ಕೃಷ್ಣನಿಗೆ ಗೋಕುಲದ ಗೋಪಿಯರೊಂದಿಗೆ ಸ್ವರ್ಗಲೋಕದ ಗಾಯಿತ್ರಿ ದೇವರಾಜಾದಿ ದೇವತೆಗಳೂ ಬೆಂಬಲ ವಾಗಿ ನಿಲ್ಲುವರು. ಈ ಕಾರ್ಯಕ್ಕೆ ಮನ್ಮಥನ ಸಹಾಯವನ್ನೂ ಕೋರುವರು. ಕೃಷ್ಣೆಯ ವಿರಹದಲ್ಲಿ ತಮ್ಮಿಂದ ದೂರವಾಗಿರುವ ಕೃಷ್ಣನನ್ನು ಕೃಷ್ಣೆಯ ಒಳಗಣ್ಣು

ತೆರೆಸುವ ಮೂಲಕ ತಮಗೆ ಮರಳಿ ತಂದುಕೊಡಬೇಕೆಂದು ಅವನನ್ನು ಕೋರುವರು. ಶಿವನನ್ನೇ ಶರಣಾಗಿಸಿದ ಹೂಬಾಣದಿಂದ ಚಳಿಗಟ್ಟಿರುವ ಕೃಷ್ಣೆಯ ಮನಸ್ಸನ್ನು ಬಿಸಿಗೊಳಿಸಿ ಕರಗಿಸಿ ರಸಪರಿಸಿ ಹೊಸಸುಖವ ಕಾಣಿಸುವನೆಂದು ಮಾತುಕೊಡುತ್ತಾನೆ, ಮಾರ.

ಇವರೆಲ್ಲರ ಸಂಘಟಿತ ಪರಿಶ್ರಮದಿಂದ 'ಕ್ರೋಧಭೈರವಿ' ಕೃಷ್ಣೆಯ ಅಂತರಂಗದ ಕದ ತೆರೆಯುತ್ತದೆ. ಅವಳನ್ನೂ ತನ್ನ ಪ್ರೇಮದಿಂದ, ಜ್ಞಾನ ಸೌಂದರ್ಯದಿಂದ ಒಲಿಸಿಕೊಳ್ಳುವನು, ಶ್ರೀಕೃಷ್ಣ. ಆಕೆಯ ಅಜ್ಞಾನದ ಕಣ್ಣುತೆರೆಸಿ, ಪ್ರೇಮಪ್ರೀತಿಗಳ ತೆಕ್ಕೆಯಲ್ಲಿ ಆತುಕೊಂಡು ರಾಸಲೀಲೆಯಲ್ಲಿ ಅವಳನ್ನೂ ಜೊತೆಗೂಡಿಸಿಕೊಳ್ಳುವನು. ಈ ಲೌಕಿಕ ಸುಖದ ಇತಿ–ಮಿತಿಗಳ ಅರಿವಿನೊಂದಿಗೆ ಆ ಶ್ರೀ ಕೃಷ್ಣ ಪರಮಾತ್ಮನೊಂದಿಗೆ ಬೆರೆಯಲು ಅವನ ಸಾನಿಧ್ಯಪಡೆಯಲು ಅವಳ ಆತ್ಮ ಹಪಹಪಿಸತೊಡಗುತ್ತದೆ. ತಾನು ಎಂತಹ ಸೌಭಾಗ್ಯವನ್ನು ಕಳೆದುಕೊಂಡೆನೆಂಬುದರ ಅರಿವಾಗಿ ಪಶ್ಚಾತ್ತಾಪದ ಕಣ್ಣೀರು ಉಕ್ಕಿ ಉಕ್ಕಿ ಹರಿದಿದೆ. ಅಳುವಿಗೆ ಕಾರಣಕೇಳಿದ ತಂಗಿ ಕಾಳಿಂದಿಗೆ ತಾನು ಕಂಡ ದರ್ಶನವನ್ನು ವಿವರಿಸುವಳು. ಶಂಖಚಕ್ರ ಗದಾಪದ್ಮಧಾರಿ ತ್ರಿವಿಕ್ರಮಸ್ವಾಮಿ ಬೃಂದಾವನದ ಗೋಪಿಯರೊಡನೆ ಸೇರಬೇಕೆಂದು ತನಗಿತ್ತ ಆದೇಶ. . .ತನ್ನೆಲ್ಲ ಕನಸುಗಳೂ ನನಸಾದ ಅನುಭವ. ಸಾಕ್ಷಾತ್ ಶ್ರೀಕೃಷ್ಣನೇ ಸೃಷ್ಟಿ ಸ್ಥಿತಿ ಲಯಗಳ ಕಾರಣಕರ್ತನೆಂಬ ಅರಿವು ಬಂದೊಡನೆ ಒಲಿದು ಬಂದ ಅವನನ್ನು ಹಿಂದಕ್ಕಟ್ಟಿದ ತನ್ನ ಪಾಪಕ್ಕೆ ಸಾವೊಂದೇ ಪ್ರಾಯಶ್ಚಿತ್ತವೆಂದು ನಿರ್ಧರಿಸುವಳು. "ಬೆಳೆಸಿ ಬೆಳಗುವೆನಿಲ್ಲಿ ರಾಸಮಂ ಸವಿಸೌಖ್ಯ ಸೌಂದರ್ಯಗಳ"–ಎಂದು ನಿಶ್ಚಯಿಸುವಳು.

ಕೃಷ್ಣೆಯ ನಿಶ್ಚಯ ತಿಳಿದ ಗೋಪಿಯರ ಸಂತೋಷ ಸಂಭ್ರಮಗಳು ಇಡೀ ಗೋಕುಲವನ್ನು ತುಂಬಿದವು. ಎಲ್ಲರೂ ಹಾಲು ಮೊಸರು ಬೆಣ್ಣೆ ಹಣ್ಣುಗಳನ್ನು ಹೊತ್ತು ರೈವರ್ತಕ ಪರ್ವತಕ್ಕೆ ಪೂಜೆಸಲ್ಲಿಸಿ ಹಬ್ಬಮಾಡಲು ಉತ್ಸುಕರಾಗಿ ಹೊರಟರು. ಕೃಷ್ಣನನ್ನು ಕೇಳಿಗೆ ಆಹ್ವಾನಿಸಿದ ಕೃಷ್ಣೆಯನ್ನು ಹೂವಿನ ನಿಲುವಾಭರಣಗಳಿಂದ ಸಿಂಗರಿಸುವರು. ಗೋಪಿಯರ ಬಯಕೆಯಂತೆ ಕೃಷ್ಣ ಕೊಳಲೂದವನು. ನಡುವೆ ಕೃಷ್ಣ ; ಸುತ್ತ ಗೋಪಿವೃಂದ. ಎಲ್ಲರೂ ಮೈಮರೆತು ಕುಣಿದರು, ಕುಣಿದು ದಣಿದರು. ತನ್ನ ಒಂದೇ ಜನ್ಮದಲ್ಲಿ ಕೃಷ್ಣೆ ತನ್ನನ್ನೇ ಅರ್ಪಿಸಿಕೊಂಡು ಮಹಾನ್ ಋಷಿಮುನಿಗಳಿಗೇ ಅಸಾಧ್ಯವಾದ ಕೃಷ್ಣನ ಸಾಮೀಪ್ಯಸುಖವನ್ನನುಭವಿಸುವಳು. ಮಧುರಭಾವದ ಹಾದಿ ಎಲ್ಲ ತಪಕೂ ಮಿಗಿಲು ; ಉತ್ತಮೋತ್ತಮ. ಯುಗಯುಗಗಳ ವಿರಹದಿಂದ ತನ್ನನ್ನೇ, ತನ್ನಾಸೆಗಳನ್ನೆ ಸುಟ್ಟುಕೊಂಡ ಹೆಣ್ಣು ಕೃಷ್ಣೆ. ಅವಳಿಗೆ ಇದೇ ಕೊನೆಯ ಜನ್ಮ. ಮತ್ತೆ ಸ್ವರ್ಗದ ಕೋಟಲೆಯಿಲ್ಲ.ಅವಳು ಮಾತ್ರವಲ್ಲ ಸಮಸ್ತಗೋಪೀ ವೃಂದವೂ ಅವಳೊಂದಿಗೆ ಮುಕ್ತಿ ಪಡೆಯುತ್ತದೆ. ಎಲ್ಲರನ್ನೂ, ಎಲ್ಲವನ್ನೂ ಆವರಿಸಿಕೊಂಡ ಕೃಷ್ಣ ತನಗೆಲ್ಲರೂ ಬೇಕಾದವರೇ ಎಂದು ಕರೆದುಕೊಳ್ಳುವನು. ಗಾಯಿತ್ರಿ ದೇವರಾಜರು ಆ ರಾಸಲೀಲೆಗೆ ಮೂಕ ಪ್ರೇಕ್ಷಕರು !

ಕೃಷ್ಣ ಸಾಕ್ಷಾತ್ ವಿಷ್ಣುವಿನ ಅವತಾರ. ಧರ್ಮವನ್ನುದ್ಧರಿಸಲು ಮತ್ತೆ ಮತ್ತೆ ಅವತರಿಸಿದವನು. ಮೇಲ್ನೋಟಕ್ಕೆ ಜಾರ ಚೋರ ಕುತಂತ್ರಿ ಕಪಟಿಯಾಗಿ ಕಾಣುವ ಕೃಷ್ಣನ ಗುಣಗಳೆಲ್ಲ ಇಲ್ಲಿ ಅವನ ವಿನೋದಾದ್ಭುತಗಳಾಗಿ ಪರಿಣಮಿಸಿ ಅವನ ಪ್ರೇಮ ಕರುಣೆಗಳೆಂಬ ಮೌಲ್ಯಗಳಲ್ಲಿ ಕರಗಿಹೋಗಿರುವುದು ಗಮನಾರ್ಹ. ಅವನು ತನ್ನ ಈ ಆದರ್ಶಗಳ, ಮೌಲ್ಯಗಳ ಮೂಲಕವೇ ಲೋಕ ಶಿಕ್ಷಕನಾಗಿ ನಿಂತದ್ದು. ಯುಗಧರ್ಮ ಪ್ರವರ್ತಕನಾಗಿ ಮೆರೆದದ್ದು. ಸಾಮಾನ್ಯ ಜೀವಿಯೊಂದನ್ನು ಅರಿವಿನಾಲಿಂಗನವಿತ್ತು ಅಸಾಮಾನ್ಯವಾಗಿ ಮಾಡುವುದು ಕೃಷ್ಣನ ಲೋಕ ಶಿಕ್ಷಣಕ್ರಮ. ಅವನ ವ್ಯಕ್ತಿತ್ವದ ಈ ಔನ್ನತ್ಯವನ್ನು ಮನಗಾಣಿಸುವಲ್ಲಿ ನಾಟಕ ಯಶಸ್ವಿಯಾಗಿದೆ. ಸರಳ ಸುಲಭವಾದ ಭಾಷೆಯ ಬಳಕೆಯಿಂದ ಪ್ರಕೃತಿವರ್ಣನೆ, ವಾತಾವರಣ ಸೃಷ್ಟಿ ಹಾಗೂ ಪಾತ್ರಗಳ ಅಂತ ರಂಗಿಕ ಭಾವನೆಗಳಿಗೆ ಹೆಚ್ಚು ಒತ್ತುಕೊಟ್ಟಿರುವುದರಿಂದ ನಾಟಕ ಕಲಾತ್ಮಕವಾಗಿ ಮೂಡಿದೆ. ಪರಮಾತ್ಮ ಪ್ರೇಮಮಯಿ ; 'ಪ್ರೇಮದ ಪರಾಕಾಷ್ಠೆಯೇ ಭಕ್ತಿಯೆಂಬ ತತ್ವ ಗಳನ್ನು ಈ ನಾಟಕದಲ್ಲಿ ಸಾರ್ಥಕವಾಗಿ ದುಡಿಸಿಕೊಳ್ಳಲಾಗಿದೆ. ಪ್ರೇಮದಿಂದಲೇ ಕೃಷ್ಣೆಯ ಕಾಠಿಣ್ಯ ಸಿಟ್ಟು ಸೆಡುವುಗಳನ್ನೆಲ್ಲ ಗೆದ್ದ ಕೃಷ್ಣ. ಮಹಾನ್ ಆದರ್ಶ ವ್ಯಕ್ತಿ ಯಾದ ಕೃಷ್ಣ ಮೌಲ್ಯಕ್ಕಾಗಿ ಬದುಕಿದ, ಮೌಲ್ಯಗಳನ್ನೆತ್ತಿ ಹಿಡಿದ. ಆದುದರಿಂದ ಪುರಾಣ ನಾಯಕನ ಉದಾತ್ತೀಕರಣದ ಸಮಸ್ಯೆಯೇ ಬರಲಿಲ್ಲ. ಮಾನವರಂತೆಯೇ ಇಲ್ಲಿಯ ಕಷ್ಟಸುಖ, ದುಃಖ ವಿರಹಾದಿಗಳನ್ನನುಭವಿಸಿ ಆ ಮಿತಿಯಲ್ಲೇ ಉದಾತ್ತ ಬದುಕನ್ನು ಬಾಳಿ ತೋರಿಸಿದ. ಶ್ರೀಕೃಷ್ಣ ಇತರರನ್ನೂ ತನ್ನೊಡನೆ ತೊಡಗಿಸಿಕೊಂಡ ಪ್ರೇಮತತ್ವ ದಿಂದ ಜಗತ್ತನ್ನು ನೋಡಿದ. ಕಾರುಣ್ಯ ಸಿಂಚನದಿಂದ ಅದನ್ನಳೆದ. ಅವನ ಈ ಲೋಕ ಶಿಕ್ಷಣದ ರೀತಿಯನ್ನು ಮಾನವ ಕಲ್ಯಾಣ ಸಾಧನೆಯ ಪರಿಯನ್ನು ಮುಕ್ತಕಂಠದಿಂದ ಸಾರುವಲ್ಲಿ ಕೃತಿ ಯಶಸ್ವಿಯಾಗಿದೆ. ತಮ್ಮ ಆಶಯವನ್ನು ನಾಟಕಕಾರರು ಸಮರ್ಥರೀತಿ ಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ನಾಟಕಗಳು ವಿರಳ. ಅದರಲ್ಲೂ ಉತ್ತಮ ಐತಿಹಾಸಿಕ ನಾಟಕ ಗಳು ಬೆರಳೆಣಿಕೆಯಷ್ಟು ಅಲ್ಪಸಂಖ್ಯೆಯವು. 'ಸಂಸ'ರು ಈ ದಿಕ್ಕಿನಲ್ಲಿ ಸಾರ್ಥಕ ಪ್ರಯತ್ನ ನಡೆಸಿ . . . ದ್ದಾರೆ. ಅವರು ತುಳಿದ ಹಾದಿಯಲ್ಲೇ ಶ್ರೀಯುತ ಸಮೇತನಹಳ್ಳಿ ರಾಮರಾಯರು ನಡೆದಿರುವರಾದರೂ ನೂತನ ತಂತ್ರ ಹಾಗೂ ಶೈಲಿಗಳ ಪ್ರಯೋಗದಿಂದ ವೈಶಿಷ್ಟ್ಯವನ್ನು ಪ್ರದರ್ಶಿಸಿ ತಮ್ಮದೇ ಆದ ಸಿದ್ಧ ಪ್ರಯೋಗವನ್ನು (ದ್ರೋಹಾಡಂಬರೆ' ನಾಟಕ) ಪ್ರಕಟಿಸಿದ್ದಾರೆ . . . ದಾಯಿಗ ಮಾಳರಸನ ಪಾತ್ರ ಕಾಲ್ಪನಿಕವಾಗಿದ್ದರೂ, ನಮ್ಮ ಮುಂದೆ ಅದ್ಭುತರಮ್ಯವಾಗಿ ತೇಲಿ ಹೋಗುವುದು ಲೇಖಕರ ಕಲಾ ನಿರ್ಮಿತಿಯ ಹಿರಿಮೆಯನ್ನು ಪ್ರಕಟಿಸುತ್ತದೆ . . .

ಎಸ್. ರಾಘವೇಂದ್ರಭಟ್

ವಿಶ್ವಾವಸು ಚೈತ್ರ

ಕಲಾರಾಧನೆ

ಎಚ್. ಎಸ್. ಕೃಷ್ಣಸ್ವಾಮಿ

ಸಮೇತನಹಳ್ಳಿ ರಾಮರಾಯರ 'ಕಲಾರಾಧನೆ' ಆಕಾಶವಾಣಿಯ ಶ್ರೋತೃ ವೃಂದಕ್ಕೆ ಚಿರಪರಿಚಿತ. ಆಕಾಶವಾಣಿಯ ಬೆಂಗಳೂರು-ಮೈಸೂರು ನಿಲಯಗಳಿಂದ ಪ್ರಸಾರವಾದ ಇವರ ಐದು ನಾಟಕಗಳ ವಿಸ್ತೃತರೂಪಗಳೇ ಇಲ್ಲಿ ಒಂದಾಗಿ ಬಂದಿವೆ. ಈ ಐದು ನಾಟಕಗಳ ಚಕ್ರದಲ್ಲಿ ನಡುವಣದಾದ 'ಕಲಾರಾಧನೆ' ನಾಟಕದ ಹೆಸರೇ ಪುಸ್ತಕಕ್ಕೂ ಸಂದಿದೆ. ಈ ಐದರಲ್ಲಿ ಕೊನೆಯ ನಾಟಕವೊಂದನ್ನು ಬಿಟ್ಟರೆ ಉಳಿದವುಗಳು ನಮ್ಮ ನಾಡಿನ ಇತಿಹಾಸದಲ್ಲಿ ಆಗಿ ಹೋದ ಘಟನೆಗಳಿಗೆ, ವ್ಯಕ್ತಿಗಳಿಗೆ ಸಂಬಂಧಿಸಿದವು ಗಳು.

ಮೊದಲನೆಯ 'ಕಣ್ಣೀರ ಹಣ್ಣು' ಬುದ್ಧನ ಕಾಲಕ್ಕೆ ಸಂಬಂಧಿಸಿದ ಒಂದು ಘಟನೆ. ತಂದೆ–ತಾಯಂದಿರ ಇಷ್ಟಕ್ಕೆ ವಿರೋಧವಾಗಿ, ತಾನು ಪ್ರೀತಿಸಿದವನೊಡನೆ ಬಾಳನ್ನು ಸಾಗಿಸ ಬಯಸಿ ಬಂದ ಉತ್ತಮೆ, ತನ್ನ ಗಂಡ–ಮಕ್ಕಳನ್ನು ಕಳೆದುಕೊಂಡು ತವರಿನ ಆಸರೆಯೂ ಇಲ್ಲದೆ ನಿರ್ಗತಿಕಳಾದಾಗ ಬುದ್ಧ ಅವಳ ಜೀವಕ್ಕೆ ತಣ್ಪನ್ನು ನೀಡಿದ ಕತೆ ಇದು. ವಸ್ತು, ಭಾಷೆ, ವಿನ್ಯಾಸ–ಎಲ್ಲ ದೃಷ್ಟಿಗಳಿಂದಲೂ ಸಾರ್ಥಕವಾದ ನಾಟಕ ಇದು. ರೇಡಿಯೋ ನಾಟಕಗಳಲ್ಲಿ ಕಿವಿಗೆ ಪ್ರಾಧಾನ್ಯ. ಮಾತು, ಹಿನ್ನೆಲೆಯ ಶಬ್ದ ಇದನ್ನು ಗಮನದಲ್ಲಿಟ್ಟುಕೊಂಡು ನಾಟಕವನ್ನು ರಚಿಸಬೇಕಾಗುತ್ತದೆ. ಪ್ರಸಾರ ದೃಷ್ಟಿಯಿಂದ ಯಶಸ್ವಿಯಾದ ನಾಟಕವಿದು ಎನ್ನಬಹುದು.

ರೂವಾರಿ ದಾಸೋಜ, ಕಲಾರಾಧನೆ, ಹೆಡೆಯ ನೆರಳು–ಇವು ಮೂರೂ ನಾಟಕ

---

* ಇದು 'ಕಣ್ಣೀರಹಣ್ಣು', 'ರೂವಾರಿದಾಸೋಜ', 'ಕಲಾರಾಧನೆ', 'ಹೆಡೆಯನೆರಳು' ಮತ್ತು 'ಬಂಗಾರದ ಬೆಳಸು' ಎಂಬ ಐದು ಏಕಾಂಕ ನಾಟಕಗಳನ್ನು ಒಳಗೊಂಡಿದೆ. ಇವುಗಳಲ್ಲಿ 'ಕಣ್ಣೀರಹಣ್ಣು' ಎಂಬುದು ೨೯–೪–೧೯೫೬ ರಂದು ಮೈಸೂರು ಆಕಾಶವಾಣಿಯಿಂದಲೂ, 'ರೂವಾರಿ ದಾಸೋಜ' ಎಂಬುದು ಮೈಸೂರು (೨೩–೧೦–೧೯೫೫), ನಾಗಪುರ (೯–೧೧–೧೯೫೬) ಮತ್ತು ಮದರಾಸು (೧೦–೨–೧೯೫೬), 'ಕಲಾರಾಧನೆ' ಬೆಂಗಳೂರು (೩–೨–೧೯೫೭ ಮತ್ತು ೩–೮–೧೯೬೪) ನಿಂದಲೂ 'ಬಂಗಾರದ ಬೆಳಸು' ಎಂಬುದು ಮೈಸೂರು (೧೩–೨–೧೯೫೫) 'ಹೆಡೆಯ ನೆರಳು' ಎಂಬುದು ಮೈಸೂರು (೧೦-೪-೧೯೫೫) ಆಯಾ ಆಕಾಶವಾಣಿಗಳಿಂದ ಬಿತ್ತರಗೊಂಡುವು. ಈ ಗ್ರಂಥವನ್ನು ಶ್ರೀ ಎಚ್ಚೆಸ್ಕೆಯವರು ಅದೇ ಆಕಾಶವಾಣಿಯಲ್ಲಿ ವಿಮರ್ಶೆಮಾಡಿದ್ದರು. ಇದು ಆ ವಿಮರ್ಶೆ. ಅವರು ಇದನ್ನು ಬಳಸಿಕೊಳ್ಳಲು ಅನುಮತಿಯನ್ನು ಕೊಟ್ಟುದಕ್ಕಾಗಿ ವಂದನೆಗಳು–(ಸಂ)

ಗಳಲ್ಲಿ ಹೆಚ್ಚು ಹೋಲಿಕೆಯಿದೆ. ಹೆಚ್ಚು-ಕಡಿಮೆ ಒಂದೇ ಸಂದರ್ಭದಲ್ಲಿ ನಾನಾ ಮನೋಭಾವದ ವ್ಯಕ್ತಿಗಳು ಹೇಗೆ ವರ್ತಿಸುವರೆಂಬುದನ್ನು ಈ ನಾಟಕಗಳಲ್ಲಿ ಕಾಣಬಹುದು. ಇವುಗಳಲ್ಲಿ ಮೊದಲನೆಯ ನಾಟಕದ ದಾಸೋಜ ಬಳ್ಳಿಗಾಂವೆಯ ಒಬ್ಬ ಶಿಲ್ಪಿ. ಚಾಮಲದೇವಿ ತುಂಬುಳುಲು ನಾಡಿನ ಹೆಗ್ಗಡಿತಿ. ಈಕೆ ರೂವಾರಿ ದಾಸೋಜನನ್ನು ಒಲಿದಳು. ಪ್ರತಿಯಾಗಿ ಅವನ ಒಲುಮೆ ಸಂಪಾದಿಸಲು ವೈಭವದ ಆಕರ್ಷಣೆ ನೀಡಿದಳು. ಅಧಿಕಾರದ ಒತ್ತಾಯ ಹಾಕಿದಳು. "ಕಲಾರಾಧನೆಯೇ ಮುಖ್ಯ. ಉಳಿದದ್ದು ಗೌಣ" ಎಂದು ಕೊಂಡಿದ್ದ ದಾಸೋಜ ಹೆದರದೆ ಸಿಡಿದೆದ್ದ. ನಿರಾಶಳಾದ ಚಾಮಲದೇವಿ ಅವನ ಮೇಲೆ ಸೇಡು ತೀರಿಸಿಕೊಳ್ಳಲಿಲ್ಲ. ತಾನು ಒಲಿದ ಜೀವ ಎಲ್ಲಾದರೂ ಚೆನ್ನಾಗಿ ಬಾಳಲಿ. ಅವನ ಕೀರ್ತಿಯನ್ನು ಕೇಳುತ್ತಾ ಹೀಗೆಯೇ ಜೀವನವನ್ನು ಸವೆಯಿಸುತ್ತೇನೆ" ಎನ್ನುವಳು.

ಈ ಮೂರರಲ್ಲಿ ಎರಡನೆಯದಾದ 'ಕಲಾರಾಧನೆ' ಹೊಯ್ಸಳರ ಅರಸು ವಿಷ್ಣುವರ್ಧನನ, ಅವನ ಮಡದಿ ಶಾಂತಲಾದೇವಿಯ ಕತೆ. ವಿಷ್ಣುವರ್ಧನನೊಡನೆ ಶಾಂತಲಾದೇವಿ ಹಾಲಿನೊಡನೆ ಸಕ್ಕರೆಯಂತೆ ಬೆರೆತಳು. ಇವರಿಬ್ಬರ ಸಾಹಚರ್ಯದಲ್ಲಿ ಅವರನ್ನು ನಂಬಿದವರೆಲ್ಲರ ಬಾಳು ಹಸನಾಯಿತು. ಇದರ ಪಡಿನೆಳಲು ಕಲೆಯಲ್ಲೂ ಮೂಡಿಬಂತು; ಶಿಲ್ಪಕಲೆಯ ವಿಕಾಸವಾಯಿತು. ತನ್ನನ್ನು ಕೊಲ್ಲಲೆಳಸಿ ಬಂದ ಶತ್ರುವಿನ ಮಗಳು ಸೋವಲೆಯನ್ನು ಶಾಂತಲಾದೇವಿ ತನ್ನ ಮಗಳಾಗಿ ಮಾಡಿಕೊಂಡಳು. ಆದರ್ಶ ದಾಂಪತ್ಯ, ಆದರ್ಶ ಆಡಳಿತ, ಆದರ್ಶ ಜೀವನ, ಆದರ್ಶ ಕಲೆ ಇವುಗಳ ಚಿತ್ರಣ ಈ ನಾಟಕ.

'ಹೆಡೆಯ ನೆರಳು' ತದ್ವಿರುದ್ಧ. ಹೊಯ್ಸಳರ ಕೊನೆಯ ದೊರೆ ಬಲ್ಲಾಳನಿಗೆ ಸಂಬಂಧಿಸಿದ್ದು. 'ರೂವಾರಿ ದಾಸೋಜ'ದ ಹೆಗ್ಗಡಿತಿ ಚಾಮಲದೇವಿ ಅವಿವಾಹಿತೆ. ದಾಸೋಜನನ್ನು ಬಯಸಿ, ಅವನು ಒಲಿಯದಿದ್ದಾಗ ಅವನ ಒಳಿತನ್ನು ಹಾರೈಸಿ, ಸಮಾಧಾನ ತಂದುಕೊಂಡ ದೊಡ್ಡಜೀವ. 'ಕಲಾರಾಧನೆ'ಯ ಶಾಂತಲದೇವಿ ವಿವಾಹಿತೆ. ಗಂಡ ವಿಷ್ಣುವರ್ಧನನ ಜತೆಗೆ ಹೆಜ್ಜೆಯಿಕ್ಕಿದ ನಿರ್ಮಲಜೀವ. 'ಹೆಡೆಯ ನೆರಳಿ'ನ ಪದ್ಮಲದೇವಿ ಈ ಮಹಾಜೀವಗಳ ಪರಂಪರೆಯಲ್ಲಿ ಬಂದಳಾದರೂ ಅವರ ಆದರ್ಶವನ್ನು ಅನುಸರಿಸಲಿಲ್ಲ. ರಾಜಸಹೋದರಿಯ ಮಕ್ಕಳ ಸಂಗ ಬಯಸಿ, ಅದು ದೊರಕದಿದ್ದಾಗ ಅವರ ತಲೆಗಳನ್ನು ಚೆಂಡಾಡಿಸಿದ ಕಠೋರೆ. 'ರೂವಾರಿ ದಾಸೋಜ' 'ಕಲಾರಾಧನೆ'ಗಳಲ್ಲಿ ಬೆಳಗಿದ ಪ್ರೇಮ ಒಂದು ತೆರನಾದರೆ ಹೆಡೆಯ ನೆರಳಿನ ಕಾಮ ಇನ್ನೊಂದು ತೆರ. ಆಸೆ ಪೂರೈಸಿಕೊಳ್ಳಲಾರದ ಸ್ತ್ರೀಯ ಸೇಡಿನ ಪರಮಾವಧಿ. ಹಿರಿಯರಿಂದ ಬಂದ ರಾಜ್ಯ, ಸಂಸ್ಕೃತಿ, ನಡತೆ, ಕಲೆ ಇವುಗಳು ಮಣ್ಣಲ್ಲಿ ಹುಡಿಯಾಗಿ ಉದುರಿದ ಕಾಲದ ನೈಜ ಚಿತ್ರಣ ಈ ನಾಟಕ.

ಕೊನೆಯ ನಾಟಕವಾದ 'ಬಂಗಾರದ ಬೆಳಸು' ಈಗಿನ ಕಾಲಕ್ಕೆ ಸಂಬಂಧಿಸಿದ್ದು. ವಿದ್ಯಾವಂತ ಯುವಕ ನಾಯಕ, ಅವನನ್ನು ಮೆಚ್ಚಿದ ಹೆಣ್ಣು ಸಂಪಿಗೆ. ಇವರಿಬ್ಬರ ಪ್ರೇಮ ಸಂಬಂಧವನ್ನು ಒಪ್ಪಲಾರದೆ ಹೋದರು—ನಾಯಕನ ಊರಿನ ಹಿರಿಯರು. ಪರಿಣಾಮ ಆಗಲಿಕೆ !

ರಾಮಗಿರಿಯಾಶ್ರಮದ ತಪಸ್ವಿ ಸಿದ್ಧರ ಕರುಣೆಯ ಆಸಕ್ತಿಯಿಂದ ಈ ಸಂಬಂಧ ಉಳಿಯುತ್ತದೆ. ಊರ ಜನರ ಮತಗಳಿಸಿ ಚುನಾಯಿತನಾದ ನಾಯಕ ಮಂತ್ರಿ ಪದವಿಯನ್ನೂ ಏರುತ್ತಾನೆ. ಹೀಗೆ ಸಾಗುತ್ತದೆ ಕತೆ. ಉಳಿದ ನಾಲ್ಕರಲ್ಲಿ ಯಶಸ್ವಿಯಾದ ರಾಮರಾಯರ ಲೇಖನಿ ಇಲ್ಲಿ ಅಷ್ಟೊಂದು ಯಶಸ್ವಿಯಾಗಿಲ್ಲವೆಂದು ತೋರುತ್ತದೆ. ಆದರ್ಶಕ್ಕೆ ಅಳವಡುವ ಭೂತ ಕಾಲದ ಸಂಗತಿಗಳನ್ನು ಆರಿಸಿಕೊಂಡು, ವಾಸ್ತವತೆಯ ಕರ್ಕಶತೆಯ ತೊಡಕಿಲ್ಲದೆ ನಾಟಕವನ್ನು ಹೆಣೆಯಬಲ್ಲ ಲೇಖಕರು ಸಮಕಾಲೀನ ಘಟನೆಗಳನ್ನು ಕುರಿತ ನಾಟಕ ಹೆಣೆದಾಗ ಓದುಗರಲ್ಲೂ, ಕೇಳುಗರಲ್ಲೂ, ರಸಾಸ್ವಾದನೆಗೆ ಹಲವು ವಿಘ್ನಗಳು ಒದಗುತ್ತವೆ. ಆದರ್ಶೀಕರಣ–ಅದು ಯಥಾರ್ಥಕ್ಕಿಂತ ತುಂಬ ದೂರವಾದಾಗ ಕೃತಕತೆಯ ನೆಳಲು ಹಾಯುವುದು ಸಹಜ. ಆದ್ದರಿಂದ ವಾಸ್ತವತೆಗೆ ಆದ್ಯ ಗಮನ ಕೊಡುವುದು ಅಗತ್ಯ. ಹೀಗೆಂದರೆ ರಾಮರಾಯರ ಕೃತಿಯನ್ನು ಅಲ್ಲಗಳೆದಂತಲ್ಲ. ಅವರ ಲೇಖನಿ ಯಾವುದರಲ್ಲಿ ಹೆಚ್ಚು ಸಿದ್ಧಿ ಪಡೆದಿದೆಯೆಂಬುದನ್ನು ಹೇಳಿದಂತಾಯಿತು. ಇಂಥ ನಾಟಕಗಳಿಗೆ ಅವರು ಬೇರೆಯ ನಿಲುವನ್ನು ತಳೆಯಬೇಕೆಂಬುದನ್ನು ಮಾತ್ರ ಹೇಳಬೇಕಾಗುತ್ತದೆ.

ಇತಿಹಾಸಕ್ಕೆ ಸಂಬಂಧಿಸಿದ ನಾಟಕಗಳನ್ನು ಬರೆಯುವುದರಲ್ಲಿ ರಾಮರಾಯರು ಜಯಗಳಿಸಿದ್ದಾರೆ. ಇತಿಹಾಸದ ವಸ್ತುಗಳಿಗೆ ಸಂಬಂಧಿಸಿದ ಅಚ್ಚ ಕನ್ನಡ ಶೈಲಿ, ಕಲಾಭಿಜ್ಞತೆ. ಆದರ್ಶ ಇವುಗಳ ರಸಪಾಕವೇ ರಾಮರಾಯರ ನಾಟಕಗಳಲ್ಲಿ ಹರಿದಿದೆ. ಇವರು ಇಂತಹ ಹಲವಾರು ನಾಟಕಗಳನ್ನು ಬರೆಯಲಿ. ಲೇಖಕರೇ ಪ್ರಕಟಿಸಿರುವ ಈ ಪುಸ್ತಕ ಎಲ್ಲ ಸಾಹಿತ್ಯ ಪ್ರಿಯರ ಮೆಚ್ಚುಗೆ ಪಡೆಯುವುದರಲ್ಲಿ ಸಂದೇಹವಿಲ್ಲ.

ತಮ್ಮಿಂದ ಮೂಡಿ ಬಂದ 'ಶ್ರೀ ಕೃಷ್ಣದರ್ಶನ' ಓದಿ ಸಂತೋಷವಾಯಿತು. ಕನ್ನಡ ಸಾಹಿತ್ಯ ಸರಸ್ವತಿ ಭಂಡಾರಕ್ಕೆ ಇನ್ನೊಂದು ಅಮೋಘರತ್ನವನ್ನು ತುಂಬಿಸಿದ್ದೀರಿ. ಇದಕ್ಕಾಗಿ ತಮ್ಮ ಶ್ರಮ, ತ್ಯಾಗ ಅಪೂರ್ವವಾದದ್ದು ಎಂಬುದನ್ನು ಇಂತಹ ಬೃಹತ್ ಪುಸ್ತಕವನ್ನು ಓದಿರುವ ಯಾರೂ ಅರ್ಥ ಮಾಡಿಕೊಳ್ಳಬಹುದು. ಸಮಸ್ತ ಕನ್ನಡಿಗರಿಗೆ ಶ್ರೀ ಕೃಷ್ಣ ದರ್ಶನ ಮಾಡಿಸಿದ್ದೀರಿ. ಸಾಧನೆಯಿಂದ, ತಪಸ್ಸಿನಿಂದ ಮಾನವ ದೇವಮಾನವನಾಗಬಲ್ಲ ಎಂಬುದನ್ನು ಕೃಷ್ಣನ ಪಾತ್ರವನ್ನು ಚಿತ್ರಿಸುವುದರ ಮೂಲಕ ತೋರಿಸಿ ಕೊಟ್ಟಿದ್ದೀರಿ.

೨೬–೪–೮೮

ಡಾ. ಎಚ್. ಜಿ. ಶೇಷಗಿರಿ

ಕಲಾರಾಧನೆ

ವೈ. ಎಸ್. ಶಿವಪ್ರಸಾದ್

ಕನ್ನಡ ಸಾರಸ್ವತ ಕ್ಷೇತ್ರಕ್ಕೆ ಸಮೇತನಹಳ್ಳಿ ರಾಮರಾಯರು ತಮ್ಮದೇ ಆದ ವಿಶಿಷ್ಟ ಕಾಣಿಕೆ ನೀಡಿದ್ದಾರೆ. ಕತೆ ಕಾದಂಬರಿ ಮತ್ತು ನಾಟಕಗಳಂಥ ಸಾಹಿತ್ಯ ಪ್ರಕಾರಗಳನ್ನು ಆರಿಸಿಕೊಂಡು ಯಾವ ಪ್ರಭಾವಕ್ಕೂ ಒಳಗಾಗದೆ ಅತಂತ್ಯ ಸರಳವಾಗಿ ಮತ್ತು ನೇರವಾಗಿ ನಾಟಕಗಳನ್ನು ಹೆಣೆದಿದ್ದಾರೆ. ೧೯೬೦ರ ದಶಕದಲ್ಲಿ ಮೊದಲು ಮುದ್ರಣಗೊಂಡ 'ಕಲಾರಾಧನೆ' ಕೃತಿ ಐದು ನಾಟಕಗಳನ್ನೊಳಗೊಂಡಿದೆ. 'ರೂಪಾರಿ ದಾಸೋಜ', 'ಹೆಡೆಯ ನೆರಳು' ಮತ್ತು 'ಕಲಾರಾಧನೆ' ನಾಟಕಗಳು ನೇರವಾಗಿ ಹೊಯ್ಸಳ ಶಿಲ್ಪ ಯುಗಕ್ಕೆ ಸಂಬಂಧಿಸಿದವು. ಮಿಕ್ಕೆರಡು ನಾಟಕಗಳು ಸಾಮಾಜಿಕ ನಾಟಕಗಳು. ವರ್ಣನಾ ಶೈಲಿ, ಮಧುರ ಸಂಭಾಷಣೆಯ ಸೊಗಸು ಮತ್ತು ಸಂದರ್ಭೋಚಿತ ಮಾತುಗಾರಿಕೆಯ ಹದದಿಂದ ಪಾಕಗೊಂಡ ನಾಟಕವು ಓದುಗರನ್ನು ಯಾವ ಗೊಂದಲಕ್ಕೂ ಸಿಕ್ಕಿಸದೆ ಮುನ್ನಡೆಸುತ್ತದೆ. ನಾಟಕಕಾರರ ಐದು ನಾಟಕಗಳ ಸೂಕ್ಷ್ಮ ಪರಿಚಯವನ್ನು ಇಲ್ಲಿ ಪರಿಚಯಿಸಲಾಗಿದೆ.

ಕಣ್ಣೀರ ಹಣ್ಣು

ಸಮೇತನಹಳ್ಳಿ ರಾಮರಾಯರ 'ಕಣ್ಣೀರ ಹಣ್ಣು' ನಾಟಕ ದುರ್ವಿಧಿಯ ಕೈವಾಡಕ್ಕೆ ಸಿಕ್ಕು ತತ್ತರಿಸಿ ಹೋದ ಹೆಣ್ಣಿನ ಜೀವವೊಂದರ ದಾರುಣ ಸ್ಥಿತಿಯನ್ನು ಚಿತ್ರಿಸುತ್ತದೆ. ಶ್ರೀಮಂತ ಪದ್ಮೋತ್ತರರ ಮಗಳಾಗಿ ಹುಟ್ಟಿ ಸಂಪತ್ಸಮುದ್ರದಲ್ಲಿ ನಲಿದು ಮೆರೆಯಬೇಕಾಗಿದ್ದ 'ಉತ್ತಮಾ' ಊಳಿಗಕ್ಕಿದ್ದ ಸಾಮಾನ್ಯ ಸೇವಕನಾದ 'ನಂದನಕ'ನೆಂಬುವವನನ್ನು ಒಲಿದು ತಂದೆ ತಾಯಿಯರನ್ನು ತೊರೆದು ಅವನೊಡನೆ ಬಂದು ಸಂಸಾರ ಮಾಡುತ್ತಾಳೆ.

ಅತ್ಯಂತ ಅಸಹಾಯಕ ಸ್ಥಿತಿಯಲ್ಲಿದ್ದ ನಂದನಕ ನಿರ್ಗತಿಕನಾದರೂ ದಾಂಪತ್ಯ ಜೀವನದಲ್ಲಿ ಸುಖವಾಗಿದ್ದವನು.ತನ್ನ ಕುಟುಂಬದ ದುಃಸ್ಥಿತಿಗೆ ತಾನೇ ಕಾರಣನಾದೆನಲ್ಲಾ ಎಂಬ ದುಃಖ ಬಾಧಿಸುತ್ತದೆ. ಹೆಂಡತಿ ಉತ್ತಮಳನ್ನು ದೇವತೆಗೆ ಸಮನಾಗಿ ಕಾಣುವ 'ನಂದನಕ' ಸಿರಿಯ ಸುಪ್ಪತ್ತಿಗೆಯಲ್ಲಿ ಬೆಳೆಯಬೇಕಾಗಿದ್ದ ತನ್ನ ಮಗ 'ಅನುರುದ್ಧಕ'ನ ಸ್ಥಿತಿಗಾಗಿ ಮರುಗುತ್ತಾ. "ಹೆಣ್ಣಿನ ಈ ಬಸಿರ ಬೇನೆಯಲ್ಲಿ ಸಂತವಿಡಲು ಒಂದು ಹೆಣ್ಣು ಜೀವವಾದರೂ ಇಲ್ಲವಾಯಿತಲ್ಲ" ಎಂಬ ಕೊರಗು ಅವನನ್ನು ಬಾಧಿಸುತ್ತದೆ.

ಉತ್ತಮಳನ್ನು ತೌರಿಗೆ ಕಳಿಸಿಕೊಡಬಾರದೆಂಬ ಮನೋಭಾವ ನಂದನಕನಲ್ಲಿಲ್ಲ. "ಹಿರಿಯರಾಸೆಯನ್ನು ಆ ಮದದ ಸೊಕ್ಕಿನಲ್ಲಿ ಲೆಕ್ಕಿಸದ ನಾನು ಈಗ ಈ ಕಷ್ಟದಲ್ಲಿ ಹೇಡಿಯಂತೆ ಬಳಿಸಾರಲೇ ? ಜನ ಏನನ್ನುವರು ?" ಎಂಬ ಮಾತಿನಲ್ಲಿ ಅವನ ಸ್ಥಿತಿ ಮತ್ತು ಮನೋಭಾವಗಳು ವ್ಯಕ್ತವಾಗುತ್ತವೆ. ನಂದನಕನ ಅತಿವಿನಯವೇ ಅವನ ದುಃಸ್ಥಿತಿಗೆ ಕಾರಣವಾಗುತ್ತದೆ. ತುಂಬು ಬಸರಿಯ ರಕ್ಷಣೆಗೆಂದು ಕಾಡಿನಲ್ಲಿ ಸಿದ್ಧತೆ ನಡೆಸಲು ಹೊರಡುತ್ತಾನೆ.

ನಂದನಕನ ನಿರ್ಮಲ ಪ್ರೀತಿಗೆ ಮನಸೋತ ಉತ್ತಮ ಇಬ್ಬಂದಿ ತನದಲ್ಲಿ ಸಿಕ್ಕು ತೊಳಲುತ್ತಾಳೆ. ತೌರಿನವರು ತಮ್ಮ ತಪ್ಪುಗಳನ್ನು ಮನ್ನಿಸಿ ಮೊಮ್ಮಕ್ಕಳನ್ನು ಅತ್ಯಂತ ಆದರದಿಂದಲೂ. ಅಭಿಮಾನದಿಂದಲೂ ಸ್ವೀಕರಿಸುವರೆಂಬ ಭರವಸೆಯಿಂದ ಮುನ್ನುಗ್ಗು ವಷ್ಟರಲ್ಲಿಯೇ ಗಂಡನ ಸಾವು ಎದುರಾಗುತ್ತದೆ. ಮುಂದೆ ಅವಳ ಹಸುಗೂಸನ್ನು ಹದ್ದು ದೋಚುತ್ತದೆ ; ಅನಿರುದ್ಧ ನೀರಿನಲ್ಲಿ ಮುಳುಗಿ ಸಾಯುತ್ತಾನೆ ; ತಂದೆ ತಾಯಿಗಳೂ ಮನೆ ಕುಸಿದು ಬಿದ್ದುದರ ಫಲವಾಗಿ ಸಾಯುತ್ತಾರೆ. ಒಟ್ಟಿನಲ್ಲಿ ಸಾವಿನ ಸರಮಾಲೆ ಯಾಗುತ್ತದೆ ಅವಳ ಬದುಕು. ಕುಟುಂಬದ ಸಾವುಗಳನ್ನು ಕಣ್ಣಾರೆ ಕಂಡ ಜೀವ ಕಡು ನೊಂದು ಕಡೆಗೆ ಹುಚ್ಚಿಯಾಗುತ್ತಾಳೆ. ಉಟ್ಟ ಬಟ್ಟೆಯನ್ನು ಕಳಚಿ ಗಹಗಹಿಸಿ ನಗಲು ಪ್ರಾರಂಭಿಸುತ್ತಾಳೆ. ಮುಂದೆ ಬುದ್ಧನ ಮಾಂತ್ರಿಕ ಸ್ಪರ್ಶದಿಂದ ಅರಿವುಗೊಂಡು ಹುಟ್ಟು ಸಾವಿನ ಧರ್ಮವನ್ನು ಅರಿಯುತ್ತಾಳೆ. ಹೃದಯ ಪರಿವರ್ತನೆಯಿಂದ ಭಿಕ್ಷು ಸಂಘವನ್ನು ಸೇರುವುದರೊಂದಿಗ ನಾಟಕ ಕೊನೆಗೊಳ್ಳುತ್ತದೆ.

ರೂವಾರಿ ದಾಸೋಜ

ಹೊಯ್ಸಳ ಯುಗಕ್ಕೆ ಸಂಬಂಧಿಸಿದ ತುಣುಕೊಂದು ಸಿಕ್ಕರೂ ಅದನ್ನು ನಾಟಕಕ್ಕೆ ಪರಿವರ್ತಿಸುವ ಕಲಾ ಪ್ರೌಢಿಮೆ ನಾಟಕಕಾರರಾದ ಸಮೇತನಹಳ್ಳಿ ರಾಮರಾಯರದು. 'ರೂವಾರಿ ದಾಸೋಜ' ನಾಟಕದಲ್ಲಿ ಹೊಯ್ಸಳ ಶಿಲ್ಪಿ ದಾಸೋಜನ ಕಾರ್ಯತತ್ಪರತೆ ಮತ್ತು ಗುರುನಿಷ್ಠೆಯನ್ನು ಚಿತ್ರಿಸಲಾಗಿದೆ. ಕಲೆಗಾಗಿ ಬದುಕನ್ನೇ ಮೀಸಲಿಟ್ಟ ರೂವಾರಿಯ ಸಾಧನೆ, ಸಿದ್ಧಿ ಮತ್ತು ನಿಸ್ವಾರ್ಥ ಸೇವೆಗಳು ಹೊಯ್ಸಳ ಯುಗದ ಶ್ರೀಮಂತ ಬದುಕಿಗೆ ಹಿಡಿದ ಕನ್ನಡಿಯಂತಿದೆ.

ನಾಡಿನ ಹೆಗ್ಗಡತಿ ಚಾಮಲದೇವಿಯು ರೂವಾರಿ ದಾಸೋಜನನ್ನು ಪ್ರೇಮಿಸುತ್ತಾಳೆ. ಅವಳ ಪ್ರೇಮ ನಾಟಕದಲ್ಲಿ ಹೆಗ್ಗಡತಿಯ ಊಳಿಗದವಳಾದ ಚೆಂದಬ್ಬೆಯ ಮೂಲಕ ವ್ಯಕ್ತವಾಗುತ್ತದೆ. "ಹೆಗ್ಗಡಿತಿಯವರ ಕೈ ಹಿಡಿದಿರಾದರೆ ಸಕಲ ಸಂಪತ್ತಿನ ಆ ಅಮಿತೋಪಭೋಗದಲ್ಲಿ ನಿಮ್ಮ ಬಾಳು ನಿಲ್ಲುತ್ತದೆ" ಎಂದು ಸಲಹೆ ನೀಡುತ್ತಾಳೆ. ಮಲ್ಲೋಜ ವಿದ್ಯಾಗುರುಗಳಿಗೆ ತನ್ನ ವಿದ್ಯೆ ಸಂಪೂರ್ಣ ಸಿದ್ಧಿಗೊಳ್ಳುವವರೆಗೂ ಐಹಿಕ ಸುಖವನ್ನು ಬೇಡೆನೆಂದು ಭಾಷೆ ಕೊಟ್ಟಿರುವುದಾಗಿ ಬೇಡಿಕೊಂಡರೂ "ನಿಮ್ಮ ಗುರುಗಳ ಮನೆಯ ಬಿಟ್ಟಿಯೂಳಿಗವನ್ನು ಮಾಡಿ ಶಿಷ್ಯನ ಮನಸ್ಸನ್ನು ಒಲಿಸಿಕೊಡಿ ಎಂದು ನಾವೆಲ್ಲ

ಬೇಡಿಯೇವು" ಎಂದು ಚೆಂದಬ್ಬೆ ಸೂಕ್ತ ವ್ಯವಸ್ಥೆಗಾಗಿ ಅಣಿಯಾಗುತ್ತಾಳೆ.

ಚೆಂದಬ್ಬೆ ರಾಜಣರ ಮಾತುಗಳಿಂದ ದಾಸೋಜನ ಮನಸ್ಸು ಕದಡುತ್ತದೆ. ಮಲ್ಲೋಜರ ನೆನಪು ಬಂದು ಪುನಃ ಮನಸ್ಸನ್ನು ಗಟ್ಟಿ ಮಾಡಿಕೊಳ್ಳುತ್ತಾನೆ. ಚಂಚಲವಾದ ಮನಸ್ಸು ಮೇಲಿಂದ ಮೇಲೆ ಚಾಮಲದೇವಿಯ ಸೌಂದರ್ಯದಲ್ಲಿ ಮುಳುಗೇಳುತ್ತದೆ. ಕನಸು ಕಾಣುತ್ತಾನೆ. ಇದೇ ಸಂದರ್ಭದಲ್ಲಿ ಮಲ್ಲೋಜ ಗುರುಗಳು ಶಿಷ್ಯನ ಸಾಧನೆಯನ್ನು ನೋಡಲೆಂದು ಬಂದು ಕುಪಿತರಾಗಿ 'ಲಂಪಟರಿಗೆ ಲಲಿತ ಕಲೆಯ ಸಿದ್ಧಿಯೇ' 'ದಾಸೋಜನಿನ್ನು ಮಲ್ಲೋಜನ ಶಿಷ್ಯನಲ್ಲ'ವೆಂದು ಶಿಷ್ಯನ ವಿಗ್ರಹವೊಂದನ್ನು ಚೂರು ಚೂರು ಮಾಡಿ ಶಿಷ್ಯನನ್ನು ತ್ಯಜಿಸಿ ಹೊರಟು ಹೋಗುತ್ತಾರೆ.

ಚಾಮಲದೇವಿ ಪುನಃ ದಾಸೋಜನನ್ನು ಒಲಿಸಿಕೊಳ್ಳುವ ಯತ್ನ ನಡೆಸುತ್ತಾಳೆ. ದೃಢಮನಸ್ಕನಾದ ದಾಸೋಜನು ಯಾವುದಕ್ಕೂ ತಗ್ಗದಿದ್ದಾಗ ಕುಪಿತಳಾದ ಚಾಮಲೆ "ಬನವಾಸಿ ನಾಡಿನ ಬಳ್ಳಿಗಾಂವೆಯ ದಾಸೋಜ ರೂವಾರಿ ತನಗಾಸರೆಯನ್ನಿತ್ತ ತುಂಬುಳಲು ನಾಡಿಗವಿಧೇಯನಾದ್ದರಿಂದ ಇಂದಿನಿಂದ ಬಂದಿ" ಎಂದು ಆಜ್ಞೆ ಹೊರಡಿಸುತ್ತಾಳೆ. ಕಡೆಗೆ ಚಾಮಲಳ ಮನಸ್ಸು ಕರಗಿ ಅವನನ್ನು ಬಿಟ್ಟುಬಿಡುತ್ತಾಳೆ. ಅವನ ನೆನಪಿನಲ್ಲೇ ಉಳಿಯುವ ಯತ್ನ ಮಾಡುತ್ತ ಕಾಲ ಕಳೆಯುತ್ತಾಳೆ.

ಭಾಷೆ ಸಂಭಾಷಣೆಗಳು ಹಿತ ಮಿತವಾಗಿರುವುದರಿಂದ ನಾಟಕವು ಯಶಸ್ವಿಯಾಗಿದೆ.

ಕಲಾರಾಧನೆ

ಐದು ಭಾಗಗಳನ್ನೊಳಗೊಂಡ 'ಕಲಾರಾಧನೆ' ನಾಟಕವು, ಹೊಯ್ಸಳ ಸಮುದಾಯವು ಕಲೆಗೆ ತೋರುತ್ತಿದ್ದ ಹಿರಿಮೆ ಮತ್ತು ಔದಾರ್ಯಗಳನ್ನು ಸಾರುತ್ತಿದೆ. ಇಡೀ ನಾಟಕ ಸೋವಲೆಯ ಸುತ್ತ ಹರವಿಕೊಂಡಿದೆ. ಹೀಗಾಗಿ ನಾಟಕದ ಕೇಂದ್ರಬಿಂದು 'ಸೋವಲೆ'.

ಸೋವಲೆ ತಲಕಾಡಿನ ಚೋಳ ದಣಾಯಕ ಅದಿಯಮನ ಮಗಳು, ಶಂಬಿಯನ್ ಎಂಬುದು ಆಕೆಯ ಹುಟ್ಟು ಹೆಸರು. ತಲಕಾಡ ಯುದ್ಧದಲ್ಲಿ ಹೊಯ್ಸಳ ಸೈನ್ಯವನ್ನು ಎದುರಿಸಲಾಗದೆ ಹೊಯ್ಸಳ ರಾಣಿಯನ್ನು ಕೊಲ್ಲುವ ಸಂಚು ನಡೆಯಿಸಬೇಕೆಂದು ಮಗಳಲ್ಲಿ ಅಂಗಲಾಚುತ್ತಾನೆ. ತಂದೆಯ ಆಸೆಯನ್ನು ನೆರವೇರಿಸಲು ಶಂಬಿಯನ್ ಸೋವಲೆದೇವಿ ಎಂಬ ಕನ್ನಡತಿಯಾಗಿ ದಣಾಯಕ ಗಂಗರಾಜರ ಕನಿಕರಕ್ಕೆ ಪಾತ್ರಳಾಗಿ ನರ್ತಕಿಯಾಗುತ್ತಾಳೆ. ಮುಂದೆ ರಾಣಿಯನ್ನು ಕೊಲ್ಲುವ ಸಂಚು ಮೂರು ಬಾರಿ ನಡೆಸುತ್ತಾಳೆ.

(೧) ನರ್ತನದಲ್ಲಿ ಮೆಚ್ಚಿಗೆ ಪಡೆದು ಸೆಜ್ಜೆಯ ಕಾವಲು ಕಾಯುವ ಕೆಲಸಕ್ಕಾಗಿ ಯತ್ನ ಮಾಡುತ್ತಾಳೆ.

(೨) ರುಂಡವಿಲ್ಲದ ರಾಣಿಯ ಆಕಾರವೊಂದನ್ನು ಮೇಣದಲ್ಲಿ ಮಾಡಿ ಅದರ ಮೇಲೆ ಕಠಾರಿ ಪ್ರಯೋಗಗಳನ್ನು ಮಾಡುತ್ತಾಳೆ.

(೩) ಸನ್ನಿಧಾನಕ್ಕೆ ಪ್ರಿಯವಾದ ಮಲ್ಲಿಗೆಗೆ ಕ್ರಮಕ್ರಮವಾಗಿ ವಿಷವೂಡಿಸಿ ಹೂವಿನ ಕಂಪನ್ನು ಹಾಲಾಹಲವಾಗಿ ಮಾಡುತ್ತಾಳೆ.

ಈ ಮೂರೂ ಸಂಚಿನ ಪ್ರಯತ್ನಗಳು ಕೇವಲ ಪ್ರಯತ್ನಗಳಾಗಿ ನಾಟಕದಲ್ಲಿ ತೋರಿಬರುತ್ತವೆಯಾದರೂ ಸಂಚಿನಲ್ಲಿರಬೇಕಾದ ಉಗ್ರತೆ ತೀಕ್ಷ್ಣತೆಗಳು ಕುಂಠಿತ ಗೊಂಡು ಒಟ್ಟು ನಾಟಕದ ಭದ್ರತೆಗೇ ಅಭದ್ರತೆಯನ್ನು ಉಂಟು ಮಾಡಿರುವಂತೆ ತೋರುತ್ತದೆ.

ಶಿಲ್ಪಚಿತ್ರಕ್ಕೆ ನಿಂತು ವಿವಿಧ ಭಂಗಿಗಳ ಮಾದರಿಗಳನ್ನು ನೀಡುವ ಸಂದರ್ಭದಲ್ಲಿ ಸೋವಲೆ ಚಾವಣನಿಗೆ ಮಾರುಹೋಗುತ್ತಾಳೆ. ಅತ್ಯಲ್ಪ ಕಾಲದಲ್ಲಿ ಆತನ ಆರಾಧನಾ ಮೂರ್ತಿಯಾಗುತ್ತಾಳೆ. ಒಮ್ಮೆ ನಿಲ್ಲುವ ಭಂಗಿಯಲ್ಲಿ ದೋಷ ಕಂಡ ಚಾವಣ ಅವಳನ್ನು ಮುಟ್ಟಿ ಮುಟ್ಟಿ ಸರಿಪಡಿಸಿ ನಿಲ್ಲಿಸುತ್ತಾನೆ. ಸ್ಪರ್ಶ ಮಾತ್ರದಿಂದ ಉದ್ರಿಕ್ತಳಾದ ಸೋವಲೆ ತನ್ನಲ್ಲಿಗೆ ಬರುವಂತೆ ಆಹ್ವಾನಿಸುತ್ತಾಳೆ. ಸುಳಿವಿಲ್ಲದೆ ಸೋವಲೆಯಲ್ಲಿಗೆ ಬಂದ ಸಂದರ್ಭ ದಲ್ಲಿ ಆಕೆ ಮೇಣದ ಮುಂಡಕ್ಕೆ ಕಠಾರಿ ಪ್ರಯೋಗ ನಡೆಸುತ್ತಿರುವುದನ್ನು ಕಾಣುತ್ತಾನೆ. ಎಷ್ಟು ಕೇಳಿಕೊಂಡರೂ ಸುಳಿವು ನೀಡದೆ ರುಂಡವಿಲ್ಲದ ಮೇಣದ ಮುಂಡವನ್ನು ಕಡೆಗೆ ಬೆಂಕಿಯಿಟ್ಟು ನಾಶಪಡಿಸುತ್ತಾಳೆ. ಸತ್ಯ ಬಯಲಾಗಬಹುದೆಂಬ ಭೀತಿಯಿಂದ ಪ್ರತ್ಯಕ್ಷ ಕಂಡ ಚಾವಣನ ಮೇಲೆ ಕ್ಷುಲ್ಲಕ ಆರೋಪ ಹೊರಿಸುತ್ತಾಳೆ. ವಿಚಾರಣೆಗೆ ಗುರಿಪಡಿಸಿದ ರಾಣಿ, ಚಾವಣನಿಗೆ ಕಣ್ಣು ಕೀಳಿಸಿ ನಾಡಿನಿಂದ ಹೊರಕ್ಕೆ ಕಾಡಿಗಟ್ಟುವ ಶಿಕ್ಷೆ ವಿಧಿಸು ತ್ತಾಳೆ. ಪರಿಸ್ಥಿತಿ ಮಿತಿಮೀರಿದಾಗ ತನ್ನ ತಪ್ಪನ್ನು ಒಪ್ಪಿಕೊಂಡು ಸೋವಲೆ ತನ್ನ ಸಂಚನ್ನು ಬಹಿರಂಗಪಡಿಸುತ್ತಾಳೆ. "ಇನ್ನು ನನ್ನನ್ನೊಂದು ಕಲ್ಲಾಲೆಗೆ ಕೊಡಿಸಿಬಿಡಿ" ಎಂದು ದಂಡನೆಯನ್ನು ತಾನೆ ವಿಧಿಸಿಕೊಳ್ಳುತ್ತಾಳೆ.

ವಿಶಾಲ ಹೃದಯವುಳ್ಳ ರಾಣಿ ಸೋವಲೆಯ ತಪ್ಪನ್ನು ಮನ್ನಿಸಿ ಚಾವಣನೊಂದಿಗೆ ಮದುವೆ ನಡೆಸಿ ಚೋಳ ರಾಜಾಸ್ಥಾನಕ್ಕೆ ನಮ್ಮ ವಿಶ್ವಾಸದ ಕಾಣ್ಕೆಯಾಗಿ ಸಕಲ ರಾಜ ಮರ್ಯಾದೆಗಳೊಡನೆ ಚೋಳ ದೇಶಕ್ಕೆ ಕಳುಹಿಸುವ ತೀರ್ಮಾನ ತೆಗೆದುಕೊಳ್ಳುತ್ತಾಳೆ.

ವಿಷ್ಣುವರ್ಧನನ ಪಟ್ಟದರಸಿ ಶಾಂತಲಾದೇವಿ ಸ್ವತಃ ನಾಟ್ಯಶಾಸ್ತ್ರ ಪ್ರವೀಣಳೂ ಆಗಿದ್ದಲ್ಲದೆ ಓಲಗದಲ್ಲಿ ಕುಳಿತು ನಿರ್ಣಯಗಳನ್ನು ತೆಗೆದುಕೊಳ್ಳುವ, ರಾಯಸ ಬರೆಸುವ ಧೀಮತಿಯೂ ಆಗಿದ್ದಳು ಎಂಬುದು ನಾಟಕದಲ್ಲಿ ಮೂಡಿಬಂದಿದೆ. ರಾಣಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ಬದಲು ಶಿಕ್ಷಣ ನೀಡಿದರೆ ಮನಃಪರಿವರ್ತನೆಯಾಗುವುದೆಂದು ಮನಗೊಂಡಿ ದ್ದಳು. ಸೋವಲೆಯಲ್ಲಡಗಿರುವ ನರ್ತನಕಲೆ, ಚಾವಣನಲ್ಲಿರುವ ಶಿಲ್ಪಕಲೆ ಶಾಶ್ವತವಾಗಿ ಉಳಿಯುವಂತೆ ಮಾಡುವುದೇ ನಿಜವಾದ ಕಲಾರಾಧನೆ. ಈ ಕಾರಣದಿಂದಲೇ ಇಬ್ಬರಿಗೂ ಜೀವದಾನ ಮಾಡುತ್ತಾಳೆ.

ಹೆಡೆಯ ನೆರಳು

ಹೊಯ್ಸಳ ರಾಣಿ ಪದ್ಮಲದೇವಿಯ ಭೋಗಲಾಲಸೆ, ಲಕ್ಕಣ ಈರೆಣರಿಂದ ಈಡೇ

ರದ ಫಲವಾಗಿ ಅವರಿಬ್ಬರ ಕೊಲೆಗೆ ಕಾರಣಳಾಗುತ್ತಾಳೆ. ರಾಣಿಯ ವರ್ತನೆ ನಾಟಕದಲ್ಲಿ ತೀರ ಅಸಭ್ಯ ರೀತಿಯಲ್ಲಿ ಚಿತ್ರಿತವಾಗಿದ್ದರೂ ಕಾಮಾತುರಳಾದವಳಿಗೆ ಭಯ ಲಜ್ಜೆಗಳ ಪರಿಜ್ಞಾನವಿಲ್ಲದಿರುವುದು ಸಹಜವೇ ಆಗಿರುವುದರಿಂದ ನಾಟಕ ಓದಿಸಿಕೊಂಡು ಹೋಗುತ್ತದೆ.

ತಂದೆಯ ಸಾವಿನಿಂದ ದುಃಖಿತರಾಗಿದ್ದ ತಮ್ಮಿಬ್ಬರು ಮಕ್ಕಳನ್ನು ದೇಮತಿ ದುಃಖ ನಿವಾರಣೆಗಾಗಿ ಅಣ್ಣ ಬಲ್ಲಾಳನ ಅರಮನೆಗೆ ಕರೆತರುತ್ತಾಳೆ. ರಾಜ ವೈಭವ ಗಳನ್ನು ನೋಡಿ ಮಕ್ಕಳ ಮನಸ್ಸು ಹಗುರವಾಗಲೆಂಬ ತಾಯಿಯ ಹೆಬ್ಬಯಕೆ ರಾಣಿಯ ಕೀಳ್ಬಯಕೆಯಿಂದ ಮಣ್ಣುಪಾಲಾಗುತ್ತದೆ. ಅರಸಿಯ ಮಾತನ್ನು ನಂಬಿ ಆತುರದ ನಿರ್ಧಾರಕ್ಕೆ ಬಂದ ಬಲ್ಲಾಳ, ವಿವೇಕ ಕಳೆದುಕೊಂಡು ನಿರಪರಾಧಿಗಳಾದ ಸೋದರಳಿ ಯಂದಿರ ಶಿರಚ್ಛೇದನಕ್ಕೆ ಆಜ್ಞೆ ಮಾಡುತ್ತಾನೆ. ಪದ್ಮಲದೇವಿಯ ಕುರುಡು ವಾತ್ಸಲ್ಯಕ್ಕೆ ಮರುಳಾಗಿ ಹೊಯ್ಸಳ ರಾಜರಾಜವಂಶಕ್ಕೆ ಕಳಂಕ ಪ್ರಾಯನಾಗುತ್ತಾನೆ.

ಪದ್ಮಲದೇವಿಯ ಮದ, ಉನ್ಮಾದ, ಕಳಂಕ ಜೀವನ, ಕುತಂತ್ರ, ಕಾಮದಾಹ, ರಾಜದ್ರೋಹ, ಅಧಿಕಾರ ಮತ್ತು ದರ್ಪಗಳು ನಾಟಕದಲ್ಲಿ ಬಚ್ಚ ಬಯಲಾಗಿ ಪ್ರಕಟ ಗೊಂಡಿದೆ.

"ಬಾ, ಗಂಡು ಹೆಣ್ಣಿನ ಆ ಸುಖವನ್ನು ಬಾಳಿನಲ್ಲಿ ನಿರಾತಂಕದಿಂದ ಸವಿಯೋಣ. ನೀನೊಪ್ಪಿ ನಮ್ಮನ್ನು, ನಮ್ಮ ಮನಸ್ಸನ್ನು ರಮಿಸುವೆಯಾದರೆ ಅಧಿಕಾರ ಐಶ್ವರ್ಯ ಎಲ್ಲ ಉಂಟು" ಎಂದು ರಾಣಿ ಈರಣನನ್ನು ಆಹ್ವಾನಿಸುವುದು ಮೇಲಿನ ಮಾತುಗಳಿಗೆ ಸಾಕ್ಷಿಯಂತಿದೆ.

ಈರಣ ನಿಜಕ್ಕೂ ನಿಷ್ಠಾವಂತ ತರುಣ. ರಾಣಿಯ ಆಹ್ವಾನವನ್ನು ತಿರಸ್ಕರಿಸಿ ರಾಣಿಗೇ ತಿಳುವಳಿಕೆ ನೀಡುತ್ತಾನೆ. ರೂವಾರಿ ಬೀರೋಜನೊಂದಿಗೆ ದೇವಾಲಯ ನೋಡಲು ಬಂದಾಗ ದೇವಾಲಯದ ಶಿಲ್ಪ ಸೌಂದರ್ಯವನ್ನು ಕಂಡು ಮೆಚ್ಚಿಗೆ ಸೂಚಿಸು ತ್ತಾನೆ. ಹೊಯ್ಸಳ ರಾಜರ ಬಗ್ಗೆ, ಅವರ ಶಿಲ್ಪದ ಬಗ್ಗೆ, ರೂವಾರಿಗಳ ಬಗ್ಗೆ ಅಪಾರ ಅಭಿಮಾನವುಳ್ಳ ಸುಸಂಸ್ಕೃತ ಹೃದಯಿ. ತಲೆದಂಡಕ್ಕೆ ಆಜ್ಞೆ ಮಾಡಿದಾಗ ಕೋಪಗೊಂಡು ಬಲ್ಲಾಳನ ಮೇಲೆ ಕಿಡಿಗಾರುತ್ತಾನೆ. ನಾಟಕದುದ್ದಕ್ಕೂ ಈರಣನ ಪಾತ್ರ ಉದಾತ್ತವಾಗಿ ಚಿತ್ರಿತವಾಗಿದೆ. ನಾಟಕಕಾರರು ನಾಟಕಕ್ಕಿಟ್ಟಿರುವ "ಹೆಡೆಯ ನೆರಳು" ಶೀರ್ಷಿಕೆ ಅತ್ಯಂತ ಸಮಂಜಸವಾಗಿರುವುದು ಕಂಡುಬರುತ್ತದೆ.

ಬಂಗಾರದ ಬೆಳಸು

ಬಂಗಾರದ ಬೆಳಸು ನಾಟಕ ಕಡಿಮೆ ಪಾತ್ರಗಳನ್ನೊಳಗೊಂಡು ಹೆಚ್ಚಿನ ಅನ್ವೇಷ ಣೆಗೆ ದಾರಿ ಮಾಡಿಕೊಡುವ ಪುಟ್ಟ ನಾಟಕ. ಎಲ್ಲ ಪಾತ್ರಗಳೂ ಉದಾತ್ತ ಪಾತ್ರಗಳಾಗಿ ಚಿತ್ರಣಗೊಂಡಿವೆ.

ವಿದ್ಯಾವಂತ ಯುವಕನಾದ 'ನಾಯಕ' ಸಂಪಿಗೆ ಎಂಬಾಕೆಯನ್ನು ಪ್ರೀತಿಸುತ್ತಾನೆ.

ತಾಳಿ ಕಟ್ಟುವುದಕ್ಕೂ ಮುಂಚೆ ಸಂಪಿಗೆ ಹುಟ್ಟಿದ್ದಳು ಎಂಬುದೇ ಊರಿನ ಎಲ್ಲ ಹಿರಿಯರ ಅಸಮಾಧಾನಕ್ಕೆ ಕಾರಣವಾಗಿ ತಾಯಿಯ ನಡತೆಯಲ್ಲಿ ದೋಷವನ್ನು ಎಣಿಸುತ್ತಾರೆ. ಇದರ ಫಲವಾಗಿ ನಾಯಕ ಸಂಪಿಗೆಯಿಂದ ದೂರ ಉಳಿಯಬೇಕಾಗುತ್ತದೆ.

ಸಂಪಿಗೆಯ ತಾಯಿ ಮಲ್ಲವ್ವ ನಿಜಕ್ಕೂ ಗರತಿ. ಜನಗಳ ಮಾತನ್ನು ಮನಸ್ಸಿಗೆ ತಂದುಕೊಂಡು ಕೊರಗಿ ಕೊರಗಿ ಕೊನೆಯುಸಿರೆಳೆಯುತ್ತಾಳೆ. ಮಲ್ಲಯ್ಯ ಸಂಪಿಗೆಯನ್ನು ಬೆಟ್ಟಪ್ಪನವರ ಕೈಲಿರಿಸಿ ತಾನೂ ತೀರಿಕೊಳ್ಳುತ್ತಾನೆ.

ಬೆಟ್ಟಪ್ಪನವರ ಸಾಕುಮಗಳಾಗಿ ಬೆಳೆದ ಸಂಪಿಗೆ ರೂಪವಂತೆ ಹಾಗೂ ಗುಣವಂತೆ, ನಯ ವಿನಯಗಳಿಂದ ನಡೆಯುವ ಚೆದುರೆ. ಸಿಂಗಾರಿಯ ಆತ್ಮೀಯ ಗೆಳತಿ. ನಾಯಕನ ಇಂಗಿತವನ್ನು ಅರಿತು ಆಡುವ ಅವಳ ಮಾತುಗಳು ಅವಳ ಗಾಂಭೀರ್ಯತೆಯನ್ನು ಇಮ್ಮಡಿಸಿದೆ. ಸಿದ್ಧರ ಪ್ರೀತಿಗೆ ಪಾತ್ರಳಾಗಿ ಆಶ್ರಮದಲ್ಲಿ ಉಳಿಯುತ್ತಾಳೆ.

ನಾಟಕದಲ್ಲಿ ಬರುವ ಸಿದ್ಧರು ಶಾಂತಿಗೆ ಸಂಕೇತವಾಗಿದ್ದಾರೆ. ತಮ್ಮ ತಿಳಿವಳಿಕೆ ಜ್ಞಾನದ ಫಲವಾಗಿ ಎಲ್ಲರ ಮನಸ್ಸನ್ನು ತಿಳಿಗೊಳಿಸಿ ಸಂಪಿಗೆ ಮತ್ತು ನಾಯಕನನ್ನು ಒಂದು ಮಾಡುತ್ತಾರೆ.

ಜನನಾಯಕನಾದ 'ನಾಯಕ' ತನ್ನ ವಿದ್ಯೆ, ಪ್ರಾಮಾಣಿಕತೆ ಮತ್ತು ನಿಷ್ಠೆಯ ಫಲ ವಾಗಿ ಊರಿನ ಜನರ ಮನ್ನಣೆಗೆ ಪಾತ್ರನಾಗಿದ್ದಾನೆ. ಅವನ ನಿಸ್ವಾರ್ಥ ಬುದ್ಧಿಗೆ ಮೆಚ್ಚಿದ ಜನ ಅವನನ್ನು ಮಂತ್ರಿ ಪದವಿಗೂ ಏರಿಸುತ್ತಾರೆ. ಹತ್ತು ವರುಷದ ಕೆಳಗೆ ದ್ವೇಷ ಅಸೂಯೆಗಳಿಗೆ ತೌರಾಗಿದ್ದ 'ಸೀಯಾಳ' ನಾಯಕನಿಂದ ನೆಮ್ಮದಿಗೊಂಡು ಪ್ರಶಾಂತ ವಾಗಿರುತ್ತದೆ. ಮಂತ್ರಿ ಪದವಿ ದೊರೆತ ಸಂದರ್ಭದಲ್ಲಿ ಮಗುವಿನೊಂದಿಗೆ ಕೂಡಿ ಕೊಂಡರೆ ಜನ ಏನೆನ್ನಬಹುದು ಎಂದು ಶಂಕಿಸಿ ಸಂಪಿಗೆ, ಆತ ಮತ್ತೆ ಮನೆಗೆ ಮರಳುವ ತನಕ ತಾನು ಸಿದ್ಧರ ಬಳಿಯಲ್ಲೇ ಸೇವೆಗೆ ನಿಲ್ಲುವ ದೃಢ ಮನಸ್ಸು ಮಾಡುತ್ತಾಳೆ.

ಸಂಪಿಗೆ, ಬೆಟ್ಟಪ್ಪ, ಸಿಂಗಾರಿ ನಾಯಕನ ಪಾತ್ರಗಳು ಇಡೀ ನಾಟಕದಲ್ಲಿ "ಪರೋಪ ಕಾರಕ್ಕಾಗಿಯೇ ಈ ಬದುಕು" ಎಂಬ ತತ್ವವನ್ನು ಎತ್ತಿ ಹಿಡಿಯುವಂತೆ ಚಿತ್ರಿತವಾಗಿದೆ.

ಸವತಿಗಂಧವಾರಣೆ

ಜಿ. ಬ್ರಹ್ಮಪ್ಪ

ಪೂಜ್ಯ ಸಮೇತನಹಳ್ಳಿ ರಾಮರಾಯರ 'ಸವತಿಗಂಧವಾರಣೆ' ಹೆಸರಿಗೆ ಕಾದಂಬರಿಯಾದರೂ ಇದರ ಭಾಷೆ, ಬಂಧ, ಶೈಲಿ, ಭಾವಗಳನ್ನು ನೋಡಿದಾಗ ಇದು ಒಂದು ಕಾವ್ಯವಾಗೇ ಇದೆ. ಇಂಥ ಮಹಾಕಾದಂಬರಿಗಳನ್ನು ಕನ್ನಡ ಸಾಹಿತ್ಯದಲ್ಲಿ ಕೈಬೆರಳುಗಳಲ್ಲಿ ಎಣಿಸಬಹುದು. ಇಂಥ ಸೃಜನಶೀಲ ಪ್ರತಿಭಾವಂತ ಸಾಹಿತಿಗೆ ಸಲ್ಲಬೇಕಾದ ಸನ್ಮಾನ ಸಂದಿಲ್ಲವೆಂದೇ ನನ್ನ ಅಭಿಪ್ರಾಯ. ಸಾಮರ್ಥ್ಯದ ಜೊತೆಗೆ ಅದೃಷ್ಟವೂ ಇರಬೇಕಲ್ಲ!

ಕಾದಂಬರಿಯ ಕೇಂದ್ರ ಬಿಂದು ವಿಷ್ಣುವರ್ಧನನ ಪಟ್ಟದರಸಿ ಶಾಂತಲ. ಈ ಪಾತ್ರ ಪೋಷಣೆಗಾಗಿ ಹಲವಾರು ಪಾತ್ರಗಳೂ ಹಲವಾರು ಸನ್ನಿವೇಶಗಳೂ ಬಂದಿವೆ. ಬೇಲೂರು ಹಳೇಬೀಡುಗಳ ದೇವಾಲಯವನ್ನು ನೋಡುವಾಗ ಕಕರ ಮಕರವಾಗುವಂತೆ ಇಲ್ಲೂ ಆಗುವುದು. ಯಾವುದನ್ನು ನೋಡಬೇಕು, ಯಾವುದನ್ನು ಬಿಡಬೇಕು, ಒಂದಕ್ಕಿಂತ ಒಂದು ಕಲಾ ವೈಭವದ ಖನಿಯಾಗಿದೆ. ಈ ಕಾದಂಬರಿಯನ್ನು ಇಡಿಯಾಗಿ ನೋಡಿದರೂ ಸರಿ ಬಿಡಿಯಾಗಿ ನೋಡಿದರೂ ಸರಿ ಎಲ್ಲೆಲ್ಲೂ ಲಾವಣ್ಯ ತೊಟ್ಟಿಡುವಂತೆ ಭಾಸವಾಗುವುದು. ಕಾದಂಬರಿಯ ಉದ್ದಗಲದಲ್ಲೂ ನಾಟಕೀಯತೆ ಮೈದುಂಬಿಕೊಂಡುದಾಗಿದೆ. ಈ ಒಂದು ಕೃತಿಯನ್ನೇ ಕುರಿತು ಡಾಕ್ಟರೇಟ್ ಪಡೆಯಬಹುದು.

ಶಾಂತಲೆ ಬಂಜೆಯಾಗಿ ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಸೃಷ್ಟಿಸುವುದಕ್ಕಾಗೇ ಪಲ್ಲವ ರಾಜಕುಮಾರಿಯನ್ನು ಬಲವಂತವಾಗಿ ವಿಷ್ಣುವರ್ಧನನ ಕೊರಳಿಗೆ ಕಟ್ಟುವರು. ವಿಶ್ವಮಾನವಳಾದ ಇವಳು ಎಲ್ಲೆಲ್ಲೂ ಒಳ್ಳೆಯದನ್ನೇ ಕಾಣುವಳು. ಮೈಯೆಲ್ಲ ಕಣ್ಣಾಗಿ, ಮೈಯೆಲ್ಲ ಕಿವಿಯಾಗಿ ರಾಜ್ಯದ ಹಿತವನ್ನು ರಕ್ಷಿಸುವವಳು. ಮೃದು ಹೃದಯಿಯೂ ದಯಾಮಯಿಯೂ ಆದ ಈಕೆ ಕೆಲವೊಮ್ಮೆ ರಾಜ್ಯದ ಹಿತವನ್ನು ಕಾಪಾಡಲು ವಜ್ರದಂತೆ ಕಠೋರಳೂ ಆಗುವಳು. ಅಡಿಯಿಂದ ಮುಡಿತನಕ ನಿಸ್ವಾರ್ಥಿಯಾಗಿ ಒಳಗೂ ಹೊರಗೂ ಶುಭಪರಿಣಾಮಿಯಾಗಿ ಬಾಳಿನುದ್ದಕ್ಕೂ ವರ್ತಿಸಿರುವರು. ಶುಭಪರಿಣಾಮ, ಶುಭಚಿಂತನೆ, ಸದಾಚಾರ (ಸಮ್ಯಗ್ದರ್ಶನ, ಸಮ್ಯಗ್–ಜ್ಞಾನ, ಸಮ್ಯಕ್ ಚಾರಿತ್ರ, ಇವು

ಈ ಹೊಯ್ಸಳ ಶಾಂತಲಾದೇವಿಯನ್ನು ಚಿತ್ರಿಸುವ ಈ ಕಾದಂಬರಿ ೧೯೬೧ ಮತ್ತು ೧೯೬೮ರಲ್ಲಿ ಎರಡು ಪ್ರಕಟಣೆಗಳನ್ನು ಕಂಡಿದೆ. ಮೈಸೂರು ವಿಶ್ವವಿದ್ಯಾನಿಲಯ ೧೯೬೮–೬೯ನೆಯ ವರುಷದಲ್ಲಿ ಇದನ್ನು ಬಿ.ಕಾಂ. ಪರೀಕ್ಷೆಗೆ ಪಠ್ಯವನ್ನಾಗಿ ಅಂಗೀಕರಿಸಿದ್ದಿತು.

ಗಳ ತ್ರಿವೇಣಿಸಂಗಮವಾಗಿ ಕರ್ನಾಟಕದಲ್ಲಿ ಅಜರಾಮರಳಾಗಿರುವಳು.

ಶಾಂತಲೆ ಮತ್ತು ವಿಷ್ಣುವರ್ಧನರ ದಾಂಪತ್ಯ ಹಾಲುಸಕ್ಕರೆಯಂತೆ ಮಧುರವಾದುದು. ಇವನು ಬೊಮ್ಮಲೆಯನ್ನು ಮದುವೆಯಾದಮೇಲೆ ನೂತನ ದಂಪತಿಗಳೇ ಗೌತಮಕ್ಷೇತ್ರಕ್ಕೆ ಹೋಗಿ ಬರಲೆಂದು ಶಾಂತಲೆ ಬಯಸಿದಳು. ಇವಳಿನ್ನು ಬಿಟ್ಟು ವಿಷ್ಣುವರ್ಧನ ಬಮ್ಮಲೆಯೊಡನೆ ಹೋಗಲು ಒಪ್ಪಲೇ ಇಲ್ಲ. ಅನಿವಾರ್ಯವಾಗಿ ಶಾಂತಲೆಯೂ ಹೊರಡ ಬೇಕಾಯಿತು. ಈ ನೂತನ ದಂಪತಿಗಳಿಗೆ ಆದಷ್ಟೂ ಏಕಾಂತ ಸಿಗುವಂತೆ ಶಾಂತಲೆ ದಾರಿಯುದ್ದಕ್ಕೂ ನೋಡಿಕೊಂಡಳು. ತಾನು ಇದ್ದೂ ಇಲ್ಲದಂತೆ ವರ್ತಿಸಿದಳು. ತಾಯ್ಗುರುಳಾಗಿ ಬಮ್ಮಲೆಗೆ ಒತ್ತಾಸೆಯಾಗಿ ನಿಂತಳು.

ವಿಷ್ಣುವರ್ಧನ ಮಲೆಪರ ಮೇಲೆ ಯುದ್ಧಕ್ಕೆ ಹೊರಟಾಗ ರಾಜಧಾನಿಯ ರಕ್ಷಣೆಗೆ ಶಾಂತಲೆಯೇ ಸಮರ್ಥಳು ಎಂದು ಹಿರಿಯರು ಒಕ್ಕೊರಲಲ್ಲಿ ನಿರ್ಧರಿಸುವರು. "ಇದು ನಾಡಿಗರ ಆಜ್ಞೆ ತಂಗಿ, ನಾವು ಎಂದು ಈ ಅರಮನೆಯನ್ನು ಹೊಕ್ಕೆವೊ, ಅಂದೇ ಈ ನಮ್ಮ ಬಾಳು ಅಂತಹ ಸೇವೆಗೆಂದಾಯಿತು" ಎಂದು ಶಾಂತಲೆ ತನ್ನನ್ನು ಜನರ ಸೇವಕಿ ಎಂದೇ ಕೊನೆಯ ತನಕ ತಿಳಿದಳು. ತಾನು ಪಟ್ಟದರಸಿ ಎಂದು ಈಕೆ ಬಾಳಿನಲ್ಲಿ ಎಂದೂ ಬೀಗಿದವಳಲ್ಲ. ಅಧಿಕಾರ ಅಂತಸ್ತಿಗೆ ಅಂಟಿಯೂ ಅಂಟದಂತೆ ವಿನಯಸಂಪನ್ನೆಯಾಗಿದ್ದಳು.

ಬಮ್ಮಲೆ ಪುತ್ರರತ್ನವನ್ನು ಹಡೆದಳು. ಮಗುವಿಗೆ ಬಲ್ಲಾಳನೆಂದು ಹೆಸರಿಟ್ಟರು. ತಾಯಿಗಿಂತ ಹೆಚ್ಚಾಗಿ ಶಾಂತಲೆಯು ಮಗುವಿನಲ್ಲಿ ಸುಸಂಸ್ಕಾರವನ್ನು ಎರಕ ಹೊಯ್ಯಲು ಹಗಲು ರಾತ್ರಿ ಶ್ರಮ ಪಟ್ಟಳು. ಬಮ್ಮಲೆ ಹೆತ್ತ ಹೆಣ್ಣು ಮಗು ರೋಗಿಷ್ಠೆಯಾಗಿ ನರಳುವಾಗ ಶಾಂತಲೆಯ ಕರುಳು ನುಲಿಚಿದಂತಾಗಿ ಮಮ್ಮಲ ಮರುಗಿದಳು. ಬರು ಬರುತ್ತಾ ಬಮ್ಮಲೆಯ ತಲೆತಿರುಗಿತು. ಶಾಂತಲೆಯ ಬಗ್ಗೆ ತಿರಸ್ಕಾರ ಪ್ರಾರಂಭವಾಯಿತು. ಬಲ್ಲಾಳನಿಗೆ ತಾಮಸಪ್ರಕೃತಿ ಬೆಳೆಯುವಂತೆ ಪೀಠಿಕೆ ಹಾಕಿದಳು.

ದೇವರ ಪೂಜೆಗಾಗಿ ಅಣಿಮಾಡಿದ್ದ ಹಣ್ಣುಗಳೆಲ್ಲ ತನಗೆ ಬೇಕೆಂದು ಬಲ್ಲಾಳ ಚಂಡಿ ಹಿಡಿದನು. ಆಗ ಶಾಂತಲೆ ಮಗುವನ್ನು ಚೇಟಿಯರಿಗೆ ಬಲವಾಗಿ ಹಿಡಿಯುವಂತೆ ಹೇಳಿದಳು. "ಮುಂದೆ ನಾನೂ ರಾಜನಾಗುತ್ತೇನೆ. ಆಗ ನಾಗವ್ವೆಯನ್ನು (ಸೇವಕಿ) ಕಂಬಕ್ಕೆ ಬಿಗಿದು ಚಾವಟಿಯಿಂದ ಹೊಡೆಯುತ್ತೇನೆ" ಎಂದು ರಾಜಕುಮಾರ ಕೂಗಾಡಿದನು. ತಾನು ಪುಟವಿಟ್ಟ ಬಂಗಾರ ಕಾಗೆ ಬಂಗಾರವಾಯಿತಲ್ಲ, ಎಂದುಕೊಂಡು ಶಾಂತಲೆಯು ಚಾಮರದ ಹಿಡಿಯಿಂದ ಮಗುವಿಗೆ ಹೊಡೆದಳು. ಮಗು ಅಳುತ್ತಾ ಹೆತ್ತ ತಾಯ ಬಳಿಗೆ ಓಡಿತು.

ಈ ಘಟನೆಯಾದ ಮೇಲೆ ಶಾಂತಲೆ ಹಾಗೂ ಬಮ್ಮಲೆಯ ನಡುವೆ ಬಿರುಕು ಹೆಚ್ಚಿತು. ರಾಜನಾಗಬೇಕಾದವನಲ್ಲಿ ಪ್ರತೀಕಾರ ಮೊಳೆಯದಿರಲಿ, ದಯಾ ದಾಕ್ಷಿಣ್ಯ ಉಕ್ಕಲಿ ಎಂದು ಶಾಂತಲೆ ದೇವನಲ್ಲಿ ಪ್ರಾರ್ಥಿಸಿದರೆ ಅತ್ತ ಬಮ್ಮಲೆ ಪ್ರತೀಕಾರವನ್ನೇ ಘೋಷಿಸಿದಳು. ಸಮಯ ಬಂದಾಗಲೆಲ್ಲ ಶಾಂತಲೆಯ ಬಗ್ಗೆ ಕುಟುಕಲು ಪ್ರಾರಂಭಿಸಿದಳು.

ಮಗುವಿನಲ್ಲಿ ಜನಾನುರಾಗ ಬೆಳೆಸಲು ಶಾಂತಲೆ ಹೆಣಗಾಡಿದಳು. ರಾಜನು ಪ್ರಜಾಸೇವಕನಾಗಬೇಕು ಎಂದು ಮತ್ತೆ ಮತ್ತೆ ಹೇಳಿದಳು. "ಹಾಗಿದ್ದರೆ ಚಿಕ್ಕಮ್ಮಾಜಿ ಯವರು ರಾಜ್ಯ ನಮ್ಮದು, ಎಲ್ಲಕ್ಕೂ ದೊಡ್ಡವರು ನಾವು" ಎಂದು ಏನೇನೋ ಹೇಳಿದರಲ್ಲ ಎಂದು ಬಲ್ಲಾಳ ದೊಡ್ಡಮ್ಮನಿಗೆ ತಿಳಿಸಿಬಿಟ್ಟನು. ಈ ಮಗುವು ಇಬ್ಬರು ಶಿಲ್ಪಿಗಳ ಕೈಲಿ ಸಿಕ್ಕಿದ ಕಲ್ಲಾದನು.

"ರಾಜ್ಯಕ್ಕೆ ರಾಜಮನೆತನಕ್ಕೆ ನಮ್ಮ ಉಪಕಾರ ಏನಾಗಿದೆ ಎಂದು ಜನತೆ ನಮ್ಮನ್ನು ಗೌರವಿಸಿಯಾರು ? ಮಹಾರಾಜರ ಮನಸ್ಸು ಒಲಿಯುವಂತೆ ನಾವು ಸಿಂಗ ರಿಸಿಕೊಂಡು ಕುಣಿಯಲಾರೆವು. ಆ ಹಾವಭಾವ ಬೆಡಗು ಬಿನ್ನಾಣಗಳನ್ನು ನಾವು ತೋರ ಲಾರೆವು" ಎಂದು ಬಮ್ಮಲೆ ಶಾಂತಲೆಯನ್ನು ವ್ಯಂಗ್ಯವಾಡಿ ನೋಯಿಸಿದಳು. ಅವಕಾಶ ಸಿಕ್ಕಿದಾಗಲೆಲ್ಲ ಚಿಟುಕು ಮುಳ್ಳಾಡಿಸಿದಳು. ಇವಳನ್ನು ಒರೆಸಿ ಹಾಕುವ ಶಕ್ತಿಯಿದ್ದರೂ ತಾನೇ ಕರೆದು ತಂದ ಹೆಣ್ಣು, ತಾನೇ ಬೆಳೆಸಿದ ಹೆಣ್ಣು, ರಾಜವಂಶಕ್ಕೆ ಪುತ್ರನನ್ನು ಕೊಟ್ಟ ಹೆಣ್ಣು ಎಂದುಕೊಂಡು ಶಾಂತಲೆ ಉತ್ತಮ ಕ್ಷಮಾಶೀಲಳಾದಳು. ಈ ಕ್ಷಮೆ ಯನ್ನು ಬಮ್ಮಲೆ ಒಂದು ದೌರ್ಬಲ್ಯವೆಂದೇ ಭಾವಿಸಿದಳು.

ಹಾಗೂ ಹೀಗೂ ರಾಣಿಯರ ವಿರಸ ಅರಮನೆಯನ್ನೂ ದಾಟಿ ಮನೆ ಮಾತಾ ಯಿತು. ವಿಷ್ಣುವರ್ಧನ ಬಮ್ಮಲೆಯನ್ನು ಕಡೆಗಣಿಸಿ ಉದಾಸೀನನಾದನು. ವಿಷ್ಣುವರ್ಧನ ನನ್ನು ಬಲವಂತವಾಗಿ ಬಮ್ಮಲೆಯ ಕಡೆ ತಿರುಗಿಸಲು ಶಾಂತಲೆ ಹೆಣಗಾಡಿದಳು. ತೇಪೆ ಹಾಕಲು ಸದಾ ಸೂಜಿದಾರ ಹಿಡಿದುಕೊಂಡೇ ಇರುತ್ತಿದ್ದಳು. ಈ ಘಟನೆಗಳಿಂದ ಪಲ್ಲವ ರಾಜಕುಮಾರಿ ಬಮ್ಮಲೆಯ ಮನಸ್ಸಿನಲ್ಲಿ ಮೊಳೆತ ವಿಷದ ಬಳ್ಳಿಗೆ ನೀರನ್ನು ಎರೆದಂತಾ ಯಿತು. ಅದು ಹುಲುಸಾಗುತ್ತಾ ತನ್ನ ಅವಲಂಬನೆಯ ಎಲೆಗಳನ್ನು ಸುತ್ತಿ ಬಲವಾಗಿ ಬಿಗಿಯುತ್ತಾ ಮೇಲೆ ಮೇಲೆ ಹತ್ತ ತೊಡಗಿತು . . . ಅರಮನೆಯಲ್ಲಿ ಹರಿಯುತ್ತಿದ್ದ ಆ ಹಾಲು ಹೊಳೆ ಬತ್ತಿ ಹೋಗಿ ನೋವಿನ ಕಡಲು ಕೂಡಲಾರಂಭಿಸಿತು.

ವಿಷ್ಣುವರ್ಧನನ ತಮ್ಮ ಉದಯಾದಿತ್ಯ. ಇವನ ಮಗ ಎರೆಯಂಗ. ಇವರಿಬ್ಬರೂ ರಾಜಕೀಯಕ್ಕೆ ಹೆಗಲು ಕೊಡದೆ ನುಣಿಚಿಕೊಂಡೇ ಬೆಳೆದರು. ಒಮ್ಮೆ ಎರೆಯಂಗ ಬಮ್ಮಲದೇವಿಯ ಕ್ಷೇಮವನ್ನು ವಿಚಾರಿಸಲು ಬಂದನು."ಅಪ್ಪ ಮುಚ್ಚುಮರೆಯೇಕೆ ? ಮಹಾರಾಜರ ಕೈಯನ್ನು ಹಿಡಿದ ಒಂದು ಪುಣ್ಯವನ್ನು ಬಿಟ್ಟರೆ ನಾವು ಯಾವ ಸುಖ ವನ್ನು ಕಂಡೇವು. ಇಲ್ಲಿ ಕುಳಿತುಕೊಳ್ಳಬೇಕಾದರೆ, ಏಳಬೇಕಾದರೆ ಮತ್ತೊಬ್ಬರನ್ನು ಕೇಳ ಬೇಕು. ನಮ್ಮ ಬಾಳು ಅಷ್ಟೊಂದು ಕೆಳಕ್ಕಿಳಿಯಿತು" ಎಂದು ಶಾಂತಲೆಯನ್ನು ಗಮನ ದಲ್ಲಿಟ್ಟುಕೊಂಡು ದೂರುವಳು.

ಮಾರಸಿಂಗಯ್ಯನು ಒಂದು ಕಡೆ ಧರ್ಮೇಶ್ವರ ದೇಗುಲ ಕಟ್ಟಿಸಿ ಆ ಜಾಗಕ್ಕೆ ತನ್ನ ಮಗಳು ಶಾಂತಲೆ ಹೆಸರಿರಲಿ ಎಂದು ಶಾಂತಿ ಗ್ರಾಮವೆಂದು ಕರೆದನು. ಹೊಯ್ಸಳ ರಾಜ್ಯದ ಉದ್ದಗಲದಲ್ಲೂ ಶಾಂತಲೆ ಬಯಸದಿದ್ದರೂ ಅವಳ ಕೀರ್ತಿಲತೆ ಹಬ್ಬಿತು. ಇದನ್ನು ನೋಡಲಾರದೆ ಬಮ್ಮಲೆ ಮೈ ಪರಚಿಕೊಂಡು ತನ್ನ ನೆಮ್ಮದಿಯನ್ನೂ ಕಳೆದು

ಕೊಂಡಳು, ಅರಮನೆಯ ನೆಮ್ಮದಿಯನ್ನು ಕಳೆದಳು.

ಉದಿಯಾದಿತ್ಯನಿಗೆ ಅಕಾಲ ಮೃತ್ಯುವುಂಟಾಯಿತು. ಇವನ ಮಗ ಎರೆಯಂಗನನ್ನು ಶಾಂತಲೆಯು ಹಳೇಬೀಡಿಗೆ ಕರೆಸಿಕೊಂಡು ಜೋಪಾನ ಮಾಡಲು ಪ್ರಯತ್ನಿಸುವಳು.

ಇತ್ತ ಬಮ್ಮಲ ದೇವಿ ಅರಮನೆಯ ಹಿರಿಯರ ಬಗ್ಗೆ ತನ್ನ ಮಗನ ಮನಸ್ಸಿನಲ್ಲಿ ವಿಷ ಬಿತ್ತಲು ಅವಕಾಶ ದೊರೆತಾಗಲೆಲ್ಲ ಪ್ರಯತ್ನಿಸಿದಳು. "ಸಿಂಹಾಸನವನ್ನು ನಿನಗೆ ತಪ್ಪಿಸಿ ಎರೆಯಂಗನ ಪಾಲು ಮಾಡಲು ಎಲ್ಲರ ಹವಣಿಕೆ . . . ಸವಿಯಾದ ಮಾತಿನಿಂದ ಜನದ ಮನಸ್ಸನ್ನು ಒಲಿಸಿಕೊಳ್ಳುವ ಜಾಣ ಹೆಣ್ಣು, ತನ್ನ ಹೆಸರು ನೆಲದಲ್ಲಿ ಶಾಶ್ವತವಾಗಿ ನಿಲ್ಲಲೆಂದು ಏನೆಲ್ಲ ಬೇಕೋ ಅದನ್ನು ಮಾಡಿಕೊಂಡಳು . . ." ಎಂದು ಮಗನ ಮನಸ್ಸಿನಲ್ಲೂ ಶಾಂತಲೆಯ ಬಗ್ಗೆ ಸಂಶಯ ತುಂಬಲು ಹೆಣಗಾಡಿದಳು.

ಬಲ್ಲಾಳನಿಗೆ ಮದ್ದಿಟ್ಟಿರುವರು ಎಂದು ಕೊಂಡು ರಾಜವೈದ್ಯನಿಗೆ ಹೇಳಿ ಅಡಿಯಿಂದ ಮುಡಿತನಕ ಮಗನ ದೇಹ ಪರೀಕ್ಷೆಮಾಡಿಸಿದಳು. ಏನೂ ದೋಷವಿಲ್ಲವೆಂದು ವೈದ್ಯ ಹೇಳಿದ ಮೇಲೆ ಕ್ಷಣಕಾಲ ತೆಪ್ಪಗಾದಳು.

ಬಲ್ಲಾಳ ಒಂದು ಕುದುರೆಯ ಮೇಲೆ ಕುಳಿತು ಸವಾರಿ ಮಾಡಲು ಬಯಸಿದಾಗ ಶಾಂತಲೆ ಸೇನೆಯ ಹಿರಿಯ ಅಧಿಕಾರಿಗಳನ್ನು ಕೇಳಬೇಕು ಎಂದಾಗ ಬಮ್ಮಲೆ ಕುಪಿತಳಾಗಿ ಆ ಕುದರೆಯನ್ನು ತಾನೇ ಪರೀಕ್ಷೆಮಾಡಿ ಅದನ್ನು ಏರಲು ಮಗನಿಗೆ ಪ್ರೋತ್ಸಾಹ ಕೊಟ್ಟಳು. ದಿನವೂ ಇವನ ಕುದುರೆ ಸವಾರಿ ಪ್ರಾರಂಭವಾಯಿತು. ಜೊತೆಗೆ ಎರೆಯಂಗನೂ ಅಂಗರಕ್ಷಕನಾಗಿ ಹೋಗುತ್ತಿದ್ದನು. ಒಂದು ದಿನ ದಟ್ಟಮಂಜು ಕವಿದಾಗ ಬಲ್ಲಾಳ ಮತ್ತು ಎರೆಯಂಗರು ಎಂದಿನಂತೆ ಬೇರೆ ಬೇರೆ ಕುದುರೆಯ ಮೇಲೆ ಕುಳಿತು ಸವಾರಿ ಹೊರಟರು. ದಾರಿಯಲ್ಲಿದ್ದ ಅಡ್ಡಲಾದ ತಡೆಯನ್ನು ಕುಪ್ಪಳಿಸಿ ಕುದುರೆ ಮುಂದೆ ಹೊರಟಾಗ ಅನನುಭವಿಯಾದ ಬಲ್ಲಾಳ ಉರುಳಿಬಿದ್ದು ತಲೆಯೊಡೆದು ಸತ್ತು ಹೋದನು. ಬಮ್ಮಲದೇವಿ ಮೆಚ್ಚಿ ಆರಿಸಿಕೊಟ್ಟ ಕುದುರೆಯಮೇಲಿಂದ ಉರುಳಿ ಇವನು ಸತ್ತಂತಾಯಿತು.

ಬಮ್ಮಲದೇವಿ ಇದ್ದೊಬ್ಬ ಮಗನನ್ನು ಕಳೆದುಕೊಂಡು ಅರೆಹುಚ್ಚಳಾದಳು. ರಾಜ್ಯವನ್ನು ಕಬಳಿಸಲು ಎರೆಯಂಗನು ಹಿರಿಯರ ಚಿತಾವಣೆಯಿಂದ ತನ್ನ ಮಗನನ್ನು ಸಾಯಿಸಿದನು ಎಂದು ಇವಳು ಕಂಡಕಂಡವರ ಕೈಲಿ ಹೇಳಿಕೊಂಡಳು. ಎರೆಯಂಗ ಈ ಘಟನೆಯನಂತರ ತಲೆಮರೆಸಿಕೊಂಡನು. ಮತ್ತೆ ಯಾರ ಕಣ್ಣಿಗೂ ಬೀಳದಾದನು.

"ನೋಡಿ ಪಂಡಿತರೆ, ಪಟ್ಟದರಸಿ ಎಂದೆಂಬ ಅದು ಇರುವತನಕ ನಿಮ್ಮ ಹಿರಿಯ ರಾಣಿಯರು ಹೀಗೆಯೇ ಆಡಿಯಾರೇನೊ! ಅವರು ಹೀಗೆ ಅಡುವಷ್ಟು ದಿವಸ ರಾಜ್ಯದಲ್ಲಿ ಅನಿಷ್ಟ ತಪ್ಪಿದುದಲ್ಲ . . ." ಎಂದು ಬಮ್ಮಲೆ ದೂರಿಕೊಂಡಳು. ಶಾಂತಲೆಯ ಸ್ಥಾನಮಾನ ಇಳಿಸಬೇಕೆಂದು ಹಗಲುರಾತ್ರಿ ಚಿಂತಿಸಿದಳು.

ಶಾಂತಲೆ ಯಾವುದಕ್ಕೂ ಅಂಜಿದವಳಲ್ಲ. ಪಟ್ಟವನ್ನು ತೊರೆಯುವ ತೀರ್ಮಾನ

ತೆಗೆದುಕೊಂಡಳು. ವಿಷ್ಣುವರ್ಧನನ ಕಿವಿಗೂ ತನ್ನ ತೀರ್ಮಾನ ಹೇಳಿದಳು. ತಾನಾಗೇ ಪೀಠದಿಂದ ಇಳಿಯುವೆನು. ಬಮ್ಮಲೆಯೇ ಪೀಠದ ಮೇಲೆ ಕೂರಲಿ ಎಂದು ಅಂಗಲಾಚಿದಳು. ವಿಷ್ಣುವರ್ಧನ ಇದಕ್ಕೆ ಒಡಂಬಡಲಿಲ್ಲ.

ಶಾಂತಲೆ ಶ್ರವಣಬೆಳಗೊಳದಲ್ಲಿ ಸಲ್ಲೇಖನ (ಆಮರಣಾಂತ ಉಪವಾಸ) ವ್ರತ ತೆಗೆದುಕೊಳ್ಳುವ ಆಲೋಚನೆ ಮಾಡಿದಳು. ವಿಷ್ಣುವರ್ಧನ ಒಪ್ಪಲಾರನು ಎಂದು ಬೇರೆ ಕಡೆ ಗಮನಹರಿಸಿದಳು. ಶೌರುಮನೆಗೆ (ಶಿವಗಂಗೆ) ಹೋಗುವುದಾಗಿ ಕೇಳಿಕೊಂಡಳು. ಈಕೆಯ ಸುಖಪ್ರಯಾಣಕ್ಕೆ ವಿಷ್ಣುವರ್ಧನ ಎಲ್ಲ ಏರ್ಪಾಟು ಮಾಡಿಕೊಟ್ಟನು. ಹೋಗುವ ಮುನ್ನ ಅರಮನೆಯ ಚರಾಚರದ ಮೇಲೆ ವಿಶ್ವಾನುಕಂಪವನ್ನು ಸೂಸಿ ಹೊರಟಳು.

ಶಿವಗಂಗೆಗೆ ಬಂದು ತಂದೆ ತಾಯಿಯರ ಜೊತೆಯಲ್ಲೇ ಸಾಮಾನ್ಯ ಹೆಣ್ಣುಮಗಳಂತೆ ನಿಂತಳು. ಬಾಲ್ಯದಲ್ಲಿ ತನ್ನ ಸಂಗಾತಿಗಳಾಗಿದ್ದವರನ್ನೆಲ್ಲ ಜ್ಞಾಪಿಸಿಕೊಂಡಳು. ಕರೆಸಿಕೊಂಡಳು. ತೊರೆಬಿಟ್ಟ ಕಾಮಧೇನುವಿನಂತೆ ದಾನಧರ್ಮ ಮಾಡಿದಳು. ಸೇವಕಿ ನಾಗವ್ವೆಯನ್ನು ತಾಯಿಯೆಂದು ಕರೆದು ತನ್ನ ಪಚ್ಚೆಹಾರ ಕೊಟ್ಟಳು. ಶಿವಗಂಗೆಯ ಬೆಟ್ಟವೇರಿದಳು. ಬಾಲ್ಯದಲ್ಲಿ ತಾನು ಅಡ್ಡಾಡಿದ್ದ ಜಾಗಗಳನ್ನೆಲ್ಲ ಮತ್ತೆ ಕಂಡಳು. ಅಡಿಯಿಂದ ಮುಡಿತನಕ ಉತ್ಸಾಹ ತುಂಬಿಕೊಂಡಳು. ಸಂತೃಪ್ತಿ ತುಂಬಿಕೊಂಡಳು. ಶಾಂತಲೆಯ ಮನಸ್ಸು ಹದಕ್ಕೆ ಬಂದಿತು ಎಂದು ಊಳಿಗದವರು ಸಂತೋಷಗೊಂಡರು.

ಶಾಂತಲೆ ಶಿವಗಂಗೆಗೆ ಬರುವಾಗಲೆ ಮನಸ್ಸಿನಿಂದ ಪಟ್ಟದರಸಿ ಎಂಬುದನ್ನು ಗುಡಿಸಿಹಾಕಿದ್ದಳು. ಬಮ್ಮಲೆಯನ್ನು ಕುರಿತು "ನೋಡಿ ತಂಗಿ, ಇವರನ್ನೆಲ್ಲ ನಿಮ್ಮ ಮಡಿಲಿಗೆ ಹಾಕಿದ್ದೇವೆ. ಮಕ್ಕಳಂತೆ ಸಾಕಿಕೊಳ್ಳಿರಿ" ಎಂದು ಹೇಳಿಬಂದಿದ್ದಳು.

ತನ್ನ ತಂದೆ ತಾಯಿಯರ ಪಾದಗಳಿಗೆ ಅರಳಿದ ಹೂಗಳನ್ನು ಅರ್ಪಿಸಿ ಪಾದಪೂಜೆ ಮಾಡಿ ಮಗಳಂತೆ ಕಾಣಿಸಿಕೊಂಡಳು. ಪಟ್ಟದರಾಣಿಯ ಬಿಗುಮಾನವನ್ನು ತೊರೆದಳು. ಮಾತಾಪಿತರ ಹರಕೆಹೊತ್ತು ಬೆಟ್ಟ ಹತ್ತಿದಳು. ಕೋಡುಗಲ್ಲನ್ನು ಏರುವ ಆಶೆತೋಡಿಕೊಂಡಳು. ತಂದೆ ಮಾರಸಿಂಗಯ್ಯ ಅದಕ್ಕೂ ತಾತ್ಕಾಲಿಕ ಸೋಪಾನ ಕಟ್ಟಿಸಿ ಮಗಳ ಆಶೆಯನ್ನು ತೀರಿಸಿದನು. ಗಂಗಾಧರೇಶ್ವರನಿಗೆ ಪೂಜೆಮಾಡಿಸಿ ಅನ್ನಸಂತರ್ಪಣೆ ಮಾಡಿ ತಾನು ಮಾತ್ರ ಉಪವಾಸವಿದ್ದಳು. ಗಂಗಾಧರೇಶ್ವರನಿಗೆ ಸಂಗೀತ ಸೇವೆ ಮಾಡಿದಳು. ಸಂಗೀತ ಸಂಗತ ಸರಸ್ವತಿಯಾದ ಆ ಮಹಾನುಭಾವೆ ರಸಸಿದ್ಧಿಯ ಆನಂದ ಲೋಕವನ್ನೇ ಅಲ್ಲಿ ಬಿಡಿಸಿಟ್ಟಳು. ಕೇಳುಗರಿಗೆ ನಾದಬ್ರಹ್ಮದ ಅನುಭವವಾಯಿತು.

ಪಾತಾಳಗಂಗೆಯಲ್ಲಿ ಮಿಂದು ಆ ತಾಯಿಯನ್ನು ಏಕಾಂತವಾಗಿ ಪೂಜಿಸುವ ಬಯಕೆಯನ್ನು ತೋಡಿಕೊಂಡಳು. ವಿಷ್ಣುವರ್ಧನನ ಮೂರ್ತಿಯನ್ನು ಉಡಿಯಲ್ಲಿಟ್ಟುಕೊಂಡು ಪಾತಾಳಗಂಗೆಯ ಕಡೆ ಇಳಿದಳು, ಮಿಂದಳು, ಮಡಿಯುಟ್ಟಳು, ಧ್ಯಾನಾಸಕ್ತಳಾದಳು. ಆಮೇಲೆ ಗವಿಯಿಂದ ಹೊರಗೆ ಬಂದಳು. ನವರಂಗದ ಕಗ್ಗತ್ತಲಲ್ಲಿ ಎಲ್ಲರೂ ಕರಗಿ ಹೋದರು.

ಪೂಜಾರಿ ತೀರ್ಥಕೊಡಲು ಬಂದಾಗ ಶಾಂತಲೆ ಕಾಣಲಿಲ್ಲ. ನಾಗವ್ವೆಗೆ ಏನೋ ಮಿಂಚಿದಂತಾಯಿತು. ಪಾತಾಳ ಗಂಗೆಯ ಗವಿಯ ಬಳಿಗೆ ಜನರನ್ನು ಕಳಿಸಿದರು. ಗವಿಯ ಹೊರಗೆ ಶಾಂತಲೆ ಬರೆದಿಟ್ಟ ಓಲೆ ಸಿಕ್ಕಿತು. ಬಿಟ್ಟಿಯಣ್ಣ ನೀರಿಗೆ ಧುಮುಕಿದನು. ಶಾಂತಲೆಯ ಸೆರಗು ತೇಲಿತು. ಅದನ್ನು ಹಿಡಿದು ಎಳೆದಾಗ ಕಳೇಬರ ಮೇಲೆ ಬಂದಿತು. ಬಮ್ಮಲೆಗೆ ಪಿರಿಯರಸಿ ಪಟ್ಟಕಟ್ಟಲು ಈಕೆ ಹುತಾತ್ಮಳಾದಳು. ಈಕೆ ಸತ್ತು ಬದುಕಿದಳು. ಬಮ್ಮಲೆ ಬದುಕಿ ಸತ್ತಳು.

ಕಾವ್ಯಮಯವಾದ ಈ ಕಾದಂಬರಿಯಲ್ಲಿ ಕೆಲವೊಮ್ಮೆ ಜನರ ಬಳಕೆಯಿಂದ ದೂರವಾದ ನಚ್ಚಣ, ಪಸದನ ಮುಂತಾದ ಮಾತುಗಳು ಸೇರಿಕೊಂಡು ಶ್ರೀಸಾಮಾನ್ಯರಿಗೆ ಅರ್ಥವಾಗದೆ ತೊಡಕಾಗಿವೆ.

ಪ್ರಭಾ ಚಂದ್ರರಿಗೆ ವಿಷ್ಣುವರ್ಧನನು ಕುಡಿಯಲು ಹಾಲು ತರಿಸಿಕೊಡುವುದನ್ನು ಪುಟ ೪೫೮ರಲ್ಲಿ ಕಾದಂಬರಿಕಾರರು ಕಾಣಿಸಿರುವರು. ಪ್ರಭಾ ಚಂದ್ರರು ಹಾಲು ಕುಡಿದರು ಎಂದೂ ಹೇಳಿರುವರು. ಜೈನಮುನಿಗಳ ಆಹಾರ ಕ್ರಮ ಈ ಲೇಖಕರಿಗೆ ಗೊತ್ತಿಲ್ಲ. ದಿನದಲ್ಲಿ ಬೆಳಿಗ್ಗೆ ೧೦ ಘಂಟೆ ಹೊತ್ತಿಗೆ ಜೈನಮುನಿಗಳು ಆಹಾರ ತೆಗೆದುಕೊಂಡು ನೀರು ಕುಡಿದ ಮೇಲೆ ಮತ್ತೆ ಮರುದಿನದ ತನಕ ಆಹಾರವೂ ಇಲ್ಲ, ನೀರೂ ಇಲ್ಲ. ಅದೂ ನಿಂತು ಬೊಗಸೆ ಒಡ್ಡಿದಾಗ ಬೊಗಸೆಗೆ ಆಹಾರವನ್ನೂ ದ್ರವಪದಾರ್ಥಗಳನ್ನೂ ಭಕ್ತರು ಹಾಕುವರು. ಮುನಿಗಳು ಉಣಲೂ ತಟ್ಟೆ ಬಟ್ಟಲನ್ನು ಬಳಸುವುದಿಲ್ಲ. ವಿಸ್ತಾರವಾದ ಈ ಕಾದಂಬರಿಯಲ್ಲಿ ದೃಷ್ಟಿ ಬೊಟ್ಟಿನಂತೆ ಇಂಥ ಒಂದೆರಡು ಕುಂದುಗಳನ್ನು ನಾವು ಕಡೆಗಣಿಸಬಹುದು. ಒಟ್ಟಾರೆ ಇದು ಮಹಾ ಕಾದಂಬರಿ. ಕನ್ನಡ ಸಾರಸ್ವತ ಲೋಕಕ್ಕೆ ಅಪೂರ್ವ ಕಾಣಿಕೆಯಾಗಿದೆ. ಇಂಥ ಕಾದಂಬರಿಯನ್ನು ರಚಿಸಿದ ಸಮೇತನಹಳ್ಳಿ ರಾಮರಾಯರು ಅಭಿನಂದನೆಗೆ ಪಾತ್ರರಾಗಿರುವರು.

ತಮ್ಮ 'ತಲಕಾಡುಗೊಂಡ' ಮತ್ತು 'ಶಿಲ್ಪ ಸಂಗೀತ' ನನಗೆ ಅಚ್ಚು ಮೆಚ್ಚಾಯಿತು. 'ಪ್ರಾಣವೀಣೆ'ಯ ಭಾಷಾ ಸಂಪತ್ತು ಮುದಗೊಳಿಸಿತು. ತಮ್ಮ ಉತ್ತಮ ಭಾಷೆ ಮತ್ತು ಶೈಲಿ ನಿರ್ಮಲ ತಿಳಿಗೊಳದಲ್ಲಿ ಮಿಂದಂತಹ ಅನುಭವ ತಂದಿತು. 'ಮೊನೆಗಾರ'ನಿಗೆ ಮನಸೋತಿದ್ದೇನೆ. ಈ ಸಾಹಿತ್ಯದ ರಸಕವಳವನ್ನುಣ್ಣಿಸಿದ ನಿಮಗೆ ತುಂಬಾ ಕೃತಜ್ಞಳು.

೪–೨–೯೧ ಗಾಯಿತ್ರಿ ಶ್ರೀಧರ್

ಸವತಿಗಂಧವಾರಣೆ : ಕೆಲವು ಅವಲೋಕನಗಳು

ಡಾ. ಎಂ. ಎ. ಜಯಚಂದ್ರ

೧

ಲಕ್ಷ್ಮೀದೇವತೆ, ರಣ ವ್ಯಾಪಾರದಲ್ಲಿ ಖಡ್ಗದೇವತೆ, ಬಿಣ್ಪಿನಿಂದ ಭೂಮಿದೇವತೆ. ಜನತೆಗೆ ಸರ್ವವಿಧದಲ್ಲಿ ಪುಣ್ಯದೇವತೆ, ವಿದ್ಯೆಯಲ್ಲಿ ವಾಗ್ದೇವತೆ, ತನ್ನ ಪತಿ ಹೊಯ್ಸಳ ವಿಷ್ಣುವರ್ಧನ ಮಹಾರಾಜನಿಗೆ ಸರ್ವ ಕಾರ್ಯೋದ್ಯೋಗದಲ್ಲಿ ಮಂತ್ರದೇವತೆಯಾಗಿದ್ದಳು ಎಂದು ಶಾಸನದಲ್ಲಿ ವರ್ಣಿತವಾಗಿರುವ ಮಹಾರಾಣಿ ಶಾಂತಲಾದೇವಿಯ ವ್ಯಕ್ತಿತ್ವ ಬಹು ವರ್ಣಮಯವಾದದ್ದು.

ಶಾಂತಲಾದೇವಿ ಧರ್ಮ ಸಹಿಷ್ಣುತೆಯ ಪ್ರತೀಕ. ಈಕೆಯನ್ನು ಕುರಿತು, ಕೆ. ವಿ. ಅಯ್ಯರ್ ಅವರ 'ಶಾಂತಲಾ', ಸಮೇತನಹಳ್ಳಿ ರಾಮರಾಯರ 'ಸವತಿ ಗಂಧವಾರಣೆ' ಮ. ನ. ಮೂರ್ತಿ ಅವರ 'ನಾಟ್ಯರಾಣಿ ಶಾಂತಲಾ' ಮತ್ತು ಸಿ. ಕೆ. ನಾಗರಾಜರಾಯರ 'ಪಟ್ಟಮಹಾದೇವಿ ಶಾನ್ತಲಾ'–ಎಂಬ ನಾಲ್ಕು ಗಮನಾರ್ಹ ಕಾದಂಬರಿಗಳು ಕನ್ನಡದಲ್ಲಿ ಮೂಡಿ ಬಂದಿವೆ. ಇವುಗಳ ತೌಲನಿಕ ಅಧ್ಯಯನವೇ ಒಂದು ಪಿಎಚ್.ಡಿ. ಮಹಾ ಪ್ರಬಂಧದ ವಸ್ತುವಾಗಬಲ್ಲದು. ವಸ್ತು ಒಂದೇ ಆದರೂ ಲೇಖಕರು ನೋಡುವ ದೃಷ್ಟಿ ಬೇರೆ ಬೇರೆ. ಐತಿಹಾಸಿಕ ಕಥಾ ಹಂದರದ ಮೇಲೆ ನಾಲ್ವರು ಕಾದಂಬರಿಕಾರರು ತಮ್ಮ ತಮ್ಮ ಕಲ್ಪನಾವಲ್ಲರಿಯನ್ನು ಸೊಗಸಾಗಿ ಹಬ್ಬಿಸಿದ್ದಾರೆ. ಆ ಬಳ್ಳಿಯಲ್ಲಿ ಸಮಾಜದ ಪ್ರತಿಬಿಂಬ ಹಾಗೂ ಗತಿಬಿಂಬಗಳು ಹೂ–ಹಣ್ಣುಗಳಾಗಿ ಕಂಗೊಳಿಸಿವೆ.

೨

ಐತಿಹಾಸಿಕ ವಸ್ತುವನ್ನಾಧರಿಸಿ ರಚಿಸುವ ಕೃತಿಯಲ್ಲಿ ಸ್ವಚ್ಛಂದ ಸ್ವಾತಂತ್ರ್ಯವನ್ನು ಲೇಖಕನು ವಹಿಸಲು ಸಾಧ್ಯವಾಗುವುದಿಲ್ಲ. ಚರಿತ್ರೆಯ ಸತ್ಯ ಅಂಕುಶವಾಗಿ ಆತನನ್ನು ನಿಯಂತ್ರಿಸುತ್ತಿರುತ್ತದೆ. 'ಸವತಿ ಗಂಧವಾರಣೆ'ಯ ಕಾದಂಬರಿಕಾರ ಸಮೇತನಹಳ್ಳಿ ರಾಮರಾಯರಿಗೆ ಈ ಅರಿವು ತುಂಬ ಚೆನ್ನಾಗಿದೆ. ಅದನ್ನು ಗ್ರಂಥದ ಪ್ರಸ್ತಾವನೆಯ ಆರಂಭದಲ್ಲೆ ಹೀಗೆ ನಿರೂಪಿಸಿದ್ದಾರೆ–

> "ಈ ಐತಿಹಾಸಿಕ ವಸ್ತುವನ್ನು ಕಾದಂಬರಿಗಾಗಿ ಆರಿಸಿಕೊಂಡು ಬರೆಯ ತೊಡಗಿದ ಮೇಲೆ ನನ್ನ ಇತರ ಕತೆಗಳಲ್ಲಿ ನಾನು ವಹಿಸಿದ ಕಲ್ಪನಾ ಸ್ವಾತಂತ್ರ್ಯ ವನ್ನು ವಹಿಸಲಾಗಲಿಲ್ಲ. ಕಾರಣ, ಇದುವರೆಗೆ ನಮ್ಮ ಸಂಶೋಧಕರ ದುಡಿಮೆ

ಯಿಂದಾಗಿ ಅನೇಕ ಐತಿಹಾಸಿಕ ಸತ್ಯಗಳು ಹೊರಬಿದ್ದು ಒಂದು ತಳಹದಿಯನ್ನು ಹಾಕಿಬಿಟ್ಟಿವೆ. ಇತಿಹಾಸದ ಯಾವುದೇ ವಸ್ತುವನ್ನಾಗಲಿ ಎತ್ತಿಕೊಂಡು ಬರೆವ ಕವಿಗಾಗಲಿ, ಕಾದಂಬರಿಕಾರನಾಗಲಿ, ಅಥವಾ ನಾಟಕಕಾರನಾಗಲಿ ತನ್ನ ಕಲ್ಪನೆಯ ಚಂದ್ರ ಸೌಧವನ್ನು ಆ ಅಡಿಪಾಯದ ಮೇಲೆ ಕಟ್ಟಿ ತನ್ನ ಮನೋರಾಜ್ಯದ ಕುಸುರಿಗೆಲಸವನ್ನೋ ಕುಂದಣಗೆಲಸವನ್ನೋ, ಅಥವಾ ಕೆತ್ತನೆಯ ಕೆಲಸವನ್ನೋ ಅಲ್ಲಿ ಬಿಡಿಸಿ ಮೂಡಿಸಬೇಕು. ನಾನು ಈ ಕಾದಂಬರಿಯನ್ನು ಬರೆಯುವಾಗ ಉದ್ದಕ್ಕೂ ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಬರೆದಿದ್ದೇನೆ. ಕವಿಗೆ ಬೇಕಾದುದನ್ನು ಮಾರ್ಪಡಿಸುವ ಸ್ವಾತಂತ್ರ್ಯವುಂಟಾದ್ದರಿಂದ ಐತಿಹಾಸಿಕ ಸತ್ಯದತ್ತ ಗಮನಕೊಡಬೇಕಾದ ಅಗತ್ಯವಿಲ್ಲವೆಂದು ಕೆಲವರು ಹೇಳಿರುವುದನ್ನು ಕೇಳಿದ್ದೇನೆ. ಏಕೋ, ಈ ಮಾತು ನನ್ನ ಮನಸ್ಸಿಗೆ ಒಪ್ಪಿಗೆಯಾಗುವುದಿಲ್ಲ. ಕವಿಯ ಆ ಸ್ವಾತಂತ್ರ್ಯ ಸಂಯಮದ ಅಂಕೆಯಲ್ಲಿ ಸ್ವಚ್ಛಂದ ಚೆಂದವಾಗಿ ಉಳಿದರೇನೇ ಅದರ ಸೊಗಸು. ಉಚ್ಛೃಂಖಲವಾಗಿದ್ದುಕೊಂಡು ಐತಿಹಾಸಿಕ ಸತ್ಯಕ್ಕೆ ಭಂಗ ತರುವಂತಹುದಾದರೆ ಅದು ಸಹ್ಯವಾಗದು ; ಸಹಿತವಾಗದು. ಹಾಗೆ ಸಹ್ಯವಲ್ಲದುದನ್ನೂ, ಸಹಿತವಲ್ಲದುದನ್ನೂ, ಸಾಹಿತ್ಯವೆಂದು ಕರೆಯುವುದಾದರೂ ಹೇಗೆ ?"

ಶಾಸನಗಳಲ್ಲಿ ಶಾಂತಲೆಗೆ ಹಲವು ಬಿರುದುಗಳುಂಟು. ಅವುಗಳಲ್ಲಿ ಒಂದು 'ಉದ್ವೃತ್ತ ಸವತಿಗಂಧವಾರಣೆ.' ವಿಪರೀತ ವರ್ತನೆಯ ಸವತಿ(ಯರಿ)ಗೆ ಮದಿಸಿದ ಆನೆಯಂತೆ ಇದ್ದವಳು ಎಂಬುದು ಇದರ ಅರ್ಥ. ಶ್ರವಣಬೆಳಗೊಳದಲ್ಲಿ ಆಕೆ ನಿರ್ಮಿಸಿದ ಶಾಂತಿಜಿನನ ಬಸದಿಗೆ, 'ಸವತಿ ಗಂಧವಾರಣ ಬಸದಿ' ಎಂದು ಹೆಸರು. ಈ ಹಿನ್ನೆಲೆಯಲ್ಲಿ ಸಮೇತನಹಳ್ಳಿ ರಾಮರಾಯರು ತಮ್ಮ ಕಾದಂಬರಿಗೆ 'ಸವತಿಗಂಧವಾರಣೆ' ಎಂದು ಹೆಸರಿಟ್ಟಿರುವುದರಲ್ಲಿ ಒಂದು ವಿಶೇಷ ಔಚಿತ್ಯವಿರುವುದು ಸ್ಪಷ್ಟವಾಗುತ್ತದೆ. ಶಾಂತಲಾದೇವಿ ಹಾಗೂ ಆಕೆಯ ಸವತಿರಾಣಿ ಬಮ್ಮಲದೇವಿಯರ ಸರಸ–ವಿರಸದ ಚಿತ್ರಣವೇ ಈ ಕಾದಂಬರಿಯ ಪ್ರಧಾನವಸ್ತುವಾಗಿದೆ. ಈ ದೃಷ್ಟಿಯಿಂದ ಕಾದಂಬರಿಯ ಶೀರ್ಷಿಕೆ ಅರ್ಥವತ್ತಾಗಿದೆ.

ಕಾದಂಬರಿಯಲ್ಲಿ ಶಾಂತಲೆ ಪಟ್ಟದರಸಿ, ಪ್ರೌಢೆ, ಬಂಜೆ. ಹೊಯ್ಸಳ ವಂಶವನ್ನು ಮುಂದುವರಿಸುವುದಕ್ಕೋಸ್ಕರ ವಿಷ್ಣುವರ್ಧನನಿಗೆ ಪಲ್ಲವ ರಾಜಕುಮಾರಿ ಬಮ್ಮಲದೇವಿಯೊಡನೆ ವಿವಾಹ ಮಾಡಿಸುತ್ತಾಳೆ. ತಂಗಿಯ ಸುಖಕ್ಕಾಗಿ ತನ್ನ ಬುದ್ಧಿಯನ್ನು ಖರ್ಚು ಮಾಡುತ್ತಾಳೆ. ಆಕೆಗೆ ಹೊಯ್ಸಳ ಮನೆತನದ ಆಗುಹೋಗುಗಳನ್ನು ತಿಳಿಸುವುದರಲ್ಲಿ ಆನಂದಿಸುತ್ತಾಳೆ. ಆಕೆಯಲ್ಲಿ ಕುಮಾರ ಬಲ್ಲಾಳ ಜನಿಸಿದಾಗ ಎಲ್ಲರಿಗಿಂತ ಹೆಚ್ಚು ಸಂತೋಷಿಸುತ್ತಾಳೆ. ಆದರೆ ರಾಜ್ಯದ ಉತ್ತರಾಧಿಕಾರಿಯ ತಾಯಿ ತಾನೆಂಬ ಭಾವನೆ ಚಿಗುರಿದೊಡನೆಯೇ ಬಮ್ಮಲದೇವಿಯ ವರ್ತನೆ ಬೇರೆಯಾಗುತ್ತದೆ. ಮನ್ನಣೆಯ ದಾಹ ಆಕೆಯನ್ನು ಕಾಡುತ್ತದೆ. ಅದು ಆಕೆಯ ಆತ್ಮವನ್ನೆ ತಿನ್ನತೊಡಗುತ್ತದೆ. ಉತ್ತರಾಧಿಕಾರಿಯಾದ ತನ್ನ ಮಗ ದುರ್ಮರಣಕ್ಕೆ ಈಡಾದ ಮೇಲೂ ಬಮ್ಮಲದೇವಿ 'ಪಟ್ಟವಣೆ' ಏರುವ ಕನಸು

ಕಾಣುತ್ತಾಳೆ. ಅವಳ ಕನಸನ್ನು ನನಸು ಮಾಡಲು ಶಾಂತಲೆ ಶಿವಗಂಗೆಯಲ್ಲಿ ಪ್ರಾಣತ್ಯಾಗ ಮಾಡುತ್ತಾಳೆ.

ಮೇಲಿನ ಈ ಕಥಾವಸ್ತುವನ್ನು ಸೊಗಸಾಗಿ, ಸಮರ್ಥವಾಗಿ, ಹೃದಯಸ್ಪರ್ಶಿಯಾಗಿ ರಾಮರಾಯರು ಚಿತ್ರಿಸಿದ್ದಾರೆ. ಇವರ ಜೊತೆಗೆ ಶಾಂತಲೆಯ ವ್ಯಕ್ತಿತ್ವದ ಇತರ ಮುಖಗಳನ್ನು ಅಲ್ಲಲ್ಲಿ ಕಡೆದು ನಿಲ್ಲಿಸಿದ್ದಾರೆ.

೩

ರಾಮರಾಯರು ಕೆಲವು ಸಾಹಿತ್ಯಕ ಮೌಲ್ಯಗಳಿಗೆ ಬದ್ಧರಾದವರು. ಕನ್ನಡದ ಹಳೆಯ ಮಾತುಗಳು ಚಲಾವಣೆಯಿಂದ ಬಿಟ್ಟುಹೋಗಬಾರದು ಎಂಬ ಕಳಕಳಿ ಅವರಿಗಿದೆ. ಆದ್ದರಿಂದ ರಾಯಬಿತ್ತರಿಗೆ, ಕುಣಿತ, ನಚ್ಚಣಿಗರು, ಗೋಳಾಯ್ಲರು, ಹಳಯಿಗೆ, ಇಟ್ಟಿಯ ಪಡಿಯರತಿ, ಗೊತ್ತಳಿ, ಪಟಲ, ತಂಬಾಳ, ವೇಗಾಯ್ಲರು, ಸಮೆ, ಉಡೆವುರ್ಚು–ಮೊದಲಾದ ಪದಗಳನ್ನು ಸಹಜವಾಗಿ ಬಳಸಿದ್ದಾರೆ. ಇವುಗಳ ಬಳಕೆಯಿಂದ ಕಥೆ ಹಳೆಯ ಕಾಲದ್ದು ಎಂಬ ಭಾವನೆಯನ್ನು ಓದುಗರಲ್ಲಿ ಮೂಡಿಸಲು ಪ್ರಯತ್ನಿಸಿರುವಂತಿದೆ. ಕಾದಂಬರಿಕಾರನ ಉದ್ದೇಶ ಅರಿಯದ ಸಾಮಾನ್ಯ ಓದುಗರಿಗೆ ಈ ಪದಗಳ ಪ್ರಯೋಗ ಸಹ್ಯವೆನಿಸುವುದಿಲ್ಲ. ಪಕ್ಕದಲ್ಲಿ ಅರ್ಥಕೋಶವಿಟ್ಟುಕೊಂಡು ಕಾದಂಬರಿಯನ್ನು ಓದಲು ಬಯಸುವುದಿಲ್ಲ. ಆದ್ದರಿಂದ ಇಂಥ ಪದಗಳಿಗೆ ಗ್ರಂಥಾಂತ್ಯದಲ್ಲಿ ಅರ್ಥವನ್ನು ಕೊಡುವುದು ಒಳ್ಳೆಯದು.

೪

ರಾಮರಾಯರಿಗೆ ಬಳ್ಳಿ, ಹೂ, ಹಣ್ಣು ಪದಗಳು ಬಹು ಪ್ರಿಯವಾದುವು. ಅವುಗಳನ್ನು ಕಾದಂಬರಿಯಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಸಲ ಬೇರೆ ಬೇರೆ ಅರ್ಥಛಾಯೆಯಲ್ಲಿ, ಸಂಕೇತದಲ್ಲಿ ಬಳಸಿದ್ದಾರೆ. ಅವುಗಳಲ್ಲಿ ಹಲವು ಪ್ರಯೋಗಗಳು ಹೀಗಿವೆ–

೧. ಕೇಶವಾ, ನನ್ನ ವಂಶದ **ಬಳ್ಳಿ**ಯ ಮುಡಿಯಲ್ಲಿ ಈ ವರ್ಷ ತುಂಬುವುದರೊಳಗಾಗಿ ಒಂದು **ಹೂವನ್ನು** ಕರುಣಿಸು (ಪುಟ ೬)

೨. **ಹುವ್ವಿ**ನ ಕನಸುಗಳೇ ಕಣ್ಣಲ್ಲಿ ಸುಳಿಯಲಿ (ಪು ೯)

೩. ನಿಮ್ಮ ಸುಖದ **ಬಳ್ಳಿ** ಒಂದಾದರೂ **ಹೂವನ್ನು** ಬಿಡಲಿಲ್ಲ ಎಂದು ಅನ್ನಿಸಿತು. (ಪು. ೯)

೪. ಒಂದು ಸಾರಿ ಮುಡಿದ ಈ **ಮಂದಾರದ** ಮೇಲೆ ಬೇರೊಂದು **ಮುತ್ತು**ಗವೇ (ಪು. ೧೧)

೫. ಸಳರು ನೆಟ್ಟ **ಬಳ್ಳಿಯೋ** ಕುಡಿಯೊಡೆದು ಹೊರವಾಗಿ **ಹುವ್ವು ಹಣ್ಣುಗಳನ್ನು** ಜನತೆಗೆ ಕೊಡಬೇಕು. (ಪು. ೨೫)

೬. **ಹೂ ಅರಳುವಂತೆ** ನಕ್ಕರೋ ಏನೋ ! ಕಾಣಲಿಲ್ಲ (ಪು ೨೭)

೭. ನಿಮ್ಮ ಮಡಿಲಲ್ಲಿ ಬಿದ್ದ ಅದು ಬೇವಾಗದು ತಾಯಿ, **ಹೂವಾಗಿಯೇ** ಅರಳೀತು (ಪು. ೪೧)

೮. ಅರಮನೆಯಲ್ಲಿ ಕಿರಿಯ ರಾಣಿಯು **ಹುಣ್ಣಿಮೆ**ನಂತಹ ಸುಳಿವು ಎಲ್ಲ ಜನಕ್ಕೂ ಹಿತವಾಯಿತು. (ಪು. ೧೦೭)

೯. ಹಿರಿಯ ರಾಣಿಯು **ಹಣ್ಣು** ಹರೆಯವೇ ಸೊಗಸು (ಪು. ೧೦೮)

೧೦. ಹಾಗಾದರೆ ಅದು **ಹಣ್ಣಾ**ದಂತೆಯೇ (ಪು ೧೦೯)

೧೧. **ಹೂವಾಡಿದ** ಮದುವೆಯ ಈ ಹಸಿಯ ದಿನಗಳೇ ಚೆನ್ನ . . . (ಪು. ೧೧೦)

೧೨. ಹಾಯ್ಗ್ಗಡದಲ್ಲಿ ರಾಜದಂಪತಿಗಳಿಗೆಂದು **ಹೂವಿನ ದೋಣಿ** ಸಿದ್ಧವಾಗಿತ್ತು. (ಪು. ೧೨೫)

೧೩. ವಿಷ್ಣುವರ್ಧನನ ಭೋಗ **ಬಿರಿದ ಹೂವಿನಂತೆ** ಹಿಗ್ಗಿತು.(ಪು. ೧೨೭)

೧೪. ನಿಮ್ಮ ಕೈಯಲ್ಲಿ ದ್ರವ್ಯ ಕಬ್ಬಿನ ಜಲ್ಲೆಯಲ್ಲಿ **ಹಣ್ಣು** ಬಿಟ್ಟಂತೆ (ಪು. ೧೩೩)

೧೫. ಅಕ್ಕ, ನಿಮ್ಮ ತಪಸ್ಸಿನ ಅಖಂಡವಾದ ಪುಣ್ಯ ನಮ್ಮ ಒಡಲಲ್ಲಿ ನಿಂತು ಈ ನಿಮ್ಮ ನೆರಳಿನಲ್ಲಿ ಆ **ಹೂ** ಅರಳುತ್ತಿದೆ. ಅದು ನಿಮ್ಮದು...ಅದನ್ನು ನಿಮ್ಮ ಅಂಗೈಗಳಲ್ಲಿ ಮೊದಲು ಇಡಬೇಕು. ಅದು ನಮ್ಮ ಆಸೆ. (ಪು ೧೪೧)

೧೬. ಹೊಯ್ಸಳರ ಹಿರಿನಡತೆಯ ಬಳ್ಳಿ ಒಂದೇ ಗೊಂಚಲಿನಲ್ಲಿ **ಎರಡು ಹೂವನ್ನು** ಕೊಡದು. (ಪು. ೧೮೬)

೧೭. ಹಸುಳೆಯನ್ನು **ಹೂವಿನಂತೆ** ಅಂಗೈಗಳಲ್ಲಿರಿಸಿಕೊಂಡು ತೊಟ್ಟಿಲತ್ತ ನಡೆದಳು (ಪು. ೧೯೫)

೧೮. ನಾವು ಬಂಜೆಯಾಗಿ ಸಳರು **ನೆಟ್ಟ ಬಳ್ಳಿಗೆ** ಒಂದು ಬೊಗಸೆ ನೀರನ್ನೆರೆಯಲಿಲ್ಲ ಎಂಬುದನ್ನು ಜನತೆ ಬಲ್ಲುದು (ಪು. ೧೯೯)

೧೯. ಬುಡದ ಬೇರು ಕೊಳೆಯುವಾಗ ನೀರಮೇಲಣ **ತಾವರೆ** ಬಾಡುವಂತೆ (ಪು. ೨೦೨)

೨೦. ಮನಸ್ಸಿನಲ್ಲಿ ಮೊಳೆದ ವಿಷದ **ಬಳ್ಳಿಗೆ** ನೀರನ್ನು ಎರೆದಂತಾಯಿತು. (ಪು. ೨೦೩)

೨೧. ತನ್ನ ರಾಣಿ ನಡೆವ ಹಾದಿಯಲ್ಲಿ **ಹೂವನ್ನು** ಹರಡಿಯಾರು (ಪು. ೨೬೦)

೨೨. **ಹೂವರಳುವಂತೆ** ನಕ್ಕು ಅಂದಳು . . .

೨೩. ವಿಶಾಲ ಮೈದಾನದಲ್ಲಿ **ದಳಗಳನ್ನರಳಿಸಿ ನಿಂತ ಹೂವಿನಂತೆ** ಹಳ್ಳಿಗಳು (ಪು. ೨೮೩)

೨೪. ನಿನ್ನ ಮಾತು **ಹೂವಿನ ಸರವನ್ನೆಸೆದಂತೆ** ಇಲ್ಲವಲ್ಲ ? (ಪು.೨೪೪)

೨೫. ನಮ್ಮ ಮನಸ್ಸು **ಹೂವಿನಂತೆ** ಅರಳಿ ನಿಂತಿದೆ (ಪು. ೨೯೬)

೫

'ಶಾಕುಂತಲಾ' ಕಾವ್ಯವನ್ನು ಬರೆದ ಸಮೇತನಹಳ್ಳಿ ರಾಮರಾಯರ ಕವಿ ಮನಸ್ಸು ಈ ಕಾದಂಬರಿಯಲ್ಲೂ ಕೆಲಸಮಾಡಿದೆ, ಕಾವ್ಯಮಯವಾಗಿ ಕಾದಂಬರಿಯನ್ನು ಬರೆಯಲು ಅವರ ಲೇಖಣಿ ಆಸೆಪಟ್ಟಿದೆ. ಅಂಥ ಕೆಲವು ಸಾಲುಗಳನ್ನು ಇಲ್ಲಿ ಗಮನಿಸ ಬಹುದಾಗಿದೆ.

೧. ರಂಗಪೂಜೆಯ ಹೆಣ್ಣುಗಳು ಹೊನ್ನಿನಾರತಿಗಳೊಡನೆ ಅರಳಿದ ಹೊಸ ಹೂ ಬೊಗಸೆಗಳೊಡನೆ, ತೇಲಿಬಂದರು ; ಬಳುಕಿ ಬಂದರು. (ಪು. ೨)

೨. ಹೊಣೆಯನ್ನು ಹೊತ್ತವನು ಪ್ರಾಣವನ್ನು ಬಿಟ್ಟಾನು ! ಸಿಡಿತಲೆ ಗೊಟ್ಟು ಮಾನವನ್ನು ಕಾಪಾಡಿಕೊಂಡಾನು ! (ಪು. ೪)

೩. ನೀಡುವ ಹೆಣ್ಮಗಳ ಮನಸ್ಸಿನಲ್ಲಿ ಒಲವು ಇಲ್ಲದಿದ್ದರೆ ಉಣ್ಣುವ ಗಂಡ ಸಿಗೆ ಉಂಡದ್ದು ಮೈ ಹಿಡಿಯದು. (ಪು. ೧೨)

೪. ಚಂದನದ ಆಸೆಗಾಗಿ ಮರವನ್ನು ಮಂದಿ ಅಕ್ಕರೆಯಿಂದ ಸಾಕುತ್ತಾರೆ. ಬಾಳಿನ ಒಳ್ಳೆಯದನ್ನು ಸಾಧಿಸಿಕೊಳ್ಳಲು ಅವರು ನಿಮ್ಮನ್ನು ಹಾಗೆಯೇ ನಡೆಸಿ ಕೊಳ್ಳುತ್ತಾರೆ. (ಪು. ೧೪)

೬

ಕಾದಂಬರಿಯ ಉದ್ದಕ್ಕೂ ಅರ್ಥಗರ್ಭಿತವಾದ ಸೂಕ್ತಿಗಳು ದೊರೆಯುತ್ತವೆ. ಅವುಗಳಲ್ಲಿ ಕೆಲವು ಹೀಗಿವೆ–

೧. ಮಾಡುವವನಿಗೆ ತಿನ್ನುವ ಒಂದೊಂದು ಅಗುಳಿನಲ್ಲಿಯೂ ನೂರು ಕೆಲಸ ಅಂಟಿಕೊಂಡಿರುತ್ತವೆ. (ಪು. ೧೫)

೨. ಗಂಡು ಹೆಣ್ಣಿನ ಸುಖ ಪರಸ್ಪರ ತ್ಯಾಗ ಮಾಡಿದಷ್ಟೂ ಮಧುರ. (ಪು. ೫೧)

೩. ಹಿರಿದಕ್ಕೆ ಕಿರಿದು ಮಣಿಯಬೇಕು. (ಪು. ೧೩೧)

೪. ಒಂದನ್ನು ಸೋತು ನೂರನ್ನೂ ಗೆಲ್ಲುವುದು. (ಪು. ೧೩೪)

೫. ಯಾರನ್ನು ಯಾವ ದಾರಿಯಲ್ಲಿ ಒಯ್ದರೆ ಯಾವ ಒಳಿತನ್ನು ಸಾಧಿಸ ಬಹುದು ಎಂಬುದನ್ನು ಅರಿಯುವುದೂ ಒಂದು ವಿದ್ಯೆಯೇ ಸರಿ. (ಪು. ೧೩೫)

೬. ಹೆತ್ತತಾಯಿಯ ಆಸೆ ಎಲ್ಲದಕ್ಕಿಂತ ದೊಡ್ಡದು. (ಪು. ೧೪೧)

೭. ತಾಯಿಯೊಬ್ಬಳ ಆಸೆ ಒಂದು ನಾಡಿನ ಆಸೆಗಿಂತ ಮಿಗಿಲು. (ಪು. ೧೪೧)

೮. ಸಮಾಜದ ಹಿತಕ್ಕಾಗಿ ಹುಟ್ಟಿದ್ದು ರಾಜಕೀಯ. (ಪು. ೧೬೫)

೯. ಧರ್ಮ ಕಾಲದೊಡನೆ ಹೊಂದಿಕೊಳ್ಳುವುದನ್ನು ಕಲಿಯಬೇಕು. ಕಲಿ ಯದಿದ್ದರೆ ಅದರ ಉಪಕಾರ ಜನತೆಗೆ ಇಲ್ಲದಂತಾಗುತ್ತದೆ. ಜನತೆ ಅನುಸರಿಸದ

ಧರ್ಮ ಇದ್ದರೂ ಸತ್ತಂತೆಯೇ. (ಪು. ೧೭೨)

೧೦. ಒಂದು ನಾಡನ್ನು ನಡಸುತ್ತೇನೆ ಎಂದೆನ್ನುವ ವ್ಯಕ್ತಿ ಎಲ್ಲ ಧರ್ಮಗಳ ಒಂದು ಕೂಡಲಾಗಿರಬೇಕು. ಅವನು ಯಾವುದೇ ಒಂದು ನಿರ್ದಿಷ್ಟವಾದ ಧರ್ಮದ ದಾಸನಾಗಿರಬಾರದು. ನಾಡಿನ ಎಲ್ಲ ಧರ್ಮಗಳನ್ನು ಬಳಸಬೇಕು ಎಂಬುದೇ ಅವನ ಹಿರಿಯ ಧರ್ಮವಾಗಿರಬೇಕು. ಸನ್ಯಾಸಿ ಲೋಕದ ಪಾಲಿಗೆ ತಾನು ಇನ್ನಿಲ್ಲ ಎಂದುಕೊಳ್ಳುತ್ತಾನೆ. ಮತ್ತು ಕುಲಗಳ ಸೋಂಕು ಅವನನ್ನು ಬಾಧಿಸದು. ಆದರೂ ಲೋಕ ಅವನಿಂದ ಒಳ್ಳಿತನ್ನು ಬಯಸುತ್ತದೆ. ರಾಜನಾದರೂ ಒಬ್ಬ ಸನ್ಯಾಸಿಯೇ. ಹಾಗಿದ್ದರೆ ಮಾತ್ರ ಅವನು ಎಲ್ಲ ಧರ್ಮಗಳನ್ನು ತೊಡಕಿಲ್ಲದೆ ನಡೆಸಬಲ್ಲನು. ಇಲ್ಲವಾದರೆ ಒಂದರ ನಡುವೆ ಇನ್ನೊಂದು ಸಿಕ್ಕಿ ಕಾದಾಡಿಯಾವು. ಅವುಗಳ ತಿಕ್ಕಾಟದಲ್ಲಿ ನಾಡಿನಲ್ಲಿ ಕ್ಷೋಭೆ ಕಂಡೀತು ; ಮಂದಿ ಕಂಗಾಲಾದಾರು. (ಪು. ೧೭೨)

೭

ಪ್ರಸ್ತುತ ಕಾದಂಬರಿಯಲ್ಲಿ ಸಮೇತನಹಳ್ಳಿ ರಾಮರಾಯರು ಕಾನಿನ ರಕ್ಷಣೆಯ ಬಗ್ಗೆ ಜನ ಜಾಗೃತಿ ಮೂಡಿಸುವ ಸಲುವಾಗಿ ಅಳವಡಿಸಿರುವ ಸಂಭಾಷಣೆ ಸಂದರ್ಭೋಚಿತವಾಗಿ ಹೀಗೆ ಬಂದಿದೆ–

"ಕಾನನ್ನು ಬಹುವಾಗಿ ಸವರಿಬಿಟ್ಟಿರೇನು ?"

"ಒಂದಷ್ಟು ಹೋಗುವುದು ಅನಿವಾರ್ಯವಾಯಿತು ತಾಯಿ."

"ಬಿಟ್ಟಿಯಣ್ಣ, ನೆಲ ಬೆಳೆಯಬೇಕಾದರೆ ಕಾನು ಬೆಳೆಯಬೇಕು. ಕಾಣೆಯೇನು ? ರಾಯ ಬೊಕ್ಕಸದ ಭಂಡಾರಿ ರೊಕ್ಕವನ್ನು ಕಾಯ್ದಂತೆ ನಾಡಿನ ಪ್ರತಿಯೊಂದು ವ್ಯಕ್ತಿಯೂ ಕಾನಿನ ಸಂಪತ್ತನ್ನು ಕಾಯ್ದುಕೊಳ್ಳಬೇಕು ; ಬೆಳೆಸಬೇಕು. ಬೆಳೆಸಿದೆವೋ ಮಳೆ ಹೊಯ್ಯುತ್ತದೆ. ಅದರಿಂದ ಅನ್ನ ಬೆಳೆಯುತ್ತದೆ. ಅನ್ನದಿಂದ ಜೀವ ಬದುಕುತ್ತದೆ. ಆ ಜೀವದ ಗೆಯ್ಮೆ ನಾಡಿನ ಸಂಪತ್ತು. ಅಲ್ಲವೇ ?"

"ತಿಳಿಯಿತು."

"ಅಷ್ಟೇ ಅಲ್ಲ. ನಮ್ಮ ಅರಿವು ಅನಾದಿಯಿಂದ ಮೂಡಿ ಬಂದದ್ದು ಕಾನಿನಲ್ಲಿ. ನಮ್ಮ ಸಂಸ್ಕೃತಿ ಬಳೆದದ್ದು ಕಾನಿನಲ್ಲಿ. ನಮ್ಮ ನೂರು ಆಸೆಗಳನ್ನು ಸಲಿಸಿ ಕೊಡಬಲ್ಲ ಅಕ್ಷಯ ಪಾತ್ರೆ ಅದು. ಅದನ್ನು ಕಡೆಗಣಿಸುವುದು ಸಲ್ಲ."

೮

ಬಮ್ಮಲದೇವಿ ಬಾಲಕ ರಾಜಕುಮಾರನ ಮನಸ್ಸನ್ನು ಕೆಡಿಸುತ್ತಿದ್ದಾಳೆ ಎಂಬುದು ಶಾಂತಲೆಗೆ ಅರಿವಾದೊಡನೆಯೇ, ಅವನಿಗೆ ಯೋಗ್ಯ ಶಿಕ್ಷಣ ಕೊಡಬೇಕು ಎಂದು ನಿಶ್ಚಯಿಸುತ್ತಾಳೆ. ಸೂಕ್ತ ಸಂದರ್ಭ ಒದಗಿಬಂದಾಗ, ಅವರಿಬ್ಬರ ನಡುವೆ ನಡೆಯುವ ಸಂಭಾಷಣೆಯನ್ನು ಕಾದಂಬರಿಕಾರರು ಸೊಗಸಾಗಿ ಚಿತ್ರಿಸಿದ್ದಾರೆ. ಇಲ್ಲಿ ರಾಜಕುಮಾರನಿಗೆ

ಶಾಂತಲೆ ನೀಡುವ ತಿಳಿವಳಿಕೆ, ಇಂದಿನ ರಾಜಕೀಯವನ್ನು ಪ್ರವೇಶಿಸುವ ನವ ಯುವಕರಿಗೂ ಪ್ರಸ್ತುತವಾಗಿದೆ. ಆ ಸಂಭಾಷಣೆ ಸ್ವಲ್ಪ ದೀರ್ಘವಾಗಿದ್ದರೂ ಇಲ್ಲಿ ಉದ್ಧೃತ ಮಾಡಲಾಗಿದೆ. ಕಾರಣ ಇಷ್ಟೆ, ಈ ಭಾಗ ಕಾದಂಬರಿಕಾರನ ಸಂಭಾಷಣಾ ಚಾತುರ್ಯಕ್ಕೆ ವಿಚಾರ ಪ್ರತಿಪಾದನೆಗೆ ಹಾಗೂ ಅವನ ಗದ್ಯಶೈಲಿಗೆ ಉತ್ತಮ ನಿದರ್ಶನವಾಗಿದೆ–

"ಅದಿರಲಿ ಅಪ್ಪಾಜಿ, ನೀನೂ ರಾಜನಾಗುವೆಯಲ್ಲ ?"

"ಅಹುದು ಅಮ್ಮಾಜಿ, ಆಗಬೇಕು."

"ನೀನು ಹಾಗೆ ರಾಜನಾಗಲೇ ಬೇಕಾದರೆ ಅದಕ್ಕೆ ತಕ್ಕ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕು ಕಂದ."

"ಏನು ಅದು ? ಎಷ್ಟು ಅದು ?

"ಅದನ್ನು ಏನು ಎಂದು ಬೇಕಾದರೆ ಹೇಳಿಯೇವು. ಆದರೆ ಎಷ್ಟು ಎಂದು ಹೇಳಲಾಸಲ್ಲ ಮಗುವೆ. ಅದನ್ನು ಎಷ್ಟು ಕೂಡಿಸಿಕೊಂಡರೆ ಅಷ್ಟೂ ಬೇಕು."

"ಹುಂ. ಹೇಳಿಬಿಡಿರಿ ಕೇಳುತ್ತೇನೆ. ಏನು ಅದು ?"

"ಅದು ಒಳ್ಳೆಯತನ ಕಂದ."

"ಹಾಗೆಂದರೆ ?"

"ನಿನ್ನ ನಾಡಿನ ಜನಗಳಿಗೆ ನೋವು ಆಗದಂತೆ ನಡೆಯುವುದು."

"ನೀವು ಅಂದು ಹೇಳಿದ ಮೇಲೆ ನಾನು ಯಾರನ್ನೂ ಹೊಡೆಯುತ್ತಿಲ್ಲ ಅಮ್ಮಾಜಿ. ಆದರೆ ಈವೊತ್ತು–"

"ಹೊಡೆದರೆ ಮಾತ್ರ ನೋವು ಅಲ್ಲ. ಕೆಟ್ಟ ಮಾತನ್ನಾಡಿದರೆ ಹೊಡೆದುದಕ್ಕಿಂತ ಹೆಚ್ಚಿನ ನೋವು ಅಣ್ಣ. ಅಂತಹ ನೋವನ್ನಾದರೂ ನೀನು ಯಾರಿಗೂ ಕೊಡಬಾರದು."

"ಅಷ್ಟೆ ತಾನೆ."

"ಅವು ಅಷ್ಟೇ ಅಲ್ಲ. ಮನಸ್ಸಿನಲ್ಲಿ ಕೆಟ್ಟತನವನ್ನು ತುಂಬಿಕೊಂಡು ನೀನು ಸುಮ್ಮನಿದ್ದರೂ ನಿನ್ನಿಂದ ಜನಕ್ಕೆ ನೂರು ತೊಂದರೆ ಆಗಬಹುದು. ರಾಜನಾಗಬೇಕಾದವನು ಎಲ್ಲರಿಗೂ ಒಳ್ಳೆಯದಾಗುವುದನ್ನೇ ಚಿಂತಿಸಬೇಕು."

"ನಾವು ಅವರಿಂದ ಕೆಲಸ ಮಾಡಿಸಬಾರದೇ ಹಾಗಾದರೆ ? ಕೆಲಸಕ್ಕೆ ತಕ್ಕ ಜೀತವನ್ನು ಕೊಡುವೆವಲ್ಲ ? ಅದು ಒಳ್ಳೆಯುದಲ್ಲವೆ ?"

"ಅವರ ಹೊಟ್ಟೆಯನ್ನು ನೋಡಿ ಸಾಕಷ್ಟು ಕೊಡುವುದು ಒಳ್ಳೆಯದೇ. ಆದರೆ ಕೆಲಸವನ್ನು ಮಾಡಿಸುವವನು ನೀನು, ಅವರೆಲ್ಲ ನಿನ್ನ ಸೇವಕರು ಎಂದುಕೊಳ್ಳುವುದು ತಪ್ಪು. ಏಕೆ ಗೊತ್ತೆ ? ಅವರು ಹುಟ್ಟಿದ ಮೇಲೆ ಎಲ್ಲಿಯಾದರೂ ಕೆಲಸ ಮಾಡಬೇಕು. ಎಲ್ಲಿಯೋ ಮಾಡುವುದನ್ನು ಬಿಟ್ಟು ಇಲ್ಲಿ ಮಾಡುತ್ತಾರೆ. ನಿನಗಾಗಿ ಮಾತ್ರ ಅವರು ಮಾಡುವುದಿಲ್ಲ. ತಾವು ಬದುಕಬೇಕು ಎಂದು ಅವರು ದುಡಿಯುತ್ತಾರೆ."

"ಹಾಗಿದ್ದರೆ ನಮ್ಮ ಬೊಕ್ಕಸದಿಂದ ಕರಣಿಕರು ಅವರಿಗೆ ಹೊನ್ನನ್ನು ಎಣಿಸುವರಲ್ಲಾ ?"

"ಬೊಕ್ಕಸ ನಮ್ಮದಲ್ಲ. ಅವರದೇ."

"ಏನು ದೊಡ್ಡಮ್ಮಾಜಿ !"

"ಹೌದು ಕಂದ ಅವರದೇ. ಹೊನ್ನು ಅಲ್ಲಿ ಕೂಡಬೇಕಾದರೆ ಅರಮನೆಯವರು ನಾವು ಮಣ್ಣನ್ನು ಅಗೆದೆವೆ ? ಬೀಜವನ್ನು ಬಿತ್ತಿ ಕಾಳನ್ನು ಬೆಳೆದು ಉಗ್ರಾಣವನ್ನು ತುಂಬಿದೆವೆ ?"

"ಇಲ್ಲ"

"ಮತ್ತೆ ಹಾಗೆ ಮಾಡಿದವರು ಯಾರು ?"

"ಅವರೇ ನಮ್ಮ ಪ್ರಜೆಗಳು."

"ಅವರು ಬೆಳೆದುದನ್ನು ಮಹಾರಾಜರು ಒಳ್ಳೆಯವರು ಎಂದು ಬೊಕ್ಕಸದಲ್ಲಿ ಇಟ್ಟಿದ್ದಾರೆ. ಕೊಡುವಾಗ ಯಾರಿಗೆ ಎಷ್ಟು ಕೊಡಬೇಕು ಎಂಬುದನ್ನೂ ನೋಡಿಕೊಳ್ಳುವುದಕ್ಕೆ ಮಾತ್ರ ನಾವು."

"ಹಾಗಾದರೆ ನಾವು ಉಣ್ಣುವುದು ಏನ್ನನ್ನು ?"

"ನಿನ್ನ ರಾಜ್ಯದಲ್ಲಿ ಇರುವ ಪ್ರಜೆಗಳು ತಮ್ಮ ಮೇಲೆ ಇತರರು ನುಗ್ಗಿ ಅವರ ಒಡವೆಯನ್ನು ದೋಚಿಕೊಳ್ಳದಂತೆ ನೋಡಿಕೊಳ್ಳಬೇಕು ಎಂದು ನಮ್ಮನ್ನು ಇರಿಸಿದ್ದಾರೆ. ರಾಜರು ನಾವು ಕತ್ತಿಯನ್ನು ಹಿರಿದು ನಿಂತು ಅವರಿಗೆ ಒರುವ ಕಷ್ಟಗಳನ್ನು ತಡೆಗಟ್ಟಬೇಕು. ಆಗ ಅವರು ಬೆಳೆದ ಬೆಳಸಿನಲ್ಲಿ ಇಂತಿಷ್ಟು ಎಂದು ನಮಗೆ ಕೊಡುತ್ತಾರೆ."

"ಓ, ಹಾಗೇನು ?"

"ನೀನು ಸೋಮಾರಿಯಾಗಿಯೋ ಅಥವಾ ಇನ್ನೇನಾದರೂ ಆಗಿಯೋ ಅವರು ನಿನಗೆ ವಹಿಸಿರುವ ಕೆಲಸವನ್ನು ಮಾಡಲಿಲ್ಲ ಎನ್ನು–"

"ಏನಾಗುತ್ತದೆ ಆಗ ?"

"ತಮ್ಮಂತೆ ಸರಿಯಾಗಿ ಕೆಲಸ ಮಾಡುವವನನ್ನು ತಂದುಕೊಳ್ಳುತ್ತಾರೆ."

"ಹಾಗಿದ್ದರೆ ಈ ರತ್ನ ಸಿಂಹಾಸನ, ಹೊಂದಡವುಗಳು, ಈ ಅರಮನೆ, ಇವೆಲ್ಲ ?"

"ಇವೆಲ್ಲ ಜನಗಳದೇ, ನಾವು ಒಳ್ಳೆಯವರಾದಷ್ಟೂ ಅವರು ಒಳ್ಳೆಯವರಾಗುತ್ತಾರೆ. ಇವನ್ನು ಇನ್ನೂ ಹೆಚ್ಚಾಗಿ ಕೊಡುತ್ತಾರೆ. ಅವರದು ಎಂದು ನೀನು ಅನುಭವಿಸಬೇಕು.

"ಹಾಗಿದ್ದರೆ ಈ ಇಷ್ಟೊಂದನ್ನು ಅವರು ನಮಗೆ ಕೊಟ್ಟಿರಬೇಕಾದರೆ ನನ್ನ ಅಪ್ಪಾಜಿಯವರು ತುಂಬ ಒಳ್ಳೆಯವರಾಗಿರಬೇಕಲ್ಲ ?

"ಅಹುದು. ನಿಮ್ಮ ತಾತಂದಿರು, ಅವರ ತಾತಂದಿರು ಈ ಮನೆತನದಲ್ಲಿ

ಬಾಳಿದವರೆಲ್ಲ ಹಾಗೆ ಬದುಕಿದರು. ರಾಜನಾಗಬೇಕು ಎಂದು ಹೇಳುತ್ತಿರುವ ನೀನೂ ಅವರಂತೆ ಆದರೆ ಮಾತ್ರ ಇದನ್ನೆಲ್ಲ ನೀನು ಉಳಿಸಿಕೊಳ್ಳಬಲ್ಲೆ."

ಪುಣಿಶ ಒಬ್ಬ ಜೈನ ದಣಾಯಕ. ಆತ ಒಂದು ಪ್ರಮುಖ ಯುದ್ಧವನ್ನು ಗೆದ್ದು ಕೊಟ್ಟಿದ್ದರಿಂದ, ಆ ಯುದ್ಧದಿಂದ ಬಂದ ಆದಾಯವೆಲ್ಲವನ್ನು ದೊರೆ ಆತನಿಗೆ ಉಡುಗೊರೆಯಾಗಿ ನೀಡಿದ್ದನು. ಆ ಸಂಪತ್ತನ್ನು ಗಂಗರಾಜರ ಕಾಲದಲ್ಲಿದ್ದು ಈಗ ಪಾಳು ಬಿದ್ದಿರುವ ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿಸಲು ರಾಜನಿಂದ ಅನುಮತಿಯನ್ನು ಪಡೆದಿರುತ್ತಾನೆ. ಕಾನುಕೆರೆಯಲ್ಲಿ ಒಂದು ಹಳೆಯ ಬಸದಿಯಿತ್ತು. ಎರಡು ಶತಮಾನದ ಹಿಂದಿನ ಶಾಸನಗಳಿಂದ ಅದು ಜಿನಾಲಯವಾಗಿತ್ತೆಂದು ದಾಖಲೆ ಸಿಗುವುದು. ಅದು ಗಂಗರ ಕಾಲದ್ದು. ಆದರೆ ಚೋಳರಾಜರು ಆ ಬಸದಿಯಲ್ಲಿ ಬಾಣೇಶ್ವರನನ್ನು ಸ್ಥಾಪಿಸಿದ್ದರು. ಊರಮಂದಿ ಆ ದೇವನ ಒಕ್ಕಲಾಗಿದ್ದರು. ಈಗ ಪುಣೀಶ ದಣಾಯಕರು ಆ ದೇಗುಲದಲ್ಲಿ 'ಬಾಣೇಶ್ವರನ' ಬದಲು 'ಜಿನ್ನಪ್ಪ'ನನ್ನು ಪುನರ್‌ಸ್ಥಾಪಿಸಲು ಬಯಸಿದನು. ಇದು ಒಂದು ಸಮಸ್ಯೆಯಾಗಿ ಅರಮನೆಯ ಮುಂದೆ ನ್ಯಾಯಕ್ಕಾಗಿ ಬಂದಿತು. ಈ ಸಂದರ್ಭದಲ್ಲಿ ಜೈನಳಾದ ಶಾಂತಲಾದೇವಿ, ಜೈನ ಅಮಾತ್ಯ ಸುರಿಗೆಯ ನಾಗಯ್ಯನ ಮೂಲಕ ವಿಚಾರಣೆ ನಡೆಸಿ, ಕೊಡುವ ತೀರ್ಪು ಇಂದಿಗೂ ಪ್ರಸ್ತುತವೆನಿಸುವುದು. ಈ ಸನ್ನಿವೇಶವನ್ನು ಕಾದಂಬರಿಕಾರರು ತುಂಬ ಎಚ್ಚರಿಕೆಯಿಂದ ಚೆನ್ನಾಗಿ ಚಿತ್ರಿಸಿದ್ದಾರೆ. ಮಸೀದಿ ಮಂದಿರಗಳನ್ನು ಕೆಡವಿ ಹಾಕುತ್ತಾ, ಒಂದು ಧರ್ಮದವರು ಇನ್ನೊಂದು ಧರ್ಮದವರನ್ನು ಕೆಣಕುವ ಮನೋಧರ್ಮವೇ ಹೆಚ್ಚಾಗಿ ಹರಡುತ್ತಿರುವ ಈ ಸಮಯದಲ್ಲಿ ಕಾದಂಬರಿಯ ಪ್ರಸ್ತುತ ಸನ್ನಿವೇಶ, ರಾಷ್ಟ್ರದ ಮಹಾಜನತೆಗೆ ಒಂದು ಸಹಿಷ್ಣುತೆಯ ಪಾಠವನ್ನು ಮಾರ್ಮಿಕವಾಗಿ ಕಲಿಸುವಂತಿದೆ. "ದಣಾಯಕರೆ, ನೀವಿನ್ನು ಕಾನುಕೆರೆಯ ಬಾಣೇಶ್ವರನನ್ನು ತೆಗೆಯುವ ಯಾವುದೇ ಕೆಲಸಕ್ಕೆ ಕೈಯಿಕ್ಕದಿರಿ. ಅಷ್ಟೇ ಅಲ್ಲ, ನಿಮ್ಮ ಆ ಉತ್ಸಾಹ ಯಾರ ಧರ್ಮಕ್ಕೂ ಯಾವ ಬಗೆಯಲ್ಲಿಯೂ ಅಡ್ಡಿಯನ್ನು ತಂದೊಡ್ಡದಿರಲಿ" ಎಂದು ಶಾಂತಲೆಯು ಅಂತಿಮ ತೀರ್ಪನ್ನು ಕಾಲೋಚಿತವಾಗಿ ನೀಡುತ್ತಾಳೆ. ಯಾವ ಪಕ್ಷಪಾತಕ್ಕೂ ಎಡೆಕೊಡುವುದಿಲ್ಲ. ಅರಮನೆ ಪಕ್ಷಾತೀತವಾದುದೆಂದು ಸಾಬೀತು ಪಡಿಸುತ್ತಾಳೆ. ಆಕೆಯ ಈ ತೀರ್ಪು ಸಮಕಾಲೀನದಲ್ಲು ಅನುಕರಣೀಯವಾಗಿದೆ. ಹೀಗೆ ಕಾದಂಬರಿಕಾರರು ಆ ಕಾಲದ ಚಿತ್ರವನ್ನು ಕೃತಿಯಲ್ಲಿ ಪ್ರತಿಬಿಂಬಿಸುವ ಜೊತೆಗೆ, ಈ ಕಾಲದವರಿಗೆ ಯೋಗ್ಯ 'ಗತಿಬಿಂಬ'ವನ್ನು ಸೂಚಿಸಿದ್ದಾರೆ. ಈ ಕಾರ್ಯವನ್ನು ಸಾಹಿತಿಗಳು ಎಷ್ಟೆಷ್ಟು ಮಾಡಿದರೂ ಸಮಕಾಲೀನ ಪರಿಸ್ಥಿತಿಗೆ ಅದು ಸಾಲದಾಗಿದೆ.

೧೦

ಶಾಂತಲಾದೇವಿಗೆ 'ಚತುಸ್ಸಮಯ ಸಮುದ್ಧರಣೆ' ಎಂಬ ಹೆಗ್ಗಳಿಕೆ. ನಾಲ್ಕು ಸಮಯ (ಧರ್ಮ)ಗಳನ್ನು ಉದ್ಧರಿಸಿದವಳು. ಜೈನ, ಶೈವ, ವೈಷ್ಣವ ಹಾಗೂ ಬೌದ್ಧ– ಇವೇ ಆ ನಾಲ್ಕು ಸಮಯಗಳು. ಈ ನಾಲ್ಕು ಸಮಯಗಳ ದೃಷ್ಟಿಯಿಂದಲೂ ಆಕೆಯ

ವ್ಯಕ್ತಿತ್ವವನ್ನು ನೋಡಬೇಕಾಗುವುದು ಹಾಗೂ ಅವಳ ವ್ಯಕ್ತಿತ್ವವನ್ನು ಚಿತ್ರಿಸಬೇಕಾಗುವುದು. ಶಾಂತಲೆಯನ್ನು ಕುರಿತು ಬಂದಿರುವ ನಾಲ್ಕು ಕಾದಂಬರಿಗಳನ್ನು ಬರೆದವರು ಜೈನೇತರ ಸಮಯದವರು. ಆದ್ದರಿಂದ ಜೈನ ದೃಷ್ಟಿಯಿಂದ ಶಾಂತಲೆಯ ಪಾತ್ರವನ್ನು ಚಿತ್ರಿಸುವುದು ಹಾಗೂ ಪೋಷಕ ಜೈನ ಪಾತ್ರಗಳನ್ನು ಸಮ್ಯಕ್ ದೃಷ್ಟಿಯಿಂದ ನಿರೂಪಿಸುವುದು ಅವರಿಗೆ ಸ್ವಲ್ಪ ಕಷ್ಟವಾಗಬಹುದು. ಅಂಥ ಕಷ್ಟಕ್ಕೆ ಸಮೇತನಹಳ್ಳಿ ರಾಮರಾಯರು ಸಹ ಈ ಕಾದಂಬರಿಯಲ್ಲಿ ಸಿಲುಕಿಬಿದ್ದಿದ್ದಾರೆ. ಶಾಂತಲೆಯ ಜೈನಗುರು ಶ್ರೀ ಪ್ರಭಾಚಂದ್ರ ಮುನಿಗಳು ಸಂಜೆ ಹೊತ್ತಿನಲ್ಲಿ ಅರಮನೆಗೆ ಆಗಮಿಸಿ, ರಾಜಪರಿವಾರ ನೀಡಿದ ಹಾಲನ್ನು ಸ್ವೀಕರಿಸಿದರು ಎಂದು ಚಿತ್ರಿಸಲಾಗಿದೆ. ಇದು ಜೈನ ಮುನಿಗಳ ಆಚರಣೆಗೆ ವಿರುದ್ಧವಾಗಿದೆ. ಸರಿಯಾದ ತಿಳಿವಳಿಕೆಯ ಅಭಾವ ಇಲ್ಲಿ ಎದ್ದು ಕಾಣುತ್ತದೆ. ಅಲ್ಲದೆ ಶಾಂತಲೆ ಶಿವಗಂಗೆಯಲ್ಲಿ ಪ್ರಾಣತ್ಯಾಗ ಮಾಡುವ ಚಿತ್ರಣ ಜೈನೀಯವಾಗಿಯೂ ಇಲ್ಲ, ಧಾರ್ಮಿಕವಾಗಿಯೂ ಇಲ್ಲ. ಕೇವಲ ಲೌಕಿಕ ಆದರ್ಶದ ಚಿತ್ರಣವಾಗಿದೆ. ಇಂಥ ಕೆಲವು ದೋಷಗಳನ್ನು ಮುಂದಿನ ಮುದ್ರಣಗಳಲ್ಲಿ ಸಾಧ್ಯವಾದರೆ ಸರಿಪಡಿಸಿಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಸಮೇತನಹಳ್ಳಿ ರಾಮರಾಯರ 'ಸವತಿಗಂಧವಾರಣೆ'ಯಲ್ಲಿ ಶಾಂತಲೆಯು ಪತಿಹಿತೈಷಿಯಾಗಿ, ರಾಷ್ಟ್ರಭಕ್ತಳಾಗಿ, ಧರ್ಮಸಹಿಷ್ಣುತೆಯ ಸಂಕೇತವಾಗಿ, ಕೊನೆಕೊನೆಯಲ್ಲಿ ವಿಪರೀತ ಮನನೋಯಿಸಿದ ಸವತಿಯ ಬಗ್ಗೆಯೂ ಅಸಮಾಧಾನ ತಾಳದೆ, 'ಪಿರಿಯರಸಿ' ಆಗಬೇಕೆಂಬ ಆಕೆಯ ಆಸೆಯನ್ನು ನೆರವೇರಿಸುವುದಕ್ಕಾಗಿಯೇ ಪ್ರಾಣತ್ಯಾಗ ಮಾಡಿದ ತ್ಯಾಗಮಯಿಯಾಗಿ ಚಿತ್ರಿತವಾಗಿದ್ದಾಳೆ. ಅಲ್ಲಿನ ಹಲವು ಸನ್ನಿವೇಶಗಳು ಕಣ್ಣಿಗೆ ಕಟ್ಟಿದಂತೆ ನಾಲ್ಕುಕಾಲ ಚಿರಸ್ಥಾಯಿಯಾಗಿರಬಲ್ಲುವು. ಈ ದೃಷ್ಟಿಯಿಂದ ರಾಮರಾಯರ ಶ್ರಮ ಸಾರ್ಥಕವಾಗಿದೆ.

The other day Shri Varadaraja Rao gave me a copy of your recent book 'ರಾಸಲೀಲೆ' . . . I have always admired your works. I congratulate you on this.

21-2-1967 **Prof. M. Yamunacharya**

ಪಿನಾಕಿನಿ

ವಿದ್ಯಾ ಬೊಮ್ಮನಹಳ್ಳಿ

೨೦ನೇ ಶತಮಾನ ಪ್ರಯೋಗಗಳ ಕಾಲ. ಕಾವ್ಯ, ಕಥೆ, ಕಾದಂಬರಿ, ನಾಟಕಗಳಲ್ಲಿ ಈವರೆಗೆ ಕಾಣದ ಮಹತ್ತರ ಬದಲಾವಣೆಯನ್ನು ಈಗ ಕಾಣುತ್ತೇವೆ. ಈ ಸ್ಥಿತ್ಯಂತರಕ್ಕೆ ಕಾರಣ ಇಂಗ್ಲಿಷ್ ಶಿಕ್ಷಣ ಮತ್ತು ಪ್ರಭಾವ. ಜೊತೆಗೆ ಭಾರತೀಯ ಪುನರುಜ್ಜೀವನ ಚಳುವಳಿ ಕೂಡ ಅಷ್ಟೇ ಪ್ರಬಲವಾದುದು. ಇಲ್ಲವಾದಲ್ಲಿ ಇಲ್ಲಿನ ಹೊಸ ಪ್ರಯೋಗಗಳು ಪಶ್ಚಿಮದ ನಕಲು ಎನ್ನುವ ತಪ್ಪು ಗ್ರಹಿಕೆಗೆ ಅವಕಾಶವಾಗುತ್ತದೆ. ಈ ಸಾಂಸ್ಕೃತಿಕ ಪುನರುಜ್ಜೀವನದ ಎಚ್ಚರದಲ್ಲಿ ಇಲ್ಲಿನ ದೃಶ್ಯ ಮತ್ತು ಶ್ರವ್ಯಕಾವ್ಯಗಳು ಹಳೆಯದನ್ನು ಹೊಸ ಮಾತಿನಲ್ಲಿ ಹೇಳತೊಡಗಿದವು. ಈ ಹಿನ್ನೆಲೆಯಲ್ಲಿ ಈ ದಶಕಗಳ ರಚನೆಯನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

ಪ್ರಸ್ತುತ ಚರ್ಚೆಗೆತ್ತಿಕೊಂಡಿರುವ 'ರಾಸ'ರವರ ನಾಟಕಗಳ ಮುಖ್ಯ–ಮೂಲ ಆಧಾರವೂ "ಹಳೇಬೇರಿನಲ್ಲಿ ಹೊಸ ಚಿಗುರಿನ ಹುಡುಕಾಟದ್ದ" ! ಇದು ಒಟ್ಟು ಅವರ ವಸ್ತುವಿನ ಆಯ್ಕೆ, ಭಾಷೆಯ ಪ್ರಯೋಗ, ಶೈಲಿಗೆ ಅನ್ವಯಿಸುತ್ತದೆ.

ಈ ಸ್ಪಷ್ಟತೆಯನ್ನು ಸಮರ್ಥಿಸಿರುವ ಮೊದಲು 'ರಾಸ' ಅವರ ಸೃಜನಶೀಲತೆ ಪ್ರೇರಣೆಗೊಂಡ ಬಗ್ಗೆ ಅವರ ಮಾತಿನಲ್ಲೇ ಹೇಳುವುದಾದರೆ.

> ''ಈ ತಾಯಿ ಕರುಣೆ ಅಪಾರ (ಪಿನಾಕಿನಿ ನದಿ)
> ಹಸಿರು, ಹಣ, ಹಣ್ಣು, ಕಾಳುಕೊಟ್ಟ ಜೀವನಕೊಟ್ಟ''

ಅವಳೇ ತನ್ನ ಚಿಚ್ಛಕ್ತಿಯನ್ನು ತೆರೆಯಿಸಿದವಳು ಎನ್ನುವ ಭಾವವೇ ಅವರ ಒಟ್ಟು ನಾಟಕದ ಸ್ಥಾಯಿ ! 'ಸಾತ್ವಿಕ' ಮನಸ್ಸು ಅವರದು. ಬದುಕಿನಂತೆ ನಾಟಕದಲ್ಲಿ ಕೂಡ ಅವರಿಗೆ ಬಿರುಸಿನ ಪ್ರಸಂಗ, ಘಟನೆಗಳಲ್ಲಿ ಗಂಭೀರ ಆಸಕ್ತಿಯಿಲ್ಲ. ಉದಾ : ಪೌರಾಣಿಕ ವಸ್ತುವನ್ನಿಟ್ಟುಕೊಂಡ ಊರ್ವಶಿ ಪ್ರಸಂಗ, ಸೀತಾದರ್ಶನ, ಶುಭ್ರಶೀಲೆ ಅಹಲ್ಯೆ ನಾಟಕಗಳಲ್ಲಿ ಊರ್ವಶಿ ಕೆರಳುವ, ಗೌತಮ ಕೋಪಗೊಳ್ಳುವ, ಸಾವಿತ್ರಿ ಸಿಟ್ಟಿಗೇಳುವ ಪ್ರಮುಖ ಘಟನೆಗಳಲ್ಲೆಲ್ಲ ಬೇಕಾದ ಕಠೋರತೆಯೆ ಇಲ್ಲ. ಈ ನಿಖರತೆಯ ಕೊರತೆಯೆ

• ಈ ಏಕಾಂಕ ನಾಟಕಗಳ ಸಂಕಲನ 'ಊರ್ವಶೀಪ್ರಸಂಗ' 'ಶುಭ್ರಶೀಲೆ ಅಹಲ್ಯೆ', 'ಸ್ವೀಕಾರ' 'ಅಸ್ತಮಯ,' ಮತ್ತು 'ಸೀತಾದರ್ಶನ' ಎಂಬ ಐದು ಏಕಾಂಕ ನಾಟಕಗಳನ್ನೊಳಗೊಂಡಿದೆ. ಮೊದಲ ಎರಡು ಮತ್ತು ಕೊನೆಯದು ಪೌರಾಣಿಕ. ಮಿಕ್ಕೆರಡು ಐತಿಹಾಸಿಕ ವಸ್ತುವಾಗಿ ಉಳ್ಳವುಗಳು. —ಸಂ

ಈ ನಾಟಕಗಳ ಗುಣ ಮತ್ತು ಮಿತಿ ! ಮೂಲಕ್ಕಿಂತಲೂ ಭಿನ್ನವಾಗಿ ಮಾನವೀಯತೆ ಯಿಂದ ವರ್ತಿಸುವ ಗೌತಮನದು ಹಿರಿದಾದ ವ್ಯಕ್ತಿತ್ವ" ಅಹಲ್ಯೆಯೂ ಶಾಪಗ್ರಸ್ಥಳಲ್ಲ ಶುಭ್ರೆ ! ಆ ಶುಚಿಗೆ ಬಡಿದ ಅಶೌಚದ ನಿವಾರಣೆಗಾಗಿ, ಪರಿಹಾರಾರ್ಥವಾಗಿ ಶಾಪವನ್ನು ಬೇಡಿಕೊಂಡವಳು, ಕಲ್ಲಾದವಳು. ಈ ಸಂಕಲನದಲ್ಲಿನ ಅತ್ಯುತ್ತಮನಾಟಕವಿದು. ಗೌತ ಮನ ಸಂಯಮ, ಸಹನೆ, ಆದರ್ಶಮಾತ್ರವಲ್ಲದ ಮಾನವೀಯತೆಯಲ್ಲಿ ಮಹತ್ವವ ವನ್ನು ಪಡೆಯುತ್ತದೆ. ಆದರೂ ಈ ನಡುವೆ ಒಂದು ಮಾತು ಹೇಳದಿರಲಾಗದು. ಸಂಸ್ಕೃತನಾಟಕಗಳ ದಟ್ಟವಾದ ಪ್ರಭಾವದಲ್ಲಿ, ಲೇಖಕರು ಭಾಷೆಯಲ್ಲೂ ಕೂಡ ಆ ವ್ಯಾಮೋಹದಿಂದ ಬಿಡುಗಡೆ ಪಡೆದಿಲ್ಲ. ಅವರ ಕೆಲಪ್ರಯೋಗಗಳು ನೋಡಿ ; 'ನಿಮ್ಮಿ ನಿಂತ ತಳಿರ್ಮೈ', 'ಗೈವ ಗೆಯ್ಮೆ' . . . ಮುಂದುವರಿಸುವ ಇಂತಹ ಶಬ್ದ ಪ್ರಯೋಗ ವ್ಯಾಮೋಹಕ್ಕೆ ಜೋತುಬೀಳುವಷ್ಟು ಸರಳ, ಸಾಲಂಕಾರಕ್ಕೆ ಅವರ ಮನಸ್ಸೊಪ್ಪದು. ಕಾಮದಾಹ, ಲಜ್ಜೆ, ಊರ್ವಶಿಯ ಸಜ್ಜೆಯ ಸಲ್ಲಾಪದಂತಹ ಪ್ರಸಂಗಗಳಲ್ಲೆಲ್ಲ ಶೃಂಗಾ ರದ ಅತಿರೇಕತೆಯನ್ನು ಕಾಣದೇ ಕೋಮಲಶೃಂಗಾರತೆಯಿಂದ ಪರಿಣಾಮಕತೆಯನ್ನು ಸಾಧಿಸುತ್ತಾರೆ.

ಲೇಖಕರಲ್ಲಿ ಸಾತ್ವಿಕತೆಯಂತೆಯೇ ಪ್ರಬಲವಾದ ಭಾವ ಕರುಣ. ಕಾರುಣಿಕ ಘಟನೆಗಳಲ್ಲಿ, ಗದ್ಗದವಾಗಿ ತುಂಬಿಬರುವುದಕ್ಕೆ ಸ್ವಂತ ಬಡತನದಂತಹ ಜೀವನಾನು ಭವದ ಜೀವಂತಿಕೆ ಬೇರೆ ! ಚಾರಿತ್ರಿಕ ನಾಟಕ "ಅಸ್ತಮಯದಲ್ಲಿನ ಹೆಂಗಸಿನ ನಿರರ್ಥಕ 'ಚೀತ್ಕಾರ, ಸೀತಾದರ್ಶನದಲ್ಲಿ ಒಡ್ಡಿಕೊಂಡ ಸೀತೆಯ 'ವಿಷಾದ ದುಃಖ' ಪ್ರೇಕ್ಷಕನನ್ನು ಕಂಪನಿ ಮೆಲೋ ಡ್ರಾಮಟಿಕ್' ದನಿಗಿಂತಲೂ ಭಿನ್ನವಾಗಿ ಒದ್ದೆಮಾಡುತ್ತದೆ.

ಇನ್ನೊಂದು ಚಾರಿತ್ರಿತ ನಾಟಕ ಸ್ವೀಕಾರದಲ್ಲಿ ವಿಷ್ಣುವರ್ಧನ ಬಿಟ್ಟಿಯಣ್ಣನನ್ನು ದತ್ತುಪುತ್ರನನ್ನಾಗಿ ತೆಗೆದುಕೊಳ್ಳುವ ಈ ಪ್ರಸಂಗದಲ್ಲಿ ವಿಷ್ಣುವರ್ಧನ, ಶಾಂತಲೆಯ ಸರಳತನ ಮತ್ತು ಉದಾರತನದಂತಹ ಸಂವೇದನೆಗಳು ಹಿರಿದಾದರೂ ಪಾತ್ರಗಳಲ್ಲಿ ಸಾಮಾನ್ಯವಾಗಿ ವ್ಯಕ್ತವಾಗುತ್ತವೆ. ಕೊನೆಗೂ "ಸಾಹಿತ್ಯ ಭಾಷೆಯಲ್ಲಿ ಹಿರಿದಾಗಿ ಅಭಿ ವ್ಯಕ್ತಿಗೊಳ್ಳುವ ಬಗೆಯಾಗಿರುವುದರಿಂದ ಭಾಷೆಯನ್ನು ಸಿದ್ಧಿಸಿಕೊಳ್ಳುವಲ್ಲಿ ಸೃಜನಶೀಲ ಲೇಖಕರು ಪ್ರಯತ್ನಿಸುತ್ತಲೇ ಇರಬೇಕಾಗುತ್ತದೆ. ಭಾಷೆಯನ್ನು ಬೆಳೆಸುವಲ್ಲಿ ಅದು ಅವರ ಜವಾಬ್ದಾರಿ ಕೂಡ.

"ಕೇವಲ ಸಂಭಾಷಣೆಯಿಂದ ಕಟ್ಟಿದ ಬಂಧವೆಲ್ಲ ನಾಟಕವಲ್ಲ." ಅಲ್ಲಿನ ಭಾಷೆ ಗದ್ಯದಂತೆ ವಿವರಣಾತ್ಮಕತೆಯನ್ನೂ ಕಾವ್ಯದ ಅಮೂರ್ತತೆಯನ್ನೂ, ಘಟನೆ, ದೃಶ್ಯಗಳ ಸಂಯೋಜನೆಯಲ್ಲಿ ಭ್ರಮಾತ್ಮಕತೆಯನ್ನೂ ವಾಸ್ತವತೆಯನ್ನೂ ಸಾಧಿಸಬೇಕಾಗುತ್ತದೆ.

ನಾಟಕ ಕೇವಲ ಮನೋರಂಜನೆ ಮಾತ್ರವಲ್ಲ. ಒಂದು ಕೃತಿಗೆ ರಸಾಸ್ವಾದನೆಯ ಜವಾಬ್ದಾರಿ ಇರುವಂತೆ ಅದರ ಕಾಣ್ಕೆಯೂ ಮುಖ್ಯವಾಗಿರುತ್ತದೆ. ಆ ಹಿನ್ನೆಲೆಯಲ್ಲಿ ರಾಸರವರ ನಾಟಕಗಳು, ಅದರ ಹಿಂದಿನ ಮುಗ್ಧದನಿಯಾದ 'ಮೌಲ್ಯ'ಗಳ ಬಗ್ಗೆಯೂ ಹೆಚ್ಚು ತುಡಿಯುತ್ತದೆ.

ನಾಟಕದ ಮೌಲ್ಯಗಳ ಬಗ್ಗೆ ಮಾತಾಡುವಾಗ ಅದು ರಚಿತವಾದ ಕಾಲದ ಗಣನೆಯೂ ಅತ್ಯಗತ್ಯ. ರಾ.ಸ. ರವರ ಏಕಾಂಕಗಳು ಪ್ರಜಾಮತ, ನಂದಿನಿ, ಕನ್ನಡ ನುಡಿಯಂತಹ ಮುಖ್ಯ ಪತ್ರಿಕೆಗಳಲ್ಲಿ ೫೦–೫೭ರ ಅವಧಿಯಲ್ಲಿ ಪ್ರಕಟವಾದಂಥವುಗಳು. ಆಗಿನ್ನೂ ಸ್ವಾತಂತ್ರ್ಯೋತ್ತರ ವಾಸ್ತವವನ್ನು ಜೀರ್ಣಿಸಿಕೊಂಡಿರದ ಕಾಲ. ಇನ್ನೂ ಆದರ್ಶ, ಮೌಲ್ಯಗಳಂತಹ ಉದಾರತಾವಾದದ ಕಲ್ಪನೆಯಿಂದಲೇ ಹೊರಬಂದಿರದ ದಿನಗಳವು. ಅಕಾರಣವಾಗಿಯೇ ರಾಸರಿಗೆ ಸೀತೆ ಅಗ್ನಿಪರೀಕ್ಷೆ ಪ್ರಸಂಗ, ಊರ್ವಶಿಯ ನಿರಾಕರಣೆಯಂತಹ ಸನ್ನಿವೇಶದಲ್ಲಿ ಆ ಪಾತ್ರಗಳು ವೈಯಕ್ತಿಕ ಸಂವೇದನೆಗಳಲ್ಲಿ ತೊಳಲಾಡುವುದಿಲ್ಲ. ಕೊನೆಗೂ ಮೌನದಲ್ಲಿ ಪರಂಪರೆಯ ಮೌಲ್ಯಗಳಿಗೆ ಶ್ರದ್ಧೆಯಿಂದ ತಲೆಬಾಗಿ ಆದರ್ಶ ಬಾಳನ್ನು ಒಪ್ಪಿ ನಡೆದವರು. ಅಂತೆಯೇ ಸಂಕಲನದ ಶೀರ್ಷಿಕೆಯೂ ಕೂಡ ಕುತೂಹಲತರವಾದುದು. 'ಪಿನಾಕಿನಿ' ಯೆಂದರೆ ರುದ್ರಧನಸ್ಸು. ಮೌಲ್ಯಗಳನ್ನೂ ಆದರ್ಶಗಳನ್ನೂ ಶಿಷ್ಟತೆಯನ್ನೂ ರಕ್ಷಿಸುವ ಸಂಕೇತವಾಗಿ ಬರುವ ಪಿನಾಕಿನಿ ಲೇಖಕರ ಉದ್ದೇಶಿತ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. 'ರಾಸ'ರವರ ಏಕಾಂಕಗಳು ದೃಶ್ಯ ಪ್ರಯೋಗದ ಸಾಧ್ಯತೆಯನ್ನು ಒಳಗೊಂಡಿವೆ. ರೇಡಿಯೋ ಪ್ರಸಾರದಲ್ಲಿ ಯಶಸ್ವೀ ಪ್ರಯೋಗವೆನಿಸಿಕೊಂಡ ಈ ನಾಟಕಗಳಲ್ಲಿ ದೃಶ್ಯವನ್ನೂ ಮಾತಿನಲ್ಲಿ ಕಟ್ಟಿಕೊಡುವ ಶಕ್ತಿಯಿದೆ. ಇಲ್ಲಿಯ ಕೆಲವು ಸೂಚನೆಗಳನ್ನು ಗಮನಿಸುವಾಗ 'ರಂಗಸಾಧ್ಯತೆ' 'ಶ್ರವ್ಯ ಸಾಧ್ಯತೆ'ಯನ್ನು ಕಾಣಬಹುದಾಗಿರುವುದರಿಂದಲೇ ಈ ಏಕಾಂಕಗಳಿಗೆ ಪ್ರಯೋಗ ಮಿತಿ ಇಲ್ಲ. (ರೇಡಿಯೋ ನಾಟಕ ರಂಗನಾಟಕವೆಂಬ ವಿಭಜನೆಯ ದೃಷ್ಟಿಯಿಂದ)

ಗಂಭೀರಕ್ಕಿಂತಲೂ–ತನ್ನ ಕೋಮಲತೆಯಲ್ಲಿ ಅಬ್ಬರಕ್ಕಿಂತಲೂ ಸೌಮ್ಯತೆಯಲ್ಲಿ ಪರಿಣಾಮವನ್ನು ಬೀರುವ ಈ ಏಕಾಂಕಗಳು ಇವತ್ತಿನ ಸಂದರ್ಭದಲ್ಲಿ ತನ್ನ ಆಕರ್ಷಣೆ ಮಹತ್ವವನ್ನು ಕಳೆದುಕೊಳುತ್ತಿರುವ ಸಂದರ್ಭದಲ್ಲಿ ಪುನರ್‌ಪರಿಶೀಲನೆಗೊಳಗಾಗುವ ಅಗತ್ಯವಿದೆ. ಇಲ್ಲವಾದಲ್ಲಿ ಏಕಾಂಕಗಳಂತಹ ಪ್ರಚಾರಗಳು ಕಣ್ಮರೆಯಾಗುವ ಅಪಾಯವಿದೆ. ಆ ದೃಷ್ಟಿಯಿಂದ ರಾಸರವರ ನಾಟಕಗಳ ಪುನರ್ ಪರಿಶೀಲನೆ ಸ್ವಾಗತಾರ್ಹ !

ಸ್ವರ್ಗ ಸೋಪಾನ

ಪ್ರೊ. ಕೆ. ನಾಗೇಂದ್ರಪ್ಪ

ಭರತಖಂಡದ ಹಿರಿಯ ಸಂಸ್ಕೃತಿಯ ಮಹೋತ್ತುಂಗ ಶಿಖರಗಳಂತೆ ಬೆಳೆದು ನಿಂತಿರುವ ರಾಮಾಯಣ–ಮಹಾಭಾರತ ಕಥೆಗಳ ಹಿನ್ನೆಲೆಯನ್ನು ಹೊಂದಿರುವ ನಾಲ್ಕು ಸುಂದರ ಕಥೆಗಳು ಇಲ್ಲಿವೆ. ಕತೆಗಳ ಮೂಲ ಪುರಾಣದಲ್ಲಿದ್ದರೂ ಅವು ಬಿಟ್ಟಿರುವ ಫಲ ಬೇರೆ. ಪುರಾಣದ ಹಳೆಯ ಕಥಾಭಿತ್ತಿಯ ಮೇಲೆ ಕತೆಗಾರರು ನೂತನವಾದ ಚಿತ್ರಗಳನ್ನು ಬಿಡಿಸಿದ್ದಾರೆ. ಹಿಂದಿನ ಮಹಾಪುರಾಣಗಳ ಪ್ರಧಾನ ವ್ಯಕ್ತಿಗಳನ್ನು ಲೇಖಕರು ನೋಡಿರುವ ರೀತಿಯಲ್ಲಿ ಹೊಸತನವಿದೆ. ಪಾತ್ರಗಳಿಗೆ ಮಾತ್ರ ಕತೆಗಾರರು ಆ ಮಹಾಕಾವ್ಯಗಳಿಗೆ ಋಣಿಯಾಗಿದ್ದಾರೆಯೇ ವಿನಾ ಸನ್ನಿವೇಶಗಳಿಗಲ್ಲ. ಇಲ್ಲಿ ಬಂದಿರುವ ಯಾವ ಸನ್ನಿವೇಶವೂ ಆ ಪ್ರಕರಣಗಳಲ್ಲಿ ಈ ರೀತಿಯಲ್ಲಿ ಬಂದಿಲ್ಲ. ಹಿಂದಿನ ಆ ದಿವ್ಯ ಚೇತನಗಳ ಮೂಲ ವಿಗ್ರಹಕ್ಕಾಗಲೀ, ಉದಾತ್ತ ವ್ಯಕ್ತಿತ್ವಕ್ಕಾಗಲೀ ಕಿಂಚಿತ್ತೂ ಊನಬರದಂತೆ ಎಚ್ಚರಿಕೆ ವಹಿಸಿ ಲೇಖಕರು ಅಲ್ಲಿಯ ಮಧುರಭಾವಗಳನ್ನು ಹೊಸ ಸನ್ನಿವೇಶಗಳ ನೆರವಿನಿಂದ ಪೋಷಿಸಿದ್ದಾರೆ. ಮೂಲ ಪಾತ್ರಗಳ ಮೇಲೆ ಹೊಸ ದಿಕ್ಕಿನಿಂದ ಬೆಳಕು ಚೆಲ್ಲಿ ಅವು ನವಪ್ರಭೆಯಿಂದ ಮಿರ ಮಿರನೆ ಮಿರುಗುವಂತೆ ಮಾಡಿದ್ದಾರೆ.

ಇಲ್ಲಿಯ ಕಥೆಗಳಲ್ಲೆಲ್ಲ ಅತ್ಯಂತ ಸುಂದರವಾದ ಕಲಾಕೃತಿ 'ಸ್ವರ್ಗಸೋಪಾನ'. ಇದು ಪುಸ್ತಕದ ಅರ್ಧಕ್ಕಿಂತಲೂ ಹೆಚ್ಚು ಭಾಗದಲ್ಲಿ ಹರಡಿಕೊಂಡಿದೆ. ಶ್ರೀರಾಮಚಂದ್ರನ ಏಕಪತ್ನಿತ್ವವನ್ನು ಅಗ್ನಿಪರೀಕ್ಷೆಗೆ ಗುರಿಮಾಡಲು ಅವನ ದೇಹದ ಸ್ವರ್ಗೀಯ ಸೌಂದರ್ಯದಿಂದ ಆಕರ್ಷಿತಳಾದ ದೇವೇಂದ್ರನ ಅಣುಗಿ ಜ್ಯೋತ್ಸ್ನಾದೇವಿ ಪಂಚವಟಿಗೆ ಬಂದು, ದೇವಲೋಕದ ತನ್ನ ಎಲ್ಲ ಒನಪು–ವಯ್ಯಾರಗಳಿಂದ ಅವನ ಹೃದಯವನ್ನು ಅಪಹರಿಸಲು ಪ್ರಯತ್ನಪಟ್ಟು, ನಿರಾಶಳಾಗಿ, ಕೊನೆಗೆ ಅವನ ಆಸದ್ಗುಣಮಣಿಯ ಕಾಂತಿಯನ್ನು

ಈ ಕಥಾಗುಚ್ಛ 'ಸ್ವರ್ಗಸೋಪಾನ', 'ಬದುಕಿಗೊಂದು ಬೆಳಕು', 'ಭಾರತದ ಬೇರೊಂದು ತಿರುವು' ಮತ್ತು 'ವ್ಯಾಸರ ದಾಸುದೇವ' ಎಂಬ ನಾಲ್ಕು ಸಣ್ಣ ಕತೆಗಳನ್ನೊಳಗೊಂಡಿದೆ. ಕರ್ನಾಟಕ ಸರಕಾರ ೧೯೬೨ರಲ್ಲಿ ಈ ಕಥಾಸಂಕಲನ ಈ ಪ್ರಕಾರದಲ್ಲಿ ಅತ್ಯುತ್ತಮವಾದುದೆಂದು ಪರಿಗಣಿಸಿ ಮೊದಲನೆಯ ಬಹುಮಾನವಾದ ರೂ ೫೦೦–ಗಳನ್ನು ಕೊಟ್ಟಿದೆ.

ಇದನ್ನು ಪ್ರೊ॥ ಕೆ. ನಾಗೇಂದ್ರಪ್ಪನವರು 'ಪ್ರಬುದ್ಧ ಕರ್ನಾಟಕ'ದ ಸಂಚಿಕೆಯಲ್ಲಿ ವಿಮರ್ಶೆ ಮಾಡಿದ್ದರು. ಅದನ್ನು ಇಲ್ಲಿ ಬಳಸಿಕೊಳ್ಳಲು ಅನುಮತಿಯನ್ನಿತ್ತ ಅವರಿಗೆ ನಮ್ಮ ನಮನಗಳು ಸಲ್ಲುತ್ತಿದೆ.—ಸಂ.

ಲೋಕಕ್ಕೆಲ್ಲ ಚೆಲ್ಲಿ ತಂಪನ್ನುಂಟುಮಾಡಿದ ಕತೆ ಇಲ್ಲಿ ಕುಡಿಯೊಡೆದಿದೆ. ಕಥೆ ಅತ್ಯಂತ ಕಲಾತ್ಮಕವಾಗಿದೆ. ವಾಲ್ಮೀಕಿ ರಾಮಾಯಣದ ಶ್ರೀರಾಮ ಲಕ್ಷ್ಮಣ ಸೀತೆಯರಿಗಿಂತಲೂ ಇಲ್ಲಿ ಸೀತಾ ರಾಮಲಕ್ಷ್ಮಣರು ನಮ್ಮ ಆದರಾಭಿಮಾನಗಳಿಗೆ ಹೆಚ್ಚು ಪಾತ್ರರಾಗುತ್ತಾರೆ. ಅವರ ಬಾಯಿಂದ ಬರುವ ಒಂದೊಂದು ಮಾತೂ ನಮ್ಮ ಹಿರಿಯ ಸಂಸ್ಕೃತಿಯ ಸಾರ ಸರ್ವಸ್ವದ ಪ್ರತೀಕವಾಗಿವೆ. ಅವರ ಸುಸಂಸ್ಕೃತ ಹೃದಯದ ಕಂಪನ್ನು ಹೊರಸೂಸುತ್ತಿವೆ ; ಮಾನವನ ಜೀವಿತದ ಸರ್ವಶ್ರೇಷ್ಠ ಆದರ್ಶವನ್ನು ಸಾರುತ್ತಿವೆ.

ಭೋಗ ವಿಲಾಸಗಳಿಗೆ ಮೀಸಲಾದ ದೇವಲೋಕದ ಸುಂದರಿಯರ ಜೀವನದ ಚಿತ್ರಣ ಇಲ್ಲಿ ಅನುಪಮವಾಗಿ ಬಂದಿದೆ. ಅಲ್ಲಿಯ ಪರಿಸರ ಚಿತ್ರಣವೂ ಮನೋಹರವಾಗಿದೆ. ಉದಾತ್ತ ಶೃಂಗಾರ ರಚನೆಯಲ್ಲಿ ಸಮೇತನಹಳ್ಳಿ ರಾಮರಾಯರು ಅದ್ವಿತೀಯರು. ಅಶ್ಲೀಲತೆಯ ಅಂಚನ್ನೂ ಸೋಂಕದ ದಿವ್ಯ ಮನೋಹರಶೃಂಗಾರ ಚಿತ್ರವನ್ನು ಅವರು ತುಂಬ ನೈಪುಣ್ಯದಿಂದ ಕೊಟ್ಟಿದ್ದಾರೆ. ಉದಾತ್ತಪಾತ್ರ ಚಿತ್ರಣ, ಉತ್ತಮ ಸನ್ನಿವೇಶ ರಚನೆ, ಹೃದ್ಯವಾದ ಶೈಲಿ ಇವೇ ಮೊದಲಾದವು ಕಥೆಯ ಸೊಗಸನ್ನು ಹೆಚ್ಚಿಸಿವೆ. 'ಸ್ವರ್ಗಸೋಪಾನ' ಓದುಗರಿಗೆ ರಸದೌತಣವನ್ನುಂಟುಮಾಡುವ ಸುಂದರ ಕಲಾಕೃತಿ.

'ಬದುಕಿಗೊಂದು ಬೆಳಕು' ಇದೂ ಕೂಡ ರಾಮಾಯಣಕ್ಕೆ ಸಂಬಂಧಪಟ್ಟ ಕಥೆ ಶ್ರೀರಾಮಚಂದ್ರನ ಬಾಳಿಗೆ ಸೀತೆ ಹಾಗೂ ಲವ-ಕುಶರು ಬೆಳಕಾಗಿ ಪರಿಣಮಿಸಿದ ಕತೆ ಇಲ್ಲಿ ಮನಮೋಹಕವಾಗಿ ನಿರೂಪಿತವಾಗಿದೆ. ಶ್ರೀರಾಮಚಂದ್ರ ಅಶ್ವಮೇಧಯಾಗವನ್ನು ಪ್ರಾರಂಭಮಾಡಿದಾಗ ಕಾಡುಪಾಲಾದ ಸೀತಾದೇವಿಯನ್ನು ನೋಡುವ ತವಕ ಜನಕ ಮಹರ್ಷಿಗೆ ಹೆಚ್ಚಾಗಿ ಅವನು ವಾಲ್ಮೀಕಿಯಾಶ್ರಮಕ್ಕೆ ಹೋಗುತ್ತಾನೆ. ಆಗ ಸೀತೆಯ ಸಡಗರ ಹೇಳತೀರದು. ತಂದೆಯನ್ನು ಅತಿ ಸಂಭ್ರಮದಿಂದ ಸ್ವಾಗತಿಸುತ್ತಾಳೆ. ಲವ-ಕುಶರ ಸಂತೋಷಕ್ಕಂತೂ ಪಾರವೇ ಇಲ್ಲ. ಕುತೂಹಲದಿಂದ ಅವರು ನೂರಾರು ಪ್ರಶ್ನೆಗಳನ್ನು ಕೇಳಿ ಅಜ್ಜನನ್ನು ಪೀಡಿಸುತ್ತಾರೆ. ಅದೇ ದಿನ ಸಂಜೆ ಯೂಪಸ್ತಂಭಕ್ಕೆಂದು ಅರಣ್ಯಕ್ಕೆಂದು ಹೋದ ಅವರು ಶ್ರೀರಾಮನ ಯಾಗದ ಕುದುರೆಯನ್ನು ನೋಡಿ, ಹಿಡಿದು ಕಟ್ಟಿ, ಘೋರಯುದ್ಧ ಮಾಡಿ, ಶ್ರೀರಾಮನ ಕಡೆಯವರೆಲ್ಲ ಕಂಠಗತಪ್ರಾಣರಾಗುವಂತೆ ಮಾಡುತ್ತಾರೆ. ವಾಲ್ಮೀಕಿಮಹರ್ಷಿಯ ಕೃಪೆಯಿಂದ ಅವರೆಲ್ಲ ಬದುಕಿಬಂದು ಸೀತೆಯನ್ನು ಅಯೋಧ್ಯೆಗೆ ಕರೆದೊಯ್ಯುತ್ತಾರೆ-ಇದು ಕಥಾವಸ್ತು. ಕಥೆ ಹಳೆಯದಾದರೂ ಅದನ್ನು ಹೇಳುವ ರೀತಿಯಲ್ಲಿ ನವೀನತೆಯಿದೆ. ಇಲ್ಲಿ ಸೀತೆಯೇ ಪ್ರಧಾನಪಾತ್ರ. ಅವಳೇ ಓದುಗರ ಮನಸೆಳೆಯುವ ವ್ಯಕ್ತಿ. ಆಕೆಯು ತನ್ನ ಆದರ್ಶಗುಣಗಳಿಂದ, ಉದಾತ್ತಮನೋಭಾವದಿಂದ ಲೋಕಪೂಜ್ಯಳಾಗಿದ್ದಾಳೆ.

'ಸ್ವರ್ಗಸೋಪಾನ' 'ಬದುಕಿಗೊಂದು ಬೆಳಕು' ರಾಮಾಯಣಕ್ಕೆ ಸಂಬಂಧಪಟ್ಟ ಕತೆಗಳಾದರೆ 'ಭಾರತದ ಬೇರೊಂದು ತಿರುವು' 'ವ್ಯಾಸರ ವಾಸುದೇವ' ಮಹಾಭಾರತಕ್ಕೆ ಸಂಬಂಧಿಸಿದ ಕತೆಗಳು.

'ಭಾರತದ ಬೇರೊಂದು ತಿರುವು' ಮಹಾಭಾರತದ ಕೊನೆಯ ಘಟ್ಟದ ಘಟನೆ

ಯನ್ನು ಕುರಿತಾದ ಕಥೆ. ಆದರೂ ವಿಚಾರ ಪ್ರಚೋದಕವಾದ ಕಥೆ. ಇದರಲ್ಲಿ ಭಾರತದ ಕಥೆಯನ್ನು ಲೇಖಕರು ಹೊಸದೃಷ್ಟಿಯಿಂದ ಪರಿಭಾವಿಸಿದ್ದಾರೆ. ಇಲ್ಲಿ ಕುರುಕ್ಷೇತ್ರ ಯುದ್ಧವೇ ನಡೆಯುವುದಿಲ್ಲ. ಜೀವಹತ್ಯೆ, ರಕ್ತಪಾತ–ಯಾವುದೂ ನಡೆಯುವುದಿಲ್ಲ. ದೂತನಾಗಿ ಹಸ್ತಿನಾವತಿಗೆ ಬಂದ ಕೃಷ್ಣ ಕರ್ಣನ ಕಿವಿಯಲ್ಲಿ ಅವನ ಜನನದ ವಿಷಬೀಜ ವನ್ನು ಬಿತ್ತಿಹೋಗುತ್ತಾನೆ. ಅವನು ಪಾಂಡವರ ಹಿರಿಯಣ್ಣ ಎಂಬುದನ್ನು ತಿಳಿದ ಸುಯೋಧನ ಆ ತನ್ನ ಪ್ರಾಣಸ್ನೇಹಿತನಿಗೆ ಸಾಮ್ರಾಜ್ಯ ಪದವಿಯನ್ನು ಧಾರೆಯೆರೆದು ಕೊಡಲು ನಿಂತ ನಿಲುವಿನಲ್ಲೇ ನಿರ್ಧರಿಸುತ್ತಾನೆ. ಆ ನಿರ್ಧಾರ ಎಲ್ಲರಿಗೂ ಪ್ರಿಯವಾಗಿ ಕರ್ಣ ಸಮ್ರಾಟ ಪದವಿಯನ್ನು ಅಲಂಕರಿಸುತ್ತಾನೆ. ದುರ್ಯೋಧನನ ಉದಾರ ಬುದ್ಧಿ ಯಿಂದ ಕೌರವ–ಪಾಂಡವರ ಹಿತ ಸಾಧಿತವಾಗುತ್ತದೆ.

ಇಲ್ಲಿಯ ದುರ್ಯೋಧನ ಮೂರ್ಖನಲ್ಲ. "ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳಂ" ಎಂದು ಪಾಂಡವನಿಂದಲೇ ಪಾಂಡವರನ್ನು ನಿರ್ನಾಮಗೊಳಿಸುತ್ತೇನೆ ಎಂದು ಹೇಳುವ ನೀಚನಲ್ಲ. ಅಷ್ಟಕ್ಕೂ ಕರ್ಣನ ಜನನದ ವಿಚಾರ ಅವನಿಗೆ ತಿಳಿದಿರುವುದೇ ಇಲ್ಲ. ಅವನಿಗೆ ಆಗಿನ ರಾಜಕಾರಣ ಅಪಾರ ತಲೆನೋವು ತಂದಿತ್ತು. ಯಾವೊಬ್ಬ ಹುಡುಗನನ್ನು ಬೇಕಾದರೂ ಸಿಂಹಾಸನದ ಮೇಲೆ ಕುಳ್ಳಿರಿಸಿ ತೃಪ್ತಿಯ ನಿಟ್ಟುಸಿರನ್ನು ಬಿಡಲು ಅವನು ಸಿದ್ಧನಾಗಿದ್ದ. ಆ ಸಮಯಕ್ಕೆ ಕರ್ಣನು ಪಾಂಡವರ ಹಿರಿಯನೆಂಬುದನ್ನು ತಿಳಿದು ದುರ್ಯೋಧನನಿಗೆ ಅಪರಿಮಿತ ಆನಂದವಾಯಿತು. ಕೂಡಲೆ ಅವನು ತನ್ನ ಆತ್ಮೀಯ ಗೆಳೆಯನಿಗೆ ಪಟ್ಟಕಟ್ಟಿ ಸಂತೋಷಪಟ್ಟ.

ಕರ್ಣನನ್ನು ಪ್ರಭುವನ್ನಾಗಿ ಮಾಡಿಕೊಂಡು ಕೌರವ–ಪಾಂಡವರು ಸಹಬಾಳ್ವೆ ಯನ್ನು ನಡೆಸುವುದು ಪಾಂಡವರಿಗೆಲ್ಲ ಒಪ್ಪಿಗೆಯಾದರೂ ಭೀಮ–ದ್ರೌಪದಿಯರಿಗೆ ಒಪ್ಪಿಗೆಯಾಗಲಿಲ್ಲ. ಅವರಿಬ್ಬರನ್ನು ಕೃಷ್ಣವಿದುರರು ಬಹಳ ಕಷ್ಟಪಟ್ಟು ಒಪ್ಪಿಸ ಬೇಕಾಯಿತು.

ಮಹಾಭಾರತದ ಯುದ್ಧವೇ ನಡೆಯಲಿಲ್ಲವೆಂಬಂತೆ ಪರಿಭಾವಿಸುವುದು ಹೊಸತೇ ನಲ್ಲ. ಭಾಸಾದಿಕವಿಗಳು ಹಿಂದೆಯೇ ಹಾಗೆ ಭಾವಿಸಿದ್ದರು. ಆದರೆ ಕರ್ಣನಿಗೆ ಪ್ರಭುತ್ವ ವನ್ನೊಪ್ಪಿಸಿ ಸಕ್ಕರೆಯ ಸಂಬಂಧವನ್ನು ಕೌರವ–ಪಾಂಡವರಿಬ್ಬರೂ ಉಳಿಸಿಕೊಂಡರು ಎಂಬ ಭಾವನೆ ಮಾತ್ರ ಹೊಸತು. ಆ ದೃಷ್ಟಿಯಿಂದ ಈ ಕತೆಗೆ ಒಂದು ನವೀನ ರೂಪ ಬಂದಿದೆ.

ಇಲ್ಲಿ ಯುದ್ಧ ಯಾರಿಗೂ ಬೇಕಿಲ್ಲ. ಸಮರ ಪಿಶಾಚಿಯನ್ನು, ಆ ಮಹಾಮಾರಿ ಯನ್ನು ಆಹ್ವಾನಿಸುವ ಕೀಳು ಮಟ್ಟಕ್ಕೆ ಪಾಂಡವರಲ್ಲ, ಕೌರವರು ಕೂಡ ಇಳಿಯಲಿಲ್ಲ. 'ಧರ್ಮದ ಉತ್ಥಾನಕ್ಕೆ ರಕ್ತಪಾತ ಅವಶ್ಯವೇನಲ್ಲ' ಎಂಬುದು ವ್ಯಾಸ ಮಹರ್ಷಿಯ ತಾರಕ ಮಂತ್ರ.

ಅಂತೂ ಇಲ್ಲಿನ ಪಾತ್ರಗಳ ಮನೋಭಾವ ಭಿನ್ನವಾದುದು. ಇಲ್ಲಿ ಭಾರತದ ಕತೆ

ಬೇರೊಂದು ದಿಕ್ಕಿಗೆ ತಿರುಗಿ ಸುಖಶಾಂತಿಗಳನ್ನು ಅರಸುತ್ತ ಹೊರಟಿದೆ. ಇಲ್ಲಿಯ ಪಾತ್ರಗಳೆಲ್ಲ ಆದಕ್ಕನುರೂಪವಾಗಿ ಮೈತಳೆದಿವೆ.

ವ್ಯಾಸ ಮಹರ್ಷಿಗಳ ಕಲ್ಪನೆಯಲ್ಲಿ ಶ್ರೀಕೃಷ್ಣನೆಂಥವನು ಎಂಬುದನ್ನು ಸಾರುವ ಕಥೆ 'ವ್ಯಾಸರ ವಾಸುದೇವ.' ಇದು ಕುರುಕ್ಷೇತ್ರ ಯುದ್ಧ ನಡೆದ ಮೇಲಿನ ಕಥೆಯನ್ನು ವಸ್ತುವಾಗಿ ಸ್ವೀಕರಿಸಿರುವ ಕಥೆ. ಕೌರವರ ಕಡೆ ಸರ್ವನಾಶವಾಗಿದೆ. ಎಲ್ಲಿ ನೋಡಿದರೂ ಗೋಳೇ ಗೋಳು. ಸುಯೋಧನನಿಗಾಗಿ ಮರುಗಲು ಉಳಿದಿರುವವನು ಬಲರಾಮನೊಬ್ಬನೇ. ತನ್ನ ಪ್ರಾಣವಾದ ಪಾಂಡವರನ್ನು ಸಂತವಿಟ್ಟು ಶ್ರೀ ಕೃಷ್ಣ ದ್ವಾರಕೆಗೆ ಬಂದು ಅಣ್ಣ ಬಲರಾಮನನ್ನು ಸಮಾಧಾನಪಡಿಸಿ ಮಾತಾಪಿತೃಗಳನ್ನು ಸಂತೋಷಪಡಿಸುತ್ತಾನೆ.

ಬಲರಾಮನಿಗೆ ದುರ್ಯೋಧನನಿಗಾದ ಅನ್ಯಾಯವನ್ನು ಸಹಿಸಲಾಗಲಿಲ್ಲ. ಪಾಂಡವರು ಧರ್ಮದ ಹೆಸರಿನಲ್ಲಿ ನಡೆಸಿದ ಅತ್ಯಾಚಾರ ಅವನನ್ನು ಕೆರಳಿಸಿತ್ತು. ಶಿಷ್ಯವಾತ್ಸಲ್ಯದಿಂದ ಅವನು ಕೆರಳಿ ಕೆಂಡವಾಗಿ ಭೀಷ್ಮ, ದ್ರೋಣ, ಕರ್ಣ, ದುರ್ಯೋಧನರನ್ನು ವಧಿಸುವಾಗ ತೋರಿಸಿದ ಪಾಂಡವರ ಧರ್ಮಬಾಹಿರ ವರ್ತನೆಯನ್ನು ಖಂಡಿಸಿದಾಗ ವ್ಯಾಸ ಮಹರ್ಷಿಗಳು ಪಾಂಡವರ ವರ್ತನೆ ಹೇಗೆ ಧರ್ಮಪರವಾದುದು ಎಂಬುದನ್ನು ವಿವರಿಸಿ ಹೇಳಿ ಬಲರಾಮನನ್ನು ಸಮಾಧಾನಪಡಿಸುತ್ತಾರೆ.

ಕುರುಕ್ಷೇತ್ರ ಯುದ್ಧದಿಂದಾದ ಪ್ರಾಣಹಾನಿಯನ್ನು ಶ್ರೀ ಕೃಷ್ಣ ತಪ್ಪಿಸಲು ಸಾಧ್ಯವಿರಲಿಲ್ಲವೆ ? ಭೀಷ್ಮ, ದ್ರೋಣ, ಕರ್ಣ, ದುರ್ಯೋಧನರನ್ನು ಕೊಲ್ಲುವಾಗ ಪಾಂಡವರು ಅಧರ್ಮದ ಹಾದಿಯನ್ನು ತುಳಿದರೇ ಹೇಗೆ ?–ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕಾಗಿ ರಚಿತವಾಗಿದೆ ಈ ಕಥೆ. ಪೂರ್ಣ ದೃಷ್ಟಿಯಿಂದ ನೋಡಿದಾಗ ಶ್ರೀ ಕೃಷ್ಣನ ನಡತೆ ಧರ್ಮಪರವಾದುದು. ಅವನ ಮೇಲೆ ಹೊರಿಸಿದ ಆರೋಪಗಳೆಲ್ಲ ಸುಳ್ಳಿನ ಬೊಂತೆಗಳು ಎಂಬುದನ್ನು ಸಾಧಿಸಿ ತೋರಿಸಲು ಲೇಖಕರು ಶ್ರಮಿಸಿ ಸಫಲರಾಗಿದ್ದಾರೆ. ವ್ಯಾಸರ ವಾಸುದೇವ ಒಂದು ಸುಂದರವಾದ ಹಾಗೂ ವಿಚಾರಪೂರ್ಣ ಕಥೆ.

'ಸ್ವರ್ಗ ಸೋಪಾನ' ಅತ್ಯಂತ ಅಮೂಲ್ಯವಾದ ಹಾಗೂ ರಸಭರಿತವಾದ ಕಥಾ ಸಂಕಲನ.

ದ್ರೋಹಾಡಂಬರ

ಶಕುಂತಲಾ ಪ್ರಸಾದ್

ಒಂಭತ್ತು ನೂರು ಆರು ವರ್ಷಗಳ ಹಿಂದೆ ಕನ್ನಡ ನಾಡಿನ ಕಬ್ಬಿನೀ ತೀರದಲ್ಲಿ ಎರಡು ರಾಜ ಮನೆತನಗಳು ಬಾಳಿದ್ದವು. ಅವುಗಳಲ್ಲಿ ಒಂದು ನವಲೆ ನಾಡಿನ ಕುಟಿವನ್ದ ಕುಲ. ಏಚರಾಜನು ಆ ಕುಲದ ಅರಸು. ಮತ್ತೊಂದು ಕುಲ ನುಗುನಾಡಿನ ಕುಡಿಯರ ಕುಲ. ಈ ಕುಲದ ಅರಸು ರವಿಗನು. ರವಿಗನ ಮಗಳೇ ದೇಕಬ್ಬೆ. ಈ ದೇಕಬ್ಬೆಯನ್ನು ಏಚರಾಜನು ಮದುವೆಯಾಗಿದ್ದನು. ಇವೆರಡು ಕುಲಗಳು ಕನ್ನಡ ರಾಜ ಮನೆತನದವು. ಈ ಎರಡು ಮನೆತನಗಳು ತಂಜಾವೂರಿನಲ್ಲಿ ಆಳುತ್ತಿದ್ದ ಚೋಳರ ಸಾಮಂತರಾಗಿದ್ದವು, ಆಗ ಚೋಳ ರಾಜ ಪೀಳಿಗೆಯ ಅರಸು ರಾಜೇಂದ್ರ ದೇವನು ರಾಜ್ಯವಾಳುತ್ತಿದ್ದನು. ಈ ಸಂದರ್ಭದಲ್ಲಿ ನಮ್ಮ ಈಗಿನ ತಲಕಾಡು ಅವರ ಆಗಿನ ಒಂದು ಪ್ರಾದೇಶಿಕ ರಾಜಧಾನಿಯಾಗಿದ್ದಿತು.

ಅಹಿತಘರಟ್ಟನೆಂದೆನಿಸಿದ್ದ ಏಚರಾಜನು ದಾಯಿಗನೊಬ್ಬನನ್ನು ಇರಿದಿದ್ದನು. ಆದ ಕಾರಣ ಚೋಳರು ಅವನನ್ನು ತಲಕಾಡಿಗೆ ಒಯ್ದು ಅವನ ತಲೆಯನ್ನು ತೆಗಿಸಿಬಿಟ್ಟರು. ಈ ಸುದ್ದಿಯನ್ನು ಕೇಳಿದ ರಾಣಿ ದೇಕಬ್ಬೆಯು ಮಹಾಸತಿಯಾಗಿ ದೇವಲೋಕಕ್ಕೆ ಹೋದಳು.

೧೦೫೭ ವರ್ಷದಲ್ಲಿ ದೊರೆತಿರುವ ಶಾಸನದಲ್ಲಿ ಒಟ್ಟು ೮ ವೃತ್ತಗಳು, ೧೮ ಕಂದಗಳು ೨ ಸಾಲು ಗದ್ಯಗಳೂ ಇವೆ. ಅವುಗಳಲ್ಲಿ ೫ ವೃತ್ತಗಳು, ೮ ಕಂದಗಳು ೬ ರವಿಗನನ್ನು ಅವನ ವಂಶಾವಳಿ ಶೌರ್ಯವನ್ನು ಹೇಳುತ್ತವೆ. ೩ ವೃತ್ತಗಳು ೫ ಕಂದಗಳು ದೇಕಬ್ಬೆ ಕೊಂಡಕ್ಕೆ ನಡೆದದ್ದನ್ನು ಮತ್ತು ಅವರ ತಾಯಿ ತಂದೆಯರ ಪ್ರಲಾಪವನ್ನು ಹೇಳುತ್ತವೆ. ಏಚನಿಂದ ಕೊಲ್ಲಲ್ಪಟ್ಟ ದಾಯಿಗನ ಹೆಸರು ಶಾಸನದಲ್ಲೆಲ್ಲೂ ಉಕ್ತವಾಗಿಲ್ಲ. ದ್ರೋಹಾಡಂಬರವನ್ನು ನಿಯಂತ್ರಿಸಿದ ಅವನಿಗೆ ಇಲ್ಲಿ ಮಾಳರಸನೆಂಬ ನಾಮಕರಣವಾಗಿದೆ. ನಮ್ಮ ಕನ್ನಡ ನಾಡಿನ ಶಾಸನದ ಗದ್ಯಭಾಗವನ್ನು ನೋಡುವುದಾದರೆ ಅಂದು ಬಳಕೆಯಲ್ಲಿದ್ದಿರಬಹುದಾದ ಶೈಲಿ ಎಂತೆಂಬುದರ ಬಗ್ಗೆ ಒಂದು ಚಿತ್ರ ಮೂಡುತ್ತದೆ. ಗತಕಾಲದ ಅಂತಹ ಹಿನ್ನೆಲೆಯನ್ನು ಮರುಮೂಡಿಸುವ ಸಲುವಾಗಿ ಸಂಸ ಕವಿವರ್ಯರು ಆ ಶೈಲಿಯನ್ನು ನಾಟಕಗಳಲ್ಲಿ ಬಳಸಿ ಯಶಸ್ವಿಯಾಗಿದ್ದಾರೆ. ಇಂತಹ ದಿಸೆಯಲ್ಲಿ ಸಮೇತನಹಳ್ಳಿ ರಾಮರಾಯರು ಕೂಡ ಮುನ್ನಡೆದಿದ್ದಾರೆ.

ಸಮೇತನಹಳ್ಳಿ ರಾಮರಾಯರ ನಾಟಕ ದ್ರೋಹಾಡಂಬರವು ಹದಿಮೂರು

ಪ್ರವೇಶಗಳನ್ನು ಹೊಂದಿರುವ ನಾಟಕವಾಗಿದೆ. ಈ ನಾಟಕದಲ್ಲಿ ಸುಮಾರು ಹದಿನಾಲ್ಕಕ್ಕೂ ಮೇಲ್ಪಟ್ಟ ಪಾತ್ರಗಳು ಇದ್ದರೂ ಸಮಯೋಚಿತ ರೀತಿಯಲ್ಲಿ ಸೊಗಸಾದ ಸಂಭಾಷಣೆಯನ್ನು ಹೊಂದಿದೆ. ಅವುಗಳಿಗೆ ಉದಾಹರಣೆಯನ್ನು ಹೇಳುವುದಾದರೆ, ಮೂರನೇ ಪ್ರವೇಶದಲ್ಲಿ ಬರುವ ಮಧುರಾಂತಕನ ಸಂಭಾಷಣೆಯನ್ನು ನೋಡಬಹುದು. "ಏನು ಕೆಚ್ಚು ! ವಿವೇಕ ವಿನಯಗಳೆಲ್ಲವೂ ಈ ನಾಡಿನಲ್ಲಿ ನಾಶವಾಗಿ ಹೋಗಿ, ಅವಿಧೇಯತೆ ಅರಾಜಕತೆಯ ಕುಣಿದಾಟಕ್ಕೆಡೆಮಾಡಿಕೊಟ್ಟಿರುವ ಕೊತ್ತಣೆಯಿದಿರಬೇಕು. ಏಚರಾಜ, ಅದೂ ನಿಮ್ಮ ಕಣ್ಣೆದುರಿನಲ್ಲಿ ಅಜೇಯನಾದ ಸೋಳ ಸೈನ್ಯದ ಮಹಾದಣ್ಡನಾಯಕನ ಈ ಅವಹೇಳನ ! ಭಕ್ತರು ಉಂಡು ಮಿಕ್ಕ ಎಂಜಲನ್ನುಣಿಸಿ ಹೆಂಡತಿ ಮಕ್ಕಳನ್ನು ಪೊರೆವ ಪೊಳ್ಳು ಹಾರುವನಾ ವೈಖಾಸನನತ್ತ, ಹಗಲೆಲ್ಲ ವೈಯಾರೆ ಒನಪುಗಳಲ್ಲಿ ಅಂಗ ಅಂಗಗಳ ಸೌಂದರ್ಯ ಸೌಷ್ಠವತೆ ಸೌಕುಮಾರ್ಯಗಳನ್ನು ಸುಟ್ಟಿ ತೋರಿ, ಗಾಳದೆರೆಯನ್ನೆರಚಿ, ರಾತ್ರಿಯಲ್ಲಿ ಅರಸಿ ಬಂದ ರಸಿಕರಿಗೆ ಒಡಲನ್ನೊಡ್ಡಿ ...." ಎನ್ನುವ ಮಾತಿಗೆ ಏಚರಾಜ "ಅಧಿಕಾರವೇ ಜನವನ್ನಾಳಬಲ್ಲದು" ಎಂಬ ದುಟ್ಟ ನಂಬಿಕೆಯೇ ಆತನಿಗೇ ಎಂದು, ದೈವ ಕೈಂಕರ್ಯವನ್ನು ನೆರವೇರಿಸಲು ಮುಂದಾಗುವುದು ಈ ಪ್ರವೇಶದಲ್ಲಿ ಕಂಡುಬರುತ್ತದೆ.

ಹಾಗೆಯೇ ಐದನೇ ಪ್ರವೇಶದಲ್ಲಿ ಬರುವ ಮಾಳರಸರ ಸಂಭಾಷಣೆಯು ಉಚಿತಾನುಚಿತಗಳಿಂದ ಕೂಡಿದೆ. 'ಆಕೆ ಶಾಸ್ತ್ರಸಂಪನ್ನಳೆಂಬುದರಲ್ಲಿ ಕಲಾಕೋವಿದೆಯೆಂಬುದರೆಲ್ಲಿ, ಎಳ್ಳನಿತೂ ಸಂಶಯವಿಲ್ಲ. ಪ್ರಭು, ದಿಗಂತದಂತಿಗಳ ಧವಳದಂತ ಕಾಂತಿಯನ್ನು ಮುಸಕಾಗಿಸುವ ಕೀರ್ತಿಯನ್ನು ತಂದುಕೊಟ್ಟ ಸತ್ವಶಾಲಿನಿಯೇ ಆದರೂ, ಗುಣಪಕ್ಷಪಾತಿಯಾದ ಪ್ರಭುವು ಹಣತೆಯಿಂದುದ್ಭವಿಸುವ ಬೆಳಕಿನ ಚೆಲುವನ್ನು ಕಂಡರೇ ಹೊರತು, ಅದರ ಕೆಳಗಣ ನೆರಳನ್ನು ಕಾಣಲಿಲ್ಲ.'

ಆರನೇ ಪ್ರೇವೆಶದಲ್ಲಿ ಬರುವ ಶ್ರೀ ವಿಷ್ಣುಘಳಿಸಾಸ, ಈತನ ಸಂಭಾಷಣೆಯಲ್ಲಿ ಬರುವ ಮಾತುಗಳು ಲೋಕಕಲ್ಯಾಣದ ಮಾತಾಗಿದ್ದು ಆಚಂದ್ರಾರ್ಕವಾಗಿ ಉಳಿಯುವುದಾಗಿದೆ. ಮನುಕುಲದ ಗುರಿಯ ಬಗ್ಗೆ ಹೇಳುತ್ತಾ, ನಾಡಸಂಸ್ಕೃತಿಯನ್ನು ಮೆರೆಸುವ ಈ ಮಾತು ನಾಟಕದ ಮೌಲ್ಯವನ್ನು ಎತ್ತಿ ಹಿಡಿದಿದೆ. ಈ ನಾಟಕದ ನಾಯಿಕೆಯೇ ಆಗಿರುವ ದೇಕಬ್ಬೆಯ ಪಾತ್ರವು ಹೆಚ್ಚಿನ ಉದಾತ್ತ ಧ್ಯೇಯವನ್ನುಳ್ಳಂತಹ ಪಾತ್ರವಾಗಿದೆ. ಅರಸರ ಅರ್ಥಾತ್ ಗಂಡನ ಮನಸ್ಸನ್ನು ಗೆಲ್ಲಲು ಇವಳು ನಡೆಸುವ ಪ್ರಯತ್ನ "ಕನ್ನಡಿಯ ಕೈಗಂಟಾಗಿಯೇ ಉಳಿಯಿತು". ಎಂದು ಹೇಳಿಕೊಳ್ಳುವ ಇವಳ ಮಾತು, ಸಾರ್ವಕಾಲಿಕವಾಗಿದ್ದು ಪ್ರಸ್ತುತ ಸನ್ನಿವೇಶಕ್ಕೆ ಕನ್ನಡಿ ಹಿಡಿದಂತಿದೆ.

"ಈಗೆಂಟು ದಿನಗಳಿಂದಂತೂ ಮಹಾರಾಜರ ಮನಸ್ಸು ಅದೇನೋ ಆಗಿಬಿಟ್ಟಿದೆ, ನಗುವರಾದರೂ ನಕ್ಕ ಆ ನಗುವಿನಲ್ಲಿ ಎಂದಿನ ಪರಿತೋಷವಿಲ್ಲ. ರಸಾನ್ನಗಳ ಔತಣವನ್ನೇ ಉಣಬಡಿಸುವೆವಾದರೂ ರಸಾಸ್ವಾದನೆಯ ಸಮ್ಮೋದವಿಲ್ಲ. ಹಗಲೆಲ್ಲ ಹೊರಗೆ

ದುಡಿದು ಬಂದ ಅರಸರು ರಾತ್ರಿಯನ್ನಾದರೂ ವಿಶ್ರಾಂತಿಯಲ್ಲಿ ಕಳೆಯಲೊಲ್ಲರು. ಅವರ ಮನಸ್ಸು ಮುದಗೊಳ್ಳಬೇಕೆಂಬ ನಮ್ಮಭೀಷ್ಟವದು ಇನ್ನೂ ಕನ್ನಡಿಯ ಕೈ ಗಂಟಾಗಿಯೇ ಉಳಿಯಿತಹುದು."

ದ್ರೋಹಾಂಡಂಬರ ನಾಟಕದ ಮೊದಲನೇ ಪ್ರವೇಶದಲ್ಲಿ ನವಲೆನಾಡಿನ ಸರ್ವಾಧಿ ಕಾರಿ ಮಹಾರಾಜರ ದಾಯಾದಿದಮ್ಮನೂ ಆದ ಮಾಳರಸ ಮತ್ತು ಆತನ ಅಂತರಂಗದ ಮಾತುಗಳು ನಾಟಕವನ್ನು ಮುನ್ನಡೆಸಲು ಹಾಗೂ ಕುತೂಹಲವನ್ನು ಹುಟ್ಟಿಸಲುಸಾಧ್ಯತೆ (ಎಡೆ) ಮಾಡಿಕೊಟ್ಟಿದೆ. ಮಾಳರಸ, ಮಾಯಿದೇವನಿಗೆ ಹೇಳುವ ಮಾತು ಸ್ವಾಮಿ ನಿಷ್ಠೆಯನ್ನು ಪ್ರಶ್ನಿಸುವ ಮಾತುಗಳಾಗಿವೆ. "ನಿನ್ನ ಚೆಲುವೆಯನ್ನು ಈಗ ಈ ಘಳಿಗೆ ಯಲ್ಲಿ ಒಬ್ಬಂಟಿಗಳನ್ನಾಗಿ ತಂದೊಪ್ಪಿಸಿ, ನೀನೇ ನಿನ್ನ ಕೈಯಾರೆ ಕದವನ್ನೆಳೆದು ಮುಚ್ಚಿ, ಭದ್ರ ಪಡಿಸಿಕೊಂಡು ಹೋಗಬೇಕು," ಎಂದ ಮಾಳರಸನ ಮಾತಿಗೆ ಮಾಯಿದೇವ 'ಆಯಿತು' (ಆಯ್ತು) ಎಂದು ಧಿಮ್ಮನೆ ಧೃತಗತಿಯಲ್ಲಿ ನಡೆಯುವುದು ಅವನ ದಿಟ್ಟ ತನ ಮತ್ತು ಔದಾರ್ಯತೆಯನ್ನು ಎತ್ತಿ ತೋರಿಸುತ್ತದೆ.

ಎರಡನೇ ಪ್ರವೇಶದಲ್ಲಿ ಮಾಳರಸ ನೃತ್ಯಕಲೆಗೆ ಪ್ರೋತ್ಸಾಹವನ್ನು ಕೊಡುತ್ತಿದ್ದಾ ನೆಂಬ ಅಂಶ ಸುವ್ಯಕ್ತವಾಗುತ್ತದೆ. ರಾಯನಚ್ಚಣಿ ಚಂದಲದೇವಿಯ ನಾಟ್ಯ ನೈಪುಣ್ಯತೆ ಹಾಗೂ ಅವಳ ಕನಸಿನ ವಿಚಾರಗಳ ದೃಶ್ಯವು ಇಲ್ಲಿ ವ್ಯಕ್ತವಾಗಿದೆ.

"ಅರಸ ಅರಸಿತಿಯರ ಪರಮೌದಾರ್ಯದ ನೆಳಲಿನಲ್ಲಿ ಪ್ರೌಢಿಮೆಯ ಪ್ರಚ್ಛನ್ನತೆ ಯಲ್ಲಿ ದೇವಭೋಗದ ಕನಸು ಕಂಡೆಯೇನೋ ! ಕೇವಲ ಸತ್ಯಾನ್ವೇಷಣೆಗೆಂದೇ ನಿಯೋ ಜಿತನಾಗಿರುವನು" ಎನ್ನುವ ಮಾತು ತುಂಬಾ ಗಹನವಾಗಿದ್ದು, ಕುತೂಹಲವನ್ನು ಹುಟ್ಟಿಸುವಂತಿದೆ.

ನಾಲ್ಕನೇ ಪ್ರವೇಶದಲ್ಲಿ ಚಂದಲದೇವಿ ಮತ್ತು ಮಾಳರಸರೊಂದಿಗೆ ಜೀವನ್ಮರಣದ ವಿಚಾರದಲ್ಲಿ ಮಾತುಕತೆ ನಡೆದು "ನಾಳಿನ ದಿವಸ ನಾವು ಈ ನಾಡ ಅರಸಾಗುವೆವಾದರೆ" ಎಂಬ ಮಾತಿಗೆ ಚಂದಲದೇವಿ ಒಪ್ಪದೇ ಸಿಡಿದೇಳುವುದು ಕಂಡುಬರುತ್ತದೆ. ಏಚರಾಜ ರಿಗೂ ನಿಮಗೂ ವಯಸ್ಸಿನಲ್ಲಿ ಏನು ಮಹಾ ಅಂತರವಿಲ್ಲ ಎನ್ನುವ ಅವಳ ಮಾತು ಸ್ವಾಮಿ ನಿಷ್ಠತೆಗೆ ಸಾಕ್ಷಿಯಾಗಿದೆ.

ಐದನೇ ಪ್ರವೇಶದಲ್ಲಿ ನಿರಪರಾಧಿಯಾದೊಬ್ಬ ಹೆಣ್ಣು ಮಗಳ ಕೊಲೆಯನ್ನು ಏಚರಾಜ ಈಗಳೆಯುವುದು ಕಂಡುಬರುತ್ತದೆ. ಆತನ ಮಾತಿನಲ್ಲಿ ಹೇಳುವುದಾದರೆ "ಅರಮನೆಯ ಬಿಚ್ಚುಗತ್ತಿಯ ನೇರವಾದ ಕಾಪಿನಲ್ಲಿರುವಾಗಲೇ ನಿರಪರಾಧಿಯಾದೊಬ್ಬ ಹೆಣ್ಣು ಮಗಳ ಕೊಲೆ." "ಕಲೌಪಾಸಕರನ್ನು ಆವ ನಾಡು ಪ್ರತ್ಯಕ್ಷ ದೇವತೆಗಳಂತೆ ಕಂಡು ಪೂಜಿಸಿತೋ ಆ ನಾಡಿನಲ್ಲಿ ಧರ್ಮದುತ್ಥಾನಕ್ಕೆ ನಚ್ಚಣವು ಬದುಕಬೇಕು ಎಂಬ ಮಹತ್ವಾ ಕಾಂಕ್ಷೆಯಿಂದ ಜೀವಿಸಿದ ಕಲಾವಿದೆಯೊಬ್ಬಳ, ಏರ್ದಗರೆಗಿ ಗೋಳಿಡುವಂತಹ ಸಂಕಟದ ಪ್ರಾದುರ್ಭಾವ! ನಮ್ಮನ್ನಾರೂ ಕ್ಷಮಿಸಿಕೊಳ್ಳುವುದಿಲ್ಲ !" ಎನ್ನುವ ಆತನ ಮಾನವೀಯ ತೆಯ ಮಾತು ಸಾರ್ವಕಾಲಿಕ ಸತ್ಯದಿಂದೊಳಗೊಂಡಿದೆ. ಈ ಪ್ರವೇಶದಲ್ಲಿ ದ್ರೋಹಾ

ಡಂಬರದ ವಿಚಾರಗಳು ಸುವ್ಯಕ್ತವಾಗಿರುವುದು ಕಂಡುಬರುತ್ತದೆ.

ಆರನೆಯ ಪ್ರವೇಶದಲ್ಲಿ ತಮ್ಮ ನಾಡಿನ ಸರ್ವಾಧಿಕಾರಿ ಮಾಳರಸನ ಬರವಿಗೆ ವಿದ್ವನ್ಮಣಿಗಳು ಘಟಿಕಾಸ್ಥಾನದ ಕುಲಪತಿ, ಅಧ್ಯಾಪಕ, ಪ್ರಾಧ್ಯಾಪಕ, ಮುಂತಾದವರೆಲ್ಲ ನೆರೆದಿರುವರು. ಮಾಳರಸನ ನಾಡಿನಲ್ಲಿ ಶಿಕ್ಷಣ ಮತ್ತು ದೈವದ ವಿಚಾರದಲ್ಲಿ ಚಿಂತನ ಮಂಥನ ನಡೆಸುವ ಪೂರ್ಣಸ್ವಾತಂತ್ರ್ಯದ ವಿರುದ್ಧ ಕಂಡು ಬರುತ್ತದೆ. ಕಬ್ಬಣಿ ಘಟಿಕಾ ಸ್ಥಾನದ ಕುಲಪತಿ ಶ್ರೀ ವಿಷ್ಣುಘಳಿಸಾಸ ಅವರು ಮಾಳರಸನಿಗೆ ತಮ್ಮ ನಾಡಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವುದನ್ನು ಪರಿಚಯಿಸುವುದಲ್ಲದೇ ಅವರ ಪಾಂಡಿತ್ಯವನ್ನು ಹೊಗಳುವುದು ಕಂಡುಬಂದಿದೆ. ಆ ನಾಡಿನ ಅಂದಿನ ಜಾತಿ ವ್ಯವಸ್ಥೆಯು ಶಿಕ್ಷಣ ಕಲಿಕೆ ಯಲ್ಲಿ ಯಾವ ರೀತಿ ಭಾಗಿಗಳಾಗಿರುವವರು ಎಂಬುದನ್ನು ತಿಳಿಯಬಹುದು. ಅಂದಿನ ಪರಿಸ್ಥಿತಿಯಲ್ಲಿ ಶಿಕ್ಷಣದೀಕ್ಷೆ ಎಂತಹುದು ಅಂದರೆ, ಎಲ್ಲಾ ವ್ಯಕ್ತಿಗಳ....ವನ್ನು ವಿದ್ಯಾರ್ಥಿ ಗಳೇ ಕಲ್ತು ತಮ್ಮ ಮುಂದಿನ ಜೀವನ ನಿರ್ವಹಣೆಯನ್ನು....ಪರಾವಲಂಬಿಯಾಗದೆ ಸುಗಮವಾಗಿ ನಡೆಸಿಕೊಂಡು ಹೋಗಬೇಕೆಂಬುದೇ ಇಲ್ಲಿನ ಶಿಕ್ಷಾದೀಕ್ಷೆ ಎನ್ನುವ ಶ್ರೀ ವಿಷ್ಣುಘಳಿಸಾಸರ ಮಾತು ಸಾರ್ವಕಾಲಿಕವಾಗಿದೆ. "ಅಂತೆಯೇ ವಿದ್ಯೆಯೆಂದರೆ ತಿಳಿವಳಿಕೆ ಯೆಂದೇ ನಮ್ಮ ಅರ್ಥ. ಬಾಳಿಗಾವಶ್ಯಕವೆನಿಸುವ ಎಲ್ಲ ಕಲ್ಕೆಗಳೇ ಆ ತಿಳಿವಳಿಕೆ. ಅದನ್ನು ಅಭ್ಯಸಿಸುವವನೇ ಇಲ್ಲಿನ ವಿದ್ಯಾರ್ಥಿ" ಎನ್ನುವ ಮಾತು ಕೂಡ ಆ ನಾಡಿನ ಪ್ರಭುಗಳ ಔದಾರ್ಯತೆಯನ್ನು ಎತ್ತಿ ಹಿಡಿಯುವಂತಾಗಿದೆ.

ಮಾನವ ಜೀವಿತದ ಗುರಿಯ ಬಗ್ಗೆ ಶ್ರೀ ವಿಷ್ಣುಘಳಿಸಾಸ ಅವರು ಹೇಳಿರುವ ಮಾತು ಇಡೀ ನಾಟಕದ ಮೌಲ್ಯವನ್ನು ಎತ್ತಿ ಹಿಡಿದಿದೆ. "ಮಾನವ ಜೀವಿಯ ಗುರಿ ಯೊಂದೇ—ಅದು ಲೋಕಕಲ್ಯಾಣಕಾರಕವಾದ ಸದ್ಭಾವನೆಗಳನ್ನು ಬಳೆಯಿಸಿ ಬಾಳಿಸಿ ಕೊಳ್ಳುವುದು....ಮಾನವನ ಈ ಉಚ್ಚತಮಭಾವ ಸಿದ್ಧಿಯನ್ನೇ ಮುಂದಣವರು ಹೇಳು ವುದಾದರೂ ಇದನ್ನೇ".

ಆರನೆಯ ಪ್ರವೇಶದಲ್ಲಿ ಅಂದಿನ ಶಿಕ್ಷಣ ವ್ಯವಸ್ಥೆ, ಜಾತಿ ಧರ್ಮದ ವ್ಯವಸ್ಥೆ ಹಾಗೂ ಮನುಷ್ಯತ್ವದ ಅಂಶಗಳನ್ನು ಕಾಣಲು ಸಾಧ್ಯವಾಗಿದೆ.

ಏಳನೇ ಪ್ರವೇಶದಲ್ಲಿ ಅಂದಿನ ರಾಜ ಮನೆತನ, ಸಾವು, ನೋವು, ವಿಧಿಯ ಸಂಚು ಇವುಗಳಿಂದ ಕಂಗಾಲಾಗುವ ಅಂಶ ವ್ಯಕ್ತವಾಗಿದೆ,

ಎಂಟನೇ ಪ್ರವೇಶದಲ್ಲಿ ಮಹಾರಾಣಿ ದೇಕಬ್ಬೆಯ ಅಂತಃಪುರದ ಅಂತಃ ಗೃಹಕ್ಕೆ ಸೇರಿದ ವಿಚಾರಗಳು ವ್ಯಕ್ತವಾಗಿದೆ. ಅಲ್ಲದೇ ಅವರ ಅಂತರಂಗದ ಭಾವನೆಗಳು ಬಹಿರಂಗಗೊಳ್ಳುವುದನ್ನು ಇಲ್ಲಿ ಕಾಣಬಹುದು. ಅಂತೆಯೇ ಮಾಳರಸರ ಮಾತು ಕೂಡ ಅಂದಿನ ಸ್ವಾಮಿಭಕ್ತಿಗೆ ಹಾಗೂ ದೇಶಭಕ್ತಿಗೆ ಸಾಕ್ಷಿಯಂತಿದೆ.

ಕನ್ನಡದ ಜನತೆ ಧರ್ಮದ ಉತ್ಥಾನಕ್ಕಾಗಿ ಎಂತಹುದೇ ಶಕ್ತಿ ಕೂಟವನ್ನಾದರೂ ಎದುರಿಸಬಲ್ಲದು. ಎಂಬುದನ್ನು ತೋರಿಸಬೇಕಾಗಿದೆ. ನಾಡು, ನುಡಿ, ಹಾಗೂ, ಧರ್ಮದ ರಕ್ಷಣೆಗಾಗಿ ಸತ್ತರೂ, ಬದುಕಿದರೂ, ಯಶಸ್ಸುಂಟು ಎಂಬುದನ್ನು ಕಾರ್ಯ

ತಹ ತೋರಿಸೋಣ ಎಂಬ ಏಚರಾಜನ ಮಾತು 'ದ್ರೋಹಾಡಂಬರ' ನಾಟಕದ ಮೌಲ್ಯ ವನ್ನು ಹೆಚ್ಚಿಸಿದೆ.

ನವಲೆನಾಡ ಸರ್ವಾಧಿಕಾರಿ ಮಹಾರಾಜನ ದಾಯಾದಿದಮ್ಮನಾದ ಮಾಳರಸನ ಸಂಚಿನ ಹೊಂಚು ಒಂಬತ್ತನೇ ಪ್ರವೇಶದಲ್ಲಿ ವ್ಯಕ್ತವಾಗುತ್ತದೆ. ಅವನ ಮಾತುಗಳಲ್ಲೇ ಹೇಳುವುದಾದರೆ "ಆ ಆನಂದ ಸಾಮ್ರಾಜ್ಯದಾರೋಹಣಕ್ಕಾಗಿ ಈ ಮಾಳರಸನು ಬಿಡಿ ಸಿಟ್ಟ ಸುಳಿವದಾರಿಗೂ ಹತ್ತದಂತೆ ಏಕಮೇವಾದ್ವಿತೀಯನೆಂದೆಂಬ ಚಿರಕೀರ್ತಿಯನ್ನು ಪ್ರತಿಷ್ಠಾಪಿಸಿಕೊಳ್ಳಲು, ಹಾಗೆ ಸಂಪಾದಿಸಿದ ಅಖಂಡ ವೈಭವವನ್ನು ಭೋಗಿಸುವ ಪರಮ ಮಂಗಲ ಸಮಯದಲ್ಲಿ ನಾವು ಆರನ್ನೂ ಶಂಕಿಸದೆ ನಿಶ್ಶಂಕೆಯಿಂದಿರುವ ಆ ಮಹಾ ಸ್ವಾತಂತ್ರ್ಯಕ್ಕಾಗಿ ನಿಮ್ಮಿಬ್ಬರದೂ ಕೊಲೆ! ಅದೂ ನವಲೆನಾಡನ್ನು ಪ್ರವೇಶಿಸು ವುದರೊಳಗಾಗಿ, ಅದು ಅವಶ್ಯಕ!"

ಇದಕ್ಕೆ ಉತ್ತರವಾಗಿ ಮಾಯಿದೇವನ ಮಾತೆಂಗರೆ "ನರಾಧಮನು ನೀನು, ನೀಚ ನಾಯಿ ನೀನು. ನಂಬಿದವರನ್ನೇ ಕೊಲೆ ಮಾಡಿದ ಕಡು ಪಾಪಿ! ಹಾಳಾಗಿ ಹೋಗು! ಸುಟ್ಟು ಬೂದಿಯಾಗಿ ಹೋಗು!" ಎಂದು ಶಪಿಸುತ್ತಾನೆ.

ಹತ್ತನೇ ಪ್ರವೇಶದಲ್ಲಿ ಏಚರಾಜನರಸಿ ದೇಕಬ್ಬೆ ಹಾಗೂ ನವಲೆನಾಡ ಸರ್ವಾಧಿ ಕಾರಿ ಮಾಳರಸನ ನಡುವೆ ನಡೆಯುವ ಸಂಭಾಷಣೆ ಮೈನವಿರೇಳಿಸುವಂತೆ ಗಹನವಾಗಿದೆ. ಮಾಳರಸ ದೇಕಬ್ಬೆಯ ಮುಂದೆ ಇನ್ನೂ ಈ ರಾಜ್ಯವನ್ನು ಆಳುವವನು ಯಾರೆಂದರೆ ಎಂಬ ಪ್ರಶ್ನೆ ಹಾಕುತ್ತಲೇ ತನ್ನ ಪೌರುಷವನ್ನು ಪ್ರದರ್ಶನ ಮಾಡಿಕೊಳ್ಳುತ್ತಾನೆ. ಏಚರಾಜನನ್ನು ಯಾರು ಬುದ್ಧಿ ಹಾಗೂ ತೋಳ್ಬಲಗಳಿಂದ ಬಂಧಿಸುವನೋ ಅವನೇ ಈ ನಾಡಿನ ಉತ್ತರಾಧಿಕಾರಿ, ಎನ್ನುವ ಅವನ ಮಾತು ದ್ರೋಹಾಡಂಬರಕ್ಕೆ ಸಾಕ್ಷಿ ಯಾಗಿದೆ. ದೇಕಬ್ಬೆ ಮಾಳರಸನಿಗೆ ನೀಡುವ ಎಚ್ಚರಿಕೆಯ ಮಾತು ಸ್ತ್ರೀಸಂವೇದನೆಯ ಹೆಗ್ಗುರುತಾಗಿದೆ. ಅವಳ ಮಾತಿನಲ್ಲೇ ಹೇಳುವುದಾದರೆ "ಮಹಾರಾಜರು ನಿನ್ನನ್ನು ದಾಯಾದಿ ದಮ್ಮನಾದರೂ 'ಒಂದೇ ಕುಲದ ಕುಡಿ' ಎಂದು ಅದೆಷ್ಟು ವಾತ್ಸಲ್ಯದಿಂದೋ ವಿದರು ಎಂಬುದನ್ನು ಮರೆತು, ಅವರನ್ನು ಪಾಡಿಗೀಡುಮಾಡುವಷ್ಟರ ಕಟುಕನಾದೆ ಯೇನು ?" ಎಂಬುವ ಈ ಉಕ್ತಿಯಲ್ಲಿ ಆಕೆಯ ದಿಟ್ಟತನ ಕಂಡುಬರುತ್ತದೆ.

ಮಾಳರಸನು ಇಡೀ ರಾಜ್ಯದ ಎಲ್ಲಾ ರಾಜ್ಯದ ಲಾಂಛನಗಳಿಗೂ ಉತ್ತರಾಧಿಕಾರಿ ಯಾದ ಮೇಲೆ ದೇಕಬ್ಬೆಯೂ ಕೂಡ ನಮ್ಮ ಅನುಭೋಗದ ವಸ್ತುವಾಗಬೇಕೆಂದಾಗ ದೇಕಬ್ಬೆ ನಿರಾಕರಿಸುವುದನ್ನು ಇಲ್ಲಿ ಕಾಣಬಹುದು. ಆದರೆ ಮಾಳರಸ ತನ್ನ ಮಿಲನದಾಸೆ ಯನ್ನು ಈ ರೀತಿ ತೋಡಿಕೊಳ್ಳುತ್ತಾನೆ.

"ನಮ್ಮ ಮನೋಲೋಕವನ್ನು ನೀವೆಂತು ನಿಮ್ಮ ತನುರುಚಿರತೆಯಿಂದ ತುಂಬಿ ನಮ್ಮ ಪಂಚೇಂದ್ರಿಯಗಳನ್ನೂ ನಮ್ಮತ್ತ ಸೆಳೆದುಕೊಂಡಿರುವಿರಿ ಎಂಬುದನ್ನು ನಾವೆಂತು ಬಣ್ಣಿಸಬೇಕೋ! ನೀವು ನಮ್ಮಣ್ಣಂದಿರನ್ನು ಮದುವೆನಿಂದು ನಮ್ಮ ವಿಲಾಸ ವೈಭವ ದಿಂದ ನಮ್ಮರಮನೆಯನ್ನು ತುಂಬಿದ ಗಳಿಗೆಯಲ್ಲಿಯೇ ಮನಮಾಡಿದೆನು, ಕೂಡಿದರೆ

ನಿಮ್ಮನ್ನು ಕೂಡಿ ಬಾಳಬೇಕು, ಇಲ್ಲವಾದರೆ ಮಡಿಯಬೇಕು ಎಂದು."

ಮಾಳರಸನ ಮಾತುಗಳನ್ನು ದೇಕಬ್ಬೆ ಪೂರ್ಣರೀತಿಯಲ್ಲಿ ನಿರಾಕರಿಸುವುದಲ್ಲದೇ ಆತನನ್ನು ಮಗನ ಭಾವನೆಯಿಂದ ನೋಡಿದ ಮಾತೃವಾತ್ಸಲ್ಯದ ವಿಚಾರವನ್ನು ವ್ಯಕ್ತ ಪಡಿಸುತ್ತಾಳೆ. ಏಚರಾಜನಿಗೂ ಈ ಅಂಶ ವ್ಯಕ್ತವಾಗಿ ಕೊನೆಗೆ ದ್ವಂದ್ವ ಕಾಳಗಕ್ಕೆ ಸನ್ನದ್ಧ ನಾಗು ಎಂಬ ಮಾತುಗಳಿಂದ ನಾಟಕದ ಹತ್ತನೆಯ ಪ್ರವೇಶ ಅಂತ್ಯವಾಗುತ್ತದೆ.

ಹನ್ನೊಂದನೇ ಪ್ರವೇಶದಲ್ಲಿ ಮಾಳರಸನು ಪೂರ್ಣರೀತಿಯಲ್ಲಿ ಬದಲಾವಣೆ ಯಾಗಿದ್ದು ದೇಕಬ್ಬೆಯಲ್ಲಿನ ಮಾತೃಹೃದಯದ ವಾತ್ಸಲ್ಯಕ್ಕೆ ಮಣಿಯುವುದು ಕಂಡು ಬರುತ್ತದೆ. ಮಾಳರಸನ ಮಾತಿನಲ್ಲಿ ಹೇಳುವುದಾದರೆ,

"ಕಬ್ಬಿನ ಜಲ್ಲೆಯನ್ನು ಕಲ್ಲಾಲೆಗಿತ್ತರೂ ಅದು ಮಧುರರಸವನ್ನೆ ಕೊಡುವಂತೆ, ನಾವು, ನಮ್ಮ ದುಟ್ಟವಾತಿನಿಂದ ನಿಮ್ಮಸುವನ್ನೇ ಹಿಂಡಿದೆವಾದರೂ, ನೀವೀಯಮೃತ ವನ್ನೇ ಸುರಿಸಿ ಉದ್ಧರಿಸುತ್ತಿರುವಿರಿ! ಅಯ್ಯೋ! ನಿಮ್ಮೀ ಸತ್ವ ಸೌಂದರ್ಯವನ್ನು ಪಾವಿ ತ್ರ್ಯತೆಯನ್ನು ಯಾವ ಮಾತು ಅಳೆಯಬಲ್ಲದು! ಯಾವ ದಿವ್ಯ ಭಾವ ತುಂಬಿ ಹೇಳ ಬಲ್ಲುದು! ಅಮರತ್ವ ಎಂಬುದೊಂದಿದ್ದರೆ ಅದು ಇದೇ, ಧನ್ಯರಾದೆವು ತಾಯಿ."

ಹನ್ನೆರಡನೇ ಪ್ರವೇಶದಲ್ಲಿ ಚೋಳ ನಾಡಿನ ಮಹಾದಂಡನಾಯಕನಾದ ಮಧು ರಾಂತಕನ ಹಾಗೂ ನವಲೆನಾಡಿನ ರಾಜ ಏಚರಾಜ ಇವರ ನಡುವಿನ ಗಂಭೀರ ಮಾತು ಕತೆಯು ಅಂದಿನ ರಾಜಮನೆತನಗಳ ಸತ್ಯಾಸತ್ಯತೆಗಳು ವ್ಯಕ್ತವಾಗಿವೆ.

ಏಚರಾಜನು ಮಾಳರಸರ ಧರ್ಮಬಾಹಿರತನವನ್ನೂ ವ್ಯಕ್ತಪಡಿಸುವನು, ಆದರೆ ಮಧುರಾಂತಕನು ಮಾಳರಸರ ಪ್ರಭುತ್ವನಿಷ್ಠೆಯನ್ನು ಸ್ನೇಹವನ್ನು ವ್ಯಕ್ತಪಡಿಸುತ್ತಾನೆ. ಮಧುರಾಂತಕನು ಏಚರಾಜನನ್ನು ಕರೆಸಿ ಕೊನೆಯ ಮಾತುಗಳು ಎಂಬಂತೆ ಎಚ್ಚರಿಕೆಯ ನುಡಿಗಳನ್ನಾಡುತ್ತಾ ನಿಮ್ಮ ಅಸುವನ್ನು ಮುಕ್ತವನ್ನಾಗಿಸುವುದಾಗುತ್ತದೆ ಎನ್ನುತ್ತಾನೆ. ಅದಕ್ಕೆ ಉತ್ತರವಾಗಿ ಏಚರಾಜನು ಈ ಮಾತುಗಳನ್ನಾಡುತ್ತಾನೆ. "ತಲೆಗಡಿಸುವ ವಿಗಡ ತನವನ್ನು ಮಾತು ಮಾತಿನಲ್ಲಿಯೂ ಮೆರೆದು ನಮ್ಮನ್ನಂಜಿಸುತ್ತಿರುವಂತೆ ಕಾಣುತ್ತದೆ, ಚೋಳ ಮಹಾದಣಾಯಕವರ್ಯ ಮಧುರಾಂತಕ ತಮಿಳ್ ಅಪ್ಪಾರು ರಾಯನ್ರವರು. ನಮಗಾವ ಅಂಜಿಕೆಯೂ ಇಲ್ಲ. ಸೆರೆಗೊಂಡಿರುವ ಈಯೊಡಲು ನಿಮ್ಮದು."

ಮಧುರಾಂತಕನ ಮಾತುಗಳಿಗ ಏಚರಾಜನು ರೋಷದಿಂದಾಡುವ ಮಾತುಗಳು ನಾಟಕದ ಶೀರ್ಷಿಕೆಯನ್ನು ಎತ್ತಿಹಿಡಿದಿದೆ.

"ಸೆರೆ! ಬಂದಿ! ಅದಾವ ಪಾಷಂಡ ಧೈರ್ಯದಿಂದ ಅಂತು ಬೊಗಳುತ್ತಿರುವೆ ಯೆಲವೋ! ನಿನ್ನಂತರಾತ್ಮ ಬಲ್ಲದು, ಆಳ್ವ ನಿನ್ನ ಪ್ರಭುತ್ವವೂ ಬಲ್ಲದು, ಏಚರಾಜನಿ ವನು ನವಲೆನಾಡ ಮಹಾರಾಜನೆಂಬುದನ್ನು. ನಿಮಗವನು ಸಿಂಹಸ್ವಪ್ನವಾದುದರಿಂದಲೇ ನೀವಾವುದೋ ಕ್ಷುಲ್ಲಕ ಕಾರಣವನ್ನೆತ್ತಿಕೊಂಡು, ವಂಚಿಸಿ ಮೋಸದಿಂದ ನಮ್ಮನ್ನು ಕಟ್ಟು ವಡೆಸಿಟ್ಟಿರಿ. ಸತ್ಯದ ಮೇಲೆ ನೀವೆಳೆದಿರುವ ಮೈಲಿಗೆಯ ಮುಸುಕನ್ನು ಲೋಕ ಇಂದಲ್ಲ, ನಾಳೆಯಾದರೂ ಕಳೆದೆಳೆದು ಬಿಸುಟು, ಋತವನ್ನೆತ್ತಿ ತೋರೀತು."

"ಇಂದೊಂದು ನಾಳೆಯೊಂದು ಬೇರೆ ಬೇರೆ ಬಣಗಳನ್ನು ಸೇರಿ ನಾಡಿನಲ್ಲಿ ಯುದ್ಧದ ಹುಯ್ಯಲನ್ನೆಬ್ಬಿಸುವವರು ನಾವಲ್ಲ. ನಮ್ಮನ್ನು ನಂಬಿದವರಿಗೆ ನಾವು ನಿಷ್ಠರೇ ಆಗಿದ್ದೆವು. ಹೊಯ್ಸಳ ನಾಲ್ಕನೆಯ ಅರಸು ಇಮ್ಮಡಿ ವಿನಯಾದಿತ್ಯರು ಅಂದರೆ ರಕ್ಕಸ ಪೊಯ್ಸಳರು ನಮ್ಮ ನೆರೆಯಲ್ಲಿಯೇ ಸೊಸೆವೂರಿನಲ್ಲಿ ರಾಜ್ಯವಾಳುತ್ತಿರುವರಾದರೂ ಅವರು ನಮ್ಮನ್ನಾಕ್ರಮಿಸುವರು. ಜೈನರಾದ್ದರಿಂದ ನಾವಿಬ್ಬರೂ ಒಂದಾಗುತ್ತಿದ್ದೆವೆಂಬುದು ನಿಮ್ಮ ನಿರಾಧಾರವಾದ ಊಹೆಯಷ್ಟೆ. ನಮ್ಮ ನಡೆನುಡಿಯಲ್ಲಿ ನೀವು ನೇರವಾಗಿದ್ದಿದ್ದರೆ ನಿಮಗಾಭಯ ಉಂಟಾಗುತ್ತಿರಲಿಲ್ಲ."

ಹದಿಮೂರನೇ ಪ್ರವೇಶದಲ್ಲಿ ನುಗುನಾಡ ಮಾಣ್ಡಲಿಕ, ಅರಸಿಗೆ ಹೆಣ್ಣುಕೊಟ್ಟ ಮಾವನಾದ ರವಿಗ ಹಾಗೂ ನವಲೆನಾಡ ಮುಖ್ಯಮಂತ್ರಿಯಾದ ಪಾರಿಸಯ್ಯ ಹಾಗೂ ರಾಜ ಪರಿವಾರದವರು, ಪೂಜಾ ವಿಧಿಕರ್ಮದಲ್ಲಿ ನಿರತರಾಗಿದ್ದು ತಾಯಿಯ ನಿಷ್ಠೆ ತಂದೆಯ ಪರಾಕ್ರಮ ಧರ್ಮನಿಷ್ಠೆಗಳನ್ನು ಹೇಳುತ್ತಾ "ಎರಡು ಕುಲದ ಸದ್ಭಾವ ಸಂಚಯಗಳನ್ನೆರೆದು ಕನ್ನಡನಾಡಿನ ಇನ್ನೊಂದು ಮಹಾ ಸಿಡಿಲನ್ನು ಕಡೆವುದಕ್ಕಾಗಿ ನೀವಾ ಹೆಮ್ಮೆಯನ್ನು ಬೆಳೆಸಿಕೊಳ್ಳಬೇಕು" ಎನ್ನುತ್ತಾನೆ.

"ಕನ್ನಡನಾಡಿನ ಇಂತಹ ಆಳರಸರ ಭವ್ಯ ಜೀವನ ಬಾಳಿದ ಬಗೆ, ಶ್ರದ್ಧೆ, ಉತ್ಸಾಹಗಳನ್ನು ನಾವು ಪ್ರೋತ್ಸಾಹಿಸುವುದಾದರೆ, ನಾವು ಪೂಜಿಸುವುದಾದರೆ ನಮ್ಮ ಶ್ರದ್ಧೆ ಉತ್ಸಾಹಗಳು ಅಷ್ಟೇ ಹೆಚ್ಚುವುದು. ಹಾಗೂ ಮಳೆ ಬೆಳೆಯಾಗಿ ನಾಡು ಸಂಪತ್ ಸಮೃದ್ಧವಾಗಿ ಸತ್ಯಯುಕ್ತವಾಗಿ ಧರ್ಮಶ್ರದ್ಧೆಯಿಂದ ಬಾಳಲಿ"ಎಂಬ ಭಾಸ್ಕರಾಶರ್ಮರ ಮಾತು ನಾಟಕವನ್ನು ಮುಕ್ತಾಯಗೊಳಿಸುವುದರೊಂದಿಗೆ ಸಾರ್ವಕಾಲಿಕ ಉಕ್ತಿಯಾಗಿದೆ.

ನಾಟಕಕಾರರು ನಾಟಕದಲ್ಲಿ ಫ್ಲಾಶ್-ಬ್ಲಾಕ್ ತಂತ್ರವನ್ನು (ಸಿಂಹಾವಲೋಕನ) ಅತಿ ಉತ್ಕೃಷ್ಟವಾಗಿ ಬಳಸಿದ್ದು, ಅಂದಿನ ರಾಜಮನೆತನಗಳ ಅಂತರಂಗ ಬಹಿರಂಗದ ವಿಚಾರಗಳನ್ನೂ ಬಹಳ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಒಟ್ಟಿನಲ್ಲಿ ನಾಟಕವು ಎಲ್ಲಾ ದೃಷ್ಟಿಯಿಂದಲೂ ಯಶಸ್ಸನ್ನು ಪಡೆದಿದೆ.

ನಿಮ್ಮ ಜೀವನ ಚರಿತ್ರೆ ಚೆನ್ನಾಗಿ ಮೂಡಿ ಬಂದಿದೆ. ನೀವು ಪಟ್ಟಿರುವ ಕಷ್ಟ ಕೋಟಲೆಗಳ ಬಗ್ಗೆ ಓದಿ ಮನಸ್ಸಿಗೆ ನೋವಾಯಿತು. ಸತ್ಯವಂತರಿಗೆ ಎಷ್ಟೊಂದು ಕಷ್ಟ ಎಂಬುದು ನಿಮ್ಮ ಪುಸ್ತಕದಿಂದ ಅರ್ಥವಾಗುತ್ತದೆ. ನಿಜಕ್ಕೂ ನೀವು ಒಳ್ಳೆಯ ಚಿಂತನ ಶೀಲರು. ಯುವಕರು ಖಂಡಿತ ಓದಬೇಕಾದ ಪುಸ್ತಕ 'ಕೋಟೆಮನೆ':

೪-೨-೯೨

ಜಿ. ಕೆ. ಎಲ್. ರಾಜನ್

ನೃತ್ಯ ಸರಸ್ವತಿ

ಎಂ. ಆರ್. ಸುನಂದಾ

ನೃತ್ಯ ಸರಸ್ವತಿ–ಸಮೇತನಹಳ್ಳಿ ರಾಮರಾಯರ ೧೮೦ ಪುಟಗಳ ಒಂದು ಸಣ್ಣ ಐತಿಹಾಸಿಕ ಕಾದಂಬರಿ. ೧೨ನೆಯ ಶತಮಾನದಲ್ಲಿ ಕನ್ನಡನಾಡನ್ನಾಳಿದ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ನೃತ್ಯಭಕ್ತಿ, ವ್ಯಕ್ತಿತ್ವಗಳನ್ನು ಉನ್ನತವಾಗಿ ಚಿತ್ರಿಸಿರುವ ಒಂದು ಕಾದಂಬರಿ. ವಾಸ್ತುಶಿಲ್ಪದಲ್ಲಿ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡು, ಬೇಲೂರು, ಹಳೇಬೀಡು, ಸೋಮನಾಥಪುರಗಳಲ್ಲಿ ದ್ವಿಕೂಟ, ತ್ರಿಕೂಟ ದೇವಾಲಯಗಳನ್ನು ಕಲ್ಲಿನಲ್ಲಿ ಕಡೆದು, ಕಲೆಯ ಬಲೆಯನ್ನೇ ನೇಯ್ದ ಕೀರ್ತಿ ಹೊಯ್ಸಳರದು. ಇಂತಹ ಒಂದು ಸಾರ್ವಕಾಲಿಕ ಬೃಹತ್ ಕಾಣಿಕೆಗೆ ಬಹುಮಟ್ಟಿಗೆ ಕಾರಣವಾದುದು, ಶಾಂತಲೆಯ ದೈವೀ ನೃತ್ಯವೆಂಬ ಪ್ರತೀತಿ ಇದೆ. ಇಂತಹ ಉನ್ನತ ಮಟ್ಟದ ಕಲಾವಿದೆಯ ನೃತ್ಯವನ್ನು ನೋಡಬೇಕೆಂಬ ಒಂದು ಸಹಜವಾದ ಆಸೆ ಚಾಲುಕ್ಯರ ವಿಕ್ರಮಾದಿತ್ಯನದು. ಗದ್ದುಂಬಳ್ಳಿಯಲ್ಲಿ ಹೊಯ್ಸಳರಿಂದ ನಿರ್ಮಿತವಾಗಿರುವ ಪ್ರಪ್ರಥಮ ಕಾಣಿಕೆಯಾದ ಲಕುಮಿ ದೇವಾಲಯದ ಆರಂಭೋತ್ಸವ ಸಮಾರಂಭದಲ್ಲಿ ಶಾಂತಲೆಯ ನೃತ್ಯಪೂಜೆ ಏರ್ಪಾಡಾಗಿರುತ್ತದೆ. ಚಾಲುಕ್ಯರ ವಿಕ್ರಮಾದಿತ್ಯನಿಗೆ ಈ ಸಮಾರಂಭಕ್ಕೆ ಆಹ್ವಾನವೂ ಇರುತ್ತದೆ. ಆದರೆ ಕಾರಣಾಂತರಗಳಿಂದಾಗಿ ಆ ಸಮಾರಂಭಕ್ಕೆ ಅವನು ಬರಲಾಗದೆ, ಶಾಂತಲೆಯ ಅಪೂರ್ವ ಗಂಧರ್ವನೃತ್ಯವನ್ನು ನೋಡಲಾಗದಿದ್ದಕ್ಕಾಗಿ ನಿರಾಸೆಗೊಳ್ಳುತ್ತಾನೆ. ತನ್ನ ಈ ಸಾತ್ವಿಕ ಆಸೆಯನ್ನು ಅದುಮಲಾಗದೆ ಅನೇಕ ಪ್ರಯತ್ನಗಳನ್ನು ಮಾಡುತ್ತಾನೆ. ಆದರೆ ವಿಷ್ಣುವರ್ಧನನ ಪಟ್ಟದರಸಿ ಈತನಿಗಾಗಿ ನರ್ತಿಸಲು, ಅದೂ ತನ್ನರಸ ಇಲ್ಲದ ವೇಳೆಯಲ್ಲಿ ತಿರಸ್ಕರಿಸುತ್ತಾಳೆ. ಕೊನೆಗೆ ಆತ ತನ್ನ ರಾಜಕೀಯ ಮುತ್ಸದ್ದಿತನವನ್ನು ಪ್ರಯೋಗಿಸುತ್ತಾನೆ. ಇದು ಫಲಕಾರಿಯಾಗಿ ಶಾಂತಲೆಯ ನೃತ್ಯವನ್ನು ನೋಡುವ ಆತನ ಆಸೆ ನೆರವೇರುತ್ತದೆ.–ಇದು ಕಾದಂಬರಿಯ ವಸ್ತು.

ಇದರಲ್ಲಿ ಬರುವ ಮುಖ್ಯ ಪಾತ್ರಗಳೆಂದರೆ ಶಾಂತಲೆ, ಚಾಲುಕ್ಯರ ವಿಕ್ರಮಾದಿತ್ಯ, ಮುಖ್ಯ ರೂವಾರಿ ಮಣಿಯೋಜ, ಹಾಗೂ ಯುವರಾಜ ಉದಯಾದಿತ್ಯನದು

ಈ ಕಾದಂಬರಿ ಹೊಯ್ಸಳಯುಗದ ನಾಟಕ ಚಕ್ರದಲ್ಲಿ ಮೂರನೆಯ ನಾಟಕವಾದ 'ನಾಟ್ಯ ಮಂದಾರ'ದ ಗದ್ಯರೂಪದ ಕಾದಂಬರಿಯಾಗಿದೆ. ಇದನ್ನು 'ಪ್ರಜಾವಾಣಿ' ಪತ್ರಿಕೆ ೧೧-೧೧-೧೯೭೭ರ ದಿನಾಂಕದ ದೀಪಾವಳಿಯಿಂದ ೧೨-೨-೧೯೭೭ರ ವರೆಗೆ ಪ್ರತಿ ಭಾನುವಾರ ಧಾರಾವಾಹಿಯಾಗಿ ಪ್ರಕಟಿಸಿತು.

ಮಿಕ್ಕೆಲ್ಲವು ಪೋಷಕ ಪಾತ್ರಗಳು. ಶಕ್ತಿಯುತವಾದ ಸಂಭಾಷಣೆಗಳೂ, ಸತ್ಯಪೂರ್ಣ ವಾದ ವಿವರಣೆಗಳೂ ಇಲ್ಲಿ ಗಮನ ಸೆಳೆಯುವ ಅಂಶಗಳು. ಚಾಲುಕ್ಯರ ವಿಕ್ರಮಾದಿತ್ಯನ ಬಗ್ಗೆ ಬರೆದಿರುವ ಕೆಲವೇ ಸಾಲುಗಳು ಅವನ ಇಡೀ ವ್ಯಕ್ತಿತ್ವವನ್ನು ನಮ್ಮ ಕಣ್ಣ ಮುಂದಿಡುತ್ತದೆ. "ರಾಜಾಧಿರಾಜನೆನಿಸಿಕೊಂಡವನು, ಭಾರತವರ್ಷದ ದಕ್ಷಿಣಾಪಥದ ಮಹಾವೀರ್ಯವಂತನೆಂದೆನ್ನಿಸಿಕೊಂಡವನು, ತನ್ನ ಮೂವತ್ತೆಂಟು ವರುಷಗಳ ಪ್ರಭಾವೀ ರಾಜ್ಯಭಾರದಲ್ಲಿ ರಾಜಕೀಯ ವಿಪ್ಲವಗಳ ಪರಂಪರೆಯನ್ನೇ ಕಂಡವನು ; ಕರಗಿಸಿದವನು. ತನ್ನ ಅಣ್ಣ ಸೋಮೇಶ್ವರನೂ, ತಮ್ಮ ಜಯಸಿಂಹನೂ ತನಗೆ ದ್ರೋಹ ಬಗೆದಾಗ ಅದನ್ನು ಜೀರ್ಣಿಸಿಕೊಂಡು ಜನದೊಳ್ಳಿತನ್ನು ಸಾಧಿಸಿದವನು." (ಪುಟ ೧೬೪)

ಇದೇ ರೀತಿ, ಶಾಂತಲೆಯ ಸಖಿ ಮಾಳವಿ ಶಾಂತಲೆಯ ಬಗ್ಗೆ ಆಡುವ ಮಾತುಗಳು ಶಾಂತಲೆಯ ಇಡೀ ವ್ಯಕ್ತಿತ್ವವನ್ನು ನಿರೂಪಿಸಲು ಸಮರ್ಥವಾಗಿದೆ. "ಶಾಂತಲದೇವಿ ಪ್ರಥಮದಲ್ಲಿ ಕಲಾವಿದರು. ಆನಂತರ ರಾಜ್ಯವನ್ನಾಳುವ ಮಹಾರಾಣಿ, ರಾಜನೀತಿ ಯನ್ನು ಪ್ರಯೋಗಮಾಡಲು, ರಾಜಕೀಯ ಪಟುಗಳು ಅಗತ್ಯವಾಗಿ ಹೊಂದಿರಬೇಕಾದ ಮೊಂಡುತನವನ್ನು, ಮರೆಮೋಸಗಳನ್ನು ಶಾಂತವ್ವೆಯರು ಮೊದಲಿನಿಂದ ಅಭ್ಯಸಿಸದೆ, ಜೀವನವನ್ನು ಕೇವಲ ಕಲಾತ್ಮಕವಾಗಿಯೇ ನಡೆಸಿಕೊಂಡು ಬಂದುದರ ಫಲವಿದಲ್ಲಾ ?"

ಐತಿಹಾಸಿಕದ ಜೊತೆಗೆ, ವಿಷ್ಣುವರ್ಧನ ದಂಪತಿಗಳಿಗೆ ಜನತೆಯ ಬಗ್ಗೆ, ಸಮಾಜದ ಬಗ್ಗೆ ಇದ್ದ ಕಳಕಳಿ, ಕಾಳಜಿಗಳು ಮನ ಮುಟ್ಟುವಂತೆ ಚಿತ್ರಿತವಾಗಿವೆ. ಹೊಯ್ಸಳೇಶ್ವರ ವಿಷ್ಣುವರ್ಧನ ಆಡುವ "ಈ ದಿವಸ ನಾವಾರ್ಜಿಸಿದ ವಜ್ರ ವೈಡೂ ರ್ಯಗಳಾಗಲಿ ಪಡುವ ಭೋಗವಾಗಲಿ, ಕಾಲಗರ್ಭದಲ್ಲಿ ಅಡಗಿ ಹೋಗುವುದಾದರೂ ಅಗೋಚರವಾದರೂ, ಅವಿನಾಶಿಯಾಗಿ ನಿಲ್ಲುವುದೆಂದರೆ ಮಾನವ ಭಾವನೆಗಳು ಮಾತ್ರವೇ. ನಮ್ಮ ಜೀವನದ ಹುಳಿ, ಒಗರು, ಸವಿ, ಆನಂದ ಮುಂತಾದವುಗಳ ಅನು ಭವ ಮುಂದಿನ ಪೀಳಿಗೆಗೆ ದಾರಿದೀಪವಾಗಬಲ್ಲವು" (ಪುಟ ೧೧) ಎಂಬ ಈ ಮಾತುಗಳು ಅವರ ಸಾಮಾಜಿಕ ಕಾಳಜಿಗೆ ನಿದರ್ಶನ.

ಕಾದಂಬರಿಯ ಉದ್ದಕ್ಕೂ ನಿಜವಾದ ಕಲೆ, ಒಂದು ಸಂಸ್ಕೃತಿ ಉನ್ನತವಾಗಬೇಕಾದರೆ ಅದರಲ್ಲಿ ನಿಜವಾದ ಕಲಾವಿದನ ಪಾತ್ರ, ಕೊಡುಗೆಗಳು ಇವುಗಳ ಬಗ್ಗೆ ನಿರೂಪಿಸುತ್ತಾ ಹೋಗುವುದನ್ನು ಕಾಣುತ್ತೇವೆ. ಇಂತಹ ಅಂಶಗಳಿಂದಲೇ ಶಾಂತಲೆಯ ಪಾತ್ರ ಭವ್ಯ ವಾಗುತ್ತಾ ಹೋಗುವುದು. ನೃತ್ಯದ ಬಗೆಗಿನ ಆಕೆಯ ನಿಲುವು, ಅದನ್ನು ಸಮರ್ಥಿಸಿ ಕೊಳ್ಳಲು ಆಕೆ ಹೆಣಗುವ ರೀತಿ, ಪರಿಸ್ಥಿತಿಯ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಅವಳ ಧೀಮಂತ ವ್ಯಕ್ತಿತ್ವ ಓದುಗರ ಮೆಚ್ಚುಗೆ ಗಳಿಸುತ್ತದೆ. ಚೇಟಿ ಮಾಳವಿ ಆಡುವ ಮಾತುಗಳು ಆಕೆ ನಿಜವಾದ ಅರ್ಥದಲ್ಲಿ ಕಲಾವಿದೆ ಎಂಬ ಅಂಶವನ್ನು ಪುಷ್ಟೀಕರಿಸು ತ್ತದೆ. "ಮಧುಮಾಸದಲ್ಲಿ ವಸಂತನು ತನ್ನ ಕಲೆಯನ್ನು ಬರೆಯುವಾಗ ಇಂಥ ಗಿಡದಲ್ಲಿ. ಇಂಥದೇ ಬಣ್ಣವಿರಲಿ ಎಂದು ಮೊದಲೇ ನಿರ್ಧರಿಸಿರುವುದಿಲ್ಲ. ಒಂದೇ ಗೊಂಚಲಿನಲ್ಲಿ

ಹತ್ತು ಬಣ್ಣಗಳನ್ನು ಬಳಿದಾನು, ರಸದ ತೊರೆಯನ್ನು ಹರಿಸಿಯಾನು. ಈ ದಿವಸ ಮಹಾರಾಣಿಯವರ ನೃತ್ಯ ಇಂಥಾದ್ದು"(ಪುಟ ೧೬೬). ಶಾಂತಲೆಗೆ ತನ್ನೆಲ್ಲ ಭಾವನೆಗಳಿಗೆ, ಆಂತರಿಕ ತುಮುಲಗಳಿಗೆ ಅಭಿವ್ಯಕ್ತಿ ಕೊಡುವ ಒಂದು ಮಾಧ್ಯಮ ನೃತ್ಯ. ಈ ಅಭಿವ್ಯಕ್ತಿ ದೈವಸನ್ನಿಧಿಯಲ್ಲಿ ಮಾತ್ರ–ಅದೂ ತನ್ನರಸ ವಿಷ್ಣುವರ್ಧನನ ಸಮ್ಮತಿಯೊಂದಿಗೆ. ಅಂತೆಯೆ ಆಕೆ ಚಾಲುಕ್ಯರ ವಿಕ್ರಮಾದಿತ್ಯ ಯುದ್ಧದ ಬೆದರಿಕೆ ಒಡ್ಡಿದಾಗಲೂ ತನ್ನ ಕಲೆಯನ್ನು ಮಾರಿಕೊಳ್ಳುವುದಿಲ್ಲ–ತನ್ನ ಕಲೆಯಿಂದ ಅಂತಃಸ್ಸತ್ತ್ವವನ್ನು ಹೆಚ್ಚಿಸಿಕೊಂಡು ಎಂತಹ ವಿಷಮ ಪರಿಸ್ಥಿತಿಯಲ್ಲೂ ಕಂಗೆಡದ ಶಾಂತಲೆಯ ವ್ಯಕ್ತಿತ್ವವನ್ನು ಚಿತ್ರಿಸಿರುವುದರ ಹಿಂದಿನ ಲೇಖಕರ ಹೆಣ್ಣಿನ ಬಗೆಗಿನ ಉನ್ನತ ಅಭಿಪ್ರಾಯಗಳು ಸ್ಪಷ್ಟವಾಗಿದೆ.

ಇಡೀ ಕಾದಂಬರಿಯಲ್ಲಿ ವಾಚಕರ ಗಮನ ಸೆಳೆಯುವಂತಹುದು ಚಾಲುಕ್ಯರ ರಾಜ ವಿಕ್ರಮಾದಿತ್ಯನ ರಾಜಕೀಯ ಮುತ್ಸದ್ದಿತನ. ವಿಕ್ರಮಾದಿತ್ಯ ಶಾಂತಲೆಯ ನೃತ್ಯವನ್ನು ನೋಡಬೇಕೆಂಬ ತನ್ನ ಸಹಜ ಹಾಗೂ ಸಾತ್ವಿಕ ಬಯಕೆಗಳನ್ನು ಈಡೇರಿಸಿಕೊಳ್ಳಲು ಹಂತಹಂತವಾಗಿ ಪ್ರಯತ್ನಿಸುತ್ತಾನೆ. ಅವನ ಈ ಪ್ರಯತ್ನಗಳು ತುಂಬಾ ಸುಂದರವಾಗಿ ಚಿತ್ರಿತವಾಗಿದೆ. ಈ ಪ್ರಯತ್ನಗಳ ಪರಾಕಾಷ್ಠೆಯಾದ ಆತನ ಮುತ್ಸದ್ದಿತನದ ಬೆಳವಣಿಗೆಯ ಚಿತ್ರಣವಂತೂ ಅದ್ಭುತವಾಗಿದೆ.

ಮೊದಲ ಕೆಲವು ಪುಟಗಳಾದನಂತರ ಕಾದಂಬರಿ ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ. ಕಾವ್ಯಮಯವಾದ ಭಾಷೆ ಕಥೆಯ ಓಟಕ್ಕೆ ಅಡ್ಡಿಯಾಗುವುದಿಲ್ಲ. ಆದರೆ ಕೆಲವಡೆ ಕೆಲಪದಗಳಿಗೆ (ನಚ್ಚಣಿಯರು ಗಳಿಗೆವಟ್ಟಲು ಎರಚಿದ ಗುಗ್ಗುಳದ, ಮೃದು ಲಾಂಗುಲೀಯಕದ, ಅವತೆಯಲ್ಲಿರುವುದು) ಲೇಖಕರು ಅರ್ಥಸೂಚಿಸಿದ್ದಿದ್ದರೆ, ಸಾಮಾನ್ಯ ಓದುಗರಿಗೆ ಹೆಚ್ಚು ಅನುಕೂಲವಾಗುತ್ತಿತ್ತು ಎನಿಸುತ್ತದೆ. ಇನ್ನು ಕವಿ ಅಪ್ಪಯ್ಯ ಘಳಿಸಾಸನ ಕತೆ–ಸೂಕ್ಷ್ಮವಾದ ಅವನ ಕವಿ ಮನಸ್ಸಿಗೆ ಸೋಮಿಗಭಟ್ಟನ ಮತ್ತು ಪದುಮಿಯರಂತಹ ದುಷ್ಟರಿಂದ ಆಗುವ ನೋವಿನ ವೃತ್ತಾಂತ ಮನಮಿಡಿಯುವಂತಹುದು. ಮಹಾಭಾರತದಲ್ಲಿ ಬರುವ ಉಪಕತೆಯಂತೆ ತನ್ನಲ್ಲೇ ಶಕ್ತಿಪೂರ್ಣವಾಗಿದ್ದು ನೀತಿಯುತವಾಗಿದೆ. ಆದರೆ ಕಾದಂಬರಿಯ ಬೆಳವಣಿಗೆಯ ದೃಷ್ಟಿಯಿಂದ ಈ ಸನ್ನಿವೇಶ ಅಂತಹ ಮಹತ್ವದ ಪಾತ್ರವನ್ನೇನೂ ವಹಿಸುವುದಿಲ್ಲ. ಕಾದಂಬರಿಯ ಅತಿ ಮುಖ್ಯ ಘಟನೆಯಾದ, ಯುವ ರಾಜ ಉದಯಾದಿತ್ಯನ ಮನಸ್ಸಿನಲ್ಲಿ ವಿಷದಬೀಜ ಬಿತ್ತುವ ಸನ್ನಿವೇಶ ಮತ್ತಷ್ಟು ಪ್ರಭಾವಶಾಲಿಯಾಗಬಹುದಿತ್ತು ಎನ್ನುವ ಭಾವನೆ ಬರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಕಾದಂಬರಿ ಉತ್ತಮ ಅಭಿರುಚಿಯ ಕೃತಿ. ಸಾರ್ವಕಾಲಿಕ ಸಾಮಾಜಿಕ, ಐತಿಹಾಸಿಕ ಹಾಗೂ ತಾತ್ವಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಸಫಲವಾಗಿದೆ. ಪ್ರಜ್ಞಾವಂತಳಾದ, ಕಲಾವಿದೆ ಒಬ್ಬ ಉತ್ತಮ ಸಾಮ್ರಾಜ್ಞಿಯೂ ಆಗಬಲ್ಲಳೆಂಬುದನ್ನು ಇಲ್ಲಿನ ಶಾಕುಂತಲೆಯ ವ್ಯಕ್ತಿತ್ವ ಸಮರ್ಥವಾಗಿ ನಿರೂಪಿಸಿದೆ.

ನಾಟ್ಯಮಂದಾರದ ಶಾಂತಲೆ

ಕೆ. ರಾಜೇಶ್ವರಿಗೌಡ

ಶ್ರೀ ಸಮೇತನಹಳ್ಳಿ ರಾಮರಾಯರು ಹಿರಿಯ ತಲೆಮಾರಿನ ಲೇಖಕರು ; ಗಾಂಧಿವಾದಿಗಳು ; ಐತಿಹಾಸಿಕ ಸಂಗತಿಗಳನ್ನು ತಮ್ಮ ಕೃತಿಗಳಲ್ಲಿ ಕಡೆದಿರಿಸುವುದರಲ್ಲಿ ಪರಿಣಿತರು. ಜೀವನದ ಆದರ್ಶ, ನೈತಿಕ ಮೌಲ್ಯಗಳ ಪ್ರತಿಪಾದನೆ ಇವರ ಸಾಹಿತ್ಯದ ಅವಿಭಾಜ್ಯ ಅಂಗವಾಗಿದ್ದು ಪ್ರಸ್ತುತ ಪರಿಸ್ಥಿತಿಗೆ ಅವು ಅಗತ್ಯವೆನಿಸಿವೆ.

'ನಾಟ್ಯಮಂದಾರ' ಹನ್ನೊಂದು ದೃಶ್ಯಗಳ ಒಂದು ನಾಟಕ. ಕ್ರಿ.ಶ. ೧೨ನೇ ಶತಮಾನದಲ್ಲಿ ಭವ್ಯವಾಗಿ ತಲೆಯೆತ್ತಿ ಇತಿಹಾಸದಲ್ಲಿ ಪ್ರಜ್ವಲಿಸಿದ ಹೊಯ್ಸಳ ವಿಷ್ಣುವರ್ಧನನ ಪಟ್ಟಮಹಿಷಿ ನಾಟ್ಯರಾಣಿ ಶಾಂತಲೆಯ ನಿಷ್ಠೆ, ತನ್ನ ಪತಿ ರಾಜಧಾನಿಯಲ್ಲಿಲ್ಲದಿದ್ದಾಗ ಎದುರಾದ ರಾಜಕೀಯ ಸಮಸ್ಯೆಯೊಂದಕ್ಕೆ ಆಕೆ ತಳೆದ ದಿಟ್ಟ ನಿಲುವು, ನಿರ್ಧಾರದ ಸಂಗತಿಯೇ ಇಲ್ಲಿನ ವಸ್ತು.

ಚೋಳರೊಡನೆ ಹೋರಾಡಲು ರಾಜ ವಿಷ್ಣುವರ್ಧನ ತೆರಳಿದ್ದ ಸಂದರ್ಭದಲ್ಲಿ ಚಾಲುಕ್ಯಾಧಿರಾಜ ವಿಕ್ರಮಾದಿತ್ಯ ಬಳ್ಳಿಗಾವೆಯಿಂದ ತನ್ನ ಹಿರಿಯರಾಣಿ ಲಕುಮಾದೇವಿ, ಪ್ರಧಾನಮಂತ್ರಿ ಮುದ್ದರಸ ಹಾಗೂ ಪರಿವಾರದೊಡನೆ ದ್ವಾರಸಮುದ್ರಕ್ಕೆ ಬರುತ್ತಾನೆ.

ರಾಜಧಾನಿ ಕಲ್ಯಾಣದಿಂದ ಬಳ್ಳಿಗಾವೆಗೆ ಬಂದು ಬಿಡಾರ ಹೂಡಿದ್ದ ಚಕ್ರವರ್ತಿ ವಿಕ್ರಮಾದಿತ್ಯನಿಗೆ ದೊಡ್ಡಗದ್ದವಳ್ಳಿಯ ಲಕುಮೀದೇವಿ ದೇವಾಲಯದ ಉತ್ಸವದ ಆಮಂತ್ರಣ ಪತ್ರಿಕೆಯನ್ನು ಹೊಯ್ಸಳ ಸಾಮಂತ ವಿಷ್ಣುವರ್ಧನ ಕಳುಹಿಸುತ್ತಾನೆ. ಅವರು ಉತ್ಸವಕ್ಕೆ ಬರುವುದು ತಡವಾಗಿ, ಉತ್ಸವ ಮುಗಿದು ವಿಷ್ಣುವರ್ಧನ ಹೊಯ್ಸಳರ ಮೇಲೆ ದಂಡೆತ್ತಿ ಬಂದಿದ್ದ ಕರಿಕಾಲ ಚೋಳನೊಡನೆ ಯುದ್ಧಕ್ಕೆಂದು ಹೊರಟು ಹೋಗಿರುತ್ತಾನೆ.

ದೇವಾಲಯದ ಉತ್ಸವದಲ್ಲಿ ಪೂಜಾ ಸಂದರ್ಭದಲ್ಲಿ ನಡೆಯುವ ಮಹಾರಾಣಿ ಶಾಂತಲೆಯ ನೃತ್ಯವನ್ನು ನೋಡಬೇಕೆಂಬ ಮಹದಾಸೆ, ಉತ್ಸುಕತೆಯಿಂದ ಬಂದ ವೃದ್ಧ ರಾಜ ವಿಕ್ರಮಾದಿತ್ಯನಿಗೆ ಉತ್ಸವ ಮುಗಿದು ಹೋಗಿದ್ದರಿಂದ ನಿರಾಶೆಯಾಗುತ್ತದೆ. ಆದರೂ ತನ್ನ ರಾಣಿ ಲಕುಮಾದೇವಿ ಹಾಗೂ ಪ್ರಧಾನಾಮಾತ್ಯ ಮುದ್ದರಸನ ಮೂಲಕ ತನ್ನ ಅಭಿಲಾಷೆಯನ್ನು ತಿಳಿಸುತ್ತಾನೆ.

"ತನ್ನ ಪತಿ ಊರಲ್ಲಿಲ್ಲದಾಗ, ಪೂಜಾ ಸಂದರ್ಭದ ಹೊರತಾಗಿ ತಾನು ಯಾವ ಕಾರಣಕ್ಕೂ, ಯಾವ ಸಮಯದಲ್ಲೂ ನರ್ತಿಸಲಾರೆ" ಎಂದು ತನ್ನ

ನೈತಿಕ ನಿಲುವನ್ನು ದೃಢವಾಗಿ ಹೇಳಿದಾಗ ರಾಜಕೀಯ ತಂತ್ರನಿಪುಣನಾದ ವಿಕ್ರಮಾದಿತ್ಯ ನಿರಾಶನಾಗದೆ ಬಳ್ಳಿಗಾವೆಯಿಂದ ಕೆಲವು ಶ್ರೇಷ್ಠ ಶಿಲ್ಪಿಗಳನ್ನು ಕರೆತರಿಸಿ ಅವರನ್ನು ಹೊಯ್ಸಳರಿಗೆ ಬಳುವಳಿಯಾಗಿ ಕಳುಹಿಸುತ್ತಾನೆ. ಆ ರೂವಾರಿಗಳು ಕಲಾರಾಧನೆಯ ನೆಪದಲ್ಲಿ ಮಹಾರಾಣಿಯ ನೃತ್ಯಪ್ರದರ್ಶಕ್ಕೆ ಒತ್ತಾಯವನ್ನು ಹೇರಿದಾಗ ಅಸಮಾಧಾನಗೊಂಡ ಶಾಂತಲೆ ಅವರ ಯಾವ ಮಾತಿಗೂ ಮಣಿಯದೆ ಅವರನ್ನು ತಮ್ಮ ಬಳಿ ಇರಿಸಿಕೊಳ್ಳಲೊಪ್ಪದೆ ವಿಕ್ರಮಾದಿತ್ಯನ ಬಳಿಯೇ ಪುನಃ ಕಳುಹಿಸಿಬಿಡುತ್ತಾಳೆ.

ಹೆಣ್ಣೊಬ್ಬಳು ಅಧಿರಾಜನ ಆಕಾಂಕ್ಷೆಯನ್ನು ನೆರವೇರಿಸದೆ ಸೆಟೆದು ನಿಂತಳೆಂದು ಅಪಾರ್ಥಮಾಡಿಕೊಂಡ ವಿಕ್ರಮಾದಿತ್ಯ ಹೊಯ್ಸಳ ಯುವರಾಜ ಉದಿಯಾದಿತ್ಯನನ್ನು ಬರಮಾಡಿಕೊಂಡು "ನಿಮ್ಮ ಅಣ್ಣ ರಾಜಧಾನಿಯಲ್ಲಿ ಇಲ್ಲದಿರುವಾಗ ರಾಜಕೀಯ ವಿಷಯಗಳಲ್ಲಿ ನಿಮ್ಮ ಅತ್ತಿಗೆಯದೇ ಮೇಲುಗೈ. ಯುವರಾಜನಾದ ನೀನಿದ್ದೂ ನಿನ್ನ ಸ್ಥಾನ ಗೌಣ..,ಇದು ಸಲ್ಲದು...ನನ್ನ ಮಾತನ್ನು ಆಕೆ ತಿರಸ್ಕರಿಸಿದ್ದಕ್ಕೆ ಶಾಂತಲೆ ಕ್ಷಮಾಯಾಚನೆ ಮಾಡಬೇಕಲ್ಲದೆ ನರ್ತಿಸಬೇಕು. ಇದಕ್ಕೊಪ್ಪದಿದ್ದಲ್ಲಿ ನಾನು ಈಗಲೇ ನಿಮ್ಮ ಮೇಲೆ ಯುದ್ಧ ಸಾರುವುದು ಖಚಿತ..." ಎಂದು ಕ್ರೋಧತಪ್ತನಾಗಿ ಹೇಳುತ್ತಾನೆ.

ಇದರಿಂದ ತನ್ನ ಅತ್ತಿಗೆ ಶಾಂತಲೆಯಲ್ಲಿ ತಾಯಿಯನ್ನೇ ಕಂಡಿದ್ದ ವಿಷ್ಣುವರ್ಧನನ ತಮ್ಮ ಉದಯಾದಿತ್ಯನಿಗೆ ಅಸಮಾಧಾನದ ವಿಷಬೀಜಾಂಕುರವಾಗುತ್ತದೆ. ವಿಕ್ರಮಾದಿತ್ಯನ ಸಲುವಾಗಿ ಆಕೆ ನೃತ್ಯಮಾಡಿದರೆ ಯುದ್ಧ ಅಸಂಭವ ಎಂದ ಅವನ ಮಾತಿಗೆ ಕಡುನೊಂದ ಶಾಂತಲೆ ಯುದ್ಧ ತಪ್ಪಿಸಲು ವಿಕ್ರಮಾದಿತ್ಯನ ಬಿಡಾರಕ್ಕೆ ಮಿತ ಪರಿವಾರದೊಂದಿಗೆ ಬರುತ್ತಾಳೆ.

ಅಧಿರಾಜನ ಪ್ರತಿಷ್ಠೆಗೆ ವೃಥಾಜೀವಹಾನಿಯಾಗುವುದನ್ನು ತಡೆಯಲು ಶಾಂತಿ ಸಂಧಾನ ಬಯಸಿ ಬಂದ ಆಕೆ ಪರಿಪರಿಯಾಗಿ ತಿಳಿಹೇಳಿದರೂ ಪಟ್ಟು ಬಿಡದ ವಿಕ್ರಮಾದಿತ್ಯ ಯುದ್ಧ ನಿಲ್ಲಬೇಕಾದರೆ ತಾನು ರಾಣಿಯ ನೃತ್ಯವನ್ನು ನೋಡಲೇಬೇಕೆನ್ನುತ್ತಾನೆ.

ಹೊಯ್ಸಳ ನಿಷ್ಠೆ, ಪರಾಕ್ರಮಗಳಿಗೇನೂ ಕೊರತೆಯಿಲ್ಲ. ಶಾಂತಲೆ ಯುದ್ಧಕ್ಕೆ ಅಣಿಯಾಗಲು ಸೇನಾಧಿಪತಿಗಳಿಗೆ ಆಣತಿಯಿತ್ತಳು. ಪತಿಗೆ ಸುದ್ದಿ ತಿಳಿಸಲು ವೇಗಾಯ್ಲ್ಲ ರನ್ನಟ್ಟಿದ್ದಳು.

ಯುದ್ಧದ ಮುನ್ನಾದಿನ....ಶುಭಕೋರಿಕೆಗೆ ದೊಡ್ಡಗದ್ದವಳ್ಳಿಯ ಲಕುಮೀ ದೇವಿಯ ದೇವಾಲಯಕ್ಕೆ ತೆರಳಿದ ಶಾಂತಲೆ ಭಕ್ತಿಯಿಂದ ಮೈಮರೆತು ನರ್ತಿಸಿದಳು. ಆ ನರ್ತನವನ್ನು ತದೇಕ ದೃಷ್ಟಿಯಿಂದ ಸಾವಿರಾರು ಜನ ನೋಡಿ ಪುಳಕಿತರಾದರು.

ನರ್ತನ ಮುಗಿಯಿತು. ಜನಸಮೂಹದಿಂದ ಸಾಮಾನ್ಯ ಜನರಂತೆ ವೇಷಧರಿಸಿ ನರ್ತನ ನೋಡಬಂದಿದ್ದ ವಿಕ್ರಮಾದಿತ್ಯ–ರಾಣಿ ಲಕುಮೀದೇವಿಯರು ಶಾಂತಲೆಯನ್ನು ಹೃತ್ಪೂರ್ವಕ ಅಭಿನಂದಿಸಿದರು. ತಮ್ಮ ಮಗಳಂತೆ ಭಾವಿಸಿ ಹರಸಿದರು. ತನ್ನ ಗುಣ, ಸನ್ನಡತೆಯಿಂದ ಎಲ್ಲರ ಮನ ಗೆದ್ದ ಶಾಂತಲೆಯ ಬಗ್ಗೆ ಅವರಿಗೆ ಅಪಾರ ಗೌರವ; ಪ್ರೀತಿ ಆಗಲೇ ಉದಯಾದಿತ್ಯನೂ ಬಂದು ಅತ್ತಿಗೆಯಲ್ಲಿ ಕ್ಷಮೆಯಾಚಿಸುತ್ತಾನೆ.

ಯುದ್ಧ ಸಾರಿದರೆ ಪೂಜಾ ಸಂದರ್ಭದಲ್ಲಿ ರಾಣಿ ನರ್ತನ ಮಾಡಿಯೇ ಮಾಡುತ್ತಾಳೆಂದು ಅರಿತು ತಾನು ಸಾರಿದ್ದು, ಸೈನ್ಯವನ್ನು ರಣಾಂಗಣದಲ್ಲಿ ಹರಡಿದ್ದು ಎಲ್ಲವೂ ಕೇವಲ ಸಂಚು ಎಂದು ತಿಳಿಸಿದ ವಿಕ್ರಮಾದಿತ್ಯ ಅದಕ್ಕಾಗಿ ತಾನೇ ರಾಣಿಯ ಕ್ಷಮೆ ಕೋರುತ್ತಾನೆ. ಎಲ್ಲವೂ ಸುಖಾಂತವಾಗುತ್ತದೆ.

ಇಲ್ಲಿ ನಮಗೆ ಎದ್ದು ಕಾಣುವ ಅಂಶವೆಂದರೆ ಶಾಂತಲೆಯ ಪಾತ್ರ. ವಿಕ್ರಮಾದಿತ್ಯನ ಯುದ್ಧದ ಮಾತು ಬಿರುಗಾಳಿಯಂತೆ ಎದುರಾದರೂ ಅವಳು ತನ್ನ ನಿಲುವನ್ನು ಬದಲಾಯಿಸದೆ ಯುದ್ಧಕ್ಕೆ ಸಜ್ಜಾಗುತ್ತಾಳೆ. ಪತಿ ಊರಲಿಲ್ಲದಾಗಲೂ ಧೈರ್ಯಗುಂದದೆ ಸಬಲೆಯಂತೆ ವರ್ತಿಸುತ್ತಾಳೆ. ತನ್ನ ಮಗನಂತೆ ಬೆಳೆಸಿದ ಮೈದುನ ತನ್ನನ್ನು ಅಪಾರ್ಥಮಾಡಿಕೊಂಡು ಕ್ರುದ್ಧನಾದನಲ್ಲಾ ಎಂದು ನೋಯುವಷ್ಟು ಭಾವುಕಳು ; ಯಾರದೋ ಪ್ರತಿಷ್ಠೆಗೆ ನಿರಪರಾಧಿ ಸೈನಿಕರ ರಕ್ತಪಾತವಾಗುವುದನ್ನು ತಪ್ಪಿಸಬಯಸಿದ ಮೃದುಮನಸ್ಸಿನ ಶಾಂತಿಪ್ರಿಯಳು ; ಅದಕ್ಕಾಗಿ ಸಂಧಾನಕ್ಕೆತ್ನಿಸಿದ ರಾಜಕೀಯ ನಿಪುಣೆ ; ಸಾಮ್ರಾಜ್ಯದ ಶ್ರೇಯಸ್ಸಿಗೆ ದೇವರಲ್ಲಿ ಅನನ್ಯವಾಗಿ ಮೊರೆಹೋಗುವ ಭಕ್ತೆ ; ನೃತ್ಯದಲ್ಲಿ ತಾದಾತ್ಮ್ಯ ಹೊಂದುವ ಕಲಾರಾಧಕಿ ; ಯುದ್ಧ ಘೋಷಿಸಿದಾಗ ಮುದ್ದರಸನ ಮಗಳು ಜಾಕಲೆ ನೃತ್ಯಮಾಡಲು ಲಕುಮೀದೇಗುಲಕ್ಕೆ ಬಂದಾಗ ಅವಳು ಶತ್ರುಪಕ್ಷದವಳೆಂದು ಕಡೆಗಣಿಸದೆ ಆದರಿಸಿದ ವಿಶಾಲ ಹೃದಯಿ ; ತನ್ನ ಕಲೆಯನ್ನು ದೈವಿಕನಿಮಿತ್ತ ಬಳಸುವ ನೀತಿವಂತೆ ; ಯುದ್ಧಕ್ಕೆ ತೆರಳಿದ ಪತಿ ರಾಜಧಾನಿಯ ವಿಪ್ಲವದಿಂದ ಅಧೀರವಾಗುವುದು ಬೇಡವೆಂದು ತಾನೇ ಯುದ್ಧಕ್ಕೆ ಅಣಿಯಾದ ಧೀರೆ ; ಪತಿವ್ರತೆ . . . ಹೀಗೆ ಪಟ್ಟದರಾಣಿ, ನೃತ್ಯಕೋವಿದೆ ಶಾಂತಲೆಯ ಕುಸುಮಕೋಮಲ ಹಾಗೂ ವಜ್ರದಂತೆ ಗಟ್ಟಿಯಾದ ಸ್ವಭಾವ ಚಿತ್ರಣ ಸಮಯ ಸನ್ನಿವೇಶಕ್ಕೆ ಪೂರಕವಾಗಿ ಬಂದಿದ್ದು ಅವಳ ವ್ಯಕ್ತಿತ್ವದ ಬೇರೆ ಬೇರೆ ಆಯಾಮಗಳನ್ನು ಚಿತ್ರಿಸುವಲ್ಲಿ ನಾಟಕ ಯಶಸ್ವಿಯಾಗಿದೆ.

ರಾಜಕೀಯ ತಂತ್ರಜ್ಞ ವಿಕ್ರಮಾದಿತ್ಯ ಹೊರಗೆ ಧಾರ್ಷ್ಟಿಕನಂತೆ ಕಂಡರೂ ಒಳಗೆ ಕಲಾರಾಧಕ ; ಶಾಂತಲೆಯ ಬಗ್ಗೆ ಪಿತೃವಾತ್ಸಲ್ಯ ತೋರುವ ಸದಭಿರುಚಿಯ ನೃತ್ಯೋಪಾಸಕ ; ಮಹಾರಾಣಿ ಲಕುಮಾದೇವಿಗೆ ಶಾಂತಲೆಯ ಬಗ್ಗೆ ಮಾತೃಹೃದಯ. ರಾಜನಿಗೆ ತಕ್ಕ ಮಂತ್ರಿ ಮುದ್ದರಸ. ಉದಯಾದಿತ್ಯನ ಮನಸ್ಸು ಶಂಕೆಯಿಂದಾವೃತವಾಗುವುದರಲ್ಲಿ ರಾಜನೊಡನೆ ಸಮಯೋಚಿತವಾದ ನಟನೆ ಈತನದು. ರೂವಾರಿ ಮಣಿಯೋಜ, ಕವಿ ನಿಷ್ಠಾವಂತರು. ತಮ್ಮ ಅಭಿವ್ಯಕ್ತಿ ಮಾಧ್ಯಮಗಳಾದ ಉಳಿ, ಲೇಖನಿಗಳ ಮೂಲಕ ಹೊಯ್ಸಳ ರಾಣಿಯನ್ನು, ಆ ಸಾಮ್ರಾಜ್ಯದ ಸಂಸ್ಕೃತಿ ವೈಭವಗಳನ್ನು ಅಜರಾಮರಗೊಳಿಸಿದ ದೇಶಪ್ರೇಮಿಗಳು ; ಸಂಸ್ಕೃತಿಪ್ರಿಯರು. ಇನ್ನುಳಿದ ಪಾತ್ರಗಳು ಹದವರಿತು ಯಥೋಚಿತವಾಗಿ ಬಂದಿವೆ. ನಾಟಕದ ಶೈಲಿ ಇತಿಹಾಸದ ಸಂಗತಿಯೊಂದರ ಪುನರ್ನಿರ್ಮಾಣಕ್ಕೆ ಅನುಗುಣವಾಗಿ ಪ್ರೌಢವಾಗಿದೆ, ಗಂಭೀರವಾಗಿದೆ. ಆಕೃತಿಯಲ್ಲಿ ಕಿರಿದಾದ ಈ ನಾಟಕ ಶಾಂತಲೆಯ ವ್ಯಕ್ತಿತ್ವವನ್ನು ಮಂದಾರ ಪುಷ್ಪದಂತೆ ಅಪೂರ್ವಗೊಳಿಸಿದೆ.

ನಾಟ್ಯ ಮಂದಾರ

ಡಾ. ಟಿ. ಎಂ. ಸರಸ್ವತಿ

ಆಧುನಿಕ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಅತ್ಯುತ್ತಮ ಕೊಡುಗೆಗಳನ್ನು ಇತ್ತವರಲ್ಲಿ ಶ್ರೀ ಸಮೇತನಹಳ್ಳಿ ರಾಮರಾಯರೂ ಒಬ್ಬರು. ಆರೋಗ್ಯ ಇಲಾಖೆಯಲ್ಲಿ ಸೇವೆಸಲ್ಲಿಸಿ ನಿವೃತ್ತರಾದ ಶ್ರೀಯುತರಿಗೆ ವೃತ್ತಿಬೇರೆಯಾಗಿದ್ದರೂ, ಪ್ರವತ್ತಿಯೆಲ್ಲಾ ಸಾಹಿತ್ಯಲೋಕ ದಲ್ಲೇ. ಐತಿಹಾಸಿಕ ನಾಟಕ ರಚನೆಯಲ್ಲಿ ಇವರದ್ದು ಎತ್ತಿದ ಕೈ. ಹೊಯ್ಸಳೇಶ್ವರರ ಕಥಾ ನಿರೂಪಣೆಯಲ್ಲಿ, ಅದರಲ್ಲೂ ಶಾಂತಲೆಯ ಪಾತ್ರದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ. ಇವರು ರಚಿಸಿರುವ ಕಥೆ, ಕಾದಂಬರಿ, ಕವಿತೆ, ನಾಟಕಗಳಲ್ಲಿ ನಾಟಕಗಳ ಸಂಖ್ಯೆಯೇ ಹೆಚ್ಚು. ಇತಿಹಾಸದ ಒಂದು ಎಳೆ ಸಿಕ್ಕಿದರೂ ಸಾಕು, ರಾಯರ ಕಲ್ಪನಾಶಕ್ತಿ ಗರಿಗೆದರಿ ಕೊಳ್ಳುತ್ತದೆ. ಇದಕ್ಕೆ 'ನಾಟ್ಯ ಮಂದಾರ' ನಾಟಕವೇ ಸಾಕ್ಷಿಯಾಗಿದೆ.

ಹೊಯ್ಸಳ ದೊರೆಯ ಪಟ್ಟಮಹಿಷಿ ಶಾಂತಲಾ ದೇವಿಯು ನೃತ್ಯ ಪರಿಣತಳು. ಗುಣಗಳ ಗಣಿಯಾದ ಈಕೆ ಕಲೆಯನ್ನು, ಕಲೆಯ ಧ್ಯೇಯೋದ್ದೇಶಗಳನ್ನೂ ಕಂಡ ರೀತಿ ಈ ನಾಟಕದ ತಿರುಳು. 'ಕಲೆಗಾಗಿ ಕಲೆ' ಎಂಬ ನುಡಿಯ ಔಚಿತ್ಯವನ್ನು ಶಾಂತಲೆಯ ಪಾತ್ರದ ಮೂಲಕ ಕಂಡರಿಸುವ ಪ್ರಯತ್ನ ಲೇಖಕರದಾಗಿದೆ. ಅವರೇ ಹೇಳಿರುವಂತೆ ಲಲಿತಕಲೆ ಗಳು ತಮೋಗುಣ ಪ್ರಧಾನವಾದ ವಿಜಯವನ್ನಷ್ಟೇ ಕೊಡದೆ, ಚೇತೋಹಾರಿಯಾದ ಸತ್ವಶಕ್ತಿಯ ಗೆಲುವನ್ನು ಕೊಡಬಲ್ಲುದೆಂಬುದು 'ನಾಟ್ಯ ಮಂದಾರ'ದ ಶಾಂತಲಾ ದೇವಿಯ ನಿಲುವಿನಲ್ಲಿ ಗಟ್ಟಿಗೊಂಡಿದೆ. ಹತ್ತು ಪ್ರವೇಶಗಳಲ್ಲಿ (ಅಂಕ) ಬರುವ ಈ ನಾಟಕದ ಕಥಾವಸ್ತು ಇಂತಿದೆ :

ಹೊಯ್ಸಳ ರಾಜ ವಿಷ್ಣುವರ್ಧನನ ಅನುಪಸ್ಥಿತಿಯಲ್ಲಿ ನಾಡಿಗೆ ಬಂದ ಚಾಲುಕ್ಯ ಸಿಂಹಾಸನಾಧೀಶ ವಿಕ್ರಮಾದಿತ್ಯ ಮತ್ತು ಅವನ ಪಟ್ಟದರಸಿ ಲಕುಮಾದೇವಿಯರು ಶಾಂತಲೆಯ ನೃತ್ಯವನ್ನೀಕ್ಷಿಸಲು ಅಪೇಕ್ಷಿಸುವರು. ಆದರೆ ತನ್ನ ಕಲೆಯನ್ನು ಇತರರ ಮನರಂಜನೆಗಾಗಿ ಬಳಸಲು ಇಷ್ಟಪಡದ ಶಾಂತಲೆ ಅವರ ಕೋರಿಕೆಯನ್ನು ನಿರಾಕರಿಸು ತ್ತಾಳೆ. ನಿರಾಶನಾದ ಚಕ್ರವರ್ತಿ ಯುದ್ಧವನ್ನು ಘೋಷಿಸುತ್ತಾನೆ. 'ಕಲೆಯೋ ಬೇರೆ

---

* ಈ ನಾಟಕ ಹೊಯ್ಸಳ ವಿಷ್ಣುವರ್ಧನನ ಯುಗದ ನಾಟಕಚಕ್ರದಲ್ಲಿ ಮೂರನೆಯದು ಮತ್ತು ಕೊನೆಯದು. ಇದನ್ನು ಬೆಂಗಳೂರು ವಿಶ್ವವಿದ್ಯಾನಿಲಯ ೧೯೬೯–೭೦ನೆಯ ವರುಷದಲ್ಲಿ ಬಿ.ಎ. ಪದವಿ ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ತೆಗೆದುಕೊಂಡಿ ದ್ದಿತು.—ಸಂ.

ಜೀವನ ವ್ಯಾವಹಾರವೇ ಬೇರೆ' ಎಂಬ ಅಭಿಪ್ರಾಯವುಳ್ಳ ಶಾಂತಲೆ ಯುದ್ಧಕ್ಕೆ ಸಿದ್ಧಳಾಗುತ್ತಾಳೆ. ಕಾಯಾ-ವಾಚಾ ಮನಸಾ ನಾಡಿನ ಹಿತವನ್ನೇ ಬಯಸುತ್ತಿದ್ದ ಆಕೆ ಉದಯಾದಿತ್ಯನ ವರ್ತನೆಯಿಂದ ತುಂಬಾ ನೊಂದುಕೊಳ್ಳುತ್ತಾಳೆ. ಇದು ವಿಕ್ರಮಾದಿತ್ಯನ ಷಡ್ಯಂತ್ರಗಳಲ್ಲೊಂದಾಗಿರುತ್ತದೆ. ಯುದ್ಧದ ಹಿಂದಿನ ದಿನ ಲಕ್ಷ್ಮೀದೇವಿಯ ದೇವಾಲಯದಲ್ಲಿ ನೃತ್ಯಪೂಜೆಯನ್ನು ಸಲ್ಲಿಸಲು ಅಣಿಯಾಗುತ್ತಾಳೆ. ಅಲ್ಲಿ ಕಲಾರಾಧಕ ಚಕ್ರವರ್ತಿ ವಿಕ್ರಮಾದಿತ್ಯನೂ. ಆತನ ಪತ್ನಿಯೂ ನಾಡಿಗರ ವೇಷದಲ್ಲಿ ಬಂದು ನೃತ್ಯವನ್ನು ವೀಕ್ಷಿಸುತ್ತಾರೆ. ಆ ಅಮೋಘವಾದ ನಾಟ್ಯವನ್ನು ಕಂಡು ಬೆರಗಾಗುತ್ತಾರೆ, ಸನ್ನಡತೆಯನ್ನು ಧನ್ಯತೆಯನ್ನು ಅನುಭವಿಸುತ್ತಾರೆ. ಶಾಂತಲೆಯ ಕಲಾರಾಧನೆಯನ್ನು ಸನ್ನಡತೆಯನ್ನು ಗೌರವಿಸುತ್ತಾರೆ.

ಇದಿಷ್ಟು ಈ ನಾಟಕದಲ್ಲಿ ಅಳವಡಿಸಿರುವ ಕಥಾ ವಿಶೇಷ, ನೃತ್ಯ ಪ್ರವೀಣೆ ಶಾಂತಲೆ ಕಲಾಸರಸ್ವತಿಯೇ ಆಗಿದ್ದಳು. ಅವಳ ದೈವಿಕವಾದ ಕಲಾಭಿವ್ಯಕ್ತಿಯು ಪ್ರಕಟಗೊಳ್ಳುತ್ತಿದ್ದ ವಿಧಾನವನ್ನು ಅರಿಯಲು, ಆಸ್ಥಾನ ಸ್ಥಪತಿಯಾದ ಮಣಿಯೋಜನ ಮಾತುಗಳನ್ನು ಗಮನಿಸಿದರೆ ಮನವರಿಕೆಯಾಗುತ್ತದೆ.

"ಮಹಾರಾಣಿಯವರು ಆ ಕುಣಿತದ ಕಲೆಯನ್ನು ಬಳಸಿಕೊಂಡಿರುವುದು ಕೀರ್ತಿಗಾಗಲೀ, ಅರ್ತಿಗಾಗಲೀ ಅಲ್ಲ-ಮಾನವನ ಬಾಳಿನ ಸಂತೋಷ ಸಂಭ್ರಮಗಳಾಗಲಿ, ನೋವು-ನಲಿವುಗಳಾಗಲಿ, ವೀರ-ಭಯಾನಕಗಳಾಗಲೀ ಅವುಗಳ ಅನುಕರಣಗಳನ್ನು ಅನುಭವಿಸುವ ಕಾವಿನಲ್ಲಿ ಅನುಭಾವಿಯ ಜೀವನ ಇಲ್ಲಿ ಹದಗೊಂಡು ತನ್ನ ಸುತ್ತ ಸ್ವರ್ಗವೊಂದನ್ನು ನಿರ್ಮಿಸಿಡಬಲ್ಲದು." ಮತ್ತೆ ಮುಂದುವರೆದು "ಕಲೆಗೆ ಲೋಕಕಲ್ಯಾಣದ ಹಿರಿಯ ಗುಣವಿದ್ದರೂ, ಅದನ್ನು ಲೋಕಶಕ್ತಿಗೇ ನಿವೇದಿಸಬೇಕು. ಆಗಲೇ ಅದರ ಸಾರ್ಥಕತೆ ಎಂದೆಂಬ ತತ್ವವನ್ನು ನೀವು ಹಿಡಿದುಕೊಂಡಿರುವುದರಿಂದ ನಿಮ್ಮ ನರ್ತನದಲ್ಲಿ ಹೊಸಹೊಸದು ರಾಗಗಳನ್ನು, ರಸಗಳನ್ನು ಗತಿ ಗಾಂಭೀರ್ಯಗಳನ್ನು ಚೆಲುವುಗಳನ್ನು, ನಾವು ಅನುಭವಿಸುತ್ತಿದ್ದೇವೆ."-(ಮೊದಲನೆಯ ಪ್ರವೇಶ-ಪು-೭)

ತ್ರಿಭುವನ ಮಲ್ಲ ವಿಕ್ರಮಾದಿತ್ಯನ ಆಶಯವಾದರೂ ಇಷ್ಟೇ. ಲೋಕೋತ್ತರವೆನಿಸಿದ್ದ ಶಾಂತಲೆಯ ನೃತ್ಯವೀಕ್ಷಣೆ, ಪತಿಯಿಲ್ಲದ ಸಮಯದಲ್ಲಿ ಬಂದ ಅವರನ್ನೂ ಆದರ ಸತ್ಕಾರಗಳಿಂದ ಗೌರವಿಸಿದ ಶಾಂತಲೆ ಅವರ ಕೋರಿಕೆಯನ್ನು ನೆರವೇರಿಸಲು ಅಸಹಾಯಕಳಾಗುತ್ತಾಳೆ. ಇದರಿಂದ ಅವಳು ಅನುಭವಿಸುವ ಮಾನಸಿಕ ಅಶಾಂತಿ, ಎದುರಿಸಬೇಕಾದ ಪರಿಸ್ಥಿತಿ, ಕೊನೆಗೆ ಕೈಗೊಳ್ಳುವ ದೃಢನಿರ್ಧಾರ-ಇವು ಮುಂದಿನ ಅಂಕಗಳಲ್ಲಿ ವಿಸ್ತಾರಗೊಂಡಿವೆ.

ಎರಡನೆಯ ಪ್ರವೇಶದಲ್ಲಿ ವಿಕ್ರಮಾದಿತ್ಯನ ಪತ್ನಿ ಲಕುಮಾದೇವಿಯವರಿಗೂ, ಶಾಂತಲೆಗೂ ನಡೆಯುವ ಸಂಭಾಷಣೆಯಿಂದ ಶಾಂತಲೆ ತನ್ನ ನೃತ್ಯದ ಬಗ್ಗೆ ಹೊಂದಿದ್ದ ಭಾವ ಹೀಗೆ ವ್ಯಕ್ತಪಟ್ಟಿದೆ ;

"ಕಲಾದೇವಿ ಕರೆದಾಗ ಬರುವಷ್ಟು ಸುಲಭಳೆನಲ್ಲವೆಂಬುದನ್ನೂ ನಾನು ನಿಮಗೆ

ಹೇಳಬೇಕಾಗಿಲ್ಲವಲ್ಲವೇನವ್ವ ? ಬೇಕೆಂದಾಗ ಆವಾಹಿಸಿಕೊಳ್ಳುತ್ತೇನೆ ಎಂದು ಹೇಳುವುದಾದರೂ ಬಹು ಸಾಹಸದ ಮಾತೇ. ನಾವೆಲ್ಲ ಆ ತಾಯಿ ಕೈಯ ಕಮಲದ ಹೂವಿನಂತೆ. ಅವಳು ಆಡಿಸಿದಂತೆ ಅವಳ ಮುಂದಕ್ಕೆಂದು ನಾವು ಆಡಬೇಕು. ಆ ತಾಯಿಗೆ ಅದೇ ನಮ್ಮಾತ್ಮದ ಕಾಣಿಕೆ."

ಕಲೆಯನ್ನು ಸ್ವಪ್ರಯೋಜನಕ್ಕೆಂದು ಬಳಸುವುದು ಸರಿಯಲ್ಲ.ಅದು ಲೋಕವಸ್ತು. ಅದರ ಮೇಲೆ ಸ್ವಾಮ್ಯವನ್ನು ಸಾಧಿಸಹೊರಟರೆ ಸ್ವಾರ್ಥದ ಲಾಲಸೆಯಾಗುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದವಳು ರಾಣಿ ಶಾಂತಲೆ. ಅವಳ ನೃತ್ಯಸೇವೆ ಭಗವಂತನ ಪೂಜೆಗಾಗಿಯಷ್ಟೇ ಸಮರ್ಪಿತವಾಗುತ್ತಿತ್ತು. ಆ ಸಂದರ್ಭವನ್ನು ಕಣ್ಣಾರೆ ಕಾಣುವ ಸುಯೋಗ ರುವಾರಿಗಳಿಗೂ ಒದಗುತ್ತಿತ್ತು. ಅದು ಅವರ ಶಿಲ್ಪಗಲ್ಲಿ ಒಡಮೂಡಿ ಶಾಶ್ವತವಾಗಿ ನಿಲ್ಲುತ್ತಿತ್ತು. ಇದನ್ನು ತಪ್ಪಾಗಿ ಗ್ರಹಿಸಿದ ವಿಕ್ರಮಾದಿತ್ಯನು ತನ್ನ ದೇಶದ ರೂವಾರಿಗಳನ್ನು ಕಳುಹಿಸಿಕೊಡುವುದರ ಮೂಲಕ, ಶಾಂತಲೆಯಿಂದ ನೃತ್ಯ ಮಾಡಿಸಬಹುದೆಂದು ಭಾವಿಸುತ್ತಾನೆ. ಅವಳು ಅದಕ್ಕೆ ಒಪ್ಪದಿದ್ದಾಗ ಉದಯಾದಿತ್ಯ–ಶಾಂತಲೆಯರಲ್ಲಿದ್ದ ಪ್ರೀತಿ–ವಾತ್ಸಲ್ಯವನ್ನು ಮುರಿಯುವುದರ ಮೂಲಕ ಭೇದೋಪಾಯವನ್ನು ಮಾಡುತ್ತಾನೆ. ಯಾವುದಕ್ಕೂ ಕದಲದ ಮಹಾರಾಣಿಯ ನಿಲುವಿನಿಂದ ಕೆರಳಿ ಯುದ್ಧವನ್ನೂ ಘೋಷಿಸುವುದರ ಮೂಲಕ ತನ್ನ ಕೊನೆಯ ಪ್ರಯತ್ನವನ್ನು ನಡೆಸುತ್ತಾನೆ. ತನ್ನ ಅಪೇಕ್ಷೆಯನ್ನು ನೆರವೇರಿಸಿಕೊಳ್ಳಲು ಸಾಮ, ದಾನ, ಭೇದ, ದಂಡ ಎಲ್ಲವನ್ನೂ ಪ್ರಯೋಗಿಸಿ ನೋಡುವ ರಾಜ ವಿಕ್ರಮಾದಿತ್ಯನ ಬಯಕೆ ನೆರವೇರಿತೇ ? ಇದನ್ನೂ ಹಂತ ಹಂತವಾಗಿ ಬಿಡಿಸಿ ತೋರಿಸುವಲ್ಲಿ ನಾಟಕಕಾರರ ಕೌಶಲ ಅಡಗಿದೆ.

ಉದಯಾದಿತ್ಯನ ವಿಮುಖ ವರ್ತನೆಯಿಂದ ಶಾಂತಲೆಯ ಮನ ನೋಯುತ್ತದೆ. ಅವಳ ವೇದನೆಯನ್ನು ಕಂಡು ಕಂಗೆಟ್ಟ ಚೆಂದಲೆಯನ್ನು ಸಮಾಧಾನಪಡಿಸಲು ಮಣಿಯೋಜನಾಡುವ ಮಾತುಗಳಲ್ಲಿ ಜೀವನದ ಗಹನ ಸತ್ಯವೇ ಅಡಕವಾಗಿದೆ : "ನೋವು ಬಂದು ಕಾಡಿ ಹೋಗುವುದು ಹಣ್ಣಾಗುವುದಕ್ಕೆ. ನೋವಿನ ಆ ಕಾವು ಇಲ್ಲವಾದರೆ ಹುಳಿ ಮಧುರವಾಗುವುದೆಂತು ?"–ನೋವು ನಲಿವಿಗೆ ನಾಂದಿ ಎಂಬುದನ್ನೂ, ಕಷ್ಟಗಳೇ ಸುಖದ ಸೋಪಾನವಾಗುವುದೆಂಬುದನ್ನೂ, ಮಂಥನದಿಂದಲೇ ಮಹತ್ತುಲಭಿಸುವುದೆಂಬುದನ್ನೂ ಲೇಖಕರು ಬಹುಮಾರ್ಮಿಕವಾಗಿ ಹೇಳಲೆತ್ನಿಸಿರುವುದು ಗಮನೀಯವಾಗಿದೆ. ಅದಕ್ಕಾಗಿ ಕವಿ ನಾಗಚಂದ್ರನ ಚಂಪಕಮಾಲಾ ವೃತ್ತವೊಂದನ್ನು ಮಣಿಯೋಜನ ಬಾಯಿಂದ ಹೇಳಿಸಿರುವುದು ಔಚಿತ್ಯಪೂರ್ಣವಾಗಿದೆ : (ಏಳನೆಯ ಪ್ರವೇಶ. ಪು. ೫೭)

> ಕಡೆದೊಡೆ ಪಾಲ್ಗಡಲ್ ವಿವಿಧ ವಸ್ತುವನೀಯದೆ ? ತೇಯೆ ಚಂದನಂ
> ಕುಡದೆ ಸುಗಂಧಮಂ ? ಪಿಳಿಯೆ ಕರ್ಬಿನಿದಾಗದೆ ? ಕಾಸೆ ಕಾಂಚನಂ
> ಪಡೆಯದೆ ಕಾಂತಿಯಂ ? ನಿಜದಿನೊಳ್ಪಿದಪ್ಪವರೆಂತು ಬಾಧೆವ
> ಟ್ಟೊಡಮುಪಕಾರಮಂ ಪರರ್ಗೆ ಮಾಡದೆ ಬಾಧೆಯನೇಕೆ ಮಾಡುವರ್ ?

ಇದೇ ರೀತಿ ಒಂಬತ್ತನೆಯ ಪ್ರವೇಶದಲ್ಲಿ ಪಂಪಭಾರತ, ಕರ್ಣಾಟಕ ಕಾದಂಬರಿ ಮತ್ತು ಗದಾಯುದ್ಧದಿಂದಲೂ ಪದ್ಯಗಳನ್ನು ಬಳಸಿಕೊಂಡಿದ್ದಾರೆ. ಹೀಗೆ ಪ್ರಾಚೀನ ಕಾವ್ಯಗಳಿಂದ ಸಂದರ್ಭೋಚಿತವಾಗಿ ಪದ್ಯಗಳನ್ನು ಬಳಸಿರುವುದರಿಂದ, ಪ್ರಸಂಗ ಪುಷ್ಟಿಗೊಂಡಿದೆ. ಕವಿ ನಾಗಚಂದ್ರನ ಆಗಮನವೂ ಆರನೆಯ ಪ್ರವೇಶದಲ್ಲಿ ಆಗಿದೆ. ಆಸ್ಥಾನ ಕವಿಯಾಗಿದ್ದ ನಾಗಚಂದ್ರನ ಕವಿತಾಸ್ಫೂರ್ತಿ ರಾಣಿ ಶಾಂತಲೆ ಎಂಬ ಉದ್ಗಾರವೂ ಮಣಿಯೋಜನದು. ಮಣಿಯೋಜನಿಂದಾಡಿಸುವ ಅನೇಕ ಸತ್ವಪೂರಿತ ಮಾತುಗಳಲ್ಲಿಯೇ ನಾಟಕದ ತಿರುಳು ಅಡಗಿದೆ.

ಈ ನಾಟಕದಲ್ಲಿ ಬರುವ ಮುಖ್ಯಪಾತ್ರಗಳೆಂದರೆ ರಾಣಿ ಶಾಂತಲೆ, ಮಣಿಯೋಜ, ವಿಕ್ರಮಾದಿತ್ಯ ಶಾಂತಲೆಯ ಪಾತ್ರದಷ್ಟೇ ಮಹತ್ವಪೂರಿತವಾದ ಪಾತ್ರ ಸ್ಥಪತಿ ಮಣಿಯೋಜನದು. ಶಿಲ್ಪಕಲೆಯಲ್ಲಿ ಪರಿಣಿತನಾದ ಆತ ಕಲೆಯ ಆರಾಧಕನಾಗಿ ಬಾಳಿನಮರ್ಮವನ್ನು ಅರಿತಿದ್ದವನು. ಸಂಕಟದ ಸನ್ನಿವೇಶದಲ್ಲಿ ಶಾಂತಲೆಗೆ ಅವನು ಹೇಳುವ ಮಾತುಗಳಲ್ಲಿ ಅವನ ಪಕ್ವವಾದ ಜೀವನಾದರ್ಶದ ದರ್ಶನವಾಗುತ್ತದೆ :

“ಮಾನವನ ನಿತ್ಯವ್ಯವಹಾರ ಹದಗೊಳ್ಳಲೆಂದೇ, ಶುದ್ಧವಾಗಲೆಂದೇ ಕಲೆಯ ಉಪಾಸನೆ ತಾಯಿ. ಇದನ್ನು ಶುದ್ಧಗೊಳಿಸಿ ಮನಸ್ಸನ್ನು ಊರ್ಧ್ವಮುಖವಾಗಿ ಮಾಡಲು ಕಲೆಯ ಅವತರಣವಾಗಿದೆ. ಜೀವನದಲ್ಲಿ ಕೊಂಕು, ಕಪ್ಪು, ಕಾವು, ನೋವು ಆದೇ ನುಂಟು, ಅವೆಲ್ಲವನ್ನೂ ತನ್ನ ಸತ್ವದಿಂದ ನೇರಕ್ಕೆ ತಿದ್ದಿಕೊಂಡು ತೊಳೆದು ಬೆಳಗಿಸಿ ಸುಖಶೀತಲವಾಗಿ ಮಾರ್ಪಡಿಸಿ, ನಲಿವನ್ನು ಮೂಡಿಸುವ ಆ ಶಕ್ತಿಯೇ ಕಲೆ. ಅದು ವೇದ ಉಪನಿಷತ್ತುಗಳ ರೂಪದಲ್ಲಿರಬಹುದು ಅಥವಾ ನಾಟ್ಯ, ಶಿಲ್ಪ, ಸಂಗೀತ, ಸಾಹಿತ್ಯಾದಿ ಲಲಿತಕಲೆಗಳಾಗಿರಬಹುದು. ಮೊದಲನೆಯದನ್ನು ನಾರಿಕೇಳಪಾಕ ಎಂದರೆ ಎರಡನೆಯವುಗಳನ್ನು ಕದಳೀಪಾಕವೆಂದೆನ್ನೋಣ....ಕಲೆಗಳನ್ನಭ್ಯಸಿಸಿ ಅನುಭವಿಸಿರುವ ವ್ಯಕ್ತಿಯ ಮನಸ್ಸು ಬುದ್ಧಿಗಳು ಹದಗೊಳ್ಳುತ್ತವೆ. ಪ್ರಾಪಂಚಿಕವಾದ ಕಷ್ಟಕಾರ್ಪಣ್ಯಗಳನ್ನು ಎದುರಿಸಲು ಅಥವಾ ಬಂದವುಗಳನ್ನು ಸ್ವೀಕರಿಸಿ ತನ್ನಂತರಾಳದಲ್ಲಿ ಜಾಗಕೊಟ್ಟು ತನ್ನಂತೆ ಮಾಡಿಕೊಳ್ಳುವ ದಿವ್ಯಶಕ್ತಿಯನ್ನು ಅದು ನಮ್ಮಲ್ಲಿ ಬೆಳೆಸುತ್ತದೆ.”–ಈ ಪಾತ್ರದ ಬಾಯಿಂದ ಆಡಿಸಿರುವ ಇಂತಹ ಮಾತುಗಳಲ್ಲೇ ನಾಟಕದ ಆಶಯವಿದೆ. ಕಲೆಯ ಉಪಾಸನೆಯನ್ನು ಯಾವ ದೃಷ್ಟಿಯಿಂದ ಮಾಡಿದರೆ ಲೋಕದ ಹಿತವನ್ನು ಸಾಧಿಸಬಹುದೆಂಬ ಮಾತನ್ನು ಪರ್ಯಾಯವಾಗಿ ಹೇಳುತ್ತಿದ್ದಾರೆ.

ವಿಕ್ರಮಾದಿತ್ಯ ಹೂಡಿದ್ದ ಸಂಚು ಸಫಲಗೊಳ್ಳುವ ಸನ್ನಿವೇಶ ಈ ನಾಟಕದ ಕೊನೆಯ ಅಂಕವಾಗಿದೆ. ಚಕ್ರವರ್ತಿಯಾಗಿಯೂ, ಮುಪ್ಪಿನ ಮುದುಕನಾಗಿಯೂ ಶಾಂತಲೆಯ ನೃತ್ಯವನ್ನು ನೋಡಬೇಕೆಂಬ ಉತ್ಕಟ ಅಭಿಲಾಷೆಯಿಂದ ನಾಡಿಗರ ವೇಷ ಧರಿಸಿ, ಶ್ರೀ ಸಾಮಾನ್ಯನಂತೆ ಬಂದು ನಾಟ್ಯವನ್ನು ನೋಡಿ ತನ್ನ ಆಸೆಯನ್ನು ಪೂರೈಸಿಕೊಳ್ಳುತ್ತಾನೆ. ತಾನು ಕೈಗೊಂಡ ಯೋಜನೆಯನ್ನು ಹೇಳಿ, ಮನ್ನಿಸಿರೆಂದು ಶಾಂತಲೆಯನ್ನು ಕೇಳಿಕೊಳ್ಳುತ್ತಾನೆ. ತನ್ನ ದೊಡ್ಡತನವನ್ನು ತೋರಿಸುತ್ತಾನೆ. ಕಲೆಯ ಕಲ್ಯಾಣ

ವನ್ನು ಕಂಡು ಹಿಗ್ಗುವ ದೊರೆ ಅದನ್ನು ಎಲ್ಲರೆದುರು ಪ್ರಕಟಪಡಿಸುತ್ತಾನೆ.

'ನಾಟ್ಯಮಂದಾರ'–ನಾಟಕದ ಯಶಸ್ಸು ನಿಂತಿರುವುದೇ ಇಂತಹ ಪಾತ್ರಚಿತ್ರಣ ದಿಂದ ಎಂದು ಹೇಳಬಹುದು. ಗಂಭೀರವಾದ ಸನ್ನಿವೇಶದ ಮಧ್ಯೆ ಬಾಲಕ ಎರೆಯಂಗನ ಪ್ರವೇಶ, ಅವನ ಬಾಲಭಾಷೆಯ ಪ್ರಶ್ನೆಗಳಿಂದ ತಿಳಿಯಾಗುವ ಸನ್ನಿವೇಶ, ಹಳಗನ್ನಡ ಪದ್ಯಗಳ ಬಳಕೆಯಿಂದ ಸಂದರ್ಭಕ್ಕೆ ಒದಗುವ ಬಿಗಿ, ಇವುಗಳಿಂದ ನಾಟಕ ಕಳೆಗಟ್ಟುತ್ತದೆ. ಸಂಭಾಷಣೆ ಕೆಲವೆಡೆ ದೀರ್ಘ ಎನ್ನಿಸಿದರೂ ಬೇಸರ ಹುಟ್ಟಿಸುವುದಿಲ್ಲ. ಮನಸ್ಸಿಗೆ ಮುದ ವನ್ನು ಉಂಟುಮಾಡುತ್ತವೆ.

ಸಮೇತನಹಳ್ಳಿ ರಾಮರಾಯರು ಸಾಹಿತ್ಯಕ್ಕೆ ಮನಸೋತವರು. ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಇತಿಹಾಸದ ಬಗ್ಗೆ ಅಭಿಮಾನ ಉಳ್ಳವರು. ಹಾಗಾಗಿಯೇ ಹೊಯ್ಸಳ ಇತಿಹಾಸದ ವಸ್ತುವನ್ನೊಳಗೊಂಡ ನಾಟಕ ಚಕ್ರವನ್ನು ಅವರು ಶ್ರದ್ಧಾಸಕ್ತಿಗಳಿಂದ ಪೂರ್ಣಗೊಳಿಸಲು ಸಾಧ್ಯವಾಯಿತೆನ್ನಬಹುದು. ನಾಟಕ ಪ್ರಕಾರ ಅವರಿಗೆ ಪ್ರಿಯವಾದ ದ್ದಷ್ಟೇ ಅಲ್ಲ, ಒಗ್ಗಿದ ಪ್ರಕಾರವೂ ಆಗಿದೆ. ಸಂಭಾಷಣೆ ಮತ್ತು ನಾಟಕ ತಂತ್ರಗಳು ನಾಟಕದ ಜೀವಾಳವಾದ್ದರಿಂದ ಅದನ್ನು ಒಗ್ಗಿಸಿಕೊಂಡವರಿಗೇ ಆ ಪ್ರಕಾರದಲ್ಲಿ ಯಶ ಸ್ಸನ್ನು ಕಾಣಲು ಸಾಧ್ಯ. 'ನಾಟ್ಯಮಂದಾರ' ಮೂವತ್ತು ವರ್ಷಗಳ ಹಿಂದೆ ರಚನೆ ಗೊಂಡ ನಾಟಕ. ಕಾಲಪ್ರಜ್ಞೆಯನ್ನು ಇಟ್ಟುಕೊಂಡು ಪರಿಶೀಲಿಸಿದಾಗಲೂ ಈ ನಾಟಕ ಯಾವ ರಿಯಾಯಿತಿಯನ್ನೂ ಅಪೇಕ್ಷಿಸದೆ ರಂಜಿಸುತ್ತದೆ. ಜನಮನವನ್ನು ತಣಿಸುತ್ತದೆ.

More than action and incident(ಸವತಿಗಂಧವಾರಣೆ),it is description of persons and things and the conversations of the characters introduced that hold the reader's attention, so that one gets a feeling that things move too slow. The author has succeeded in recreating a noble and magnificent personality in Shanthala Devi. It is obvious that the author has made a good use of the material available in the inscriptions of the period which are couched in gorgeous language. Rama Rao prefers the pure Kannada forms that are more euphonious though less familiar to the sanskrit words in current use.

19-5-1963 **K. Sampathgiri Rao**

ಪ್ರಾಣವೀಣೆ

ಶಾಂತಾ ನಾಗರಾಜ್

"ಪತ್ನಿಯನ್ನು ದೇವಿಯಂತೆ, ಲೋಕಮಾತೆಯಂತೆ ಕಂಡು ಗೌರವಿಸುವ ಗಂಡಂದಿರು ಮತ್ತು ಪತಿಯೇ ಪ್ರತ್ಯ ದೇವರೆಂದು ಭಾವಿಸಿ, ತನ್ನದೆನ್ನುವ ಭೇದವಿಲ್ಲದೆ ಆತನಿಗೆ ತನ್ನನ್ನು ಸಮರ್ಪಿಸಿಕೊಳ್ಳುವ ಹೆಂಡತಿಯರು ಮಾಸ್ತಿ ಚಿತ್ರಿಸಿರುವ ಆದರ್ಶ ಸ್ತ್ರೀ ಪುರುಷರು. ಈ ನಂಬಿಕೆಯ ಅಡಿಯಲ್ಲಿ ಗಂಡಸಿಗೆ ಬದುಕಿನ ಗತಿಯನ್ನು ನಿರ್ಧರಿಸುವ ಇಚ್ಛಾಶಕ್ತಿ, ಕ್ರಿಯೆಗೆ ತೊಡಗುವ ಸ್ವಾತಂತ್ರ್ಯ ಇವೆ. ಆದರೆ ಹೆಂಗಸಿಗೆ ಪತಿಯು ಕೈಗೊಂಡ ದಾರಿಯಲ್ಲೇ ನಡೆಯುವುದು, ಬಂದ ನೋವುಗಳನ್ನು ನುಂಗಿಕೊಳ್ಳುವುದು, ಪರಿಸ್ಥಿತಿ ನೋಡಿ ಅವನನ್ನು ನೆರಳಿನಂತೆ ಅನುಸರಿಸಿಕೊಂಡಿರುವುದೊಂದೇ ದಾರಿ."

ಈ ಮೇಲಿನ ಮಾತುಗಳು ಮಾಸ್ತಿಯವರ ಸ್ತ್ರೀ ಪಾತ್ರವನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುವ ಡಾ. ಬಿ. ಎನ್. ಸುಮಿತ್ರಾಬಾಯಿ ತಮ್ಮ ವಿಮರ್ಶನಾಗ್ರಂಥ 'ವಿಚಯ'ದಲ್ಲಿ ಬರೆದಿರುವಂಥದ್ದು. ಇಂದು ಮಹಿಳೆಯ ವೈಯಕ್ತಿಕ ನೆಲೆಗಳು ವಿಸ್ತಾರಗೊಳ್ಳುತ್ತಿರುವಂತಹ ಕಾಲದಲ್ಲಿ, ಪ್ರಸಿದ್ಧ ಸಾಹಿತ್ಯಗಳಲ್ಲಿ, ಅದೂ ಯಾವುದೇ ಶತಮಾನದ್ದಾಗಿರದೆ ಕೆಲವೇ ದಶಕಗಳ ಹಿಂದಿನ ಸಾಹಿತ್ಯಗಳಲ್ಲಿ ಮಹಿಳೆಯರನ್ನು ಚಿತ್ರಿಸಿರುವ ರೀತಿನೀತಿಗಳ ವಿಮರ್ಶೆ ಮತ್ತೆ ಪುನರುತ್ಥಾನಗೊಳ್ಳಬೇಕಾದ ಆವಶ್ಯಕತೆಯಡಿಯಲ್ಲಿ ಸುಮಿತ್ರಾಬಾಯಿ ಈ ಮಾತುಗಳನ್ನು ಹೇಳುತ್ತಾರೆ.

ನವೋದಯದ ಹೊಸ ಸಾಹಿತ್ಯ ಬೆಳೆ. ಆ ಪ್ರಕಾರದ ಹೊಸ ಮಾರ್ಗಕ್ಕೆ ದಾರಿ ಮಾಡಿಕೊಟ್ಟಿತು ಎನ್ನುವುದು ನಿಜವಾದರೂ ಮಹಿಳೆಯರ ದೃಷ್ಟಿಯಿಂದ ಅಂಥ ಹೊಸ ಚಿಂತನೆಗಳು ಸ್ತ್ರೀಪರವಾಗಿ ಈ ಸಾಹಿತ್ಯದಲ್ಲಿ ಬರಲಿಲ್ಲ ಎನ್ನುವುದೂ ಅಷ್ಟೇ ನಿಜ. ಅದು ಮಾಸ್ತಿಯವರ ಕತೆಗಳಾಗಿರಬಹುದು, ಕೆ. ಎಸ್. ನರಸಿಂಹಸ್ವಾಮಿಯವರ ಕವಿತೆಯಾಗಿರಬಹುದು. "ವಿವಾಹ ಸಂಸ್ಥೆಯ ನೈತಿಕ ನಿಯಮಾವಳಿಗಳ ಒಳಗೆ ಹೀಗೆ ಸತ್ವಯುತ ಸ್ತ್ರೀಯರನ್ನು ಕುರಿತು ಬರೆಯುವ" ಬರವಣಿಗೆಗಳಾಗಿದ್ದಿತು ಅದು.

ಈ ಹಿನ್ನೆಲೆಯಲ್ಲಿ ರಾಸರವರ ಕಥಾಸಂಕಲನಗಳನ್ನು ಪರಿಶೀಲಿಸಿದಲ್ಲಿ, ಸರಿ

ಈ ಕಥಾಸಂಕಲನ 'ತಾಯಿ', 'ಬೆಂದಬಾಳು', 'ಒಲಿದ ಜೀವ', 'ಹೃದಯನಿಸ್ಪನ' 'ಒರೆಗಲ್ಲು' ಮತ್ತು 'ಹೂವಾದವಳು' ಎಂಬ ಆರು ಸಣ್ಣಕತೆಗಳನ್ನು ಹೊಂದಿದೆ. ಇದರ ಮೊದಲನೆಯ ಕತೆಯಾದ 'ತಾಯಿ' ಎಂಬ ಕತೆಗೆ 'ಪ್ರಜಾವಾಣಿ' ಪತ್ರಿಕೆಯವರು ೧೯೫೭ರಲ್ಲಿ ಏರ್ಪಡಿಸಿದ್ದ ಕಥಾಸ್ಪರ್ಧೆಯಲ್ಲಿ ಎರಡನೆಯ ಬಹುಮಾನವಾದ ರೂ. ೧೫೦ ಗಳು ಲಭಿಸಿವೆ.

ಸುಮಾರು ಅದೇ ಕಾಲದಲ್ಲಿ ಬರವಣಿಗೆ ಪ್ರಾರಂಭಿಸಿದ ರಾಸರವರು, ಮಹಿಳೆಯರ ಪರವಾಗಿ ಆ ಕಾಲದವರಿಗಿಂತ ತುಸು ಭಿನ್ನವಾಗಿ ಯೋಚಿಸುತ್ತಾರೆ ಎನ್ನುವುದು ಗಮನಿಸಬೇಕಾದ ಅಂಶ. ವಿವಾಹದ ಚೌಕಟ್ಟಿನೊಳಗೇ ಗಟ್ಟಿಗೊಳ್ಳುವ ಮಾಸ್ತಿಯವರ ಮಹಿಳಾ ಪಾತ್ರಕ್ಕಿಂತ ಪ್ರಬಲರಾಗಿ ಗಟ್ಟಿಯಾಗುವ ರಾಸರವರ ಮಹಿಳಾ ಪಾತ್ರಗಳು ಸ್ತ್ರೀಪರ ಕಾಳಜಿಗಳನ್ನು ಹೊಂದಿರುವವರಿಗೆ ಮುಖ್ಯವಾಗುತ್ತವೆ. ಮಾಸ್ತಿಯವರ ಕತೆಗಳಂತೆ ರಾಸರವರ ಕತೆಗಳೂ ವರ್ಗ ಪ್ರಧಾನವಾದುದೇ ಆದರೂ ಕೆಳವರ್ಗದ ಮಹಿಳೆಯರು ಇಲ್ಲಿ ಹೆಚ್ಚು ಸ್ವತಂತ್ರಪೂರ್ಣರೂ, ಸಮಾಜದ ಕಟ್ಟುಗಳಿಂದ ವಿಚಲಿತರಾಗದವರೂ ಮತ್ತು ಯಾವುದೇ ಒತ್ತಡಕ್ಕೆ ಕುಗ್ಗದವರೂ ಆಗಿದ್ದಾರೆ.

ಸ್ವರ್ಗಸೋಪಾನ, ಪ್ರಾಣವೀಣೆ, ಈಸಬೇಕು ಈ ಮೂರು ಕಥಾ ಸಂಕಲನಗಳಲ್ಲಿ ಪ್ರಾಣವೀಣೆ ಹೆಚ್ಚು ಅಧ್ಯಯನಕ್ಕೆ ಅಣಿಮಾಡಿಕೊಡುತ್ತದೆ. ಕಾಲದ ದೃಷ್ಟಿಯಿಂದ ಸ್ವರ್ಗಸೋಪಾನ ೧೯೬೨ರಲ್ಲಿ ಪ್ರಕಟವಾದರೂ ಇದರಲ್ಲಿನ ಕತೆಗಳು ೧೯೫೨ ರಿಂದ ೧೯೫೫ರ ಅವಧಿಯಲ್ಲಿ ಬರೆದುದಾಗಿದೆ. ಇದರಲ್ಲಿರುವ ನಾಲ್ಕೂ ಕತೆಗಳೂ ಮಹಾಭಾರತ ರಾಮಾಯಣಗಳಿಂದ ಹುಟ್ಟಿರುವುದಾದುದರಿಂದ ಇಲ್ಲಿ ಎಲ್ಲ ಪಾತ್ರಗಳೂ ಆ ಕಾಲದ ಪರಿಮಿತಿಯ ಒಳಗೇ ಬೆಳೆಯಬೇಕಾಗಿರುವುದರಿಂದ ಹೆಚ್ಚಿನ ಬದಲಾವಣೆಗಿಲ್ಲಿ ಅವಕಾಶವಿಲ್ಲ. ಅದರಲ್ಲೂ ಮಹಿಳಾ ಪಾತ್ರಗಳಂತೂ ನಮ್ಮ ಮಹಾಕಾವ್ಯಗಳು ಅಭಿವ್ಯಕ್ತಿಸುವ ಸಂಯಮ, ಪುರುಷಪ್ರಧಾನತೆಯನ್ನು ಗೌರವಿಸುವುದು, ಪರಾಧೀನತೆ, ತ್ಯಾಗ ಇವುಗಳಿಂದಲೇ ಸಂತೃಪ್ತಿ ಪಡೆಯುವ ಸ್ಥಿತಿಗಳಿಗೇ ಮಿತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. 'ಸ್ವರ್ಗಸೋಪಾನ' ಕತೆಯ ಏಕಪತ್ನೀವ್ರತಸ್ಥ ಶ್ರೀರಾಮನ ಸ್ನೇಹಬಯಸಿ ಸ್ವರ್ಗದಿಂದಿಳಿದ ಜ್ಯೋತ್ಸ್ನಾ ಸಹ "ನಾನು ಆ ಮಹಾನುಭಾವನನ್ನು ಒಪ್ಪಿಕೊಂಡು ತನ್ನ ಜೀವಿತೋದ್ದೇಶಕ್ಕೆ ಭಂಗ ತಂದುಕೊಳ್ಳಬೇಕು ಎಂಬ ಇಚ್ಛೆಯೂ ನನಗಿಲ್ಲ" ಎಂದು ರಾಮಚಂದ್ರನ ವ್ರತಕ್ಕೆ ತನ್ನ ತ್ಯಾಗವನ್ನು ಬೆರೆಸಿ, ಅವನ ವ್ಯಕ್ತಿತ್ವವನ್ನು ಬೆಳಗಿಸುವ ಪ್ರಯತ್ನ ಮಾಡುತ್ತಾಳೆ. ರಾಮನೂ ಅಂತಹ ನಿಷ್ಠೆಯವನೇ ಆದರೂ ಈ ಸ್ವರ್ಗದಿಂದಿಳಿದ ಸ್ತ್ರೀ ಸಹ, ನೆಲದ ಮೇಲಿನ ಮಹಿಳೆಯ ಭಾವವನ್ನೇ ತಳೆಯುತ್ತಾರೆ.

ಮಿಥಿಲೆಯರಸನ ಮಗಳು ಆಶ್ರಮದಲ್ಲಿ ತನ್ನ ತಂದೆಯನ್ನು ಆದರಿಸುವುದು, ಲವಕುಶರಿಂದ ಸೋಲುಂಡ ರಾಮ "ನೀನು ಇಂದು ನನ್ನೆಲ್ಲ ಸಂಪತ್ತಿಗೆ ಚಕ್ರವರ್ತಿನಿಯಾದೆ. ನಾಡಿಗೇ ಬೆಳಕಾದೆ" ಎಂದು ಸೀತೆಯನ್ನು ಆದರಿಸಿದಾಗ, ಕೊರಳಸೆರೆಯುಬ್ಬಿ "ಮಕ್ಕಳನ್ನು ಒಪ್ಪಿಕೋ ನನಗೆ ಅದೇ ಸೌಭಾಗ್ಯ"ವೆನ್ನುವುದು, ಲಕ್ಷ್ಮಣ ನಡೆಸುವ ರಥದಲ್ಲಿ ಕುಳಿತು ತಲೆಬಗ್ಗಿಸಿ ಅಯೋಧ್ಯೆಗೆ ನಡೆದುಬಿಡುವುದು. ಇವೆಲ್ಲ ಪುರಾಣ ಇದುವರೆವಿಗೂ ಮಹಿಳೆಗೆ ಕಲಿಸಿದ ಪಾಠದ ನೀತಿಗಳೇ. ಯುದ್ಧವಿಲ್ಲದೇ ರಾಜಿಸೂತ್ರದಲ್ಲೇ ನೆಮ್ಮದಿ ಕಂಡುಕೊಳ್ಳುವ 'ಭಾರತದ ಬೇರೊಂದು ತಿರುವು'ನ ಕುಂತಿಯಾಗಲೀ, 'ವ್ಯಾಸರ ವಾಸುದೇವ'ದ ಮಹಿಳಾಪಾತ್ರಗಳಾಗಲೀ ಯಾವ ಹೊಸ ಬೆಳಕನ್ನೂ ತಳೆಯುವುದಿಲ್ಲವಾದ್ದರಿಂದ, ಮುಖ್ಯವಾಹಿನಿಯ ಮೂಲಸ್ವರಗಳಲ್ಲಿ ಒಂದಾಗಿ ಹೋಗಿ ಪುರಾಣ ಕೊಟ್ಟ ಹೆಣ್ಣು ಪ್ರತಿಮೆಗಳೇ ಆಗಿ ಉಳಿಯುತ್ತಾರೆ.

'ಪ್ರಾಣವೀಣೆ' ಕಥಾಸಂಕಲನ ಗಮನಿಸಬೇಕಾದ ಮಹಿಳಾ ಪಾತ್ರಗಳನ್ನು ಒಳಗೊಂಡಿದೆ. ಇಲ್ಲಿನ ಕತೆಗಳು ೧೯೫೭–೫೯ರ ಅವಧಿಯಲ್ಲಿ ರಚಿತವಾದವು. ಮೊದಲ ಕತೆ 'ತಾಯಿ' ಬರೆಯುವುದಕ್ಕೆ ಕಾರಣವನ್ನು ಲೇಖಕರೇ ಮುನ್ನುಡಿಯಲ್ಲಿ "ಮಗನು ತಾಯಿಯನ್ನು ಕೊಂದು, ಮುರಿದು ಮೂಟೆಕಟ್ಟಿ, ಬಿಸಾಡಲೆಂದು ಹೆಗಲಮೇಲೆ ಹೊರುತ್ತಿರುವಾಗಲೂ ಅವಳ ಮುರಿದ ಮೂಳೆಗಳೂ 'ದಣಿವಾರಿಸಿಕೋ ಕಂದ' ಎನ್ನುತ್ತವೆ" ಎಂದು ತಮ್ಮ ತಾಯಿಯ ನುಡಿಯನ್ನು ನೆನಪು ಮಾಡಿಕೊಂಡು ಇದೇ ಪ್ರೇರಣೆ ಈ ಕತೆಯನ್ನು ಬರೆಯಿಸಿತು ಎನ್ನುತ್ತಾರಾದರೂ ಈ ಕತೆಯ ಮುಖ್ಯ ಪಾತ್ರ ಮಾದವ್ವ ಬೇರೆಬೇರೆ ಕಾರಣಗಳಿಗಾಗಿ ಸ್ತ್ರೀವಾದಿ ದೃಷ್ಟಿಕೋನಗಳಿಗೆ ಮುಖ್ಯವಾಗುತ್ತಾಳೆ. ಊರಗೌಡನ ಹೆಂಡತಿ, ಶ್ರೀಮಂತಿಕೆಯ ಕಾರಣವಾಗಿಯೂ, ಯಜಮಾನಿಕೆಯ ಕಾರಣವಾಗಿಯೂ, ಇರಬೇಕಾದ ಗಂಭೀರತೆ, ಅಥವಾ ಹಣದ ಮದ, ಅಥವಾ ಗೌಡನ ಭಯ, ಇತ್ಯಾದಿ ಯಾವ ಗುಣಗಳೂ ಇಲ್ಲದೆ ಭಿನ್ನಸ್ವಭಾವವನ್ನು ಲೇಖಕರು ದಾಖಲಿಸುತ್ತಾರೆ. "ಹೊರಗೆ ನೀರಿಗೆಂದು ಹೋದಾಗ ಕಂಡಕಂಡಗೆಳತಿಯರೊಡನೆ ವಿನೋದವಾಡುವಳು, ಹಿರಿಯರ ಕಷ್ಟ ಸುಖಗಳನ್ನು ವಿಚಾರಿಸುವಳು, ಗಂಡಸರೆಂದು ಹಿಂಜರಿಯುತ್ತಿರಲಿಲ್ಲ. ಅವರನ್ನೂ ನುಡಿಸಿಯಾಳು. ಆಳು ಮಕ್ಕಳೋ ಹರೆಯದ ಮಕ್ಕಳೋ ಗವುಡತಿ ಎಂದು ಗೌರವದಿಂದ ನುಡಿಯಲಿಲ್ಲ ಎಂದಾದರೆ, ತನ್ನ ಗೆಳತಿಯರನ್ನು ಹೇಗೋ ಹಾಗೆ ತಿಳಿಯಾದ ಅಣಕವಾಡುವಳು. ಅವರ ಮುಖದ ಮೇಲೆ ಮಿಂಚು ಮೂಡಿತು ಎಂದಾಗ ಸಮ್ಮೋದಗೊಳ್ಳುವಳು. ಗವುಡತಿ ಎಂದೆನ್ನಿಸಿಕೊಂಡವಳಿಗೆ ಮಾತು ಅಷ್ಟಿರಬಾರದು ಎಂದು ಕೆಲವರಿಗನ್ನಿಸಿದರೂ ಬಲ್ಲವರು ತಪ್ಪಲ್ಲ ಎಂದರು."

ಮಾದವ್ವನ ಈ ಸ್ವಭಾವವೇ ಕತೆಯನ್ನು ನಡೆಯುಸುವ ಮುಖ್ಯ ಅಂಶವಾಗುತ್ತದೆ. 'ಬಲ್ಲವರು ತಪ್ಪಲ್ಲ' ಎಂದರೂ ಅವಳು ಬದುಕಿದ ಸಮುದಾಯ ಅವಳ ಮಾತಿನ ಉದಾರತೆಯನ್ನು ಮೆಚ್ಚುವ ಔದಾರ್ಯ ತೋರುವುದಿಲ್ಲ. ಅದರಲ್ಲೂ ಗಂಡನ ನಿಧನ ಹಾಗೂ ಮಗನ ಯೌವನದ ನಂತರ ಹರೆಯದಲ್ಲಿಲ್ಲದಂತಹ ಬಿರುನುಡಿಗಳು ಅವಳ ಪಾಲಿಗೆ ! ಈ ಕತೆಯ ಬೆರಗಿರುವುದು ಮಾದವ್ವ ಹಾಗೂ ಚಾಮಯ್ಯರ ನಡುವಿರುವ ಕಾಮದ ಕಿಸುರಿಲ್ಲದ ಸ್ನೇಹದಲ್ಲಿ ! ಇಂತಹ ಸ್ನೇಹವನ್ನು ಅಂದಿರಲಿ ಇಂದಿಗೂ, ಹಳ್ಳಿಯಿರಲಿ, ಪಟ್ಟಣಗಳ ಸಮಾಜವೂ ನಂಜಿಲ್ಲದೆ ಒಪ್ಪೀತೇ ಎನ್ನುವುದು ಉತ್ತರ ದೊರೆಯದ ಪ್ರಶ್ನೆ. ಆದರೆ ಹಳ್ಳಿಯವರ ಮಾತಿಗೆ, ಮತ್ತು ಗದ್ದೆ ಹೊಲಗಳಲ್ಲಿ ತನ್ನಮ್ಮನ ಜೊತೆ ಚಾಮಯ್ಯನ ಒಡನಾಟವನ್ನು ಸಹಿಸದ ಮಗ ಮುನಿಸು ತೋರಿದಾಗ ತಾನಾಗೇ ಮನೆಯಿಂದ ಹೊರಬಿದ್ದು ಮಗನ ಮನೆಯ ಹಿಂದೆಯೇ ಮನೆ ಮಾಡಿಕೊಂಡು ಒಂಟಿಯಾಗಿ ಬಾಳುವಾಗಲೂ ಆ ಮನೆಗೆ ಚಾಮಯ್ಯನ ಬರು–ಹೋಗುವಿಕೆ ನಿಷ್ಕಳಂಕ ಸ್ನೇಹವೆಂದಾದರೆ, ಅದು ಬದುಕಿನಲ್ಲಿ ಸಾಧ್ಯವಾಗದಾದರೂ ಕತೆಯಲ್ಲಿ ಸಾಧ್ಯವಾಗಿದ್ದಕ್ಕೆ ನಿಜಕ್ಕಾಗಿ ಮೆಚ್ಚಬೇಕು. 'ಗಂಡು–ಗಂಡುಗಳ ನಡುವೆ ಇರುವಷ್ಟೇ ನಿರ್ಮಲವಾದ ಸ್ನೇಹ ಗಂಡು ಹೆಣ್ಣುಗಳಲ್ಲಿ ಸಾಧ್ಯವಾದಾಗಲೇ. (ಅದು ವಯಸ್ಸುಗಳ ಪರಿಮಿತಿಯನ್ನೂ

ದಾಟಿ !) ಸ್ತ್ರೀ ಮತ್ತು ಪುರುಷರ ಒಟ್ಟು ವ್ಯವಹಾರಗಳಲ್ಲಿ ಆರೋಗ್ಯಕರ ದೃಷ್ಟಿಕೋನ ಗಳು ಬೆಳೆಯುತ್ತವೆ' ಎನ್ನುವುದು ಸ್ತ್ರೀವಾದದ ಒಂದು ಮುಖ್ಯ ಆಶಯ. ಅದನ್ನು ೧೯೫೭ನೇ ಇಸವಿಯಲ್ಲೇ ಕಥೆಯ ಮೂಲಕ ಕಲ್ಪನೆ ಮಾಡಿದ ರಾಸರವರು ಅಭಿನಂದ ನಾರ್ಹರು.

'ಬೆಂದಬಾಳು' ಕತೆಯಲ್ಲಿ ಸ್ತ್ರೀಪರವಾದ ಆಶಯಗಳು 'ತಾಯಿ'ಕತೆಗಿಂತ ಮತ್ತೊಂದು ಮೆಟ್ಟಿಲನ್ನು ಮೇಲೇರಿರುವುದು ತುಂಬ ಸವಾಶಯವೆನಿಸುತ್ತದೆ. ಊರನ್ನೇ ಹೆದರಿಸುವ ರೌಡಿ ಗಂಡ ಕೊಲೆ ಮಾಡಿ ಹೆದರಿ ಹರೆಯದ ಹೆಂಡತಿಯನ್ನು ಬಿಟ್ಟು ಓಡಿ ಹೋದವ. ಹಲವಾರು ವರ್ಷಗಳ ನಂತರ ಮತ್ತೆ ಮನೆಗೆ ಬಂದಾಗ, ಮನೆಯಲ್ಲಿ ಒಂದು ಸಣ್ಣ ಹುಡುಗನಿರುತ್ತಾನೆ. ಯಾರಿವನು ? ಗಂಡನ ಪ್ರಶ್ನೆಗೆ ಹೆಂಡತಿಯ ನೇರ ಉತ್ತರ "ನನ್ನಮಗ" ! "ಇದರ ತಂದೆ ನಾನಲ್ಲವಾ" ? "ಅಲ್ಲ" ಹಸಿಗೋಡೆಗೆ ಹರಳು ಬಡಿದಂತೆ ಉತ್ತರ "ನೀನು ಕೊಲ್ಲೋಹಂಗಿದ್ದರೆ ನನ್ನ ಕೊಲ್ಲು. ಆದರೆ ಈ ಮಗುವಿನ ಮೈಮೇಗಣ ಉವ್ವ ಬಾಡದಿರಲಿ" ಹೆಂಡತಿಯ ಆಜ್ಞೆ ಬೆರೆತ ವಿನಂತಿ.

"ನೀನು ತಪ್ಪು ಮಾಡಿದೆಯೇನು ? ಇಲ್ಲ, ತಪ್ಪು ಮಾಡಿದೋನು ನಾನು. ನಿನಗೂ ನನ್ನಂಗೆ ಆಸೆಗಳಿವೆ ಅಂಬೋದನ್ನ ನಾನು ಆಗ ತಿಳೀಲಿಲ್ಲ. ನನ್ನ ಇಂತ ನೂರು ತಪ್ಪುಗಳನ್ನು ನೀನು ಮರೆತೆ. ನನ್ನನ್ನು ನಡೆಸಿಕೊಂಡೆ. ಇಲ್ಲಿ ಹಿಂಗೆ ನಿಂತು ನಾನು ತಿರುಗಿ ಬಂದು ನಿಲ್ಲೋ ಹಂಗ ಮಾಡಿದೆ. ನನ್ನ ನೂರು ತಪ್ಪುಗಳನ್ನು ನೀನು ಮರೆತಿರುವಾಗ ನಿನ್ನ ಒಂದು ತಪ್ಪನ್ನು ನಾನು ಮರೀದೆ ಇದ್ರೆ, ಇದೇನು ಜೀವಾನ ?" ಇದು ನಿಜವಾದ ಸ್ತ್ರೀಪರ ಕಳಕಳಿಯುಳ್ಳ ಆಶಯ. "ಸ್ತ್ರೀವಾದ ಇಂದು ಯಾರಿಗೆ ಬೋಧಿಸಬೇಕು" ಎನ್ನುವ ಪ್ರಶ್ನೆಗೆ 'ಬರಿ ಸ್ತ್ರೀಯರಿಗಷ್ಟೇ ಅಲ್ಲ ಮೊದಲು ಪುರುಷರಿಗೆ ಬೋಧಿಸಬೇಕು' ಎನ್ನುವ ಮಾತು ಸಮಾಜ ಸತ್ಯವಾಗಿದೆ. ಏಕೆಂದರೆ ಹಿಂದಿನಿಂದ ಇಂದಿನವರೆಗೆ ಸ್ತ್ರೀಯರಿಗೆ ಕಟ್ಟುಪಾಡುಗಳನ್ನು ವಿಧಿಸಿದವರು, ವಿಧಿಸುವವರು ಪುರು ಷರೇ ಆಗಿದ್ದಾರೆ ಮತ್ತು ಸ್ತ್ರೀಯರ ಬಗೆಗೆ ಇರುವ ಅನೇಕ ನಂಬಿಕೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ಮಿಸಿ ಸ್ತ್ರೀಯರಲ್ಲೂ ಅದನ್ನೇ ಬಿತ್ತಿರುವುದರಿಂದಲೇ, ಸ್ತ್ರೀ ಪರವಾದ ಯಾವುದೇ ಕಾಳಜಿಗಳು ಅಗತ್ಯವಿರುವಷ್ಟು ವ್ಯಾಪಕತೆಯನ್ನು ಪಡೆದು ಕೊಳ್ಳುತ್ತಿಲ್ಲ. ಸ್ತ್ರೀಯರ ಬಗೆಗಿನ ಧೋರಣೆಗಳು ಪುರುಷನಲ್ಲಿ ಮೊದಲು ಬದಲಾಗ ಬೇಕು. ಆಗಲೇ 'ಸಾಮರಸ್ಯ' ಎನ್ನುವ ಮಾತಿಗೆ ನಿಜವಾದ ಬೆಲೆ ಬರುತ್ತದೆ. ಇಂಥ ಆಶಯವನ್ನು ೧೯೫೫ರಲ್ಲೇ ಕಥೆಯಲ್ಲಿ ಕಂಡ ರಾಸರವರು ಸಮರಸಜೀವನವನ್ನು ಕಾಣ್ಕೆ ಯಾಗಿ ಕಂಡಂಥ ಅಪರೂಪದ ಲೇಖಕರು.

ಮೊನ್ನೆ ಮೊನ್ನೆಯವರೆಗೆ ಮದುವೆ ಎನ್ನುವಂಥ ಪವಿತ್ರ ಜಾತಕರ್ಮದಲ್ಲಿ ಆಯ್ಕೆಯ ಸ್ವಾತಂತ್ರ್ಯಮಾತ್ರ ಗಂಡಿಗಿದ್ದು ಹೆಣ್ಣು ಮದುವೆಗೆ ಮೊದಲು ಅಪ್ಪ ಹೇಳಿ ದ್ದಕ್ಕೂ ಮದುವೆಯ ನಂತರ ಗಂಡನಿಗೂ ತಲೆ ಬಗ್ಗಿಸಿಯೇ ನಡೆಯಬೇಕಾದುದೇ ಧರ್ಮವೆಂದು ತಿಳಿದ ದಿನಗಳಲ್ಲಿಯೂ 'ಸುರಗಿ' ಯಂಥ ಹುಡುಗಿ ಮದುವೆಯ ಆಯ್ಕೆ

ಯಲ್ಲಿ ತನ್ನ ಸ್ವಾತಂತ್ರ್ಯವನ್ನೇ ಮರೆಯುವ ಅಪರೂಪದ ಕತೆ 'ಹೂವಾದವಳು'. ಸ್ವಾಭಿಮಾನ ಸ್ವತಂತ್ರ ಪ್ರಿಯತೆ, ನಿಸ್ಸಂಕೋಚತೆ, ಇವು ರಾಸರವರ ಸ್ತ್ರೀ ಪಾತ್ರಗಳಲ್ಲಿ ಬಹಳ ಸಹಜವಾಗಿರುವ ಸ್ವಭಾವಗಳು ಮತ್ತು ಇವು ಇದ್ದರೆ ಹೆಣ್ಣು ಸ್ವಚ್ಛಂದತೆಯನ್ನು ಪಡೆದು ಸಮಾಜವನ್ನು ಹಾಳುಮಾಡುತ್ತಾಳೆ ಎನ್ನುವ ಹಳೆಯ ನಂಬಿಕೆಯನ್ನು ಸುಳ್ಳು ಮಾಡಿದವು. ಬದುಕಿನ ಬಗ್ಗೆ ಕಾಳಜಿಗಳು, ಹೇಳಿಕೆಗಳಿಗೆ ಕುಗ್ಗದಿರುವಿಕೆ, ತನ್ನ ಬದುಕಿನ ಗತಿಯನ್ನು ತಾನೇ ರೂಪಿಸಿಕೊಳ್ಳುವ ಗಟ್ಟಿತನ. ರಾಸರವರು ಚಿತ್ರಿಸುವ ಈ ಸ್ತ್ರೀಗುಣಗಳು ಇಂದಲ್ಲ, ಎಂದೆಂದಿಗೂ ಮಹಿಳೆಯರಿಗೆ ಅನುಕರಣ ಯೋಗ್ಯವಾಗಿದೆ.

ಐತಿಹಾಸಿಕ ಘಟನೆಗಳನ್ನು ಕಾದಂಬರಿ (ಸವತಿಗಂಧವಾರಣೆ) ರೂಪಕ್ಕೆ ಅಳವಡಿಸಿ ಎಲ್ಲೆಲ್ಲಿ ಸೂಕ್ತ ಪಾತ್ರಗಳ ಅವಶ್ಯಕತೆ ಇರುವುದೋ ಅಲ್ಲಲ್ಲಿ ಸೂಕ್ತ ಪಾತ್ರಗಳನ್ನು ನಿರ್ಮಿಸಿ ವಾಸ್ತವಿಕತೆಯ ದೃಷ್ಟಿಯಲ್ಲಿ ಸರಿ ಎನ್ನುವಂತೆ ಕಾದಂಬರಿಯನ್ನು ರಚಿಸಿದವರು ಹೆಸರಾಂತ ಲೇಖಕರಾದ ಸಮೇತನಹಳ್ಳಿ ರಾಮರಾಯರು. ಈಗಾಗಲೇ ಅನೇಕ ಐತಿಹಾಸಿಕ ನಾಟಕಗಳನ್ನು ಬರೆದು ಇವರು ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಇವರ ಭಾಷೆ ಶುದ್ಧ ಕನ್ನಡ, ಶೈಲಿ ಬಹಳ ಸರಳ, ವಾಕ್ಯ ಬಹಳ ಗಂಭೀರ. ಸಹಜ ಸುಂದರವಾದ ಹಾಗೂ ಮನೋಜ್ಞವಾದ ಇವರ ಬರವಣಿಗೆ ಎಂಥವರನ್ನಾದರೂ ಮುಗ್ಧಗೊಳಿಸುತ್ತದೆ. ಒಮ್ಮೆ ಓದಿದರೆ ಸಾಕು, ಪುನಃ ಮರೆಯುವಂತೆಯೇ ಇಲ್ಲ . . . ಇವರು ಬಳಸಿರುವ ಅಚ್ಚಗನ್ನಡ ಪದಗಳು ಸುಂದರವಾದ ಶೈಲಿ ವರ್ಣನೆಗಳು ಓದುಗರನ್ನು ಮುಗ್ಧಗೊಳಿಸುತ್ತದೆ.

ಏಪ್ರಿಲ್, ೧೯೬೫

ಬ. ನ. ಸುಂದರ್‌ರಾವ್

ಪ್ರಾಣವೀಣೆಯ ಮಿಡಿತ

ಲೀಲಾ ಸಂಪಿಗೆ

ಪ್ರಚಾರದ ಪ್ರವಾಹದಲ್ಲಿ ಕೊಚ್ಚಿಹೋಗಿರದ, ಎಲೆಮರೆಯ ಕಾಯಂತೆ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸಮೇತನಹಳ್ಳಿ ರಾಮರಾಯರ ಕತೆಗಳು ಸ್ಪರ್ಶಿಸಿದವರನ್ನು ತಮ್ಮತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಪ್ರಗತಿಪರವಾದ ಮನಸ್ಸು, ಆಲೋಚನೆಗಳಿಗಂತೂ ಬೆಚ್ಚನೆಯ ಇಂಬು ನೀಡುತ್ತವೆ.

ಹೆಣ್ಣಿನ ಪಾತ್ರಗಳೇ ಪ್ರಧಾನವಾಗಿರುವ ಈ ಕತೆಗಳು ಪ್ರವಾಹದ ವಿರುದ್ಧ ಈಜುವ ಧೋರಣೆಯವು ಎನಿಸಿದರೂ ವಾಸ್ತವದ ಬದುಕುಗಳ ಎಳೆಎಳೆಗಳನ್ನು ಬಿಚ್ಚಿಡುವಲ್ಲಿ ಯಶಕಂಡಿವೆ.

ಕತೆಗಳ ನಿರೂಪಣಾಶೈಲಿ, ಹೆಣೆದುಕೊಂಡುಹೋಗಿರುವ ಹಂತಗಳು, ಗ್ರಾಮೀಣ ಸೊಗಡಿನ ಭಾಷಾಲಾಲಿತ್ಯ ಬದುಕಿನ ಒಳಮನಸ್ಸುಗಳ ಬಯಕೆಗಳು, ಆಶಯಗಳು ಅವುಗಳನ್ನು ದಕ್ಕಿಸಿಕೊಳ್ಳಲು ಸದಾ ಸೆಣಸಾಡುವ ಜೀವಗಳು . . . ಒಟ್ಟಾರೆಯಾಗಿ ಕತೆಗಳು ಕಟುವಾಸ್ತವದ ಕನ್ನಡಿಗಳಾಗಿವೆ.

ತಾಯಿ–ಕತೆಯಲ್ಲಿನ ಮಾದವ್ವ, ಬೆಂದಬಾಳುವಿನ ಚೆಂದವ್ವ, ಒಲಿದ ಜೀವದ–ಚೆನ್ನಮ್ಮ . . . ಹೀಗೆ ಈ ಪಾತ್ರಗಳ ಮೂಲಕ ಒಂದು ಹೆಣ್ಣಿಗೆ ಸಲ್ಲಬಹುದಾದ ಗೌರವಕ್ಕೆ (ಅವಳೂ ಒಬ್ಬ ಮನುಷ್ಯಳಾಗಿ) ಎಲ್ಲಿಯೂ ಚ್ಯುತಿ ಬಂದಿಲ್ಲ. ತಮ್ಮ ವೈಯಕ್ತಿಕ ಬದುಕುಗಳಲ್ಲಿ ಅವರು ತಾಳುವ ನಿಲುವುಗಳು, ಸಮರ್ಥನೆ, ಪ್ರಗತಿಪರ ಚಿಂತನೆಯ ಮೂಸೆಯೊಳಕ್ಕೆ ನಮ್ಮನ್ನು ಕೊಂಡೊಯ್ಯುತ್ತವೆ. ಇದರೊಂದಿಗೆ ಮನುಷ್ಯನ ಬದುಕಿನಲ್ಲಿ 'ಪ್ರೀತಿ'ಗೆ ಇರುವ ತನ್ನದೇ ಆದ ಛಾಪು ಎಲ್ಲಿಯೂ ಕಳೆಗುಂದಿಲ್ಲ.

ಪುರುಷ ಪ್ರಧಾನ ವ್ಯವಸ್ಥೆಯ ಈ ಸಮಾಜದಲ್ಲಿ ರಾಮರಾಯರಂತಹ ಆರೋಗ್ಯಕರವಾದ ಸಮಾನ ಮನಸ್ಸುಗಳು, ಆಶಯಗಳು ಅಗತ್ಯ ಹಾಗು ಅನಿವಾರ್ಯ.

ಅಭಿನವ ಮಹಾಕಾವ್ಯ-ಶಾಕುಂತಲಾ

ಪ್ರೊ॥ ಟಿ. ಕೇಶವ ಭಟ್ಟ

ಕನ್ನಡ, ಕರ್ನಾಟ ಎಂಬ ಹೆಸರುಗಳಿಂದೊಪ್ಪುವ ಭಾಷೆಗೂ ಸಾಹಿತ್ಯಕ್ಕೂ ಸುಮಾರು ಒಂದೂವರೆ ಸಾವಿರ ವರ್ಷಗಳ ಇತಿಹಾಸವಿದೆ. ಈ ಇತಿಹಾಸದಲ್ಲಿ ಕನ್ನಡದ ಭಾಷಾರೂಪ ಸಾಹಿತ್ಯರೂಪಗಳು ಕಾಲಕಾಲಕ್ಕೆ ಪ್ರಾಯೋಗಿಕವಾಗಿ ವ್ಯತ್ಯಾಸಗಳನ್ನು ತಾಳಿರುವುದು ಕಂಡುಬರುವ ಸಂಗತಿ. ಆದುದರಿಂದಲೇ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬಿವು ಕಾಲಾನುಗುಣವಾಗಿ ಒಂದಿಷ್ಟು ವ್ಯತ್ಯಾಸಗೊಂಡ ಭಾಷಾರೂಪಗಳಾಗಿವೆ. ಹಳಗನ್ನಡಕ್ಕೆ ಹಿಂದಿನದಾಗಿ ಪೂರ್ವದ ಹಳಗನ್ನಡ ಎಂಬುದೂ ಇದ್ದಿತು. ಇಂತಹ ಮಾರ್ಪಾಡಿನಲ್ಲೆಲ್ಲ ಭಾಷೆ ತನ್ನ ಪ್ರಾಚೀನರೂಪಗಳ ಹೆಚ್ಚಿನ ಅಂಶಗಳನ್ನು ಒಳಗೊಂಡೇ ಮುಂದುವರಿದುದು ಕಂಡುಬರುತ್ತದೆ. ಉದಾಹರಣೆಗಾಗಿ, ನಡುಗನ್ನಡದಲ್ಲಿ ಹಳಗನ್ನಡವೂ ಹೊಸಗನ್ನಡದಲ್ಲಿ ನಡುಗನ್ನಡ ಹಳಗನ್ನಡಗಳೂ ಬೆರೆತಿರುತ್ತವೆ. ಆದರೆ, ಕಾವ್ಯಗಳ ಛಂದೋರೂಪವು ವಿಭಿನ್ನವಾದುದು ಕಂಡುಬರುತ್ತದೆ. ಈ ಛಂದೋವ್ಯತ್ಯಾಸವನ್ನು ಪ್ರಗತಿಲಕ್ಷಣವೆಂದೂ, ಕಾಲೋಚಿತ ಪರಿವರ್ತನೆಯೆಂದು ಹೇಳಬಹುದಾದರೂ ವಾಸ್ತವವಾಗಿ ಇದು ಸೌಲಭ್ಯ ಪ್ರಯತ್ನದ ಫಲವೇ ಆಗಿರುತ್ತದೆ.

ಪ್ರಾಚೀನ ಕಾಲದಲ್ಲಿ ವ್ಯಾಕರಣಶುದ್ಧದ, ಪ್ರಧಾನವಾಗಿ ಅಕ್ಷರಗಣಬದ್ಧದ ಚಂಪೂ ಕಾವ್ಯರಚನೆ ಪ್ರಭಾವಿಯಾಗಿದ್ದರೆ, ನಡುಗಾಲದಲ್ಲಿ ವ್ಯಾಕರಣವನ್ನು ಒಂದಿಷ್ಟು ಸಡಿಲಪಡಿಸುವ ರಗಳೆ, ಷಟ್ಪದಿ, ವಚನಸಾಹಿತ್ಯ, ಸಾಂಗತ್ಯ, ಕೀರ್ತನೆ, ಯಕ್ಷಗಾನ, ಶೋಭನಗೀತ ಸಾಹಿತ್ಯಗಳು ಪ್ರಚಲಿತವಾದವು. ಹೊಸಗ್ನಡದಲ್ಲಿ ನವೋದಯವೆನಿಸುವ ಕವನ, ನೀಳ್ಗವನಗಳಲ್ಲದೆ ನವ್ಯ ಎಂದು ಹೇಳಿಕೊಂಡ ಕವನ ಕಾವ್ಯಗಳೂ ಪ್ರತ್ಯಕ್ಷ

ಈ ಮಹಾಕಾವ್ಯ ಮುದ್ರಣವಾಗುತ್ತಿರುವಂತೆಯೇ ಮೊದಲನೆಯ ಭಾಗವಾದ 'ಅಧ್ಯಯನಾಂಗ' ಮುಗಿದೊಡನೆ ಅದರ ಎರಡು ನೂರು ಪ್ರತಿಗಳನ್ನು ೧೯೬೮ರಲ್ಲಿ ಪ್ರಕಟಿಸಲಾಯಿತು. ಆಮೇಲೆ ಪೂರ್ಣ ಕಾವ್ಯವನ್ನು ೧೯೭೧ರಲ್ಲಿ ಪ್ರಕಟಿಸಲಾಯಿತು. ಅದರೊಡನೆಯೇ 'ವ್ಯವಹಾರಾಂಗ'ದ ಎರಡುನೂರು ಪ್ರತಿಗಳನ್ನು ಪ್ರತ್ಯೇಕವಾಗಿ ಹೊರತರಲಾಯಿತು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯು ಇದನ್ನು ೧೯೭೧ರ ಅತ್ಯುತ್ತಮ ಕಾವ್ಯವೆಂದು ಪ್ರಥಮ ಬಹುಮಾನವಾದ ಒಂದು ಸಾವಿರ ರೂಪಾಯಿಯನ್ನು ಕೊಟ್ಟು ಗೌರವಿಸಿತು. ಆಮೇಲೆ ೧೯೭೧ರಲ್ಲಿ ಕರ್ನಾಟಕ ಸರಕಾರ ಇದರ 'ಅಧ್ಯಯನಾಂಗ'ಕ್ಕೆ ರೂ. ೫೦೦, ಆಮೇಲೆ ೧೯೭೨ರ ಜನವರಿಯಲ್ಲಿ ಪೂರ್ಣ ಕಾವ್ಯಕ್ಕೆ ರೂ. ೨೦೦೦ ಗಳಷ್ಟು ಸಹಾಯ ಧನವನ್ನೂ ಅನುಗ್ರಹಿಸಿತು.

ವಾಗಿವೆ. ಈ ಸಂದರ್ಭದಲ್ಲಿ ದ್ವಿತೀಯಾಕ್ಷರಪ್ರಾಸವನ್ನು ಹೇಯವಾಗಿ ಪರಿಗಣಿಸಲಾಯಿತು! ಕಾವ್ಯ, ಮಹಾಕಾವ್ಯರಚನಾ ಪ್ರವಾಹ ಬತ್ತಿಹೋಗಿ, ಕವನವನ್ನೇ ಕಾವ್ಯವೆಂದು ಪರಿಗಣಿಸಲಾಯಿತು! ವಿರಳವಾಗಿ ಪ್ರಾದುರ್ಭಾವಗೊಂಡ ನವೀನರೀತಿಯ ಛಂದಸ್ಸಿನಲ್ಲಿ ಮಹಾಕಾವ್ಯಗಳೂ ಮೂಡಿಬಂದುವು. ಅವುಗಳಲ್ಲಿ ಒಂದೊಂದರ ಛಂದಸ್ಸನ್ನು ಮಹಾಛಂದಸ್ಸು, ಮುಕ್ತಛಂದಸ್ಸು, ಬೃಹತ್‌ಛಂದಸ್ಸು ಎಂದು ಹೊಸ ನಾಮಾಂಕಿತದಿಂದ ಕರೆಯಲಾಯಿತು. ಮಹಾಕವಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ರಚನೆ ಮಹಾಛಂದಸ್ಸಿನದು. ಪು.ತಿ.ನ. ಅವರ ಹರಿಚರಿತೆಯದು ಬೃಹಚ್ಛಂದಸ್ಸು. ಗೋಕಾಕರ 'ಭಾರತ ಸಿಂಧು ರಶ್ಮಿ' ಎಂಬ ಕಾವ್ಯ ಮುಕ್ತಛಂದಸ್ಸಿನದು. ಹೀಗೆ ಅವರವರೇ ಹೆಸರಿಟ್ಟುಕೊಂಡಿರುತ್ತಾರೆ. ಪ್ರಕೃತಿ ಅಂತಹ ಆಧುನಿಕ ಮಹಾಕಾವ್ಯಗಳಲ್ಲಿ ಒಂದಾಗಿ ಪೂರ್ವೋಕ್ತ ಮಹಾಛಂದಸ್ಸಿನದೇ ಎನಿಸಬಹುದಾದ ರಚನೆ 'ಶಾಕುಂತಲಾ'

ಕನ್ನಡದಲ್ಲಿ ಖ್ಯಾತಸಾಹಿತಿಯೂ ಮಹಾಕವಿಯೂ ಆಗಿರುವ ಶ್ರೀ ಸಮೇತನಹಳ್ಳಿ ರಾಮರಾಯರು ರಚಿಸಿರುವ ಈ ಕಾವ್ಯ ೧೯೭೧ ರಲ್ಲಿ ಪ್ರಥಮಮುದ್ರಣವಾಗಿ ಪ್ರಕಟವಾಗಿರುತ್ತದೆ. ಈ ಕಾವ್ಯವು ೧೬೪೦೦ ಪಾದಗಳುಳ್ಳ ಬೃಹತ್ಕಾವ್ಯವಾಗಿರುತ್ತದೆ. ಇದರಲ್ಲಿ ಅಧ್ಯಯನಾಂಗ ಮತ್ತು ವ್ಯವಹಾರಾಂಗ ಎಂಬ ಎರಡು ಭಾಗಗಳಿವೆ. ಪ್ರತಿಯೊಂದು ಭಾಗವೂ ಹಲವು ನಿರ್ಣಯ (ಅಧ್ಯಾಯ)ಗಳಿಂದ ಕೂಡಿದೆ. ಅಧ್ಯಯನಾಂಗದಲ್ಲಿ ೨೫ ನಿರ್ಣಯಗಳು ಮತ್ತು ವ್ಯವಹಾರಾಂಗದಲ್ಲಿ ೨೨ ನಿರ್ಣಯಗಳು ಇವೆ. ಗಾತ್ರ ಪಾತ್ರ ಎಂಬೆರಡೂ ದೃಷ್ಟಿಗಳಿಂದ ಮಹಾಕಾವ್ಯದ ಮಹತ್ತ್ವಗಳು ಇದರಲ್ಲಿ ಸಮಾವೇಶವಾಗಿವೆ.

'ಕವೇಃ ಕರ್ಮ ಕಾವ್ಯಂ' ಎಂಬ ಸೂಕ್ತಿಯಿದೆ. ಹಾಗೆಯೇ 'ನಾನೃಷಿಃ ಕುರುತೇ ಕಾವ್ಯಂ' ಎಂಬ ಮಾತೂ ಇದೆ. ಕವಿಯ ಶಬ್ದಮಾಧ್ಯಮದಿಂದ ಈಡೇರಿದ ಕರ್ಮವು ಕಾವ್ಯವೆನಿಸುವುದು. ಋಷಿಯಂತೆ ಉದಾತ್ತನೀತಿಸಂಪನ್ನನಾಗದವನು ರಚಿಸಿದುದು ಕಾವ್ಯವೆನಿಸಲಾರದು. ಹೀಗೆ ಇಲ್ಲಿ ಕಾವ್ಯ ಲಕ್ಷಣಕ್ಕೆ ಕವಿಲಕ್ಷಣವೂ ಪೋಷಕವಾಗಿದೆಯೆಂದು ತಿಳಿಯಬಹುದು. ಉತ್ತಮ ಕಾವ್ಯ ಹೊರಬರಬೇಕಾದರೆ, ಅದರ ಕವಿ ಕವಿತಾಕುಶಲನಾದರೆ ಸಾಲದು, ಸಮಾಜಕ್ಕೆ ಮಾರ್ಗದರ್ಶಕನಾಗುವ ಉದಾತ್ತ ಗುಣಸಂಪನ್ನನೂ ಆಗಿರಬೇಕಾಗುತ್ತದೆ. ಕವಿಯ ಶಬ್ದಸಂಪತ್ತು, ಭಾವಸಂಪತ್ತುಗಳೊಂದಿಗೆ ಸಾಂಸ್ಕೃತಿಕ ದೃಷ್ಟಿಕೋನ, ಲೋಕಾನುಭವ, ಸಾಹಿತ್ಯಾನುಭವ, ವ್ಯಾಕರಣಾದಿ ಶಾಸ್ತ್ರಾನುಭವ, ಹೃದಯಶುದ್ಧಿ ಇವಾವುದರಲ್ಲಿಯೂ ನ್ಯೂನತೆಯಿಲ್ಲದಿರುವ ಕವಿಯೇ ಮಹಾಕವಿ. ಆತನು ರಚಿಸಿದುದು ಮಹಾಕಾವ್ಯವೆಂಬುದು ನಿಸ್ಸಂಶಯ. ಈ ಶಾಕುಂತಲಾ ಕಾವ್ಯ ಕರ್ತೃವಾಗಿರುವ 'ರಾಸ' ಕಾವ್ಯನಾಮಧೇಯದಿಂದೊಪ್ಪುವ ಸಮೇತನಹಳ್ಳಿ ರಾಮರಾಯರದು ಗುಣವಿಶೇಷದಿಂದೊಪ್ಪುವ ಬಹುಮುಖ ಸಾಹಿತ್ಯರಚನೆ. ನಾಟಕ, ಸಣ್ಣಕತೆ, ನೀಳ್ಗತೆ, ಕಾದಂಬರಿ, ಕವನಗಳಲ್ಲದೆ, ಮಹಾಕಾವ್ಯ ಕೂಡ ಅವರ ರಚನೆಯಾಗಿರುತ್ತದೆ.

ಪ್ರಕೃತ, ಈ ಲೇಖನ ಅವರ ಮಹಾಕಾವ್ಯವನ್ನು ಮಾತ್ರ ಕುರಿತಾಗಿರುತ್ತದೆ.

ಒಬ್ಬ ಕವಿಯಿಂದ ಉತ್ತಮ ಕಾವ್ಯರಚನೆಯಾಗಬೇಕಾದರೆ, ಲಾಕ್ಷಣಿಕರು ಹೇಳುವ ಪ್ರಕಾರ, ಆತನಲ್ಲಿ ವ್ಯುತ್ಪತ್ತಿ ಮತ್ತು ಶಕ್ತಿ (ಅಂದರೆ, ಪ್ರತಿಭೆ) ಇವೆರಡೂ ಇರಬೇಕು. ವ್ಯುತ್ಪತ್ತಿಯಲ್ಲಿ ಶಬ್ದ ಸಂಪತ್ತು, ಛಂದೋವ್ಯಾಕರಣ ರಸಾಲಂಕಾರಾದಿ ಶಾಸ್ತ್ರಪರಿಜ್ಞಾನ, ಲೋಕಾನುಭವ, ಕಾವ್ಯಾನುಭವಗಳು ಸೇರಿರುತ್ತವೆ. ಪ್ರತಿಭೆ ಸ್ವಭಾವಜನ್ಯವಾದರೂ ವ್ಯುತ್ಪತ್ತಿಯಿಂದ ಮತ್ತಷ್ಟು ಪ್ರಭಾವಿತವಾಗುತ್ತದೆ. ವ್ಯುತ್ಪತ್ತಿಯಲ್ಲಿ ಮುಖ್ಯವಾದ ವ್ಯಾಕರಣಶುದ್ಧಿಗೆ ಅಷ್ಟೇನೂ ಲಕ್ಷ್ಯವನ್ನಿಡದ ಕವಿಗಳು–ನಡುಗನ್ನಡದ ಕಾಲದಲ್ಲಿ, ಕುಮಾರವ್ಯಾಸನಂತಹರಿದ್ದರು. ಅಂತಹರ ಪ್ರತಿಭೆ ಅಸಾಧಾರಣವಾಗಿದ್ದುದರಿಂದ ಪ್ರತಿಭೆಯ ಪ್ರಕಾಶದಲ್ಲಿ ಅವ್ಯುತ್ಪತ್ತಿಯ ಸಣ್ಣ ದೋಷವು ಮರೆಯಾದುದನ್ನು ನಾವು ಕಾಣುತ್ತೇವೆ. ಇದನ್ನೆ ಆನಂದವರ್ಧನನೆಂಬ ಲಾಕ್ಷಣಿಕನು ಹೀಗೆಂದಿದ್ದಾನೆ–

ಅವ್ಯುತ್ಪಿತ್ತಿಕೃತೋ ದೋಷಃ ಶಕ್ತ್ಯಾ ಸಂವ್ರಿಯತೇ ಕವೇಃ
ಯುಸ್ತ್ವಶಕ್ತಿಕೃತಸ್ತಸ್ಯ ಝಟಿತ್ಯೇವಾವಭಾಸತೇ

ಅಂದರೆ, ಅವ್ಯುತ್ಪತ್ತಿಯಿಂದುಂಟಾದ ದೋಷವು ಶಕ್ತಿ (ಪ್ರತಿಭೆ) ಯಿಂದ ಮುಚ್ಚಿ ಹೋಗುತ್ತದೆ. ಆದರೆ, ಪ್ರತಿಭೆಯಿಲ್ಲದ ದೋಷವು ಒಡನೆಯೇ ವ್ಯಕ್ತವಾಗಿ ಕಾಣಿಸುತ್ತದೆ. ಈ ಲಾಕ್ಷಣಿಕ ನಿರೂಪಣೆಯಂತೆ, ಪ್ರಸ್ತುತ ಶಾಕುಂತಲಾ ಕಾವ್ಯದಲ್ಲಿ ಕಂಡುಬರುವ ಕವಿಯ ಅಸಾಮಾನ್ಯ ಪ್ರತಿಭೆ, ಶಬ್ದಸಂಪತ್ತು, ವಿಚಾರಸಮೃದ್ಧಿಗಳು ಅಲ್ಲಲ್ಲಿಯ ವ್ಯಾಕರಣದೋಷಗಳನ್ನು ಕಣ್ಮರೆಗೊಳಿಸುತ್ತವೆ. ರಸ, ಭಾವ, ಅರ್ಥ ಚಮತ್ಕಾರಗಳು ಮನ ಮುಟ್ಟುವಂತೆ ಮೆರೆಯುತ್ತವೆ. ಈ ಹಿನ್ನೆಲೆಯಿಂದ ನಾವೀ ಕಾವ್ಯವನ್ನು ಅವಲೋಕಿಸಬಹುದು–

ಯಾವ ಮಹಾರಾಜನ ಸುಚರಿತ್ರಕಾರಣದಿಂದ ಈ ದೇಶಕ್ಕೆ ಭಾರತ ಎಂದು ಹೆಸರಾಯಿತೋ ಅಂತಹ ಭರತನ ಮಾತೆ ಶಕುಂತಳೆ. ಆಕೆ ಭೂಲೋಕ ಸ್ವರ್ಗಲೋಕಗಳೆರಡರ ಅಂತಶ್ಶಕ್ತಿಯೇ ರೂಪವೆತ್ತಂತೆ, ವಿಶ್ವಾಮಿತ್ರ ಮೇನಕೆಯರ ಪುತ್ರಿ. ಕಣ್ವಮಹರ್ಷಿಯ ಸಾಕು ಮಗಳು, ರೂಪ ಗುಣಸಂಪನ್ನೆ. ಮಹಾರಾಜ ದುಷ್ಯಂತನಿಗೂ ಆಕೆಗೂ ಗಾಂಧರ್ವ ವಿಧಿಯಿಂದ ವಿವಾಹ. ಒಮ್ಮೆ ಪತಿತ್ಯಕ್ತೆಯಾಗಿ ಮತ್ತೆ ಪತಿಗೃಹೀತಳು. ಈ ಕಥಾವಸ್ತು ಮೊತ್ತಮೊದಲು ನಿರೂಪಣೆಗೊಂಡಿರುವುದು ವ್ಯಾಸರ್ಷಿಪ್ರಣೀತ ಶ್ರೀಮನ್ಮಹಾಭಾರತದ ಆದಿಪರ್ವದಲ್ಲಿ ಬರುವ ಶಕುಂತಲೋಪಾಖ್ಯಾನದಲ್ಲಿ. ಅಲ್ಲಿ ಅಧ್ಯಾಯ ೬೮ ರಿಂದ ೭೪ರ ವರೆಗೆ ಈ ಕಥೆಯ ಹರಹಿದೆ. ಈ ಕಥಾವಸ್ತುವಿನ ಘಟನೆಗಳಲ್ಲಿ ಪಾತ್ರಪೋಷಣೆಯಲ್ಲಿ ಕಂಡುಬರುವ ಅಸಮಂಜಸತೆಗಳನ್ನು ಪರಿಹರಿಸಿ, ವಸ್ತು ಪಾತ್ರಗಳಿಗೆ ಸಹಜತೆಯುಂಟಾಗುವಂತೆ ಮಾರ್ಪಡಿಸಿ, ಅಲ್ಲಲ್ಲಿಗೆ ಸಮುಚಿತವೆನಿಸುವ ಕತೆಯ ಕೊಂಡಿಗಳನ್ನು ನಿರ್ಮಿಸಿ, ಕಥೆಯನ್ನು ಬೆಳಸಿದವನು ಸಂಸ್ಕೃತದ ಕವಿ ಕಾಳಿದಾಸನು. ಅವನ ಕೃತಿ 'ಅಭಿಜ್ಞಾನ ಶಾಕುಂತಲಂ' ಎಂಬ ಏಳು ಅಂಕಗಳ ನಾಟಕ. ಅದು ಕನ್ನಡಕ್ಕೆ ಬಸವಪ್ಪ ಶಾಸ್ತ್ರಿಗಳಿಂದ ಅನುವಾದಗೊಂಡಿದೆ. ಈ ನಾಟಕದ ಹಿರಿಮೆಯನ್ನು ಹೀಗೆ ಕೊಂಡಾಡಲಾಗಿದೆ–

ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ
ತತ್ರಾಪಿ ಚ ಚತುರ್ಥೋಽಂಕಃ ತತ್ರ ಶ್ಲೋಕ ಚತುಷ್ಟಯಂ

ಅಂದರೆ, ಕಾವ್ಯಗಳಲ್ಲೆಲ್ಲ ರಮ್ಯವಾದುದು ನಾಟಕ (ಏಕೆಂದರೆ, ಅದು ಶ್ರವ್ಯ ಮತ್ತು ದೃಶ್ಯ ಎರಡೂ ಆಗಿರುತ್ತದೆ). ಅಂತಹ ನಾಟಕಗಳಲ್ಲಿ ರಮ್ಯವಾದುದು ಶಕುಂತಲಾನಾಟಕ ಅದರಲ್ಲಿ ಮಗಳನ್ನು ಪತಿಗೃಹಕ್ಕೆ ಕಳುಹಿಕೊಡುವ ಸನ್ನಿವೇಶವುಳ್ಳ ನಾಲ್ಕನೆಯ ಅಂಕ ರಮ್ಯವಾದುದು. ಆ ನಾಲ್ಕನೆಯ ಅಂಕದಲ್ಲಿ ನಾಲ್ಕು ಶ್ಲೋಕಗಳು ರಮ್ಯವಾದುವು. ಅಂತಹ ಅಭಿಜ್ಞಾನ ಶಾಕುಂತಲದ ಮತ್ತು ಅದಕ್ಕೆ ಮೂಲವಾಗಿರುವ ಮಹಾಭಾರತದ ಶಕುಂತಲೋಪಾಖ್ಯಾನದ ವಸ್ತುವ್ಯತ್ಯಾಸವನ್ನು ಹೀಗೆ ಸಂಕ್ಷೇಪಿಸಬಹುದು–

ಮಹಾಭಾರತದ ಪ್ರಕಾರ : ಹಸ್ತಿನಾವತಿಯ ರಾಜನಾದ ದುಷ್ಯಂತನು ಒಮ್ಮೆ ಬೇಟೆಯಾಡಲು ಚತುರಂಗಸಮೇತ ಕಾಡಿಗೆ ಹೋದನು. ಬೇಟೆಯನ್ನು ಮುಂದುವರಿಸುತ್ತ, ಒಂದು ಜಿಂಕೆಯನ್ನು ಬೆನ್ನಟ್ಟಿಕೊಂಡು ಕಣ್ವರ ತಪೋವನಕ್ಕೆ ಬಂದನು. ಸೈನ್ಯವನ್ನು ಹೊರಗೆ ನಿಲ್ಲಿಸಿ, ಏಕಾಕಿಯಾಗಿ ಆಶ್ರಮದೊಳಗೆ ಹೋದನು. ಅಲ್ಲಿ ಏಕಾಂಗಿಯಾಯಾಗಿದ್ದ ಶಕುಂತಳೆಯನ್ನು ಕಂಡು ಮೋಹವಶನಾದನು. ಆಕೆಯ ಪರಿಚಯವನ್ನು ವಿಚಾರಿಸಿದಾಗ ಆಕೆ ನಿಸ್ಸಂಕೋಚವಾಗಿ ತಾನೇ ತನ್ನ ಜನ್ಮವೃತ್ತಾಂತವನ್ನು ಸವಿವರ ವಿಶದಪಡಿಸಿದಳು. ಸಾಕುತಂದೆಯಾದ ಕಣ್ವರು ಫಲಪುಷ್ಪ ತರುವುದಕ್ಕಾಗಿ ಹೊರಗೆ ಹೋದುದನ್ನು ತಿಳಿಸಿದಳು. ಆಕೆ ತನ್ನನ್ನು ವರಿಸುವಂತೆ ದುಷ್ಯಂತನು (ಆಮಿಷವಾಗಿ) ಬಗೆಬಗೆಯ ವಸ್ತ್ರಾಭರಣಗಳನ್ನು ಕೊಡುವೆನೆಂದೂ ತನ್ನ ರಾಜ್ಯ ಆಕೆಗೇ ದೊರೆಯುವುದೆಂದೂ ಆಸೆ ತೋರಿಸಿ, ಗಾಂಧರ್ವವಿವಾಹಕ್ಕೆ ಸಮ್ಮತಿಸುವಂತೆ ಹೇಳಿದನು. ತನ್ನಲ್ಲಿ ಜನಿಸಿದ ಮಗನಿಗೆ ಯುವರಾಜ್ಯಾಭಿಷೇಕ ಮಾಡುವುದಾದರೆ ಮಾತ್ರ ಸಮ್ಮತಿಸುವುದಾಗಿ ಆಕೆ ತಿಳಿಸಿದಳು. ಅದರಂತೆ ವಿವಾಹವಾದೊಡನೆ ದುಷ್ಯಂತನು ಕಣ್ವರಿಗೆ ಭಯಪಟ್ಟು, ತಾನು ರಾಜಧಾನಿಯಿಂದ ಪರಿಜನರನ್ನು ಕಳುಹಿಸಿ ಆಕೆಯನ್ನು ಬರಮಾಡಿಸಿಕೊಳ್ಳುವ ಭರವಸೆ ಕೊಟ್ಟು ಹೊರಟುಹೋದನು. ಹೋದಮೇಲೆ ಜನಾಪವಾದಕ್ಕೆ ಹೆದರಿ ಆಕೆಯನ್ನು ಕರೆಯಿಸಲೇ ಇಲ್ಲ. ಶಕುಂತಳೆಗೆ ಸರ್ವದಮನನೆಂಬ ಮಗನಾದನು. ಆರು ವರ್ಷವಾಗಲು ಆಕೆ ಮುನಿಶಿಷ್ಯರೊಂದಿಗೆ ಮಗನನ್ನು ಕೂಡಿಕೊಂಡು ದುಷ್ಯಂತನಲ್ಲಿಗೆ ಬಂದು ನಡೆದ ಸಂಗತಿಯನ್ನೂ ಅವನ ವಾಗ್ದಾನವನ್ನೂ ಜ್ಞಾಪಿಸಿದಾಗ, ಏನೂ ಗೊತ್ತಿಲ್ಲದವನಂತೆ ನಟಿಸಿ ನಿರಾಕರಿಸಿದನು. ಕೊನೆಗೆ ಆಕಾಶವಾಣಿಯನ್ನು ಕೇಳಿದ ಮೇಲೆ, ಶಕುಂತಳೆಯನ್ನೂ ಮಗನನ್ನೂ ಸ್ವೀಕರಿಸಿದನು. ಹೀಗೆ ದುಷ್ಯಂತ ಶಕುಂತಳೆಯರಿಬ್ಬರ ಪಾತ್ರವೂ ಮಹಾಭಾರತದಲ್ಲಿ ಕೆಲವುಮಟ್ಟಿಗೆ ಕಳಂಕಿತವಾಗಿವೆ.

ಶಾಕುಂತಲ ನಾಟಕದಲ್ಲಿ ಈ ನ್ಯೂನತೆಗಳೆಲ್ಲವೂ ಪರಿಹಾರಗೊಂಡಿವೆ. ದುಷ್ಯಂತನು ಬೇಟೆಯಾಡುತ್ತಾ ಒಂದು ಜಿಂಕೆಯನ್ನು ಬೆನ್ನಟ್ಟಿಕೊಂಡು ಕಣ್ವಾಶ್ರಮಕ್ಕೆ ಬಂದಾಗ, ಶಕುಂತಳೆ ತನ್ನ ಸಖಿಯರೊಂದಿಗೆ ಗಿಡಗಳಿಗೆ ನೀರೆರೆಯುತ್ತಿರಲು, ಒಂದು ದುಂಬಿ ಅವಳ ಮುಖಕಮಲಕ್ಕೆ ಮತ್ತೆ ಮತ್ತೆ ಬಂದು ಎರಗಿತು. ಅದರ ಬಾಧೆಯನ್ನು

ನಿವಾರಿಸುವ ಕಾರಣದಿಂದ ರಾಜನು ಅವರ ಎದುರಿಗೆ ಬರುತ್ತಾನೆ. ಶಕುಂತಳೆಯ ಪೂರ್ವ ವೃತ್ತಾಂತವೆಲ್ಲವನ್ನೂ ಆಕೆಯ ಸಖಿಯರು ರಾಜನಿಗೆ ತಿಳಿಸುತ್ತಾರೆ. ಕಣ್ವರು ಆಗ ಸೋಮತೀರ್ಥಕ್ಕೆ ಹೋಗಿರುತ್ತಾರೆ. ದುಷ್ಯಂತ ಶಕುಂತಳೆಯರಲ್ಲಿ ಕ್ರಮವಾಗಿ ಅನುರಾಗ ವೃದ್ಧಿಗೊಂಡು ಗಾಂಧರ್ವವಿವಾಹ ಏರ್ಪಡುತ್ತದೆ. ದುಷ್ಯಂತನು ಶಕುಂತಳೆಯನ್ನು ಅಗಲುವಾಗ, ಆಕೆಗೆ ನೆನಪಿಗಾಗಿ ಮತ್ತು ವಿರಹಶಾಂತಿಗಾಗಿ ತನ್ನ ಮುದ್ರೆಯುಂಗುರವನ್ನು ಕೊಟ್ಟಿರುತ್ತಾನೆ. ಪತಿವಿರಹವ್ಯಥೆಯಲ್ಲಿದ್ದ ಶಕುಂತಳೆ ದೂರ್ವಾಸನು ಬಂದುದನ್ನು ಲಕ್ಷಿಸದಿದ್ದುದರಿಂದ ದುಷ್ಯಂತನು ಆಕೆಯನ್ನು ಮರೆತುಬಿಡುವಂತಹ ಶಾಪಕ್ಕೆ ಗುರಿಯಾಗುತ್ತಾಳೆ. ಆಕೆಯ ಸಖಿಯರು ಮುನಿಯನ್ನು ಸಂತೈಸಿ ಆ ಶಾಪದಂತೆ ದುಷ್ಯಂತನು ಶಕುಂತಳೆಯನ್ನು ಮರೆತರೂ ಅಭಿಜ್ಞಾನದ ದರ್ಶನದಿಂದ ಅವನಿಗೆ ನೆನಪಾಗುವುದೆಂದು ಪರಿಹಾರವನ್ನು ಗಳಿಸುತ್ತಾರೆ.

ಕಣ್ವರು ಆಶ್ರಮಕ್ಕೆ ಬಂದು, ನಡೆದುದೆಲ್ಲವನ್ನೂ ತಿಳಿದು ಹರ್ಷಿತರಾಗಿ, ಆಗ ಬಸುರಿಯಾಗಿದ್ದ ಆಕೆಯನ್ನು ಶಾರ್ಙ್ಗರವ, ಶಾರದ್ವತ ಎಂಬ ಇಬ್ಬರು ಶಿಷ್ಯರೊಂದಿಗೆ ಮತ್ತು ಸಹೋದರಿಯಾದ ಗೌತಮಿಯೊಂದಿಗೆ ಪತಿಗೃಹಕ್ಕೆ ಕಳುಹಿಕೊಡುತ್ತಾರೆ. ಹೋಗುವಾಗ ಶಕುಂತಳೆಯ ಬೆರಳಲ್ಲಿದ್ದ ಮುದ್ರೆಯುಂಗುರ ನೀರಿಗೆ ಬಿದ್ದುದರಿಂದ ರಾಜನಿಗೆ ನೆನಪಿಸಲು ಆಕೆ ಅಶಕ್ತಳಾಗುತ್ತಾಳೆ. ಆದುದರಿಂದ ರಾಜನಿಂದ ನಿರಾಕೃತಳಾಗಿ, ಮಾರೀಚಾಶ್ರಮದಲ್ಲಿ ಸರ್ವದಮನನೆಂಬ ಪುತ್ರನನ್ನು ಪಡೆದು, ಮುಂದೆ ದುಷ್ಯಂತನು ಇಂದ್ರನ ಸಹಾಯಕ್ಕಾಗಿ ಹೋದವನು ಹಿಂದಿರುಗವಾಗ ಮಾರೀಚಾಶ್ರಮಕ್ಕೆ ಬಂದಾಗ, ಸರ್ವದಮನವನ್ನು ಕಂಡು ಆಕರ್ಷಿತನಾಗಿ, ಅವನನ್ನೂ ಶಕುಂತಳೆಯನ್ನೂ ತನ್ನ ಅರಮನೆಗೆ ಕರೆತರುತ್ತಾನೆ. ಅವನಿಗೆ ಕಾರಣಾಂತರದಿಂದ, ಓರ್ವ ಬೆಸ್ತನಿಂದ ಅದೇ ಮುದ್ರೆಯುಂಗುರ ಸಿಕ್ಕಿದ್ದರಿಂದ ಎಲ್ಲವೂ ನೆನಪಿಗೆ ಬಂದಿರುತ್ತದೆ. ಹೀಗೆ ನಾಟಕದಲ್ಲಿ ರೂಪಗೊಂಡ ಕಥಾವಸ್ತು **ಶಾಕುಂತಲಾ ಕಾವ್ಯ**ದಲ್ಲಿ ಮೂಲ ಕಥೆಗೇನೂ ಭಂಗವಿಲ್ಲದೆ ಇನ್ನೊಂದು ತೆರನಾಗಿ ಸೊಬಗುವಡೆದಿದೆ. ಶಾಕುಂತಲಾ ಕಾವ್ಯಕಥೆಯನ್ನಿಗ ಅವಲೋಕಿಸಬಹುದು–

ಮಾಲಿನೀ ನದೀತೀರದಲ್ಲಿ ಕಣ್ವರ್ಷಿಯ ಆಶ್ರಮ. ಅದೊಂದು ವಿದ್ಯಾಕೇಂದ್ರವೂ ಹೌದು. ಎಷ್ಟೋ ಮಂದಿ ಬ್ರಹ್ಮಚಾರಿಗಳೂ ಬ್ರಹ್ಮವಾದಿನಿಯರೂ ಅಲ್ಲಿರುತ್ತಾರೆ. ಎಲ್ಲರೂ ದುಡಿಯುವವರು, ಅದರೊಟ್ಟಿಗೆ ಕಲಿಯುವವರು. ಕಣ್ವನ ತಂಗಿ ಕಾತ್ಯಾಯನಿ ಓರ್ವ ಬ್ರಹ್ಮವಾದಿನಿ. (ಶಕುಂತಲಾ ನಾಟಕದಲ್ಲಿ ಕಣ್ವನ ತಂಗಿ ಗೌತಮಿ.) ಒಮ್ಮೆ ಆಕೆ ಮುಂಜಾನೆ ಆಶ್ರಮದ ಗಿಡಗಳಿಗಾಗಿ ಮಾಲಿನೀ ನದಿಯಿಂದ ನೀರನ್ನು ತರುತ್ತಿದ್ದಾಗ, ಅಪ್ಸರೆಯಾದ ಮೇನಕೆ ಕಾಣಿಸಿದಳು. ಅವಳ ಕೈಯಲ್ಲಿ 'ರನ್ನಬಟ್ಟಲ ನಡುವೆ ನಿಂತ ಓಕುಳಿಯಂತೆ' ಒಂದು ಎಳೆಮಗುವಿದ್ದಿತು. ಕಾತ್ಯಾಯನಿ ಸ್ವಾನುಭವವಿಲ್ಲದವಳಾದರೂ ಭಾವಪರವಶತೆಯಿಂದಲೇ ಮೇನಕಾ ಕೌಶಿಕರ ಪ್ರಣಯಪ್ರಸಂಗವನ್ನು ಆದ್ಯಂತವಾಗಿ ಕಂಡಳು. ಆ ಶಿಶುವನ್ನು ಅವಳಿಂದ ಸ್ವೀಕರಿಸಿದಳು, ಕಣ್ವಾಶ್ರಮಕ್ಕೆ ತಂದಳು. ಕಣ್ವರ್ಷಿ

ಸಂತೋಷ ತಾಳಿದನು. ಮರ್ತ್ಯವನ್ನು ಪ್ರೇಮರಸದಿಂದ ಸ್ವರ್ಗದೊಡನಿಟ್ಟು ಬೆಸೆವ ಈ ದಿವ್ಯಶಿಶುವನ್ನು ನಾವು ಸಲಹಿ ಸಾರ್ಥಕಗೊಳ್ಳೋಣ' ಎಂದನು. ಅವನ ಮುತ್ತಿನಂತಹ ಮಾತಿದು–

ಯಜ್ಞಫಲವಿದು ನಮಗೆ ಯಜ್ಞಾಧಿಪತಿ ಶಕ್ರ
ಕೊಡುವ ನಲ್ಲುಡುಗೊರೆಯೆ! ಎಮ್ಮಾತ್ಮಪಕ್ಷಿಗಳ್
ಜೀವಯಾತ್ರೆಯ ಶುಭಶಕುಂತಗಳ ಪೋಲ್ವುವು
ಆ ಪಕ್ಷಿಪಕ್ಷದೊಳ್ ರಕ್ಷೆವಡೆದೀ ಶಿಶುವ
ಕರೆಯಿರೆಲ್ಲರು ಕೂಡಿ 'ಶಾಕುಂತಲಾ' ಎಂದು. (ಪುಟ : ೩೨)

ಕಣ್ವಾಶ್ರಮದಲ್ಲಿ ಶಕುಂತಳೆಯು ಎಲ್ಲರ ಪ್ರೀತಿಪಾತ್ರಳಾಗಿ ಬೆಳೆದಳು. ಆಕೆಯ ಬಾಲ್ಯದ ಭವ್ಯಚಿತ್ರಣದ ಒಂದು ತುಣುಕು ಹೀಗಿದೆ. ಆಕೆಯನ್ನು ಕಂಡಾಗ, ಋಷಿಗಳು ತಮ್ಮ ಮಂತ್ರದೇವತೆಯನ್ನೇ ಮರೆಯುತ್ತಿದ್ದರಂತೆ !–

ಶಿಶುದೇವರಂ ಕಂಡು, ಬಗೆಪೊಣ್ಮೆ ನಲಿದೊಲಿದು
ನುಡಿಸುವರ್. ಇದರ ಉಪಟಳಮನಾಳೋಕಿಸಿದ
ಕಾತ್ಯಾಯನೀ ತಾಯಿ, ಕೈವಿಡಿದು ಕೊಂಡೊಯ್ದು
ದರ್ಭಾಸನದೊಳ್ ಕುಳ್ಳಿರಿಸೆ, ತವಸಿ ಸಂದೋಹ
ಬಿಟ್ಟ ಕಣ್ ನೆಟ್ಟು ನಿಬ್ಬೆರಗಾಗಿ ನೋಡುವರ್
ಪದ್ಮಾಸನಸ್ಥಿತೆಯ ಶಿಶುಗಾತ್ರಮಂ, ಮಂತ್ರ
ಭಾವದೊಳ್ ಮೆಯ್ಮನಗಳಂ ಬೆರಸಿ ನಿಂತಿರುವ
ಸಾವಿತ್ರಿಯಂ.

ಆ ಋಷಿಗಳಿಗೆ ಆ ಪ್ರೇಮಮಯ ಶಿಶುವಿನ ಅರ್ಚನೆಯೇ ದೇವರ ಆರಾಧನೆಗಿಂತ ಮಿಗಿಲೆನಿಸಿತೆಂದು ಇಲ್ಲಿ ಹೇಳಲಾಗಿದೆ. ಹೀಗೆ ಆಕೆ ಎಳವೆಯಲ್ಲಿಯೇ ತಪಶ್ಶಕ್ತಿ ಸಂಪನ್ನಳಾಗುತ್ತಿದ್ದುದನ್ನು ವರ್ಣಿಸಲಾಗಿದೆ.

ಈ ಕಾವ್ಯದಲ್ಲಿ ವರ್ಣಿತವಾಗಿರುವಂತೆ ಶಕುಂತಳೆಯ ವಿದ್ಯಾರ್ಜನೆಯ ಬಗೆಗಳು, ಅವುಗಳ ಆಳ ಹರಹುಗಳು ಅಸಾಧಾರಣ. ಆಕೆ ಭಾಷೆ, ವ್ಯಾಕರಣ, ಸಾಹಿತ್ಯ, ಸಂಗೀತ, ನಾಟ್ಯ, ವೇದಾಂತಗಳನ್ನೂ ಕಲಿತಳು. ಅಷ್ಟೇ ಅಲ್ಲ ; ಎಂತಹ ನೀರಿನಲ್ಲಿಯೂ ಈಜಾಡಲು ಕಲಿತಳು. ಬಿಲ್ಲುವಿದ್ಯೆಯಲ್ಲಿ ಅದ್ವಿತೀಯಳೆನಿಸಿದಳು ಎಂತಲೂ ಹೇಳಲಾಗಿದೆ. ಹೀಗೆ ಕಲಿಯುವುದನ್ನೆಲ್ಲ ಕಲಿತಾದ ಮೇಲೆ ಆಕೆ ವಿಶೇಷ ತಪಸ್ಸಾಧನೆಗಾಗಿ, ಅನುಮತಿ ಪಡೆದು ಆ ಕಾಡಿನಲ್ಲೇ ದೂರದ ಒಂದು ಗುಹೆಯನ್ನು ಸೇರಿ, ಅಲ್ಲಿ ನಿತ್ಯವೂ ಯಜ್ಞದಿಂದ, ಧ್ಯಾನಾದಿಗಳಿಂದ ಆತ್ಮಶಕ್ತಿಯನ್ನು ವೃದ್ಧಿಪಡಿಸಿಕೊಂಡಳೆಂದು ಹೇಳಲಾಗಿದೆ.

ಚಂದ್ರವಂಶದ ರಾಜನಾದ ಇಲಿನ ಎಂಬವನಿಗೆ ರಥಂತರಿ ಎಂಬಾಕೆಯಲ್ಲಿ ಜನಿಸಿದವನು ದುಷ್ಯಂತ. ಇವನು ಪ್ರತಿಷ್ಠಾನ ನಗರದ ಅರಸನು. ದುಷ್ಯಂತನ ರಾಣಿ ಲಕ್ಷಣಾ ಎಂಬವಳು. ಅವನ ತಮ್ಮಂದಿರು ಶೂರ, ಭೀಮ, ವಸು, ಪ್ರವಸು ಎಂಬ ನಾಲ್ವರು. ವ್ಯಾಘ್ರಬಾಧೆಯನ್ನು ನಿವಾರಿಸುವುದಕ್ಕಾಗಿ ಅರಣ್ಯಕ್ಕೆ ಬಂದ ದುಷ್ಯಂತನು ಶಕುಂತಳೆ

ಇದ್ದಲ್ಲಿಗೆ ಬರುತ್ತಾನೆ. ಆಕೆಯ ವಿಚಾರಗಳನ್ನೆಲ್ಲ ತಿಳಿದುಕೊಳ್ಳುವನು. ಅಲ್ಲಿ ಅವನೂ ಋಷಿಯಂತೆ ತಪಸ್ಸಾಧನೆ ಮಾಡುವನು. ಶಕುಂತಳೆ ನಿತ್ಯವೂ ಅವನಿಗೆ ಹೋಮಸಾಮಗ್ರಿಗಳನ್ನು ತಂದೊದಗಿಸುತ್ತಾ ಯಜ್ಞಕ್ಕೆ ನೆರವಾಗುವಳು. ಹಾಗೆಯೇ ಅವರೊಳಗೆ ಪ್ರೇಮ ಬಲಿತು, ಗಾಂಧರ್ವವಿವಾಹ ಏರ್ಪಡುತ್ತದೆ. ಅನಂತರ ಅವರಿಬ್ಬರೂ ಕಣ್ವಾಶ್ರಮಕ್ಕೆ ಬಂದಾಗ, ಅವರ ವಿವಾಹಕ್ಕೆ ಮಾನ್ಯತೆ ದೊರೆಯುತ್ತದೆ. ಮುಂದೆ, ದುಷ್ಯಂತನು ತನ್ನ ರಾಜಧಾನಿಗೆ ತೆರಳುವಾಗ, ಕೆಲವು ದಿನಗಳಲ್ಲಿಯೇ ತನ್ನ ತಮ್ಮ ಶೂರನನ್ನು ಕಳುಹಿಸಿ, ಆಕೆಯನ್ನು ಮೆರವಣಿಗೆಯಿಂದ ಬರಮಾಡಿಸಿಕೊಳ್ಳುವುದಾಗಿ ಭರವಸೆ ಕೊಡುತ್ತಾನೆ.

ಈ ಕಾವ್ಯದಲ್ಲಿ ಅಭೀಲಕನದೊಂದು ಧೂರ್ತ ಪಾತ್ರ. ಕಣ್ವಾಶ್ರಮದಲ್ಲಿ ಓರ್ವ ವಿದ್ಯಾರ್ಥಿಯಾಗಿ ಶಂಕುತಳೆಗೆ ಕಿರುಕುಳ ನೀಡಿದವನು. ಈಚೆ ದುಷ್ಯಂತನು ಪ್ರತಿಷ್ಠಾನ ಪುರಕ್ಕೆ ಬಂದ ಮೇಲೆ, ಅಭೀಲಕನ ರಾಜದೂತನಾದ ಆರ್ಯಮಿತ್ರ ಎಂಬಾತನು ಬಂದು ತನ್ನೊಡೆಯನಾದ ಅಭೀಲಕನು ಕಣ್ವಾಶ್ರಮದಲ್ಲಿರುವಾಗಲೇ ಶಕುಂತಳೆಯನ್ನು ವರಿಸಿದುದಾಗಿ ತಿಳಿಸಿದುಲ್ಲದೆ, ಅದಕ್ಕೆ ಕುರುಹಾಗಿ ಶಕುಂತಳೆ ಅಭೀಲಕನಿಗೆ ಮಾವಿನೆಲೆಯಲ್ಲಿ ಬರೆದುದೆನ್ನಲಾದ ಒಂದು ಪ್ರಣಯಪತ್ರವನ್ನು ತೋರಿಸುತ್ತಾನೆ. ದುಷ್ಯಂತನು ಅದನ್ನು ವಾಸ್ತವವೆಂದು ನಂಬುತ್ತಾನೆ.

ಇತ್ತ ಕಣ್ವಾಶ್ರಮದಲ್ಲಿ ಶಕುಂತಳೆ ಪುತ್ರನನ್ನು ಪ್ರಸವಿಸುವಳು. ಆಗಲೇ ಕಣ್ವನು ಅಘಮರ್ಷಣ, ಅಗ್ನೀಧ್ರ ಎಂಬಿಬ್ಬರು ಶಿಷ್ಯರನ್ನು, ದುಷ್ಯಂತನಿಗೆ ಈ ವಾರ್ತೆಯನ್ನರುಹಿ ಅವನನ್ನು ಕರೆತರುವುದಕ್ಕಾಗಿ ಕಳುಹಿಸುತ್ತಾನೆ. ದುಷ್ಯಂತನು ಆ ಕರೆಯನ್ನು ಮನ್ನಿಸುವುದಿಲ್ಲ. ಋಷಿಶಿಷ್ಯರಿಗೆ ಶೀತಲಸ್ವಾಗತ ಮಾತ್ರ ದೊರೆಯಿತು ! ಕಣ್ವನು ಆ ಮಗುವಿಗೆ 'ಭರತ' ಎಂದು ನಾಮಕರಣ ಮಾಡಿದನು. ಋಷಿಗಳು ಅವನ ನಡತೆಗೆ ತಕ್ಕಂತೆ 'ಸರ್ವದಮನ' ಎಂದು ಹೆಸರಿಟ್ಟುಕೊಂಡರು. ಮಗುವಿಗೆ ಆರು ವರ್ಷಗಳಾದವು. ಆಕೆಯನ್ನು ಕಣ್ವನು ಅದೇ ಇಬ್ಬರು ಶಿಷ್ಯರೊಂದಿಗೆ ತಂಗಿ ಕಾತ್ಯಾಯನಿಯ ಜೊತೆಯಲ್ಲಿ ಪ್ರತಿಷ್ಠಾನ ಪುರಕ್ಕೆ ಕಳುಹಿಸುವನು. ದುಷ್ಯಂತನು ಆಕೆಯ ಶೀಲದ ಬಗೆಗೆ ಶಂಕಿಸಿ ನಿರಾಕರಿಸಿದುದರಿಂದ, ಅವಳು ತವರುಮನೆಗೆ ಹೋಗಲೊಪ್ಪದೆ, ಹಿಮಗಿರಿಯ ಪ್ರಣವಾಶ್ರಮಕ್ಕೆ ಹೋಗಿ, ತಪೋಮಗ್ನಳಾಗಿದ್ದುಕೊಂಡು ಅಲ್ಲಿ ಹತ್ತು ವರ್ಷಗಳಕಾಲ ಕುಮಾರ ಭರತನನ್ನು ಪಾಲನೆ ಪೋಷಣೆಯೊಂದಿಗೆ ಸಕಲ ವಿದ್ಯಾಪಾರಂಗತನನ್ನಾಗಿ ಮಾಡುವಳು.

ಇತ್ತ ಅಭೀಲಕನು ಪ್ರತಿಷ್ಠಾನುಪುರಕ್ಕೆ ದಾಳಿಮಾಡುವನು. ದುಷ್ಯಂತನ ತಮ್ಮಂದಿರನ್ನೂ ಮಗನಾದ ಜನಮೇಜಯನನ್ನೂ ವಧಿಸುವನು. ಈ ಕಡೆ, ಪ್ರಣವಾಶ್ರಮದಲ್ಲಿದ್ದ ಭರತನಿಗೆ ಇಂದ್ರನು ಒಂದು ವಜ್ರಾಯುಧವನ್ನೂ ಇತರ ಅಸ್ತ್ರ ಶಸ್ತ್ರಗಳನ್ನೂ ಕೊಡುವನು. ಅಭೀಲಕನ ಆಕ್ರಮಣದ ವಾರ್ತೆಯನ್ನು ಭರತನು ಕೇಳಿ, ಇತರರನ್ನೂ ಕೂಡಿಕೊಂಡು ಯುದ್ಧಕ್ಕೆ ತೆರಳುವನು. ಅಭೀಲಕನ ಸಂಹಾರವಾಗುವುದು. ಸಾಯುವ ಮುನ್ನ

ಅವನು ತನ್ನ ಎಲ್ಲ ತಪ್ಪುಗಳನ್ನೂ ಒಪ್ಪಿಕೊಂಡು, ಶಕುಂತಳೆಯು ಶೀಲಶುದ್ಧೆಯೆಂದು ದೃಢಪಡಿಸುವನು. ಇದರಿಂದ ದುಷ್ಯಂತನಿಗೆ ಲೋಕಾಪವಾದ ಇಲ್ಲದಂತಾಗುವುದು. ಅವನು ಶಕುಂತಳೆಯನ್ನೂ ಭರತನನ್ನೂ ಸ್ವೀಕರಿಸುವನು.

ಹೀಗೆ ಈ ಮಹಾಕಾವ್ಯದ ಕಥಾವಸ್ತು ಹಲವು ಘರ್ಷಣೆಗಳಲ್ಲಿ ಸಿಲುಕಿ ಪಾತ್ರ ಪೋಷಣಗೊಂಡಿದೆ. ಕಾಳಿದಾಸನ ನಾಟಕ ಕಥಾವಸ್ತುವಿಗಿಂತ ಬೇರೆ ರೀತಿಯಲ್ಲಿ ಮಾರ್ಪಾಟುಗೊಂಡಿದೆ. ಕಾವ್ಯಕಥೆಗೆ ಸಹಜತೆಯಿದೆ. ಕಥಾನಾಯಕಿಯಾದ ಶಕುಂತಲಾ ಇಲ್ಲಿ ಕಣ್ವರ ಶಕುಂತಳೆಯಂತೆ ಭೀರುವಲ್ಲ. ಅಲ್ಲಿ ಆಕೆ ಒಂದು ತುಂಬಿ ತನ್ನ ಮುಖಕ್ಕೆ ಎರಗುವುದನ್ನೇ ನಿವಾರಿಸಲಾರದಾದ ಭೀರು. ಅದಕ್ಕಾಗಿ ಅಲ್ಲಿ ದುಷ್ಯಂತನೇ ಪ್ರವೇಶಿಸ ಬೇಕಾಯಿತು. ಅಲ್ಲಿ ಆಕೆ ದೀನೆ. ಪ್ರಣಯಲಂಪಟೆಯೂ ಹೌದು. ಇಲ್ಲಿ ಹಾಗಿಲ್ಲ. ಈ ಕಾವ್ಯದಲ್ಲಿ ಆಕೆ ಕಷ್ಟಬಂತೆಂದು ಕಂಗೆಟ್ಟು ದೈವಕ್ಕೆ ಮಣಿದು ನಿಷ್ಕ್ರಿಯೆಗೊಂಡವಳಲ್ಲ. ಕಠಿನತಪವನ್ನು ಆಚರಿಸಿದವಳು. ವೇದವೇದಾಂಗಗಳನ್ನು ಅಭ್ಯಾಸಮಾಡಿದವಳು. ಬಿಲ್ಲು ವಿದ್ಯೆಯನ್ನೂ ಕಲಿತ ವೀರನಾರಿ. ಗುಹಾಶ್ರಮದಲ್ಲಿ ಧೃತಿಗೆಡದೆ ಹಲವು ವರ್ಷ ಒಬ್ಬಳೇ ನೆಲಸಿದ್ದಳು. ಮಗನಾದ ಭರತನನ್ನು ಆದರ್ಶರೀತಿಯಲ್ಲಿ ಭಾವೀ ರಾಷ್ಟ್ರನಾಯಕನಾಗು ವಂತೆ ಅಣಿಗೊಳಿಸಿದವಳು. ದುಷ್ಟನಾದ ಅಭೀಲಕನಿಗೆ ದಿಟ್ಟೆಯಾಗಿ ನೇರವಾಗಿ ಮಾರು ತ್ತರ ಕೊಟ್ಟಿದ್ದಳು. ರಾಜಸಭೆಯಲ್ಲಿದ್ದ ಮೇಧಾವಿಗಳು, ವಾದಪ್ರಚಂಡರು ಬೆರಗಾಗು ವಂತೆ ದುಷ್ಯಂತನೊಡನೆ ವಾದಮಾಡಿದ ವಾಗ್ಮಿ ಆಕೆ. 'ಜನನಾಯಕರು ಹೆಣ್ಣು ಅಬಲೆ ಎಂಬ ಜಳ್ಳುನುಡಿಯನ್ನು ಬಳಸಿ ವ್ಯವಹರಿಸದಿರಲಿ' ಎಂದಿದ್ದಾಳೆ ಒಂದೆಡೆ. (ಪುಟ ೫೫೦) ಜೀವನದಲ್ಲಿ ಕಷ್ಟಬರುವುದು ಒಳ್ಳೆಯದಕ್ಕಾಗಿ ಎಂಬುದನ್ನು ಆಕೆಯ ಮಾತಿನಲ್ಲಿ ಕೇಳ ಬೇಕು–

ದೇವನೇಂ ಕ್ರೂರನೇ
ಶೂರ, ಸಂಕಷ್ಟಕ್ಕೆ ನರನ ನೂಂಕಲ್ಕೆ ? ಅಲ್ತು
ಅಂತಲ್ತು ನರನೊಳ್ಳಿತವೆ ಚರಮ ಗುರಿಯವಗೆ.
ತುಂಟಮಗುವನ್ನಬ್ಬೆ ಶಿಕ್ಷಿಸುವ ಮಾಳ್ಕೆಯಿಂ
ದೇವನುಂ ಬಾಳ್ಬೇಗೆಯನ್ನೊಡ್ಡುವಂ, ಅವನ
ಗಮನವಸೆಳೆಯೆ ತನ್ನಿರವಿನತ್ತ. (ಪುಟ : ೫೦೬)

ದುಷ್ಯಂತನು ಶಕುಂತಳೆಯೊಡನೆ–'ನೀನು ಮೊದಲೇ ಅಭೀಲಕನನ್ನು ಮನಸ್ಸಿನಲ್ಲಿ ಮೆಚ್ಚಿದ್ದರಿಂದ ನನಗೆ ಪರಪತ್ನಿಯಾಗುವೆ' ಎಂದಾಗ ಆಕೆಯ ಮಾತುಗಳಿವು–

ಮೆಚ್ಚಿಕೆಯದಾವ ಗುಣಗಳಂ
ಕಾಣ್ಬೆನವನೊಳ್ ? ಹರಿಣಿ ಊರ್ನಾಯಿಯಂ, ಕೇಗಿ
ಕಾಗೆಯಂ ಕ್ರೀಡೆಗೆಂದೆಳಸುವೊಡೆ, ದಿಟಮಕ್ಕು
ನೀನೆಂಬ ನುಡಿ. ಏಗಳುಂ ಕೆಳೆಗೆ ಸಮಗುಣಂ
ಅತ್ಯವಶ್ಯಂ ಕಣಾ ! ಜೀವವಿಜ್ಞಾನದಾ
ತತ್ತ್ವಮಂತಿರೆ, ದೇವ, ಏತಕನ್ವಯಿಸುವೆಯೊ

ಎನಗದಂ ? ಮತ್ತೆ ಮತ್ತೊತ್ತಿ ನುಡಿಯುವೆಂ, ಇದೋ,
ತ್ರಿಕರಣಶುದ್ಧಿಯಿಂ, ಕನಸುಮನಸಿನೊಳಾದೊಡಂ
ಕೆಳೆತನಕ್ಕೆಂದನ್ಯರನ್ನೆಂದುಂ ಸ್ಮರಿಸಲಿಲ್ಲೆಂದು.
ಪೊರೆವ ನೆಲಜಲಗಳಂ, ಗಗನ ದೇವತೆಗಳಂ
ಪೆಸರಿಸುತ್ತಾಣೆಯನ್ನಿಕ್ಕುವೆಂ (ಪುಟ : ೫೩೦–೩೧)

ಮಹಾಭಾರತದ ದುಷ್ಯಂತನು ಕಪಟಿಯಂತೆ, ವಂಚಕನಂತೆ ಚಿತ್ರಿತನಾಗಿದ್ದಾನೆ. ಆದರೆ, ಕಾಳಿದಾಸನು ಜಾಣ್ಮೆಯಿಂದ ಸನ್ನಿವೇಶಗಳನ್ನು ಕಲ್ಪಿಸಿ, ಅವನನ್ನು ಉದಾತ್ತೀಕರಿಸುವಲ್ಲಿ ಯಶಸ್ವಿಯಾಗಿದ್ದಾನೆ. ಪ್ರಕೃತ, ಶಾಕುಂತಲಾ ಕಾವ್ಯದಲ್ಲಿ ಹೊಸ ಆಯಾಮಗಳಿಂದ ಅವನ ಉದಾತ್ತೀಕರಣವಾಗಿರುವುದು ಕಂಡುಬರುತ್ತದೆ. ಅವನು ಶಕುಂತಳೆಯನ್ನು ತಿರಸ್ಕರಿಸಲು, ಆಕೆಗೆ ಕಳಂಕದ ಆರೋಪವಿದ್ದುದೇ ಕಾರಣವೆಂಬುದು ಇಲ್ಲಿ ಸ್ಪಷ್ಟಪಡುವುದರಿಂದ ದುಷ್ಯಂತ ಶಕುಂತಳೆಯರಿಬ್ಬರ ಉದಾತ್ತತೆಯೂ ಉನ್ನತಿವಡೆದುದನ್ನು ಕಾಣುತ್ತೇವೆ. ದುಷ್ಯಂತನು ನಾಡ ಪಾವಿತ್ರ್ಯವನ್ನು ಕಾಪಾಡುವ, ಜನಾಭಿಪ್ರಾಯವನ್ನು ರೂಪಿಸುವ ಕಾರ್ಯದಕ್ಷನಂತೆ ಕಾಣಿಸಿಕೊಂಡಿದ್ದಾನೆ.

ಶಾಕುಂತಲಾ ನಾಟಕದಲ್ಲಿ ಶಕುಂತಳೆ ತನ್ನ ಪತಿಗೃಹಕ್ಕೆ ಹೊರಡುವ ಸನ್ನಿವೇಶವು ತುಂಬ ಮಾರ್ಮಿಕವಾಗಿರುವುದು ಎಲ್ಲರೂ ಬಲ್ಲ ಸಂಗತಿ. ಕವಿಕೌಶಲ ಅಲ್ಲಿ ಚೆನ್ನಾಗಿ ಮೆರೆದಿದೆ. ಪ್ರಸ್ತುತ, ಶಾಕುಂತಲಾ ಕಾವ್ಯದಲ್ಲಿ ಆಕೆ ಪತಿಗೃಹಕ್ಕೆ ಹೊರಡುವ ಭಾವಪೂರ್ಣ ಚಿತ್ರಣ ಇನ್ನಷ್ಟು ಮೆರಗು ತಾಳಿದೆ. ಇಲ್ಲಿ ಆಕೆ ಭರತನನ್ನು ಹೆತ್ತಿರುತ್ತಾಳೆ. ಅವನಿಗೆ ಆರು ವರ್ಷವಾಗಿರುತ್ತದೆ. ಕಣ್ವನು ಕಾತ್ಯಾಯನಿಯ ಮೂಲಕ ಶಕುಂತಳೆಯ ಹೃದ್ಗತವನ್ನು ತಿಳಿಯಲೆಳಸಿದಾಗ, ಆಕೆ ಹೇಳುತ್ತಾಳೆ–

ಸಾಂಪ್ರದಾಯಿಕಮಾಗಿ ಕರೆದನಿಲ್ಲೆಂಬೊಂದು
ಪೆಡಸೇತಕೋ ? ದೇವನಾಗಾರಕ್ಕೈದುವೊಡೆ
ಆಹ್ವಾನಮೆಂದೆಂಬುದುಂಟೇಂ ? ಅದಂತಿರಲಿ
ಪೋಪೆನಾದೊಡಮೆಲ್ಲಿಗೋ! ಎನ್ನ ಮನೆಗಲ್ತೆ ?
ಅದಕಾರ ಕರೆಯೇಕೆ ? ಕಡಲಾಣ್ಮ ತಾಂ ಬಂದು
ತೊರೆವೆಣ್ಣ ಕರೆದೊಯ್ದುದುಂಟೇನು ಕೈವಿಡಿದು ?
ಅವ್ವ, ತನುಮನಗಳಿವು ಐಕ್ಯವಾಗಿರಲಲ್ಲಿ
ಎನ್ನತನಮಿನ್ನುಂಟೆ ? ನಡೆ, ನಾಳೆಯೇ ಪೋಪಂ (ಪುಟ : ೪೮೪–೮೫)

ಶಕುಂತಳೆಗೆ ಪತಿಗೃಹಕ್ಕೆ ಹೋಗುವ ತವಕದಲ್ಲಿ ಆಕೆಯ ಪತಿಭಕ್ತಿ, ನೀತಿ, ಸಂಸ್ಕೃತಿ ನಿಷ್ಠೆಗಳು ಚೆನ್ನಾಗಿ ಪಡಿಮೂಡಿರುವುದನ್ನು ನಾವು ಕಾಣುತ್ತೇವೆ. ಅದೇ ವೇಳೆಗೆ ಸರ್ವದಮನನು ತನ್ನ ತಾಯೊಡನೆ ತಂದೆಯಲ್ಲಿಗೆ ಹೋಗುವ ಸಂಭ್ರಮದ ಕುಣಿದಾಟ ಅತ್ಯಂತಸಹಜವಾಗಿ ಈ ಕಾವ್ಯದಲ್ಲಿ ಚಿತ್ರಿತವಾಗಿದೆ. ಮುಂದೆ ಆಭೀಲಕನು ಭರತನೊಡನೆ ಕಾದಾಡಿ ಸೋತು ಕಂಗೆಟ್ಟು, ತನ್ನ ಸುಳ್ಳನ್ನು ತಾನೇ ಮೆಟ್ಟಿ, ಸತ್ಯವನ್ನು ಪ್ರಕಟಿಸುವ ಸನ್ನಿವೇಶವಂತೂ ಕಥಾವಸ್ತುವಿಗೆ ರೋಮಾಂಚಕ ಪರಿಣಾಮವನ್ನುಂಟುಮಾಡಿ ಮಂಗಳಕರವಾದ ಕೊನೆಯನ್ನು ನೀಡುತ್ತದೆ.

ಈ ಕಾವ್ಯದ ಯಾವ ಭಾಗವನ್ನೇ ಆಯ್ದು ಓದಿದರೂ ರಸಸ್ಯಂದಿಯಾಗಿ ಕವಿ ಭಾವವಾಹಕವಾಗಿ ಕಂಗೊಳಿಸುತ್ತದೆಯೆನ್ನಲು ಅಡ್ಡಿಯಿಲ್ಲ. ಅಲ್ಲಲ್ಲಿಯ ಪ್ರಕೃತಿಚಿತ್ರಣ, ಸಂದರ್ಭಚಿತ್ರಣ, ಪಾತ್ರಚಿತ್ರಣಗಳು ಮನಸ್ಸಿನಲ್ಲಿ ಅಚ್ಚೊತ್ತುತ್ತವೆ. ಮಾತುಗಳಲ್ಲಿ ಮೂಡಿಕೊಂಡಿರುವ ಸುಭಾಷಿತಗಳಲ್ಲಿ, ಕನ್ನಡ ದೇಸಿಯ ಶಬ್ದಸಂಪತ್ತಿನಲ್ಲಿ, ವಾಗ್ವಿಶೇಷಗಳಲ್ಲಿ, ಆಲಂಕಾರಿಕವಾದ ವರ್ಣನೆಗಳಲ್ಲಿ, ನೀತಿಪ್ರತಿಪಾದನೆಯಲ್ಲಿ, ತತ್ತ್ವಮಂಥನದಲ್ಲಿ, ವಾದ ಪ್ರತಿವಾದ ಸಂವಾದಗಳಲ್ಲಿ ಈ ಮಹಾಕಾವ್ಯವು ಮಹತ್ವವನ್ನೇ ಸಾಧಿಸಿರುವುದು ಸುವ್ಯಕ್ತವಾಗಿಯೇ ಇದೆ. ಇವೆಲ್ಲವುಗಳೊಂದಿಗೆ ಈ ಕಾವ್ಯಕರ್ತರು ವಿದ್ಯಾವಿನಯ ಸಂಪನ್ನರೂ ಆಗಿ ರಸಋಷಿಯೂ ಆಗಿರುವುದು ಬೋಧ್ಯವಾಗುತ್ತದೆ. ಉದಾಹರಣೆಗಳನ್ನು ಆಯ್ದು ಈ ಕಾವ್ಯದ ವೈಶಿಷ್ಟ್ಯಗಳನ್ನು ಎಷ್ಟೂ ಹೇಳಬಹುದಾಗಿದೆ. ಅದನ್ನು ಇತರ ಸಹೃದಯರಿಗೆ ಬಿಟ್ಟು ಒಂದು ಸಂಕ್ಷಿಪ್ತ ದಿಗ್ದರ್ಶನವನ್ನು ಮಾತ್ರ ನಾನಿಲ್ಲಿ ಮಾಡಿರುವುದೆಂದು ಓದುಗರು ಭಾವಿಸಬಹುದಾಗಿದೆ.

. . . ಪ್ರಾಣವೀಣೆ' ಕಥಾ ಸಂಗ್ರಹದಲ್ಲಿ ಸಮೇತನಹಳ್ಳಿಯವರ ಇನ್ನೊಂದು ಮುಖವಿದೆ. ನಾಟಕಗಳಲ್ಲಿ ಹೇಗೋ ಇಲ್ಲಿಯೂ ಹಾಗೆಯೇ ತಮ್ಮ ಆದರ್ಶಗಳಿಗೆ ಚ್ಯುತಿ ಬಾರದಂತೆ ಒಳ್ಳೆಯ ಕೆಟ್ಟ ಪಾತ್ರಗಳನ್ನು ನಿರ್ಮಿಸುವ ಇವರ ಪ್ರೇಮ ಪ್ರಕರಣಗಳು, ಸಾಹಸದ ಸಂಗತಿಗಳನ್ನು ನಿರೂಪಿಸುವಾಗ ಮರೆಯಲಾಗದಂತಹ ಬರವಣಿಗೆ ಕೊಡುತ್ತಾರೆ. 'ತಾಯಿ' ಕತೆಯ ತಾಯಿಯಾದ ಮಾದವ್ವನ ಜೀವನ ಸಂತೋಷ ಸಮಾಜದ ಕೌರ್‍ಯಕ್ಕೆ ಸೊಪ್ಪುಹಾಕದೆ ಅರ್ಕಾವತಿ ನದಿಯಂತೆ ತಣ್ಣಗೆ ಹರಿದುಹೋಗುವ ಆಕೆಯ ಬದುಕಿನ ರೀತಿ ಚೆನ್ನಾಗಿ ವಿವರಿತವಾಗಿದೆ. 'ಬೆಂದ ಬಾಳು', 'ಒಲಿದ ಜೀವ', 'ಒರೆಗಲ್ಲು', 'ಹೃದಯ ನಿಸ್ವನ' ಎಂಬ ಕತೆಗಳಲ್ಲೂ ಬಹುಕಾಲ ಮನಸ್ಸಿನಲ್ಲುಳಿಯುವ ಚಿತ್ರಗಳಿವೆ. 'ಹೂವಾದವಳು' ಕಥೆಯ ಸುರುಗಿಯ ಪಾತ್ರ, ಸಮೇತನಹಳ್ಳಿಯವರ ಜೀವನಾನುಭವಕ್ಕೆ ಸಾಕ್ಷಿ . . . .

೨೨–೯–೧೯೭೮ ಪಿ. ಲಂಕೇಶ್

ಸೊಗಸಿನ ಚಿತ್ರಣಗಳ-ಸಿರಿಯಲದೇವಿ

ರಘುಸುತ

ಸಮೇತನಹಳ್ಳಿ ರಾಮರಾಯರು ನಮ್ಮ ಹಿರಿಯ ಕಾದಂಬರಿಕಾರರಲ್ಲಿ ಒಬ್ಬರು. ಇವರು ನಿಜ ಅರ್ಥದ ಐತಿಹಾಸಿಕ ಕಾದಂಬರಿಕಾರರು. ಕ್ರಮಬದ್ಧವಾದ ರೀತಿಯಲ್ಲಿ ಇವುಗಳ ರಚನೆಯನ್ನು ಮಾಡಿರುತ್ತಾರೆ. ಜನಪ್ರಿಯ ಅಂಶಗಳು, ಮಿರ್ಚಿ ಮಸಾಲೆಗಳನ್ನು ಸೇರಿಸಿ, ಓದುಗರನ್ನು ಉದ್ವೇಗ, ಉದ್ರೇಕಗೊಳಿಸುವ ಮಾದರಿಯವಲ್ಲ ಇವರ ರಚನೆಗಳು. ಇದರ ಪರಿಣಾಮ ಇವರ ಐತಿಹಾಸಿಕಗಳು ಹೆಚ್ಚು 'ಜನಪ್ರಿಯ'ವಾಗಲಿಲ್ಲ. ಸಂಸ, ಮುದ್ದಣರ ಕೃತಿಗಳಂತೆ ಇವರ ಕೃತಿಗಳು ಬುದ್ಧಿಜೀವಿಗಳ, ಕೆಲವೇ ಆರಿಸಿದ ಓದುಗರಿಗೆ ಇಷ್ಟವಾಗುವ ಕೃತಿಗಳಾದುವು. ಭಾಷೆ, ಭಾವ, ವ್ಯಕ್ತಿಚಿತ್ರಣಗಳು, ಕಥಾನಕಗಳು–ಇವೆಲ್ಲದರಲ್ಲೂ ಇವರು ಪ್ರಾಚೀನ ಪರಂಪರೆಯನ್ನು ಆರಿಸಿಕೊಂಡಿದ್ದರಿಂದ ಸಾಮಾನ್ಯ ಓದುಗರ ಮಟ್ಟಕ್ಕೆ ಇವು ಇಳಿಯಲಾರದಾದವು. ಐತಿಹಾಸಿಕ ಹಿರಿಮೆಯನ್ನು ಎತ್ತಿ ಹಿಡಿದರೂ ಇವು ಜನಪ್ರಿಯತೆಯ ಮೋಹದ ಬಲೆಗೆ ಸಿಕ್ಕಿಹಾಕಿಕೊಳ್ಳಲಿಲ್ಲ.

ಇವರ ರಚನೆಗಳಲ್ಲಿ ನಿಜ ಅರ್ಥದ ಐತಿಹಾಸಿಕವೆಂದರೆ ಹೊಯ್ಸಳರ ಕಾಲಕ್ಕೆ ಸಂಬಂಧಪಟ್ಟ 'ಸಿರಿಯಲದೇವಿ.'

ಈ ಕಾದಂಬರಿಯಲ್ಲಿ ವಿಷ್ಣುವರ್ಧನನ ಮಗನಾದ ವಿಜಯ(ಪ್ರತಾಪ)ನಾರಸಿಂಹನ ಆಳ್ವಿಕೆಯ ಕಾಲದ ಚಿತ್ರಣವಿದೆ. ಮುಖ್ಯವಾಗಿ ಸಿರಿಯಲದೇವಿಯ ಪ್ರಾಮುಖ್ಯತೆಯ ವಿವರಗಳಿಲ್ಲಿವೆ.

ಸಿರಿಯಲದೇವಿಯು ಸುರಗಿನಾಡಿನ ಹೆಗ್ಗಡಿತಿ, ಸಟ್ಟಿಗಹೆಗ್ಗಡೆಯ ಪತ್ನಿ. ಇವಳು ವಿಲಾಸವತಿಯೂ ಹೌದು, ಧೈರ್ಯಶಾಲಿಯೂ ಹೌದು. ನಡುವಯಸ್ಸು ದಾಟಿದ್ದರೂ, ದೈಹಿಕ ಆಕರ್ಷಣೆ ಇವಳಲ್ಲಿ ಏನೇನೂ ಕಡಿಮೆ ಆಗಿರಲಿಲ್ಲ. ನಿಜ ಅರ್ಥದ ಹೆಣ್ಣಾದ ಇವಳು ತನ್ನ ಹೆಣ್ಣುತನವನ್ನು ಮೆರೆಸುವ ಯಾವ ಒಂದು ಸದವಕಾಶವನ್ನೂ ಸುಲಭವಾಗಿ ಬಿಟ್ಟುಕೊಡುವವಳಲ್ಲ.

ಒಮ್ಮೆ ಈಕೆ ತನ್ನ ಪಡೆವಳರವರೊಂದಿಗೆ ತಮ್ಮ ನಗರದ ಸಮೀಪದಲ್ಲಿನ ಅನುತ್ತಮಾಶ್ರಮದಲ್ಲಿನ ವಾಮನ ಶ್ರೌತಿಗಳನ್ನು ಕಾಣಲು ಹೋದಳು. ಈತ ಸುರಗಿನಾಡಿನ ಆಸ್ಥಾನದ ಓರ್ವ ಪುರೋಹಿತ. ಹೇಮಾವತಿ ನದಿಯ ದಂಡೆಯಲ್ಲಿ ಸಣ್ಣ ಆಶ್ರಮವೊಂದನ್ನು ನಿರ್ಮಿಸಿಕೊಂಡು, ಅಲ್ಲಿ ತನ್ನ ಅಧ್ಯಪನ ಕಾರ್ಯವನ್ನು ಮುಂದುವರಿಸುತ್ತಿದ್ದವನು. ತನ್ನ ಪತ್ನಿ ಸಂಧ್ಯೆಯೊಡನೆ ಈತ ಒಂದು ಸಣ್ಣ ಕುಟೀರವನ್ನು ನಿರ್ಮಿಸಿ

ಕೊಂಡು, ಪ್ರಶಾಂತ ಜೀವನವನ್ನು ನಡೆಸುತ್ತಿದ್ದನು.

ಸಂಧ್ಯಾಳದ್ದೂ ತರುಣ ಲಾವಣ್ಯವೆ! ಅವಳೂ ಆಕರ್ಷಣೀಯಳೆ! ಆದರೂ ಸಿರಿಯಲದೇವಿಯದ್ದು ಪಕ್ವಗೊಂಡ, ಮಾಗಿದ ಸೌಂದರ್ಯ ಹಾಗೂ ಮಾನಸಿಕ ನಡವಳಿಕೆ. ನಿಸರ್ಗಪ್ರಿಯೆಯಾದ ಸಿರಿಯಲದೇವಿಯು ಸಂಧ್ಯಾಳು ಬೆಳೆಸಿದ ತೋಟವನ್ನು ನೋಡ ಬಯಸಿದಳು. ಅಲ್ಲಿನ ಸಸ್ಯಕಾಶಿಯ ಚೆಲುವನ್ನು ವೀಕ್ಷಿಸುತ್ತಿದ್ದಂತೆ ವೇದಘೋಷದ ಹಿನ್ನೆಲೆಯಲ್ಲಿ ವಾಮನ ಶ್ರೌತಿ ಪ್ರವೇಶಿಸುವನು. ತಮ್ಮ ನಾಡಿನೊಡತಿ ಸಿರಿಯಲದೇವಿಯನ್ನು ಕಂಡು ಹಿಗ್ಗುವನು. ತನ್ನ ಯಜ್ಞಕಾರ್ಯವನ್ನು ಮುಂದುವರಿಸಿದಂತೆ, ಸಿರಿಯಲದೇವಿ ಆ ಪವಿತ್ರಕಾರ್ಯವನ್ನು ಮನಸ್ಸಿಟ್ಟು ನೋಡುವಳು.

ಉಪಚಾರಗಳಾದ ನಂತರ ಹೊರಡಲನುವಾದಾಗ ತಾನು ದ್ವಾರಾವತಿ ರಾಜಧಾನಿಗೆ ಇನ್ನೆಂಟು ದಿವಸಗಳಲ್ಲಿ ಹೋಗುತ್ತಿರುವುದಾಗಿಯೂ, ತನ್ನೊಂದಿಗೆ ಒಂದು ದಿನದ ಮಟ್ಟಿಗಾದರೂ ಸಂಧ್ಯಾಳು ಇರಲಿ ಎಂಬ ಬಯಕೆಯನ್ನು ವ್ಯಕ್ತಪಡಿಸಿದಾಗ, ವಾಮನ ಶ್ರೌತಿ ಒಪ್ಪುವನು.

ಸಿರಿಯಲದೇವಿಯು ಹುಟ್ಟಿ ಬೆಳೆದದ್ದೆಲ್ಲ ಮಲೆಗಳಿಂದ ಕೂಡಿದ ಕೊಡಗು ನಾಡಿನಲ್ಲಿ. ನಂತರ ಮದುವೆಯಾಗಿ ನೆಲೆಸಿದುದು ಮಲೆಗಳಿಂದ ಕೂಡಿದ ಸುರಗಿನಾಡಿನಲ್ಲಿ. ಹೀಗಾಗಿ ಅವಳು ಮಲೆಯ ಹೆಣ್ಣುಮಗಳೇ ಆದಳು–ರೂಪದಲ್ಲಿ, ವಿಶಾಲ ಹೃದಯದಲ್ಲಿ, ಸರಳ ಸಜ್ಜನಿಕೆಗಳಲ್ಲಿ.

ಅವಳಿಗೆ ಹೊಯ್ಸಳ ಸಾಮ್ರಾಜ್ಯದ ರಾಜಧಾನಿಯನ್ನು ನೋಡುವ ಸುಯೋಗ ಅದುವರೆವಿಗೂ ಲಭಿಸಿರಲಿಲ್ಲ. ಈ ವರ್ಷದ ವಸಂತಮೇಳಕ್ಕೆ ಅವಳು ಹೋಗಲೇಬೇಕಾಯಿತು. ಕಾರಣ, ಅವಳ ಮಗ ಹದಿನೆಂಟರ ಧೀರ ನಿಲುವಿನ ಸುಂದರ, ಸುರಗಿನಾಡಿನ ಮಲ್ಲರಾಟದಲ್ಲಿ ಮೇಲ್ಗೈ ಸಾಧಿಸಿದ್ದ ಮಾಚಣನು ಆ ಮೇಳದಲ್ಲಿ ಭಾಗವಹಿಸಿ, ತನ್ನ ಕಲಿಕೆಯನ್ನು ಮೆರೆಸಬೇಕಾಗಿತ್ತು. ಇದಕ್ಕಾಗಿಯಾದರೂ ಸಿರಿಯಲದೇವಿ, ಸೆಟ್ಟಿಗಹೆಗ್ಗಡೆ, ಪರಿವಾರದವರು ಹೋಗಲೇಬೇಕಾಗಿತ್ತು.

ಅಂತೆಯೇ ಮೇಳದ ಮೇಲ್ವಿಚಾರಣೆ ನೋಡಿಕೊಳ್ಳುವ ಹೊಯ್ಸಳ ಸೇನೆಯ ಮಹಾದಂಡನಾಯಕನಾದ ಅಮರೇಶ್ವರನಿಗೆ ಇಲ್ಲಿಂದ ತಾವೆಲ್ಲ ಬರುವುದರ ರಾಯಸವೂ ಹೋಯಿತು.

ಅಮರೇಶ್ವರ ಹಾಗೂ ಸಿರಿಯಲದೇವಿಯ ಗಂಡ ಸೆಟ್ಟಿಗನು ಬಾಲ್ಯ ಸ್ನೇಹಿತರು, ಆತ್ಮೀಯರು, ಒಬ್ಬರನ್ನೊಬ್ಬರು ಬಹಳವಾಗಿ ಇಚ್ಛಿಸುತ್ತಿದ್ದವರು. ಆದರೆ ರಾಜಕೀಯ ಕರ್ತವ್ಯದಲ್ಲಿ ಸೆಟ್ಟಿಗನು ಸುರಗಿನಾಡಿನ ಹೆಗ್ಗಡೆಯಾದರೆ, ಅಮರೇಶ್ವರನು ಸಾಮ್ರಾಜ್ಯದ ಮೂಡಲಲ್ಲಿನ ವಿಜಯಾದಿತ್ಯ ಮಂಗಲದಲ್ಲಿ ಚೋಳರ ಒಳನುಗ್ಗುವಿಕೆಯನ್ನು ತಡೆಯಲು ಶಾಶ್ವತ ಸೇನಾಪತಿಯ ಮುಂಚೂಣಿಯಲ್ಲಿದ್ದ.

ಈ ವಸಂತ ಮೇಳದ ಸಮಯದಲ್ಲೆ ಅಮರೇಶ್ವರನ ಮಗಳಾದ ಕೇತಲ ದೇವಿಯ ನೃತ್ಯ ಕಾರ್ಯಕ್ರಮದ ರಂಗಪ್ರವೇಶವೂ ನಡೆಯುವುದರಿಂದ ಅವನು ತನ್ನ ಹೆಂಡತಿ,

ಹೊಯ್ಸಳ ದೇವಿ, ಹಾಗೂ ಮಕ್ಕಳು ಪರಿವಾರದೊಡನೆ ಮುಂಚೆಯೇ ಬಂದು ರಾಜಧಾನಿಯ ತನ್ನ ಮನೆಯಲ್ಲಿ ಬಿಡಾರ ಹೂಡಿದ್ದ. ಅವನ ಸ್ನೇಹಿತನಾದ ಸೆಟ್ಟಿಗನು ತನ್ನ ಹೆಂಡತಿ ಮಗನೊಂದಿಗೆ ದ್ವಾರಾವತಿಗೆ ಬಂದು ಅವನ ಮನೆಯಲ್ಲಿಯೇ ತಂಗುವುದಾಗಿ ತಿಳಿಸಿದ್ದರಿಂದ, ಅಮರೇಶ್ವರನು ತುಂಬು ಸಂತಸದಲ್ಲಿದ್ದ. ಸಿರಿಯಲದೇವಿಯ ಬಗ್ಗೆ ಬಹಳಷ್ಟು ಕೇಳಿದ್ದ ಹೊಯ್ಸಳದೇವಿಗೂ ಅವಳನ್ನು ಭೇಟಿ ಮಾಡುವ ತವಕವಿತ್ತು. ಅದು ಈಗ ನೆರವೇರುವುದಲ್ಲಿತ್ತು. ಸಿರಿಯಲದೇವಿಯ ಪಯಣ ತುಂಬ ಸೊಗಸಿನದಾಗಿತ್ತು. ಪರಿವಾರದೊಂದಿಗೆ ಹೊರಟ ಅವಳು ದಂಡಿಗೆಯಲ್ಲಿ ಸುಖಕರವಾಗಿ ಪ್ರಯಾಣ ಮಾಡದೆ ಗಂಡ, ಮಗನಂತೆ ಕುದುರೆಯನ್ನೇರಿ, ವೀರವನಿತೆಯ ಉಡುಗೆಯಲ್ಲಿ ಮಾಡಿದ ಪಯಣ ಎಲ್ಲರಿಗೂ ಮುದುವ ನೀಡಿತ್ತು.

ಮೊದಲು ಬೆಲುಹೂರನ್ನು ತಲುಪಿ, ಅಲ್ಲಿ ಎರಡು ದಿನಗಳ ವಿಶ್ರಾಂತಿಯ ನಂತರ ಪರಿವಾರ ದ್ವಾರಾವತಿಯನ್ನು ತಲುಪಿದಾಗ ಸ್ವತಃ ಅಮರೇಶ್ವರನೇ ಎದುರುಗೊಂಡು ಕರೆದೊಯ್ದನು.

ಹೊಯ್ಸಳ ದೇವಿಯು ಸಿರಿಯಲದೇವಿಗೆ ಜೊತೆಗಾತಿಯಾಗಿ ದೊರೆತದ್ದು ಒಳ್ಳೆಯದೇ ಆಯಿತು. ಕಾರಣ, ಹೊಯ್ಸಳದೇವಿಗೆ ದ್ವಾರಾವತಿಯ ಮಹಿಳಾ ಪರಿಸರದಲ್ಲಿ ತುಂಬಾ ಉತ್ತಮ ಸಂಪರ್ಕವಿತ್ತು. ಇದರ ಮುಖಾಂತರ ಸಿರಿಯಲದೇವಿಗೆ ಅರಮನೆಯವರ ಸಂಪರ್ಕವೂ ಕೂಡಿ ಬಂದಿತು. ಇದನ್ನೆಲ್ಲ ಸದುಪಯೋಗಪಡಿಸಿಕೊಂಡ ಸಿರಿಯಲದೇವಿಯು ತನ್ನ ಮೋಹಕತೆ, ಮಾದಕತೆ, ಪ್ರಭಾವಗಳನ್ನು ಎಲ್ಲೆಡೆ ಹರಡಿದಳು.

ವಸಂತಮೇಳವು ನಾಡಪ್ರಗತಿಯ ಪ್ರತಿಬಿಂಬವಾಗಿರುತ್ತಿತ್ತು. ನಾಡಿನ ಜನಜೀವನದ ಕಲೆ, ಸಾಹಸ, ವಿಲಾಸ, ಸಂಗೀತ, ಸಾಹಿತ್ಯ, ವ್ಯಾಪಾರ, ವಾಣಿಜ್ಯ ವಹಿವಾಟಿನ ಪ್ರದರ್ಶನವೂ ನಡೆಯುತ್ತಿದ್ದು, ಇದರಲ್ಲಿ ಭಾಗವಹಿಸಲು ನಾಡಿನ ಮೂಲೆ ಮೂಲೆಗಳಿಂದ ಪರಿಚಿತರು, ಸ್ಪರ್ಧಿಗಳು, ಪ್ರದರ್ಶಕರು ಬಂದು ಮೇಳೈಸುತ್ತಿದ್ದರು.

ಈ ಉತ್ಸವವು ತುಂಬು ವೈಭವದಿಂದ ಮೆರೆಯುತ್ತಿತ್ತು.ನಾಡಜನರಿಗೆ ತಮ್ಮಲ್ಲಿನ ಪ್ರತಿಭೆಯನ್ನು ಪ್ರದರ್ಶಿಸುವ ಒಂದು ಸುಸಂದರ್ಭವಾಗಿತ್ತಿದು. ಉತ್ಸವ ಪ್ರಾರಂಭದ ಮೊದಲೆರಡು ದಿನಗಳಷ್ಟು ಮಾತ್ರವೇ ಮಹಾರಾಜನು ಉಪಸ್ಥಿತನಾಗಿರುತ್ತಿದ್ದುದು. ಉಳಿದ ಕಾಲದಲ್ಲಿ ದಂಡನಾಯಕರು, ಮತ್ತಿತರರ ನೇತೃತ್ವದಲ್ಲಿ ಉತ್ಸವವು ಮುಂದುವರೆದು, ಎರಡು, ಮೂರು ವಾರಗಳ ಕಾಲದವರೆಗೂ ಅದು ಮುಂದುವರಿಯುತ್ತಿತ್ತು.

ಆದರೆ ಈ ಉತ್ಸವದಲ್ಲಿ ಯುವರಾಜ ಬಲ್ಲಾಳನು ಮಾತ್ರ ಭಾಗವಹಿಸಿರಲಿಲ್ಲ. ಇದು ಮಹಾರಾಜ ನರಸಿಂಹನಿಗೆ ತುಂಬಾ ಕಿರಿಕಿರಿಯನ್ನುಂಟುಮಾಡಿತ್ತು.

ಇಪ್ಪತ್ತರ ಹರೆಯದ, ಯುವರಾಜ ಬಲ್ಲಾಳನಿಗೆ ಈ ಉತ್ಸವ ಒಂದು ತೋರಿಕೆಯ ಪ್ರದರ್ಶನವಾಗಿತ್ತು. ಅವನಿಗೆ ತನ್ನ ತಂದೆಯ ಭೋಗವಿಲಾಸದ ಜೀವನದ ಪರಿಚಯ ಈಗಷ್ಟೇ ಆಗಿತ್ತು. ಹೊಸ ರುಚಿ, ಹೊಸ ಆಮೋದ, ಹೊಸ ಬೇಟೆ, ಹೊಸ ಆಟಗಳ ವೈವಿಧ್ಯತೆಯಲ್ಲಿ, ಕನ್ನಡದ್ದೇ ಅಲ್ಲದೆ ಸಮಗ್ರ ಭಾರತದ ವಿವಿಧ ರುಚಿಕಟ್ಟಿನ

ರಸಿಕ ಪ್ರಮದೆಯರು ಸುಮಾರು ಮುನ್ನೂರು ಎಪ್ಪತ್ನಾಲ್ಕು ಮಂದಿ ಹೆಣ್ಣುಗಳೊಂದಿಗೆ ಶೃಂಗಾರ, ಭೋಗ, ವಿಲಾಸ ಜೀವನ ನಡೆಸುತ್ತಿದ್ದುದನ್ನು ಕಂಡು, ಕೇಳಿದ ಕಥಾನಕಗಳನ್ನು ವೀಕ್ಷಿಸಿ ಯುವರಾಜನು ನಾಚಿಕೆಯಿಂದ ಕುಗ್ಗಿ ಹೋಗಿದ್ದನು. ಪ್ರಜೆಗಳ ಕಷ್ಟ ಸುಖಗಳಲ್ಲಿ ಪಾಲ್ಗೊಂಡು ಅವರನ್ನು ರಕ್ಷಿಸಬಲ್ಲಂತಹ ರಕ್ಷಕ ರಾಜನು ಈ ರೀತಿಯ ಭೋಗವಿಲಾಸದಲ್ಲಿ ಸದಾಕಾಲ ಮುಳುಗಿರುವುದೆ ಎಂದು ನೋದುಕೊಳ್ಳುತ್ತಿದ್ದನು. ತನ್ನ ಅನಂಗ ಸಾಮ್ರಾಜ್ಯದ ಪರಿಪಾಲನೆಯಲ್ಲಿ ಪಾಲುದಾರಳೂ, ಮಾರ್ಗದರ್ಶಕಳೂ ಆಗಿದ್ದ ವೈದ್ಯವಿದ್ಯೆಯಲ್ಲಿ ಅಸಮಾನ ಪಂಡಿತಳಾಗಿದ್ದ ವೃದ್ಧೆ ಜಾಕಲದೇವಿಯೆ ಮಹಾರಾಜನಿಗೆ ಮಂತ್ರಿ, ಮಾರ್ಗದರ್ಶಕಳು ಎಲ್ಲವೂ ಆಗಿದ್ದಳು. ಮಹಾರಾಜನಿಂದ ರಾಷ್ಟ್ರವೇ ಈ ರೀತಿಯಾಗಿ ನೈತಿಕ ಅಧಃಪತನವನ್ನು ತಲುಪಿರುವುದಕ್ಕಾಗಿ ಪರಿತಪಿಸುತ್ತಿದ್ದ ಯುವರಾಜ ಬಲ್ಲಾಳನು ರಾಜಧಾನಿಯಲ್ಲಿ ಇರುತ್ತಿದ್ದುದೇ ಕಡಿಮೆ. ಅದರಿಂದ ಅವನಿಗೆ ಪ್ರಜೆಗಳದ್ದೇ ಚಿಂತೆ. ಮುಂದಿನ ಅರಸನಾಗುವ ತಾನು ಪ್ರಜೆಗಳ ಕಷ್ಟಸುಖಗಳನ್ನು ಅರಿಯಲು ಸದಾ ದೇಶಸಂಚಾರ ಹೋಗುತ್ತಿದ್ದ. ಅಂತೆಯೇ ಈ ಸಲವೂ ಹೊರಟಿದ್ದ. ಉತ್ಸವದ ಸಮಯದಲ್ಲಿ ಅವನು ರಾಜಧಾನಿಯಲ್ಲಿ ಇಲ್ಲದಿದ್ದುದು ಮಹಾರಾಜನ ಮನಸ್ಸಿಗೆ ತುಂಬಾ ಕಿರಿಕಿರಿಯನ್ನು ಉಂಟು ಮಾಡಿತ್ತು.

ವಂಸತ ಮೇಳ ಕ್ರಮಬದ್ಧವಾಗಿಯೇ ಪ್ರಾರಂಭವಾಯಿತು. ಮಹಾರಾಜನೇ ಎಲ್ಲ ವ್ಯವಸ್ಥೆಗಳನ್ನು ಗಮನಿಸಿ, ಅದರ ಪ್ರಾರಂಭೋತ್ಸವವನ್ನು ನೆರವೇರಿಸಿದ. ಸಿರಿಯಲದೇವಿಯು ಉತ್ಸವದಲ್ಲಿ ಹೆಂಗೆಳೆಯರ ನಡುವೆ ಕುಳಿತು, ಎಲ್ಲವನ್ನೂ ವೀಕ್ಷಿಸುತ್ತಾ ಮಹಾರಾಜನನ್ನೂ ಕಂಡಳು. ಕೂಡಲೇ ಅವನೊಬ್ಬ ಭೋಗಜೀವಿ, ಮನ್ಮಥನಂತಹ ಆಕರ್ಷಕ ವ್ಯಕ್ತಿತ್ವ ಉಳ್ಳವನೆಂದೂ ತಿಳಿದಳು. ಅವನೊಬ್ಬ ಆಕರ್ಷಕ, ಕುತೂಹಲಕಾರಿ ವ್ಯಕ್ತಿಯಂತೆ ಕಂಡನು. ನಂತರ ಅವಳ ದೃಷ್ಟಿ ಉತ್ಸವದ ಕಲಾಪಗಳ ಕಡೆ ತಿರುಗಿತು,

ಮಹಾರಾಜನು ಸ್ವಲ್ಪ ಸಮಯವಿದ್ದು ಹೊರಟು ಹೋದ ನಂತರ ಹೆಂಗಳೆಯರು ಸಿರಿಯಲದೇವಿಯನ್ನು ಮುತ್ತಿ, ಅವಳ ಪರಿಚಯ ಮಾಡಿಕೊಂಡರು. ಸಿರಿಯಲದೇವಿ ಅವರೆಲ್ಲರ ಕೇಂದ್ರಬಿಂದುವಾದಳು. ಮಾತಿನ ಮೋಡಿ ಹಾಗೂ ಸಂಭಾಷಣಾ ಚಾತುರ್ಯದಿಂದ ಎಲ್ಲರನ್ನೂ ಆಕರ್ಷಿಸಿದಳು. ಎಲ್ಲ ವಿಷಯಗಳ ಬಗ್ಗೆಯೂ ಅವರೊಂದಿಗೆ ಸಂಭಾಷಿಸಿದಳು. ಮುಖ್ಯವಾಗಿ ರಸಿಕತೆ, ಪ್ರೇಮ ಇತ್ಯಾದಿಗಳ ಬಗ್ಗೆಯೂ ತುಂಬ ವ್ಯಾಖ್ಯಾನ ನೀಡಿದಳು.

ಈ ರೀತಿಯಲ್ಲಿ ಸಿರಿಯಲದೇವಿಯು ಪ್ರತಿದಿನದ ಸ್ಪರ್ಧೆಗಳಲ್ಲಿ, ಸ್ಪರ್ಧಾಳುಗಳೊಂದಿಗೆ ಹಿರಿಯ ಕಿರಿಯ ಭೇದವಿಲ್ಲದೆ ಕಲೆತಳು. ಇದು ಕೆಲವರಿಗೆ ಚೆಲ್ಲುಚೆಲ್ಲು ಎನ್ನುವ ಅಪಾರ್ಥಕ್ಕೆ ಎಡೆ ಕೊಟ್ಟಂತೆ ಕಂಡು ಬಂದರೂ, ಸಿರಿಯಲದೇವಿಯು ತನ್ನ ನಿಸ್ಸಂಕೋಚ ನಡವಳಿಕೆಯಿಂದ ಯುವ ಜನಾಂಗ, ಹಿರಿಯ ಜೀವಿಗಳು, ವಯಸ್ಕ ಹೆಣ್ಣು ಗಂಡು—ಇತ್ಯಾದಿ ಎಲ್ಲರೊಡನೆ ಬೆರೆತು ಸರ್ವರನ್ನೂ ರಂಜಿಸಿದಳು. ಹೀಗೆ ಸಿರಿಯಲದೇವಿಯು ತನ್ನ ವಿಶಾಲ ಹೃದಯದ ಸರಸ, ವಿನೋದ, ಶುಚಿ ರುಚಿ ಹೃದಯದ

ಹದ, ಒನಪು, ಒಲವುಗಳಿಂದ ಎಲ್ಲರ ಮನಗೆದ್ದಳು. ಯಾರಾದರೂ ಅವಳ ನಡಾವಳಿಯನ್ನು ಸ್ವಚ್ಛಂದತೆ ಎಂದು ಟೀಕಿಸಿದರೂ, ಸಿರಿಯಲದೇವಿಯು ಅದನ್ನೆಲ್ಲ ನಿರ್ಲಕ್ಷಿಸಿ ಅವಕ್ಕೆ ಸ್ವಲ್ಪವೂ ಬೆಲೆಕೊಡಲಿಲ್ಲ.

ಜನತೆಯ ನಾಡಿಯನ್ನು ಪರೀಕ್ಷಿಸಿ ಅವರೊಂದಿಗೆ ಇದ್ದು, ಅವರ ಸಮಸ್ಯೆಗಳ ಅರಿವು ಪಡೆಯಲು ಹೊರಟ ಯುವರಾಜ ಬಲ್ಲಾಳನು ತಮ್ಮ ವಂಶಜರ ಆರಾಧ್ಯದೈವ ವಾಸಂತಿಕಾದೇವಿ ನೆಲೆಸಿರುವ ಸೊಸೆವೂರಿಗೆ ಬಂದ. ಅಲ್ಲಿ ಪೂಜೆ ಪ್ರಾರ್ಥನೆಗಳನ್ನು ಆ ಆರಾಧ್ಯದೇವಿಗೆ ಸಮರ್ಪಿಸಿದ ನಂತರ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ಆ ಪ್ರದೇಶದಲ್ಲೆಲ್ಲ ಜನಪ್ರಿಯನಾಗಿದ್ದ, ಹಿರಿಯನಾಗಿದ್ದ ತಂತ್ರಪಾಲ ಹೆಮ್ಮಾಡಿಯಣ್ಣ ಅವನನ್ನು ಭೇಟಿ ಮಾಡಲು ಬಂದ. ತನ್ನನ್ನು ಭೇಟಿಯಾಗಲು ಬಂದಿರುವಾತನು ಬಾಲ್ಯದಿಂದಲೂ ಅನೇಕ ಸಾಹಸ ಕತೆಗಳ ನಾಯಕನಾದ ಹೆಮ್ಮಾಡಿಯಣ್ಣನೆಂಬುದನ್ನು ತಿಳಿದ ಕೂಡಲೇ ಬಲ್ಲಾಳನು ತುಂಬು ಸಂತೋಷದಿಂದ ಸ್ವಾಗತಿಸಿದ. ಸುತ್ತಮುತ್ತಲ ಜನರ ಸ್ಥಿತಿಗತಿಗಳ ಬಗ್ಗೆ ವಿವರ ತಿಳಿದ. ಅವರುಗಳ ಒಟ್ಟಾರೆ ಅಭಿಪ್ರಾಯವನ್ನು ತಿಳಿದು ಸ್ತಂಭಿತನಾದ. ಕೆರಳಿದ ಜನತೆ ಸಿಂಹಾಸನದ ಮೇಲೆ ಬೇರೆಯವರು ಬರಲಿ ಎಂಬ ಭಾವನೆ ಹೊಂದಿರುವುದನ್ನು ಹೆಮ್ಮಾಡಿಯಣ್ಣ ತಿಳಿಸಿದ. ಯುವರಾಜನು ರಾಜ್ಯ ಸೂತ್ರಗಳನ್ನು ಹಿಡಿಯಬೇಕು ಎಂದು ಜನತೆ ಆಶಿಸುತ್ತಿದ್ದಾರೆ ಎಂಬ ಸತ್ಯವನ್ನು ಹೆಮ್ಮಾಡಿಯಣ್ಣ ತಿಳಿಸಿದ ಕೂಡಲೇ ಯುವರಾಜನು ತತ್ತರಸಿಹೋದ. ತಾನೇ ತಂದೆಗೆ ವ್ಯತಿರಿಕ್ತವಾಗಿ ಕತ್ತಿಯೆತ್ತಬೇಕೆ ಎಂಬ ಸಂದಿಗ್ಧತೆಯಲ್ಲಿ ತನ್ನನ್ನು ತಾನು ಮರೆತ.

ಮೇಳದ ಕಲಾರಂಗದಲ್ಲಿ ಏನಾದರೂ ಹೊಸತನ್ನು ಪ್ರದರ್ಶಿಸಬೇಕೆಂದು ಸಿರಿಯಲದೇವಿ ಇಚ್ಛಿಸಿದ್ದಳು. ಹೆಚ್ಚಿನ ಶೃಂಗಾರವನ್ನು ಮೆರೆಯಿಸುವ ಅಲಂಕಾರದ ಪ್ರದರ್ಶನವನ್ನು ಏಕೆ ಮಾಡಬಾರದು ಎಂದುಕೊಂಡು, ರಾಜನ ವಿಲಾಸಿನಿಯರಲ್ಲಿ ಓರ್ವಳಾದ ವೀಣಾಳನ್ನು ಆರಿಸಿಕೊಂಡು ಅವಳಿಗೆ ಹೆಣ್ಣಿನ ಸರ್ವೋಚ್ಚ ಶೃಂಗಾರವನ್ನು ತುಂಬುವುದೆಂದು ತೀರ್ಮಾನಿಸಿ, ಅಂತೆಯೇ ಅವಳನ್ನು ಅತ್ಯದ್ಭುತವಾಗಿ ಶೃಂಗರಿಸಿದಳು. ಅದು ವಿಶೇಷ ರೀತಿಯದಾಗಿತ್ತು. ಸಿರಿಯಲದೇವಿಯು ತನ್ನ ಅತ್ಯದ್ಭುತ ಕೈಚಳಕದಿಂದ ಅವಳನ್ನು ದೇವಲೋಕದ ಅಪ್ಸರೆಯನ್ನಾಗಿ ಮಾಡಿದ್ದಳು. ವೀಣಾ ಅತ್ಯುತ್ತಮ ಸೌಂದರ್ಯವತಿಯಾದರೂ, ಅದರ ನೂರರಷ್ಟು ಸುಂದರತೆ, ಆಕರ್ಷಣೆಗಳು ಅವಳಲ್ಲೀಗ ಮೇಳೈಸಿ, ಅವಳೊಬ್ಬ ಅನುಪಮ ಲಾವಣ್ಯವತಿಯಾಗಿ ಕಂಡಳು. ಅರಮನೆಯ ಹೆಣ್ಣಿನ ಪರಿವಾರ ಈ ಮಾಯಾತನ ಕಂಡು ದಿಗ್ಭ್ರಾಂತರಾದರು. ಇಂತಹುದೊಂದು ಅಲಂಕರಣ ವ್ಯವಸ್ಥೆ ಇರುವುದೆಂದು ಅವರು ಊಹಿಸಿಯೂ ಇರಲಿಲ್ಲ. ಮಹಾರಾಜ ನರಸಿಂಹನೂ ವೀಣಾಳ ಅಲಂಕಾರವನ್ನು ಕಂಡು ದಂಗು ಬಡಿದವನಂತಾದ. ಇಂತಹ ಅತ್ಯದ್ಭುತ ಕಲಾವಂತಿಕೆ ಯಾರಿಂದಾದುದು ಎಂಬುದನ್ನು ತಿಳಿದು, ಅವನು ಬೆಬ್ಬೆರಗಾದ. ಮನ್ಮಥನ ಕಲೆಯಷ್ಟನ್ನೂ ಕರಗತ ಮಾಡಿಕೊಂಡಿದ್ದೆ ಎಂದು ಬೀಗುತ್ತಿದ್ದ ಅವನಿಗೆ ತನಗಿಂತಲೂ ಈ ಕಲೆಯ ಬಗ್ಗೆ ಹೆಚ್ಚು ತಿಳಿದಿರುವ ಓರ್ವ ವ್ಯಕ್ತಿ, ಅದೂ ಹೆಣ್ಣು ಇರು

ವುದನ್ನು ತಿಳಿದು ಆ ಹೆಣ್ಣಿನ ಬಗ್ಗೆ ಕುತೂಹಲಾವಿಷ್ಟನಾದ.

ಅಂತೆಯೇ ಸಿರಿಯಲದೇವಿಯನ್ನು ಮೇಳದಲ್ಲಿ ಮೂರನೇ ದಿನವೇ ಕಂಡ. ಅವಳ ಮನಮೋಹಕ ಮಾಟ,ಬೊಗಸೆಗಣ್ಣುಗಳು, ತನಿವೆಳಗಿನ ಮಾದಕತೆ, ಅವಳಲ್ಲಿನ ಸಮ್ಮೋಹಿನೀ ಶಕ್ತಿ ಅವನನ್ನು ಬಲವಾಗಿ ಆಕರ್ಷಿಸಿತು. ಅವಳ ರೂಪ ರಾಶಿಯನ್ನು, ನಿಲುವಿನ ಆ ಸಿಂಹಿಣೀ ಮೋಹಕತೆಯನ್ನು ತನ್ನದಾಗಿಸಿಕೊಳ್ಳಬೇಕೆಂದು ಇಷ್ಟಪಟ್ಟ.

ಇಷ್ಟರಲ್ಲಿ ಸೈನ್ಯಕ್ಕೆ ಅತ್ಯಗತ್ಯವಾಗಿ ಬೇಕಾಗಿದ್ದ (ತುಂಬಾ ಕೊರತೆ ಇರುವ) ಅಶ್ವಗಳನ್ನು ಪರೀಕ್ಷಿಸಿ, ತರಲು ಅರಬ್ಬ ದೇಶಕ್ಕೆ ಕಳುಹಿಸಬೇಕೆನ್ನುವ ದಕ್ಷ ಅಧಿಕಾರಿಯನ್ನಾಗಿ ಸಟ್ಟಿಗ ಹೆಗ್ಗಡೆಯನ್ನು ಕಳುಹಿಸುವ ಆಜ್ಞೆಯಾಯಿತು. ಅಂತೆಯೇ ಅವನ ಆಡಳಿತ ಕಾರ್ಯವನ್ನು ಅವನ ಪತ್ನಿ ಸಿರಿಯಲದೇವಿ ನಿರ್ವಹಿಸಬೇಕೆಂದು ಉನ್ನತ ಸಭೆ ತೀರ್ಮಾನಿಸಿತು.

ಅಂತೆಯೇ ಸಟ್ಟಿಗ ಹೆಗ್ಗಡೆ ಕುದುರೆ ವ್ಯಾಪಾರಕ್ಕೆ ಹೊರಡಲು, ಸಿರಿಯಲದೇವಿಯು ಸುರಗಿನಾಡಿಗೆ ಹಿಂತಿರುಗಿ, ಆಡಳಿತ ಸೂತ್ರಗಳನ್ನು ವಹಿಸಿಕೊಂಡಳು.

ಮಲೆನಾಡ ಸೀಮೆಗಳನ್ನು ನೋಡುವ ನೆಪದಲ್ಲಿ ಸುರಗಿನಾಡನ್ನು ದರ್ಶಿಸಬೇಕೆಂದು ಇಷ್ಟಪಟ್ಟ ಮಹಾರಾಜ ನರಸಿಂಹನು ಎಲ್ಲ ಸೀಮೆಗಳನ್ನು ನೋಡಿಕೊಂಡು ಕಡೆಗೆ ಸುರಗಿನಾಡಿಗೆ ಬಂದ. ಅವನ ಉದ್ದೇಶ ಸಿರಿಯಲದೇವಿಯನ್ನು ಪಡೆಯುವುದು. ಆ ಸನ್ನಿವೇಶದಲ್ಲಿ ಅವಳು ತನ್ನ ಪ್ರಜೆ, ಪರಸ್ತ್ರೀ ಎನ್ನುವ ಪರಿಜ್ಞಾನವೂ ಅವನಿಗೆ ಇರಲಿಲ್ಲ. ಅವನದ್ದೀಗ ಬರೀ ಕಾಮುಕ ದೃಷ್ಟಿಯಾಗಿತ್ತು.

ಮಹಾರಾಜನಾದವನು ಸುರಗಿ ನಾಡಿಗೆ ಬಂದಾಗ, ಮಾಮೂಲಾಗಿ ಮಹಾರಾಜನಿಗೆ ಸಲ್ಲುವ ಸ್ವಾಗತ ದೊರೆಯಿತು. ನಕ್ಕು ಮಾತನಾಡಿಸಿದ ಸಿರಿಯಲದೇವಿಯನ್ನು ಕಂಡು ಪುಳಕಿತನಾದ. ರಾಜ್ಯಾಡಳಿತದ ಚರ್ಚೆಗಳಿಗಾಗಿ ಅವರಿಬ್ಬರೂ ಏಕಾಂತದಲ್ಲಿ ಕುಳಿತು, ಅನೇಕ ವಿಷಯಗಳ ಬಗ್ಗೆ ಚರ್ಚಿಸಬೇಕಾಗಿತ್ತು. ಅಂತಹ ಒಂದು ಏಕಾಂತ ಸಮಯದಲ್ಲಿ ಮಹಾರಾಜನು ಕಾಮಪ್ರಚೋದಿತನಾಗಿ, ಅವಳನ್ನು ವಶಪಡಿಸಿಕೊಳ್ಳುವ ತನ್ನ ಬಯಕೆಯನ್ನು ಪ್ರದರ್ಶಿಸಿದ. ನಿಜ ಅರ್ಥದ ಹೆಣ್ಣಾದ ಅವಳು ಮೃದುವಾಗಿ, ಗಟ್ಟಿತನದಿಂದ ತಾನು ಅಂತಹ ಹೆಣ್ಣಲ್ಲವೆಂದು ತಿಳಿಸಿದರೂ, ಅವನು ಪ್ರಚೋದನೆಗೆ ಒಳಗಾಗುವುದಿಲ್ಲವೆಂದು ಸ್ಪಷ್ಟಪಡಿಸಿದರೂ, ಒಂದು ವಾರದ ಗಡುವು ನೀಡಿ, ಅವಳು ತನಗೆ ವಶವಾಗಲೇಬೇಕೆಂದು ಒತ್ತಾಯದ ಹೇರಿಕೆಯ ಆಜ್ಞೆಯನ್ನು ನೀಡಿ, ಸುರಗಿ ನಾಡಿನಿಂದ ನಿರ್ಗಮಿಸುವನು.

ಈ ವಿಚಾರ ಹೆಮ್ಮಾಡಿಯರಸನಿಗೆ ಗೊತ್ತಾಗುವುದು. ಕ್ರಾಂತಿಯನ್ನೆಬ್ಬಿಸಲು ಹಾಗೂ ರಾಜನ ಕಾಮುಕತ್ವವನ್ನು ಎದುರಿಸಲು ಕ್ರಾಂತಿಯೇಳಲು ಅವರು ನಿಶ್ಚಯಿಸುವರು. ಹೆಮ್ಮಾಡಿಯು ಈ ವಿಚಾರವನ್ನು ಯುವರಾಜ ಬಲ್ಲಾಳನಿಗೂ ತಿಳಿಸುವನು. ಬಲ್ಲಾಳನು ಇದರಿಂದ ಸಿಡಿದೆದ್ದು, ತಂದೆಯನ್ನು ಎದುರಿಸುವ ನಿಶ್ಚಯ ಮಾಡುವನು. ತಾಯಿ ಏಚಲದೇವಿಗೆ ಈ ವಿಚಾರವನ್ನು ತಿಳಿಸಿ, ತಂದೆಯು ನಡೆದುಕೊಳ್ಳುವ ರೀತಿಯ ಬಗ್ಗೆ

ಆತನಿಗೆ ತಿಳಿಯಹೇಳುವಂತೆ ಆಕೆಗೆ ವಿಷಯ ತಿಳಿಸುವನು. ಆಕೆಗೆ ಗಂಡನ ಕೆಟ್ಟಗುಣಗಳಿಲ್ಲವೂ ಗೊತ್ತು. ಆದರೂ ಧೈರ್ಯದಿಂದ ಮಗನ ಮಾತನ್ನು ಗಂಡನಿಗೆ ಹೇಳಲು ತೀರ್ಮಾನಿಸುವಳು.

ಹಿಂತಿರುಗಿ ಬಂದ ಮಹಾರಾಜ ನರಸಿಂಹನು ಏಕಾಂತವನ್ನು ಬಯಸಿದನು. ಯಾರೊಂದಿಗೂ ಮಾತಿಲ್ಲ, ಭೇಟಿಯಿಲ್ಲ. ಭೋಗಿನಿಯರ ಭೇಟಿಯಂತೂ ಇಲ್ಲವೇ ಇಲ್ಲ. ಆಡಳಿತಕ್ಕೆ ಸಂಬಂಧಪಟ್ಟ ವಿವರಗಳನ್ನು ಪಡೆಯಲು ಬರುತ್ತಿದ್ದ ಲಕುಮಯ್ಯ, ಚಾಮದೇವ–ಇವರಿಬ್ಬರೇ. ಅವನದು ನಿಸ್ಸಂಗಿ ಜೀವನವಾಯಿತು. ಹುತ್ತದಲ್ಲಿನ ಹಾವಿನಂತಾದ. ಅಂತಹ ಸಿರಿವಂತ ಹೆಣ್ಣಿನ ಸಂಗದಲ್ಲಿ ತಾನು ಕಲ್ಪಿಸಿಕೊಂಡ ಆ ಪರಮಸುಖದ ಕನಸಿನ ಮುಂದೆ ರಾಜವೈಭವ, ಸಿಂಗಾರಿಯರ ಚೆಲ್ಲಾಟ ಬಹು ಚಿಕ್ಕವಾಗಿ ಕಂಡವು.

ಏಚಲದೇವಿ ಯುವರಾಜನ ವಿಷಯವನ್ನು ತಿಳಿಸಲು ಬಹಳಷ್ಟು ಪ್ರಯತ್ನ ಮಾಡಿದಳು. ಆದರೆ ಮಹಾರಾಜನು ಯಾವುದೇ ಪ್ರತಿಕ್ರಿಯೆಯನ್ನು ತೋರಲಿಲ್ಲ. ಜನತೆ, ಯುವರಾಜರು ಅವನಿಗೆ ತಿರುಗಿ ಬೀಳಬಹುದೆಂಬ ಸೂಕ್ಷ್ಮವನ್ನು ಹೇಳಿದಳು. ಆದರೆ ಮಹಾರಾಜನು ಯಾವುದೇ ಪ್ರತಿಕ್ರಿಯೆ ತೋರದೆ, ಸಿರಿಯಲದೇವಿಯನ್ನು ಸೆರೆ ಹಿಡಿದು ತರಲು ಸೈನ್ಯವನ್ನು ಕಳುಹಿಸಿದನು. ಜನತೆಯನ್ನು ಉದ್ವೇಗಗೊಳಿಸಿ, ಯುವರಾಜನೊಂದಿಗೆ ದಂಗೆಯೇಳಿಸುವ, ರಾಜದ್ರೋಹದ ಆಪಾದನೆಯ ಮೇಲೆ ಸಿರಿಯಲದೇವಿಯನ್ನು ಸೆರೆಹಿಡಿಯಲು ಸೈನ್ಯ ಸುರಗಿ ನಾಡಿಗೆ ಬಂದಿತು. ಅಲ್ಲಿ ಸ್ವಲ್ಪ ಘರ್ಷಣೆ ತೋರಿದರೂ, ಅದೆಲ್ಲವನ್ನೂ ಸಮಾಧಾನಗೊಳಿಸಿದ ಸಿರಿಯಲದೇವಿಯು ತಾನೇ ಸ್ವತಃ ಸೈನ್ಯದ ವಶವಾದಳು. ದ್ವಾರಾವತಿಯ ಒಂದು ಸೌಧದಲ್ಲಿ ಅವಳನ್ನು ತಂದು ಸೆರೆಯಲ್ಲಿಡಲಾಯಿತು. ಒಲಿಯದ ಹೆಣ್ಣನ್ನು ಬಲವಂತ ಹೆದರಿಕೆಗಳಿಂದ ವಶಪಡಿಸಿಕೊಳ್ಳುವ ಮಹಾರಾಜನ ಈ ಪ್ರಯತ್ನವು ಜನಮಾನಸದಲ್ಲಿ ನಗೆಗೀಡಾಗಿತ್ತು.

ಈ ಸಮಸ್ಯೆಯನ್ನು ಪರಿಹರಿಸಲು ಯುವರಾಜನು ಮಹಾರಾಜನನ್ನು ಭೇಟಿಯಾದನು. ಸಮಾಧಾನಕರವಾಗಿಯೇ ಪ್ರಾರಂಭವಾದ ಅವರ ಸಂಭಾಷಣೆಯು, ಮಹಾರಾಜ ನರಸಿಂಹನ ದುಡುಕಿನಿಂದ ಅಂಕೆ ತಪ್ಪಿತು. ತಂದೆಯೂ ಮಗನ ಕೆನ್ನೆಗೆ ಬಲವಾದ ಪೆಟ್ಟುಕೊಟ್ಟ. ಕೂಡಲೇ ಅವನನ್ನು ಸೆರೆ ಹಿಡಿಯಲು ಪಡೆಯಾಳುಗಳನ್ನು ನಿಯಮಿಸಿದ. ಆಗ ಘರ್ಷಣೆಯಾಗಿ, ಯುವರಾಜನು ತನ್ನ ಸೆರೆಹಿಡಿಯ ಬಂದವರನ್ನು ತುಂಡರಿಸಿ, ಅರಮನೆಯಿಂದ ಹೊರಬಿದ್ದ.

ಕೂಡಲೇ ಸೈನ್ಯದ ಮಹಾದಂಡನಾಯಕ ಅಮರೇಶ್ವರನು ಅವನೊಂದಿಗೆ ಕೂಡಿಕೊಂಡನು. ಹೆಗ್ಗಡೆಗಳಲ್ಲಿ ಕೆಲವರು ಯುವರಾಜನ ಕಡೆಗೂ, ಕೆಲವರು ಮಹಾರಾಜನ ಪರವಾಗಿಯೂ ನಿಂತರು. ಆದರೆ ಬಲ್ಲಾಳನು ಚಾಕಚಕ್ಯತೆಯಿಂದ ದ್ವಾರಾವತಿಯ ಅರಮನೆಯನ್ನು ಆಕ್ರಮಿಸಿ, ರಾಜಧಾನಿಯನ್ನು ತನ್ನ ಹಿಡಿತದಲ್ಲಿರಿಸಿಕೊಂಡು, ಮಹಾರಾಜ ನರಸಿಂಹನನ್ನು ಅರಮನೆಯಲ್ಲಿಯೇ ಬಂದಿಯನ್ನಾಗಿ ಮಾಡಿದನು. ನಂತರ ಸೈನ್ಯ ಸಮೇತ ಹೊರಟು, ಎದುರು ತಿರುಗಿದ ಅಧೀನ ರಾಜರನ್ನೆಲ್ಲ ಜಯಿಸಿದನು.

ಒಂಟಿಯಾಗಿ ಇದ್ದು ಇದ್ದು, ಮನಸ್ಸಿನಲ್ಲಿ ಸಿರಿಯಲದೇವಿ ಸಿಗದ ಪರಿಣಾಮದ ಹೃದಯ ಕುಸಿತದಿಂದ ಮಾನಸಿಕವಾಗಿ ದಿಕ್ಕು ತಪ್ಪಿದ ಮಹಾರಾಜ ನರಸಿಂಹನು ಕಡೆಯ ಪಕ್ಷ ಸಿರಿಯಲದೇವಿಯನ್ನು ಒಮ್ಮೆಯಾದರೂ ನೋಡುವ ಬಯಕೆಯನ್ನು ಪ್ರಕಟಿಸಿದನು. ನಾಡಿಗರು ಇದನ್ನು ವಿರೋಧಿಸಿದರೂ, ಮಾನವತ್ವದ ದೃಷ್ಟಿಯಿಂದ ಸಿರಿಯಲ ದೇವಿಯು ಅವನನ್ನು ನೋಡಲು ಒಪ್ಪಿದಳು.

ಮಹಾರಾಜನೀಗ ಸಾಕಷ್ಟು ಬದಲಾಗಿದ್ದನು. ಅವಳದೇ ಧ್ಯಾನದಲ್ಲಿ ಸದಾ ನಿರತನಾಗಿ, ಉನ್ಮಾದಾವಸ್ಥೆಯನ್ನು ತಲುಪಿದನು. ಅವಳ ನಗ್ನ ಚಿತ್ರವೊಂದನ್ನು ನಿರ್ಮಿಸಿ, ಅದನ್ನು ತನ್ನ ಶಯನಪಲ್ಲಂಗದ ಮೇಲೆ ಇರಿಸಿ, ಆತ್ಮರತಿಯನ್ನು ಪ್ರದರ್ಶಿಸಿದನು. ಇಂತಹ ಕೀಳರಿಮೆಯನ್ನು ನೋಡಲಾಗದೆ ಸಿರಿಯಲದೇವಿ ದಿಗ್ಭ್ರಮೆಗೊಂಡಳು. ಅವನು ನಿರ್ಮಿಸಿರುವ ಅವಳ ಚಿತ್ರವನ್ನು ನೋಡೆಂದು ಬಲವಂತ ಪಡಿಸಿದರೂ ಸಿರಿಯಲದೇವಿಯು ಅಸಹ್ಯಗೊಂಡು ಒಪ್ಪದೆ, ಅಲ್ಲಿಂದ ಹೊರ ನಡೆಯುವಳು. ಇದು ಅವನಿಗೆ ತೀವ್ರ ನಿರಾಶೆಯನ್ನು ಉಂಟುಮಾಡಿತು. ಈ ನಿರಾಶೆಯ ಪೆಟ್ಟು ಅವನ ಹೃದಯವನ್ನು ಸೀಳಿತು. ಸಿರಿಯಲದೇವಿಯ ಹೆಸರನ್ನು ಜೋರಾಗಿ ಚೀರಿ, ಹೃದಯಾಘಾತವಾಗಿ ಮರಣ ಹೊಂದಿದನು.

ಈ ಕಥಾ ಹಂದರದ ಸುತ್ತ ಹೆಣೆದ ಈ ಕಾದಂಬರಿಯ ಪಾತ್ರಗಳಲ್ಲಿ ಸಿರಿಯಲ ದೇವಿಯದು ಮುಖ್ಯವಾದುದೂ, ಅಗತ್ಯವಾದುದೂ ಆಗಿದೆ. ಈ ಪಾತ್ರದ ಚಿತ್ರಣವೂ ವೈವಿಧ್ಯಮಯವಾಗಿ, ಚಿತ್ತಾಕರ್ಷಕವಾಗಿದೆ. ಮಾತಿನ ಚಾಕಚಕ್ಯತೆ ಈಕೆಗೆ ಚನ್ನಾಗಿ ಗೊತ್ತು. ಕಾವ್ಯಮಯವಾಗಿ, ದ್ವಂದ್ವಾರ್ಥದಲ್ಲಿ ಮಾತನಾಡುವ ಈಕೆ ಒಮ್ಮೊಮ್ಮೆ ಅಂಕೆ ಮೀರುವಂತೆ ಕಂಡುಬಂದರೂ, ಅದು ಹಾಗಾಗದೆ ಮಿತ, ಸಂಯಮಪೂರ್ಣ ವ್ಯಕ್ತಿತ್ವಕ್ಕೆ ಹೊಳಪು ನೀಡುವಂತಹ ಸನ್ನಿವೇಶ ನಿರ್ಮಾಣವಾಗುತ್ತದೆ. ಬುದ್ಧಿವಂತಿಕೆಯ ಸಂಭಾಷಣೆಗೆ ಹೆಸರಾದವಳು. ಓರ್ವ ಹೆಣ್ಣಿನೊಂದಿಗೆ, ಓರ್ವ ಯುವಕನೊಂದಿಗೆ, ಅಷ್ಟೇಕೆ ಅವಳ ಸತೀತ್ವವನ್ನೇ, ವ್ಯಕ್ತಿತ್ವವನ್ನೇ ಹಾಳುಮಾಡಲು ಪ್ರಯತ್ನಿಸಿದ ಮಹಾರಾಜ ನರಸಿಂಹನೊಂದಿಗೇ ಕಡೆಯ ಸಲ ಭೇಟಿ ಮಾಡಿದಾಗ ಬಹಳ ಸಂಯಮಪೂರ್ಣದ ಸಂಭಾಷಣೆ ನಡೆಸುವ ರೀತಿ, ಸಹನೆಯಿಂದ ಕೂಡಿದ ನಡವಳಿಕೆ ಎಂತಹವರ ಹೃದಯವನ್ನಾದರೂ ಗೆಲ್ಲುವ ರೀತಿಯಲ್ಲಿದೆ. ಲೇಖಕರ ಜಯ ಇರುವುದು ಇಲ್ಲಿಯೇ. ಸಿರಿಯಲ ದೇವಿಯ ವ್ಯಕ್ತಿ ಚಿತ್ರಣದ ಪರಾಕಾಷ್ಠತೆಯನ್ನು ಮುಟ್ಟುವುದು ಈ ಕಡೆಯ ದೃಶ್ಯದಲ್ಲಿಯೇ ತುಂಬಾ ಆದರ್ಶಮಯವಾದ ಚಿತ್ರಣವಿದು.

ತನ್ನ ಸತೀತ್ವವನ್ನು ಬಲಿಗೊಡದೆ, ತನ್ನತನವನ್ನು ಕಾಪಾಡಿಕೊಂಡು ಹೋಗುವ ಧಾರ್ಮಿಕ ವ್ಯಕ್ತಿಯಾಗಿ ರೂಪಗೊಂಡಿರುವ ತನ್ನ ಹಿರಿಮೆಯನ್ನು ಮೆರೆಯುವ ಹೆಗ್ಗಡತಿಯಾಗಿ ಉತ್ತಮ ವ್ಯಕ್ತಿತ್ವವಾಗಿ ರೂಪಿಸಿರುವ ಲೇಖಕರು ಅಭಿನಂದನಾರ್ಹರು.

ಇದೇ ರೀತಿಯಲ್ಲಿ ಮುಖ್ಯ ಸನ್ನಿವೇಶಗಳಲ್ಲಿ, ತಿರುವು ಪಡೆಯುವ ಸನ್ನಿವೇಶಗಳಲ್ಲಿ ಅವಳು ನಡೆದುಕೊಳ್ಳುವ ರೀತಿ ಪ್ರಶಂಸಾರ್ಹವಾದುದು. ಮಹಾರಾಜನ ಸೈನ್ಯ

ಸುರಗಿನಾಡಿನ ಅರಮನೆಗೆ ಮುತ್ತಿಗೆ ಹಾಕಿ, ಅವಳನ್ನು ಬಂಧಿಸಬೇಕೆನ್ನುವಾಗ, ಯಾವ ಘರ್ಷಣೆಗೂ ಎಡೆಗೊಡದೆ ಸ್ವತಃ ತಾನೇ ಬಂದಿಯಾಗಲು ಒಪ್ಪಿದುದು, ಕಟ್ಟಕಡೆಯ ಸಲ ಮಹಾರಾಜನು ತನ್ನನ್ನು ಕಾಣಬೇಕೆಂದಾಗ ಬೇರೆಯವರು ಈ ಸಮಾಗಮಕ್ಕೆ ಒಪ್ಪದಿದ್ದರೂ, ಮಾನವತೆಯ ದೃಷ್ಟಿಯಿಂದ ಅವನನ್ನು ಭೇಟಿ ಮಾಡಲು ಒಪ್ಪಿದುದು, ಸಿರಿಯಲದೇವಿಯ ಉನ್ನತ ಮಟ್ಟದ ವ್ಯಕ್ತಿತ್ವವನ್ನು ತೋರಿಸುತ್ತದೆ.

ತಾನು ಸರಳತೆಯನ್ನು ತೋರಿಸಿದುದಕ್ಕೆ ವ್ಯತಿರೇಕವಾಗಿ ತನ್ನನ್ನು ಕಾಮಿಸಿದ ಮಹಾರಾಜನ ಬಗ್ಗೆ ಅವಳು ಕೋಪವನ್ನೆ ಪ್ರದರ್ಶಿಸುವುದಿಲ್ಲ. ಬದಲಾಗಿ ಅವನ ಹೀನ ಗುಣಕ್ಕಾಗಿ ಮರುಗುತ್ತಾಳೆ. ಇದು ಅವಳ ವ್ಯಕ್ತಿತ್ವವನ್ನು ಉನ್ನತಕ್ಕೇರಿಸಿದೆ.

ಶೃಂಗಾರದ ದೃಶ್ಯಗಳಲ್ಲೂ ಈಕೆ ತನ್ನ ಪ್ರಾವೀಣ್ಯತೆಯನ್ನು ಪ್ರದರ್ಶಿಸುವ 'ವೀಣಾಳ ಅಲಂಕಾರ'ದ ಸನ್ನಿವೇಶ ಕಾವ್ಯಮಯವಾಗಿ ಚಿತ್ರಿತವಾಗಿದೆ. ಯುವ ಓದುಗರನ್ನು ಮೈಬಿಸಿ ಮಾಡಿಸುವ ಈ ದೃಶ್ಯ ಕಾವ್ಯಮಯವಾಗಿ ಆಕರ್ಷಕವಾಗಿದೆ. ಅಶ್ಲೀಲದ ಮಿತಿಯನ್ನು ದಾಟದೆ ಸೌಂದರ್ಯಯುತವಾಗಿದೆ.

ಮಹಾರಾಜ ನರಸಿಂಹನ ವ್ಯಕ್ತಿತ್ವವೂ ಇಷ್ಟೆ ಸ್ಪಷ್ಟವಾಗಿ ಅಚ್ಚುಕಟ್ಟಾಗಿ ನಿರೂಪಿತವಾಗಿದೆ. ಅವನ ಕಾಮಲೋಲುಪತೆ, ಒಂದು ಹೆಣ್ಣನ್ನು ವಶಪಡಿಸಿಕೊಳ್ಳಲು ಆತುರ ಪಡದೆ ಸಾವಧಾನವಾಗಿ, ನಿಧಾನವಾಗಿ ವಶಪಡಿಸಿಕೊಳ್ಳಲು ಪ್ರಯತ್ನಿಸುವುದು ಇತ್ಯಾದಿಗಳು ಅವನ ಮದನಕಲೆಯಲ್ಲಿನ ಪ್ರಾವೀಣ್ಯತೆಯನ್ನು ಪ್ರದರ್ಶಿಸಿದರೂ, ಸಿರಿಯಲದೇವಿಯ ನಗ್ನ ಚಿತ್ರವನ್ನು ತನ್ನ ಪಲ್ಲಂಗದಲ್ಲಿ ಇರಿಸಿಕೊಳ್ಳುವ ಅವನ ಹೀನ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತದೆ. ತನಗೆ ಸಿರಿಯಲದೇವಿಯು ದಕ್ಕಲಾರಳು ಎಂಬುದು ಸ್ಪಷ್ಟವಾಗಿ, ಮಗನ ಕೈಸೆರೆಯಾದಾಗ ನಿರಾಶೆಯಿಂದ ಉನ್ಮಾದನಾಗುವುದು–ಅವನ ನಿಜ ಸ್ವಭಾವವನ್ನು ಪ್ರದರ್ಶಿಸುತ್ತದೆ. ಈ ಉನ್ಮಾದದ ಅತಿರೇಕದ ಫಲವಾಗಿ ಹೃದಯಾಘಾತವಾಗಿ ಮರಣಿಸುವುದೂ ಕೂಡ ನೈಜವಾಗಿ ರೂಪಿತವಾಗಿದೆ. ಕಡೆಯವರೆವಿಗೂ ಯಾವುದೇ ರೀತಿಯಲ್ಲಿ ಅವನು ಬುದ್ಧಿ ಕಲಿಯದೆ ಇರುವುದು, ಜನತೆಗೆ ರಾಜ್ಯಕ್ಕೆ ಏನೇ ಆಗಲಿ ತನ್ನ ಸ್ವಂತ ಸುಖಮಾತ್ರ ಸರಿಯಾಗಿರಲಿ ಎನ್ನುವ ಅವನ ವರ್ತನೆಯೂ ಅವನ ಸ್ವಾರ್ಥ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ.

ಇತರೇ ವ್ಯಕ್ತಿ ಚಿತ್ರಣಗಳಲ್ಲಿ ಯುವರಾಜ ಬಲ್ಲಾಳನು ತನ್ನ ವೀರತ್ವವನ್ನು ಮೆರೆದು, ತಂದೆಯ ಅನೀತಿಯನ್ನು ಎದುರಿಸಿ ಧಿಕ್ಕರಿಸಿ, ಕ್ಷಿಪ್ರ ಕಾರ್ಯಾಚರಣೆ ಮಾಡಿ ಅರಮನೆ ರಾಜ್ಯಗಳನ್ನು ಒಂದು ಹತೋಟಿಗೆ ತರುವ ಪ್ರಯತ್ನಗಳಲ್ಲಿ ಸಫಲವಾದುದು ಅವನ ಧೈರ್ಯೋದಾತ್ತ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತದೆ. ಆದರ್ಶ ಚಿತ್ರವಾಗಿದೆ.

ಇನ್ನು ಉಳಿದ ಪಾತ್ರಗಳಾದ ತಾಯಿ ಏಚಲದೇವಿ, ಹೆಮ್ಮಾಡಿಯರಸು ಸೆಟ್ಟಿಗ ಹೆಗ್ಗಡೆ, ಅಮರೇಶ್ವರ, ಅವನ ಪತ್ನಿ ಹೊಯ್ಸಳದೇವಿ, ವಾಮನ ಶ್ರೌತಿ, ಆತನ ಪತ್ನಿ ಸಂಧ್ಯಾ ಇತ್ಯಾದಿಯವರುಗಳು ಸಿರಿಯಲದೇವಿಯ ಛಾಯೆಯಂತೆ ಕಂಡು ಬರುವರು.

ಲೇಖಕರು ಆರಿಸಿಕೊಂಡಿರುವ ಕಥಾ ಚೌಕಟ್ಟು ಸ್ಪಷ್ಟವಾಗಿದೆ. ಕಥಾ ಬೆಳವಣಿಗೆ,

ಸನ್ನಿವೇಶಗಳ ನಿರ್ಮಾಣ, ಸಂಭಾಷಣಾ ಚಾತುರ್ಯತೆ ಕಾವ್ಯಮಯ ಶೈಲಿಯ ಪ್ರಕೃತಿ ವರ್ಣನೆ, ಐತಿಹಾಸಿಕ ವಿಷಯಗಳ ಸದುಪಯೋಗ, ಪಾತ್ರಗಳು ಔಚಿತ್ಯವನ್ನು, ಐತಿಹಾಸಿಕ ಸತ್ಯಗಳನ್ನು ಮೀರದಿರುವುದು–ಇವೆಲ್ಲ ಒಟ್ಟಾಗಿ ಸೇರಿ ಈ 'ಸಿರಿಯಂಲದೇವಿ' ಕಾದಂಬರಿಯನ್ನು ಕನ್ನಡದಲ್ಲಿನ ಒಂದು ಅಪರೂಪ ಐತಿಹಾಸಿಕವಾಗಿ ರೂಪುಗೊಂಡಿದೆ.

ಇವರ ಇಂತಹ ಕೆಲವೊಂದು ಕಾದಂಬರಿಗಳು ಬೇರೆ ಭಾಷೆಗಳಿಗೆ ಅನುವಾದವಾಗಲು ಯೋಗ್ಯವಾಗಿದ್ದರೂ, ಅಂತಹ ಪ್ರಯತ್ನಗಳು ನಡೆಯದೆ ಇರುವುದು ಶೋಚನೀಯ. ಅವರ ಕೆಲವು ಕೃತಿಗಳೂ ಕೂಡ ಮರುಮುದ್ರಣವಾಗದೆ ಇರುವುದು ಓರ್ವ ಹಿರಿಯ ಲೇಖಕರಿಗೆ ನಾವುಗಳು ಮಾಡುತ್ತಿರುವ ಅನ್ಯಾಯ. ಮುಂದಿನ ಜನಾಂಗ ಈ ಅನ್ಯಾಯವನ್ನು ಸರಿಪಡಿಸಲಾಗುವುದೆಂದು ನಂಬೋಣವೇ ?

'ಶಾಕುಂತಲಾ' ಕಾವ್ಯವಾಚನವನ್ನು ಪ್ರಾರಂಭಿಸಿ ಆಯಿತಲ್ಲ ! ನೀವು ಕೇಳಿ ಸಂತೋಷಪಟ್ಟಿರಲ್ಲ. . . ಅದುಮುಖ್ಯ.

ನಿಮ್ಮ ಶೈಲಿ ಧೀರೋದಾತ್ತವಾದುದು. ಉದಾತ್ತಧ್ಯೇಯಸಾಧನೆ ನಿಮ್ಮ ಕೃತಿಗಳಲ್ಲಿ ಎದ್ದು ಕಾಣುತ್ತದೆ.

ನಮ್ಮ ನಿಮ್ಮ ಸ್ನೇಹ ಬಾಂಧವ್ಯ ಕನ್ನಡದ ಶ್ರೇಯಸ್ಸಿಗೆ ಮುಡಿಪಾಗಿರಲಿ.

ಬಿ. ಎಸ್. ಪಾಂಡುರಂಗರಾವ್

ಸಿರಿಯಲದೇವಿ

ಡಾ. ಸಿ. ಪಿ. ಕೃಷ್ಣಕುಮಾರ್

ಸಮೇತನಹಳ್ಳಿ ರಾಮರಾಯರು ಚಾರಿತ್ರಿಕ ಕೃತಿರಚನೆಯಲ್ಲಿ ನಿಪುಣರು ; ನಿಸ್ಸೀಮರು. ಅನೇಕ ಉತ್ತಮ ಚಾರಿತ್ರಿಕ ಕಾದಂಬರಿಗಳನ್ನೂ ನಾಟಕಗಳನ್ನೂ ಅವರು ನಿರ್ಮಿಸಿ, ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ಸಲ್ಲಿಸಿದ್ದಾರೆ.

ಪ್ರಕೃತ, ಅವರ 'ಸಿರಿಯಲದೇವಿ'ಯೊಂದು ಚಾರಿತ್ರಿಕ ಕಾದಂಬರಿ ; ಅವರ ವಾಙ್ಮಯದಲ್ಲಿ ಬಹುಶಃ ಒಂದು ಅನನ್ಯವಾದ ಕೃತಿ. ಹೊಯ್ಸಳ ಸಾಮ್ರಾಜ್ಯದ ಇತಿಹಾಸದ ಕೆಲವು ಪುಟಗಳು ಈ ಕಾದಂಬರಿಗೆ ವಸ್ತುವನ್ನೊದಗಿಸಿವೆ. ವಿಷ್ಣುವರ್ಧನ–ಲಕ್ಷ್ಮಿಯರ ಮಗ ವೀರನರಸಿಂಹನ ಕಾಲಕ್ಕೇ ಇದು ಸಂಬಂಧಿಸಿದೆ. ಚಾರಿತ್ರಿಕ ಕೃತಿಯಾಗಿಯೂ ಇದರಲ್ಲಿ ಚರಿತ್ರೆಗೆ ಅಥವಾ ರಾಜಕೀಯ ಘಟನಾವಳಿಗೆ ಪ್ರಾಶಸ್ತ್ಯವಿಲ್ಲ. ಚರಿತ್ರೆಯ ಕೆಲವಂಶಗಳ ತೆಳು ಹಂದರಕ್ಕೆ ಲೇಖಕರ ಕಲ್ಪನೆ ರಕ್ತ, ಮಾಂಸಗಳನ್ನು ತುಂಬಿ, ಮಾನವಭಾವಗಳ ಜೀವಂತ ಜಗತ್ತೊಂದನ್ನು ಇಲ್ಲಿ ಸೃಜಿಸಿದೆ.

ಇದೊಂದು ನಾಯಿಕಾ ಪ್ರಧಾನವಾದ ಕಾದಂಬರಿ. ಸಿರಿಯಲದೇವಿ ಇದರ ನಾಯಿಕೆ, ಕೇಂದ್ರ ಪಾತ್ರ. ಇತರರ ಕಣ್ಣಿನಲ್ಲಿ ಅವಳೊಬ್ಬ ವಿಚಿತ್ರವಾದ ಹೆಣ್ಣು ; ಅವಳ ವ್ಯಕ್ತಿತ್ವದ ಆ ವೈಚಿತ್ರ್ಯದಲ್ಲಿಯೇ ಅವಳ ವೈಶಿಷ್ಟ್ಯವೂ ನೆಲೆಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಸಿರಿಯಲದೇವಿಯಂತಹ ಹೆಣ್ಣು ಪ್ರಾಯಃ ಮತ್ತೊಬ್ಬಳಿಲ್ಲ. ಅವಳ ಪಾತ್ರವನ್ನು ರೂಪಿಸುವಲ್ಲಿ ಲೇಖಕರು ತಮ್ಮ ಪ್ರತಿಭೆ ಕೌಶಲಗಳನ್ನೆಲ್ಲ ಧಾರೆಯೆರೆದಿದ್ದಾರೆ ಎನ್ನಬಹುದು.

ಶೃಂಗಾರರಸಪೂರ್ಣವಾದ ಕಾದಂಬರಿಯಿದು ; ಉದ್ದಕ್ಕೂ ಶೃಂಗಾರದ ಮಾದಕ ವಾತಾವರಣ ನಸುಗಂಪು ಬೀರುತ್ತಿದೆ. ಆದರೆ ಅದು ಬಹುಮಟ್ಟಿಗೆ ಅನಶ್ಲೀಲ ಗಂಭೀರವಾಗಿದೆ ಎಂಬ ಮಾತನ್ನು ಸೇರಿಸಬೇಕು.

ಸಿರಿಯಲದೇವಿ ಸುರಗಿನಾಡಿನ ಹೆಗ್ಗಡಿತಿ ; ಅವಳ ಪತಿ ಸಟ್ಟಿಗ. ಅವಳು ಸುಮಾರು ನಲವತ್ತು ವಯಸ್ಸಿನ ಪ್ರಗಲ್ಭೆ ; ಅವಳಿಗೆ ಹದಿನೆಂಟು ವರ್ಷದ ಮಾಚಣನೆಂಬ ಮಗನಿದ್ದಾನೆ. ಅವಳು ಅನುಪಮ ಸುಂದರಿ ; ರಸಿಕತೆಯ ಮೂರ್ತಿ ; 'ಗಂಡುಬೀರಿ' ಎನ್ನಬಹುದಾದ ದಿಟ್ಟ ಹೆಣ್ಣು. ಆದರೆ ಅವಳ ಶೀಲ ಅತ್ಯಂತ ದೃಢವಾದದ್ದು. (ಆ ಬಗ್ಗೆ ಅವಳ ಪತಿಗೇ ಎಳ್ಳಷ್ಟೂ ಶಂಕೆಯಿಲ್ಲ.) ಅವಳು ಸೂಕ್ಷ್ಮಮತಿ ಮತ್ತು ವಿಚಾರವಂತೆ ಕೂಡ.

"ಮಡಿವಂತರು, ಸಂಪ್ರದಾಯ ಶರಣರು ನಮ್ಮನ್ನು ನರಕಕ್ಕೆ ದೂಡಲಿ ಬಿಡು"; "ನಮ್ಮಿಂದ ಒಂದು ಜೀವ ಸಮ್ಮೋದಪಡೆವುದಾದರೆ, ಅಂತಹ ನೂರು ಕಟ್ಟುಗಳನ್ನಾದರೂ ತುಂಡರಿಸಿಯೇನು" ಎನ್ನುವ ಸಿರಿಯಲದೇವಿಯಚೆಲುವಿನ ಬಣ್ಣನೆಯಿದು ;

> "ಅಪ್ಸರೆಯೊಬ್ಬಳು ಬಾನಿನಿಂದ ಕೆಳಕ್ಕಿಳಿದು ಬಂದಂತೆ, ಸಿರಿಯಲದೇವಿ ಕಾನಿನ ಆ ನಿಸರ್ಗ ಸೌಂದರ್ಯದಲ್ಲಿ ಸುಳಿದಳು. ಅವಳು ದಿವದ ಹೆಣ್ಣಲ್ಲ, ನಿಜ. ಆದರೂ ಅವಳ ರೂಪ ವಿಭ್ರಮ ಎಲ್ಲರನ್ನೂ ಅಚ್ಚರಿಗೊಳಿಸುವಂಥದು. ಅವಳು ಭೂಮಿಯ ಮೇಲೆ ಹೆಜ್ಜೆಯನ್ನು ಎತ್ತಿ ಇಟ್ಟಾಗ, ಮಣ್ಣಿನ ಕಣಗಳು ಚೇತನಗೊಂಡಂತೆ ಕಾಣುತ್ತಿತ್ತು. ಗಾಳಿಗೆ ಹೊಸ ಉಸಿರು ಬಂದಂತೆ, ಬಿಸಿಲಿಗೆ ಹೊಸ ರಾಗ ಬಂದಂತೆ, ಕಾನಿನ ಬಳ್ಳಿಗೆ ಹೊಸ ಬೆಳುಕು ಬಂದಂತೆ, ಹೂ ಹಸಿರುಗಳು ಹೆಚ್ಚು ಪರಿಮಳವನ್ನು ಕೋಮಲತೆಯನ್ನು ಲೇಪಿಸಿಕೊಂಡಂತೆ ಕಾಣುತ್ತಿತ್ತು, ಅವಳು ಅಲ್ಲಿ ಸುಳಿದಾಗ."

ಆಗ ಆಳುತ್ತಿದ್ದ ವೀರನರಸಿಂಹ (ವಿಜಯನರಸಿಂಹ, ಪ್ರತಾಪನರಸಿಂಹ) ಹುಟ್ಟಿನಿಂದ ಪರಾಕ್ರಮಿಯೇ ಆದರೂ, ಕ್ರಮೇಣ ಭೋಗಾಸಕ್ತನಾಗಿ, ಸ್ತ್ರೀಲೋಲನಾಗಿ, ದುರ್ಬಲನಾಗಿದ್ದ ಅರಸ ; 'ಕಲಿಕಾಲ ಕಾಮ'ನೆನಿಸಿದವನು. "ಭೋಗದ ಉತ್ತುಂಗ ರಂಗದ ಸ್ವೈರವಿಹಾರವೇ ಅವನ ರಸ ಸಂಹಿತೆಯಾಯಿತು. ರತಿವಿಭ್ರಮದ ಅವನ ಕಾಮ ಪ್ರಬೋಧ ಜೀವನದ ಅತ್ಯುಚ್ಚ ಮಟ್ಟದಲ್ಲಿ ಸುಧಾ ಸ್ಯಂದಿನಿಯಾಗಿ ಹರಿಯಿತು" ಆ ಬಗೆಗೆ ಪ್ರಜೆಗಳಲ್ಲಿ ತೀವ್ರ ಅಸಮಾಧಾನವಿತ್ತು. ಅಷ್ಟೇಕೆ, ಯುವರಾಜನಾದ ಇಮ್ಮಡಿ ಬಲ್ಲಾಳನಿಗೇ "ತಂದೆಯ ಸಾನ್ನಿಧ್ಯ ಹಿತವೆನಿಸಲಿಲ್ಲ" ; ಅವನು ಮಹಾಂಡಲಿಕನಾಗಿ ರಾಜಧಾನಿಯ ಹೊರಗೇ ಕಾಲ ಕಳೆಯುತ್ತಿದ್ದ.

ಹೊಯ್ಸಳ ರಾಜಧಾನಿ ದ್ವಾರಾವತಿಗೊಮ್ಮೆ ಬರುತ್ತಾಳೆ, ಸಿರಿಯಲದೇವಿ. "... ಮಲೆಯನಾಡಿನಿಂದ ಬಂದ ಹೆಣ್ಣು. ರಾಜಧಾನಿ ದ್ವಾರಾವತಿಯಲ್ಲಿ ತನ್ನ ರಸ ರೂಪವನ್ನು ತನಗರಿವಿಲ್ಲದಂತೆಯೇ ಹರಡಲು ಆರಂಭಿಸಿದಳು, ಬಿರಿವ ಪುಷ್ಪರಾಜ ತನ್ನ ಕಂಪನ್ನು ಚೆಲ್ಲುವಂತೆ, ವೃದ್ಧಿಚಂದ್ರಮನು ಬಲಿತು ಬೆಳದಿಂಗಳನ್ನು ಹರಿಸುವಂತೆ." ಆಗ ವಸಂತದ ಮೇಳವೂ ಕೂಡಿಬರುತ್ತದೆ. ವಿವಿಧ ಸ್ಪರ್ಧೆಗಳ ಸುವ್ಯವಸ್ಥೆಗೆ ಸಟ್ಟಿಗ ನೇಮಕಗೊಳ್ಳುತ್ತಾನೆ. ಸಿರಿಯಲದೇವಿ ಸ್ವತಃ ಭಾಗವಹಿಸದಿದ್ದರೂ, ಮೇಲಾಟಗಳ ಗಂಡು ಹೆಣ್ಣುಗಳೆಲ್ಲರ ಮೇಲೆ ನಿಸ್ಸಂಕೋಚವಾಗಿ ತನ್ನ ಪ್ರಭಾವ ಮುದ್ರೆಯನ್ನೊತ್ತುತ್ತಾಳೆ ; ಅವರನ್ನು ತಿದ್ದುತ್ತಾಳೆ. ಎಲ್ಲೆಡೆ ಅವಳದೇ ಮಾತು. "ಸಿರಿಯಲದೇವಿಯ ವ್ಯಕ್ತಿತ್ವ ವಿಕಾಸ ... ರಾಜಧಾನಿಯಲ್ಲಿ ಬಹುಬೇಗನೆ ಸುಗಂಧವಾಗಿ ಹರಡತೊಡಗಿತು" ; "ಈ ಸರಸ, ಈ ವಿನೋದ, ಈ ಶುಚಿ, ರುಚಿ, ಹೃದಯದ ಈ ಹದ, ಮನಸ್ಸಿನ ಈ ಮಾಟ ಈ ಚಂದ, ಈ ಒನಪು, ಈ ಒಲವು ಅವಳಿರುತ್ತಿದ್ದ ಕ್ಷೇತ್ರವನ್ನೇ ಸಚೇತನವನ್ನಾಗಿ ಮಾಡುತ್ತಿದ್ದುವು."

ಸುಂದರಾಂಗನಾದ ವಿಜಯನರಸಿಂಹನನ್ನು ಸಿರಿಯಲೆ ಎವೆಯಿಕ್ಕದೇ ನೋಡು

ತ್ತಾಳೆ, "ಗಂಡಸನ್ನೇ ಎಂದೂ ಕಂಡರಿಯಳೇನೋ !" ಎನ್ನುವಂತೆ. ಇದ್ದು ಅವಳ ಸಮರ್ಥನೆ : "ಹೆಣ್ಣಿನ ಚೆಲುವನ್ನು ಕಂಡು ಗಂಡು ತಣಿವಂತೆ, ಗಂಡಿನ ಚೆಲುವನ್ನು ನೋಡುತ್ತೇವೆ. ಏಕೆ ನೋಡಬಾರದು ?"

ಈ ಹಂತದಲ್ಲಿ ನರಸಿಂಹನ ಗಮನ ಸಿರಿಯಲೆಯತ್ತ ಹರಿಯುವುದಿಲ್ಲ. ಆದರೇ ಅವಳು ವೀಣಾ ಎಂಬ ಅಂತಃಪುರದ ಹೆಣ್ಣೊಬ್ಬಳನ್ನು ಅಲಂಕರಿಸಿ, ಸ್ತ್ರೀತ್ವದ ಪರಿಪೂರ್ಣ ಮಾವರಿಯನ್ನಾಗಿಸಿ, ನರಸಿಂಹನೆಡೆಗೆ ಕಳುಹಿಸಿಕೊಡುವ ಆಲೋಚನೆ ಮಾಡುತ್ತಾಳೆ. ಅದು ತನ್ನ ಪ್ರೌಢಿಮೆಯ ಪ್ರದರ್ಶನಕ್ಕಾಗಿ ಕೂಡ. ಅದೇ ದೊರೆಯ ಮುಂದಿನ ದುರಂತಕ್ಕೆ ಮೂಲವಾಗುತ್ತದೆ.

ಸಿರಿಯಲದೇವಿ ಕಾಮಕಲಾಕೋವಿದೆ ; ತನ್ನ ಅನಂಗವಿದ್ಯೆಯನ್ನೆಲ್ಲ ಅವಳು ವೀಣಾಳ ಮೇಲೆ ವರ್ಷಿಸುತ್ತಾಳೆ. ಅವಳ ಪಾಲಿಗೆ ಹೆಣ್ಣಿನ ಅಲಂಕಾರವೆಂದರೆ :

> "ಕೇವಲ ಉಡಿಗೆ ತೊಡಿಗೆಗಳ, ಮುಡಿ ಕಾಡಿಗೆಗಳ ಬಾಹ್ಯ ಪ್ರದರ್ಶನ ಮಾತ್ರವಾಗಿರಲಿಲ್ಲ. ತನ್ನ ಕೈಯಿಂದ ಸಿಂಗರಗೊಂಡ ಹೆಣ್ಣು ರೂಪವಿಭ್ರಮವನ್ನು ಮೆರೆಯುವುದೊಂದೇ ಅಲ್ಲ, ಅವಳ ಅಂಗ ಪ್ರತ್ಯಂಗಗಳೂ ಕಾಂತಿಗೊಂಡು, ದಿವ್ಯ ಸೌರಭವನ್ನು ಸೂಸಬೇಕು ; ಹೊರಕ್ಕೆ ಬರುವ ಸುಯ್ಲಾದರೂ ಸುಗಂಧವನ್ನು ಪ್ರಸರಿಸಬೇಕು. ಆ ಪರಿಮಳದ ವಿಭ್ರಮ ಅವಳು ಸುಳಿವ ಕ್ಷೇತ್ರವೆಲ್ಲವನ್ನು ತುಂಬುವಂತಿದ್ದರೆ ಮಾತ್ರ . . ."

ಹೀಗಿದೆ ಸಿರಿಯಲದೇವಿ ವೀಣಾಳಿಗೆ ಮಾಡಿದ ಅಲಂಕರಣದ ವರ್ಣನೆ :

> " . . . ಅವಳ ಹಣೆ ಕೆನ್ನೆಗಳ ಮೇಲೆ ಸಿರಿಯಲದೇವಿ ಗಂಧ ಕುಂಕುಮಗಳ, ಕಸ್ತೂರಿ ಗೋರೋಜನಗಳ ವಿವಿಧ ಮಿಶ್ರಣಗಳಿಂದ ಬಳ್ಳಿಗಳನ್ನು ಬಿಡಿಸಿದಳು ; ಎಲೆ ಹೂಗಳನ್ನು ಸಹಜ ಸುಂದರವಾಗಿ ಚಿತ್ರಿಸಿದಳು. ಅವಳ ಕುಂಚ ಆಡಿದೆಡೆ ಒಂದು ರಸದ ಹೊನಲೇ ಹರಿದಿತ್ತು. ಮೊದಲೇ ಬಳ್ಳಿಯಂತೆ ಬಳುಕುವ ಅವಳ ನೀಳವಾದ ತೋಳುಗಳ ಮೇಲೆ ಮಾಧವಿ ಮಲ್ಲಿಗೆಗಳ ಬಳ್ಳಿಗಳು, ಹಸಿರು, ಹೂಗಳು, ಒಂದೊಂದಾಗಿ ಮೂಡಿದುವು. ಮುಂಗೈಯ ಹರಹಿನಿಂದ ನೀಳವಾದ ಬೆರಲುಗಳ ಮೇಲಕ್ಕೆ ಅವು ಹರಿದುವು. ಅವುಗಳ ರಚನೆಯ ಕೌಶಲ ಪರಿಣತಿಯಿಂದ ತುಂಬಿದ್ದಿತು. ಚಿತ್ರಣದಲ್ಲಿ ಜೀವವಿತ್ತು ; ಶಾಂತ ರಮಣೀಯತೆಯ ಮಾಧುರ್ಯವಿತ್ತು. ಸಿರಿಯಲದೇವಿ ತನ್ನ ಹೃದಯದ ಚೊಕ್ಕ ಭಾವನೆಗಳನ್ನು ಪ್ರಗಲ್ಭ್ಯತೆಯಿಂದ ಜೀವ ತುಂಬಿ ಆ ಹೆಣ್ಣಿನ ಕಾಂತಿಯುಕ್ತವಾದ ಮೃದುಚರ್ಮದ ಮೇಲೆ ಬಿಡಿಸಿದಳು ; ಜೀವನದ ಹದವನ್ನು ಹರಡಿದಳು."

ಅವಳ ಪ್ರಸಾಧನ ರಹಸ್ಯವಿದು :

"ಎದೆಯ ಆ ಮಾಟಗಳಲ್ಲಿ ರಂಜಿಸುವ ಎತ್ತರವಾದ ಸ್ತನತಟಗಳು, ಅದರ ಬುಡದಲ್ಲಿ ಕೊಂಕಿನಿಂದ ಬಳುಕುವ ಹಿಡಿ ನಡುವಿನ ಕೊನೆಯಲ್ಲಿ ತುಂಬಿ ಏರಿರುವ ಈ ಘನತರ ನಿತಂಬಗಳು, ಏರುತಗ್ಗುಗಳ ಈ ಹೆಣ್ಣಿನ ಈ ವಕ್ರರೇಖೆ—ಇವುಗಳಲ್ಲಿ ಬಿಡಿಸಿಡುವ ಜಾಣ

ತನವೇ ಪ್ರಸಾಧನರ ರಹಸ್ಯ."

ನರಸಿಂಹನ ಕುತೂಹಲವನ್ನು ವೀಣಾಳಿಗಿಂತ ಸಿರಿಯಲದೇವಿಯೆ ಹೆಚ್ಚು ಕೆರಳಿಸುತ್ತಾಳೆ. ವೀಣಾಳ ಸ್ಥಾನದಲ್ಲಿ ಅವನು ಸಿರಿಯಲೆಯನ್ನೆ ಕಾಣುವ ಯತ್ನ ಮಾಡುತ್ತಾನೆ. ನರಸಿಂಹ–ವೀಣಾರ ಕೂಟದ ಚಿತ್ರ ಹೀಗೆ ಉತ್ಕಟವಾಗಿ ಮೂಡಿಬಂದಿದೆ.

"ವಿಜಯನಿಗೆ ಅವಳು ಅಂದು ಎಂದಿನ ಹೆಣ್ಣಾಗಿ ಕಾಣಲಿಲ್ಲ. ಅವನನ್ನೊಂದು ಹೊಸ ಸ್ಮರಾವೇಶ ಆವರಿಸಿಕೊಂಡಂತಿತ್ತು. ಮಹಾಭೋಗಿ ಆ ವಿಜಯನು ಒಂದು ದಿವ್ಯ ಸ್ಮರಮೂರ್ಛೆಗೆ ಸಂದನು, ವೀಣಾ ತಾನು ಕಲಿತು ತಂದ ಹೊಸ ಸಿದ್ಧಾಂತಗಳ ಸೂತ್ರಗಳ ನೂರು ಪ್ರಯೋಗಗಳನ್ನು ರುಚಿಕಟ್ಟಾಗಿ ಪ್ರಯೋಗಿಸಿದಳು ; ಸಿರಿಯಲದೇವಿಯ ಸಾರ್ಥಕ ಶಿಷ್ಯೆ ಎಂದೆನಿಸಿಕೊಂಡಳು. ವೀಣಾ ತನ್ನ ವಿನೂತನ ಮಹಾರತಿ ಚೇತನದಿಂದ ತನ್ನ ಮನದನ್ನನ ಸರ್ವೇಂದ್ರಿಯಗಳಲ್ಲಿ, ಸಮರಸದಲ್ಲಿ, ಸಮಭಾವದಲ್ಲಿ, ಸಮರತಿಗಳಲ್ಲಿ ಬೆರೆತುಕೊಂಡು ದಿವ್ಯ ಗಂಧರ್ವಲೋಕಕ್ಕೆ ಎತ್ತಿಕೊಂಡುಹೋದಳು. ವಿಜಯನಿಗೆ ತನ್ನ ತನವೆಂದೆಂಬ ಸ್ಮೃತಿಯೇ ಇಲ್ಲವಾಗಿತ್ತಾಗಿ ಶೃಂಗಾರತುರೀಯದಲ್ಲಿ ಲೀನನಾಗಿದ್ದನು."

"ಮನಸಿಜ ಮಂತ್ರವೆಂಬಂತೆ ಭಾವಪೂರ್ಣವಾಗಿ ಸಿರಿಯಲದೇವಿಯ ಹೆಸರನ್ನು ಉಚ್ಚರಿಸುತ್ತಿದ್ದ, ಪ್ರಿಯತಮನನ್ನು ವೀಣಾ ತನ್ನ ತೋಳ ತೆಕ್ಕೆಯಲ್ಲಿ ಮತ್ತಷ್ಟು ಗಾಢಗೊಳಿಸಿ, ಮಹೋನ್ಮಾದದಿಂದ ತುಟಿಗಳನ್ನರಳಿಸಿ, ಅವನ ಸುಧಾಧರಗಳನ್ನು ಅವುಗಳೊಳಗಿರಿಸಿಕೊಂಡು ಸೀಯೆಂದು ಹೀರಿದಳು."

ಮುಂದೆ ಸಿರಿಯಲದೇವಿಯತ್ತ ದೊರೆಯ ಮನಸ್ಸು ಆಕರ್ಷಿತವಾಗುತ್ತದೆ ; ಅವಳನ್ನು ವಶಪಡಿಸಿಕೊಳ್ಳಬೇಕೆಂಬ ಬಯಕೆ ಅವನಲ್ಲಿ ಬಲಿಯುತ್ತದೆ. ತನ್ನ ಇಚ್ಛಾಪೂರ್ತಿಗೆ ಅನುಕೂಲವಾಗಲೆಂದು ಅವನು ಸಟ್ಟಿಗನನ್ನು ಅರಬ್ ದೇಶಕ್ಕೆ ಅಶ್ವಗಳನ್ನು ತರಲು ಕಳುಹುತ್ತಾನೆ. ಮಾಚಣನನ್ನು ಒಬ್ಬ ದಣಾಯಕನನ್ನಾಗಿ ಮಾಡಿ, ಆಸ್ಥಾನದಲ್ಲಿರಿಸಿಕೊಳ್ಳುತ್ತಾನೆ.

ಸಿರಿಯಲದೇವಿ ಸುರಗಿನಾಡಿಗೆ ಮರಳಿದ ಮೇಲೆ, ನರಸಿಂಹ ಅಲ್ಲಿಗೊಮ್ಮೆ ಹೋಗಿ ಅವಳ ಪ್ರಣಯ ಭಿಕ್ಷೆಯನ್ನು ಬೇಡಿ, ಧಿಕ್ಕೃತನಾಗುತ್ತಾನೆ. ಅವರಿಬ್ಬರ ನಡುವೆ ನಡೆಯುವ ಸಂಭಾಷಣೆಯ ಸೊಗಸು, ಅದು ಆಯಾ ಪಾತ್ರಸ್ವಭಾವದ ಮೇಲೆ ಬೀರುವ ಬೆಳಕು ಪರಿಭಾವನೀಯ :

" . . . ವೀಣಾ ನಮಗೆ ತಂದುಕೊಟ್ಟ ಆ ರತಿಬಂಧಗಳನ್ನು, ಆ ಅಮೃತವರ್ಷಿಣಿ ಪ್ರತಾಪಗಳ ತಂತ್ರ ಪ್ರಯೋಗಗಳಿಂದ ಒಪ್ಪಿಸುತ್ತೇವೆ."

"ನಮ್ಮ ವಿದ್ಯೆ ಸಾರ್ಥಕತೆಗೇರಿತು."

ಈ ಮಾತುಗಳನ್ನು ಹೇಳುವಾಗ ಸಿರಿಯಲದೇವಿಯ ಕಂಠದಲ್ಲಿ ವ್ಯತ್ಯಾಸ ಕಂಡಿತಾದರೂ ಮದನೋದ್ರೇಕದ ಅವನಿಗೆ ಅದು ಪ್ರೇಮೋನ್ಮಾದದ ಒಂದು ಅವಸ್ಥೆ ಎಂದುಕೊಂಡನು. ಸಿರಿಯಲದೇವಿ ಅಲುಗಲಿಲ್ಲ. ವಿಜಯನನ್ನು ಸುಮ್ಮನೆ ನೋಡಿ

ದಳು. ಮೊಗ ಕೆಂಪಡರಿ ಹೆಣ್ಣು ಲಜ್ಜೆಯ ಕೆಂಪಿನಿಂದ ತೊಯ್ದುಹೋದಳೆಂದುಕೊಂಡ. ವಿಜಯನ ಹೆಣ್ಣಿಗೆ ಈ ಲಜ್ಜೆಯೂ ಒಂದು ಮೋಹಕವೇ ಅಲ್ಲವೆ, ದೇವಿ. ಆಗಲಿ ನಾವೇ ಕೈಯಾರ ಅಂದು ವೀಣಾ ನಿಮಗಾಗಿ ಮಲಗಿದಂತೆ–ಎಂದು ವಿಜಯನ ನಿಡುದೋಳ್ಗಳನ್ನು ಚಾಚಿ ಮುಂದಡಿ ಇಟ್ಟನು. ಸಿರಿಯಲದೇವಿ ಹೆಜ್ಜು ಮಟ್ಟಸವಾಗಿ ನಿಂತು ಗರ್ಜಿಸಿದಳು :

'ಜೋಕೆ ರಾಜನ್ !'

'ಏನದು ?'

'ಹೆಣ್ಣಿನ ಅಣತಿ !'

'ಏಕೆ ?'

'ಹೆಣ್ಣುತನವನ್ನು ಮೆರೆಯುವುದಕ್ಕಾಗಿ !'

'ಏನು ಈ ದರ್ಪ !'

'ಹೆಣ್ಣೆಂದರೆ ಗಂಡಿನ ಮೃಗತೃಷ್ಣೆಯನ್ನು ತೀರಿಸುವ ಕಾಮದ ಬೊಂಬೆಯೆಂದು ಭ್ರಮಿಸುವವರನ್ನು ದಮನ ಮಾಡುವುದಕ್ಕಾಗಿ'

'ಹಾಗಿದ್ದರೆ ಹೇಳು ಸಿರಿಯಲದೇವಿ. ನಮ್ಮ ಇದುವರೆಗಿನ ಸಲ್ಲಾಪದಲ್ಲಿ ನೀವು ಮದನ ಪ್ರಾವೀಣ್ಯತೆಯನ್ನು ಮೆರೆದದ್ದು ವಂಚನೆಯೇ?'

'ಮೆರೆದದ್ದು ಮಹಾರಾಜ, ಮದನ ಪ್ರಾವೀಣ್ಯತೆಯನ್ನಲ್ಲ. ಹೆಣ್ಣಿನ ಸಭ್ಯತೆಯನ್ನು. ಕಳ್ಳು ಕುಡಿದವನಿಗೆ ಲೋಕವೇ ತೂರಾಡುವಂತೆ ಕಾಣುತ್ತದೆ.'

(ಹೀಗೆಯೇ ಮುಂದುವರಿಯುತ್ತದೆ, ಸಂವಾದ)

ದ್ವಾರಾವತಿಗೆ ಹಿಂದಿರುಗಿದ ನರಸಿಂಹ ಸಿರಿಯಲದೇವಿಯನ್ನು ಸೆರೆಹಿಡಿದು ತರಿಸುತ್ತಾನೆ. ಆದರೆ ಅವಳು ಅವನಿಗೆ ಒಲಿಯುವುದಿಲ್ಲ. "ಒಲಿಯದ ಹೆಣ್ಣನ್ನು ಬಲವಂತವಾಗಲಿ, ಹೆದರಿಕೆಯಾಗಲಿ, ಒಲಿಯುವಂತೆ ಮಾಡದೆಂಬುದನ್ನು ಕಾಮದ ಮದದಿಂದ ಕುರುಡನಾದ ವಿಜಯನ ಅರಿಯಲಿಲ್ಲ. ಅವನ ನೂರು ಪ್ರಯತ್ನಗಳು, ಅಭಿಸಂಧಿಗಳು, ಆಸೆ ಆಮಿಷಗಳು ಫಲಕಾರಿ ಆಗಲಿಲ್ಲ."

ಅನಂತರ, ವೀರಬಲ್ಲಾಳ ತಂದೆಯ ವಿರುದ್ಧ ಬಂಡಾಯವೆದ್ದು, ಅವನನ್ನು ಸೋಲಿಸಿ, ಅರಮನೆಯಲ್ಲೆ ಬಂದಿಯಾಗಿಸುತ್ತಾನೆ. ಸಿರಿಯಲೆ ಸ್ವತಂತ್ರಳಾಗಿ ಸುರಗಿನಾಡಿಗೆ ತೆರಳುತ್ತಾಳೆ. ನರಸಿಂಹನಿಗೆ ಇತ್ತ "ಅವಳದೇ ಧ್ಯಾನ, ಅವಳದೇ ಮಂತ್ರವಾಯಿತು." ಅವನು ಅಸ್ವಸ್ಥನಾಗಿ, ಕೊರಗಿ ಕೃಶನಾಗುತ್ತಾನೆ. ಅದನ್ನು ತಿಳಿದ ಸಿರಿಯಲದೇವಿ ಅವನನ್ನು ಸಾಂತ್ವನಗೊಳಿಸಲೋಸುಗ ರಾಜಧಾನಿಗೆ ಬರುತ್ತಾಳೆ. ವಿಕೃತಚಿತ್ತನಾದ ನರಸಿಂಹ ಒಳ ಓವರಿಯಲ್ಲಿ ಅವಳ ನಗ್ನಚಿತ್ರವನ್ನು ಬರೆದುಕೊಂಡು ಅದರಲ್ಲೆ ತೃಪ್ತಿಪಟ್ಟುಕೊಂಡಿರುತ್ತಾನೆ. ಅದನ್ನು ಕಂಡು ಸಿರಿಯಲೆ ದಿಗ್ಭ್ರಾಂತಗೊಳ್ಳುತ್ತಾಳೆ. ಅವನು ಅವಳಿಗೆ ನುಡಿಯುತ್ತಾನೆ. "ಅಂದು ನೀವು ವೀಣಾಸ್ತನಮಂಡಲಗಳನ್ನು ಸಿಂಗರಿಸಿದಂತೆ, ಇಂದು ನಾವು ಸಿರಿಯಲದೇವಿಯ–" ಅವಳು ಉದ್ಗರಿಸುತ್ತಾಳೆ "ಅರ್ಹತ್ಪರಮೇಶ್ವರಾ!"

ನರಸಿಂಹನ ಬಾಯಿಂದ ಬರುವ ಕಡೆಯ ಮಾತು "ಸಿರಿಯಲದೇವಿ !" ಅವಳಾಡುವ ಕಡೆಯ ಮಾತು : "ಅರ್ಹಂತನು ನಿಮ್ಮನ್ನು ರಕ್ಷಿಸಲಿ !" ಇದು ರಾಜನ ಅವನತಿಯನ್ನು, ಸಿರಿಯಲೆ ಕಾಪಾಡಿಕೊಂಡ ನೈತಿಕ ಉನ್ನತಿಯನ್ನು ಸಂಕೇತಿಸುತ್ತವೆ.

ಹತಾಶೆಯ ಪ್ರಪಾತಕ್ಕೆ ಕೆಡೆದ ನರಸಿಂಹನ ಪ್ರಾಣಪಕ್ಷಿ ಹಾರಿಹೋಗುತ್ತದೆ. ಅವರ ಅಸೀಮ, ಅನುಚಿತ ಕಾಮಾಗ್ನಿಯೆ ಅವನನ್ನು ದಹಿಸಿ, ಬೂದಿಮಾಡುತ್ತದೆ.

ಸಿರಿಯಲದೇವಿಯಂಥ ಹೆಣ್ಣೊಬ್ಬಳು ಇರುವುದು ಸಾಧ್ಯವೆ ಎಂಬ ಪ್ರಶ್ನೆಗೆ ಅವಕಾಶವಿದೆ. ಆದರೆ ಏಕಿರಬಾರದು ಎಂಬ ಪ್ರತಿಪ್ರಶ್ನೆಗೂ ಅವಕಾಶವಾಗುವಂತೆ ಲೇಖಕರ ಲೆಕ್ಕಣಿಯ ಮೋಡಿ ಕೆಲಸಮಾಡಿದೆ !

ಇತಿಹಾಸಪ್ರಜ್ಞೆ, ಮನುಷ್ಯಹೃದಯದ ದಟ್ಟವಾದ ಅರಿವು, ಕಥನ ನೈಪುಣ್ಯ, ವರ್ಣನಾಕೌಶಲ, ಸಂಭಾಷಣಾ ಚಾತುರ್ಯ, ವಸ್ತುವಿಗೆ ಒಪ್ಪುವ ಭಾಷೆ–ಇವೆಲ್ಲ ಗೋಚರಿಸುತ್ತವೆ, 'ಸಿರಿಯಲದೇವಿ' ಕಾದಂಬರಿಯಲ್ಲಿ. ಸಿರಿಯಲದೇವಿಯ ಪಾತ್ರವಂತೂ ಓದುಗರ ಪಾಲಿಗೆ ಅವಿಸ್ಮರಣೀಯವಾಗುವಂತೆ ಚಿತ್ರಿತವಾಗಿದೆ.

ಕನ್ನಡ ಚಾರಿತ್ರಿಕ ಕಾದಂಬರಿಗಳ ಸಾಲಿನಲ್ಲಿ ಈ ರೋಚಕ ಕಾದಂಬರಿ ತನ್ನದೇ ಆದ ಸ್ಥಾನವೊಂದನ್ನು ಗಳಿಸಿಕೊಳ್ಳುವ ಸತ್ತ್ವ ಪಡೆದಿದೆ.

'ಕೋಟೆಮನೆ' ಶೀರ್ಷಿಕೆಯನ್ನು ಹೊತ್ತ ನಿಮ್ಮ ಬಾಳಿನ ಕತೆಗಳನ್ನು ಓದಿದೆ. ಇದನ್ನೋದಿದಾಗ ನನ್ನಂಥ ಯುವ ಜನಾಂಗಕ್ಕೆ ಜೀವನದಲ್ಲಿ ಬರುವ ಕಷ್ಟ ಕೋಟಲೆಗಳನ್ನು ಅಪವಾದಗಳನ್ನು ಧೈರ್ಯ ದಿಂದ ಎದುರಿಸುವ ಶಕ್ತಿಯು ಬರುತ್ತದೆ. ಜೀವನದಲ್ಲಿ ಜುಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳು ವವರ ಸಂಖ್ಯೆಯು ಹೆಚ್ಚುತ್ತಿರುವ ಈ ದಿನಗಳಲ್ಲಿ ನಿಮ್ಮ ಬಾಳಿನ ಕಥೆಗಳು ಓದುಗರನ್ನು ಬಾಳಿನ ಪಥ ದಲ್ಲಿ ಪಲಾಯನವಾದಿಗಳಾಗದೆ, ಬಾಳನ್ನು ಧೈರ್ಯದಿಂದ ನಡೆಸುವ ಶಕ್ತಿಯನ್ನು ಕೊಡುತ್ತದೆ.

ಈಸಬೇಕು ಇದ್ದು ಜೈಸಬೇಕು ಎಂಬ ದಾಸವಾಣಿಯಂತೆ ಜೀವನವೆಂಬ ಸಾಗರವನ್ನು ನೀವು ಜಯಿಸಿದ್ದೀರಿ.

೮–೮–೯೭ — ಎಸ್. ಜಿ. ಸೋಮಶೇಖರ

'ಯದುವೊಡೆಯ' ಹಾಗೂ 'ಮೊನೆಗಾರ' ಒಂದು ಅವಲೋಕನ

ಚಂದ್ರಮತಿ ಸೋಂದಾ

ಯಾವುದೋ ಒಂದು ಕಾಲಘಟ್ಟಕ್ಕೆ ಸೇರಿದ ಆಳರಸರ ಏಳುಬೀಳುಗಳನ್ನು ಅನಾವರಣಗೊಳಿಸುವುದು ಚಾರಿತ್ರಿಕ ಕೃತಿಯೊಂದರ ಮುಖ್ಯ ಉದ್ದೇಶ ಎಂದು ಸ್ಥೂಲವಾಗಿ ಹೇಳಬಹುದು. ಇಂತಹ ಏಳುಬೀಳುಗಳಿಗಾಗಿ ಕಾರಣರಾಗುವ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅರ್ಥೈಸುವ ಪ್ರಯತ್ನವೂ ಜೊತೆಯಲ್ಲಿಯೇ ನಡೆಯುತ್ತದೆ. ಆದರೆ ಇಂತಹ ಕೃತಿಗಳು ಆ ಕಾಲದ ಜನಸಾಮಾನ್ಯರ ಬದುಕನ್ನು ವಿಶ್ಲೇಷಿಸುವುದು ತೀರ ವಿರಳ. ಕನ್ನಡದಲ್ಲಿ ಪ್ರಕಟವಾಗಿರುವ ಬಹುಪಾಲು ಚಾರಿತ್ರಿಕ ಕಾದಂಬರಿಗಳಿಗೂ ಈ ಮಾತು ಅನ್ವಯಿಸುತ್ತದೆ.

ಸಮೇತನಹಳ್ಳಿ ರಾಮರಾಯರಿಗೆ ಚರಿತ್ರೆ ಬಹಳ ಆಸಕ್ತಿಯ ವಿಷಯವಾಗಿರುವಂತೆ ತೋರುತ್ತದೆ. ಅವರ ಹೆಚ್ಚಿನ ಕೃತಿಗಳ ಮೂಲಧಾತು ಚರಿತ್ರೆಯೇ ಆಗಿದೆ. ರಾಮರಾಯರು ಮೈಸೂರು ಒಡೆಯರ ಇತಿಹಾಸಕ್ಕೆ ಸಂಬಂಧಿಸಿದ ಎರಡು ಕಾದಂಬರಿಗಳನ್ನು ಬರೆದಿದ್ದಾರೆ. 'ಯದುವೊಡೆಯ' ಕಾದಂಬರಿಯು ಮೈಸೂರು ಒಡೆಯರ ಮೂಲ ಪುರುಷನಾದ 'ಯದುದೇವ' ಅಥವಾ ವಿಜಯನು 'ಮಯಿಸೂರಿನ' ರಾಜ್ಯ ಸೂತ್ರವನ್ನು ತನ್ನದಾಗಿಸಿಕೊಂಡ ಕತೆಯನ್ನು ಹೇಳುತ್ತದೆ. ಅವರ ಇನ್ನೊಂದು ಕೃತಿ 'ಮೊನೆಗಾರ'ವು ಮೂವತ್ತೂರು ಹಳ್ಳಿಗಳ ಒಡೆಯರಾಗಿದ್ದ ಮೈಸೂರರಸರು ವಿಜಯನಗರದ ಆಳ್ವಿಕೆಯಿಂದ ಹೊರಬಂದು ಸ್ವತಂತ್ರರಾಗಲು ಹಾಗೂ ರಾಜ್ಯ ವಿಸ್ತರಣೆಗೆ ಕಾರಣನಾದ ತಿಮ್ಮರಸನ ಬದುಕನ್ನು ಕಂಡರಿಸುತ್ತದೆ.

ಮೈಸೂರ ಒಡೆಯರ ಮೂಲವನ್ನು ಕುರಿತಂತೆ ಮೂರುನಾಲ್ಕು ಕಥಾನಕಗಳಿವೆ. ಒಡೆಯರ ಮೂಲಪುರುಷನಾದ ಯದುರಾಜ ಯದುವಂಶಕ್ಕೆ ಸೇರಿದವನು ; ದ್ವಾರಕೆಯಿಂದ ಬಂದವನು ಹಾಗೂ ಮೈಸೂರು ಸಿಂಹಾಸನ ಒಡೆಯನಿಲ್ಲದೆ ಅನಾಥವಾಗಿತ್ತು. ಅದರಿಂದಾಗಿ ಆ ಅಧಿಕಾರ ಪಡೆಯಲು ರಾಣಿ ಮತ್ತು ರಾಜಕುಮಾರಿಗೆ ಕಿರುಕುಳ ಕೊಡಲಾಗುತ್ತಿತ್ತು. ಇವಿಷ್ಟು ಅಂಶಗಳನ್ನು ಮಾತ್ರ ರಾಮರಾಯರು ಆ ಕಥಾನಕಗಳಿಂದ ಸ್ವೀಕರಿಸಿ ಯದುವೊಡೆಯ ಕಾದಂಬರಿಯನ್ನು ರಚಿಸಿದ್ದಾರೆ. ಉಳಿದಂತೆ, ಸನ್ನಿವೇಶಗಳು ಮತ್ತು ಘಟನೆಗಳು ಕೃತಿಕಾರರ ದೃಷ್ಟಿ–ಧೋರಣೆಗಳನ್ನು ಪ್ರತಿಬಿಂಬಿಸುವಂತಿವೆ.

ಭರತಖಂಡದ ದಕ್ಷಿಣ ಭಾಗದ ಪ್ರವಾಸಾಧ್ಯಯನವನ್ನು ನೆವವಾಗಿಟ್ಟುಕೊಂಡು ದೂರದ ಗುರ್ಜರನಾಡಿನಿಂದ ಬಂದ ಯದುದೇವ, ಕೃಷ್ಣ ಎಂಬ ಸಹೋದರರು ಕರ್ನಾಟಕದ ಎಲ್ಲ ಭಾಗಗಳನ್ನು ಸಾಕಷ್ಟು ಸುತ್ತಾಡಿ, ಜನಜೀವನವನ್ನು ಪರಿಚಯಿಸಿಕೊಳ್ಳುವುದು, ನಾಡಿನ ಭಾಷೆಯನ್ನು ಕಲಿತರೆನ್ನುವುದು ಅಧಿಕಾರವನ್ನು ಸ್ಥಾಪಿಸಲು ಬೇಕಾದ ಸಿದ್ಧತೆಯಾಗಿ ಕಾಣುತ್ತದೆ. ಅವರ ರಾಜ್ಯಾಕಾಂಕ್ಷೆಗೆ ನೀರೆರೆದವನು ಕರ್ನಾಟಕದ ಸಾರ್ವಭೌಮನೆನಿಸಿದ್ದ ವಿಜಯನಗರದ ಅರಸು. ಈ ಸಹೋದರರ ಸಾಮರ್ಥ್ಯವನ್ನು ಅರಿತ ಪ್ರದ್ಯುಮ್ನದೀಕ್ಷಿತ ಹರಿಹರದೇವನಿಂದ ಅವರಿಗೆ ಆಶ್ವಾಸನೆ ದೊರಕುವಂತೆ ಮಾಡುತ್ತಾನೆ. ಈ ಸಂದರ್ಭ ಯದುದೇವನ ವಿನಯ ವಿದ್ವತ್ತುಗಳನ್ನು ಪರಿಚಯಿಸುತ್ತದೆ. ಆತನ ತಾರ್ಕಿಕತೆ, ಚಾಕಚಕ್ಯತೆಗಳನ್ನು ಮೇಲುಕೋಟೆಯ ಸನ್ನಿವೇಶ ಅನಾವರಣಗೊಳಿಸುತ್ತದೆ. ಮೇಲುಕೋಟೆಯಲ್ಲಿ ಯದುದೇವ ಮತ್ತು ಅಲ್ಲಿಯ ಪುರೋಹಿತರ ನಡುವೆ ನಡೆಯುವ ವಾಗ್ವಾದಗಳು ಆತನ ವೈಚಾರಿಕತೆಯನ್ನು ಅಭಿವ್ಯಕ್ತಿಸುತ್ತವೆ. ಆತ ದೈವವನ್ನು ಮೂಢನಾಗಿ ನಂಬುವವನಲ್ಲ. ಪ್ರಶ್ನಿಸಿ ಸರಿಯೆನಿಸಿದ್ದನ್ನು ಸ್ವೀಕರಿಸುವವನು ಅವನ ಈ ಗುಣವನ್ನು ಒಪ್ಪದ ಪುರೋಹಿತರು ಮೋಸದಿಂದ ಅವನಿಗೆ ಬುದ್ಧಿ ಕಲಿಸಲು ಮುಂದಾದರೂ ಆತ ಅದರಿಂದ ಕಿಂಚಿತ್ತೂ ವಿಚಲಿತನಾಗದೆ ಅವರಿಗೆ ಬುದ್ಧಿ ಕಲಿಸುವುದು ಅವನ ಚಾಕಚಕ್ಯತೆಗೆ ಸಾಕ್ಷಿಯಾಗಿದೆ. ಈ ರೀತಿಯಲ್ಲಿ ಯದುದೇವ ಮೈಸೂರು ಪುರಪ್ರವೇಶ ಮಾಡುವುದಕ್ಕೆ ಪೂರ್ವದ ಘಟನಾವಳಿಗಳು ಒಬ್ಬ ಸಮರ್ಥ ಆಡಳಿತಗಾರನಾಗಲು ಬೇಕಾದ ಗುಣಗಳು ಆತನಲ್ಲಿತ್ತು ಎನ್ನುವುದನ್ನು ಎತ್ತಿ ತೋರಿಸುತ್ತದೆ. ಅಂದರೆ, ಮೈಸೂರಿನ ಅನಾಯಕತ್ವದಿಂದಾಗಿ ಅನಾಯಾಸವಾಗಿ ಅವನಿಗೆ ಅಧಿಕಾರ ದಕ್ಕಿತು ಎನ್ನುವಂತಿಲ್ಲ ; ಆವನ ಸಾಮರ್ಥ್ಯಕ್ಕೆ ಸರಿಯಾದ ಅವಕಾಶ ಆಕಸ್ಮಿಕವಾಗಿ ದೊರಕಿತು ಅಷ್ಟೆ.

ಉಪಲಬ್ಧವಿರುವ ಚಾರಿತ್ರಿಕ ಮೂಲಗಳ ಪ್ರಕಾರ ಕಾರುಗನಹಳ್ಳಿ ಮಾರನಾಯಕ ಎನ್ನುವವನು ಮಯಿಸೂರ ಸಿಂಹಾಸನವನ್ನು ತನ್ನದಾಗಿಸಿಕೊಳ್ಳುವ ಉದ್ದೇಶದಿಂದ ರಾಜಕುವರಿಯನ್ನು ಮದುವೆಯಾಗಲು ಕಾತರಿಸಿ, ರಾಣಿ ಮತ್ತು ರಾಜಕುವರಿಗೆ ಕಿರುಕುಳ ನೀಡುತ್ತಿರುತ್ತಾನೆ. ಕೊನೆಯಲ್ಲಿ ಯದುರಾಜನಿಂದ ಹತನಾಗುತ್ತಾನೆ. ಆತನನ್ನು ಅತ್ಯಂತ ದುಷ್ಟನೆಂದು ಚಿತ್ರಿಸಲಾಗಿದೆ. ಆದರೆ ಈ ಕೃತಿಯಲ್ಲಿ ಮಾರನಾಯಕನು ಹೀನ ಕುಲಕ್ಕೆ ಸೇರಿದವನೆಂದು ರಾಜಕುವರಿ ಆತನನ್ನು ಮದುವೆಯಾಗಲು ನಿರಾಕರಿಸುತ್ತಾಳೆಯೇ ವಿನಾ ಆಕೆ ಕೆಟ್ಟವನೆಂದಲ್ಲ. ಉದಾಹರಣೆಗೆ ಆಕೆ ಮಾರನಾಯಕನೊಡನೆ ಆಡಿದ ಈ ಕೆಳಗಿನ ಮಾತುಗಳನ್ನು ಗಮನಿಸಬಹುದು. “ . . . ಪಟ್ಟವಣೆಯನ್ನೇರಬೇಕಾದ ಅರಗುವರಿಯೊಬ್ಬಳು ಅಂತ್ಯಜಾತಿಯವನೊಬ್ಬನನ್ನು ಕೂಡಿ, ಅರಸಾಳ್ಕೆಯನ್ನು ಕಲಂಕಿತಗೊಳಿಸಿದಳೆಂದೆಂಬ ಜನದ ಮಾತನ್ನು ನೆನೆದಾಗಲೆಲ್ಲ, ನಮ್ಮ ಮನಸ್ಸು ಅಷ್ಟೇ ದೃಢತೆಯಿಂದ ದೂರದೂರಕ್ಕೆ ಓಡಿತು ; ಬಲಗೊಂಡು ಬಳಿದು ನಿಂತಿತು” (ಯದುವೊಡೆಯ ಪು. ೭೧)

‘ಪೃಥಿವಿ ವೀರ ಭೋಗ್ಯೆ’ ಎನ್ನುವುದು ಮಾರನಾಯಕನ ನಂಬಿಕೆ. ಲೇಖಕರೂ

ಅದನ್ನೇ ಕೃತಿಯಲ್ಲಿ ಎತ್ತಿಹಿಡಿದಿದ್ದಾರೆ. ಯದುದೇವನಿಗೆ ರಾಜ್ಯದಕ್ಕುವುದು ಮಾರ ನಾಯಕನೊಂದಿಗಿನ ಮಲ್ಲಯುದ್ಧದಲ್ಲಿ ಗೆಲ್ಲುವುದರಿಂದ. ಗೆದ್ದವರಿಗೆ ರಾಜ್ಯ ಎನ್ನುವ ಪಣಕ್ಕೆ ಇಬ್ಬರೂ ಒಪ್ಪಿಕೊಂಡವರೇ. ಸೋತ ನಾಯಕ ರಾಜ್ಯದಿಂದ ಹೊರನಡೆಯುತ್ತಾನೆ. ಆತನ ಕೊಲೆಯಾಗುವುದಿಲ್ಲ.

ಮಾರನಾಯಕನ ಆಡಳಿತಸಾಮರ್ಥ್ಯವನ್ನು ಬೆಟ್ಟವ್ವೆಯ ಪ್ರಸಂಗ ಅನಾವರಣಗೊಳಿಸುತ್ತದೆ. ಸಾಮಾನ್ಯ ಹೆಣ್ಣುಮಗಳೊಬ್ಬಳಿಗೆ ಆದ ಅನ್ಯಾಯವನ್ನು ತಾಳ್ಮೆಯಿಂದ ಕೇಳಿ ಆಕೆಗೆ ಪರಿಹಾರ ದೊರಕುವಂತೆ ಮಾಡುವ ಮಾರನಾಯಕನ ಕ್ರಮ ಆತನ ಆಡಳಿತದ ವೈಖರಿಗೆ ಸಾಕ್ಷಿಯಂತಿದೆ. ಮಾರನಾಯಕ ಒಬ್ಬ ದಕ್ಷ ಆಡಳಿತಗಾರ. ಶೂರ, ಸಾಹಸಿಗ; ರಾಜಕುವರಿಯನ್ನು ಆತ ಬಯಸಿಯೂ ಆಕೆ ತಿರಸ್ಕರಿಸಿದಾಗ ಬಲಾತ್ಕರಿಸದ ಸುಸಂಸ್ಕೃತ ಎನ್ನುವುದು ಕಾದಂಬರಿ ಚಿತ್ರಿಸುವ ಆತನ ವ್ಯಕ್ತಿತ್ವ.

ರಾಜ್ಯವು ಮನೆತನದ ಸ್ವತ್ತಲ್ಲ; ಮಗಳಿಗೂ ಪಟ್ಟವೇರಲು ಹಕ್ಕಿದೆ; ಪೃಥಿವಿ ವೀರ ಭೋಗ್ಯೆ. ಈ ಮೂರೂ ಅಂಶಗಳು ಕೃತಿಯಲ್ಲಿ ಆಗಾಗ ಪ್ರಸ್ತಾಪವಾಗುತ್ತವೆ. ಈ ಮೂರಕ್ಕೂ ಎತ್ತರವಾಗಿ ಅಧಿಕಾರ ಯದುದೇವನಿಗೆ ದೊರಕುತ್ತದೆ. ರಾಜಕುವರಿ ಆತನನ್ನು ಮದುವೆಯಾಗಲು ಬಯಸಿ, ಅಧಿಕಾರವನ್ನು ಅವನಿಗೇ ಒಪ್ಪಿಸಿದ್ದರಿಂದ ಉತ್ತರದಾಯಿತ್ವ ಅವನದಾಗುತ್ತದೆ. ಆತ ಮಾರನಾಯಕನನ್ನು ಸೋಲಿಸಿದ್ದರಿಂದ ಪೃಥಿವಿ ವೀರಭೋಗ್ಯೆ ಎನ್ನುವುದೂ ಸಾಬೀತಾಗುತ್ತದೆ. ಇಲ್ಲಿ ಲೇಖಕರು ಚರಿತ್ರೆಗೆ ಹೊಸವ್ಯಾಖ್ಯಾನ ನೀಡಲು ಪ್ರಯತ್ನಿಸಿರುವಂತೆ ತೋರುತ್ತದೆ. "ಕೀಳ್ಜಾತಿಯ ಆಳೊಬ್ಬನು ಸ್ವಸಾಮರ್ಥ್ಯದಿಂದ ಜೀವನೌನ್ನತ್ಯವನ್ನು ಸಾಧಿಸಲಾಗದೆಂಬ ಜನದ ಮಾತನ್ನೇ ನಾವು ಒಂದು ಪಣವಾಗಿ ಸ್ವೀಕರಿಸಿ ಬಾಳಬಯಸುತ್ತೇವೆ" ಎನ್ನುವ ಮಾರನಾಯಕನ ಮಾತುಗಳು ಲೇಖಕರು ಯುಗಧರ್ಮದ ಹಿನ್ನೆಲೆಯಲ್ಲಿ ಚರಿತ್ರೆಯನ್ನು ವಿಶ್ಲೇಷಿಸಲು ಹೊರಟಿದ್ದಾರೆನ್ನುವುದಕ್ಕೆ ಸಾಕ್ಷಿಯಾಗಿದೆ.

'ಮೊನೆಗಾರ' ಎನ್ನುವುದು ಮೈಸೂರು ಒಡೆಯರ ಇತಿಹಾಸ ಬದಲಾಗಲು ಕಾರಣನಾದ ತಿಮ್ಮರಾಜನ ಬಿರುದುಗಳಲ್ಲೊಂದು. ಆತನಿಗೆ 'ಅಂತೆಂಬರ ಗಂಡ' ಎಂಬ ಬಿರುದೂ ಇತ್ತು. ಕೇವಲ ಮೂವತ್ಮೂರು ಹಳ್ಳಿಗಳನ್ನು ಆಳುತ್ತಿದ್ದ ಮೈಸೂರರಸರು, ವಿಜಯನಗರದರಸರ ಸಾಮರ್ಥ್ಯ ಕ್ಷೀಣಿಸುತ್ತಿದ್ದಂತೆಯೇ ಅಚ್ಯುತರಾಯನ ಕಾಲದಲ್ಲಿ, ತಿಮ್ಮರಾಜನ ಮುಂದಾಳತ್ವದಲ್ಲಿ ರಾಜ್ಯವನ್ನು ವಿಸ್ತರಿಸಿಕೊಂಡು ವಿಜಯನಗರದಿಂದ ಸ್ವತಂತ್ರರಾದರು.

ತಿಮ್ಮರಾಜನು ಯುವರಾಜನಾಗುವುದಕ್ಕೆ ಮೊದಲಿನಿಂದಲೂ ಮತ್ತೊಬ್ಬರ ಅಡಿಯಾಳಾಗಿ ಅಧಿಕಾರ ನಡೆಸುವುದನ್ನು ಇಷ್ಟಪಡುತ್ತಿರಲಿಲ್ಲ ಎನ್ನುವಂತೆ ಚಿತ್ರಿತನಾಗಿದ್ದಾನೆ. ಆತನ ಮಹತ್ವಾಕಾಂಕ್ಷೆಗಳು ಏನೆಂಬುದು ಆತನು ತನ್ನ ತಂದೆ, ತಾತಂದಿರೊಂದಿಗೆ ಆಡುತ್ತಿದ್ದ ಮಾತುಗಳಲ್ಲಿ ವ್ಯಕ್ತವಾಗಿದೆ. ಅವನು ಸ್ವಾತಂತ್ರ್ಯವನ್ನು ಸ್ವೇಚ್ಛೆಯೆಂದು ತಿಳಿದವನಲ್ಲ. ಆದರೆ ಅಡಿಗಡಿಗೆ ಮೇಲಿನವರ ಅನುಮತಿ ಬೇಡುವುದು ಆತನ ಸ್ವಭಾವಕ್ಕೆ

ಒಗ್ಗುವಂಥದಲ್ಲ. ತಿಮ್ಮರಾಜ ಆತನ ತಂದೆಯೊಂದಿಗೆ ಆಡಿದ ಈ ಕೆಳಗಿನ ಮಾತುಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ಎನ್ನುವುದು ಸಾಧ್ಯವಿಲ್ಲದ್ದು ಎಂಬ ಅಭಿಪ್ರಾಯವಿದೆ. "ಮಾನವನ ಮಾತು ಹಾಗಿರಲಿ, ಪ್ರಕೃತಿಶಕ್ತಿಯು ಯಾವುದಕ್ಕೇ ಆದರೂ ಸ್ವಾತಂತ್ರ್ಯವೆಂಬುದೊಂದಿಲ್ಲ. ಒಂದು ಮತ್ತೊಂದರ ಅಂಕೆಯಲ್ಲಿ ಎಲ್ಲವೂ ಬಂದಿಗಳೇ ಆಗಿವೆ." (ಮೊನೆಗಾರ ಪು. ೧೦೪) ಅದಕ್ಕುತ್ತರವಾಗಿ ತಂದೆ ಚಾಮರಾಜ ಹೇಳಿದ ಮಾತುಗಳು ಓದುಗನನ್ನು ಆಲೋಚನೆಗೆ ಪ್ರೇರಿಸುವಂತಿವೆ. "ತನ್ನ ಮನಸ್ಸಿನ ಬಯಕೆಯನ್ನು ಮತ್ತೊಂದು ಶಕ್ತಿಯ ನೆರವಿಲ್ಲದೆ ಸ್ವಶಕ್ತಿಯಿಂದ ಮಾಡಬಹುದಾದುದು ಮತ್ತು ಅನುಭವಿಸಬಹುದಾದುದೇ ಸ್ವಾತಂತ್ರ್ಯ. ಅದಿರುವುದು ವಿಶ್ವದೃಷ್ಟಿಯ ಮಹಚ್ಛಕ್ತಿಗೆ ಮಾತ್ರ . . . . ಮತ್ತೊಬ್ಬರ ಸದ್ಭಾವನೆಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಗೌರವಿಸಿ, ಅದರಲ್ಲಿನ ಕಲ್ಯಾಣಕಾರಕ ಶಕ್ತಿಗೆ ಇಂಬನ್ನು ಕೊಡುವುದೂ ಸ್ವಾತಂತ್ರ್ಯದ ಮತ್ತೊಂದು ಮುಖ ಆಗಿದೆ. (ಅದೇ ಪು. ೧೦೫)

'ಮೊನೆಗಾರ' ಎನ್ನುವ ಬಿರುದಿಗೆ ತಕ್ಕಂತೆ ಆತನ ಶೌರ್ಯ–ಸಾಹಸಗಳು ವ್ಯಕ್ತವಾಗಲು ಕಾರಣವಾದದ್ದು ಸಿಂಧುವಳ್ಳಿಯ ಯುದ್ಧದ ಸನ್ನಿವೇಶ. ತಾವಾಗಿಯೇ ಯಾರನ್ನೂ ಕೆಣಕದ 'ಮಯಿಸೂರರಸರು' ಸುತ್ತಮುತ್ತಲಿನ ಆಳರಸರನ್ನು ಮತ್ತೊಬ್ಬರು ಕೆಣಕಿ, ಅಧಿಕಾರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರೆ ಶಿಕ್ಷಿಸಲು ಹಿಂದೇಟು ಹಾಕುವವರಲ್ಲ ; ರಾಜ್ಯವಿಸ್ತರಿಸಬೇಕೆಂದುಕೊಂಡು ಯಾರನ್ನೂ ಕೆಣಕುವವರೂ ಅಲ್ಲ ಎನ್ನುವುದನ್ನೂ ಈ ಸಂದರ್ಭ ತೋರಿಸಿಕೊಡುತ್ತದೆ. ರಾಜನಾಗುವವನಲ್ಲಿ ಇರಬೇಕಾದ ವಿನಯ, ದಕ್ಷತೆ, ಆತ್ಮಪ್ರತ್ಯಯಗಳನ್ನು ತಿಮ್ಮರಾಜನು ಮೈಗೂಡಿಸಿಕೊಂಡಿದ್ದನೆನ್ನುವುದಕ್ಕೆ ಮಹಾಮಂಡಳಿಕರಾಗಿದ್ದ ವೀರಪ್ಪವೊಡೆಯ ಮತ್ತು ನಾರಯದೇವ ಅರಸು ಅವರೊಂದಿಗಿನ ತಿಮ್ಮರಸನ ಭೇಟಿಯ ಸನ್ನಿವೇಶ ಸಾಕ್ಷಿಯಾಗಿದೆ. ಈ ಎರಡು ಸನ್ನಿವೇಶಗಳಲ್ಲಿಯೂ ತಿಮ್ಮರಾಜನು ತನ್ನ ಪಟ್ಟನ್ನು ಬಿಡದೆ ತಾವು ಕೈಗೊಂಡ ಕಾರ್ಯಕ್ಕೆ ಮಾಂಡಳಿಕರಿಂದ ಅನುಮತಿ ದೊರಕಿಸಿಕೊಳ್ಳುವುದರಲ್ಲಿ ಸಫಲನಾಗುತ್ತಾನೆ. ತಿಮ್ಮರಸನ ವಿನಯ, ವಿದ್ವತ್ತು, ಪ್ರಾಮಾಣಿಕತೆ ಹಾಗೂ ದಕ್ಷತೆಗಳೊಂದಿಗೆ ಆತ್ಮವಿಶ್ವಾಸವೂ ಬೆರೆತು ಆತನ ಕಾರ್ಯ ಸಾಧಿತವಾಗುತ್ತದೆ. ಮಗುವಾಗಿದ್ದಾಗಿನಿಂದಲೇ ಪಟ್ಟುಬಿಡದೆ ಹಠ ಸಾಧಿಸುವುದರಲ್ಲಿ ಆತ ಗಟ್ಟಿಗನಾಗಿದ್ದನೆನ್ನುವುದು ಕೃತಿಯ ಆರಂಭದಲ್ಲಿಯೇ ಸೂಚಿತವಾಗಿದೆ. ಜೊತೆಗೆ ಕೃತಿಯಲ್ಲಿ ಬರುವ ಸನ್ನಿವೇಶಗಳೆಲ್ಲ ಆತನ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುತ್ತವೆ. ಯಾವುದೇ ಕುತಂತ್ರವಿಲ್ಲದೆ, ಸುತ್ತಲಿನ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿ, ಅದರ ಲಾಭವನ್ನು ತನ್ನದಾಗಿಸಿಕೊಳ್ಳುವ ಪ್ರಯತ್ನದಲ್ಲಿ ತಿಮ್ಮರಾಜ ಸಫಲನಾಗುತ್ತಾನೆ. ಅದರಿಂದಾಗಿ ಮೈಸೂರು ತನ್ನ ಗಡಿಯನ್ನು ವಿಸ್ತರಿಸಿಕೊಂಡು ರಾಜಕೀಯವಾಗಿ ತನ್ನನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಚಾರಿತ್ರಿಕ ಕಾದಂಬರಿಗಳಲ್ಲಿ ಯುದ್ಧತಂತ್ರಕ್ಕೆ, ಪಿತೂರಿಗೆ, ಅವುಗಳಿಂದ ತಪ್ಪಿಸಿಕೊಳ್ಳುವ ಚಾಕಚಕ್ಯತೆಗೆ ಹೆಚ್ಚಿನ ಪ್ರಾಧಾನ್ಯವಿರುತ್ತದೆ. ಆದರೆ ರಾಮರಾಯರು ತಮ್ಮ

ಈ ಎರಡೂ ಕೃತಿಗಳಲ್ಲಿ ಅವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿಲ್ಲ. ಬದಲಾಗಿ, ಸಮರ್ಥನಾದ ಆಡಳಿತಗಾರನಾಗಬೇಕಾದರೆ ದಕ್ಷತೆ, ಪ್ರಾಮಾಣಿಕತೆ, ವಿನಯ, ವಿದ್ವತ್ತುಗಳೊಂದಿಗೆ ಪ್ರಜಾವತ್ಸಲನಾಗಿ ಪ್ರಜಾನುರಾಗಿಯೂ ಆಗಿರಬೇಕಾಗುತ್ತದೆ ಎನ್ನುವುದಕ್ಕೆ ಒತ್ತನ್ನು ನೀಡಿದ್ದಾರೆ. ಹಾಗಾಗಿ, ಈ ಎರಡೂ ಕೃತಿಗಳು ರಂಜಕತೆಗಿಂತ ಹೆಚ್ಚಾಗಿ ವಾಸ್ತವತೆಗೆ ತೆರೆದುಕೊಂಡಿವೆ ಎನಿಸುತ್ತದೆ.

ಈಗ್ಗೆ ಒಂದು ವಾರದಿಂದ ನಿಮ್ಮ ಕೋಟೆಮನೆ ನನ್ನ ಪ್ರಯಾಣದ ಆಲಸ್ಯವನ್ನೆಲ್ಲ ಮರೆಸಿದ ಪುಸ್ತಕ. ಕುಂದಾಪುರದಲ್ಲಿ ಬಸ್ಸು ಹತ್ತಿ ಪುಸ್ತಕ ತೆರೆದು ಓದತೊಡಗಿದಂತೆ ಉಡುಪಿ ಬಂದು ಬಿಟ್ಟಿತ್ತು. 'ಇಳಿಯ ಬೇಕು' ಎಂದಾಗ 'ಯಾಕಾದರೂ ಉಡುಪಿ ಇಷ್ಟು ಬೇಗ ಬಂದುಬಿಟ್ಟಿತೋ, ಇನ್ನಷ್ಟು ಪುಟ ಗಳನ್ನು ಓದಬಹುದಿತ್ತು' ಎನ್ನಿಸುವಂತೆ ಮಾಡಿತ್ತು ನಿಮ್ಮ 'ಕೋಟೆಮನೆ'

ಚಿತ್ರವತ್ತಾಗಿ ಕಣ್ಣಿಗೆ ಕಟ್ಟುವಂತೆ, ಮನಕ್ಕೆ ಮುಟ್ಟುವಂತೆ, ಹೃದಯಕ್ಕೆ ನಾಟುವಂತೆ ಸ್ವಾರಸ್ಯ ವಾಗಿಯೂ, ಸರಳವಾಗಿಯೂ ನಿಮ್ಮ ಕತೆಗಳನ್ನು ನಿರೂಪಿಸಿಕೊಂಡು ಹೋಗಿದ್ದೀರಿ.

೧೨–೪–೯೧ ಐರೋಡಿ ಶಂಕರ ನಾರಾಯಣ ಹೆಬ್ಬಾರ್

ಶ್ರೀಕೃಷ್ಣದರ್ಶನ

ಪ್ರೊ || ಡಿ. ಲಿಂಗಯ್ಯ

ಕನ್ನಡದ ಖ್ಯಾತ ಸಾಹಿತಿ ಶ್ರೀ ಸಮೇತನಹಳ್ಳಿ ರಾಮರಾಯರು ಬರೆದಿರುವ 'ಶ್ರೀಕೃಷ್ಣದರ್ಶನ' ಕನ್ನಡದ ಮಹಾ ಕಾದಂಬರಿಗಳಲ್ಲಿ ಒಂದು. ೧೯೭೭ರಲ್ಲಿ ಪ್ರಕಟವಾದ ಈ ಕಾದಂಬರಿ 'ಸಂಕರ್ಷಣಕೋಶ' ಮತ್ತು 'ವಾಸುದೇವಕೋಶ' ಎಂಬ ಎರಡು ಸಂಪುಟಿಗಳಲ್ಲಿ, ಮೂವತ್ತಮೂರು ವಿಕಾಸಗಳಲ್ಲಿ, ಡೆಮ್ಮಿ ಆಕಾರದ ೬೨೭ ಪುಟಗಳಲ್ಲಿ ರೂಪುಗೊಂಡಿದೆ. ಅಧ್ಯಾಯಗಳಿಗೆ 'ವಿಕಾಸ' ಎಂದು ಹೆಸರಿಸಿದೆ. ಪ್ರತಿ ಅಧ್ಯಾಯಕ್ಕೆ ಧ್ವನಿಪೂರ್ಣವಾದ ಸಹಶೀರ್ಷಿಕೆ ನೀಡಿದೆ. ಉದಾ : ಗೋಕುಲ ಸುಧಾಂಶು, ದ್ವಾರಕಾಶಿಲ್ಪಿ, ಧರ್ಮೋದ್ಧರಣ ಇತ್ಯಾದಿ. ಈ ಕಾದಂಬರಿ ಕುವೆಂಪುರವರ ಕಾನೂರು ಹೆಗ್ಗಡಿತಿ, ವಿ.ಕೃ. ಗೋಕಾಕ್‌ರ ಸಮರಸವೇ ಜೀವನ, ಸಿ.ಕೆ. ನಾಗರಾಜರಾಯರ ಪಟ್ಟಮಹಾದೇವಿ ಶಾನ್ತಲದೇವಿ, ಎಸ್. ಎಲ್. ಭೈರಪ್ಪನವರ ಪರ್ವ ಮತ್ತು ತ. ರಾ. ಸು. ಅವರ ದುರ್ಗಾಸ್ತಮಾನ ಕಾದಂಬರಿಗಳ ಸಾಲಿಗೆ ಸೇರುತ್ತದೆ.

'ಶ್ರೀಕೃಷ್ಣದರ್ಶನ' ಪೌರಾಣಿಕ ಕಾದಂಬರಿ. ಶ್ರೀಕೃಷ್ಣ ಇದರ ಕಥಾನಾಯಕ. ನೂರಾರು ಪಾತ್ರಗಳು, ಹಲವಾರು ಘಟನೆಗಳು ಪ್ರಧಾನ ಪಾತ್ರದ ಕಥಾನಕಕ್ಕೆ ಇಂಬಾಗಿ ಮೂಡಿವೆ. 'ಶ್ರೀಕೃಷ್ಣದರ್ಶನ' ಭಾರತೀಯ ಪುರಾಣದ ಪುನರ್‌ಸೃಷ್ಟಿಯಾಗಿದೆ, ಕನ್ನಡದ ಪೌರಾಣಿಕ ಕಾದಂಬರಿಗಳಲ್ಲಿ ಅಗ್ರಸ್ಥಾನ ಪಡೆದಿದೆ ; ಕನ್ನಡದ ಮಹಾ ಕಾದಂಬರಿ ಪರಂಪರೆಯನ್ನು ಮುಂದುವರಿಸುವುದರಲ್ಲಿ ಯಶಸ್ವಿಯಾಗಿದೆ. ಲೇಖಕರ ಮಹತ್ವಾಕಾಂಕ್ಷೆಯ ಗ್ರಂಥವಾಗಿರುವ ಈ ಕಾದಂಬರಿಗೆ ಇಟ್ಟಿರುವ 'ಶ್ರೀಕೃಷ್ಣದರ್ಶನ' ಎಂಬ ಹೆಸರು ಧ್ವನಿಪೂರ್ಣವಾಗಿದೆ. ಶ್ರೀಕೃಷ್ಣ ಲೋಕಕ್ಕೆ ಸಾರಿದ 'ದರ್ಶನ'ವೂ ಅಗ

ಈ ಗ್ರಂಥದ ವಿಷಯವಾಗಿ ಇದು ಪ್ರಕಟವಾದ ಹೊಸದರಲ್ಲಿ ಕರ್ನಾಟಕ ಲೇಖಕರ ಸಂಘದವರು ಒಂದು ವಿಚಾರ ಗೋಷ್ಠಿಯನ್ನು ಶ್ರೀ ತಿರುಮಲೆ ರಂಗಾಚಾರ್ಯರ ಮಹಡಿಯ ಮೇಲೆ ಏರ್ಪಡಿಸಿದ್ದರು. ಆ ವಿಚಾರ ಗೋಷ್ಠಿಯಲ್ಲಿ ಪ್ರೊ || ಡಿ. ಲಿಂಗಯ್ಯನವರು ಮಂಡಿಸಿದ ಲೇಖನ ಇದು. ಅದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಅನುಮತಿಯನ್ನು ಕೊಟ್ಟ ಅವರಿಗೆ ಸಂಪಾದಕ ವರ್ಗ ಕೃತಜ್ಞತೆಯಿಂದ ವಂದನೆಗಳನ್ನು ಅರ್ಪಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ಕಾದಂಬರಿಗಳ ಒಂದು ಸ್ಪರ್ಧೆಯನ್ನು ಭೂಪಾಳಂ ಚಂದ್ರಶೇಖರಯ್ಯನವರ ಹತ್ತಿ ನಿಧಿಯ ಅಂಗವಾಗಿ ೧೯೮೭ರಲ್ಲಿ ಏರ್ಪಡಿಸಿದ್ದಿತು. ಆಗ ಈ ಕಾದಂಬರಿಗೆ ರೂ. ೫೦೦೦ ಗಳ ಪ್ರಥಮ ಬಹುಮಾನ ಲಭಿಸಿತು.—ಸಂ.

ಬಹುದು. ಎರಡೂ ದೃಷ್ಟಿಕೋನಗಳನ್ನೂ ಶೀರ್ಷಿಕೆ ಒಳಗೊಳ್ಳುತ್ತದೆ. ಇದಕ್ಕೆ ಕುವೆಂಪು ರವರ 'ಶ್ರೀ ರಾಮಾಯಣದರ್ಶನಂ' ಶೀರ್ಷಿಕೆ ಸ್ಫೂರ್ತಿ ನೀಡಿರಬಹುದು.

ಸುಮಾರು ಮೂರು ಸಾವಿರದ ಐದು ನೂರು ವರ್ಷಗಳ ಅವಧಿಯಲ್ಲಿ ಮಹಾ ಭಾರತ ಕಥೆ, ಕೃಷ್ಣ ವೃತ್ತಾಂತ ಅಗಾಧವಾಗಿ ಬೆಳೆದಿದೆ. ಈ ಬಗೆಗೆ ದೀರ್ಘಕಾಲದ ಚಿಂತನೆ ನಡೆಸಿ; ಬಹಳ ತಾಳ್ಮೆ ವಹಿಸಿ, ಶ್ರೀ ರಾಮರಾಯರು ಈ ಬೃಹತ್ ಕಾದಂಬರಿ ಯನ್ನು ಬರೆದಿದ್ದಾರೆ. ಕಾದಂಬರಿಯನ್ನು ಅರ್ಥೈಸಿಕೊಳ್ಳಲು ಪ್ರಸ್ತಾವನೆಯ ಈ ಮಾತುಗಳನ್ನು ಗಮನಿಸುವುದು ಅಗತ್ಯ : "ಕೃಷ್ಣನು ತನ್ನ ಮಾನವ ಶಕ್ತಿಯನ್ನೇ ವಿರಾಟ್ ವೈಭವಕ್ಕೆ ಕೊಂಡೊಯ್ದುದನ್ನು, ನನ್ನ ಅಲ್ಪಮತಿ ಕಂಡಂತೆ ಚಿತ್ರಿಸುವುದೇ ಈ ಒಂದು ಸಣ್ಣ ಪ್ರಯತ್ನವಾಗಿದೆ . . . ನನ್ನ ಪ್ರಯತ್ನವೇನಿದ್ದರೂ ಅವನ (ಕೃಷ್ಣನ) ಮಾನವತ್ವದೆಲ್ಲೆಯೊಳಕ್ಕೆ ಮಾತ್ರ ಸೀಮಿತವಾದುದು." ಈ ಹೇಳಿಕೆಯ ಚೌಕಟ್ಟಿನ ಒಳಗೇ ಕಾದಂಬರಿ ಹೆಚ್ಚಾಗಿ ಸಂಚರಿಸುತ್ತದೆ. ಶ್ರೀ ಕೃಷ್ಣ ಪಾತ್ರದ ವೈಶಿಷ್ಟ್ಯವನ್ನು ಲೇಖಕರು ಹೀಗೆ ಗುರುತಿಸಿದ್ದಾರೆ : "ಕೃಷ್ಣನು ಬಾಳಿದ ನೈತಿಕ ಮೌಲ್ಯಗಳು, ಮೆರೆದ ನಿಸ್ವಾರ್ಥದ ವಿಜೃಂಭಣ, ಕಾಯಬಲದ ಮಹೋನ್ನತಿ, ಜೀವನ ಶ್ರದ್ಧೆಯ ಪರಮ ಪ್ರಾಮಾಣಿಕತೆ, ದಕ್ಷತೆಯ ನಿಷ್ಠುರವೆನ್ನಿಸಬಹುದಾದರೂ ಅದರ ಪ್ರಯೋಗ ಪರಿಣತಿ, ನಯದ ಆ ನುಣ್ಪು, ನಡವಳಿಕೆಯ ಆ ದಿವ್ಯ ಪರಿಮಳ ಇವೆಲ್ಲವುಗಳ ಪರಿಣಾಮದ ಫಲವಾದ ಅವನ ಆ ಜೀವನ ಸೌಂದರ್ಯದಿಂದ ನೇರ್ಪಡುವ ಆ ಭವ್ಯ ಪ್ರಭಾವಳಿ ಮುಂತಾದವು ಗಳು ಅನುಕರಣಯೋಗ್ಯವಾದವುಗಳು. ಆತ್ಮಸಂಸ್ಕರಣ ಮಾಡಿಕೊಳ್ಳಬೇಕಾದ ಮುಂದಿನ ಪೀಳಿಗೆಗೆ ಕೃಷ್ಣನ ನಡೆನುಡಿಗಳು ಜೀವನಾವಶ್ಯಕವಾದ ನೆಲ ನೀರು ಗಾಳಿ ಗಳಷ್ಟೇ ಆವಶ್ಯಕವಾದವುಗಳು. ಸಾರ್ಥಕವಾದ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸಿ ಕೊಳ್ಳಬೇಕಾದರೆ, ಅವನ ಮಾನವ ಶಕ್ತಿಯನುಕರಣೆಯ ಛಲ, ಶ್ರದ್ಧೆ ಮತ್ತು ಉತ್ಸಾಹ ಗಳನ್ನು ಮೈಗೂಡಿಸಿಕೊಳ್ಳಬೇಕು . . . (ಶ್ರೀಕೃಷ್ಣ) ತಾನು ಕಂಡ ಜೀವನದ ಮೌಲ್ಯ ಗಳ ಒಂದೊಂದನ್ನೂ ಬದುಕಿ ತೋರಿಸಿದನು ; ಎಲ್ಲರೂ ಹಾಗೆಯೇ ಬದುಕಿ ಸುಖ ಸಂತೋಷಗಳನ್ನು ಸಾಧಿಸಲೆಂದು ತವಕಿಸಿದನು." ಆ ದೃಷ್ಟಿಕೋನದ ಅನಾವರಣವೇ 'ಶ್ರೀ ಕೃಷ್ಣ ದರ್ಶನ' ಕಾಂದಬರಿಯ ಮೂಲ ಸೆಲೆ.

ಶ್ರೀಕೃಷ್ಣದರ್ಶನ ಕಾದಂಬರಿಯಲ್ಲಿ ಯದುಕುಲದ ಕಥೆಯಿದೆ ; ಶ್ರೀಕೃಷ್ಣನ ಸಮಗ್ರ ಬದುಕಿನ ಇತಿಹಾಸವಿದೆ ; ಕ್ರಿ.ಪೂ. ಸುಮಾರು ೧೪೦೦ ವರ್ಷಗಳ ಹಿಂದಿನ ಬದುಕನ್ನು ಇಂದಿನ ಮನೋಧರ್ಮದ ಹಿನ್ನೆಲೆಯಲ್ಲಿ ರಚಿಸಲು ಪ್ರಯತ್ನಿಸಿದೆ. ಭಾರ ತದ ಇತಿಹಾಸದ ದೀರ್ಘ ಕಾಲಾವಧಿಯಲ್ಲಿ ಶ್ರೀಕೃಷ್ಣಕಥೆ ಬೃಹದಾಕಾರವಾಗಿ ಬೆಳೆದಿದೆ. ಶ್ರೀಕೃಷ್ಣನ ಮಾನುಷ ಹಾಗೂ ಅತಿಮಾನುಷ ವ್ಯಕ್ತಿತ್ವ ಇನ್ನಿಲ್ಲದಂತೆ ಭಾರತೀಯ ಸಾಹಿತ್ಯದಲ್ಲಿ ತುಂಬಿದೆ. ಶ್ರೀಕೃಷ್ಣನ ವ್ಯಕ್ತಿತ್ವ ನಾನಾ ರೀತಿಯಲ್ಲಿ, ನಾನಾ ರೂಪದಲ್ಲಿ, ಭಾರತೀಯರ ಮೈ ಮನಗಳನ್ನು ಆವರಿಸಿದೆ. ಭಾರತದ ಹೊರಗೂ ಶ್ರೀಕೃಷ್ಣನ ಪ್ರಭಾವವಿದೆ. ವಿಶ್ವಮಾನವ ಮನಸ್ಸನ್ನು ಸೂರೆಗೊಳ್ಳುವ ವಿಶಿಷ್ಟ ವ್ಯಕ್ತಿತ್ವ ಶ್ರೀಕೃಷ್ಣ

ನದು. ಶ್ರೀಕೃಷ್ಣದರ್ಶನ ಕಾದಂಬರಿಯಲ್ಲಿ ಶ್ರೀಕೃಷ್ಣನ ಮನುಷ್ಯ ಸಹಜ ಸ್ವಭಾವಗಳಿಗೆ ಒತ್ತು ಕೊಟ್ಟಿದೆ. ಮನುಷ್ಯ ತನ್ನ ಜೀವನ ಪರ್ಯಂತ ಕ್ರಿಯಾಶಾಲಿಯಾಗಿದ್ದು ಕೊಂಡು, ನಿಸ್ವಾರ್ಥದಿಂದ ಮನುಕುಲಕ್ಕೆ ಸೇವೆ ಸಲ್ಲಿಸಬಹುದು, ಎಂಬುದಕ್ಕೆ ಶ್ರೀಕೃಷ್ಣಪಾತ್ರ ಸಾಕ್ಷಿಯಾಗಿದೆ. ಮನುಷ್ಯನಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಸದುಪಯೋಗಪಡಿಸಿ ಕೊಂಡು, ವಿವೇಚನೆಯಿಂದ ಬಳಸಿದರೆ ಅದ್ಭುತವಾದ ಕಾರ್ಯಸಾಧನೆ ಮಾಡಬಹುದು ಎಂಬುದನ್ನು ಸಾಬೀತುಗೊಳಿಸುವಂತೆ ಶ್ರೀಕೃಷ್ಣಪಾತ್ರ ಸೃಷ್ಟಿಯಾಗಿದೆ. ಸಕಾಲಿಕ ವಾದರೂ ಸಾರ್ವಕಾಲಿಕವಾಗಬಹುದಾದ ; ನಿರ್ದಿಷ್ಟ ಜನಾಂಗವನ್ನು ಕುರಿತದ್ದಾದರೂ ವಿಶ್ವಜನಾಂಗಕ್ಕೆ ಅನ್ವಯಿಸಬಹುದಾದ; ವಿಶ್ವಮಾನವ ಚೇತನ ಶ್ರೀಕೃಷ್ಣನದು. ಕಾದಂಬರಿಯ ಉದ್ದಕ್ಕೂ ಶ್ರೀಕೃಷ್ಣ ಚೇತನ ಲೀಲಾಜಾಲವಾಗಿ ಹರಿದಿದೆ. ಶ್ರೀಕೃಷ್ಣನ ಸರ್ವವ್ಯಾಪಿತ್ವ ಒಂದಲ್ಲ ಒಂದು ರೀತಿಯಲ್ಲಿ ಅವನ ಕಾಲದ ಎಲ್ಲ ವ್ಯಕ್ತಿಗಳ ಗಮನ ಸೆಳೆದಿದೆ. ಲೇಖಕರು ಅನನ್ಯ ತಾದಾತ್ಮ್ಯದಿಂದ ಶ್ರೀಕೃಷ್ಣ ಪಾತ್ರವನ್ನು ಕಡೆದಿರುವುದು ಕಾದಂಬರಿಯ ಉದ್ದಕ್ಕೂ ನಿಚ್ಚಳವಾಗಿ ಕಾಣುತ್ತಿದೆ. ಶ್ರೀಕೃಷ್ಣನ ಬಹಿರ್ರೂಪ, ಅಂತರಂಗದ ಸ್ವರೂಪ, ಲೌಕಿಕ ಕಾರ್ಯಾಚರಣೆ, ಜ್ಞಾನ ಸಂಪಾದನೆ, ಪರಾಭಕ್ತಿಯ ಆಧ್ಯಾತ್ಮಿಕ ಚಿಂತನೆ–ಎಲ್ಲವೂ ಕ್ರಮವಾಗಿ ಭದ್ರವಾದ ತಳಹದಿಯ ಮೇಲೆ ಮೈದಾಳಿವೆ. ಆ ಯುಗದ ಶ್ರೇಷ್ಠ ದ್ರಷ್ಟಾರರು ತಮ್ಮೆಲ್ಲ ತಪಶ್ಶಕ್ತಿಯನ್ನು, ಅನುಭವವನ್ನು ಕೃಪ ಣತೆಯಿಲ್ಲದೆ ಧಾರಾಳವಾಗಿ ಶ್ರೀಕೃಷ್ಣನಿಗೆ ಧಾರೆಯೆರೆದಿರುವುದು ಅವನ ವಿಶಿಷ್ಟ ವ್ಯಕ್ತಿ ತ್ವಕ್ಕೆ ಸಹಾಯಕವಾಗಿದೆ. ಯುಗಶಕ್ತಿಗಳಿಂದ ತಾನು ಪಡೆದುದನ್ನು ಸಂಚಯಿಸಿ, ರೂಢಿಸಿ, ಅದಕ್ಕೆ ನೂರ್ಮಡಿಯಾಗಿ ಮನುಕುಲಕ್ಕೆ ನೀಡಿ ಸೇವೆ ಸಲ್ಲಿಸಿದ್ದು, ಸ್ವಂತಿಕೆ ಮೆರೆದದ್ದು ಶ್ರೀಕೃಷ್ಣನ ಹೆಚ್ಚುಗಾರಿಕೆಯಾಗಿದೆ.

ಶ್ರೀಕೃಷ್ಣದರ್ಶನ ಕಾದಂಬರಿಯ ಕಥಾನಾಯಕ ಶ್ರೀಕೃಷ್ಣ. ಆದರೆ, ಕಾದಂಬರಿ ಕಥಾನಾಯಕನಿಂದ ಪ್ರಾರಂಭವಾಗಿಲ್ಲ ; ಖಳನಾಯಕ ಎನ್ನಬಹುದಾದ ಕಂಸನ ಹುಟ್ಟಿ ನಿಂದ ಪ್ರಾರಂಭವಾಗಿದೆ. ಯದುಕುಲದ ವಿವರಗಳು ಬಂದಮೇಲೆ ಕಂಸನ ದರ್ಬಾರು ಸಾಕಷ್ಟು ವಿಜೃಂಭಿಸಿದ ಮೇಲೆ ಶ್ರೀಕೃಷ್ಣನ ಜನನದ ಕಥೆ ಮೊದಲಾಗಿದೆ. ಶ್ರೀಕೃಷ್ಣ ಹುಟ್ಟಿದ್ದು, ಉಪಾಯದಿಂದ ಶಿಶುವನ್ನು ಗೋಕುಲಕ್ಕೆ ಸಾಗಿಸಿದ್ದು, ಯಶೋದೆಯ ಮಗನಾಗಿ ಬೆಳೆದದ್ದು, ಗೋಪಾಲಕರನ್ನು ಆಕರ್ಷಿಸಿದ್ದು ಮೊದಲಾದ ಕೃಷ್ಣನ ಬಾಲ್ಯದ ಘಟನೆಗಳು ಪವಾಡಗಳಿಗೆ ಹೊರತಾಗಿ ಸಹಜವಾಗಿ ನಿರೂಪಣೆಯಾಗಿವೆ. ಶ್ರೀಕೃಷ್ಣನ ಬಾಲ್ಯದ ಘಟನೆಗಳು ಮುದ್ದಾಗಿದ್ದು ಪುರಂದರದಾಸರ ಪದ್ಯಗಳನ್ನು ನೆನಪಿಸುತ್ತವೆ. ಪುರಂದರದಾಸರ ಅನಂತರ ಶ್ರೀಕೃಷ್ಣನ ಬಾಲ್ಯದ ಘಟನೆಗಳು ಹೆಚ್ಚಾಗಿ ವರ್ಣನೆಯಾಗು ವುದು ಈ ಕಾದಂಬರಿಯಲ್ಲೇ.

ಶ್ರೀಕೃಷ್ಣ ಘೋರರ್ಷಿಯ ಬಳಿಯಲ್ಲಿ ಹತ್ತು ವರ್ಷ ವಿದ್ಯಾಭ್ಯಾಸ ಮಾಡಿದ ಸಂದರ್ಭ ವಿನೂತನವಾಗಿದೆ. ಉತ್ಥಾನಾಶ್ರಮದ ವರ್ಣನೆ ಬಾಣ ಕಾದಂಬರಿಯ ಆಶ್ರಮ ವರ್ಣನೆಯನ್ನು, ಕಾಳಿದಾಸನ ಕಣ್ವ ಆಶ್ರಮದ ವರ್ಣನೆಯನ್ನು ಜ್ಞಾಪಿಸು

ತ್ತದೆ. ಶ್ರೀಕೃಷ್ಣನ ತೇಜೋಮಯ ವ್ಯಕ್ತಿತ್ವ ಆಶ್ರಮವಾಸಿಗಳಿಗೂ ಆಕರ್ಷಕವಾಗುವುದು ಸೊಗಸಾಗಿದೆ. ಪ್ರಕೃತಿಯ ಚಿತ್ರಗಳು ಹೇರಳವಾಗಿದ್ದು, ಸರಳವಾದ ಉಪಮೆ ಉಪಮಾನಗಳಿಂದ ವರ್ಣನೆಯಾಗಿವೆ. ವಿದ್ಯಾಭ್ಯಾಸದ ಸಂದರ್ಭದಲ್ಲಿ ಶ್ರೀಕೃಷ್ಣ ಆತ್ಮ ರಕ್ಷಣೆಗಾಗಿ ಆನೆಯೊಂದನ್ನು ಕೊಲ್ಲುವ ಪ್ರಸಂಗ ಕಣ್ಣಿಗೆ ಕಟ್ಟುವಂತಿದೆ. ಶ್ರೀಕೃಷ್ಣ ಸುಕುಮಾರ ಚೆಲುವ, ದೇಹದಾರ್ಢ್ಯದಲ್ಲಿ ಅಷ್ಟೇ ಗಟ್ಟಿಗ. ಅವನ ಮನಸ್ಸು ಅನುಕಂಪೆಯಿಂದ ಕೂಡಿದ್ದು, ನಿರ್ಧಾರ ಅಚಲವಾದದ್ದು. ಸರಿಯೆನಿಸಿದ್ದನ್ನು ಸಾಧಿಸುವ ಪಟ್ಟು ಅವನದು. ಕೃಷ್ಣ ಕಲಿಯೂ ಹೌದು, ಕಮನೀಯನೂ ಹೌದು, ಸಾಧಾರಣನೂ ಹೌದು, ಅಸಾಧಾರಣನೂ ಹೌದು.

ಯದುಕುಲದ ಕಥೆಗೆ ಸಮಾನಾಂತರವಾಗಿ ಕುರುಕುಲದ ಕಥೆ ವರ್ಣನೆಯಾಗಿದೆ. ಪಾಂಡವರ ಹುಟ್ಟಿನ ಬಗೆಗೆ ಕೆದಕಲು ಲೇಖಕರು ಪ್ರಯತ್ನಿಸಿದ್ದಾರೆ. ಸಹಜವಾಗಿಯೇ ಈ ನಿರೂಪಣೆ ಮಾಮೂಲಿಗಿಂತ ಭಿನ್ನ ಭಿನ್ನವಾಗಿದೆ. ಶತಶೃಂಗಾದ್ರಿಯಲ್ಲಿದ್ದಾಗ ಕುಂತಿ ವಿದುರನೊಡನೆ ಕೂಡಿ, ಯುಧಿಷ್ಠಿರನನ್ನೂ ಋಷಿಯೊಬ್ಬನೊಡನೆ ಕೂಡಿ, ಭೀಮನನ್ನೂ, ನರನೆಂಬ ಮುನಿಯಿಂದ ಅರ್ಜುನನನ್ನು ಮಕ್ಕಳನ್ನಾಗಿ ಪಡೆದ ವರ್ಣನೆ ಇದೆ. ಈ ಬದಲಾವಣೆ ಹಲವು ಅನುಮಾನಗಳಿಗೆ ಎಡೆ ಮಾಡುತ್ತದೆ. ಇದಕ್ಕೆ ಸಮರ್ಥನೆ ಇದೆಯೋ, ಇಲ್ಲವೋ ಗೊತ್ತಿಲ್ಲ. ಪಾಂಡವರ ಹುಟ್ಟಿನ ಪ್ರಸಂಗದ ವರ್ಣನೆ ಎಸ್.ಎಲ್. ಭೈರಪ್ಪನವರ "ಪರ್ವ" ಕಾದಂಬರಿಯನ್ನು ಗಮನಿಸುವಂತೆ ಮಾಡುತ್ತದೆ. ಕುಂತಿ ದೇವಿ ಯದುಕುಲದವಳಾದುದರಿಂದ ಕಾಲಕ್ರಮದಲ್ಲಿ ಪಾಂಡವರ ಹಾಗೂ ಯದುವಂಶದವರ ಮುಖ್ಯವಾಗಿ ಶ್ರೀಕೃಷ್ಣನ ಸಂಬಂಧ ಗರಿಗಟ್ಟಿಕೊಳ್ಳಲು ಸಹಾಯವಾಗುತ್ತದೆ.

ಶ್ರೀಕೃಷ್ಣ ಯದುಕುಲದ ರಕ್ಷಕನಾಗಿ ಕೈಗೊಂಡ ಕಾರ್ಯಗಳು ಕ್ರಿಯಾಶಾಲಿಯಾಗಿವೆ. ಕಾಲಿಂದಿಯಲ್ಲಿದ್ದ ಸರ್ಪವನ್ನು ಕೊಂದು ಕಾಲಿಂದಿಯನ್ನು ಜನರು ಬಳಸಲು ಸಹಾಯ ಮಾಡುತ್ತಾನೆ. ದುಷ್ಟ ಕಂಸನನ್ನು ಸಂಹಾರ ಮಾಡಿ ಯದು ಕುಲದ ಭಯವನ್ನು ನಿವಾರಿಸುತ್ತಾನೆ. ಹೊಸದಾಗಿ ದ್ವಾರಕಾ ನಗರವನ್ನು ನಿರ್ಮಿಸಿ ಯದುವಂಶದ ರಕ್ಷಕನಾಗುತ್ತಾನೆ. ಯುದ್ಧದಲ್ಲಿ ಹಲವು ರಾಜರನ್ನು ರಾಜ್ಯಗಳನ್ನೂ ಗೆದ್ದರೂ ತಾನು ಅಧಿಕಾರಕ್ಕೆ ಆಸೆ ಪಡುವುದಿಲ್ಲ. ರುಕ್ಮಿಣಿಯನ್ನು ಅಪಹರಿಸಿ, ಬಂದ ಅಡ್ಡಿಗಳನ್ನು ನಿವಾರಿಸಿ, ವೀರಕ್ಷತ್ರಿಯ ಎನ್ನಿಸಿಕೊಳ್ಳುತ್ತಾನೆ. ನಂಬಿದವರಿಗೆ, ಹಿರಿಯರಿಗೆ ಮುದವನ್ನು ತರುತ್ತಾನೆ. ಪಾಂಡವರು ಇಂದ್ರಪ್ರಸ್ಥ ನಗರವನ್ನು ನಿರ್ಮಾಣ ಮಾಡಲು ಸೂಚನೆ ನೀಡುತ್ತಾನೆ. ಅರ್ಜುನನೊಡನೆ ಸೇರಿ ಖಾಂಡವ ದಹನ ಮಾಡಿ, ಅದರಿಂದ ಉಂಟಾಗಿದ್ದ ತೊಂದರೆಗಳನ್ನು ಪರಿಹರಿಸುತ್ತಾನೆ. ಯದುಕುಲಕ್ಕೆ ಮಾರಕರಾಗಿದ್ದ ಅನೇಕರನ್ನು ಬಗ್ಗುಬಡಿಯುತ್ತಾನೆ. ಆ ಮೂಲಕ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ನೀತಿಯನ್ನು ಪರಿಪಾಲಿಸುತ್ತಾನೆ. ಯದುಕುಲ ಹಾಗೂ ಕುರುಕುಲಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಬಗೆಹರಿಸುತ್ತಾನೆ.

ಕುರುಕ್ಷೇತ್ರ ಮಹಾ ಸಂಗ್ರಾಮ, ಶ್ರೀ ಕೃಷ್ಣ ಭಾಗವಹಿಸಿದ ದೊಡ್ಡ ಪ್ರಸಂಗ.

ಈ ಯುದ್ಧದಲ್ಲಿ ಶ್ರೀಕೃಷ್ಣ ವಹಿಸಿದ ಪಾತ್ರದ ಬಗೆಗೆ ಟೀಕೆ, ಅನುಮಾನ ಇರಬಹುದು. ಆದರೆ, ಅವನು ಧರ್ಮಸಮ್ಮತವಾಗಿ ನಡೆದುಕೊಂಡನೆಂದು ಬಹುಮತದ ಅಭಿಪ್ರಾಯವಾಗಿದೆ. ಕುರುಕ್ಷೇತ್ರ ಯುದ್ಧದ ಆರಂಭದಿಂದ ಮುಕ್ತಾಯದವರೆಗೆ ಶ್ರೀಕೃಷ್ಣನ ಪಾತ್ರವಿದೆ. ಯುದ್ಧ ವರ್ಣನೆ ಬೇಸರ ಮೂಡಿಸದಂತೆ ಲವಲವಿಕೆಯಿಂದ ಮೂಡಿದೆ. ಈ ಭಾಗ ಕುಮಾರವ್ಯಾಸ ಭಾರತದ ಅಂಚಿನಲ್ಲೇ ಸಾಗಿದೆ. ಇಲ್ಲಿ ಸಣ್ಣಪುಟ್ಟ ಅನುಮಾನಗಳಿಗೂ ಅವಕಾಶ ಉಂಟು. ಸಂಧಿಗೆ ಬಂದ ಶ್ರೀ ಕೃಷ್ಣ ಪ್ರತ್ಯೇಕವಾಗಿ ಕರ್ಣನಿಗೆ ಜನ್ಮ ವೃತ್ತಾಂತ ತಿಳಿಸುತ್ತಾನೆ. ಈ ವಿಷಯ ಆಗಲೇ ಕರ್ಣನಿಗೆ ತಿಳಿದಿರುತ್ತದೆ ! ಇದು ಯಾರಿಂದ ಅವನಿಗೆ ತಿಳಿಯಿತು ಎಂಬುದರ ಬಗೆಗೆ ಮಾಹಿತಿ ಇಲ್ಲ. ಕುಂತಿ ಬಂದು ಕರ್ಣನನ್ನು ಭೇಟಿಯಾಗುತ್ತಾಳೆ ಎಂದು ಕೃಷ್ಣ ಹೇಳುತ್ತಾನೆ. ಆದರೆ. ಕುಂತಿ ಕರ್ಣರ ಸಂದರ್ಶನ ಆಗುವುದಿಲ್ಲ. ಸಂದರ್ಶಿಸಿದ ಬಗೆಗೆ ಮುಂದೆ ಎಲ್ಲಿಯೂ ಸೂಚನೆ ಇಲ್ಲ. ಕರ್ಣನಿಗೆ ಸರ್ಪಾಸ್ತ್ರ ಹೇಗೆ ದೊರಕಿತು ಎಂಬ ವಿಷಯಕ್ಕೆ ಸ್ಪಷ್ಟನೆ ಇಲ್ಲ. ಇಲ್ಲಿನ ಖಾಂಡವ ದಹನ ಪ್ರಸಂಗದಲ್ಲಿ ಸರ್ಪದ ಪ್ರಸ್ತಾಪವಿಲ್ಲ. ಅರ್ಜುನನಿಗೆ ಅಂಜಲಿಕಾಸ್ತ್ರ ದೊರಕಿದ ವಿಷಯವೂ ಅಸ್ಪಷ್ಟವಾಗಿದೆ. ಕುರುಕ್ಷೇತ್ರ ಯುದ್ಧದಲ್ಲಿ ಬಳಕೆಯಾಗುವ ಅಸ್ತ್ರಗಳು ಮೂಲದ ಹೆಸರುಗಳನ್ನು ಉಳಿಸಿಕೊಂಡಿವೆ.

ಕುರುಕ್ಷೇತ್ರ ಯುದ್ಧದ ಅನಂತರ ಶ್ರೀಕೃಷ್ಣನ ಬದುಕು ಸಂಪೂರ್ಣವಾಗಿ ಬದಲಾಗುತ್ತದೆ. ತಾನು ಕಂಡುಕೊಂಡ ಭಕ್ತಿ ಮಾರ್ಗದ ಆಚರಣೆ, ಪ್ರಚಾರ, ಪ್ರಸಾರಗಳಲ್ಲಿ ಮಗ್ನನಾಗುತ್ತಾನೆ. ಕುರುಕ್ಷೇತ್ರ ಯುದ್ಧವಾದ ಮೇಲೆ ಭರತ ಭೂಮಿಯಲ್ಲಿ ಸುಖೀ ರಾಜ್ಯ ಬಂದುದನ್ನು ಕಂಡು ಸಂತೋಷಿಸುತ್ತಾನೆ. ಶ್ರೀಕೃಷ್ಣನ ಕನಸು ನನಸಾಗಲು ಪಾಂಡವರ ಸಮರ್ಥ ರಾಜ್ಯಭಾರವೂ ಕಾರಣವಾಗುತ್ತದೆ. ಆದರೆ, ಶ್ರೀಕೃಷ್ಣ ಇದ್ದ ದ್ವಾರಕೆಯಲ್ಲಿ ಪರಿಸ್ಥಿತಿ ಕೆಡುತ್ತದೆ. ಶ್ರೀಕೃಷ್ಣನ ಅಭ್ಯುದಯ ಯದುಕುಲದವರಿಗೆ ಕಿಸುರಾಗುತ್ತದೆ. ಸಾಮಾನ್ಯರು ಕೃಷ್ಣನಾಗಲು ಹವಣಿಸುತ್ತಾರೆ. ಮದ್ಯಪಾನ, ಸ್ವೇಚ್ಛಾ ಜೀವನ ಮೊದಲಾದ ದುರ್ವ್ಯಸನಗಳಿಗೆ ತುತ್ತಾಗಿ ಅಂತಃಕಲಹಕ್ಕೆ ತೊಡಗುತ್ತಾರೆ. ಅಕ್ರೂರ, ಆಹುಕರು ಮುಖಂಡರಾದ ಎರಡು ಬಣಗಳು ಹುಟ್ಟಿಕೊಳ್ಳುತ್ತವೆ. ಒಮ್ಮೆ ವಿಹಾರ ಯಾತ್ರೆಗೆಂದು ಪ್ರಭಾಸ ಸಮುದ್ರ ತೀರಕ್ಕೆ ಹೋದ ಯದುಕುಲದವರೆಲ್ಲ ಮಿತಿಮೀರಿ ಮದ್ಯಪಾನ ಮಾಡಿ, ಮನುಷ್ಯತ್ವ ಕಳೆದುಕೊಂಡು ಮೃಗಗಳಂತೆ ವರ್ತಿಸಿ ಪರಸ್ಪರ ಕಾದಾಡಿ ಸಾಯುತ್ತಾರೆ. ಇದನ್ನು ಕಣ್ಣಾರೆ ಕಂಡ ಶ್ರೀಕೃಷ್ಣ ಆಯಾಸದಿಂದ, ಯೋಗನಿದ್ರೆಯಲ್ಲಿ ಮೈಮರೆಯುತ್ತಾನೆ. ಮಲಗಿದ್ದವನು ಶ್ರೀಕೃಷ್ಣ ಎಂದು ಅರಿಯದೆ ಮೃಗವೆಂದು ಭಾವಿಸಿ ಬೇಡನೊಬ್ಬ ಬಾಣಪ್ರಯೋಗಮಾಡಿ ಕೊಲ್ಲುತ್ತಾನೆ. ಶ್ರೀಕೃಷ್ಣನ ಅಂತ್ಯ ಹೀಗಾಗುತ್ತದೆ. ಕಾದಂಬರಿಯ ಅಂತ್ಯವೂ ಇದಾಗಿದೆ. ಕಾದಂಬರಿಯ ಕೊನೆಯ ಅಧ್ಯಾಯ ಯದುಕುಲದ ಕಲಹಕ್ಕೆ, ನಾಶಕ್ಕೆ ಮೀಸಲಾಗಿದೆ.

ಯದುಕುಲದ ಅಂತಃಕಲಹಕ್ಕೆ, ನಾಶಕ್ಕೆ ಸ್ಪಷ್ಟವಾದ ಕಾರಣವಿಲ್ಲ. ಪ್ರಪಂಚಕ್ಕೆಲ್ಲ ಬೆಳಕು ನೀಡಿದ ಶ್ರೀಕೃಷ್ಣ ತತ್ತ್ವ ಯದುಕುಲಕ್ಕೆ ಏಕೆ ಬೆಳಕು ನೀಡಲಿಲ್ಲ ? ಕುರುಕ್ಷೇತ್ರದ

ಭಯಂಕರ ಯುದ್ಧ, ಅದರ ಗಂಭೀರವಾದ ದುಷ್ಪರಿಣಾಮ ಇದಕ್ಕೆ ಉತ್ತರ ನೀಡ ಬಹುದೇನೋ ! ಕುರುಕ್ಷೇತ್ರ ಯುದ್ಧದ ಅನಂತರದ ಸುಮಾರು ನಲವತ್ತು ವರ್ಷಗಳ ವರ್ಣನೆ ಕಾದಂಬರಿಯ ಕೊನೆಯ ಅಧ್ಯಾಯದಲ್ಲಿ ಮಾತ್ರ ಬಂದಿದೆ. ಇದು ಶ್ರೀಕೃಷ್ಣನ ಮುಪ್ಪಿನ ಸಮಯ. ಶ್ರೀಕೃಷ್ಣನ ಬಾಲ್ಯದ ವಿಷಯಗಳನ್ನು ವಿವರವಾಗಿ ಜೀವಂತವಾಗಿ ನಿರೂಪಿಸಿದ ಲೇಖಕರು ವಯೋವೃದ್ಧ ಶ್ರೀಕೃಷ್ಣನ ಜೀವಿತಕಾಲದ ವಿಷಯಗಳನ್ನು ಮೊಟಕುಗೊಳಿಸಿರುವಂತೆ ಭಾಸವಾಗುತ್ತದೆ. ಈ ಹಂತದ ವರ್ಣನೆಗೆ ಕಾಲಗರ್ಭದಲ್ಲಿ ಇನ್ನಷ್ಟು ಮಾಹಿತಿ ದೊರಕಬಹುದೇನೋ !

ಕಾದಂಬರಿಯ ಹಲವು ಹತ್ತು ಸಂದರ್ಭಗಳಲ್ಲಿ ಶ್ರೀಕೃಷ್ಣನ ಹಿಮಾಲಯ ಸದೃಶ ವ್ಯಕ್ತಿತ್ವ ಎದ್ದು ಕಾಣುತ್ತದೆ. ಮಹಾಕವಿ ಕುಮಾರವ್ಯಾಸ ಕಂಡರಿಸಿರುವ ಶ್ರೀಕೃಷ್ಣ ಪಾತ್ರದ ತಳಹದಿ ಅತಿಮಾನುಷ ವ್ಯಕ್ತಿತ್ವದ್ದು. ಶ್ರೀ ರಾಮರಾಯರು ಕಂಡರಿಸಿರುವ ಶ್ರೀಕೃಷ್ಣ ಪಾತ್ರದ ತಳಹದಿ ಮಾನುಷ ವ್ಯಕ್ತಿತ್ವದ್ದು. ಅತಿಮಾನುಷ ವ್ಯಕ್ತಿತ್ವದ ಸೋಂಕು ಇಲ್ಲದಿದ್ದರೂ ಸಾಮಾನ್ಯವಾದ ಮನುಷ್ಯ ಸಹಜವಾದ ವ್ಯಕ್ತಿತ್ವದಿಂದಲೂ ಶ್ರೀಕೃಷ್ಣನ ಪಾತ್ರ ವಿಜೃಂಭಿಸಬಲ್ಲುದು ಎಂಬುದನ್ನು ಲೇಖಕರು ತೋರಿಸಿದ್ದಾರೆ. ಶ್ರೀಕೃಷ್ಣನ ಪಾತ್ರ ಕಡೆಯಲು ಲೇಖಕರು ಭಾರತೀಯ ಪೌರಾಣಿಕ ಸಾಹಿತ್ಯವನ್ನು ಹೇರಳವಾಗಿ ಬಳಸಿಕೊಂಡಿದ್ದಾರೆ. ಆರ್ಯರ ಪ್ರತಿರೂಪವಾಗಿ ಶ್ರೀಕೃಷ್ಣನ ಪಾತ್ರ ಸೃಷ್ಟಿಯಾಗಿದೆ.

ಕಾದಂಬರಿಯಲ್ಲಿ ಶ್ರೀಕೃಷ್ಣ ನಾಯಕ ಪಾತ್ರವಾದರೂ ಉಪನಾಯಕ. ಖಳ ನಾಯಕ ಪಾತ್ರಗಳೂ ಹಲವಾರಿವೆ. ಪುರಾಣ ಕಾಲದ ನೂರಾರು ಪಾತ್ರಗಳು ಮರು ಹುಟ್ಟು ಪಡೆದಿವೆ. ಕೆಲವು ಸಣ್ಣ ಪುಟ್ಟ ಪಾತ್ರಗಳನ್ನು ಕಲ್ಪಿಸಿಕೊಂಡಿರುವ ಸಾಹಿತ್ಯವೂ ಇದೆ. ಇಡೀ ಕಾದಂಬರಿಯಲ್ಲಿ ಯಾವ ಪಾತ್ರಕ್ಕೂ ನಾಯಿಕೆಯ ಪಟ್ಟ ದಕ್ಕುವುದಿಲ್ಲ. ಶ್ರೀಕೃಷ್ಣನ ಒಬ್ಬಳೇ ಹೆಂಡತಿಯಾದ ರುಕ್ಮಿಣಿಯ ಪಾತ್ರವೂ ನಾಯಿಕೆ ಎನ್ನಿಸಿಕೊಳ್ಳು ವುದಿಲ್ಲ. ಈ ಪಾತ್ರ ಇನ್ನಷ್ಟು ತುಂಬಿಕೊಳ್ಳಲು ಮುಂದಿನ ಲೇಖಕರು ಪ್ರಯತ್ನಿಸಬಹು ದೇನೋ ! ಶ್ರೀ ರಾಮರಾಯರು ಕಟ್ಟಿರುವ ಕೃಷ್ಣ ಕಥೆಯಲ್ಲಿ ಶ್ರೀಕೃಷ್ಣನೇ ಅಖಂಡ ನಾಯಕ. ಉಳಿದ ಪಾತ್ರಗಳು ಕೃಷ್ಣ ಪಾತ್ರದಷ್ಟು ಪುಷ್ಟಿಗೊಂಡಿಲ್ಲ, ಅಥವಾ ಒಟ್ಟು ಕಾದಂಬರಿಯ ಹಂದರದ ಹಿನ್ನೆಲೆಯಲ್ಲಿ ಅದರ ಅಗತ್ಯವೂ ಇಲ್ಲ. ಆದರೆ, ಮನಸ್ಸನ್ನು ತುಂಬುವ ಹಲವು ಪಾತ್ರಗಳು ನಿರ್ಮಾಣವಾಗಿವೆ.

ಪುರಾಣ ಕಲ್ಪನೆಗಿಂತ ಕೆಲವು ಪಾತ್ರಗಳ, ಘಟನೆಗಳ ಸೃಷ್ಟಿ ಭಿನ್ನವಾಗಿದೆ. ಇಲ್ಲಿನ ಸುಭದ್ರೆ ನೇರವಾಗಿ ಕೃಷ್ಣನ ತಂಗಿಯಲ್ಲ ; ಬಲರಾಮನ ಒಡಹುಟ್ಟಿದವಳು. ಕೃಷ್ಣ ಶಿಶು ವಿನ ಸ್ಥಳಾಂತರ, ಕಂಸವಧೆ, ಸುಭದ್ರೆಯ ಮದುವೆ ಮೊದಲಾದ ಘಟನೆಗಳು ಪರಿವರ್ತನ ರೂಪದಲ್ಲಿ ಸೃಷ್ಟಿಯಾಗಿವೆ. ಯಜ್ಞಸೇನನ ಮೊದಲ ಮಗ ಶಿಖಂಡಿ ಹೆಣ್ಣಾಗಿ ಹುಟ್ಟಿ, ಲಿಂಗಪರಿವರ್ತನೆಯಿಂದ ಗಂಡಾದ. ಹೀಗಾಗಿ ನಪುಂಸಕ. ಈ ಕಲ್ಪನೆಯಲ್ಲಿ ಲೇಖಕರ ಆಧುನಿಕ ಮನಸ್ಸು ಕೆಲಸ ಮಾಡಿದೆ. ದ್ರೌಪದಿಯ ಮಾನರಕ್ಷಣೆಗಾಗಿ ಗಾಂಧಾರಿ ತನ್ನ ಕಣ್ಣು ಪಟ್ಟಿ ಬಿಚ್ಚಿ ಸಭೆಗೆ ಓಡಿಬರುತ್ತಾಳೆ. ಗದಾ ಯುದ್ಧದಲ್ಲಿ ದುರ್ಯೋಧನನ ತೊಡೆ

ಜ್ಞಾಪಕ ಬರುವಂತೆ ತನ್ನ ತೊಡೆ ತಟ್ಟಿ ಸೂಚನೆ ಕೊಟ್ಟವನು ಅರ್ಜುನ ; ಕೃಷ್ಣನಲ್ಲ! ಇಂತಹ ಅನೇಕ ಉದಾಹರಣೆಗಳು ಕಾದಂಬರಿಯಲ್ಲಿ ಸಿಗುತ್ತವೆ. ಪುರಾಣದಲ್ಲಿದ್ದ ಅತಿ ಮಾನುಷ ಎನ್ನಬಹುದಾದ ಘಟನೆಗಳನ್ನು ಕೈಬಿಟ್ಟಿದೆ ಅಥವಾ ಇಂದಿನ ಮನೋಧರ್ಮಕ್ಕೆ ಒಗ್ಗುವಂತೆ ಬದಲಾಯಿಸಿ ಪುರಾಣ ವಸ್ತುವನ್ನು ಆಧುನಿಕ ದೃಷ್ಟಿಕೋನದಿಂದ ಪುನರ್ ಸೃಷ್ಟಿಸುವಾಗ ಇದು ಅನಿವಾರ್ಯ.

ಕಾದಂಬರಿಯ ಕೆಲವು ಪ್ರಸಂಗಗಳು ಭಿನ್ನಾಭಿಪ್ರಾಯಕ್ಕೆ ಎಡೆ ಮಾಡುತ್ತವೆ. ಉಗ್ರಸೇನ ನಿರ್ವೀರ್ಯನಲ್ಲವಾದರೂ ಜಯಭದ್ರೆ ಮತ್ತು ದ್ರುಮಿಲ ಕೂಡಿ ಕಂಸನನ್ನು ಮಗನನ್ನಾಗಿ ಪಡೆಯುವುದು ಸಮಸ್ಯಾತ್ಮಕವಾಗಿದೆ. ಜಯಭದ್ರೆ ಮತ್ತು ದ್ರುಮಿಲರ ಕೂಡುವಿಕೆಗೆ ಇಂಬಾಗುವ ಸಂದರ್ಭಗಳು ಸಮರ್ಥನೀಯವಾಗಿ, ಸಾಧುವಾಗಿ ನಿರೂಪ ಗೊಂಡಿಲ್ಲ. ಮಕ್ಕಳಿಗಾಗಿ ಕುಂತಿದೇವಿ ವಿದುರನನ್ನು ಕೂಡಿದ ಕಲ್ಪನೆ ವಿದುರನ ಪಾತ್ರದ ಮಹತ್ವಕ್ಕೆ ಕುಂದು ತರುವ ವಾಸನೆ ಇದೆ. ಪಾಂಡವರ ಹುಟ್ಟಿನ ಪ್ರಸಂಗವನ್ನು ಕೆದಕುವ ಅಗತ್ಯವಿರಲಿಲ್ಲವೇನೋ ಅನ್ನಿಸುತ್ತದೆ. ಯಾಕೆಂದರೆ, ಪಾಂಡು ರೋಗಿಷ್ಠನಾದರೂ ನಪುಂಸಕನಾಗಿರಲಿಲ್ಲ. ಹಾಗಿದ್ದಿದ್ದರೆ ಬೇಟೆಯಾಡುವುದಕ್ಕೆ ರಾಜ್ಯವಾಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಪ್ರಕೃತಿ ಸಾನ್ನಿಧ್ಯದ ಶುಶ್ರೂಷೆಯಿಂದ ಆರೋಗ್ಯ ಸುಧಾರಿಸಬಾರದೇಕೆ? ಐವರಿಗೆ ಹೆಂಡತಿಯಾಗುವ ಸಂದರ್ಭವನ್ನು ಕುರಿತು ರುಕ್ಮಿಣಿ ಮತ್ತು ದ್ರೌಪದಿಯರಲ್ಲಿ ನಡೆಯುವ ಸಂಭಾಷಣೆ ಚುರುಕಾಗಿದೆ. ಆದರೆ, ದ್ರೌಪದಿಯ ಪಾತ್ರದ ಘನತೆಗೆ ಧಕ್ಕೆ ಬರುವಂತಿದೆ. ಇದು ಗುಂಭವಾಗಿದ್ದರೇ ಚೆನ್ನಾಗಿತ್ತು. ಅರ್ಜುನ ಸುಭದ್ರೆಯನ್ನು ಅಪಹರಿಸಿದ್ದನ್ನು ಕೃಷ್ಣ ಬಲರಾಮನ ಮುಂದೆ ಸಮರ್ಥಿಸುವುದು ಲಾಘವವಾಗಿದೆ. ಪ್ರಾಚೀನ ಸಮಾಜದ ಪದ್ಧತಿಗಳಾದರೂ ಇಂದು ಮೆಲುಕು ಹಾಕುವುದು ಕಷ್ಟವಾಗುತ್ತದೆ.

'ಶ್ರೀಕೃಷ್ಣದರ್ಶನ' ಪೌರಾಣಿಕ ಕಾದಂಬರಿ ; ಸಾವಿರಾರು ವರ್ಷಗಳ ಹಿಂದೆ ನಡೆದ ಕಥೆ. ಹಿಂದಿನ ಪೌರಾಣಿಕ ಪರಿಸರ ಕಲಿಸಲು ಲೇಖಕರು ಹೊಸಶೈಲಿ ಸೃಷ್ಟಿಸಲು ಪ್ರಯತ್ನಿಸಿದ್ದಾರೆ. ಕಥಾನಕದ ಭಾಷೆ ಆಧುನಿಕವಾದರೂ ಪ್ರಾಚೀನ ಕಲ್ಪನೆ ಹುಟ್ಟಿಸಲು ಶ್ರಮಿಸಿದ್ದಾರೆ. ಒಟ್ಟಾರೆ ಇವರದು ಸಂಸ್ಕೃತಭೂಯಿಷ್ಠ ಶೈಲಿ. ಪೌರಾಣಿಕ ಕಾದಂಬರಿಗೆ ಒಗ್ಗುವ ಪದಗಳನ್ನು ಹೇರಳವಾಗಿ ಬಳಸಿದೆ.

ಶ್ರೀ ರಾಮರಾಯರ ಕವಿ ಮನೋಧರ್ಮ ಶ್ರೀಕೃಷ್ಣದರ್ಶನದಲ್ಲೂ ಕಾಣಿಸಿಕೊಂಡಿದೆ. ತಮ್ಮ ಶಾಕುಂತಲ ಕಾವ್ಯದ ಗುಂಗಿನಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಆಗಿಲ್ಲ. ಗದ್ಯ ಕಾದಂಬರಿಯಲ್ಲಿ ಪದ್ಯದ ಶೈಲಿಯಿದೆ. ವಾಕ್ಯಗಳ ನಡುವೆ ಅಲ್ಲಲ್ಲಿ ಪದ್ಯ ಬಂಧಗಳು ನುಸುಳಿವೆ. ಕಾದಂಬರಿ ಪೂರ್ವಾರ್ಧದಲ್ಲಿ ಇಂಥ ಪ್ರಯೋಗಗಳು ಹೆಚ್ಚು. ಇದಕ್ಕೆ ಎರಡು ಕಾರಣಗಳಿರಬಹುದು. ಒಂದು ಇದು ಪೌರಾಣಿಕ ಕಾದಂಬರಿ ಎಂಬುದನ್ನು ಸ್ಥಿರಗೊಳಿಸುವುದು. ಎರಡು ಲೇಖಕರ ಕವಿ ಮನೋಧರ್ಮ ಮರೆಯಾಗದೇ ಇರುವುದು. ಈ ಶೈಲಿಯಿಂದ ಅಲ್ಲಲ್ಲಿ ಗದ್ಯದ ಓದಿಗೆ ತಡೆಯಾಗುತ್ತದೆ. ಕಾದಂಬರಿಯ

ಉತ್ತರಾರ್ಧದಲ್ಲಿ ಈ ಸಮಸ್ಯೆ ಇಲ್ಲ. ಕೆಂಪು ನಾರಾಯಣ ತನ್ನ ಮುದ್ರಾಮಂಜೂಷ ಗ್ರಂಥದಲ್ಲಿ ಹಳೆಯ ಶೈಲಿಗೆ ಅಂದಿನ ಹೊಸ ರೂಪ ತೊಡಿಸಿದ್ದಾನೆ : ಆದರೆ, ಶ್ರೀ ರಾಯರಾಯರು ಆಧುನಿಕ ಶೈಲಿಗೆ ಹಿಂದಿನ ರೂಪ ತೊಡಿಸಿದ್ದಾರೆ.

ಶ್ರೀಕೃಷ್ಣದರ್ಶನ ಕಾದಂಬರಿಯಲ್ಲಿ ಹೇರಳವಾಗಿ ಪ್ರಕೃತಿ ವರ್ಣನೆ ಇದೆ. ಗೋವುಗಳ ವರ್ಣನೆ, ವಿವಿಧ ಮದ್ಯ, ಮಾಂಸಾನ್ನ, ಭಕ್ಷ್ಯ ಭೋಜ್ಯಗಳ ವರ್ಣನೆ ಆಕರ್ಷಕವಾಗಿದೆ. ಸಂಭಾಷಣೆಗಳು ಚುರುಕಾಗಿವೆ. ಆಚಾರ ವಿಚಾರ, ಹೋಮ ಹವನ, ಯಾಗ ಮೊದಲಾದ ಸಂಪ್ರದಾಯ ಸಂಸ್ಕೃತಿಗಳ ವರ್ಣನೆ ಸಾಂಪ್ರದಾಯಿಕವಾಗಿವೆ. ಭಾರತೀಯ ಪರಂಪರೆ ಕಾದಂಬರಿಯ ಉದ್ದಕ್ಕೂ ಮಿಂಚುತ್ತದೆ. ಸೂಕ್ತಿ ಸದೃಶ ಸಾಲುಗಳು ಅಲ್ಲಲ್ಲಿ ಮೂಡಿವೆ ; ಉಪಮೆ ಉಪಮಾನಗಳಿಗೂ ಕೊರತೆಯಿಲ್ಲ. ಅಧ್ಯಾತ್ಮಿಕ ಜಿಜ್ಞಾಸೆ ವೈಚಾರಿಕವಾಗಿದೆ. ನೂತನ ಶಬ್ದ, ನುಡಿಗಟ್ಟುಗಳ ಚಲಾವಣೆಯೂ ಆಗಿದೆ. ಯುದ್ಧ ವರ್ಣನೆ, ಶಸ್ತ್ರಾಸ್ತ್ರಗಳ ಬಳಕೆ, ಯುದ್ಧ ವೀರರ ಕೈಚಳಕ, ಹೋರಾಟ ಕುತೂಹಲಕಾರಿಯಾಗಿದೆ. ಬೃಹತ್ ಕಾದಂಬರಿ ರಚನೆಗೆ ಇರಬೇಕಾದ ಎಲ್ಲ ಸಾಮಗ್ರಿಗಳ ಸಮೃದ್ಧವಾಗಿವೆ. ಶ್ರೀ ರಾಮರಾಯರ ಉದಾತ್ತ ಚಿಂತನೆಯ, ವೈಚಾರಿಕ ನೆಲಗಟ್ಟಿನ, ಉತ್ತಮ ಮಾನವತೆಯ ಸಾಕಾರ ಮೂರ್ತಿಯಾಗಿ ಶ್ರೀಕೃಷ್ಣಪಾತ್ರ ಮೂಡಿರುವುದು ಈ ಕಾದಂಬರಿಯ ವೈಶಿಷ್ಟ್ಯವಾಗಿದೆ.

ಶ್ರೀಕೃಷ್ಣ ಸಮಾಜ ಸುಧಾರಕನಾಗಿ, ರಾಜಕೀಯ ಧುರೀಣನಾಗಿ, ಮಾನವ ಪ್ರೇಮಿಯಾಗಿ, ಮನುಕುಲದ ರಕ್ಷಕನಾಗಿ, ಧರ್ಮೋದ್ಧರಣನಾಗಿ, ಆಧ್ಯಾತ್ಮಿಕ ಚಿಂತಕನಾಗಿ, ವ್ಯವಹಾರ ಚತುರನಾಗಿ, ಅಕಲಂಕ ಹೋರಾಟಗಾರನಾಗಿ, ಸ್ನೇಹಪರನಾಗಿ, ಆದರ್ಶ ಪತಿಯಾಗಿ, ಪರಂಪರೆಯ ಉದ್ಧಾರಕನಾಗಿ. ಭಕ್ತಿಮಾರ್ಗದ ಪ್ರವರ್ತಕನಾಗಿ ಬದುಕಿ ಯುಗಪುರುಷನಾಗಿದ್ದಾನೆ ; ಸಾಮಾನ್ಯನೂ ಅಸಾಮಾನ್ಯನೂ ವಿಕಾಸವಾಗಬಹುದೆಂಬ ಪುರುಷಪ್ರಯತ್ನಕ್ಕೆ ಸಾಕ್ಷಿಯಾಗಿದ್ದಾನೆ ; ಐತಿಹ್ಯ ಪುರಾಣವಾಗುವುದಕ್ಕೆ ಉದಾಹರಣೆಯಾಗಿದ್ದಾನೆ. ಶ್ರೀಕೃಷ್ಣನ ಬದುಕು ಕರ್ಮ, ಜ್ಞಾನ, ಭಕ್ತಿಮಾರ್ಗಗಳ ಮುಪ್ಪುರಿಯಾಗಿದೆ. ಈ ಹಿನ್ನೆಲೆಯ ವ್ಯಾಪ್ತಿಯಲ್ಲಿ ಶ್ರೀಕೃಷ್ಣದರ್ಶನ ಕಾದಂಬರಿ ರಚನೆಯಾಗಿದೆ. ಶ್ರೀಕೃಷ್ಣನ ಸಮಸ್ತ ಶಕ್ತಿಚೇತನದ ವಿಹಂಗಮ ನೋಟವನ್ನು ಕಾದಂಬರಿಯಲ್ಲಿ ಕಾಣಬಹುದು. ಲೇಖಕರ ಅನುಭವವನ್ನು ಪೂರ್ಣ ಪ್ರಮಾಣದಲ್ಲಿ ಹೇರಿಕೊಂಡಿರುವ ಈ ಗ್ರಂಥ ಓದುಗರಿಗೆ ಯಾವ ರೀತಿಯಲ್ಲೂ ನಿರಾಶೆ ಮಾಡುವುದಿಲ್ಲ. ಶ್ರೀಕೃಷ್ಣನ ಭಕ್ತಿಮಾರ್ಗದರ್ಶನದಲ್ಲಿ, ಘೋರರ್ಷಿಯ ಉಪದೇಶದಲ್ಲಿ, ಅನೇಕ ವರ್ಣನೆಗಳಲ್ಲಿ, ಚಿಂತನಗಳಲ್ಲಿ ಶ್ರೀ ರಾಮರಾಯರ ದಟ್ಟವಾದ ಜೀವನಾನುಭವ ನಿನದಿಸುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಶ್ರೀಕೃಷ್ಣ ಕರ್ಮಮಾರ್ಗವನ್ನು ವ್ಯವಹರಿಸಿದವನು ; ಜ್ಞಾನಮಾರ್ಗವನ್ನು ಮೈಗೂಡಿಸಿಕೊಂಡವನು ; ಭಕ್ತಿಮಾರ್ಗವನ್ನು ದರ್ಶಿಸಿದವನು. ಭಕ್ತಿಮಾರ್ಗ ಶ್ರೀಕೃಷ್ಣ ದರ್ಶನದ ಉತ್ತುಂಗ ಶಿಖರ ; ಯೋಗಾಭ್ಯಾಸದ ವಿನೂತನ ಬೆಳಕು ಶ್ರೀಕೃಷ್ಣ ಯುಗ

ಪುರುಷನಾಗುವುದು, ಪುರುಷೋತ್ತಮನಾಗುವುದು ಈ ದರ್ಶನದಿಂದಲೇ. ಶ್ರೀಕೃಷ್ಣ ತನ್ನ ಯೋಗಾಭ್ಯಾಸದ ಸಾಧನೆಯಿಂದ, ತನ್ನ ಸಂಸ್ಕಾರದಿಂದ, ಯುಗದ ಪುಣ್ಯದಿಂದ, ಶಿಷ್ಟಶಕ್ತಿಗಳ ಹಾರೈಕೆಯಿಂದ ಭಕ್ತಿಮಾರ್ಗವನ್ನು ಕಂಡುಕೊಂಡು ಉಪದೇಶಿಸಿದ; ಅಂದಿನ ಯುಗದ ಕಣ್ಣು ತೆರೆಸಿದ; ಪರಾಭಕ್ತಿ, ಭಾಗವತ ಪಂಥ ಮೊದಲಾದ ಶಬ್ದ ಧ್ವನಿಗಳು ಕಿವಿಗೆ ಬೀಳಲು ಕಾರಣನಾದ. ಕರ್ಮ ಮಾರ್ಗ, ಜ್ಞಾನ ಮಾರ್ಗಗಳೇ ಸರ್ವಸ್ವ ವೆಂದು ತಿಳಿದಿದ್ದ ಜಗತ್ತಿಗೆ ಹೊಸ ದಿಗಂತ ಗೋಚರವಾಯಿತು; ಭಕ್ತಿಮಾರ್ಗ ಲೋಕ ವನ್ನೇ ಆಳುವ ಮಹಾಮಂತ್ರವಾಯಿತು. ಆ ಕಾಲದ ಹಿರಿಯರು ಕಿರಿಯರು ಸಾಮಾ ನ್ಯರು ಅಸಾಮಾನ್ಯರು ಹೆಣ್ಣು ಗಂಡು ಮೊದಲುಗೊಂಡು ಎಲ್ಲರೂ ಶ್ರೀಕೃಷ್ಣನ ಭಕ್ತಿ ಮಾರ್ಗದ ಚಿರಜ್ಯೋತಿಗೆ ಆಕರ್ಷಿತರಾದರು. ಶ್ರೀಕೃಷ್ಣ ಕಂಡುಕೊಂಡ ಈ ಹೊಸ ಬೆಳಕು ಅವನ ವ್ಯಕ್ತಿತ್ವಕ್ಕೆ ಶಾಶ್ವತವಾದ ಸ್ಥಾನಮಾನ ತಂದುಕೊಟ್ಟಿತು. ಕಾದಂಬರಿಯ ಉತ್ತರಾರ್ಧ ವರ್ಣನೆಗೆ ಮೀಸಲಾಗಿದೆ. ಇದರಿಂದ ಶ್ರೀಕೃಷ್ಣ ಪಾತ್ರಕ್ಕೆ ದಿವ್ಯ ಗಾಂಭೀರ್ಯ ಲಭ್ಯವಾಗಿದೆ. 'ಹಂಸಮಾರ್ಗ' ಮತ್ತು 'ಮಹಾಯೋಗ' ಅಧ್ಯಾಯಗಳಲ್ಲಿ ಭಕ್ತಿಮಾರ್ಗದ ಆಧ್ಯಾತ್ಮಿಕ ವಿಚಾರಧಾರೆ ಮಡುಗಟ್ಟಿದೆ. ಈ ಅಧ್ಯಾಯಗಳ ಶೈಲಿ ಉಳಿದ ಅಧ್ಯಾಯಗಳಿ ಗಿಂತ ಭಿನ್ನವಾಗಿದ್ದು, ಶ್ರೀ ಕುವೆಂಪು ಶೈಲಿಯು ನೆನಪಿಸುತ್ತದೆ.

ಈ ಕಾದಂಬರಿಯಲ್ಲಿ ಬಳಸಿರುವ ಶಬ್ದಸಂಪತ್ತು ವಿಪುಲವಾಗಿದೆ. ಸಾಮಾನ್ಯವಾಗಿ ಕಾವ್ಯದಲ್ಲಿ ಕಾಣುವ ಶಬ್ದಗಳು, ತದ್ಭವ ಪದಗಳು ಬಳಕೆಯಾಗಿವೆ. ಉದಾಹರಣೆಗೆ ತೊಟಾವು, ಹೆಗ್ಗವರು, ಕುಂಬಿಡು, ಕಣ್ಣೆಂಜಲು, ಮುದ್ದೊಗು, ಮೋಸು, ಕೈಪರೆಗುಟ್ಟಿ, ತುಣೀರ, ಮುಂಕಣಿ, ಕಸೆಗೋಲು, ಸ್ಮರಮೂರ್ಛೆ, ಪೆಣತಿನಿ, ಹೊರದೇಹಳಿ, ಕಿಗ್ಗಂಡ, ಹಳಯಿಗೆ, ಮುಕ್ಕಡಿಗ್ಗೈದು, ಹೆಗ್ಗದ, ಹಾಲುಕ್ಕ, ಚಕ್ಷಕ, ಸೋವು, ಮಂತಣಸಾಲೆ, ಉಣುವನೆ, ಬಚ್ಚರಿಸು, ಎಳೆವಸು, ಅನ್ನೆಯ ಇತ್ಯಾದಿ.

ಹಲವು ವರ್ಣನೆಗಳು ಧ್ವನಿಪೂರ್ಣವಾಗಿವೆ. ಕೆಲವು ಶಬ್ದಚಿತ್ರ ಸೊಗಸಾಗಿವೆ. ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು. ಜ್ಯೋತಿಷಿ ಗರ್ಗಾಚಾರ್ಯನ ಕಣಿ ಸುಳ್ಳಾದ ಪ್ರಸಂಗ ಬಂದಾಗ ಕಂಸನ ಸಿಟ್ಟು ಸ್ಫೋಟಿಸಿದ್ದು ಹೀಗೆ: "ಚಮ್ಮಾರನೊಬ್ಬನು ತನ್ನ ಕೈಯುಳಿಯಿಂದ ತಾನ್‌ಗೆಯ್ದು ತೊಗಲಿನೆಕ್ಕಡದ ಹಿಮ್ಮಡಿಯ ಪಿಸುರನ್ನು ಇನಿತಿನಿ ತಾಗಿ ಕೊಯ್ದೀಡಾಡುವಂತೆ, ನಿನ್ನಂಗಗಳನ್ನು ಕಾಲ ಹೆಬ್ಬೆಟ್ಟಿನಿಂದಾರಂಭಿಸಿ, ಪದರು ಪದರುಗಳಾಗಿ ಕೊಯ್ದು, ನಾಯ್ನರಿಗಳಿಗೆ. ಹದ್ದು ಕಾಗೆಗಳಿಗೆ ಉಣ ಬಡಿಸುತ್ತೇನೆ." (ಪುಟ ೮೨) ಕಂಸನ ಕೈಗೆ ಗರ್ಗಾಚಾರ್ಯ ಸಿಕ್ಕಿದ್ದರೆ ಈ ಹೇಳಿಕೆ ಖಂಡಿತ ಸುಳ್ಳಾಗು ತ್ತಿರಲಿಲ್ಲ.

ಕುರುಕ್ಷೇತ್ರದಲ್ಲಿ "ಎರಡೂ ಕಡೆಯ ಸೈನ್ಯಗಳು ಒಂದನ್ನೊಂದು ಎದುರಿಸಿ ನಿಂತುವು. ಅದು ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಮಹಾಸಾಗರಗಳೆರಡು ಎದುರಿಸಿ ನಿಂತಂತೆ ರುದ್ರಮನೋಹರವಾಗಿ ಕಂಡಿತು." (ಪುಟ ೫೩೨) ಇಲ್ಲಿ ಆಧುನಿಕ ಚಿಂತನೆ ಪ್ರಾಚೀನ ವಿಷಯ ವರ್ಣನೆಗೆ ಅರ್ಥಪೂರ್ಣವಾಗಿ ಬಳಕೆಯಾಗಿದೆ.

ಕುರುಕ್ಷೇತ್ರ ಯುದ್ಧದಲ್ಲಿ ಸತ್ತವರನ್ನು ಕಂಡು ಅವರ ತಾಯಿ ತಂದೆಗಳು ದುಃಖವನ್ನು ತೋಡಿಕೊಂಡ ವರ್ಣನೆ ಹೀಗೆ ಮೂಡಿದೆ : "ನೂರು ಭರ್ಜಿಗಳನ್ನು ಹೃದಯದಲ್ಲಿ ನೆಟ್ಟು, ಅವುಗಳನ್ನು ಒಳಕ್ಕೆ ಹೋಗಲೆಂದು ಕಚ್‌ಕಚಕ್ಕೆಂದು ಅಲುಗಿಸುತ್ತಲುಗಿಸುವಾಗ ಆಗುವಂತಹ ಅಪಾರವಾದ ನೋವು, ಅವರ ಹೃದಯಗಳನ್ನು ಸತತವಾಗಿ ಬಾಧಿಸತೊಡಗಿತು." (ಪುಟ ೫೯೧)

ಸೂಕ್ತಿಮಯವಾದ ಸಾಲುಗಳಿಗೂ ಕಾದಂಬರಿಯಲ್ಲಿ ಕೊರತೆಯಿಲ್ಲ. ಕಾದಂಬರಿಯ ಸಂದರ್ಭದಿಂದ ಪ್ರತ್ಯೇಕಿಸಿ ನೋಡಿದರೂ ಅನುಭವದೀಪ್ತವಾದ ಅರ್ಥ ನೀಡುವ ಹಲವು ಸೂಕ್ತಿಗಳು ಕಾಣಸಿಗುತ್ತವೆ. ಉದಾ : "ಬೇವಿನ ಹಣ್ಣನ್ನು ಹಾಲಿನಿಂದ ತೊಳೆದ ಮಾತ್ರಕ್ಕೆ ಅದು ತನ್ನ ಕಹಿಯನ್ನು ಕಳೆದುಕೊಳ್ಳಲಾರದು." (ಪು. ೪೬೦) "ಹಿರಿದಕ್ಕೆ ಕಿರಿದು ಮಣಿಯಬೇಕಾದುದೇ ಸೃಷ್ಟಿ ನಿಯಮ" (ಪು. ೩೭೬) "ಕಹಿ ಸೋರೆಯನ್ನು ದ್ರಾಕ್ಷಿಯ ಚಪ್ಪರಕ್ಕೆ ಹಬ್ಬಿಸಿದ ಮಾತ್ರಕ್ಕೆ ಅದು ಸಿಹಿಯಾಗುವುದಿಲ್ಲ." "ಪಂಚಭೂತಗಳಿಂದ ಬಂದ ದೇಹ ಸ್ವಲ್ಪ ಕಾಲಾನಂತರ ಅವುಗಳಲ್ಲಿಯೇ ಲೀನಗೊಳ್ಳಬೇಕು." (ಪು. ೫೧೫) "ಯಾವಾಗಲೂ ಸಾಧು ಜನಗಳಿಗಿಂತ ಧೂರ್ತರೇ ಅಧಿಕವಾಗಿರುತ್ತಾರೆ." (ಪು. ೩೯೬)

ದೀರ್ಘಾವಧಿಯ ಕಥಾವಸ್ತುವಿನ ನಿರೂಪಣೆ, ವಿಶಿಷ್ಟ ಪಾತ್ರ ಪೋಷಣೆ, ಬದುಕಿನ ಗಂಭೀರ ಚಿಂತನೆ, ಕಾಲದೇಶ ಮೀರಿದ ಅನುಭವ ಪ್ರತಿಪಾದನೆ–ಈ ಮೊದಲಾದ ಹಲವು ಹತ್ತು ಅಂಶಗಳಿಂದ ಕಾದಂಬರಿ ತುಂಬಿಕೊಂಡಿದೆ. ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಒಂದಾದ ಈ ಗ್ರಂಥ ಸಹೃದಯರಿಗೆ ಸಮೃದ್ಧವಾದ ಅನುಭವವನ್ನು ನೀಡುತ್ತದೆ. ಈ ಕಾದಂಬರಿಯ ವಸ್ತು, ಪಾತ್ರ, ನಿರೂಪಣೆ, ಕಲ್ಪನೆ, ಶೈಲಿ, ವಿಚಾರಧಾರೆ ಮೊದಲಾದ ವಿಷಯಗಳ ಬಗೆಗೆ ಕೂಲಂಕಷವಾದ ವಿಮರ್ಶೆ ನಡೆಯುವುದು ಅವಶ್ಯ. ಇಂಥ ಮೌಲಿಕವಾದ ಗ್ರಂಥವನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಶ್ರೀ ಸಮೇತನಹಳ್ಳಿ ರಾಮರಾಯರು ಅಭಿನಂದನಾರ್ಹರು.

ನಿಮ್ಮ ಮೊನೆಗಾರ ಕಾದಂಬರಿ ಓದಿದೆ. ಚರಿತ್ರೆಯಲ್ಲಿ ಬಂದಿರುವ ಕೆಲವೇ ಸಾಲುಗಳ ಗೆರೆಯನ್ನು ಕುರಿತು ಹಿರಿದಾದ ಕಾದಂಬರಿಯನ್ನು ರಚಿಸಿದ್ದೀರಿ. ಅನೇಕ ಕಡೆ ತಾವು ರಚಿಸಿರುವ ಸಂಭಾಷಣೆಗಳು ನಮ್ಮನ್ನು ಹಿಡಿದು ಮತ್ತೊಮ್ಮೆ ಓದುವಂತೆ ಮಾಡುತ್ತವೆ.

೧೧–೧೨–೮೯

ತೊ. ಸು. ಸುಬ್ರಹ್ಮಣ್ಯ

ಟಿಪ್ಪೂ ಸುಲ್ತಾನನ ಇತಿಹಾಸ

ವಿಜಯಾ ಹರನ್

ಮೊಹಿಬ್ಬುಲ್ ಹಸನ್ ಎಂಬ ವಿದ್ವಾಂಸರು ರಚಿಸಿರುವ History of Tipu Sultan ಎಂಬ ಕೃತಿಯ ಕನ್ನಡ ಅನುವಾದ ಇದಾಗಿದೆ. ಹೆಸರೇ ಹೇಳುವಂತೆ ಟಿಪ್ಪೂ ಸುಲ್ತಾನನ ಜೀವನ ಮತ್ತು ಸಾಧನೆಗಳನ್ನು ಒಳಗೊಂಡ ಇತಿಹಾಸ ಗ್ರಂಥ ಇದು. ಇತಿಹಾಸಾಸಕ್ತ ಕನ್ನಡದಲ್ಲಿ ಇತಿಹಾಸಕ್ಕೆ ಸಂಬಂಧಿಸಿದಂತೆ ಇಂತಹ ಗ್ರಂಥಗಳು ವಿರಳವಾಗಿರುವ ಸಂದರ್ಭದಲ್ಲಿ ಈ ಕೃತಿ ಮಹತ್ವದ್ದೆನಿಸಿ ಸ್ವಾಗತಾರ್ಹವಾಗಿದೆ. ಸಾಹಿತ್ಯಾಸಕ್ತರೂ ಇತಿಹಾಸಕ್ತರೂ ಆಗಿ, ಕರ್ನಾಟಕದ ರಾಜಮನೆತನಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿ ಕನ್ನಡದಲ್ಲಿ ಒಳ್ಳೆಯ ಐತಿಹಾಸಿಕ ಕಾದಂಬರಿ, ನಾಟಕಗಳನ್ನು ರಚಿಸಿರುವ ಶ್ರೀ ಸಮೇತನಹಳ್ಳಿ ರಾಮರಾಯರು ಈ ಕೃತಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ.

ಮೂಲ ಕೃತಿಯ ನೇರ ಅನುವಾದ ಇದಾಗಿದ್ದು, ಇತಿಹಾಸದ ದಾಖಲೆಗಳನ್ನು ಒಳಗೊಂಡಿರುವುದರಿಂದ, ಭಾಷಾಂತರಕಾರನ ಪ್ರತಿಭೆ, ಕಲಾತ್ಮಕತೆಯ ಅಭಿವ್ಯಕ್ತಿಗೆ ಸಹಜವಾಗಿಯೇ ಅವಕಾಶವಿಲ್ಲವಾಗಿದ್ದರೂ ಭಾಷಾಂತರಕಾರನ (ರಾಯರ) ಇತಿಹಾಸ ಪ್ರಜ್ಞೆ, ಒಲವು, ಮೂಲನಿಷ್ಠವಾಗಿರಬೇಕೆಂಬ ಎಚ್ಚರ ಈ ಬೃಹತ್ ಕೃತಿಯ ಉದ್ದಕ್ಕೂ ಭಾಷಾಭಿವ್ಯಕ್ತಿಯಲ್ಲಿ ನಿಚ್ಚಳವಾಗಿ ಗೋಚರಿಸುತ್ತದೆ. ಮೊಹಿಬ್ಬುಲ್ ಹಸನ್ ಅವರು ತಮ್ಮ History of Tippu Sultan ಕೃತಿಯಲ್ಲಿ ಟಿಪ್ಪೂವಿನ ಜೀವನ ಸಾಧನೆಗಳನ್ನು ಕುರಿತಂತೆ, ಅನೇಕ ಇತಿಹಾಸ ತಜ್ಞರ ಅಭಿಪ್ರಾಯಗಳನ್ನು ಕ್ರೋಢೀಕರಿಸಿದ್ದಾರೆ. ಅತ್ಯಧಿಕ ಪ್ರಮಾಣದಲ್ಲಿರುವ ಇಲ್ಲಿನ ಅಭಿಪ್ರಾಯ ಸಂಗ್ರಹವನ್ನು ಗಮನಿಸುತ್ತಿದ್ದಂತೆ, ಮೊಹಿಬ್ಬುಲ್ ಅವರ ಅಭಿಪ್ರಾಯ ಅಭಿವ್ಯಕ್ತಿಯನ್ನು ಓದುಗರು ಹುಡುಕಬೇಕಾಗುತ್ತದೆ, ಎಂಬ ವಾಸ್ತವಾಂಶ ಅರಿವಾಗುತ್ತದೆ. ಆದರೆ ಟಿಪ್ಪೂವಿನ ಇತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡಬಯಸುವ ಇತಿಹಾಸಾಸಕ್ತರಿಗೆ ಮೊಹಿಬ್ಬುಲ್ ಅವರು ಒದಗಿಸಿರುವ ಇಲ್ಲಿನ ಮಾಹಿತಿ ಸಂಗ್ರಹ, ದಾಖಲೆಗಳು ಅಮೂಲ್ಯವೆನಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿನ ಸಮರ್ಪಕ ಸಂಗ್ರಹಕಾರ್ಯ ಪ್ರಶಂಸನೀಯ, ಅನುಕರಣೀಯವೆನಿಸುತ್ತದೆ.

ಮೂಲದಲ್ಲಿರುವಂತೆಯೇ, ಸಮೇತನಹಳ್ಳಿ ರಾಮರಾಯರು ತಮ್ಮ ಕೃತಿಯಲ್ಲಿ ಟಿಪ್ಪೂವಿನ ಜೀವನ, ಸಾಹಸ, ಸಾಧನೆಗಳಿಗೆ ಸಂಬಂಧಿಸಿದಂತೆ, 'ಪೀಳಿಗೆ ಬಾಲ್ಯಜೀವನ ಮತ್ತು ಅಧಿಕಾರ ಸ್ವೀಕಾರ, ಆಂಗ್ಲದೊಡನೆ ಯುದ್ಧ, ಫ್ರೆಂಚರು ಮತ್ತು ಎರಡನೆಯ

ಆಂಗ್ಲ–ಮೈಸೂರು ಯುದ್ಧ, ಮಂಗಳೂರು ಒಪ್ಪಂದ ಮತ್ತು ಆದರ ಪ್ರತಿಕ್ರಿಯೆಗಳು, ... ಮುಂತಾಗಿ ಇಪ್ಪತ್ತೆರಡು ಅಧ್ಯಾಯಗಳಲ್ಲಿ ವಿವರಗಳನ್ನು ಮಂಡಿಸಿದ್ದಾರೆ. ಟಿಪೂ ಮತ್ತು ಪೋರ್ಚುಗೀಸರು, ಟಿಪೂ ಮತ್ತು ಅವನ ಇಂಗ್ಲಿಷ್ ಯುದ್ಧಬಂದಿಗಳು, ನಾಣ್ಯಪದ್ಧತಿ, ಪಂಚಾಂಗ, ಗ್ರಂಥಋಣ ವಿಷಯಸೂಚಿ ಎಂಬ ಸುದೀರ್ಘ ಅನುಬಂಧ ವನ್ನೂ, ಟಿಪೂವಿನ ಭಾವಚಿತ್ರವನ್ನೂ ಮತ್ತು ಸಂದರ್ಭಕ್ಕೆ ತಕ್ಕಂತಹ ನಕ್ಷೆಗಳನ್ನೂ ನೀಡಿದ್ದಾರೆ.

ಶ್ರೀ ಸಮೇತನಹಳ್ಳಿ ರಾಮರಾಯರ ಕೆಲವು ಕಾದಂಬರಿಗಳಲ್ಲಿ ಕಂಡುಬರುವ ಭಾಷಾ ಸೌಂದರ್ಯ ಕಲಾತ್ಮಕತೆಗಳನ್ನು ಇಲ್ಲಿ ನಾವು ನಿರೀಕ್ಷಿಸಲಾಗುವುದಿಲ್ಲ. ಇತಿಹಾಸ ಕೃತಿಯೊಂದರ ನೇರ ಅನುವಾದದಲ್ಲಿ, ಮೂಲಕ್ಕೆ ನಿಷ್ಠರಾಗಿರಬೇಕಾದ ಅನಿವಾರ್ಯತೆ ಯಲ್ಲಿ ಇಲ್ಲಿನ ಭಾಷೆ ಸಹಜವಾಗಿ ಸರಳವಾಗಿ, ಸ್ಪಷ್ಟವಾಗಿ ವ್ಯಕ್ತವಾಗಿದೆ. ವಿಷಯ ಮಂಡನೆಗೆ ಅನುಕೂಲವಾದ ಸೂಕ್ತ, ಸರಳ ಭಾಷೆ, ಕ್ಲಿಷ್ಟವಲ್ಲದ ವಾಕ್ಯರಚನೆಗಳು, ಐತಿ ಹಾಸಿಕ ಪಾರಿಭಾಷಿಕ ಪದಗಳ ಸಮರ್ಪಕ ಬಳಕೆ, ಕೃತಿಯಲ್ಲಿ ಪ್ರಮುಖ ಅಂಶಗಳಾಗಿ ಕಂಡುಬರುತ್ತವೆ. ಅನುವಾದಕರ ಭಾಷಾಪ್ರಭುತ್ವ, ಪಾಂಡಿತ್ಯ, ಪರಿಶ್ರಮಗಳನ್ನು ಕೃತಿ ಪರಿಚಯಿಸುವುದರ ಜೊತೆಗೆ, ಇತಿಹಾಸದ, ವಿಜ್ಞಾನದ ಕೃತಿಗಳನ್ನು ಕನ್ನಡದಲ್ಲಿ ಹೇಗೆ ಸಮರ್ಪಕವಾಗಿ ಬರೆಯಬಹುದು ಎಂಬುದಕ್ಕೆ ಇದು ನಿದರ್ಶನದಂತಿದೆ ; ಸಂಗ್ರಹಯೋಗ್ಯ ಕೃತಿ ಎನಿಸಿದೆ. ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಉಪಯುಕ್ತ ಆಕರ ಗ್ರಂಥವಾಗಬಲ್ಲ ಎಲ್ಲ ಲಕ್ಷಣಗಳನ್ನು ಹೊಂದಿದೆ. ಇತಿಹಾಸಾಸಕ್ತರು ಈ ಕೃತಿಯ ಮೌಲಿಕತೆಯನ್ನು ಗುರುತಿಸಿದರೆ ಅನುವಾದಕರ ಪ್ರಯತ್ನ, ಕಠಿಣ ಪರಿಶ್ರಮಗಳು ಸಾರ್ಥಕತೆಯನ್ನು ಪಡೆದಂತಾಗುತ್ತದೆ. ಅನುವಾದಕರನ್ನು ಗೌರವಿಸಿದಂತಾಗುತ್ತದೆ.

ನಿಮಗೆ ದೊರೆತಿರುವ ಗೌರವ ವೇತನಕ್ಕೆ ನಾನು ಸಹಾಯಕನಾದೆನೆಂಬುದು ತಮ್ಮ ಸಹೃದಯ ತೆಯ ಕುರುಹು. ರಾಜ್ಯದಲ್ಲಿ ಸಾಹಿತ್ಯ, ನಾಟಕ, ಸಂಗೀತ, ನೃತ್ಯ ಮತ್ತು ಚಿತ್ರಕಲೆ ಈ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ನಮ್ಮ ಪರಂಪರೆ ಉಳಿಸಿ ಬೆಳೆಸಲು ಶ್ರಮಿಸಿದ ಎಲ್ಲಾ ಹಿರಿಯರಿಗೆ ಗೌರವ ತೋರುವುದು ಎಲ್ಲರ ಕರ್ತವ್ಯ. ಇದರಲ್ಲಿ ನಾನು ಒಂದು ಸಾಧನ ಮಾತ್ರ. ಆದನ್ನು ಸಹಾಯವೆಂದು ಭಾವಿಸುವುದು ತಮ್ಮ ದೊಡ್ಡತನ.

೨–೬–೭೬ | ಎಸ್. ಮಂಚಯ್ಯ

'ಕೋಟೆಮನೆ'ಯ ಸಮತಾವಾದಿ

ಗರುಡನಗಿರಿ ನಾಗರಾಜ

ಮನುಷ್ಯ ಸಮಸ್ಯೆಗಳನ್ನು ಹುಟ್ಟುಹಾಕುವಲ್ಲಿ ನಿಸ್ಸೀಮ. ಆ ಸಮಸ್ಯೆಗಳಲ್ಲಿ ತಾನೇ ಸಿಲುಕಿ ಪರಿಹಾರಕ್ಕಾಗಿ ದೈವದ ಮೊರೆಹೋಗುವುದೂ ಅತಿ ಸಹಜ. ಆದರೆ ನಮ್ಮದಲ್ಲದ ತಪ್ಪಿಗೆ ನಾವು ಹೊಣೆಗಾರರಾದಾಗ, ಬಡತನದ ಬೇಗೆಯಲ್ಲಿ ತುತ್ತು ತುತ್ತಿಗೂ ಕಾಯ ಬೇಕಾದಾಗ ; ವ್ಯಕ್ತಿ ವಿಕಸನಕ್ಕೆ ಆವಶ್ಯಕವಾದ ವಿದ್ಯೆಯಿಂದಲೂ ವಂಚಿತರಾಗಬೇಕಾದ ಪರಿಸ್ಥಿತಿ ಒದಗಿದಾಗ ; ಸಾಲದೆಂಬಂತೆ ಸಂಬಂಧಿಕರ, ಆಪ್ತರೆನಿಸಿದವರ ಅನಾದರಣೆ ಗೊಳಗಾದಾಗ,ದೈವದ ಮೇಲಿರಲಿ, ಮನುಷ್ಯ-ಮನುಷ್ಯರ ಸಂಬಂಧಗಳ ಮೇಲೆ ನಂಬಿಕೆ ಹೊರಟುಹೋಗುತ್ತದೆ. ಅಂತಹ ಸಮಯದಲ್ಲಿ ನಮ್ಮ ಸಹಾಯಕ್ಕೊದಗುವುದು "ಸ್ವಾಭಿಮಾನ"ವೊಂದೆ.

ಇಂತಹ ಒಂದು ಸಂದರ್ಭದಲ್ಲಿಯೂ, ಯಾವುದೇ ಜೀವನದ ಏರುಪೇರುಗಳ ಲ್ಲಿಯೂ ದೈವದ ಮೇಲೆ ಅಚಲವಾದ ಭಕ್ತಿ, ನಂಬಿಕೆ ಇರಿಸಿಕೊಂಡು ಧೈರ್ಯದಿಂದ ಸವಾಲುಗಳನ್ನೆದುರಿಸುತ್ತಾ ಹಲವು ಹತ್ತು ವ್ಯಕ್ತಿಗಳು ಗುರುತಿಸುವಷ್ಟನ್ನು ಸಾಧಿಸಿರು ವವರು ಹಾಗೂ ವೈಯಕ್ತಿಕವಾಗಿ ಸಾಕಷ್ಟು ಮೇಲೇರಿರುವವರು ಸಮೇತನಹಳ್ಳಿ ರಾಮರಾಯರು.

ಅವರ ಜೀವನ ವೃತ್ತಾಂತ 'ಕೋಟೆಮನೆ' ಹೆಸರಿಗಷ್ಟೇ 'ಕೋಟೆಮನೆ'.

ಓದುಗರಿಗೆ ಅದು ಸಂಪೂರ್ಣ ಮಾಹಿತಿ ನೀಡುವ 'ತೆರೆದ ಮನೆ'.

ಅವರ ಬಾಳಿನ ಸಂಕಷ್ಟಗಳನ್ನು, ಪರಿಸ್ಥಿತಿಯ ಒತ್ತಡದಲ್ಲಿ ಸಿಲುಕಿ ನಲುಗಿಹೋಗ ಬಹುದಾದ ಸಂದರ್ಭದಲ್ಲಿಯೂ ದೈವಭಕ್ತಿ ಹಾಗೂ ಸ್ವಪ್ರಯತ್ನದಲ್ಲಿ ನಂಬಿಕೆ ಇರಿಸಿ, ಸರ್ಕಾರಿ ಉದ್ಯೋಗದಲ್ಲಿದ್ದುಕೊಂಡೇ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಅಪೂರ್ವ ವಾದದ್ದನ್ನು ಸಾಧಿಸಿರುವ ಶ್ರೀಯುತ ರಾಮರಾಯರ ಸಂಪೂರ್ಣ ಪರಿಚಯ ನೀಡುವ ಸ್ವಾರಸ್ಯವಾದ 'ಚೆಂದದ ಮನೆ'.

ಸಮೇತನಹಳ್ಳಿ ರಾಮರಾಯರು ದೈವಭಕ್ತರು, ಶ್ರಮಜೀವಿಗಳು, ಆಶಾವಾದಿ ಗಳು, ಪ್ರಾಮಾಣಿಕರು, ಕಾಯಕವೇ ಕೈಲಾಸವೆಂದು ನಂಬಿದವರು. ಜೊತೆಗೆ ಅವರೇ ಹಲವು ಕಡೆ ಹೇಳುವಂತೆ ನಿಷ್ಠುರವಾದಿಗಳು. ಆದರೆ ಅವರ ನಿಷ್ಠುರತೆ ಅನ್ಯಾಯದ ವಿರುದ್ಧ ಮಾತ್ರವಾಗಿತ್ತು. ಈ ಗುಣಗಳಿಗೆ ನಿದರ್ಶನ ನಮಗೆ ಅವರ ಕೋಟೆಮನೆ ಯುದ್ದಕ್ಕೂ ಸಿಗುತ್ತವೆ. ಅನೇಕ ಬಾರಿ ಪರಿಸ್ಥಿತಿ ಪ್ರತಿಕೂಲವಿಲ್ಲದಿದ್ದಾಗ್ಯೂ ಸಹ ಅವು

ಗಳಿಂದ ಪಲಾಯನಗೈಯದೆ ಸಾಹಸದಿಂದ ಪ್ರಾಮಾಣಿಕರಾಗಿ ಆ ಸಮಸ್ಯೆಗಳನ್ನೆದುರಿಸಿ ಮುಂದೆ ಬಂದಿರುವ ವ್ಯಕ್ತಿ ಸಮತಾವಾದಿ ಸಮೇತನಹಳ್ಳಿ ರಾಮರಾಯರು.

ಅವರು ನಿರೂಪಿಸಿರುವ ಅನೇಕ ಘಟನೆಗಳು ಅತ್ಯಂತ ಹೃದಯಸ್ಪರ್ಶಿ. ರಾಮ ನಗರದ ಹೊಸಮನೆಯಲ್ಲಿನ ಅವರ ಸಂಸಾರದ ವರ್ಣನೆ, ಹಸುಳೆ ಮಧುಸೂದನನ ಸಾವಿನ ಪ್ರಸಂಗ, ಹಿರಿಯ ಉದ್ಧಟ ಅಧಿಕಾರಿಗಳಿಂದ ಅವರಿಗುಂಟಾದ ಕಿರಿ ಕಿರಿ ಮುಂತಾದವುಗಳನ್ನೆಲ್ಲಾ ಎದುರಿಸಿದ ಅವರ ಮನೋಸ್ಥೈರ್ಯ ಶ್ಲಾಘನೀಯ.

ಸಂಸಾರದ ಕಷ್ಟ ಕೋಟಲೆಗಳಲ್ಲಿ ಸಮಭಾಗಿಯಾಗಿ ಸದಾಕಾಲ ಅವರಿಗೆ ಬೆಂಗಾವಲಾಗಿ ನಿಂತ ಅವರ ಶ್ರೀಮತಿಯವರ ಪಾತ್ರವೂ ಹಿರಿದಾದ್ದೆ.

ಒರ್ವ ನಿಷ್ಕಾಮಂತ ಸರ್ಕಾರಿ ಅಧಿಕಾರಿಗೆ ತೊಡಕಾಗುವವರು ಹಲವಾರು ಮಂದಿ. ತಮ್ಮ ತೆರೆಮರೆಯ ಚಟುವಟಿಕೆಗಳಿಗೆ ಅಡ್ಡಗಾಲು ಹಾಕುವವರೆಂದು ಅಂತಹವರಿಗೆ ಸಾಕಷ್ಟು ಕಿರುಕುಳ ನೀಡುವರು. ಇಂತಹ ಸನ್ನಿವೇಶಗಳ ನಡುವೆಯೇ ದಕ್ಷತೆಯಿಂದ ಕಾರ್ಯನಿರ್ವಹಿಸಿದ ಕೀರ್ತಿ ಸಮೇತನಹಳ್ಳಿ ರಾಮರಾಯರದ್ದು. ಇದಕ್ಕೆ ಕಳಶವಿಟ್ಟಂತೆ ಅವರಿಂದ ಹೊರ ಹೊಮ್ಮಿರುವ "ಗಟ್ಟಿ ಸಾಹಿತ್ಯ ಕೃತಿಗಳು".

ಶ್ರೀಯುತ ರಾಮರಾಯರ ಈ ಎಲ್ಲಾ ಗುಣಗಣಿಗೆ ಮೆಚ್ಚುಗೆ ಸೂಚಿಸುತ್ತಾ ನನ್ನ ಒಂದೆರಡು ಅನಿಸಿಕೆಗಳೆಂದರೆ.

"ನನಗೆ ದುಷ್ಟ ಎಂದು ಕಂಡ ಬಂದ ವ್ಯಕ್ತಿಗಳೊಡನೆ ನಾನು ಎಂದೂ ಸಂಧಾನಕ್ಕೆ ಎಳಸಲಿಲ್ಲ. ಅಂತಹವರನ್ನು ದೂರ, ಬಹುದೂರದಲ್ಲಿ ಇಟ್ಟು ಬಿಡುತ್ತೇನೆ," ಎಂದು ಪ್ರಾಮಾಣಿಕವಾಗಿ ತಮ್ಮ ಅನಿಸಿಕೆ ತೋಡಿಕೊಳ್ಳುವ ಅವರು, ಕೆಲ ತಿಳಿವಳಿಕೆ ಕಡಿಮೆಯುಳ್ಳ ವ್ಯಕ್ತಿಗಳು ಇವರಿಗೆ ಅನಾನುಕೂಲ ಉಂಟುಮಾಡಿದುದರ ಬಗ್ಗೆ ಕೊಂಚ ಔದಾರ್ಯ ತೋರಬಹುದಿತ್ತೇನೊ. ಅನೇಕ ವೇಳೆ ಅಜ್ಞಾನಿಗೆ ತಾನು ಮಾಡುವುದು ತಪ್ಪು ಎಂದು ತಿಳಿದಿರುವುದಿಲ್ಲ.

ಇನ್ನೊಂದು ವಿಷಯ. ಸರಳವಾಗಿ, ಸುಂದರವಾಗಿ ಮನ ಮುಟ್ಟುವ ಕನ್ನಡದಲ್ಲಿ ಬರೆಯುವ ಶಕ್ತಿಯುಳ್ಳ ಶ್ರೀಯುತ ರಾಮರಾಯರು ತಮ್ಮ "ಕೋಟೆಮನೆ"ಯಲ್ಲಿ ಇಂಗ್ಲಿಷ್ ಭಾಷೆಯನ್ನು ಕೊಂಚ ಕಡಿಮೆ ಉಪಯೋಗಿಸಬಹುದಿತ್ತು, ಎನಿಸುತ್ತದೆ.

ಅವರ ಕೃತಿಗಳನ್ನು ಹಾಗೂ ಕೋಟೆಮನೆಯನ್ನು ಓದಿದ ನನಗೆ ಅವರನ್ನು ಭೇಟಿಯಾಗಬೇಕೆಂಬ ಹಂಬಲ ಬಹುದಿನಗಳಿಂದಲೂ ಇತ್ತು. ಕಳೆದ ವರುಷ ಅದು ನೆರವೇರಿದಾಗ ನನಗೆ ತುಂಬಾ ಸಂತೋಷವಾಯಿತು. ಅವರದು ನಿಜಕ್ಕೂ ಧೀಮಂತ, ಆಕರ್ಷಕ ವ್ಯಕ್ತಿತ್ವ.

ಸಾಹಿತ್ಯಾಭಿಮಾನಿಗಳೂ, ಸಂಭಾವಿತರೂ ಆದ ಸಮೇತನಹಳ್ಳಿ ತಮ್ಮ 'ಕೋಟೆಮನೆ'ಯಲ್ಲಿ ನೂರ್ಕಾಲ ಬಾಳಿ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ನೀಡುವಂತಾಗಲಿ.

ಶ್ರೀಪರಶುರಾಮ

ಶ್ರೀನಿವಾಸ ಉಡುಪ

ಕೋಟಿಮನೆಯಷ್ಟೇ ಸರಿಸಮಾನವಾದ ರಾಮರಾಯರು ನನಗೆ ಎರಡು ದಶಕಗಳಿಂದ ನೇರವಾದ ಪರಿಚಯವಿದೆ. ಹಾಗೂ ಅವರ ಅನೇಕಾನೇಕ, ಸಮರ್ಥವಾದ ಉತ್ತಮವಾದ ಸಮಕಾಲೀನತೆಯನ್ನು ಚಿತ್ರಿಸುವ ಪೌರಾಣಿಕ ಕಾದಂಬರಿಗಳನ್ನು ನಾನು ಓದಿದ್ದೇನೆ ; ಮರಳಿ ಓದಿದ್ದೇನೆ ; ಫಲಬಯಸಿ ಓದಿದ್ದೇನೆ. ಓದಿ ಮುಗಿಸಿದ ಮೇಲೆ ಪೂಜೆಮಾಡಿ ಅನ್ನಸಂತರ್ಪಣೆ ಮಾಡಿದ್ದೇನೆ. 'ಶ್ರೀಕೃಷ್ಣದರ್ಶನ' ನಮ್ಮ ಮನೆಯ ಪಾರಾಯಣ ಗ್ರಂಥವಾಗಿದೆ.

ಸಮೇತನಹಳ್ಳಿ ರಾಮರಾಯರ ಇಪ್ಪತ್ತೈದನೆಯ ಕೃತಿಯಾದ, ವೇದಕಾಲೀನ ಕಾದಂಬರಿಯಾದ 'ಶ್ರೀಪರಶುರಾಮ' ಓದಿದೆ. ಸುಮಾರು ಮುನ್ನೂರು ಪುಟಗಳಲ್ಲಿ ಇರುವ ಈ ಕಾದಂಬರಿಯನ್ನು ರಾಮರಾಯರು ಬರೆದು ಉಪಕಥೆಯಂತೆ ವಿಷ್ಣು ಪರಮಾತ್ಮನ ಹತ್ತು ಅವತಾರಗಳಲ್ಲಿ ಒಂದಾದ ಪರಶುರಾಮನ ಪೂರ್ಣ ವ್ಯಕ್ತಿತ್ವವನ್ನು ನಮಗಿತ್ತಿದ್ದಾರೆ. ಮನನ ಆಗುವಂತೆ ಕೆಲವು ಅಧ್ಯಾಯಗಳನ್ನು ಎರಡು–ಮೂರು ಬಾರಿ ಓದಿದೆ. ನಿಜವಾಗಿ ಈ ದಶಕದಲ್ಲಿ ಬಂದ ಒಂದು ಅತ್ಯುತ್ತಮವಾದ ಕಾದಂಬರಿ ಇದಾಗಿದೆ. ವೇದಕಾಲದಲ್ಲಿ ಇದ್ದ ವಾತಾವರಣ ಹೇಗಿತ್ತೆಂಬುದು ತಿಳಿಯುತ್ತದೆ.

೧೯೪೭ ರಲ್ಲಿ ಇವರ ಮೊದಲ ಕೃತಿ ಬಂತು. ಆಗಲೆ ನಮ್ಮ ಭರತಭೂಮಿ ಸ್ವತಂತ್ರವಾಯಿತು. ಪರಶುರಾಮ ಬರುವಾಗ ಇದ್ದ ಕ್ಷೋಭೆ ಈಗಲೂ ಇದೆ. ರಾಜಕೀಯ ಜನರಿಗೆ ಕ್ಷಕಿರಣ ಬೀರಿ ಅವರನ್ನು ಮೌಲ್ಯದತ್ತ ಒಯ್ಯುವ ಬೋಧನ ಪ್ರಧಾನವಾದ ಕಾದಂಬರಿಯಾಗಿದೆ. ಜಾತ್ಯತೀತ ಭಾರತ ಈಗ ಹೇಗಿದೆಯೋ, ಪರಶುರಾಮ ಅವತರಿಸಿದಾಗ ಆಗಿನ ಆಳರಸರು ಈಗಿನ ಆಡಳಿತಗಾರರು ಒಂದೇ ಅನ್ನಿಸುತ್ತದೆ. ಬ್ರಾಹ್ಮಣ ಅಂದರೆ ಯಾರು ? ಏನು ? ಅವನ ರಕ್ತ ಎಂತಹುದು ? ಅವನು ಹೇಗಿರಬೇಕು ? ಅವನಿಗೆ ಎದಿರು ದುಷ್ಟಶಕ್ತಿಗಳು ಹೇಗೆ ನೆರವಾಗುತ್ತವೆ ? ಎಂಬುವುಗಳನ್ನು ಪರಶುರಾಮ ಕಾದಂಬರಿ ಸ್ಪಷ್ಟಪಡಿಸುತ್ತದೆ. ಜಮದಗ್ನಿ, ರೇಣುಕೆ, ವಿಶ್ವಾಮಿತ್ರ, ಪರಶುರಾಮ ಮತ್ತೆಲ್ಲಾ ಪಾತ್ರಗಳು ಕಾದಂಬರಿ ಮುಗಿಸಿದ ಮೇಲೆ ಅವರುಗಳ ಬಗ್ಗೆ

೧೯೯೪ ರಲ್ಲಿ ಬೆಂಗಳೂರಿನ ಸರ್. ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರತಿಷ್ಠಾನವು ತಾವು ನಡೆಸಿದ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾದ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿದೆ. —ಸಂ.

ಪದೇ ಪದೇ ಯೋಚನೆ ಮಾಡುವಂತೆ ಮಾಡುತ್ತದೆ. ಸಮೇತನಹಳ್ಳಿ ಅವರು ಒಳ್ಳೆಯ ಕಾದಂಬರಿಯನ್ನು ಕನ್ನಡ ಸಾರಸ್ವತಲೋಕಕ್ಕೆ ನೀಡಿ, ಪರಶುರಾಮ, ರಾಮ, ಕೃಷ್ಣ, ಬುದ್ಧರಂತೆ ಜನರ ಮನದಲ್ಲಿ ಉಳಿಯುವಂತೆ ಆಗಿದೆ.

ರಾಮರಾಯರ ಮುನ್ನುಡಿಯಿಂದ ನೋಡಿ :

> ಈ ಪರಶುರಾಮನ ಚರಿತ್ರೆಯನ್ನು ನಾನು ಮಹಾಭಾರತ, ಹರಿವಂಶ, ಭಾಗವತ ಮತ್ತು ರಾಮಾಯಣಗಳಿಂದ ತೆಗೆದುಕೊಂಡಿದ್ದೇನೆ. ಭಾಗವತ ಮತ್ತು ಹರಿವಂಶಗಳಿಗಿಂತ ಮಹಾಭಾರತ ಮೌಲ್ಯವುಳ್ಳದ್ದು, ಎಂದು ಅದಕ್ಕೆ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಿದ್ದೇನೆ. ರಾಮಾಯಣ ಮಹಾಭಾರತದ ಬಳಿಕ ರಚನೆಗೊಂಡುದರಿಂದ ಈ ಪರಶುರಾಮನ ಕತೆಗೆ ಮಹಾಭಾರತವೇ ಮೂಲವಾಗುತ್ತದೆ. ಈ ಕತೆ ಭಾಗವತ ಮತ್ತು ಹರಿವಂಶಗಳಲ್ಲಿ ಒಂದೇ ಆಗಿದೆ. ಮಹಾಭಾರತದ ನಂತರ ರಚನೆಗೊಂಡ ಎರಡು ಗ್ರಂಥಗಳಿಗೂ ಅದೇ ಮೂಲವಾಗಿರುವುದು ಸಹಜವಾದುದು. ಈ ಎರಡರಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸಗಳಿರುವುದಾದರೂ ಮುಖ್ಯ ಘಟನೆಗಳು ಮಹಾಭಾರತದಂತೆಯೇ ಇದೆ. ಮಹಾಭಾರತದಲ್ಲಿ ಪರಶುರಾಮನ ಕತೆ ಐದು ಕಡೆಗಳಲ್ಲಿ ಬರುತ್ತದೆ. ಇವುಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳುಂಟು. ನಾನು ಎಲ್ಲವನ್ನೂ ಸಮನ್ವಯಗೊಳಿಸಿಕೊಂಡು ಕಂಡುಕೊಂಡ ದರ್ಶನವನ್ನು ಯಥೇಚ್ಛವಾಗಿ ಬೆರೆಸಿ ಅವುಗಳ ಅಸ್ತಿಭಾರದ ಮೇಲೆ ಈ ಕಾದಂಬರಿಯ ಸೌಧವನ್ನು ಕಟ್ಟಿದ್ದೇನೆ.

ಮತ್ತೆ ಅದೇ ಮುನ್ನುಡಿಯಲ್ಲಿ ಇದನ್ನು ನೋಡಿ.

> ಈ ಕಾದಂಬರಿಯಲ್ಲಿ ನಾನು ಬ್ರಾಹ್ಮಣ ಮತ್ತು ಬ್ರಾಹ್ಮಣ್ಯ ಶಬ್ದಗಳನ್ನು ಬಳಸಬೇಕಾದುದು ಅನಿವಾರ್ಯವಾದದ್ದು. ಏಕೆಂದರೆ ಕಥಾವಸ್ತುವೇ ಅದನ್ನು ಕುರಿತುದಾಗಿದೆ. ನಾನು ಅವುಗಳನ್ನು ಈಗಿನ ಜಾತಿ ವ್ಯವಸ್ಥೆಯನ್ನು ಕುರಿತಂತೆ ಆಗಲಿ ಅಥವಾ ಅದನ್ನೇ ಅನ್ವಯಿಸುವಂತೆಯಾಗಲಿ ಹೇಳುವುದಿಲ್ಲ. ಈ ಪದಗಳ ಪ್ರಯೋಗಗಳನ್ನು ಮಾಡುವಾಗಲೆಲ್ಲ ಸಮಾಜ ಕಲ್ಯಾಣಾಕಾಂಕ್ಷೆಯನ್ನು ಕುರಿತ ಸತ್ಯ ಸೌಹಾರ್ದ, ಪರಹಿತ ಔದಾರ್ಯಾದಿಗಳ ಚಿಚ್ಛಕ್ತಿ ಎಂದೇ ಪರಿಗಣಿಸಿದ್ದೇನೆ. ಆದ್ದರಿಂದ ಅವು ಈಗಿನ ಬ್ರಾಹ್ಮಣ ಕುಲಕ್ಕೆಲ್ಲಕ್ಕೂ ಅನ್ವಯಿಸುವುದಿಲ್ಲ. ಇಂದಿನ ಬ್ರಾಹ್ಮಣರಲ್ಲಿ ಮೂಲಗುಣಗಳನ್ನು ಕಳೆದುಕೊಂಡು ಅವಿಚಾರಿಯೂ, ಪ್ರಮತ್ತನೂ, ಅನೃತ ಮತ್ತು ಪರಮ ಸ್ವಾರ್ಥಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಜೀವಿಸುತ್ತಿರುವನೂ ಇದ್ದಾನೆ. ಅದೇ ರೀತಿ ಬ್ರಾಹ್ಮಣೇತರ ವರ್ಗಗಳಲ್ಲಿ ವಿಚಾರವಂತರೂ, ಬ್ರಾಹ್ಮಣಗುಣಗಳನ್ನು ಬೆಳೆಯಿಸಿಕೊಂಡ ಸತ್ಯವಂತರೂ, ಲೋಕಹಿತ ಚಿಂತಕರೂ ಕೂಡ, ಒಳಗೊಳಗೇ ಕುದಿಯುತ್ತಿರುವ ಜಾತಿ ದ್ವೇಷಗಳ ಈ ಕಾಲದಲ್ಲಿಯೂ ಇದ್ದಾರೆ ಎಂಬುದನ್ನು ನಾನು ಮರೆತಿಲ್ಲ. ಬ್ರಾಹ್ಮಣ್ಯ ಗಳಿಸಿಕೊಳ್ಳುವ ಗುಣದಿಂದಲ್ಲದೆ, ಆ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ

ಬರುವುದಿಲ್ಲ. ಗುಣದಿಂದ ಬ್ರಾಹ್ಮಣರಾದವರ ಹೆಚ್ಚಳವನ್ನೇ ರಾಷ್ಟ್ರಬಯಸು ತ್ತದೆ.

ಇದು ರಾಮರಾಯರಿಗೆ ಮನುಕುಲದ ಬಗ್ಗೆ, ಧರ್ಮದ ಬಗ್ಗೆ, ರಾಷ್ಟ್ರದ ಬಗ್ಗೆ, ಇರುವ ಕಳಕಳಿಯನ್ನು ತೋರಿಸುತ್ತದೆ. ಸಮೇತನಹಳ್ಳಿ ರಾಮರಾಯರ ಈ ಕೃತಿ ರಾಷ್ಟ್ರಧರ್ಮ, ರಾಷ್ಟ್ರಚಿಂತನೆಯ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಈ ಪುಸ್ತಕ ಪಠ್ಯಪುಸ್ತಕ ವಾದರೆ ನಮ್ಮ ಮುಂದಿನ ಪ್ರಜೆಗಳಾದ ಯುವಕರ ಬಾಳು ತಿದ್ದಬಲ್ಲದ್ದಾಗುತ್ತದೆ.

ಒಳ್ಳೆಯ ಸಂತಾನವನ್ನು ಹೊಂದಲು ರಾಷ್ಟ್ರವನ್ನು ರಕ್ಷಿಸುವಂತಹ ಮಗನನ್ನು ಪಡೆಯಲು ಜಮದಗ್ನಿಗಳು ರೇಣುಕಾದೇವಿ ಎಷ್ಟೊಂದು ಪ್ರಯತ್ನ ಮಾಡಿದರು! ಋಷಿಕುಲ ಪ್ರತಿಯೊಂದನ್ನು ಮಾಡಿ ತೋರಿಸಿದರು. ಪ್ರಣಯಾರಾಧನೆಯ ಬಗ್ಗೆ ಜಮದಗ್ನಿಗಳ ಮಾತು ಇವು :

> ಪ್ರಣವಾಕ್ಷರವಿದು ಪರಮಾತ್ಮನ ಸ್ವರೂಪವೇ ಆಗಿದೆ. ಪರಮಾತ್ಮನೆಂದರೆ ಪ್ರಾಣೋಜ್ಜೀವವನ್ನು ಅಭಿವೃದ್ಧಿಪಡಿಸುವ ಏಕೈಕ ದಿವ್ಯಶಕ್ತಿ ಎಂಬುದನ್ನು ಮರೆಯಬಾರದು. ಆದ್ದರಿಂದ ಪ್ರಣಯಾರಾಧನೆ ಪರಮಾತ್ಮಾರಾಧನೆಯ ಮೊದ ಲನೆಯ ಮೆಟ್ಟಿಲು ಎಂದು ನಾನು ಭಾವಿಸಿದ್ದೇನೆ. ಆದರೆ ನಾನು ಅದನ್ನು ಅದರ ಶುದ್ಧರೂಪದಲ್ಲಿ ಕಾಣಬಯಸುತ್ತೇನೆ. ವಜ್ರ ನಾವು ಇಟ್ಟುಕೊಂಡಿರುವ ಆಭರಣ ದಲ್ಲಿ ಪ್ರಜ್ವಲಿಸುತ್ತದೆ. ಅದು ಮನಸ್ಸಿಗೆ ತುಂಬ ಬಂದಿತು ಎಂದು ತೆಯ್ದು ಕುಡಿ ಯುವುದಾದರೆ ಮಾರಕವಾಗುತ್ತದೆ. ಪ್ರಣವೋಚ್ಚಾರ ಪರಮಾತ್ಮನ ಪ್ರೀತ್ಯರ್ಥ ವಾಗಿಯೇ ಅಹುದು. ಪ್ರಾಣೋತ್ಪತ್ತಿಯೂ ಪರಮಾತ್ಮನ ಒಂದು ಮುಖ್ಯ ಅಂಗವೇ ಆಗಿದೆ. ಪ್ರಾಣೋತ್ಪತ್ತಿಯ ಮಹಾಚೇತನವೇ ಪ್ರಣಯಾರಾಧನೆ. ಆದ್ದರಿಂದ ನಾನು ಅವುಗಳೆರಡನ್ನೂ ಒಂದೇ ಭದ್ರಾಸನದಲ್ಲಿರಿಸಿ ಪೂಜಿಸ ಬಯಸುತ್ತೇನೆ.

ಕಾರ್ತವೀರ್ಯಾರ್ಜುನನು ಜಮದಗ್ನಿಗಳ ಮೇಲೆ ವಿನಾಕಾರಣ ದ್ವೇಷಕಾರಿ ಅವ ರಿಗೆ ಸಹಾಯ ನಿಲ್ಲಿಸಿದಾಗ ಕೊಬ್ಬಿದ ಕ್ಷತ್ರಿಯರ ಬಗ್ಗೆ :

> ರಾಷ್ಟ್ರದಲ್ಲಿ ಶಾಂತಿ ಸಮಾಧಾನಗಳನ್ನು ತಂದು ರಾಜ್ಯ ರಕ್ಷಣೆಯನ್ನು ಮಾಡುವ ಗೌರವಯುತವಾದ ಕೆಲಸ ನಡೆದಿರುವುದು ಬ್ರಾಹ್ಮಣರಿಂದಲೇ. ಅವನು ಸ್ವತಃ ಅನೇಕ ಸಂದರ್ಭಗಳಲ್ಲಿ ಶಸ್ತ್ರಾಸ್ತ್ರಗಳನ್ನು ಬಳಸಿ ಪ್ರಜಾನೆಮ್ಮದಿಗಾಗಿ ಹೋರಾಡಿದುದುಂಟು. ಆ ಸತ್ಕರ್ಮದ ಹಿಂದೆ ಬ್ರಹ್ಮಶಕ್ತಿ ಎಂದೆಂದೂ ಕೆಲಸ ಮಾಡುತ್ತದೆ. ಅದನ್ನು ಯಾರೇ ಆಗಲಿ ಮಾಡಿದಾಗ ಅದೊಂದು ಕಲ್ಯಾಣ ಸಂಕ ಲ್ಪದ ಬ್ರಾಹ್ಮಣ ಶಕ್ತಿಯೆಂದು ಗೌರವಿಸೋಣ.

ಹೀಗೆ ಪರಶುರಾಮ ಕಾದಂಬರಿಯ ಉದ್ದಕ್ಕೂ ರಾಮರಾಯರು ರಾಷ್ಟ್ರದ ಬಗ್ಗೆ ಅದರ ಶಾಂತಿಯ ಬಗ್ಗೆ ಬರೆಯುತ್ತಾರೆ. ಇದು ಲೇಖಕನ ಮುಖ್ಯ ಕರ್ತವ್ಯವೂ ಹೌದು.

ವಿಶ್ವಾಮಿತ್ರರ ಬಗ್ಗೆ ರಾಮರಾಯರು ಹೀಗೆ ಬರೆಯುತ್ತಾರೆ :

ತಿರೆಯ ಮೇಲೆ ಮಾನವನು ಬದುಕಿರುವಾಗ ಅಧ್ಯಾತ್ಮಿಕವಾಗಲಿ, ಭೌತಿಕ ಸುಖಭೋಗಗಳಲ್ಲಾಗಲಿ ಪರಮೋಚ್ಚ ಶ್ರೇಷ್ಠತೆಯನ್ನು ಸಾಧಿಸಬೇಕಾದುದೇ ಅವನ ಗುರಿಯೆಂಬುದನ್ನು ವಿಶ್ವಾಮಿತ್ರರು ಬದುಕಿ ತೋರಿಸಿದರು. ಬ್ರಾಹ್ಮಣ ಭಾವನೆಗಳು ಮತ್ತು ಗುಣಗಳು ಸರ್ವೋತ್ಕೃಷ್ಟ ಎಂದು ಮನಗಂಡ ಮೇಲೆ ಅವನು ರಾಜಭೋಗವನ್ನು ತ್ಯಜಿಸಿ ಆ ಕಠೋರ ಸಾಧನೆಯಲ್ಲಿ ತೊಡಗಿದನು ಮತ್ತು ಅದನ್ನು ಸಾಧಿಸಿದನು.

ಈಗಿನ ನಮ್ಮ ಭರತ ಭೂಮಿಗೆ ಇಂತಹ ವಿಶ್ವಾಮಿತ್ರರು ಬೇಕು ಎನ್ನಿಸುತ್ತದೆ. ಬಹಳ ದಿವಸ ಅಗಲಿದ ಕಾರಣ ಯಾವುದಾದರೂ ಇರಲಿ ಆ ದಂಪತಿಗಳು ಭಾವಿಸುವ ಬಗ್ಗೆ ಚಿಂತಿಸುವ ರಾಮರಾಯರ ಈ ನಿರೂಪಣೆ ನೋಡಿ :

ಬಾ ರೇಣುಕಾ, ನಾನು ಪ್ರಾಣ, ನೀನು ವಾಕ್ಕು. ನೀನು ವಾಕ್ಕು ನಾನು ಪ್ರಾಣ. ನಾನು ದ್ಯುಲೋಕ ನೀನು ಪೃಥ್ವಿ. ಬಾ, ಚೆನ್ನೆ ಬಾ, ಲೋಕ ಸಂತಾಪ ಹಾರಕನೂ ಮಹಾಪರಾಕ್ರಮಿಯೂ ಆದ ಮಗನನ್ನು ಪಡೆಯೋಣ ಲೋಕ ಶಾಂತಿಗಾಗಿ ಲೋಕಕ್ಷೇಮಕ್ಕಾಗಿ ನಾವು ಬಯಸಿದ ವೀರನನ್ನು ಪಡೆಯೋಣ.

ರಾಷ್ಟ್ರದ ಉದ್ಧಾರಕ್ಕಾಗಿ ಪರಶುರಾಮನನ್ನು ಪಡೆಯಲು ಜಮದಗ್ನಿಗಳು ರೇಣುಕೆಯೊಡನೆ ಕೂಡಿದರು. ನಿಜವಾಗಿ ಇಂತಹ ಉದ್ದೇಶ ಈಗಿನ ದಂಪತಿಗಳಿಗೆ ಇದೆಯಾ ಅನ್ನಿಸುತ್ತದೆ.

ಗರ್ಭವತಿಯಾದ ರೇಣುಕೆಯ ಹೊಟ್ಟೆಯಲ್ಲಿ ಹುಟ್ಟುವ ಪರಶುರಾಮನ ಕ್ಷಾತ್ರ ತೇಜಸ್ಸಿಗಾಗಿ ಜಮದಗ್ನಿಗಳು ವನಕ್ಕೆ ಕರೆದೊಯ್ದು ವಿಹರಿಸುವುದನ್ನು ನೋಡಿ :

ಅಲ್ಲಿ ಗಗನದೆತ್ತರಕ್ಕೆ ಚಿಮ್ಮಿ ನಿಂತ ಏಕಶಿಲಾ ಶಿಖರಗಳ ಭವ್ಯತೆಯನ್ನು ಕತ್ತೆತ್ತಿ ನೋಡುತ್ತ ಅದನ್ನು ತನ್ನ ನಲ್ಲೆಗೆ ತೋರಿಸುವನು. ಅವುಗಳ ರುದ್ರ ಮನೋಹರತೆಯನ್ನು ಕವಿಭಾವದಿಂದ ಬಣ್ಣಿಸಿ ಹೇಳುವನು. ಆಕಾಶವನ್ನು ಮುಟ್ಟಿನಿಂತು ರುದ್ರಧೀರತೆಯನ್ನು ಹರಡಿ ನಿಂತ ಅಶ್ವತ್ಥ, ಆಲ, ದೇವದಾರು, ಮುಂತಾದ ವೃಕ್ಷಗಳ ಬೆಳವಣಿಗೆಯ ಕ್ರಮವನ್ನು ವಿಜ್ಞಾನ ದೃಷ್ಟಿಯಿಂದ ವಿವರಿಸುತ್ತ ಅವಳನ್ನು ಮಹೋನ್ನತಿಯತ್ತ ನಡೆಸುವನು. ಬಿರುಗಾಳಿಯಬ್ಬರದ ಮಳೆ ನಿಂತ ಮೇಲೆ ಅವನು ಹೆಂಡತಿಯೊಡನೆ ಕೆಳಕ್ಕಿಳಿದು ತುಂಬು ಪ್ರವಾಹದಿಂದ ಉಬ್ಬಿ ಹರಿಯುವ ನರ್ಮದೆಯ ಭೀಮ ಸೌಂದರ್ಯವನ್ನು ತದೇಕ ಧ್ಯಾನದಿಂದ ಅವಳಿಗೆ ತೋರಿಸುವನು.

ಪರಿಸರದ ಬಗ್ಗೆ, ಪ್ರಕೃತಿಯ ಬಗ್ಗೆ ಗಂಡು ಹೆಣ್ಣುಗಳಿಗೆ ಎಷ್ಟೊಂದು ಸಂತಸ ಕೊಡಬಲ್ಲುದು ಎಂಬುದಕ್ಕೆ ಮೇಲಿನ ಮಾತುಗಳು ಪೂರಕವಾಗುತ್ತವೆ. ರಾಮರಾಯರ ಮಾತುಗಳು ರಾಷ್ಟ್ರದ ಈಗಿನ ಸ್ವಾರ್ಥ, ಲಂಚ, ಭ್ರಷ್ಟಾಚಾರದ ಜನಗಳ ದುಡಿಮೆಯ ಬಗ್ಗೆ ತುಂಬ ಮಾರ್ಮಿಕವಾಗಿವೆ. ಪರಶುರಾಮನ ಬಾಲ್ಯ, ಬೆಳವಣಿಗೆ ವಿದ್ಯಾಭ್ಯಾಸದ ಬಗ್ಗೆ ರಾಮರಾಯರು ಕಣ್ಣಿಗೆ ಕಟ್ಟುವ ಚಿತ್ರಣವನ್ನು ಕೊಡುತ್ತಾರೆ.

ರೇಣುಕಳ ಮನಸ್ಸು ಚಂಚಲವಾದಾಗ ಜಮದಗ್ನಿಗಳು ಹೇಳುವ ಮಾತುಗಳು ಸತ್ಯಪೂರ್ಣವಾಗಿವೆ. ಗೃಹಿಣಿಗೆ ರಾಮರಾಯರ ಮಾತುಗಳು ನಿಜವಾಗಿವೆ. ಈಗಿನ ಹೆಣ್ಣು ಮಕ್ಕಳು ಇಂತಹ ಗೃಹಿಣಿಯರಾಗಿ ಏಕೆ ಇರುವುದಿಲ್ಲ ಎನ್ನಿಸುತ್ತದೆ. ಪರಶುರಾಮ ಕಾರ್ತವೀರ್ಯಾರ್ಜುನರ ಕಾಳಗ ಭೀಕರ ಆಯಿತು. ಪರಶುರಾಮ ಬ್ರಾಹ್ಮಣನಾಗಿ ರಾಷ್ಟ್ರಧರ್ಮಪ್ರವರ್ತಕನಾಗಿ ಇಡೀ ಕ್ಷತ್ರಿಯರ ತಲೆ ಕಡಿದೊಗೆದ. ರಾಷ್ಟ್ರದಲ್ಲಿ ಶಾಂತಿ ನೆಲೆಸಿತು. ರಾಮರಾಯರ ಪರಶುರಾಮ ಪಾತ್ರಸೃಷ್ಟಿ ಜೀವಂತವಾಗಿ ಕಾಣುತ್ತದೆ.

ಮುಂದೆ ಪರಶುರಾಮ ಇಡೀ ಭರತ ದೇಶ ತಿರುಗುತ್ತಾನೆ. ಪ್ರಜೆಗಳ ಗ್ರಾಮಗಳ ಜನರು ಪಟ್ಟಣದ ಜನರು ಎಲ್ಲರೂ ಅವನನ್ನು ಸನ್ಮಾನಿಸುತ್ತಾರೆ. ರಾಮರಾಯರ ಈ ಕಾದಂಬರಿ ಗದ್ಯಶೈಲಿಯಾದರೂ ಪದಗಳ ಬಳಕೆ ಭಾಷೆಗಳಿಂದ ಇದೊಂದು ಮಹಾಕಾವ್ಯ ವಾಗುತ್ತದೆ. ಮೇಲಿನದು ಓದಿದಾಗ ರಾಮರಾಯರ ಸಮರ್ಥತೆ ಬರವಣಿಗೆಯಲ್ಲಿ ವ್ಯಕ್ತ ಗೊಂಡದ್ದು ತಿಳಿಯುತ್ತದೆ.

ಪರಶುರಾಮನ ಸಂದೇಶ ನಮ್ಮ ಭರತಭೂಮಿಗೆ ಈಗ ಅತ್ಯಗತ್ಯವಾಗಿದೆ. ರಾಮ ರಾಯರ ಇಂತಹ ಅತ್ಯುತ್ತಮ ದಾರ್ಶನಿಕ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಮುಂತಾದ ಪ್ರಶಸ್ತಿಗಳು ತಾವಾಗಿಯೇ ಹತ್ತಿರಕ್ಕೆ ಬರುವ ಕಾಲ ಹತ್ತಿರದಲ್ಲಿದೆ ಅನ್ನಿಸು ತ್ತದೆ.

ನಿಮ್ಮ 'ಕೋಟೆ ಮನೆ' ಪುಸ್ತಕವನ್ನು ನಾನು ಓದಿದೆ. ನನ್ನ ಮಕ್ಕಳಿಗೆ ಓದಿಸುತ್ತಿದ್ದೇನೆ. ಈ ಪುಸ್ತಕವು ನನ್ನ ಮನಸ್ಸನ್ನು ಗಾಢವಾಗಿ ಕಲಕಿದೆ.

ನಮ್ಮ ಇಂದಿನ ಪೀಳಿಗೆಗೆ ನಿಮ್ಮ 'ಕೋಟೆಮನೆ' ನಿಜಕ್ಕೂ ಒಂದು ಮಾರ್ಗದರ್ಶಕ ಪುಸ್ತಕ. ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇ ಬೇಕಾದ ಪುಸ್ತಕ.

೨೦–೪–೯೩ **ಎಸ್. ಜಿ. ನರಸಿಂಹಮೂರ್ತಿ**

ವ್ಯಕ್ತಿತ್ವದರ್ಪಣ-ಈಸಬೇಕು

ಡಿ. ಭರತ್

ಸಮಾಜದಲ್ಲಿನ ಮಾನವ ಬದುಕಿನ ವಿವಿಧ ರೀತಿಯ ಪರಿಚಯವನ್ನು ತೋರುತ್ತಲೇ ವಿವಿಧ ವ್ಯಕ್ತಿತ್ವಗಳನ್ನು, ಮೌಲ್ಯಗಳನ್ನು ಅರ್ಥಗರ್ಭಿತವಾಗಿ; ಅಚ್ಚುಕಟ್ಟಾಗಿ ತಮ್ಮ ಕತೆಗಳ ಮುಖಾಂತರ ಅಲ್ಲಿನ ಪಾತ್ರಗಳ ಮೂಲಕ ತಿಳಿಸುವ ಶ್ರೀ ಸಮೇತನಹಳ್ಳಿ ರಾಮರಾಯರು ಉತ್ತಮ ಕತೆಗಾರರಾಗಿ 'ಸಾಹಿತ್ಯ ಜೀವನದ ಪ್ರತಿಬಿಂಬ ಮತ್ತು ಜೀವನದ ಗತಿಬಿಂಬ' ಎಂಬುದನ್ನು ದೃಢಪಡಿಸಿದ್ದಾರೆ.

ಮೊದಲನೇ ಕತೆಯಾದ 'ಅಭಿಸಾರಿಕಾ' ನೃತ್ಯಗಾತಿಯ ಬದುಕನ್ನು ಕುರಿತು ಹೇಳಲಾಗಿದ್ದು ಹಿನ್ನೆಲೆಯಾಗಿ ಹೊಯ್ಸಳರ ಕಾಲದ ಜನರ ಅಭಿರುಚಿ, ಶ್ರದ್ಧೆ ನಾಡಪ್ರೇಮ, ರಾಜನಿಷ್ಠೆ ಮುಂತಾದವುಗಳನ್ನು ಹೊಂದಿದ ಜನರ ವ್ಯಕ್ತಿತ್ವಗಳನ್ನು ಸೊಗಸಾಗಿ ಪಡಿಮೂಡಿಸುತ್ತದೆ.

ಒಂದು ದಿನ ವಿನೋದಕ್ಕಾಗಿ ಸಲ್ಲಾಪದಲ್ಲಿ ಆಕೆ ಆಡಿದ ಮಾತು ಆಕೆಯ ಗಂಡನ ಸ್ವಾಭಿಮಾನವನ್ನು ಕೆಣಕಿ ಆಕೆಯನ್ನು ತೊರೆದು ಹೋದಾಗ, ಗಂಡನನ್ನು ಹುಡುಕುತ್ತಲೇ ಅವನನ್ನು ಮೆಚ್ಚಿಸುವ ಸಲುವಾಗಿ ನೃತ್ಯವನ್ನು ಕಲಿತಿದ್ದ ಹೆಣ್ಣು ಮಲ್ಲಿಕಾ, ಜನಪ್ರಿಯ ನೃತ್ಯಗಾತಿಯಾಗಿರುವ ಸಂದರ್ಭದಲ್ಲೇ, ನೃತ್ಯದಿಂದಲೇ ತನ್ನ ಬದುಕಿನ ಧ್ಯೇಯ, ಸಾಧನೆ ಕಂಡಿರುವ ಹಾಗೂ ನೃತ್ಯವು ಆಧ್ಯಾತ್ಮ ಮನರಂಜನೀಯ ಮಾಧ್ಯಮವೆಂದು ಪರಿಗಣಿಸಿರುವ ನೆಲೆಯಲ್ಲಿಯೇ ದೋರಸಮುದ್ರದ ಹೊಯ್ಸಳ ವಂಶದ ಹದಿನಾಲ್ಕನೇ ಮಹಾರಾಜ ವೀರನರಸಿಂಹನು ಹೊಸಬೂದನೂರಿನ ಅನಂತಪದ್ಮನಾಭ ಕಾಶೀಶ್ವರ ದೇಗುಲಗಳ ರಚನೆಗಾಗಿ ರೂವಾರಿಗಳನ್ನು ಕರೆಸಿ ಈಕೆಯ ನೃತ್ಯದ ಕಾರ್ಯಕ್ರಮವನ್ನು ಏರ್ಪಡಿಸಿದ್ದಾಗ, ಪಂಡಿತನಾದ ದೇವೋಜ ಕುಣಿತದ ವಿವರ ಪಟ್ಟಿ ತಿಳಿಯುವಾಗ ಇತಿಹಾಸಕ್ಕೆ ವಿರುದ್ಧವಾದ ಪ್ರಭುತ್ವ ಪ್ರಚಾರದ "ಕುವರ ರೂವಾರಿ ಪ್ರಚಂಡ"ವನ್ನು ಧಿಕ್ಕರಿಸಿ ತೆಗೆಸಿದ ಮೇಲೆ 'ಅಭಿಸಾರಿಕಾ' ದೇವಕಾವ್ಯ ನರ್ತನಕ್ಕೆ ಮನ್ನಣೆ ನೀಡಿದಾಗ, ಆ ಕಾವ್ಯ ನರ್ತನದಲ್ಲಿ ತನ್ನ ಅಂತರಂಗದ ಪ್ರಣಯವನ್ನು ಅದ್ಭುತವಾಗಿ ಅಭಿವ್ಯಕ್ತಿಸಿದ ಮಲ್ಲಿಕಾಳನ್ನು ಕಾಣುವಂತಾಗಿ, ಆಕೆಯು ಸಹ ದೇವೋಜನನ್ನು ಕಾಣುತ್ತಲೇ ತನ್ನ ತೊರೆದು ಹೋಗಿದ್ದ ಪತಿಯೀತನೆಂದು ಗುರುತಿಸುತ್ತಾಳೆ. ಮಲ್ಲಿಕಾಳನ್ನು ಮಾತಾಡಿಸಲು ಬಯಸಿದ ದೇವೋಜ ಮಾತನಾಡಿದಾಗ, ಅವಳ ಅನುಪಮ ನೃತ್ಯದ ಹಿಂದಿನ ಕಾರಣ ಅರಿತು, ತಾನು ಹಿಂದೆ ತೊರೆದು ಹೋದ ತನ್ನ ಸತಿ ಈಕೆಯೇ . . . ಸುಪ್ರಸಿದ್ಧ ನೃತ್ಯಗಾತಿಯಾದ ಈ ಮಲ್ಲಿಕಾ ಎಂದು ಸಂತೋಷಪಡುತ್ತಾನೆ. ದೂರವಾಗಿದ್ದ

ದೇವೋಜ–ಮಲ್ಲಿಕಾರು ಮತ್ತೆ ಸೇರುವುದರೊಂದಿಗೆ, ಜನರೆಲ್ಲರೂ ಸಂತಸ ತಾಳುವುದರೊಂದಿಗೆ ಕತೆ ಮುಕ್ತಾಯವಾಗಿದೆ.

ಎರಡನೇ ಕತೆಯಾದ 'ಪುರುಷೋತ್ತಮ'ದಲ್ಲಿ ಕೂಡುವಳ್ಳಿ ಚಾಮಪ್ಪ ಮಗನ ಉನ್ನತ, ಉದಾತ್ತ, ಪ್ರತಿರೋಧದ ವ್ಯಕ್ತಿತ್ವ ಸಮರ್ಪಕವಾಗಿದೆ. ಹಂಗಿನ ಕಡಲಿನಿಂದ ಪಾರಾಗಿ ತನ್ನ ಕಾಲ ಮೇಲೆ ತಾನು ನಿಂತು ಸಮಾಜದಲ್ಲಿ ದೊಡ್ಡ ವ್ಯಕ್ತಿಯಾದ ಪುರುಷೋತ್ತಮನ ದಿಟ್ಟತನ, ಸ್ವಾಭಿಮಾನ ಮೆಚ್ಚುಗೆ ಪಡೆಯುತ್ತದೆ. ಬಡತನದಲ್ಲಿ ಬದುಕಿ, ತನ್ನ ತಂದೆಗಿಂತಲೂ ಭಿನ್ನತೆಯನ್ನು ಪಡೆದಿದ್ದರೂ ಅಸಹಾಯಕನಾಗಿ ತಂದೆ ಚಾಮಪ್ಪನ ಮಾತಿಗೆ ಬೆಲೆ ಕೊಟ್ಟು, ತನಗಿಷ್ಟವಿಲ್ಲದಿದ್ದರೂ ಸಮ್ಮತಿ ಸೂಚಿಸಿ, ಪೊಳ್ಳು ಪ್ರತಿಷ್ಠೆ ಸ್ವಭಾವದ, ಬಡವರಿಗೆ ಬೆಲೆ ಕೊಡದ ಶ್ರೀಮಂತಿಕೆಯ ಅಹಂಭಾವದ, ಪ್ರವೃತ್ತಿಯ ರಾಮಾಪುರದ ನರಸರಾಜಯ್ಯನ ಮಗಳ ಅಳಿಯನಾಗುತ್ತಾನೆ. ಭಾವಜೀವಿಯಾದ ಈತ, ಜೀವನದ ಸ್ವಚ್ಛತೆ ಮತ್ತು ಕಾರ್ಯ ನಿರ್ವಹಣೆಗಳೇ ಬಾಳಿನ ಪ್ರಗತಿ, ಉನ್ನತಿ ಎಂದು ತಿಳಿದಿದ್ದರಿಂದ, ನಂಬಿದ್ದರಿಂದ, ಜನರ ಯೋಗ್ಯತೆ ನಡತೆಗಳನ್ನು ಮುಖಭಾವದಿಂದಲೇ ಅರಿಯುವವನಾದ್ದರಿಂದ, ನರಸರಾಜಯ್ಯ ಮತ್ತು ಅವನ ಮಗನಾದ ತಿಪ್ಪಯ್ಯನ ಗುಣ ವ್ಯಕ್ತಿತ್ವ ನಡತೆಗಳಿಗೆ ಬೇಸತ್ತು . . . ಬೆಂಗಳೂರಿನಲ್ಲಿ ತಿಪ್ಪಯ್ಯನ ಮೂಲಕ ಉದ್ಯೋಗವನ್ನು ಪಡೆಯುವಾಗ ಪುರುಷೋತ್ತಮ ತನ್ನ ಸಂಬಂಧಿಕನೆಂದು ಹೇಳದೆ ಕೇವಲ ಗುರುತಿನ ವ್ಯಕ್ತಿಯೆಂದು ಅಧಿಕಾರಿಗೆ ಹೇಳುವ ತಿಪ್ಪಯ್ಯನ ಸಣ್ಣತನ, ಸಮಾಜದಲ್ಲಿ ತಮ್ಮಿಂದಲೇ ಪುರುಷೋತ್ತಮನ ಬಾಳು ಉದ್ಧಾರವಾಯಿತೆಂದು ಹೇಳಿಕೊಳ್ಳುವ ನರಸರಾಜಯ್ಯನ, ಅವಿನಯ ದುರ್ವರ್ತನೆ, ಜನರು ಪುರುಷೋತ್ತಮನನ್ನು ನೋಡುವ ರೀತಿ ... ಇತ್ಯಾದಿಗಳಿಂದ ನರಸರಾಜಯ್ಯ-ತಿಪ್ಪಯ್ಯನ ಪ್ರತಿಷ್ಠೆಯ ಬಲಿಪಶುವಾಗಿ ಇರಲಿಚ್ಛಿಸದೇ, ತನ್ನ ಸ್ವಂತಿಕೆ ಮರೆಸಲು, ತನ್ನ ಮನೆತನದ ಮರ್ಯಾದೆ ಕಾಪಾಡಲು, ತನಗಾದ ಅಪಮಾನಗಳಿಂದ ಸಿಡಿದೇಳಲು, ಅವರ ಹಂಗಿನ ಕರಾಳ ಬಂಧನದಿಂದ ಪಾರಾಗಲು, ತಿಪ್ಪಯ್ಯನಿಂದ ಪಡೆದ ಕೆಲಸಕ್ಕೆ ರಾಜೀನಾಮೆ ನೀಡಿ ಮತ್ತೆ ಕೂಡುವಳ್ಳಿಗೆ ಪುರುಷೋತ್ತಮ ಬಂದು ಆತ್ಮಶ್ರದ್ಧೆ ಸ್ವಾಭಿಮಾನದಿಂದ ಶ್ರಮಿಸಿ ನಾಡಿನಾದ್ಯಂತ ಹೆಸರುವಾಸಿ ವ್ಯಕ್ತಿಯಾಗುವಲ್ಲಿ ನಿಜಕ್ಕೂ 'ಪುರುಷೋತ್ತಮ'ನೇ ಆಗಿದ್ದಾನೆ.

ಮೂರನೇ ಕತೆ "ಹಳ್ಳಿಯ ನ್ಯಾಯ"ದಲ್ಲಿ ನಾಗಪ್ಪ ಶಾನುಭೋಗನ ಕ್ರೂರ ವರ್ತನೆ, ದೌರ್ಜನ್ಯ ದಬ್ಬಾಳಿಕೆಯ ಗುಣ, ಕಂಡದ್ದನ್ನೆಲ್ಲಾ ಬಲವಂತವಾಗಿ ಕಸಿದುಕೊಳ್ಳುವ ನಡತೆ ಸಂಕುಚಿತ ಸ್ವಭಾವ, ಅನ್ಯಾಯ, ಅಕ್ರಮ, ಅಧರ್ಮದ ಪರಿಪಾಲನೆಯಿಂದಾಗಿ, ಆ ಹಳ್ಳಿಯ ಜನರ ಬದುಕು ಭೀಕರ, ನರಕ ಸದೃಶ್ಯವೇ ಆಗಿದೆ.

ಎರಡನೇ ಮಹಾಯುದ್ಧ ಮುಗಿದ ಮೇಲೆ ದೇಶದಲ್ಲಿ ಅನ್ನದ ಸಮಸ್ಯೆ ಮುಗಿಲೆತ್ತರ ಹಬ್ಬಿ ಪ್ರತಿ ಒಂದೊಂದು ಅಗುಳಿಗೂ ಬರ್ಬರತೆ ಉಂಟಾದಾಗ ಸರಕಾರ ಕಾಳನ್ನು ನಿಯಂತ್ರಿಸಿ ಬೆಲೆಯನ್ನು ಖಚಿತಪಡಿಸಿ ಮನೆಯಿಂದ ಮತ್ತೊಬ್ಬರ ಮನೆಗೆ ಧಾನ್ಯ ಮಾರುವುದನ್ನು ನಿಷೇಧಿಸಿ ಇದನ್ನು ಆಚರಿಸಿದವರಿಗೆ ಶಿಕ್ಷೆಗೆ ಗುರಿಪಡಿಸಿತು. ಜೊತೆಗೆ

ಖುದ್ದಾಗಿ ತಾನೇ ಧಾನ್ಯವನ್ನು ಆಹಾರವನ್ನು ಹಂಚುವ ಕೆಲಸ ಮಾಡುವಾಗ ಅದು ಅನ್ಯಾಯುವಾಗಿಯೇ ಬೇರೊಬ್ಬರ ಪಾಲಾಗಿದೆ.

ಸರಕಾರದ ಬೆಲೆ ದುಬಾರಿಯಾದಾಗ, ಸಮಾಜ ಘಾತುಕರು ಸರಕಾರದ ನಿಯಮ ಉಲ್ಲಂಘಿಸಿ ಕದ್ದು ಮಾರುವ ಯತ್ನ ನಡೆಸಿದರು. ಜನತೆಗೆ ಸರಕಾರ ಕೊಡುವ ಧಾನ್ಯ ಸಾಲದೇ ಕದ್ದುಕೊಂಡು ತಿನ್ನುವ ಪರಿಸ್ಥಿತಿ ಬಂದಿತು.

ಹಸಿವಿನ ತಾಪ ಮಕ್ಕಳನ್ನು ಇನ್ನೊಬ್ಬರಿಗೆ ಮಾರುವ ಶೋಚನೀಯ ದುರಂತಕ್ಕೆ ಗುರಿ ಮಾಡಿಸಿತು. ಈ ಸಮಯದಲ್ಲಿ ನಾಗಪ್ಪ ಶಾನುಭೋಗನಿಗೆ ಸಂಭ್ರಮ ಉಂಟಾಗಿ ಅಕ್ರಮವಾಗಿಯೇ ಧಾನ್ಯ ಅಳೆದು ಹಣ ಪಡೆದು ಬಡವರ ಶ್ರಮದ ಬೆಲೆಯನ್ನು ಲಪಟಾಯಿಸುತ್ತಿದ್ದನು.

ವಿಧವೆಯು, ಬಡವಳು, ಕೋಮಲ ಮನದವಳು, ಮರ್ಯಾದೆಗೆ ಅಂಜುವವಳಾದ ಅಚ್ಚಮ್ಮಜ್ಜಿ ಈ ಭೀಕರ ಪರಿಸ್ಥಿತಿಯಲ್ಲಿ ಎರಡು ಹರಳು ಉಪ್ಪಿಗೆಂದು ಹೊಸ್ಸಾಚಾರಿಯ ಮಗ ಭರಮನಿಗೆ ಒಂದು ಸೇರು ರಾಗಿಯನ್ನು ಮಾರಿದ ಸುದ್ದಿ ತಿಳಿದು ನಾಗಪ್ಪ ಶಾನುಭೋಗ ಕೆಂಡಕಾರಿ ಜನರಿಗೆ ಈ ಸುದ್ದಿ ತಿಳಿಯುವಂತೆ ಮಾಡಿದಾಗ, ತಾನು ಬೀದಿಯ ಬಾಯಿಗಾದೆನಲ್ಲಾ ಎಂದು ಅಚ್ಚಜ್ಜಿ ವ್ಯಥೆಪಟ್ಟಳು, ಮರುಗಿದಳು, ಕುಗ್ಗಿ ಹೋದಳು, ಅತ್ತಳು. ನದಿಗೆ ಹೋಗಿ ಸಮಾಧಾನ ತಂದುಕೊಳ್ಳುವ ಸಮಯದಲ್ಲಿ ಹುಲ್ಲು ಕೊಯ್ಯಲು ಬಂದ ತುಂಗವ್ವನ ಮೂಲಕ ಶಾನುಭೋಗ ಅವಳ ಬಗ್ಗೆ ನ್ಯಾಯ ತೀರ್ಮಾನ ಕರೆಯುವನೆಂಬ ಸುದ್ದಿ ತಿಳಿಯುತ್ತಲೇ ಅಚ್ಚಜ್ಜಿ ಮುಂದಾಗುವ ನ್ಯಾಯದ ಸನ್ನಿವೇಶ ನೆನೆದು ಹತ್ತು ಜನರ ಮುಂದೆ ನಿಲ್ಲುವ, ಅವರ ಬಾಯಿ ಮಾತಾಗುವ, ಸನ್ನಿವೇಶಕ್ಕೆ ಹೆದರಿ ಮಾನಾಪಮಾನದ ತೊಳಲಾಟಕ್ಕೆ ಗುರಿಯಾಗಿ ಹೃದಯಾಘಾತದಿಂದ ಕ್ಷಣಮಾತ್ರದಲ್ಲೇ ತೀರಿಕೊಳ್ಳುವುದರೊಂದಿಗೆ ಕತೆ ಮುಕ್ತಾಯವಾಗಿದೆ. ಅವಳ ಪರಿಶುದ್ಧ ಬದುಕಿಗೆ ಹಳ್ಳಿಯ ಕಲ್ಮಷ ಶಾನುಭೋಗಿಕೆ ಯಾವ ರೀತಿ ನ್ಯಾಯ ಕೊಟ್ಟಿತೆಂಬ ಮಾರ್ಮಿಕ ಧ್ವನಿ ಮಾರ್ದನಿಯಾಗಿಯೇ ಇಂದಿನ ದೇಶದ ಪರಿಸ್ಥಿತಿಯಲ್ಲೂ ಮೊಳಗುತ್ತಿದೆ ; ಓದುಗನ ಮನದಲ್ಲಿಯೂ ಮಿಡಿಯುತ್ತದೆ.

ಹೀಗೆ ಒಳ್ಳೆಯ ಮೌಲ್ಯಗಳನ್ನು ಪರಿಪಾಲಿಸುವ ಜನರಿಗೆ ಬದುಕು ಕ್ಷಣ ಕ್ಷಣ ಹೋರಾಟವಾಗುತ್ತಿರುತ್ತದೆ. ಅನೇಕ ಎಡರು–ತೊಡರುಗಳು, ಕಷ್ಟ ಸಂಕೋಲೆಗಳನ್ನು ಎದುರಿಸಿ ಮುನ್ನುಗ್ಗಿ ತಮ್ಮ ಗುರಿ–ಆದರ್ಶವನ್ನು ಅವರು ತಲುಪಿದಾಗ ನೆಮ್ಮದಿ, ಸಂತಸ–ಸಂತೃಪ್ತಿ ಹೊಂದುತ್ತಾರೆ ಎಂಬ ಸತ್ಯವನ್ನು ಕತೆಗಾರರು ತಮ್ಮ ಕತೆಗಳಲ್ಲಿ ನಿರೂಪಿಸಿದ್ದಾರೆ. ಹಾಗೆಯೇ ಅಪಮೌಲ್ಯಗಳನ್ನು ಹೊಂದಿ ಬಾಳುವ ಜನರಿಂದ ಸಂಸ್ಕೃತಿ ಹದಗೆಟ್ಟ ಹಂತವನ್ನು ತಲುಪುವ ಬಗೆ, ಸಮಾಜಘಾತುಕರು ಇತರರನ್ನು ಕಾಡುವ ಅಂಶವೂ ವಾಸ್ತವವೇ ಆಗಿರುವುದರಿಂದ ಶ್ರೀ ಸಮೇತನಹಳ್ಳಿ ರಾಮರಾಯರು ತಮ್ಮ ಕತೆಗಳಲ್ಲಿ ವಿಭಿನ್ನವಾಗಿ ತಂದಿರುವುದರಿಂದ ಒಟ್ಟಾರೆ 'ಈಸಬೇಕು' ಕಥಾಸಂಕಲನ 'ವ್ಯಕ್ತಿತ್ವಗಳ ಸಿರಿಗನ್ನಡಿ'ಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಹೊಸಹಸಿರು ಉದಯೋದ್ಯಾನ

ಡಾ. ಎಚ್. ಎಸ್. ವೆಂಕಟೇಶಮೂರ್ತಿ

ಶ್ರೀ ಸಮೇತನಹಳ್ಳಿ ರಾಮರಾಯರು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ವ್ಯಕ್ತಿ. ಕಾದಂಬರಿ, ನಾಟಕ, ಮಹಾಕಾವ್ಯ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃತಿರಚನೆ ಮಾಡಿ ಕನ್ನಡ ಓದುಗರ ಗೌರವಾದರಗಳನ್ನು ಪಡೆದಿದ್ದಾರೆ. ಈಗ ಇಳಿವಯಸ್ಸಿನಲ್ಲಿ ರುವ ಶ್ರೀಯುತರನ್ನು ಆಪ್ತರು ಸೇರಿ ಸಮ್ಮಾನಿಸುತ್ತಿರುವ ಸಂದರ್ಭದಲ್ಲಿ ಅವರ ಬಗ್ಗೆ ನನಗಿರುವ ಗೌರವದ ಅಭಿವ್ಯಕ್ತಿಯಾಗಿ ಈ ಲೇಖನ ಬರೆಯುತ್ತಿದ್ದೇನೆ. ಲೇಖಕರಲ್ಲಿ ಪರಸ್ಪರ ಇರಬೇಕಾದ ಗೌರವಾದರಗಳು ಈಚಿನ ದಿನಗಳಲ್ಲಿ ಮರೆಯಾಗುತ್ತಿರುವಂತೆ ನನಗನ್ನಿಸುತ್ತಿದೆ. ಶಿಷ್ಟಾಚಾರ, ಸೌಜನ್ಯಗಳು ಅಪಮೌಲ್ಯಗಳಾಗಿ ಗಣಿಸಲ್ಪಡುತ್ತಿವೆ. ಇಂಥ ಸಂದರ್ಭದಲ್ಲಿ ನಮ್ಮಂತೆಯೇ ಸಾಹಿತ್ಯದ ಕೆಲಸ ಮಾಡುತ್ತಿರುವ ಸೋದರ ಸಾಹಿತಿಗಳ ಬಗ್ಗೆ ಅವಕಾಶ ಒದಗಿದಾಗ ಬರೆಯುವುದು ಒಂದು ಸಾಂಸ್ಕೃತಿಕ ಜವಾಬ್ದಾರಿ, ವ್ರತ ಎಂದು ನನ್ನ ದೃಢನಂಬಿಕೆ.

ಶ್ರೀಯುತರಾದ ರಾಮರಾಯರ 'ಉದಯೋದ್ಯಾನ' ಎಂಬ ಕವಿತಾ ಸಂಗ್ರಹದ ಬಗ್ಗೆ ಕೆಲವು ಮಾತುಗಳನ್ನು ಬರೆಯಬೇಕೆಂಬುದು ನನ್ನ ಉದ್ದೇಶ. ಉದಯೋದ್ಯಾನ ಬಿಡಿಕವಿತೆಗಳ ಸಂಗ್ರಹ. ಲೇಖಕರು ತುಂಬ ಹಿಂದೆ ಬರೆದ ಕವಿತೆಗಳು ಕೆಲವು ಹೊಸ ಕವಿತೆಗಳೂ ಇದರಲ್ಲಿ ಸೇರಿವೆ ಎಂದಿದ್ದಾರೆ. ಆದರೂ ಭಾಷೆ, ಲಯದ ದೃಷ್ಟಿಯಿಂದ ಸಂಗ್ರಹದಲ್ಲಿ ಅಂಥ ಭಿನ್ನತೆ ಕಾಣುತ್ತಿಲ್ಲ. ಎಲ್ಲಾ ಒಂದೇ ಕಾಲದಲ್ಲಿ ರಚಿತವಾದ ಕವಿತೆ ಗಳೆಂಬಂತೆಯೇ ಇವೆ. ಅದು ನವೋದಯ ಕಾವ್ಯದ ಕಾಲ. ಪ್ರಕೃತಿ, ಪ್ರೇಮ, ದೇಶ ಭಕ್ತಿ ಇವು ಹೆಚ್ಚಾಗಿ ಇಲ್ಲಿ ಕಾಣುವ ವಸ್ತುಗಳು ಅವುಗಳ ನಿರ್ವಹಣೆ, ಭಾಷಾರೂಪ, ಲಯ ಎಲ್ಲವೂ ನವೋದಯದ ಸಂಭ್ರಮದ ಕಾಲವನ್ನೇ ನೆನಪಿಸುತ್ತವೆ.

ದೂರದಿಂದಲೆ ನಿಂತು ಏಕಿಂತು ಹೃದಯವನು
ಭುವನ ಮೋಹನ ನಿನ್ನ ದಿವ್ಯ ಮಾಧುರ್ಯದಲಿ
ತುಂಬುತಿಹೆ ! ಒಳಗೆ ಬಾ ಸುಂದರಿಯೆ–ಓ
ಕವನ ಕಾಮಿನಿಯೆ

* * *

ಪೀತಾಂಬರವನುಡಿಸಿ ಮೊಗ್ಗು ಮುಡಿಸುವರೊಮ್ಮೆ
ಬಲು ಮೆಚ್ಚು ನಮ್ಮೂರ ಅರಳು ಮೊಗ್ಗು
ತೌರ ತಂಪಿನಲಾನು ನಿಮ್ಮ ಮರೆತವಳಲ್ಲ
ಏನು ಮಾಡಲಿ ಬರೆಯೆ ಬಿಡುವೆ ಇಲ್ಲ

ನಮ್ಮೂರ ತಿಮ್ಮಾಜಿ ಮದುವೆಯಿಲ್ಲದ ಹುಡುಗಿ
ಕೆಲಸದಲಿ ಅತಿ ಮೆಚ್ಚು ; ಬಹಳ ಜಾಣೆ
ಕಿರುಹರೆಯ ಮೈ ತುಂಬೆ, ಎಳೆ ಚೆಲುವೆ ಕಳೆಯೇರಿ
ಕಾಡಕೆಂದಳಿರಂತೆ ಕಾಣುತಿಹಳು

* * *

ಉದಯ ಸೂರ್ಯನ ಹೊನ್ನಿನೋಕುಳಿಯೆ ಬಾನು ಬುವಿ
ತುಂಬಿ ಸುಖಸ್ವಪ್ನ ಭವ್ಯವನು ಕಡೆವವೊಲು, ಓ,
ಸ್ಪರ್ಶಸಂಜೀವಿನಿಯೆ, ಆರೋಗ್ಯದಧಿದೇವಿ,
ಮೂಡಿ ಬಾ, ನನ್ನ ನಾಡೆದೆಬೀಣೆ ಮಹಾ ಮಾಂ-
ಗಲ್ಯ ಗೀತೆಯ ಮೊಳಗೆ. ನಿನ್ನಮಲ ಕರುಣೆ ಕಯ್-
ನೀರಿನಲಿ ಬೆಳೆದ ಹಿರಿಯರು ಹೊನ್ನ ಹರಿಸಿದರು ;

* * *

ಕೆರೆಯ ಕರೆಯ ಕೋಡಿಯಲ್ಲಿ
ಗಿರಿಯ ತೊರೆಯ ಅಂಚಿನಲ್ಲಿ
ಒರಗಿ ಶಿಲೆಯನೊಂದು ನೆಲಸಿ
ಇರುವ ದೇವಿ ಯಾರ್ ?
ತರುಗಳಲ್ಲಿ ಮಹಿಮೆ ತೋರ್ಪ
ಕರುಣ ಮೂರ್ತಿ ಯಾರ್ ?

ಮೊದಲಾದ ಸಾಲುಗಳು ನವೋದಯದ ಮುಖ್ಯಮಾದರಿಗಳನ್ನೆಲ್ಲಾ ನಮ್ಮ ಕಣ್ಣೆದುರು ತೆರೆಯುತ್ತವೆ. ಡಿವಿಜಿ, ಕುವೆಂಪು, ಕೆಎಸ್‌ನ ಮೊದಲಾದ ಮುಖ್ಯ ಕವಿಗಳ ನೆನಪೂ ಆಗುತ್ತದೆ.

ಎಳಸಿದಂತೆ, ಏನಗೆಯ್ಯಲಿ, ಬಹನೆಂದು, ನುಡಿಪನೆಂದು ಎಚ್ಚರಿಪನವನೆಂದು, ಬಾಡುವೊಲು, ತುಂಬಿಹಿರಿ, ನೆಲಸಿಹಿರಿ, ಮೆಲನೆ ನಗುವಳು, ಈ ಬಗೆಯ ಪ್ರಯೋಗ ಗಳು ಉದಯೋದ್ಯಾನದ ಕವಿತೆಗಳ ರಚನೆಯ ಕಾಲವನ್ನೋ, ಅಥವಾ ಕವಿಯ ಭಾಷಾಸಿದ್ಧಿಯನ್ನೋ ಸ್ಪಷ್ಟವಾಗಿ ಅಭಿವ್ಯಕ್ತಿಸುತ್ತವೆ.

ರಾಮರಾಯರ ಕವಿತೆಗಳಲ್ಲಿ ವಿಶೇಷವಾಗಿ ಕಾಣುವುದು ಭಾಷೆ, ಲಯ ವಸ್ತು ನಿರ್ವಹಣೆಯಲ್ಲಿ ಕಾಣುವ ಬದ್ಧ ಮಾದರಿಯ ಅಚ್ಚುಕಟ್ಟು. ಈ ಅಚ್ಚುಕಟ್ಟು ಕಸಿವಿಸಿ ಉಂಟುಮಾಡದೆ ಓದನ್ನು ಮುನ್ನಡೆಸುತ್ತದೆ. ಹೆಜ್ಜೆ ಹೆಜ್ಜೆಗೆ ತೊಡಕುಗಳು, ಅಪ ಪ್ರಯೋಗಗಳು, ಇಲ್ಲಿ ಕಾಣುವುದಿಲ್ಲ. ಕನ್ನಡದ ಸಮೃದ್ಧವಾದ ಸಾಹಿತ್ಯಾಧ್ಯಯನದಿಂದ ಸಂಸ್ಕಾರಗೊಂಡ ಸುಸಂಸ್ಕೃತ ಮನಸ್ಸಿನ ಅಭಿವ್ಯಕ್ತಿಯನ್ನು ನಾವು ಈ ಸಂಗ್ರಹದ ಯಾವುದೇ ಪುಟದಲ್ಲೂ ಕಾಣಬಹುದು. ವಸ್ತು, ಲಯ, .ನಿಲುವು ಯಾವುದೂ ಅನಿ ರೀಕ್ಷಿತವಲ್ಲ. ಎಲ್ಲದರಲ್ಲೂ ಒಂದು ಹದ, ಒಂದು ನಿಶ್ಚಿತ ನಡೆ. ಆರ್ಷೇಯ ಮೌಲ್ಯಗಳಲ್ಲಿ ಶ್ರದ್ಧೆಯುಳ್ಳ ಮನಸ್ಸಿನ ಸಾಂಪ್ರದಾಯಿಕ ತುಡಿತಗಳು ಉದ್ದಕ್ಕೂ ಕಾಣುತ್ತವೆ. ಹೀಗಾಗಿ ಒಂದು ನಿಶ್ಚಿತ ಕಾಲಘಟ್ಟದ ಒಲವು ನಿಲುವಿನ ಪ್ರಾಮಾಣಿಕ ಅಭಿವ್ಯಕ್ತಿ

ಯಾಗಿಯೂ ಈ ಸಂಗ್ರಹವನ್ನು ನೋಡಬಹುದು. ಬಂದ ಮಾತುಗಳಲ್ಲಿ ತನ್ನ ಎದೆಯಿಂದಲೇ ಹೊಮ್ಮಿದಂಥವು ಎಷ್ಟು, ಪರಂಪರೆಯಿಂದಲೋ, ಸಮಕಾಲೀನ ಸಾಹಿತ್ಯ ಸಂದರ್ಭದಿಂದಲೋ, ಒಪ್ಪಿ ಮಂಡಿಸಲಾಗುವ ಮಾತುಗಳೆಷ್ಟು ಎಂಬುದನ್ನು ಶೋಧಿಸುವ ಪ್ರವೃತ್ತಿ ಈ ಸಂಗ್ರಹದಲ್ಲಿ ಕಾಣದು. ಆದುದರಿಂದ ಪ್ರಧಾನವಾಗಿ ಇದು ಪ್ರತಿಧ್ವನಿ ಕಾವ್ಯವಾಗಿದೆ.

ನಿರೀಕ್ಷಣೆ, ತಿಮ್ಮಾಜಿ, ಹಣ್ಣಿನ ಹೆಣ್ಣು, ಸೀತೆ, ಮೊದಲಾದ ಕವಿತೆಗಳನ್ನು ಸಂತೋಷಪಡುತ್ತ ಓದಬಹುದು.

ತನ್ನ ಮಾಂಗಲ್ಯದಲಿ ಬಾನ ತಾರಗೆಯೊಂದು
ಬೆಳಕಾಗಿ ಅನವರತ ಬೆಳಗಬೇಕು
ಮಳೆಬಿಲ್ಲಿನಲಿ ಕಾಂಬ ರಂಜಿಸುವ ರಂಗುಗಳು
ತನ್ನ ಸೀರೆಯ ನಿರಿಯ ತುಂಬಬೇಕು
(ನಿರೀಕ್ಷಣೆ)

ಈ ಬಗೆಯ ಚಿತ್ರಗಳು ತಮ್ಮ ರಮ್ಯತೆಯಲ್ಲೇ ಮನಸ್ಸಿಗೆ ಪ್ರಿಯವಾಗುತ್ತವೆ.

ರಾಮರಾಯರ ಈ ಹಳೇ ಕವಿತೆಗಳ ಹೊಸಸಂಗ್ರಹ ಓದಿದಾಗ ನನಗೆ ಇನ್ನೊಮ್ಮೆ ಲಾಲ್‌ಬಾಗಿನಲ್ಲಿ ಸುತ್ತಿ ಬಂದಂತೆನಿಸಿತು. ಆ ಮರಗಳು, ಆ ಗಿಡಗಳು, ಆ ದಾರಿಗಳು, ಆ ತಿರುವುಗಳು ಕೂಡ, ನಮಗೆ ಪರಿಚಿತವೇ ಆದರೂ ಮತ್ತೆ ಲಾಲ್‌ಬಾಗಿಗೆ ಹೋಗಬಾರದು ಎಂದು, ಎಂದೂ ನನಗನಿಸಿಲ್ಲ. ಕಾರಣ, ಎಲ್ಲಿದ್ದರೂ ಹಸಿರಿಗೆ ಹಸಿರಿನ ಗುಣ ಇದ್ದೇ ಇರುತ್ತದೆ.

ಶಾಕುಂತಲಾ ಮಹಾಕಾವ್ಯ ಅದರಲ್ಲಿ ತೋರುವ ಹೊಸತನ ಸಮಂಜಸ ಮತ್ತು ಸಹಜವಾಗಿ ಕಾಣುತ್ತವೆ. ಕಾವ್ಯದ ಭಾಷೆ ಭಾವನೆ ಚಿತ್ರಮಯವಾಗಿದ್ದು ಮನಸ್ಸಿಗೆ ಹೃದಯಕ್ಕೆ ಆನಂದ ತರುತ್ತದೆ.

೧೫–೧೨–೭೭ ನ. ಭದ್ರಯ್ಯ

ಉದಯೋದ್ಯಾನ

ಡಾ॥ ಕೆ. ಆರ್. ಸಂಧ್ಯಾರೆಡ್ಡಿ

ಕನ್ನಡದ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ ಸಮೇತನಹಳ್ಳಿ ರಾಮರಾಯರು ಬರೆದ ಅರವತ್ತೆಂಟು ಕವಿತೆಗಳ ಸಂಗ್ರಹವೇ 'ಉದಯೋದ್ಯಾನ'. ಇದು ಅವರ ಬಹು ದಿನಗಳ ಕನಸಿನಫಲವೂ ಹೌದು. ರಾಮರಾಯರ ಬಹುಮೆಚ್ಚಿನ ಸಾಹಿತ್ಯ ಪ್ರಕಾರವೆಂದರೆ ಕಾವ್ಯ, ಪಂಪ, ರನ್ನ, ಜನ್ನ, ಲಕ್ಷ್ಮೀಶ, ನಾರಣಪ್ಪ, ರಾಘವಾಂಕ, ಮುದ್ದಣ ಮೊದ ಲಾದ ಕನ್ನಡ ಕವಿಪುಂಗವರ ಕಾವ್ಯಗಳನ್ನು ಆಳವಾಗಿ ಅಭ್ಯಾಸಮಾಡಿದ ರಾಮ ರಾಯರು ಅವುಗಳ ಚೆಲುವಿಗೆ, ಸೊಬಗು, ಪಾಂಡಿತ್ಯಗಳಿಗೆ ಸಂಪೂರ್ಣ ಮಾರು ಹೋದ ವರು. ಇಂಥ ಕವಿ, ಕಾವ್ಯಗಳ ಅಧ್ಯಯನ ಕಾವ್ಯ ಪ್ರಕಾರದ ಬಗ್ಗೆ ಅವರಿಗೆ ಅಪಾರವಾದ ಒಲವು ಮೂಡಲು ಕಾರಣವಾಯಿತು. ಬರೆದರೆ ಪದ್ಯಗಳನ್ನೇ ಬರೆಯಬೇಕು ಎಂದು ನಿಶ್ಚಯಿಸಿದ ಅವರು ಬರೆದ ನಾಟಕಗಳೂ ಕೂಡ ಪದ್ಯದಲ್ಲೆ ಮೂಡಿದವು. ಬಾಲ್ಯದ ದಿನಗಳ ನೆನಪುಗಳನ್ನು ನಿರೂಪಿಸಬೇಕೆಂದು ಹೊರಟಾಗ ಅದು ಪದ್ಯದಲ್ಲೆ ಮೈದಳೆ ಯಿತು. ತಮ್ಮ ಸಮಕಾಲೀನ ಕವಿ ಸ್ನೇಹಿತರಿಗೆ ಬರೆಯುತ್ತಿದ್ದ ಪತ್ರಗಳೂ ಸಹ ಪದ್ಯ ರೂಪ ತಾಳುತ್ತಿದ್ದವು. ಆಮೇಲಾಮೇಲೆ ಅವರು ಗದ್ಯದಲ್ಲಿ ಹೆಚ್ಚು ಬರೆದರಾದರೂ ಪದ್ಯದಛಾಯೆ ದೂರವಾಗಲಿಲ್ಲ. ಪದ್ಯದ ಮೇಲೆ ಇಷ್ಟೆಲ್ಲ ಒಲವಿದ್ದರೂ ಅವರ ಪ್ರಥಮ ಕಾವ್ಯ ಸಂಕಲನ ಉದಯೋದ್ಯಾನ ಪ್ರಕಟವಾಗಿದ್ದು ತೀರ ಇತ್ತೀಚೆಗೆ ಎಂಬುದು ವಿಸ್ಮಯಕಾರಿ. ರಾಸಲೀಲೆ ಎಂಬ ಒಂದು ಸಣ್ಣ ಗೀತ ನಾಟಕವೇ ಅವರು ಪ್ರಕಟಿಸಿದ ಮೊದಲ ಪದ್ಯ. ಅನಂತರ ಶಾಕುಂತಲಾ ಎಂಬ ಕಾವ್ಯ ಬರೆದರು.

ಉದಯೋದ್ಯಾನದಲ್ಲಿರುವ ಬಹುತೇಕ ಪದ್ಯಗಳು ಕನ್ನಡದ ವಿವಿಧ ಪತ್ರಿಕೆಗಳಲ್ಲಿ ಈ ಮೊದಲೇ ಪ್ರಕಟವಾಗಿವೆ. ಪ್ರಸ್ತುತ ಸಂಕಲನ ನವೋದಯಕಾಲದ ಕಾವ್ಯಸತ್ವದ ಪಡಿಯಚ್ಚಿನಂತಿದೆ. ಪ್ರಕೃತಿಪ್ರಿಯತೆ, ದೇಶಾಭಿಮಾನ, ಆದರ್ಶಪ್ರಿಯತೆ, ಮಾನ ವೀಯತೆ, ದೈವನಿಷ್ಠೆ, ಅಂತರಂಗ ನಿವೇದನೆ . . . ಇವೇ ಇಲ್ಲಿನ ಹೆಚ್ಚಿನ ಕವನಗಳ ವಸ್ತು. ಕವನವೊಂದರಲ್ಲಿ ರಾಮರಾಯರು, ಬಾಳ ಚಲುವನ್ನರಸಿ ಹೊರಟ ಯಾತ್ರಿಕ ನಾನು . . . ಎಂದು ಹೇಳುತ್ತಾರೆ. ಈ ಜೀವನದೃಷ್ಟಿ ಇಲ್ಲಿನ ಎಲ್ಲರ ಕವಿತೆಗಳಲ್ಲೂ ಸೂಸಿ ಹರಿದಿದೆ. ಕಾವ್ಯದಂತಹ ಸುಂದರವಾದ ಪ್ರಕಾರವನ್ನು ಆಯ್ದುಕೊಳ್ಳುವಲ್ಲಿಯೇ ಈ ಚೆಲುವನ್ನರಸುವ ದೃಷ್ಟಿ ವ್ಯಕ್ತವಾಗುತ್ತವೆ. ಯಾಕೆಂದರೆ ಈ ಕವಿಗೆ, ಕವಿತೆಯೆಂದರೆ ಸೌಂದರ್ಯ, ಮಾಧುರ್ಯ, ಆನಂದ, ಪ್ರೇಮ, ಸ್ವಪ್ನ. ಅದರ ದನಿ ಇನಿದು, ಅವರ

ರೂಪ ಭುವನ ಮನೋಹರೆ. . . ಉದಯೋದ್ಯಾನದ ಮೊದಲ ಕವಿತೆಯ ಶೀರ್ಷಿಕೆ ಕವನಕಾಮಿನಿ, ಕವನವನ್ನು ಕಾಮಿನಿಗೆ ಹೋಲಿಸುತ್ತಾ :

ಭುವನ ಭೋಗದ ಭವ್ಯ ನವ್ಯ ಕಲೆಗಳ ನೀರೆ
. . . .
ಆನಂದ ಸಾಮ್ರಾಜ್ಯ ಚಕ್ರವರ್ತಿನಿ ನೀನು
ನಿನ್ನ ಮಡಿಲಿನ ಮಧುರಮೋಹ ನಿದ್ರೆಯಲಾನು
ಮೈ ಮರೆಯಲೆಳೆಸಿದಪೆ ಮಾಧುರಿಯೆ–ಸುರ
ಸ್ವಪ್ನ ಸುಂದರಿಯೆ
. . . .

ಎಂದು ಹೇಳುವಲ್ಲಿ ಪದ್ಯಪ್ರಕಾರದ ಬಗ್ಗೆ ಈ ಕವಿಯ ಒಲವು, ಅಭಿಮಾನ, ಆರಾಧನಾ ಮನೋಭಾವದ ತೀವ್ರತೆಗಳು ಪ್ರಕಟವಾಗುತ್ತವೆ. ಈ ಸಂಕಲನದ ಆರಂಭದ ಕವನಗಳೆಲ್ಲವೂ ಸೌಂದರ್ಯವೇ ಕಾವ್ಯದ ಲಕ್ಷಣ, ಸುಂದರವಾದುದಷ್ಟೇ ಕಾವ್ಯವಸ್ತುವಾಗಲು ಸೂಕ್ತ ಎಂಬುದು ಕವಿಯ ಧೋರಣೆಯಿರಬೇಕು ಎನಿಸುವಂತೆ ಇವೆ. ಪ್ರಕೃತಿ ಸೌಂದರ್ಯದ ವರ್ಣನೆ ಹೆಣ್ಣಿನ ಚೆಲುವಿನ ವರ್ಣನೆ, ಪ್ರೀತಿ ಪ್ರೇಮ, ದಂಪತಿಗಳ ವಿರಹವನ್ನು ವಸ್ತುವಾಗಿಸಿಕೊಂಡ ರಾಗೋದಯ, ಮುತ್ತು, ಅವಳು, ದನಿ–ಮಾರ್ದನಿ, ಹೆಣ್ಣು, ನಿರೀಕ್ಷಣೆ, ಮೊದಲುಕಂಡಾಗ ಮುಂತಾದ ಕವನಗಳನ್ನು ಈ ಮಾತಿಗೆ ನಿದರ್ಶನವಾಗಿ ನೋಡಬಹುದು. ರಾಗೋದಯ ಎಂಬ ಪದ್ಯದಲ್ಲಿನ ಮಧುಮಾಸದ ವರ್ಣನೆ ಹೀಗಿದೆ :

ಮಧುಮಾಸವೇನಂದ
ಆನಂದ ಮಕರಂದ
ಲೋಕನಾಡಿಗಳಿಂದ
ಹೊಮ್ಮುವುದು ಎಂಥ ಚಂದ

ಹೊಸ ಹೊಂಗೆ ಬಳ್ಳಿಗಳು
ಕರೆವ ಹೂ ಗೆಜ್ಜೆಗಳು
ಸಿಹಿ ಮಾವು ಮೊಗ್ಗುಗಳು
ಹುವ್ವುಗಳು ಎಲ್ಲೆಲ್ಲಿಯೂ

ಭೂಮಿದೇವಿಯ ಮಧುರ
ಒಲವಿನುಗರ ಸಾರ
ಮೇಲೆದ್ದು ಆ ಹಸುರ
ಆ ಕದಿರ ತಾಳಿದ್ದಿತು.

ಹೆಣ್ಣಿನ ವರ್ಣನೆಯಲ್ಲಿಯು ಈ ಸೌಂದರ್ಯದೃಷ್ಟಿಯೇ ಪ್ರಧಾನವಾಗಿದೆ. 'ಹೆಣ್ಣು' ಎಂಬ ಪದ್ಯದ ಕೆಲವು ಸಾಲುಗಳನ್ನು ನೋಡಬಹುದು :

ಸರಳವೆನಿತೀ ವಾಣಿ, ಶ್ರೀವಾಣಿ ವೀಣೆಯಿಂ
ಸುಧೆಯಾಗಿ ಹೊರಹರಿವ ಹೆಣ್ಣೆಂಬ ವಾಣಿ !
ಕಲೆಯೆಂಬ ಹಣ್ಣುಗಳ ಸವಿರಸವ ಮೈತುಂಬಿ

ಹೆಣ್ಣ ರೂಪವನಾಂತ ಸುರ ಚೆಲುವ ಶ್ರೇಣಿ
. . . .
. . . .
ಕೆಂದಳಿರ ಕೋಮಲತೆ ಅರಳಿದಲರಿನ ಚೆಲುವು
ಉಷೆ ಬೀರುವಾರತಿಯ ಕಮನೀಯ ಕಾಂತಿ
ಹಿಮಮಣಿಯ ಸಿರಿ ಹೊಳಪು, ತಿಳಿ ಹೊನಲ ಮೈತುಂಬ
ಈ ಎಲ್ಲ ಅವಳಲ್ಲಿ ಆ ಹೆಣ್ಣಿನಲ್ಲಿ

ಸೌಂದರ್ಯ ವರ್ಣನೆಯೇ ಪ್ರಧಾನವಾದ ಕವಿತೆಗಳಲ್ಲಿ ಅರ್ಥಧ್ವನಿಯಿಲ್ಲದಿದ್ದರೂ ಕೆಲವೊಂದು ಕವಿತೆಗಳ ವಸ್ತುವಿಷಯದೊಂದಿಗೆ ಕವಿಯ ಸೂಕ್ಷ್ಮದೃಷ್ಟಿಯೂ ಬೆರೆತು ಅವು ಒಳ್ಳೆಯ ಕವಿತೆಗಳಾಗಿವೆ. ಮೊದಲು ಕಂಡಾಗ ಎಂಬ ಕವಿತೆಯಲ್ಲಿ ಮದುವೆಯೊಂದರ ಸಂದರ್ಭದ ಮದುಮಕ್ಕಳ ವೇಷಭೂಷಣಗಳು, ಸಂಪ್ರದಾಯದ ವರ್ಣನೆ ಕಣ್ಣಿಗೆ ಕಟ್ಟುವಂತಿದೆ . . .

ನಿಂಬಾವಳಿಯ ಹೊಸ ಜರಿಯ ರೇಶಿಮೆಯನುಡಿಸಿ
ಹೆರಳು ಹಾಕಲು ತಾಯಿ ಅಳುತಲಳುತ
ಚಪ್ಪರದ ಹಸುರು ಬಳೆ ಘಲಿರುಘಲಿರೆನುತಿರಲು
ಅರಿಶಿನವ ಹಚ್ಚಿದರು ಹಸಿಯ ಮೈಗೆ
. . . .
ಬಂಗಾರದಂಚುಗಳು ಕೂಡಿರುವ ಹಣೆಯಲ್ಲಿ
ಬಿಳಿಯ ಬಾಸಿಗ ಹೊಳೆಯೆ ಚಂದ್ರನಂತೆ
ನಳಿ ನೀಳ ತೋಳಿನಲಿ ಗೋಧಿಯಕ್ಕಿಯ ಗಂಟು
ಹೊಸಶುಭ್ರ ಜನಿವಾರ ಹೆಗಲಿನಲ್ಲಿ.

ಯಾವುದೇ ಸನ್ನಿವೇಶವು ಅಂದಚೆಂದಗಳನ್ನು ಕವಿ ಎಷ್ಟು ಸಮರ್ಥವಾಗಿ ವರ್ಣಿಸಬಲ್ಲರು ಎಂಬುದಕ್ಕೆ ಸೀತೆ ಹಾಗೂ ಗೋಪಾಲ ಎಂಬ ಕವಿತೆಗಳೂ ಉತ್ತಮ ನಿದರ್ಶನ. ಒಂದು ಹಸು ಹಾಗೂ ಕರುವಿನ ಕುರಿತಾದ ಸೀತೆ ಎಂಬ ಕವಿತೆಯಲ್ಲಿ ಹಸು, ಕರುವಿನ ಅಂದ ಚೆಂದ, ಅವುಗಳ ನಡವಳಿಕೆಗಳ ಸೂಕ್ಷ್ಮಾವಲೋಕನದ ಜೊತೆಗೆ ಮನುಷ್ಯರು ಹಾಗೂ ಪ್ರಾಣಿಗಳ ಒಡನಾಟದ ಸಹಜವಾದ ವರ್ಣನೆಯೂ ಇದೆ. ಸುಲಲಿತವಾದ ಶೈಲಿಯಲ್ಲಿ ಸಾಗುವ ಕಥನ ಕವನದ ಮಾದರಿಯ ಈ ಪದ್ಯದಲ್ಲಿ ಸೀತೆ ಎಂಬ ಹಸು "ಗಾಳಿಯಲ್ಲಿ ತೂಗುತ್ತಿದ್ದ ಬೆಳೆದ ಹೊಲದ ಹಸುರನ್ನು ಕಂಡು ಒಳ್ಳೆ ಸವಿಯ ಪಯಿರ ಬಯಸಿ ತುಂಟ ಹಸುವಿನೊಡನೆ ಸೇರಿ . . . ಕರುವನ್ನೂ ಮರೆತು" ಎಲ್ಲೋ ಮರೆಯಾಗಿ ಹೋಗುತ್ತದೆ. ಸಂಜೆಯಾದರೂ ಸೀತೆ ಮನೆಗೆ ಬರದಿದ್ದಾಗ ಮನೆಯಲ್ಲಿ ತಳಮಳವೇಳುತ್ತದೆ. ಕರುವಿನ ಅಳಲಿಗಾಗಿ ಮನೆಮಂದಿಯೆಲ್ಲಾ ಮರುಗುತ್ತಾರೆ. 'ಎಲ್ಲರಂತೆ ಪುತ್ರಪ್ರೇಮ ಅದಕು ಇಹುದು. ಹೊತ್ತು ಹೆತ್ತು ಬೇನೆಯರಿತ ತಾಯಿ ಮಗನ ಮರೆತು ನಿಮಿಷ ಇರಲರಿಯಳು, ಮಗನನುಳಿದು ಹೋಗಳು' ಎಂದು ತಾಯಿಯಾದವಳು ಅನುಭವದ ನುಡಿ

ನುಡಿಯುತ್ತಾಳೆ. ಇದೇ ತಳಮಳ ಆತಂಕದಲ್ಲಿ ಬೆಳಗಾಗುತ್ತದೆ. "ಮೂಡುಬೆಳಕು ಹರಿವ ಮೊದಲೆ ತಾಯಿಯೆದ್ದು ಕದವ ತೆರೆದು ನೋಡಲಲ್ಲಿ ಸೀತೆ ಇರಲು ಅಯ್ಯೋ ಪಾಪಿ ಸೀತೆ ನೀನು ಮಗುವನೇಕೆ ಮರೆತುಹೋದೆ, ತೋಂಡು ತಿನಿಸಿನಾಸೆಯಾಯ್ತೆ" ಎಂದು ಬೈದಾಗ ಹಸು ಲಜ್ಜೆಯಿಂದ ಶಿರವ ಬಾಗಿಸಿತಂತೆ. ಇಂದಿನ ದಿನಗಳಲ್ಲಿ ತೀರ ಅಪರೂಪ ವಾದ ಇಂಥ ಸನ್ನಿವೇಶವನ್ನು ಕವಿ ಪ್ರಸ್ತುತ ಕವನದಲ್ಲಿ ಸೆರೆಹಿಡಿದಿದ್ದಾರೆ. ಉತ್ತಮ ಶಿಶುಗೀತೆಯಾಗಿ ಯಶಸ್ವಿಯಾಗುವಂಥ ಕವನ ಇದು. 'ರಾಯರ ರಾಣಿ' ಎಂಬ ಕವಿ ತೆಯೂ ಸಹ ಕವಿಯ ಸೂಕ್ಷ್ಮನೋಟ ಹಾಗೂ ವರ್ಣನೆಯ ಸಾಮರ್ಥ್ಯಕ್ಕೆ ಉತ್ತಮ ನಿದರ್ಶನ. ಈ ಪದ್ಯದಲ್ಲಿ ವರಸಾಮ್ಯವಿಲ್ಲದ ಮದುವೆಯ ವೈಪರೀತ್ಯಗಳನ್ನು, ಮೂರನೇ ಮದುವೆಯಾದ ವೃದ್ಧ ಪತಿಯ ಸ್ವಭಾವ, ಇಂಥವನನ್ನು ಮದುವೆಯಾದ ಎಳೆಯ ಹುಡುಗಿಯ ಭಾವನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ :

ನಮ್ಮ ರಾಯರ ರಾಣಿ ಬೆಡಗಿನವಳೇನಲ್ಲ
ಮೀರಿ ಬಂದಿಹ ಹರೆಯ ತುಂಬುಗಣ್ಣು.
. . . .
ಬಾಳ ಬಯಕೆಗಳು ಅಳಿದಿಲ್ಲವೆಂಬುದನು
ಹೇಳುತಿವೆ ಉಟ್ಟಿರುವ ನಿರಿಯ ಸೀರೆ
. . . . . .
ನಡುಮನೆಗೆ ಬಂದಾಗ ಕಾಣುವುದು ಗೋಡೆಯಲಿ
ರಾಧೆ ಮಾಧವ ಕ್ರೀಡೆ ರಾಸಲೀಲೆ
ಅಂಗಳದ ಹೂವಿನಲಿ ಬಣ್ಣ ಬಣ್ಣದ ಚಿಟ್ಟೆ
ಚೆಂಜೇನ ಹೀರುವುದು ರೆಕ್ಕೆ ಹರಡಿ
. . . .
ಚಂದಿರನು ಬಂದಾಗ ಹೊರಗೆ ಹೋಗಳು ಅವಳು
ಕಣ್ಣೀರ ಹರಿಸುವಳು ವಿಧಿಯ ನೆನೆದು.

ಇದಕ್ಕೆ ಪ್ರತಿಯಾಗಿ ಅವಳ ವೃದ್ಧ ಪತಿಯ ಸ್ವಭಾವ ಇಂಥದ್ದು.

ಇಳಿವಯಸಿಗನುವಾದ ಗಾಂಭೀರ್ಯ ರಾಯರದು
ನುಡಿಸೆ ಕಿಡಿ ಹಾರುವುದು ಸಲುಗೆ ಇಲ್ಲ
ಬಹಳ ಸಂಯಮಿಯೆಂದು ಹೇಳುತಿದೆ ಹಣೆಸುಕ್ಕು
ದಂತಗಳು ನಲಿಯುತಿವೆ ದೂರಿಯಾಡಿ . . .

ಸರಸ ದಾಂಪತ್ಯದ ಹಲವು ಮುಖಗಳನ್ನು ಚಿತ್ರಿಸುವ ಕವಿತೆಗಳೂ ಇಲ್ಲಿವೆ. ಈ ಕವಿತೆ ಗಳು ಕೆ. ಎಸ್. ನರಸಿಂಹಸ್ವಾಮಿಯವರ ಪದ್ಯಗಳಲ್ಲಿರುವ ರಸಿಕತೆ, ಭಾಷೆಯ ಲಾಲಿತ್ಯ ಗಳನ್ನು ನೆನಪಿಸುತ್ತವೆ.

ರಾಮರಾಯರ ಅಂತರಂಗ ನಿವೇದನೆಯ ಕವಿತೆಗಳು ವಿಶೇಷವಾಗಿ ಗಮನ ಸೆಳೆಯು ತ್ತವೆ. ಹೇಗೆ ಬದುಕಲಿ ಇಲ್ಲಿ, ಮನವಬೆಳಗಿಸು ದೇವ, ಭಾವಯಜ್ಞ, ಮನದ ಈ ನವು

ರೇತಕೋ, ನನ್ನ ತಪ್ಪೇನು ಮೊದಲಾದ ಕವಿತೆಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು. ಸ್ನೇಹ, ಪ್ರೀತಿ, ಮಮತೆಗಳಿಗೆ ಅರಳುವ, ವೈರ, ಕ್ರೌರ್ಯ, ನಿಂದೆಗಳಿಗೆ ಮುದುಡುವ ಹೂಮನಸ್ಸಿನ ಈ ಕವಿ ತನ್ನ ಸಂಕಷ್ಟಗಳಿಗೆ ಕಾರಣಗಳೇನು ಎಂಬುದರ ಮೌನವಿಶ್ಲೇಷಣೆ ನಡೆಸುತ್ತಲೇ ಬದುಕಿನ ಬಗೆಗೆ ಪ್ರೀತಿಯನ್ನು ಕಾಪಾಡಿಕೊಂಡು ದೈವ ನಿಷ್ಠೆಯ ಬಲದಿಂದ ಬದುಕು ಸಾಗಿಸುತ್ತಾರೆ. ಆತ್ಮಾವಲೋಕನದ ಪ್ರಕ್ರಿಯೆ ಕಾವ್ಯಾತ್ಮಕವಾಗಿ 'ನನ್ನ ತಪ್ಪೇನು' ಎಂಬ ಕವಿತೆಯಲ್ಲಿ ರೂಪುತಳೆದಿದೆ :

ನನ್ನ ತಪ್ಪನು ನಾನೆ ಹುಡುಕುವೆ
ಅರ್ಧರಾತ್ರಿಯ ಮೌನದಿ
ಮನದ ಬಗ್ಗಡ ತಿಳಿದ ತಾರಾ
ಕಾಂತಿ ಹರಿಸಲು ಸುರನದಿ

ದೇವ ಹೇ ಸಕಲಾತ್ಮ ಸಾಕ್ಷಿಯೆ
ಇದಿಗೊ ಬಿನ್ನಪ ಬಿನ್ನಪ
ನೊಂದು ನೀರಾಗುತಿಹೆನಯ್ಯೋ
ಹಾಡಿ ದಾರುಣ ಧನಿಸಪ

ನಿನ್ನ ಶಕ್ತಿಯ ಬಲದ ನೆಚ್ಚುಗೆ
ಮೂರ್ಖತನವೆಂದೆಂಬರು
ನನ್ನ ದಾರಿಗೆ ಮುಳ್ಳು ಹರಡುವ
ಸ್ವಂತ ವರ್ಗದ ಹುಂಬರು
. . . .

ತನ್ನದು ಅತಿಸೂಕ್ಷ್ಮವಾದ ಮನಸ್ಸು, ಈ ಜಗತ್ತಿನಲ್ಲಿ ಅಂಥ ಸೂಕ್ಷ್ಮತೆ ಸಲ್ಲದು ಎಂಬ ಕವಿಯ ಅರಿವನ್ನು 'ಮನದ ಈ ನವುರೇತಕೋ' ಎಂಬ ಪದ್ಯ ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ.

. . . .
ನನ್ನ ಮನಕೀ ನವುರನಿನಿತೊಂದನೇಕಿತ್ತೆ
ತಡೆಯಲಾರೆನು ತಂದೆ ಹದುಳಗೊಳಿಸು
ಹೊಸತು ಹೊಮ್ಮಿಗೆಯು ಚಿಗುರಿನ ಕೆಂಪು ನಸುಉಸಿರು
ಸೋಂಕಿದರು ಒದ್ದಾಡಿ ಬಿಡುವ ಅಲಸು.

ಬೂರುಗದ ಹತ್ತಿಹೂವಿನ ಎಳೆಯ ನಯವಿತ್ತೆ
ನನ್ನಾವ ಸುಖಕೆಂದೊ ಕೊರಗುತಿರುವೆ
ಮನದ ನೆಮ್ಮದಿಯೊಂದೆ ಸುಖದ ತೌರಾಗಿರಲು
ಅದರ ಉಪಟಳದಿ ಅನುದಿನವು ನೋಯ್ವೆ
. . . .
ಬಾಳ ಚೆಲುವನ್ನರಸಿ ಹೊರಟ ಯಾತ್ರಿಕ ನಾನು
ಮನವ ನೆಮ್ಮದಿಗೊಳಿಸು ದಾರಿ ನಡೆಯೆ
. . . .

ಸ್ವಾತಂತ್ರ್ಯದ ಬಯಕೆ, ದೇಶಾಭಿಮಾನ, ದೇಶೋದ್ಧಾರವನ್ನೂ ಕುರಿತು ಚಿಂತಿಸುವ ಕೆಲವು ಕವಿತೆಗಳು ಇಲ್ಲಿವೆ. 'ನಮ್ಮ ನಿಲುವು' ಎಂಬ ಕವಿತೆಯಲ್ಲಿ ನಮ್ಮ ಧರ್ಮ, ಕಲೆ, ಸಾಹಿತ್ಯಗಳ ಪರಂಪರೆಯನ್ನು ನೆನಪಿಸುತ್ತಾ ಇಂದಿನ ಅವನತಿಯನ್ನು ಕಂಡು ಕಣ್ಣೀರು ಮಿಡಿಯುತ್ತಾರೆ :

. . . , ...
ಕಲ್ಪಿಸಿಕೊ ಒಮ್ಮೆ
ಕಲ್ಲರಳಿ ಹೂವಾದ ಹೊನ್ನಾದ ಹೃದಯದುತ್ಸಾಹವಾದ
ನೆಲಕೆಲ್ಲ ಸಂಭ್ರಮದ ಜೀವನೋತ್ಸವವಾದ
ಆ ಚೆಲುವು ಶಿಲ್ಪಕಲೆಯನ್ನು
ಹದಗೊಂಡ ಬಾಳಸವಿಯನ್ನು . . . . .

ಎಂದು ವರ್ಣಿಸುತ್ತಾ ಕವಿತೆಯ ೩ನೇ ಭಾಗದಲ್ಲಿ ಅವನತಿಯ ಸ್ಥಿತಿಯನ್ನು ವರ್ಣಿಸುತ್ತಾರೆ :

ಅಬ್ಬ ಭೀಕರದ ಸಾವು !
ಏನು ಈ ಕೊರೆವ ನೋವು !
ನೆಲದ ರವರವೆಯಲ್ಲಿ ಹರಿದಿದ್ದ ಅಮೃತವೇನಾಯ್ತು
ನಡೆನುಡಿಯ ನೋಟಾದಾಟದಕಾಂತಿ ಏಕರತು ಹೋಯ್ತು
ಬದುಕುತಿಹೆವಿಂತು ಸತ್ತ ಹೆಣವಾಗಿ
ಯಾರೊ ಧೂರ್ತರ ಭೋಗಕಾಗಿ
. . . .

ಇಷ್ಟಾದರೂ ನಮ್ಮ ನಾಡು, ಸಂಸ್ಕೃತಿ, ಪರಂಪರೆಗಳ ಪುನರುದ್ಧಾರವಾಗುತ್ತದೆ ಎಂಬುದರಲ್ಲಿ ಕವಿಗೆ ಅಚಲನಂಬಿಕೆ. ಬೇಂದ್ರೆಯವರು ಗಂಗೆಯನ್ನು ಭೂಮಿಗೆ ಇಳಿದು ಬಾ ತಾಯಿ ಎಂದು ಕರೆದ ಶೈಲಿಯಲ್ಲಿ ಈ ನಾಡನ್ನು ನಡೆಸುವ ಅಮರಶಕ್ತಿಯನ್ನು ಅವತರಿಸು ಬಾ ಎಂದು ಆಹ್ವಾನಿಸುತ್ತಾರೆ.

. . . .
ಸಂಪನ್ನ ಸಂಸ್ಕೃತಿಯ ನಿಲ್ಲಿಸೇವು
ಈ ಚೆನ್ನು ಕನ್ನಡದ ಮುನ್ನಡೆಯ ಮರೆದೇವು
ಹೊನ್ನಾಗಿ ಹೊರವಾಗಿ ಬಾಳಿಯೇವು
ನಾಡ ನಡೆಸುವ ಹೇ ಅಮರಶಕ್ತಿ
ತಾಂಡವನೆ ನೀನಾಗಿ ಧಿಮಧಿಮನೆ ಧಾಳಿಯನ್ನಿಕ್ಕಿ ಬಾ
ನಮ್ಮ ಕೊಳೆಗಳ ತೊಳೆಯೆ
ಹೆಬ್ಬೆಳಸು ಬೆಳೆಯೆ

ಕೌಟುಂಬಿಕ ಸಂಬಂಧಗಳು ಹಾಗೂ ಸನ್ನಿವೇಶಗಳ ಚಿತ್ರಣ ಮತ್ತು ಆತ್ಮನಿವೇದನೆಯ ಕವಿತೆಗಳಲ್ಲಿ ರಾಮರಾಯರ ಅನುಭವ, ಸಂವೇದನೆ ಹಾಗೂ ಸೂಕ್ಷ್ಮಾಭಿವ್ಯಕ್ತಿಗಳು

ಪ್ರಕಟವಾದಂತೆ, ದೇಶಾಭಿಮಾನ ಅಥವಾ ಇತರ ಸಾಮಾಜಿಕ ಕವಿತೆಗಳಲ್ಲಿ ಪ್ರಕಟವಾಗಿಲ್ಲ. ಈ ಕವಿತೆಗಳು ಹೇಳಿಕೆ, ಘೋಷಣೆಗಳ ಮಟ್ಟದಲ್ಲಿಯೇ ಉಳಿದುಬಿಡುತ್ತವೆ. ತಾವೇ ನಿರ್ಮಿಸಿಕೊಂಡ ಒಂದು ಚೌಕಟ್ಟಿನ ಮಿತಿಯಲ್ಲಿ ಹಾಗೂ ನೆಚ್ಚಿಕೊಂಡಂಥ ಮೌಲ್ಯಗಳ ಬೆಳಕಿನಲ್ಲಿ ಬದುಕಬಯಸುವ ಹಾಗೂ ಬದುಕುತ್ತಿರುವ ರಾಮರಾಯರಂಥ ಲೇಖಕರು ಇಂದಿನ ಬದುಕಿನ ಸಂಕೀರ್ಣತೆಗಳನ್ನು ಗ್ರಹಿಸುವುದು ಸಾಧ್ಯವಿಲ್ಲ. ಆದರೂ ಯಾಂತ್ರಿಕ ಯುಗದ ಒತ್ತಡ ಹಾಗೂ ಬೇಗುದಿಗಳಲ್ಲಿ ಮರೆಯಾಗಿರುವ ನವೋದಯ ಕಾಲದ ನವುರಾದ ಭಾವನೆಗಳ ಮುಗ್ಧ ಬದುಕಿನ ಸುಂದರವಾದ ಚಿತ್ರಗಳನ್ನು ಕಣ್ಣ ಮುಂದೆ ತಂದು ನಿಲ್ಲಿಸುವಂಥ ಕವಿತೆಗಳನ್ನು ಬರೆದಿರುವ ಯಶಸ್ಸು ರಾಮರಾಯರದು ಎಂಬುದು ನಿಸ್ಸಂದೇಹ.

ಪ್ರಾಚೀನ ವಿಷಯಗಳನ್ನು ನವೀನ ಶೈಲಿಯಲ್ಲಿ ಓದುಗರಿಗೆ ಉತ್ಸಾಹ ಹುಟ್ಟುವಂತೆ ತಾವು ಬರೆದಿರುವುದಕ್ಕೆ ಶ್ರೀ ಶ್ರೀಗಳವರು ಸಂತೋಷಪಟ್ಟರು. ತಾವು ಯಶೋವಂತರೂ ಬಹು ಜನಾದರಣೀಯರೂ ಆಗುವಂತೆ ಶ್ರೀ ಶಾರದಾಚಂದ್ರಮೌಳೀಶ್ವರರು ಅನುಗ್ರಹಿಸಲೆಂದು ಶ್ರೀ ಶ್ರೀಗಳವರು ಹರಸಿರುತ್ತಾರೆ.

೨೩–೯–೬೦

ಶಾರದಾಪೀಠ ಶೃಂಗೇರಿ

ಶ್ರೀಕೃಷ್ಣಮಾನಸ

ಎನ್. ರಂಗನಾಥಶರ್ಮ

ಹಲವಾರು ಉತ್ತಮ ಕಾವ್ಯ, ನಾಟಕ, ಕಾದಂಬರಿ, ಜೀವನ ಚಿತ್ರಣಗಳನ್ನು ಕನ್ನಡ ಜನತೆಗೆ ನೀಡಿ ವಿಖ್ಯಾತರಾದ ಸಾಹಿತಿಗಳು ಶ್ರೀ ಸಮೇತನಹಳ್ಳಿ ರಾಮರಾಯರು. ಪಾತ್ರ ಚಿತ್ರಣದಲ್ಲಿ ಇವರದು ಪಳಗಿದ ಕೈ. ಅವರ ಇತ್ತೀಚಿನ ಕೃತಿ ಶ್ರೀ ಕೃಷ್ಣಮಾನಸ. ಇದರಲ್ಲಿ ಒಟ್ಟು ೫ ನಾಟಕಗಳಿವೆ. ಮೊದಲಿನ ನಾಟಕದ ಹೆಸರನ್ನೇ ಗ್ರಂಥಕ್ಕೆ ಇಡಲಾಗಿದೆ.

ನಮ್ಮ ಭಾರತೀಯ ಇತಿಹಾಸದಲ್ಲಿ ಶ್ರೀ ಕೃಷ್ಣನು ಬಹುಮುಖದ ವ್ಯಕ್ತಿತ್ವವಿದ್ದ ಧೀರೋದಾತ್ತ ಪಾತ್ರನಾದ ಮಹಾಪುರುಷ. ಆತನ ಸಾಧನ ಮಾರ್ಗಗಳೂ ಸಿದ್ಧಿಗಳೂ ವಿಪುಲವಾದವು. ಅಲ್ಪಶ್ರುತರು ಅವನನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಆದ್ದರಿಂದಲೇ ಕೆಲವು ಸಾಹಿತಿಗಳು ಶ್ರೀಕೃಷ್ಣನು ಜಾರಚೋರಶಿಖಾಮಣಿಯೆಂದೂ ಕಲಹಪ್ರಿಯನೆಂದೂ ವಂಚಕನೆಂದೂ ಬರೆಯಲು ಹಿಂಜರಿಯಲಿಲ್ಲ.

ಶ್ರೀ ರಾಮರಾಯರು ಭಾಗವತ, ವಿಷ್ಣುಪುರಾಣ, ಮಹಾಭಾರತಗಳನ್ನೋದಿ ಈ ಸಾಹಿತಿಗಳಿಗಿಂತ ಭಿನ್ನವಾದ ನಿಲುವನ್ನು ತಳೆದಿದ್ದಾರೆ. ಶ್ರೀಕೃಷ್ಣನ ಮಾನಸವನ್ನು ತೂಗಿನೋಡಲು ಪ್ರಯತ್ನಿಸಿದ್ದಾರೆ. ಅವರು ಹಿಡಿದ ದಾರಿ ಪ್ರಶಂಸನೀಯವಾದದ್ದು. ಲೋಕಕಲ್ಯಾಣ, ಧರ್ಮರಕ್ಷಣೆ, ದುಷ್ಟರಿಗೆ ದಂಡನೆ, ಇವು ಶ್ರೀ ಕೃಷ್ಣನ ಚಾರಿತ್ರದಲ್ಲಿ ಕಂಡು ಬರುವ ಮುಖ್ಯವಾದ ಉದ್ದೇಶಗಳು. ಈ ಉದ್ದೇಶಗಳನ್ನು ಸಾಧಿಸಿ ಕೃತಕೃತ್ಯನಾದದ್ದು ಆತನ ಹೆಗ್ಗಳಿಕೆ. ದೀನರಲ್ಲಿ ಅನುಕಂಪೆ, ಮಿತ್ರರಿಗೆ ನೆರವು, ಆಪ್ತರಲ್ಲಿ ವಿಶ್ವಾಸ ಶತ್ರುಗಳಲ್ಲಿ ಪರಾಕ್ರಮ—ಇವು ಅವನು ನಡೆದ ಹೆಜ್ಜೆಗಳು. ಹೆಜ್ಜೆ ಹೆಜ್ಜೆಗೆ ನ್ಯಾಯಪರಿಪಾಲನೆಯಲ್ಲಿ ಅವನ ಮಾನಸ ಹೇಗೆ ತುಟಿಯುತ್ತಿತ್ತು ಎಂಬುದನ್ನು ಶ್ರೀ ರಾಮರಾಯರು ಕೌಶಲದಿಂದ ಕಾವ್ಯ ಶೈಲಿಯಲ್ಲಿ ವರ್ಣಿಸಿದ್ದಾರೆ. ಶ್ರೀ ಕೃಷ್ಣನು ಭಾರತೀಯರ ಶ್ರದ್ಧಾಬಿಂದುವೆಂಬುದನ್ನರಿತು ದೃಶ್ಯಗಳನ್ನು ಬೆಳೆಸಿದ್ದಾರೆ. ಭಗವದ್ಗೀತೆಯಲ್ಲಿ ಆ ಮಹಾಪುರುಷನು ಇಹಪರಗಳಿಗೆ ಹೊಲಿಗೆ ಹಾಕಿರುವುದು, ಅದೇನು ಕಾರಣವೋ ಲೇಖಕರ ಮನಸ್ಸನ್ನು ಸೆಳೆದಿಲ್ಲ, ಗೀತೆಯ ಪ್ರಸ್ತಾಪವೇ ಬಂದಿಲ್ಲ.

ಒಂದು ಪ್ರಬಂಧಕ್ಕೆಯೋಗ್ಯವಾದ ವಿಷಯವನ್ನು ಸಂಭಾಷಣೆಯ ಮಾಧ್ಯಮದಲ್ಲಿ ಚಿತ್ರಿಸುವುದು ಕಷ್ಟವೇ ಸರಿ. ಈ ಕಷ್ಟ ಮಾರ್ಗದಲ್ಲಿ ಲೇಖಕರು ಯಶಸ್ವಿಗಳಾಗಿದ್ದಾರೆ. ಪ್ರೌಢರಾದ ಓದುಗರಿಗೆ ಮೆಚ್ಚುಗೆಯನ್ನುಂಟುಮಾಡುವ ನಾಟಕವಿದು. ಲೇಖ

ಕರು ನಿಜವಾಗಿ ಅಭಿನಂದನಾರ್ಹರು.

ಸೀತಾಪರಿತ್ಯಾಗ ನಾಟಕ

ಮುದ್ದಣ ಕವಿಯ ಶ್ರೀರಾಮಾಶ್ವಮೇಧದಿಂದ ಸಂಕಲಿತವಾದ ಮನೋಹರವಾದ ನಾಟಕವಿದು. ಬಳಸಿದ ಹಳಗನ್ನಡ ತುಂಬ ಮುದ್ದಾಗಿದೆ. ಪದರಚನೆ ಆಕರ್ಷಕವಾಗಿದೆ. ಪತ್ನಿಯನ್ನು ತ್ಯಾಗಮಾಡಬೇಕಾಗಿ ಬಂದುದಕ್ಕಾಗಿ ಶ್ರೀರಾಮನು ಪರಿತಪಿಸಿ ನುಡಿದ ಕೆಲವೇ ಮಾತುಗಳು ಅವನ ಹೃದಯದ ಆಳದಿಂದ ಬಂದವು. ಲಕ್ಷ್ಮಣನ ಪಾತ್ರ ಉತ್ಕೃಷ್ಟವಾಗಿದೆ. ಸೀತಾದೇವಿಯ ಮಾತುಗಳಂತೂ ನಮ್ಮನ್ನು ಅಳಿಸಿಬಿಡುತ್ತವೆ. ಕರುಣ ರಸದ ಹೊನಲು ಇಲ್ಲಿ ಹರಿದಿದೆ.

ಶ್ರೀ ರಾಮರಾಯರಿಗೆ ಹಳಗನ್ನಡವು ಪ್ರಿಯವಾದದ್ದೆಂದು ಕಾಣುತ್ತದೆ. ತಡೆಯಿಲ್ಲದೆ ಹೊರಡುವ ಹಳಗನ್ನಡದ ನಲ್ನುಡಿಗಳು ಮನೋಜ್ಞವಾದವು. ಹೊಸಗನ್ನಡದ ಬರವಣಿಗೆಯಲ್ಲಿಯೂ ಆ ನುಡಿಗಳು ಆಗಾಗ ಕಾಣಿಸಿಕೊಳ್ಳುತ್ತವೆ. ಈ ನಾಟಕವು ಎಷ್ಟು ಶ್ರವ್ಯವೋ ಅಷ್ಟೇ ದೃಶ್ಯವೂ ಆಗಿ ರಂಗಸ್ಥಳದಲ್ಲಿ ಮೆರೆಯಬಲ್ಲದು. ಇದೊಂದು ಸಾರ್ಥಕವಾದ ಪ್ರಯೋಗ. ಇದಕ್ಕೊಂದು ಅರ್ಥಕೋಶವನ್ನು ಅಳವಡಿಸಿರುವುದು ತುಂಬ ಉಪಯುಕ್ತವಾಗಿದೆ.

ಮಂಗಳಾರ

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ನಡೆದ ಒಂದಾನೊಂದು ಸಾಮಾಜಿಕ ಪ್ರಕರಣದ ಚಿತ್ರಣವಿದು. ಕೇಶವದೇವನ ಮಾತುಗಳು ತೂಕವಾದವು, ಅರ್ಥವತ್ತಾದವು. ಶಾಂತಲಾದೇವಿಯ ನುಡಿಯು ಮಹಾರಾಣಿಗೆ ಒಪ್ಪುವಂತಹದೇ. ಕಥೆಯ ಹಂದರವೇನಿರಬಹುದೆಂದು ತಿಳಿಯದೆ ಓದುಗರ ಮನಸ್ಸಿನಲ್ಲಿ ಗೊಂದಲವೇರ್ಪಡುತ್ತದೆ. ಸಂಗರಸನ ಒಂದು ಪತ್ರದಿಂದ ಕತೆಯಲ್ಲಿ ಸಮಸ್ಯೆಯ ಮೇಲೆ ಸ್ವಲ್ಪ ಬೆಳಕು ಬೀಳುತ್ತದೆ.

ಮಧುಗಿರಿ

ಮಧುಗಿರಿಯ ಪೂರ್ವೇತಿಹಾಸವು ಸಂಭಾಷಣೆಯ ರೂಪದಲ್ಲಿ ಬಂದಿದೆ.

ಗಣೇಶ

ಪುರಾಣ ಕಥೆಗಳ ಆಧಾರದಿಂದ ಹೆಣೆದ ವಸ್ತು ಇಲ್ಲಿದೆ. ಆರ್ಯದ್ರಾವಿಡ ವಾದವನ್ನು ಪುರಸ್ಕರಿಸಿ, ಗಣೇಶನು ದ್ರಾವಿಡ ದೇವತೆಯೆಂದು ಗ್ರಂಥಕರ್ತರು ಬರೆದಿದ್ದಾರೆ. ಗಣಪತಿಯು ವೈದಿಕ ದೇವತೆಯಲ್ಲ, ಆರ್ಯರು ಹೊರಗಿನಿಂದ ಬಂದವರು ಎಂಬುದು ನಾಟಕದಿಂದ ತಿಳಿದು ಬರುವ ಸಂಗತಿ. ಆ ವೈದಿಕ ದೇವತೆಗೆ ಸಕಲ ವೈದಿಕ ಕರ್ಮಗಳಲ್ಲಿಯೂ ಪ್ರಥಮ ಪೂಜೆ ಸಲ್ಲಲು ನಿಮಿತ್ತವೇನು ? ವೈದಿಕದೇವತೆಗಳು ಸಾಲದೆಂದು ಆರ್ಯರು ಇನ್ನೊಂದು ವಿಕೃತದೇವತೆಯನ್ನು ತಂದು ಕೊಂಡು ಅದಕ್ಕೆ ಪರಮ ಪ್ರಾಧಾನ್ಯ

ವನ್ನಿತ್ತು, ಆತನ ಕಥೆಯನ್ನು ಎಲ್ಲ ಪುರಾಣಗಳಲ್ಲಿ ಸೇರಿಸಿ, ಮಹಾಭಾರತವನ್ನು ಅವನಿಂದ ಬರೆಯಿಸಿ, ಗಣಪತಿ ಅಥರ್ವಶೀರ್ಷಾದಿಗಳನ್ನು ರಚಿಸಿದರೆ ? ಪಾರ್ವತಿಯ ಶಾಪದಿಂದ ಗಣಪತಿಯು ಆನೆಯ ಮುಖದವನಾಗಿ ವಿಕಾರ ರೂಪವನ್ನು ತಳೆದನೆಂಬ ಹೇಳಿಕೆ ವಿಚಿತ್ರವಾಗಿ ತೋರಿತು. ಬುಡವಿಲ್ಲದ ಆರ್ಯದ್ರಾವಿಡವಾದವು ನಾಟಕದ ಸಂಭಾಷಣೆಗೆ ಒಪ್ಪುವಂತಹುದೆಂದು ನನಗೆ ತೋರುವುದಿಲ್ಲ.

ಈ ಗ್ರಂಥದಲ್ಲಿ ಮೊದಲನೆಯ ಎರಡು ನಾಟಕಗಳು ಉತ್ತಮದರ್ಜೆಗೆ ಸೇರತಕ್ಕವು. ಉಳಿದವು ರಂಗಸ್ಥಳದಲ್ಲಿ ಸೊಗಸನ್ನು ತರಲಾರವು. ಸ್ವತಂತ್ರ ಪ್ರಬಂಧಗಳಾಗಿ ಬರಲು ಯೋಗ್ಯವಾದವು.

ಶ್ರೇಷ್ಠ ಸಾಹಿತಿಗಳಲ್ಲೊಬ್ಬರಾದ ತಾವು ನಮ್ಮೂರಿನ ಸಾಹಿತಿಗಳ ಸರಮಾಲೆಯಲ್ಲೊಬ್ಬರು ಎಂಬುದು ಹೆಗ್ಗಳಿಕೆ. ಸಾಹಿತ್ಯದ ನೆಲಕ್ಕೆ ಕಾಳು ಬತ್ತದ ನಾನು ತಮ್ಮಂಥ ಮಹಾನ್ ಸಾಹಿತಿಗೆ ಬೆಳೆದು ಬೆಳೆಸಿಕೊಂಡ ಗ್ರಾಮ್ಯ ಪದಗಳಿಂದ ನಿಮಗೆ ನುಡಿನಮನ ಸಲ್ಲಿಸುತ್ತೇನೆ.

ಪಿ. ಎಸ್. ಜವರಪ್ಪಗೌಡ

೧೦–೪–೯೫

ವಿಕಾಸ

ಬಿ. ವಿ. ಕೆ. ಶಾಸ್ತ್ರೀ

ಒಬ್ಬ ಸಂಗೀತಗಾರನನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಅವನ ಸುತ್ತಲೂ ಹೆಣೆದ ಕಾದಂಬರಿ–ವಿಕಾಸ. ಜೀವನದಲ್ಲಿ ಬರುವ ಅನೇಕ ಅಹಿತಕರ ಘಟನೆಗಳು, ಸಮಸ್ಯೆಗಳು, ಕೋಟಲೆಗಳೇ ಮುಂತಾದುವನ್ನೆಲ್ಲಾ ಅನುಭವಿಸಿ, ಎದುರಿಸಿ, ಒಂದೇ ಮನಸ್ಸಿನಿಂದ ಸಾಧನೆ ಮಾಡಿ ಸಂಗೀತದಲ್ಲಿ ಯಶಸ್ಸುಗಳಿಸಿದ ಒಬ್ಬನ ಜೀವನ ಇದರ ವಸ್ತು.

ಸಂಗೀತಗಾರರ ಜೀವನವನ್ನೇ ಆಧರಿಸಿ ಕನ್ನಡದಲ್ಲಿ ರಚಿತವಾದ ಕಾದಂಬರಿಗಳು ಅಪರೂಪ. ಮಾಸ್ತಿಯವರ ಸುಬ್ಬಣ್ಣ, ತರಾಸು ಅವರ ಹಂಸಗೀತೆ ಮುಂತಾದುವನ್ನು ನೆನೆಸಿಕೊಳ್ಳಬಹುದು. ಅಂತಹ ವಸ್ತುವನ್ನು ನಿರೂಪಿಸಿದ ಚಲನಚಿತ್ರಗಳೂ ಇವೆ. ಆದರೆ ಸ್ವಲ್ಪ ಸಂಖ್ಯೆಯಲ್ಲಿ. ಇಂತಹ ಅಪರೂಪ ವರ್ಗಕ್ಕೆ ಸೇರಿದ್ದು–ವಿಕಾಸ. ಕಥಾ ನಾಯಕನಾದ ಮಾಧವನಿಗೆ, ಮೊದಲು ಕ್ರಮಬದ್ಧ ರೀತಿಯಲ್ಲಿ ಸಂಗೀತ ಕಲಿವ ಕಲ್ಪನೆಯೇ ಇರಲಿಲ್ಲ. ಆಕಸ್ಮಿಕವಾಗಿ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಹಂತಹಂತವಾಗಿ ಯಶಸ್ಸಿನ ಮೆಟ್ಟಿಲುಗಳನ್ನು ಏರಿ ನಿಂತವ. ಇದರಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದ. ಸಮಸ್ಯೆಗಳನ್ನು ಎದುರಿಸಿದ. ಅಸಭ್ಯ ಅನಾಗರಿಕ ವರ್ತನೆಗಳನ್ನೆಲ್ಲಾ ಸಹಿಸಿಕೊಂಡು ತನ್ನ ಗುರಿಯನ್ನು ಮುಟ್ಟಿದ ಮಾಧವ.

ಇಲ್ಲಿ ಚಿತ್ರಿತವಾದ ಜನಜೀವನ, ಆ ಪರಿಸರ ಮುಂತಾದುವುಗಳನ್ನು ಓದುವಾಗ ಮಾಸ್ತಿಯವರು ಬರೆದ "ಭಾವ" ಕೃತಿ ನೆನಪಿಗೆ ಬರುತ್ತದೆ. ಆ ಕೃತಿಯಲ್ಲಿ ರೂಪಿಸಿರುವ ಗ್ರಾಮ ಜೀವನ ಚಿತ್ರಕ್ಕೂ ವಿಕಾಸದಲ್ಲಿ ಬರುವ ಅಂತಹದೇ ಚಿತ್ರಕ್ಕೂ ಅನೇಕ ವಿಧಗಳಲ್ಲಿ ಸೌಮ್ಯವಿದೆ. ಪ್ರಾಯಶಃ ಸಮೇತನಹಳ್ಳಿ ರಾಮರಾಯರೂ ಮಾಸ್ತಿಯವರೂ, ಹುಟ್ಟಿ ಬೆಳೆದುದು ಸಮಸಮೀಪವಾದ ಪ್ರದೇಶಗಳಾದುದೂ ಇದಕ್ಕೆ ಮುಖ್ಯಕಾರಣವಿರಬಹುದು. ಆದುದರಿಂದ ಸ್ಮೃತಿಗಳಲ್ಲಿ ಸಾಮ್ಯವಿರುವುದೂ ಸಹಜ.

ಇನ್ನು ಮಾಸ್ತಿಯವರ ಕೃತಿಯಲ್ಲಿ ಒಳ್ಳೆಯವರೂ ಕೆಟ್ಟವರೂ ಸಮಸಂಖ್ಯೆಯಲ್ಲಿ ಕಂಡುಬಂದಲ್ಲಿ ವಿಕಾಸದಲ್ಲಿ ದುರ್ಜನರ ಭಾರ ಹೆಚ್ಚಾಗಿದೆ ಎನಿಸುತ್ತದೆ, ಪುಸ್ತಕದ ೩೯೯ ಪುಟಗಳಲ್ಲಿ ಇನ್ನೂರಕ್ಕೂ ಹೆಚ್ಚು ಪುಟಗಳಲ್ಲಿ ಇಂತಹ ಜನರು, ಹಾಗೂ ಅವರ ಅಸಹ್ಯ ನಡವಳಿಕೆಗಳ ವಿವರಗಳಿಂದ ತುಂಬಿಹೋಗಿದೆ. ಅನೇಕ ವೇಳೆ ಮಾಧವನ ಸಹನೆ, ಸಾಧನೆಗಳೇ ಮರೆಯಾಗುವಂತೆ ಹಾಗೂ ಮರೆತು ಹೋಗುವಂತೆ ಆಗಿದೆ.

ಮಾಧವನ ಮುಖ್ಯವೆನಿಸಬಹುದಾದ ಮೊದಲ ಸಾರ್ವಜನಿಕ ಸಂಗೀತ ಕಚೇರಿ ನಡೆದುದು. ಬೆಂಗಳೂರು ಪುರಭವನದಲ್ಲಿ ಎಂದು ನಿರೂಪಿತವಾಗಿದೆ. ಅಂದರೆ ಈ ಕಾದಂಬರಿಯ ಕತೆ ನಡೆದ ಕಾಲ ಈ ಶತಮಾನದ ಮೂರು ಮತ್ತು ನಾಲ್ಕನೆಯ ದಶಕಗಳಲ್ಲಿ ಎಂದು ಹೇಳಬಹುದು. ಸಂಗೀತ ಭಾಗಕ್ಕೆ ಸಂಬಂಧಿಸಿದ ವರ್ಣನೆಗಳು ಸುಮಾರಾಗಿ ಆ ಕಾಲಕ್ಕೆ ಹೊಂದಿಕೊಳುತ್ತವೆ. ಆದರೆ ಸಂಗೀತಕ್ಕೆ ನೇರವಾಗಿ ಸಂಬಂಧಿಸಿದ ವಿಷಯುಗಳಲ್ಲಿ ಕೆಲವು ಲೋಪಗಳಿವೆ. ನಿದರ್ಶನವಾಗಿ ಚತುರ್ದಂಡಿ ಪ್ರಣಾಳಿಕೆಯುನ್ನು ರಚಿಸಿದವರ ಹೆಸರು ಉದ್ದಕ್ಕೂ ವೆಂಕಟಮುಖಿ ಎಂದೇ ಅಚ್ಚಾಗಿದೆ. ಅದು ಸರಿಯಲ್ಲ ವೆಂಕಟಮಖಿ(?)ಎಂದಿರಬೇಕಾಗಿತ್ತು. ಹಾಗೆಯೇ ತೆಲುಗಿನಲ್ಲಿ ವಿಠಲಾಮಾತ್ಯನು ಸಂಗೀತರತ್ನಾಕರಕ್ಕೆ ವ್ಯಾಖ್ಯೆಯನ್ನು ಬರೆದಂತೆ ಹೇಳಿದೆ. ಇದು ಸರಿಯಲ್ಲ. ಇಂತಹವು ಇನ್ನೂ ಕೆಲವಿವೆ.

ಇನ್ನು ಸಂಗೀತದಲ್ಲಿ ಮಾಧವನ ಸಾಧನೆಯ ವಿಷಯ. ಈ ಭಾಗ ಸ್ವಲ್ಪ ಉತ್ಪ್ರೇಕ್ಷೆಯಿಂದ ಕೂಡಿದೆ ಎನ್ನಬಹುದು. ಆದರೆ ಇದು ಲೇಖಕರ ಕಲ್ಪನಾ ಸ್ವಾತಂತ್ರ್ಯ ಸೀಮೆಗೆ ಸೇರಿದುದು ಎಂದುಕೊಳ್ಳಬಹುದು. ಅಂತೂ ಕನ್ನಡದಲ್ಲಿ ಸಂಗೀತಗಾರರ ಜೀವನವನ್ನೇ ಆಧರಿಸಿದ ಕೃತಿಗಳೇ ಅಪರೂಪ ಎನ್ನುವ ಹಿನ್ನೆಲೆಯಲ್ಲಿ ವಿಕಾಸ ಸ್ವಾಗತಾರ್ಹವಾದುದು.

'ಶ್ರೀಕೃಷ್ಣದರ್ಶನ' ಓದಿದೆ. ಬಹಳ ಸುಂದರವಾದ ಪುಸ್ತಕ ಮನಸ್ಸಿಗೆ ಒಂದು ಬಗೆಯ ನೆಮ್ಮದಿ ನೀಡಿತು. ಅಮಾನುಷ ಘಟನೆಗಳನ್ನು ನೈಜವಾಗಿ ಪರಿವರ್ತಿಸಿರುವುದರಲ್ಲಿ, ವರ್ಣನೆಗಳ ಅತಿಶಯದಲ್ಲಿ ತುಂಬ ಮನನೀಯವಾಗಿದೆ.

೨೮–೧–೮೮ **ಸಾವಿತ್ರಿ ವರದರಾಜರಾವ್**

ಅನುಬಂಧಗಳು

ರಾಸರವರ ಪ್ರಕಟಿತ ಕೃತಿಗಳು

	ಗ್ರಂಥ	ಪ್ರಕಾರ	ವರುಷ	ಪುಟಗಳು
೧	ಭೀಷ್ಮ ಸಂಕಲ್ಪ	ನಾಟಕ	೧೯೪೭	೮೬
೨	ಮಹಾಶ್ವೇತೆ	ನಾಟಕ	೧೯೪೯	೭೨
೩	ಮಹಾಶ್ವೇತೆ	ನೀಳ್ಗತೆ	೧೯೫೧	೪೪
೪	ಎಲೆಮರೆಯ ಹೂ	ಸಾಮಾಜಿಕ ಕಾದಂಬರಿ	೧೯೫೩	೧೫೪
೫	ತಲಕಾಡುಗೊಂಡ	ಐತಿಹಾಸಿಕ ನಾಟಕ	೧೯೫೯	೧೦೬
೬	ರಾಸಲೀಲೆ	ಗೀತನಾಟಕ	೧೯೫೯	೬೦
೭	ಶಿಲ್ಪಸಂಗೀತ	ಐತಿಹಾಸಿಕ ನಾಟಕ	೧೯೫೯	೧೦೬
೮	ಕಲಾರಾಧನೆ	ರೇಡಿಯೋ ನಾಟಕಗಳು	೧೯೬೦	೧೩೮
೯	ಸವತಿಗಂಧವಾರಣೆ	ಐತಿಹಾಸಿಕ ಕಾದಂಬರಿ	೧೯೬೧	೩೪೨
೧೦	ಪಿನಾಕಿನಿ	ಏಕಾಂಕ ನಾಟಕಗಳು	೧೯೬೨	೮೪
೧೧	ಸ್ವರ್ಗಸೋಪಾನ	ಸಣ್ಣಕತೆಗಳು	೧೯೬೨	೧೩೦
೧೨	ದ್ರೋಹಾಡಂಬರ	ಐತಿಹಾಸಿಕ ನಾಟಕ	೧೯೬೪	೧೪೦
೧೩	ನೃತ್ಯಸರಸ್ವತಿ	ಐತಿಹಾಸಿಕ ಕಾದಂಬರಿ	೧೯೬೭	೧೮೦
೧೪	ನಾಟ್ಯಮಂದಾರ	ಐತಿಹಾಸಿಕ ನಾಟಕ	೧೯೬೭	೧೦೪
೧೫	ಪ್ರಾಣವೀಣೆ	ಸಣ್ಣಕತೆಗಳು	೧೯೬೮	೧೧೨
೧೬	ಶಾಕುಂತಲಾ	ಮಹಾಕಾವ್ಯ	೧೯೭೧	೬೫೨
೧೭	ಅಳಿಲು ಸೇವೆ	ತಗಡೂರರ ಜೀವನ ಚಿತ್ರಣ	೧೯೭೪	೧೬೦
೧೮	ಜೂಲಿಯಸ್ ಸೀಸರ್	ಭಾಷಾಂತರ	೧೯೭೪	೧೧೪
೧೯	ಸಿರಿಯಲ ದೇವಿ	ಐತಿಹಾಸಿಕ ಕಾದಂಬರಿ	೧೯೭೮	೨೧೪
೨೦	ಯದುವೊಡೆಯ	ಐತಿಹಾಸಿಕ ಕಾದಂಬರಿ	೧೯೮೧	೨೨೪
೨೧	ಶ್ರೀ ಕೃಷ್ಣದರ್ಶನ	ಪೌರಾಣಿಕ ಕಾದಂಬರಿ	೧೯೮೭	೭೪೮
೨೨	ಟಿಪ್ಪೂಸುಲ್ತಾನನ ಇತಿಹಾಸ	ಅನುವಾದ	೧೯೮೯	೭೪೮
೨೩	ಮೊನೆಗಾರ	ಐತಿಹಾಸಿಕ ಕಾದಂಬರಿ	೧೯೮೯	೨೯೨
೨೪	ಕೋಟೆಮನೆ	ಆತ್ಮಚರಿತೆ	೧೯೯೧	೪೩೪
೨೫	ಶ್ರೀ ಪರಶುರಾಮ	ವೇದ ಕಾಲೀನ ಕಾದಂಬರಿ	೧೯೯೩	೩೦೮
೨೬	ಈಸಬೇಕು	ಸಣ್ಣ ಕತೆಗಳು	೧೯೯೩	೬೪
೨೭	ಉದಯೋದ್ಯಾನ	ಕವನ ಸಂಕಲನ	೧೯೯೩	೧೦೬
೨೮	ಶ್ರೀ ಕೃಷ್ಣಮಾನಸ	ನಾಟಕಗಳು	೧೯೯೪	೧೭೦
೨೯	ವಿಕಾಸ	ಕಾದಂಬರಿ	೧೯೯೭	೩೧೯

ಒಟ್ಟು ಪುಟಗಳು ೬೨೧೧

ಅಪ್ರಕಟಿತ ಹಸ್ತಪ್ರತಿಗಳು

	ಶೀರ್ಷಿಕೆ	ಪ್ರಕಾರ	ವರುಷ	ಪುಟಗಳು
೧	ಶ್ರೀರಾಮಾಶ್ವಮೇಧ	ಮುದ್ದಣಕವಿಯ ಶ್ರೀರಾಮಾಶ್ವ ಮೇಧಂ ಕಾವ್ಯದ ಹೊಸಗನ್ನಡ ರೂಪ	೧೯೪೯	೧೬೨
೨	ಧನ್ಯಪಾಂಡವ	ಪದ್ಯನಾಟಕ	೧೯೫೦	೫೪
೩	ಬಾಳಚೆಲುವು	ಸಾಮಾಜಿಕ ಕಾದಂಬರಿ	೧೯೫೦	೧೨೧
೪	ಗುರುದ್ರೋಣ	ಪೌರಾಣಿಕ ಗದ್ಯ ನಾಟಕ	೧೯೫೨	೮೪
೫	ಸತ್ಯತುಂಗ	ಪೌರಾಣಿಕ ಕಾದಂಬರಿ	೧೯೫೨	೮೪
೬	ಭಾರತ ಸಂಹಿತೆ	ಗದ್ಯನಾಟಕ	೧೯೬೧	೧೩೦
೭	ರಸವರ್ಷಿಣಿ	ಶಾಕುಂತಲಾ ಮಹಾಕಾವ್ಯದ ಗದ್ಯಾನುವಾದ	೧೯೯೧	೩೧೭
೮	ಚಂದನ	ಭಾಷಣಗಳು	—	೧೧೩
೯	ಪಾರಿಜಾತ	ಬಿಡಿ ಲೇಖನಗಳು	—	೧೨೬
೧೦	ಅತ್ತಿಮಬ್ಬೆ	ಐತಿಹಾಸಿಕ ಕಾದಂಬರಿ	೧೯೯೭	೩೨೪
		ಇಂಗ್ಲಿಷಿನಿಂದ ಕನ್ನಡಕ್ಕೆ		
೧೧	ಬ್ರಾಹ್ಮಣಗಳ ಕಾಲದಭಾರತ	ಡಾ॥ ಜೋಗಿರಾಜಬಸು ಅವರ India of Ages of Bramhanas	೧೯೫೫	೩೫೫
೧೨	ಹಿಂದೂಮತದ ದೇವದೇವತೆಗಳು	ಸ್ವಾಮಿ ಹರ್ಷಾನಂದರ Hindu Gods and Goddesses	೧೯೯೬	೧೦೬
		ಕನ್ನಡದಿಂದ ಇಂಗ್ಲೀಷಿಗೆ		
೧೩	Janaka meets his daughter	ಇದೇ ಲೇಖಕನ 'ಬದುಕಿಗೊಂದು ಬೆಳಕು' ಎಂಬ ಸಣ್ಣಕಥೆ	೧೯೬೪	೨೨
			ಒಟ್ಟು ಪುಟಗಳು	೧೯೮೮

ಸೂಚನೆ : ಕೃತಿ ದರ್ಶನ ವಿಭಾಗದಲ್ಲಿನ ಲೇಖನಗಳನ್ನು ಆಯಾ ಗ್ರಂಥಗಳು ಪ್ರಕಟವಾದ ಕ್ರಮದಲ್ಲಿ ಜೋಡಿಸಲಾಗಿದೆ.

ರಾಸ ಜೀವನಘಟ್ಟಗಳು

೨೪–೧೧–೧೯೧೭ : ಜನನ–ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕು ಸಮೇತನಹಳ್ಳಿ ಯಲ್ಲಿ.

೧೯೨೩–೨೬ : ಪಕ್ಕದ ಗ್ರಾಮವಾದ ಬೋದನಹೊಸಹಳ್ಳಿಯಲ್ಲಿ ತಂದೆಯವರಿಂದ ಪ್ರಾಥಮಿಕ ವಿದ್ಯಾಭ್ಯಾಸ.

೧೯೨೭ : ಮೈಸೂರು ವೆಸ್ಲಿಯನ್ ಮಿಷನ್ ಪ್ರೈಮರಿ ಶಾಲೆಯಲ್ಲಿ ನಾಲ್ಕನೆಯ ತರಗತಿಯ ಮೂರು ತಿಂಗಳ ವಿದ್ಯಾಭ್ಯಾಸ.

೧೯೨೮–೨೯ : ದೊಡ್ಡಬಳ್ಳಾಪುರದ ತಾಲ್ಲೂಕು ಕಾಡನೂರಿನಲ್ಲಿ ಕನ್ನಡಲೋಯರ್ ಸೆಕಂಡರಿಯ ಮೊದಲ ವರುಷದ ಕಲಿಕೆ.

೧೯೨೯–೩೦ : ಮಾಲೂರು ತಾಲ್ಲೂಕು ನರಸಾಪುರದಲ್ಲಿ ಇನ್‌ಕಂಪ್ಲೀಟ್ ಮಿಡಲ್‌ಸ್ಕೂಲಿನಲ್ಲಿ ಅರ್ಧ ಇಂಗ್ಲಿಷ್ ಲೋಯರ್ ಸೆಕಂಡರಿಯಲ್ಲಿ ತೇರ್ಗಡೆ.

೧೯೩೦–೩೧ : ಬೆಂಗಳೂರು ವಿಶ್ವೇಶ್ವರಪುರದ ಮಿಡಲ್‌ಸ್ಕೂಲಿನಲ್ಲಿ ಮೂರನೆಯ ವರುಷದ ಮೊದಲ ಅರ್ಧ ಮತ್ತು ಬಳೇಪೇಟೆಯ ಆರ್ಯವಿದ್ಯಾಶಾಲೆಯಲ್ಲಿ ಕೊನೆಯ ಅರ್ಧದ ಬರಿಯ ಇಂಗ್ಲಿಷ್ ಅಭ್ಯಾಸ.

೧೯೩೧–೩೨ : ಬೆಂಗಳೂರು ದಕ್ಷಿಣ ತಾಲ್ಲೂಕು ಹೂಡಿ ಮಾಧ್ಯಮಿಕ ಶಾಲೆಯಲ್ಲಿ ಇಂಗ್ಲಿಷ್ ಲೋಯರ್ ಸೆಕಂಡರಿ ತೇರ್ಗಡೆ.

೧೯೩೨–೩೪ : ಬೆಂಗಳೂರಿನ ರೊಟ್ಟಿ ಅಂಗಡಿ ಮತ್ತು ಕಾಫಿ ಕ್ಲಬ್ಬುಗಳಲ್ಲಿ ಚಾಕರನಾಗಿ ಕೆಲಸ.

೧೯೩೪–೩೫ ; ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ನಾಲ್ಕನೆಯ ಫಾರಂ ತೇರ್ಗಡೆ.

೧೯೩೫–೩೬ : ಅದೇ ಕಟ್ಟಡಕ್ಕೆ ಬಂದ ಸರ್ಕಾರದ ಸೆಂಟ್ರಲ್ ಹೈಸ್ಕೂಲಿನಲ್ಲಿ ಐದನೆಯ ಫಾರಂ ತೇರ್ಗಡೆ.

೧೯೩೬–೩೭ : ಅದೇ ಶಾಲೆಯಲ್ಲಿ ಎಸ್. ಎಸ್. ಎಲ್. ಸಿ. ತೇರ್ಗಡೆ.

೧೧–೬–೧೯೪೧ : ಹೊಸೂರು ತಾಲ್ಲೂಕು ಥಳಿಯಲ್ಲಿ ಮದುವೆ.

೧೯೪೨–೪೩ : ಬೆಂಗಳೂರು **Air Raid Precautions** ಕಛೇರಿಯಲ್ಲಿ **ARP paid warden** ಆಗಿ ಸೇರಿದುದು.

ಸೆಪ್ಟಂಬರು ೧೯೪೩ : ವೈಟ್‌ಫೀಲ್ಡ್ ಬಳಿಯ ಸೈನ್ಯದ **Vehicle depot** ನಲ್ಲಿ **Extra temporary Establishment**ನ ಗುಮಾಸ್ತೆಯಾಗಿ ನೇಮಕ.

೧–೧–೧೯೪೪ : ಮೈಸೂರು ಸರಕಾರದ ಆರೋಗ್ಯ ಇಲಾಖೆಯಲ್ಲಿ ಸ್ಯಾನಿಟರಿ ಇನ್‌ಸ್ಪೆ

ಕ್ಟರ್ ಶಿಕ್ಷಣಕ್ಕೆ ಬೆಂಗಳೂರಿನಲ್ಲಿ ಸೇರಿದುದು.

೪-೯-೧೯೪೪ : ಬೆಂಗಳೂರು ಪುರಸಭೆಯಲ್ಲಿ ಅಸಿಸ್ಟೆಂಟ್ ಸ್ಯಾನಿಟರಿ ಇನ್‌ಸ್ಪೆಕ್ಟರಾಗಿ ರೂ. ೨೫ರ ಸಂಬಳದ ಮೇಲೆ ನೇಮಕ.

೧-೧-೧೯೪೫ : ಕಾಡುಗೋಡಿ ಹೆಲ್ತ್ ಯೂನಿಟ್‌ನಲ್ಲಿ ಕೆಲಸಕ್ಕೆ ಹಾಜರು.

೨೬-೧೧-೧೯೪೫ : ವರ್ಗವಾಗಿ ಬೆಂಗಳೂರಿನ ಬ್ಯೂರೋ ಆಫ್ ಎಪಿಡೆಮಿಯಾಲಜಿ ಯಲ್ಲಿ ಕೆಲಸಕ್ಕೆ ಹಾಜರು.

೧೨-೪-೧೯೪೬: ವರ್ಗವಾಗಿ ಬೆಂಗಳೂರು ನಗರಸಭೆಯಲ್ಲಿ ಮತ್ತೆ ಕೆಲಸಕ್ಕೆ ಹೋದುದು.

೧೦-೧೧-೧೯೪೭ : ಹಾಸನದ ನಗರಸಭೆಯಲ್ಲಿ ಕೆಲಸಕ್ಕೆ ಸೇರಿದುದು. ವರ್ಗದ ಮೇಲೆ.

೬-೭-೧೯೪೮ : ಅಸಿಸ್ಟೆಂಟ್ ಸ್ಯಾನಿಟರಿ ಇನ್‌ಸ್ಪೆಕ್ಟರ್ ಎಂಬ ಹೆಸರಿಗೆ ಬದಲಾಗಿ ಜೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಎಂದಾದುದು.

೧೧-೮-೧೯೫೦ : ಬೆಂಗಳೂರಿನ ಬ್ಯೂರೋ ಆಫ್ ಮಲೇರಿಯಲಾಜಿಗೆ ವರ್ಗವಾಗಿ ಹೋದುದು.

೧೯-೭-೧೯೫೧ : ರಾಮನಗರದ ಆರೋಗ್ಯ ಶಿಕ್ಷಣ ಕೇಂದ್ರಕ್ಕೆ ವರ್ಗವಾಗಿ ಸೇರಿದುದು.

೧-೫-೧೯೫೬ : 'ಶಿಲ್ಪಸಂಗೀತ' ನಾಟಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ತೃತೀಯ ಬಹುಮಾನವಾದ ರೂ. ೧೦೦ ಅನ್ನು ಕೊಟ್ಟುದು.

೧೯-೧೦-೧೯೫೭ : 'ತಾಯಿ' ಎಂಬ ಸಣ್ಣಕತೆಗೆ 'ಪ್ರಜಾವಾಣಿ' ದ್ವಿತೀಯ ಬಹುಮಾನವಾದ ರೂ. ೧೫೦ ಅನ್ನು ಘೋಷಿಸಿದುದು.

೬-೯-೧೯೫೭ : ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರಾಗಿ ಮೇಲ್ದರ್ಜೆಗೆ ಏರಿದುದು.

೧೯೫೭-೫೮ ಮತ್ತು ೧೯೫೮-೫೯ : ಈ ಎರಡು ವರುಷಗಳಿಗೂ 'ಎಲೆಮರೆಯ ಹೂ' ಕಾದಂಬರಿ, ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರೌಢ ಶಾಲಾ ಎರಡನೆಯ ತರಗತಿ(ಐದನೆಯ ಫಾರಂ)ಗೆ ಲಘುಪಠ್ಯವಾದುದು.

೨೬-೩-೧೯೫೮ : 'ತಲಕಾಡುಗೊಂಡ' ನಾಟಕಕ್ಕೆ ಕರ್ನಾಟಕ ಸರಕಾರ ತೃತೀಯ ಬಹುಮಾನವಾದ ರೂ. ೫೦೦ ಅನ್ನು ಘೋಷಿಸಿದುದು.

೨-೭-೧೯೫೯ : ವರ್ಗವಾಗಿ ಮಧುಗಿರಿ ಪುರಸಭೆಯಲ್ಲಿ ಕೆಲಸಕ್ಕೆ ಹಾಜರಾದುದು.

೧೯೬೦-೬೧ : 'ತಲಕಾಡುಗೊಂಡ' ನಾಟಕ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬಿ.ಎ. ಮತ್ತು ಬಿ.ಎಸ್‌ಸಿ. ತರಗತಿಗಳಿಗೆ ಪಠ್ಯಪುಸ್ತಕ ಆದುದು.

೧೯೬೧-೬೨ : ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ತಲಕಾಡುಗೊಂಡ' ನಾಟಕ ಪ್ರಿಯೂನಿವರ್ಸಿಟಿಗೆ ಪಠ್ಯವಾದದ್ದು.

೭-೬-೧೯೬೨ : ಪಾಂಡವಪುರ ಆರೋಗ್ಯ ಕೇಂದ್ರದಲ್ಲಿ ನೇಮಕ-ವರ್ಗವಾಗಿ.

೧೯೬೨ : 'ಸ್ವರ್ಗಸೋಪಾನ' ಸಣ್ಣಕತೆಗಳ ಸಂಕಲನಕ್ಕೆ ಕರ್ನಾಟಕ ಸರಕಾರ ಪ್ರಥಮ ಬಹುಮಾನವಾದ ರೂ. ೫೦೦ ಗಳನ್ನು ಘೋಷಿಸಿದುದು.

೨೮-೬-೧೯೬೫ : ವರ್ಗವಾಗಿ ಮಂಡ್ಯದ ಓರಿಯಂಟೇಷನ್ ಟ್ರೈನಿಂಗ್ ಸೆಂಟರಿನಲ್ಲಿ ಸೇರಿದುದು.

೧೯೬೮–೬೯ : ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಸವತಿಗಂಧವಾರಣೆ' ಕಾದಂಬರಿ ಬಿ.ಕಾಂ. ಪರೀಕ್ಷೆಗೆ ಪಠ್ಯವಾದುದು.

೧–೭–೧೯೬೮ : ಬ್ಲಾಕ್ ಎಕ್ಸ್‌ಟೆನ್‌ಷನ್ ಎಜುಕೇಟರಾಗಿ ವರ್ಗವಾಗಿ ನಂಜನಗೂಡು ತಾಲ್ಲೂಕಿನ ಹೊಸಕೋಟೆ ಆರೋಗ್ಯ ಕೇಂದ್ರದಲ್ಲಿ ಸೇರಿದುದು.

೨೭–೯–೧೯೬೮ : ಮಂಡ್ಯದ ಬಳಿಯ ಶಿವಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವರ್ಗವಾಗಿ ಸೇರಿಕೊಂಡುದು.

೧೯೬೯–೭೦ : ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ನಾಟ್ಯಮಂದಾರ' ನಾಟಕ ಬಿ.ಎ. ಪರೀಕ್ಷೆಗೆ ಪಠ್ಯ.

ಜೂನ್ ೧೯೬೯ : ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದುದು.

೧೩–೧೧–೧೯೭೧ : ಕನಕಪುರದ ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆ.

೧೯೭೨ : 'ಶಾಕುಂತಲಾ' ಮಹಾಕಾವ್ಯಕ್ಕೆ ಕರ್ನಾಟಕ ಸರಕಾರ ರೂ ೧೦೦೦ ಪ್ರಥಮ ಬಹುಮಾನವನ್ನು ಕೊಟ್ಟುದು.

೧೯೭೩ : 'ಸಿರಿಯಲದೇವಿ' ಕಾದಂಬರಿಗೆ 'ಸಂಯುಕ್ತ ಕರ್ನಾಟಕ'ದ ತೃತೀಯ ಬಹುಮಾನ ರೂ ೬೦೦ ಗಳ ಘೋಷಣೆ.

೭–೬–೧೯೭೩ : ಶಿವಳ್ಳಿಯಲ್ಲಿ ನಿವೃತ್ತಿ.

೧೮–೧–೧೯೭೪ : ಮೈಸೂರು ಪುರಭವನದಲ್ಲಿ 'ತಗಡೂರು ರಾಮಚಂದ್ರರಾವ್ ಸನ್ಮಾನ ಸಮಿತಿಯ'ವರು ಅವರ ಜೀವನ ಚರಿತ್ರೆ 'ಅಳಿಲುಸೇವೆ'ಯನ್ನು ಬರೆದುದಕ್ಕಾಗಿ ಸನ್ಮಾನ.

೨೬–೧೦–೧೯೭೬:ಕರ್ನಾಟಕ ಸರಕಾರ ಶ್ರೇಷ್ಠ ಕವಿಯೆಂದು ತಿಂಗಳೊಂದಕ್ಕೆ ೫೦೦ ರೂ ಗೌರವ ವೇತನವನ್ನು ಕೊಟ್ಟುದು.

೧೨–೪–೧೯೮೦ : ಪತ್ನಿಯೊಡನೆ ದಕ್ಷಿಣ ಪ್ರವಾಸಾರಂಭ.

೧೦–೯–೧೯೮೮ : ಪತ್ನಿಯೊಡನೆ ಉತ್ತರಭಾರತ ಪ್ರವಾಸಾರಂಭ.

೧೯–೨–೧೯೮೯ : ಪತ್ನಿಯ ಅಗಲಿಕೆ.

೧೮–೧೧–೧೯೮೯ : 'ಶ್ರೀಕೃಷ್ಣದರ್ಶನ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ವಸುದೇವ ಭೂಪಾಳಂ ದತ್ತಿ ನಿಧಿಯಿಂದ ರೂ ೫೦೦೦ ಗಳ ಪ್ರಥಮ ಬಹುಮಾನ ಸಂದುದು.

೨೩–೩–೧೯೯೨ : ಮೈಸೂರು ಮತ್ತು ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತುಗಳ ಸಂಯುಕ್ತ ಆಶ್ರಯದ ಸಮ್ಮೇಳನದಲ್ಲಿ ಸನ್ಮಾನ.

೩೧–೮–೧೯೯೪ : ಥಳಿ ಮಾಧ್ವಸಂಘದವರಿಂದ ಬೆಂಗಳೂರಿನಲ್ಲಿ ಸನ್ಮಾನ–ಇದನ್ನು ನನ್ನ ಪರವಾಗಿ ಮಗಳು ಭಾರತಿ ಸ್ವೀಕರಿಸಿದಳು.

೩೦–೧೦–೧೯೯೪:ಮುಡುಕುತೊರೆ ಹೋಬಳಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೨೦–೧೧–೧೯೯೪ : ಬೆಂಗಳೂರು ವಿಶ್ವೇಶ್ವರಪುರದ ಸಜ್ಜನರಾವ್ ವೃತ್ತದಲ್ಲಿ ಕರ್ನಾಟಕ ಲೇಖಕರ ಸಂಘದಿಂದ ಸನ್ಮಾನ.

೨೮–೧೧–೧೯೯೪ : ಮೈಸೂರು ಜಿಲ್ಲಾ ಕಿರಿಯ ಆರೋಗ್ಯದ ಸಹಾಯಕರ ಸಂಘದ ಸನ್ಮಾನ.

೧೧–೨–೧೯೯೬ : ಹೊಸಕೋಟೆ ತಾಲ್ಲೂಕು ಸಮ್ಮೇಳನಾಧ್ಯಕ್ಷತೆ.

೫–೪–೧೯೯೭ : ಮೈಸೂರಿನಲ್ಲಿ ನನ್ನ 'ಕೋಟೆಮನೆ'ಯಲ್ಲಿಯೇ ಕ.ಸಾ.ಪ. ಅಧ್ಯಕ್ಷರಿಂದ ಸನ್ಮಾನ.

೧೨–೧–೧೯೯೮ : ಮೈಸೂರಿನಲ್ಲಿ ವೀರಪ್ಪ ಮೊಯಿಲಿಯವರ ಸಾಹಿತ್ಯ ವಿಚಾರ ಗೋಷ್ಠಿಯ ಸಮಾರೋಪ ಸಮಾರಂಭದ ಅಧ್ಯಕ್ಷತೆ.

15-10-1999

ಸಾಹಿತ್ಯ ಪ್ರಶಸ್ತಿಗಳು

ಇಸವಿ	ಗ್ರಂಥ	ಪ್ರಕಾರ	ಸಂಸ್ಥೆ
೧೯೫೬	ಶಿಲ್ಪಸಂಗೀತ	ನಾಟಕ	ಕನ್ನಡ ಸಾಹಿತ್ಯ ಪರಿಷತ್ತು
೧೯೫೭	ತಾಯಿ	ಸಣ್ಣ ಕತೆ	'ಪ್ರಜಾವಾಣಿ'
೧೯೫೮	ತಲುಕಾಡುಗೊಂಡ	ನಾಟಕ	ಕರ್ನಾಟಕ ಸರಕಾರ
೧೯೬೨	ಸ್ವರ್ಗಸೋಪಾನ	ಸಣ್ಣ ಕತೆಗಳು	ಕರ್ನಾಟಕ ಸರಕಾರ
೧೯೭೧	ಶಾಕುಂತಲಾ	ಮಹಾಕಾವ್ಯ	ಕರ್ನಾಟಕ ಸರಕಾರ
೧೯೭೩	ಸಿರಿಯಲದೇವಿ	ಕಾದಂಬರಿ	'ಸಂಯುಕ್ತ ಕರ್ನಾಟಕ'
೧೯೭೬	ಗೌರವ ವೇತನ		ಕರ್ನಾಟಕ ಸರಕಾರ
೧೯೮೭	ಶ್ರೀಕೃಷ್ಣದರ್ಶನ	ಕಾದಂಬರಿ	ಕನ್ನಡ ಸಾಹಿತ್ಯ ಪರಿಷತ್ತು
೧೯೯೪	ಶ್ರೀ ಪರಶುರಾಮ	ಕಾದಂಬರಿ	ಸರ್. ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರತಿಷ್ಠಾನ

ರಾಸರು ಸ್ಥಾಪಿಸಿರುವ

ದತ್ತಿ ನಿಧಿಗಳು

ಗಮಕವಾಚನ ಸ್ಪರ್ಧೆ

ರಾಸ ಅವರ ಪತ್ನಿ ಶ್ರೀಮತಿ ಪಂಕಜಾಕ್ಷಮ್ಮನವರ ಸ್ಮರಣಾರ್ಥವಾಗಿ ಪ್ರತಿವರುಷ ಅವರು ನಿಧನರಾದ ಫೆಬ್ರವರಿ ಹತ್ತೊಂಬತ್ತನೆಯ ತಾರೀಖಿನಂದು, ರಾಸರ ಮಹಾಕಾವ್ಯ 'ಶಾಕುಂತಲಾ' ಕಾವ್ಯವಾಚನ ಸ್ಪರ್ಧೆಯನ್ನು ಏರ್ಪಡಿಸತಕ್ಕದೆಂದು ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಐದು ಸಾವಿರದ ಐದು ನೂರು ರೂಪಾಯಿಗಳನ್ನು ೧೯೮೯ರಲ್ಲಿ ಪುದು ವಟ್ಟಾಗಿ ಇಡಲಾಗಿದೆ. ದತ್ತಿ ಸಂಖ್ಯೆ ಮೈಸೂರು ಜಿಲ್ಲೆ ೫–೪೦.

ಲೇಖನ ಸ್ಪರ್ಧೆ

ಬೆಂಗಳೂರಿನ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಸಂಸ್ಥೆಯಲ್ಲಿ ಐದು ಸಾವಿರ ರೂಪಾಯಿಗಳನ್ನು ಪುದುವಟ್ಟಾಗಿ ಇಟ್ಟು ಅದರಿಂದ ಪ್ರತಿವರುಷವೂ ಬರುವ ಬಡ್ಡಿ ಯಿಂದ 'ರಾಸ ಸಾಹಿತ್ಯ'ವನ್ನು ಕುರಿತ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸುವುದೆಂದು ೧೯೯೫ರಲ್ಲಿ ಒಪ್ಪಂದವಾಗಿ ಆ ಹಣವನ್ನು ದತ್ತಿಯಾಗಿ ಸ್ಥಾಪಿಸಲಾಗಿದೆ.

ಉಪನ್ಯಾಸ

ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ರಾಸಸಾಹಿತ್ಯವನ್ನು ಕುರಿತಂತೆ ಪ್ರತಿವರುಷವೂ ವಿದ್ವಾಂಸರಿಂದ ಭಾಷಣವನ್ನು ಏರ್ಪಡಿಸಲೆಂದು ೧೯೯೭ರ ಜನವರಿಯಲ್ಲಿ ಐದು ಸಾವಿರ ರೂಪಾಯಿಗಳ ದತ್ತಿಯನ್ನು ಸ್ಥಾಪಿಸಲಾಗಿದೆ.

ಸನ್ಮಾನಗಳು

೧೮–೧–೧೯೫೪ : ಮೈಸೂರಿನಲ್ಲಿ ತಗಡೂರು ರಾಮಚಂದ್ರರಾವ್‌ರವರನ್ನು ಆ ಸನ್ಮಾನ ಸಮಿತಿಯವರು ಗೌರವಿಸಿದ ಸಂದರ್ಭದಲ್ಲಿ ಗಾಂಧೀವಾದ ಶ್ರೀ ಜಿ. ರಾಮಚಂದ್ರನ್‌ರವರು, ರಾಯರ 'ಕರ್ಮಯೋಗಿ' ಗ್ರಂಥವನ್ನು ಬಿಡುಗಡೆ ಮಾಡಿದಾಗ ಗೌರವಾರ್ಪಣೆ.

೧೯೮೮ : ಮೈಸೂರು ಕಾವ್ಯರಂಜಿನೀ ಸಭೆಯವರು ಶ್ರೀ ಅನಂತರಾಮು ಅವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿದರು.

೩೩–೩–೧೯೯೨ : ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕನ್ನಡ ಸಾಹಿತ್ಯಪರಿಷತ್ತುಗಳು ಸಂಯುಕ್ತವಾಗಿ ಕೆರೆತೊಣ್ಣೂರಿನಲ್ಲಿ ನಡೆಸಿದ ಸಮ್ಮೇಳನದಲ್ಲಿ ಭಾರತದ ಸರ್ವೋಚ್ಚನ್ಯಾಯಾಲಯದ ಶ್ರೀ. ಇ. ಎಸ್. ವೆಂಕಟರಾಮಯ್ಯನವರಿಂದ ಸನ್ಮಾನ ನಡೆಯಿತು.

೩೧–೮–೧೯೯೪ : ಥಳಿ ಮಾಧ್ವ ಸಂಘದವರು ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥರವರ ಅಧ್ಯಕ್ಷತೆಯಲ್ಲಿ ವಿಜಯಾಪುರ ಕಂಬಿಗಳ ಮಾಧ್ವ ಸಮ್ಮೇಳನದಲ್ಲಿ ಗೌರವಾರ್ಪಣೆ. ಈ ಸನ್ಮಾನವನ್ನು ಇವರ ಪರವಾಗಿ ರಾಸರ ಮಗಳು ಭಾರತಿ ಕ್ಯಾಸರಗೋಡ್ ಸ್ವೀಕರಿಸಿದರು.

೩೦–೧೦–೧೯೯೪ : ಮುಡುಕುತೊರೆಯಲ್ಲಿ ಹೋಬಳಿ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಯಿಸಿದಾಗ ರಾಸರು ಅಧ್ಯಕ್ಷತೆಯನ್ನು ವಹಿಸಿದ್ದರು. ಆಗ ತೋಟದ ಮಠದ ಅಧ್ಯಕ್ಷ ಶ್ರೀ ಶ್ರೀ ಮಹಾಲಿಂಗಸ್ವಾಮಿಗಳಿಂದ ಗೌರವಾರ್ಪಣೆ.

೨೦–೧೧–೧೯೯೪ : ಬೆಂಗಳೂರಿನ ಕರ್ನಾಟಕ ಲೇಖಿಕ ಸಂಘದವರು ಸಜ್ಜನರಾವ್ ವೃತ್ತದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಇ. ಎಸ್. ವೆಂಕಟರಾಮಯ್ಯನವರು ಅಧ್ಯಕ್ಷರಾಗಿಯೂ. ಕರ್ನಾಟದ ನಿವೃತ್ತ ಮುಖ್ಯನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಮುಖ್ಯ ಅತಿಥಿಗಳಾಗಿಯೂ ಇದ್ದ ಪ್ರತ್ಯೇಕ ಸಮಾರಂಭದಲ್ಲಿ ಗೌರವಾರ್ಪಣೆ.

೧೯೯೪ : ಬೆಂಗಳೂರು ಸರ್. ಎಂ. ವಿಶ್ವೇಶ್ವರಯ್ಯ ಸ್ಮಾರಕ ಸಂಸ್ಥೆಯಿಂದ

೨೮–೧೧–೧೯೯೪ : ಮೈಸೂರು ಜಿಲ್ಲಾ ಆರೋಗ್ಯ ಸಹಾಯಕ ಸಂಘದವರು ಜಿಲ್ಲಾ ಆರೋಗ್ಯಾಧಿಕಾರಿ ಡಾ॥ ಕರಕಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಗೌರವಾರ್ಪಣೆ.

೧೧–೨–೧೯೯೬ : ಹೊಸಕೋಟೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ರಾಸರು ವಹಿಸಿದ್ದರು. ಆಗ ನಗರಾಭಿವೃದ್ಧಿ ಸಚಿವ ಶ್ರೀ ಬಿ. ಎನ್. ಬಚ್ಚೇಗೌಡರಿಂದ ಸನ್ಮಾನ.

೫–೪–೧೯೯೭ : ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾದ ಡಾ॥ ಸಾ. ಶಿ. ಮರುಳಯ್ಯನವರು ಮೈಸೂರಿನಲ್ಲಿ ರಾಸರ ಸ್ವಗೃಹ 'ಕೋಟೆಮನೆ'ಯಲ್ಲಿ ಹಲವು ಮಿತ್ರರೊಡನೆ ಬಂದು ಪರಿಷತ್ತಿನ ಪರವಾಗಿ ಗೌರವವನ್ನು ಸಲ್ಲಿಸಿದರು.

ಜಾತಕ

ತಾರೀಖು ೨೪–೧೧–೧೯೧೭

ಶ್ರೀ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ವರ್ಷಂಗಳು ೧೮೩೯ಕ್ಕೆ ಸರಿಯಾದ ಶ್ರೀ ಪಿಯಂಗಳ ನಾಮ ಸಂವತ್ಸರದ ಕಾರ್ತಿಕ ಶುದ್ಧ ದಶಮಿ ೧೦ ಶನಿವಾರ ೬–೧೦ ಉಭಾ ೪೦–೫೫ ವಜ್ರ ೧೮–೫೨ ಗರ ೬–೧೦ ದಿವಿ ೭–೨೨ ಧನು ರಾಯನ ಗತೋ ರವಿಃ ೨೬–೩೮ ಜ್ಯೇ ೩ ಬು ೧೦ ಸ್ಮಾರ್ತಾನಾಯೇಕಾದಶಿ ಭೀಷ್ಮ ಪಂಚಕ ವ್ರತಂ ವೇದನಿಧಿ ತೀರ್ಥಾನಾಂ ಪುಣ್ಯದಿನಂಭು ೧–೩೦ ಚ ೮ ಏಷು ಶುಭ ದಿನೇ ರಾತ್ರೌ ಜನನ ಕಾಲ ೨ ಯರಡು ಘಂಟೆ ಸಮಯೆ ರಾಜೇಶ್ರೀ ಶ್ರೀನಿವಾಸರಾವ್ ಧರ್ಮಪತ್ನ್ಯಾಂ ರುಕ್ಮಿಣೆಮ್ಮ ಗರ್ಭಪಯೋನಿಧೌ ಪುತ್ರರತ್ನಮಭೂತ್ ರಾ॥ ರಾಮರಾವ್ ಜನ್ಮ ಪತ್ರಿಕಾಃ

ತತ್ಕಾಲ ಗ್ರಹಸಂಪತ್ತಿಃ
ರೇವತಿ ೧ನೇ ಪಾದ

ಚಂದ್ರ		ವ. ಗುರು	ಕೇತು
	ರಾಶಿ ಕುಂಡಲಿ		ಶನಿ
			ಕುಜ
ಶುಕ್ರ ರಾಹು	ಬುಧ ರವಿ		ಲ

ತಿದ್ದುಪಡಿ

೧ ೩೬೨ನೆಯ ಪುಟದ ೮ನೆಯ ಸಾಲಿನಲ್ಲಿ 'ವೆಂಕಟಮಖಿ (?)' ಎಂದಿದೆ. ಅದನ್ನು 'ವೆಂಕಟಮಖಿ' ಎಂದು ಓದಿಕೊಳ್ಳಬೇಕು. ಈ ದೋಷಕ್ಕಾಗಿ ವಿಷಾದಿಸಲಾಗಿದೆ.

೨ ಇದರಲ್ಲಿರಬಹುದಾದ ಅಚ್ಚಿನ ದೋಷಗಳ ಪಟ್ಟಿಯನ್ನು ಕೊಡಬೇಕಾಗಿತ್ತು. ಸಮಯಾಭಾವದಿಂದ ಕೊಡಲಾಗಲಿಲ್ಲ. ಸಂಪಾದಕವರ್ಗ ಇದಕ್ಕಾಗಿ ಕ್ಷಮೆಯನ್ನು ಯಾಚಿಸುತ್ತದೆ.

೩ 'ರಾಸರವರ ಪ್ರಕಟಿತ ಕೃತಿಗಳು' ಎಂಬ ಪಟ್ಟಿಯಲ್ಲಿ ೧೭, ೨೦, ೨೧, ೨೨, ೨೩, ೨೪, ೨೫ ಮತ್ತು ೨೯ನೆಯ ಕ್ರಮ ಸಂಖ್ಯೆಗಳ ಪ್ರಕಟಣೆಗಳು ಡೆಮ್ಮಿ ಅಷ್ಟದಲಾಕಾರಗಳಲ್ಲಿ ಅಚ್ಚಾಗಿವೆ. ಉಳಿದವುಗಳೆಲ್ಲವೂ ಕಿರೀಟ ಅಷ್ಟದಲಾಕಾರದಲ್ಲಿವೆ.

೪ ರಾಸರ ಅಪ್ರಕಟಿತ ಕೃತಿಗಳೆಲ್ಲವೂ ಫೂಲ್ಸ್‌ಕ್ಯಾಪ್ (೧೩ × ೮ ಅಂಗುಲದ) ಆಕಾರದಲ್ಲಿವೆ.

ಈ ಗ್ರಂಥದ ಲೇಖಕರು

ಸರ್ವಶ್ರೀ / ಶ್ರೀಮತಿ

೧ ನಿಟ್ಟೂರು ಶ್ರೀನಿವಾಸರಾವ್, ಕರ್ನಾಟಕದ ಮುಖ್ಯ ನಾಯಾಧೀಶರು (ನಿವೃತ್ತ) ೪೯, ದಕ್ಷಿಣ ಅಡ್ಡರಸ್ತೆ, ಬಸವನಗುಡಿ, ಬೆಂಗಳೂರು–೪

೨ ದಿ. ಪದ್ಮಭೂಷಣ ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್, ಮಹಾ ವೀಣಾ ಪ್ರವೀಣರು, ೫೧, ೪ನೆಯ ಮುಖ್ಯರಸ್ತೆ, ಮಲ್ಲೇಶ್ವರ ಪಶ್ಚಿಮ, ಬೆಂಗಳೂರು–೫೫

೩ ಜಿ. ನಾರಾಯಣ, ಬೆಂಗಳೂರು ನಗರ ಪಾಲಿಕೆಯ ಮಾಜಿ ಮೇಯರರು ಮತ್ತು ಕನ್ನಡ ಸಾಹಿತ್ಯಪರಿಷತ್ತಿನ ಮಾಜಿ ಅಧ್ಯಕ್ಷರು, ೩, ೧೦ನೆಯ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು–೧೯

೪ ಪ್ರೊ॥ ಜಿ. ಅಶ್ವತ್ಥ ನಾರಾಯಣ (ಅನಾಜಿ), ನಿವೃತ್ತ ಕನ್ನಡ ಪ್ರಾಧ್ಯಾಪಕರು, ೯೫, ೩೪ನೆಯ 'ಬಿ' ಅಡ್ಡರಸ್ತೆ, ೧೬ನೆಯ ಮುಖ್ಯರಸ್ತೆ, ೪ನೆಯ 'ಟಿ' ಬ್ಲಾಕ್, ಜಯನಗರ, ಬೆಂಗಳೂರು

೫ ಪ್ರೊ॥ ಎಸ್. ಶ್ರೀನಿವಾಸನ್, ನಿವೃತ್ತ ಕನ್ನಡ ಪ್ರಾಧ್ಯಾಪಕರು, ೮೦/೬, 'ರೋಹಿಣಿ' (ಮಹಡಿ), ೬ನೆಯ ಮುಖ್ಯರಸ್ತೆ, ೧೮ನೆಯ ಅಡ್ಡರಸ್ತೆ, ಮಲ್ಲೇಶ್ವರ ಬೆಂಗಳೂರು–೫೫

೬ ಭಾರತಿ ಕಾಸರಗೋಡ್, ಲೇಖಕಿ, ೪೦, ೪ನೆಯ ಮುಖ್ಯರಸ್ತೆ ೭ನೆಯ 'ಎ' ಅಡ್ಡ ರಸ್ತೆ, ಆರ್.ಪಿ.ಸಿ. ಲೇ ಔಟ್, ವಿಜಯನಗರ ೨ನೆಯ ಹಂತ, ಬೆಂಗಳೂರು–೪೦

೭ ಸಮೇತನಹಳ್ಳಿ ರಾಮರಾಯ, ೫೧೮, 'ಕೋಟೆಮನೆ' ೪ನೆಯ ಮುಖ್ಯರಸ್ತೆ, ಗೋಕುಲ ೩ನೆಯ ಹಂತ, ಮೈಸೂರು–೨

ವ್ಯಕ್ತಿದರ್ಶನ

೮ ಡಾ ॥ ಪು. ತಿ. ನರಸಿಂಹಾಚಾರ್ (ಪುತಿನ), ಪ್ರಸಿದ್ಧ ಕವಿಗಳು, ೧೧ನೆಯ ಮುಖ್ಯ ರಸ್ತೆ, ೫ನೆಯ ಬ್ಲಾಕ್, ಜಯನಗರ, ಬೆಂಗಳೂರು ೪೧

೯ ಡಾ॥ ದೇ. ಜವರೇಗೌಡ, (ದೇಜಗೌ) ನಿವೃತ್ತ ಕುಲಪತಿಗಳು, ೪೯/೨, ೩ನೆಯ ಬ್ಲಾಕ್, ೫ನೆಯ ಮುಖ್ಯರಸ್ತೆ, ಜಯಲಕ್ಷ್ಮೀಪುರ, ಮೈಸೂರು ೧೨,

೧೦ ಡಾ ॥ ಟಿ. ವಿ. ವೆಂಕಟಾಚಲಶಾಸ್ತ್ರೀ, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕರು. 'ಬ್ರಾಹ್ಮೀ', ೯೮-ಬಿ, ಆಶ್ರಮದ ರಸ್ತೆ, ೩ನೆಯ ಬ್ಲಾಕ್, ಜಯಲಕ್ಷ್ಮೀಪುರ, ಮೈಸೂರು-೧೨

೧೧ ಸಿ. ಕೆ. ನಾಗರಾಜರಾವ್, ಪ್ರಸಿದ್ಧ ಸಾಹಿತಿಗಳು, ೭/೬೧/೨, 'ಮಂದಾರ' ೧ನೆಯ ಮುಖ್ಯ ರಸ್ತೆ, ಪದ್ಮನಾಭನಗರ, ಬೆಂಗಳೂರು-೧೦

೧೨ ಸೀತಾರಾಮ ಜಾಗೀರ್‌ದಾರ್, 'ಕಲ್ಪ', ೪೦೬, ೩ನೆಯ ಮುಖ್ಯ ರಸ್ತೆ, ಸರಸ್ವತೀ ಪುರ, ಮೈಸೂರು–೯

೧೩ ನಾರಾಯಣರಾವ್ ಕುಲಕರ್ಣಿ (ಎನ್ಕೆ), 'ಪರಿಮಳ', ೧, ಗುಡ್‌ಷೆಡ್ ರಸ್ತೆ, ಧಾರವಾಡ–೧

೧೪ ಎನ್. ಬಸವಾರಾಧ್ಯ, ಕನ್ನಡ–ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರು, ೭೪೩, ೩ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು–೧೦

೧೫ ರಘುಸುತ (ಕೆ. ಆರ್. ರಂಗಾಚಾರ್), ಲೇಖಕರು, ೭, ಪುಲಿಕೇಶಿ ರಸ್ತೆ, ೧ನೆಯ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು–೨೨

೧೬ ವಿದುಷಿ ತಿರುಮಲೆ ಶಾರದಾ, ನಿವೃತ್ತ ಸಂಗೀತ ಪ್ರಾಧ್ಯಾಪಕರು, ೬೩, ಮೊದಲನೆಯ 'ಡಿ' ಕ್ರಾಸ್, ರೆಂಕೋ ಲೇಔಟ್, ವಿಜಯನಗರ, ಬೆಂಗಳೂರು–೪೦

೧೭ ಶಕುಂತಲಾಬಾಯಿ ಪಾಂಡುರಂಗರಾವ್, ಗಮಕ ವಿದುಷಿ, ೮೨೫, 'ಕುಮಾರವ್ಯಾಸ ಕೃಪಾ', ೨ನೆಯ ಹಂತ, 'ಇ' ಬ್ಲಾಕ್, ಮೂರನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು–೧೦

೧೮ ಡಾ॥ ಎಚ್. ಎ. ಪಾರ್ಶ್ವನಾಥ್, ಪೆಥಾಲಜಿ ಪ್ರಾಧ್ಯಾಪಕರು, ಮೈಸೂರು ಮೆಡಿಕಲ್ ಕಾಲೇಜು, ಮೈಸೂರು–೧

೧೯ ಕೆ. ಎಂ. ವಿಜಯಲಕ್ಷ್ಮಿ, ೫೯, ೪೦ನೆಯ ಅಡ್ಡರಸ್ತೆ, ೬ನೆಯ ಮುಖ್ಯ ರಸ್ತೆ, ೫ ನೆಯ ಬ್ಲಾಕ್, ಜಯನಗರ, ಬೆಂಗಳೂರು–೪೧

೨೦ ನಂ. ನಾಗಲಕ್ಷ್ಮಿ, ೨೬೨, 'ಸಂಜುಂಡ ಕೃಪ', ೬ನೆಯ ಮುಖ್ಯ ರಸ್ತೆ, ಮೈಕೋ ಲೇಔಟ್, ಬೆಂಗಳೂರು–೭೬

೨೧ ಲೀಲಾ ವೆಂಕಟೇಶ್, ೨೨೦, ಹೂಡಿ ಸ್ವೀಕರಣ ಕೇಂದ್ರ, ಹೂಡಿ, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು–೪೮

೨೨ ಎಲ್ಲೇಗೌಡ ಬೆಸಗರಹಳ್ಳಿ, ಕನ್ನಡ ಪ್ರಾಧ್ಯಾಪಕರು,ಕನಕಪುರ ರೂರಲ್ ಹೈಸ್ಕೂಲು, ಕನಕಪುರ–೫೬೨ ೧೧೭

೨೩ ಕೃ. ರಾಮಚಂದ್ರ, ಎಂಜಿನಿಯರ್, ೧೩೧೫/೨, ೪ನೆಯ ಅಡ್ಡರಸ್ತೆ, ಕೃಷ್ಣಮೂರ್ತಿ ಪುರ, ಮೈಸೂರು–೪

೨೪ ಡಾ॥ ಎಸ್. ವಿ. ರಾಮರಾವ್, ನಿವೃತ್ತ ಉಪನಿರ್ದೇಶಕರು, ಆರೋಗ್ಯ ಇಲಾಖೆ, 'ಪ್ರಯಾಗ', ೭೨/೪, ೫ನೆಯ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೧೮

೨೫ ಬೇ. ಸೇ. ಜಗನಾಥ್, ವೈದ್ಯರು, ನ್ಯಾಷನಲ್ ಫಾರ್ಮಸಿ, ಗಾಂಧಿವೃತ್ತ ಹಾಸನ

೨೬ ವಿ. ಜಿ. ಕೃಷ್ಣಮೂರ್ತಿ, ಕನ್ನಡ ಲೇಖಕರು, ೨೫, 'ಕೃಷ್ಣಾಲಯ', ೧೨ ನೆಯ ಅಡ್ಡಬೀದಿ, ೬ ನೆಯ ದೊಡ್ಡಬೀದಿ, ವಾಣೀವಿಲಾಸ ಮೊಹಲ್ಲ, ಮೈಸೂರು–೨

೨೭ ಎಚ್. ನಂಜೇಗೌಡ, ನಿವೃತ್ತ ಕನ್ನಡ ಪ್ರವಾಚಕರು, ಹಾರೋಹಳ್ಳಿ, ಪಾಂಡವಪುರ
೨೮ ಡಾ|| ಸಿ. ಅಚ್ಯುತನ್, ಆರೋಗ್ಯ ಇಲಾಖೆಯ ನಿವೃತ್ತ ಉಪನಿರ್ದೇಶಕರು, 'ಆಂಡಾಳ್ ಕೃಪಾ', ೧೨೩೦, ೧೭ ನೆಯ ಅಡ್ಡರಸ್ತೆ, ವಿಜಯನಗರ ಬಡಾವಣೆ, ಬೆಂಗಳೂರು–೪೧
೨೯ ಎಂ. ಎನ್. ವ್ಯಾಸರಾವ್, ಸಾಹಿತಿಗಳು, 'ಚೈತ್ರ', ೫ನೆಯ ಬ್ಲಾಕ್, ಬನಶಂಕರಿ ೩ನೆಯ ಹಂತ (ಕತ್ತರಿಗುಪ್ಪೆ), ಬೆಂಗಳೂರು–೨೫
೩೦ ಕೆ. ಅನಂತರಾಮಯ್ಯ, ವಕೀಲರು, ವಿದ್ಯಾಭವನ, ಅಂಚೆಪೆಟ್ಟಿಗೆ ೧೨೯, ಬಸ್ ಸ್ಟಾಂಡ್ ರಸ್ತೆ, ಹಾಸನ–೫೭೩೨೦೧
೩೧ ರುಕ್ಮಿಣಿ ಉಡುಪ, ಜಾನಪದ ಸಂಗ್ರಾಹಕಿ, ಮಧುಶ್ರೀ ನಿಲಯ, ಶಂಕರಿಪುರ ಉತ್ತರ ಬಡಾವಣೆ, ಹಾಸನ–೫೭೩೨೦೧
೩೨ ಕೆ. ಗೋಪೀನಾಥಶರ್ಮ, ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ೫೫, ೧೦ ನೆಯ ಅಡ್ಡರಸ್ತೆ, ೨ನೆಯ ಮುಖ್ಯರಸ್ತೆ, 'ಎಂ' ಬ್ಲಾಕ್, ಕುವೆಂಪುನಗರ, ಮೈಸೂರು–೨೦
೩೩ ಇಂದಿರಾ ಗೋಪಿನಾಥ್, ವಿಳಾಸ ಮೇಲಿನದೇ
೩೪ ಅರುಣ ಹರ್ಷವರ್ಧನ, ಲೇಖಕಿ, 'ಕೋಟೆಮನೆ', ೫೧೮, ನಾಲ್ಕನೆಯ ದೊಡ್ಡ ಬೀದಿ, ಗೋಕುಲ ಮೂರನೆಯ ಹಂತ, ಮೈಸೂರು–೨
೩೫ ಭಾರತಿ ಕಾಸರಗೋಡ್, ಲೇಖಕಿ, ೪೦, ಏಳನೆ ಮುಖ್ಯರಸ್ತೆ, 'ಎ' ಕ್ರಾಸ್, ಆರ್. ಪಿ. ಸಿ. ಲೇಔಟ್, ವಿಜಯನಗರ ಎರಡನೆಯ ಹಂತ, ಬೆಂಗಳೂರು–೪೦
೩೬ ಜಿ. ರವಿ, ಎಂಜಿನಿಯರ್, ವಿಳಾಸ, ಕ್ರಮಸಂಖ್ಯೆ–೩೨ ರದಂತೆ
೩೭ ಸರಸ್ವತಿ ಜಿ. ರವಿ, ವಿಳಾಸ, ಮೇಲನದೇ
೩೮ ಎಸ್. ಕೆ. ಯಶೋವರ್ಧನ, ಶಿಲ್ಪಶಾಸ್ತ್ರದ ವಿದ್ಯಾರ್ಥಿ, ೫೧೮, 'ಕೋಟೆಮನೆ', ೪ನೆಯ ಮುಖ್ಯರಸ್ತೆ, ಗೋಕುಲ ಮೂರನೆಯ ಹಂತ, ಮೈಸೂರು–೨
೩೯ ಎಸ್. ಕೆ. ತೇಜೋವರ್ಧನ, ಪ್ರೌಢಶಾಲಾ ವಿದ್ಯಾರ್ಥಿ, ವಿಳಾಸ ಮೇಲಿನದೇ

ಕೃತಿದರ್ಶನ

೧ ಪ್ರೊ|| ಎಲ್.ಎಸ್. ಶೇಷಗಿರಿರಾವ್, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, 'ಜ್ಯೋತಿ', ೨೬೭, ಮೂರನೆಯ ಬ್ಲಾಕ್, ಜಯನಗರ, ಬೆಂಗಳೂರು–೧೧
೨ ಪ್ರೊ|| ಜಿ. ಅಶ್ವತ್ಥನಾರಾಯಣ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ೯೫, ೩೪ನೆಯ 'ಬಿ' ಅಡ್ಡರಸ್ತೆ, ೧೯ನೆಯ ಮುಖ್ಯ ರಸ್ತೆ, ೪ನೆಯ 'ಟಿ' ಬ್ಲಾಕ್, ಜಯನಗರ, ಬೆಂಗಳೂರು
೩ ಎಂ. ಆರ್. ಸುನಂದಾ, ೧೬, ೬ನೆಯ ಕ್ರಾಸ್, ಈಜುಕೊಳದ ಬಡಾವಣೆ, ಮಲ್ಲೇಶ್ವರ, ಬೆಂಗಳೂರು–೩

೪ ಡಾ॥ ಪ್ರಧಾನ್ ಗುರುದತ್ತ, ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬

೫ ಆಶಾ ಹೆಗಡೆ, ಲೇಖಕಿ, ಶಕ್ತಿವೀಕ್ಲಿ, ೩೮೬, ಸ್ಯಾಟಲೈಟ್‌ಟೌನ್,೩ನೆಯ ಅಡ್ಡರಸ್ತೆ, ೫ನೆಯ ಮುಖ್ಯ ರಸ್ತೆ, ಕೆಂಗೇರಿ, ಬೆಂಗಳೂರು–೬೦

೬ ಪ್ರೊ॥ ದೊಡ್ಡರಂಗೇಗೌಡ, ಕನ್ನಡ ಪ್ರಾಧ್ಯಾಪಕರು, ೯೮೧, 'ಶ್ರೀಸನ್ನಿಧಿ', ೨ನೆಯ ಕ್ರಾಸ್, ಡಾ॥ ಮಾಸ್ತಿ ರಸ್ತೆ, ಗವೀರಪುರ ಬಡಾವಣೆ, ಬೆಂಗಳೂರು–೧೯

೭ ಡಾ॥ ಟಿ. ಎನ್. ನಾಗರತ್ನ, ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬

೮ ಪ್ರೊ॥ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ), ಲೇಖಕರು, ೪೧, ೬ನೆಯ ಮುಖ್ಯರಸ್ತೆ, ಸರಸ್ವತೀಪುರ, ಮೈಸೂರು–೯

೮ ವೈ. ಎಸ್. ಶಿವಪ್ರಸಾದ್, ಕನ್ನಡ ಅಧ್ಯಾಪಕರು, ಕ್ರೈಸ್ಟ್ ಕಾಲೇಜು, ಬೆಂಗಳೂರು–೨೯

೧೦ ಜಿ. ಬ್ರಹ್ಮಪ್ಪ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ೯ ಎ ಕ್ರಾಸ್, ವಿನಯ ಮಾರ್ಗ, ಸಿದ್ಧಾರ್ಥನಗರ, ಮೈಸೂರು–೧೧

೧೧ ಡಾ॥ ಎಂ. ಎ. ಜಯಚಂದ್ರ, ಕನ್ನಡ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು, 'ಧವಳಶ್ರೀ', ೩೧೭,೭ನೆಯ 'ಬಿ' ಮುಖ್ಯ ರಸ್ತೆ, ೩ನೆಯ ೧ 'ಎ' ತಿರುವು, ಒಂದನೆಯ ಬ್ಲಾಕ್, ಎಚ್. ಆರ್. ಬಿ. ಆರ್. ಲೇಔಟ್, ಕಲ್ಯಾಣನಗರ, ಬೆಂಗಳೂರು–೪೩

೧೨ ವಿದ್ಯಾಬೊಮ್ಮನಹಳ್ಳಿ, ಲೇಖಕಿ, ಸಾಗರ, ಶಿವಮೊಗ್ಗಜಿಲ್ಲೆ

೧೩ ಪ್ರೊ॥ ಕೆ. ನಾಗೇಂದ್ರಪ್ಪ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ೯೩, ೪ನೆಯ ಮುಖ್ಯ ರಸ್ತೆ, ಸರಸ್ವತಿಪುರ, ಮೈಸೂರು–೯

೧೪ ಶಕುಂತಳಾ ಪ್ರಸಾದ್, ೯೧, ೩ನೆಯ ಅಡ್ಡರಸ್ತೆ, ಗವೀಪುರದ ಹರವು, ಬೆಂಗಳೂರು–೧೯

೧೫ ಎಂ. ಆರ್. ಸುನಂದಾ, ನೋಡಿ ಕ್ರಮಸಂಖ್ಯೆ ೩

೧೬ ಕೆ. ರಾಜೇಶ್ವರಿಗೌಡ, ಕನ್ನಡ ಪ್ರವಾಚಕರು–ನೋಡಿ ಕ್ರಮಸಂಖ್ಯೆ ೬

೧೭ ಡಾ॥ ಟಿ. ಎಂ. ಸರಸ್ವತಿ, ೪೮, 'ವಂದನ', ಮಾರುತಿ ದೇವಸ್ಥಾನದ ರಸ್ತೆ, ಸರಸ್ವತಿಪುರ, ಮೈಸೂರು–೯

೧೮ ಶಾಂತಾ ನಾಗರಾಜ್, ಲೇಖಕಿ, ೧೬೧/ಎ, ೧೬, ೭ನೆಯ ಕ್ರಾಸ್, ಒಂದನೆಯ ಎನ್ ಬ್ಲಾಕ್, ರಾಜಾಜಿನಗರ, ಬೆಂಗಳೂರು–೧೦

೧೯ ಲೀಲಾಸಂಪಿಗೆ, ಲೇಖಕಿ, ೨೬೩, ೬ನೆಯ ಮುಖ್ಯರಸ್ತೆ, ಮೈಕೋ ಲೇಔಟ್, ಬಿ.ಟಿ.ಎಂ. ೨ ನೆಯ ಹಂತ, ಬೆಂಗಳೂರು–೭೬

೨೦ ವಿದ್ವಾನ್ ಟಿ. ಕೇಶವ ಭಟ್ಟರು, ನಿವೃತ್ತ ಕನ್ನಡ ಪ್ರಾಧ್ಯಾಪಕರು, ೭೬೪,

೧೫ ನೆಯ ಮುಖ್ಯರಸ್ತೆ, ಎರಡನೆಯ ಹಂತ, ಬನಶಂಕರಿ, ಬೆಂಗಳೂರು–೭೮

೨೧ ಡಾ॥ ಸಿ. ಪಿ. ಕೃಷ್ಣಕುಮಾರ್, ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬

೨೨ ಚಂದ್ರಮತಿ ಸೋಂದಾ, ಲೇಖಿಕಿ, ೫೫೧/ಎಸ್, 'ಚಿಂತನ', ೨೪ನೆಯ ತಿರುವು, ಹೆಬ್ಬಾಳು ೨ನೆಯ ಹಂತ, ಹಿನಕಲ್ ಅಂಚೆ, ಮೈಸೂರು-೧೭

೨೩ ಪ್ರೊ॥ ಡಿ. ಲಿಂಗಯ್ಯ, ಪ್ರಾಂಶುಪಾಲರು, ೬೯೦, ೧ನೆಯ 'ಬಿ' ಮುಖ್ಯರಸ್ತೆ, ೭ನೆಯ ಬ್ಲಾಕ್, ೨ನೆಯ ಹಂತ, ಬನಶಂಕರಿ ೨ನೆಯ ಹರವು, ಬೆಂಗಳೂರು–೮೫

೨೪ ಡಾ॥ ವಿಜಯ ಹರನ್, ಆಕಾಶವಾಣಿ ನಿವೃತ್ತ ಕಾರ್ಯಕ್ರಮಾಧಿಕಾರಿಗಳು, ೩೦೫ಜಿ, ೫ ನೆಯ 'ಎ' ಅಡ್ಡರಸ್ತೆ, ಗೋಕುಲ ಪಾರ್ಕ್‌ರಸ್ತೆ, ಗೋಕುಲ, ಮೈಸೂರು–೨

೨೫ ಗರುಡನಗಿರಿ ನಾಗರಾಜ, ನಿವೃತ್ತ ಪತ್ರಿಕೋದ್ಯಮಿಗಳು, ೩, ೨ನೆಯ ಮುಖ್ಯ ರಸ್ತೆ, ೩ನೆಯ ಹಂತ, ಜೆ. ಪಿ. ನಗರ, ಬೆಂಗಳೂರು–೭೮

೨೬ ಶ್ರೀನಿವಾಸ ಉಡುಪ, ಕಾದಂಬರಿಕಾರರು, ಸಾಗರ, ಶಿವಮೊಗ್ಗ ಜಿಲ್ಲೆ

೨೭ ಡಿ. ಭರತ್, ಕನ್ನಡ ಉಪನ್ಯಾಸಕರು, ನೋಡಿ ಕ್ರಮಸಂಖ್ಯೆ ೬

೨೮ ಡಾ॥ ಎಚ್. ಎಸ್. ವೆಂಕಟೇಶಮೂರ್ತಿ, ಕನ್ನಡ ಪ್ರಾಧ್ಯಾಪಕರು ೩೦, 'ಸಂಕಲ್ಪ', ಪುಷ್ಪಗಿರಿ ನಗರ, ಹೊಸ ಹಳ್ಳಿ, ಬೆಂಗಳೂರು–೮೫

೨೯ ಡಾ॥ ಕೆ. ಆರ್. ಸಂಧ್ಯಾರೆಡ್ಡಿ, 'ಸಮಯ' ೧೦೪೪, ೪ನೆಯ ಮೇಯಿನ್, ೮ನೆಯ ಅಡ್ಡರಸ್ತೆ, ಶ್ರೀನಿವಾಸ ನಗರ, ಬೆಂಗಳೂರು–೫೦

೩೦ ವಿದ್ವಾನ್ ಎನ್. ರಂಗನಾಥಶರ್ಮ, ಗ್ರಂಥಕರ್ತರು, ಶ್ರೀ ಜಾನಕೀಕೃಪ, ೮೩೧, ೪ನೆಯ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು–೪೦

೩೧ ಬಿ. ವಿ. ಕೆ. ಶಾಸ್ತ್ರೀ, ವಿಮರ್ಶಕರು, ೯೯/೨, ೨ನೆಯ ಮುಖ್ಯ ರಸ್ತೆ, ಶೇಷಾದ್ರಿ ಪುರ, ಬೆಂಗಳೂರು–೩೦

ಸನ್ಮಾನ್ಯ ಮಿತ್ರರಾದ ಸಮೇತನಹಳ್ಳಿ ರಾಮರಾಯರಿಗೆ ಎಂಭತ್ತು ವರ್ಷ ತುಂಬುವ ಶುಭಸನ್ನಿವೇಶದಲ್ಲಿ ಅವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಏರ್ಪಡಿಸ ತೊಡಗಿರುವುದು ಅತ್ಯಂತ ಉಚಿತವೇ ಆಗಿದೆ. ಅವರದು ಎಲ್ಲಾ ದೃಷ್ಟಿಯಿಂದಲೂ ಸಾರ್ಥಕ ಜೀವನ. ಅದರಲ್ಲೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರಿಂದ ಲಭಿಸಿದ ಕೊಡುಗೆ ಮಹತ್ತರವಾದುದು. ಬಾಲ್ಯದಿಂದ ಅವರ ಒಲವು ನೈಜವಾಗಿ ಸಾಹಿತ್ಯಕ್ಷೇತ್ರದ ಮೇಲೆಯೇ ಹುಟ್ಟಿಬೆಳೆದು ಬಂದಿದೆ. ಅವರ ಕನ್ನಡ ಸಾಹಿತ್ಯ ಪ್ರೇಮ ಅವರು ಕಾಲೇಜಿನಲ್ಲಿ ಸಾಹಿತ್ಯ ಅಭ್ಯಸಿಸಿ ಪದವಿ ಪಡೆಯಬೇಕೆಂಬ ಆಸೆಯನ್ನು ಸ್ವಾಭಾವಿಕ ವಾಗಿ ಹುಟ್ಟಿಸಿತು. ಆದರೆ ಅವರ ಕೌಟುಂಬಿಕ ಪರಿಸ್ಥಿತಿಯ ಕಾರಣದಿಂದ ಸಾಧ್ಯ ವಾಗಲಿಲ್ಲ. ಆದರೂ ಅವರು ನಮ್ಮ ಪ್ರಾಚೀನ ಸಾಹಿತ್ಯವನ್ನು ಪ್ರಚಲಿತ ಸಾಹಿತ್ಯವನ್ನು ಅದರ ಅಂಗಗಳಾದ ವ್ಯಾಕರಣ, ಛಂದಸ್ಸು ಅಲಂಕಾರ ಮುಂತಾದ ಶಾಸ್ತ್ರಗಳನ್ನು ಅಭ್ಯಸಿಸಿ ಅವುಗಳಲ್ಲಿ ಪಾರಂಗತರಾದರು. ಕಾವ್ಯ ಮೊದಲುಗೊಂಡು ವಿವಿಧ ಪ್ರಕಾರ ಗಳ ಗ್ರಂಥರಚನೆ ಮಾಡತೊಡಗಿದರು. ಇವೆಲ್ಲ ಅತ್ಯುತ್ತಮ ಗುಣಮಟ್ಟದ್ದಾಗಿದ್ದು ಜನರ ಮನ್ನಣೆಗೂ ವಿದ್ವಾಂಸರ ಹಾಗೂ ಹಿರಿಯ ಸಾಹಿತಿಗಳ ಪ್ರಶಂಸೆಗೂ ಪಾತ್ರ ವಾದುದಲ್ಲದೆ, ಇವುಗಳಲ್ಲಿ ಕೆಲವು ಶಾಲಾಮಟ್ಟದಲ್ಲಿ ಅಲ್ಲದೆ, ಕಾಲೇಜು ಮಟ್ಟದಲ್ಲಿಯೂ ಪಠ್ಯಪುಸ್ತಕಗಳಾಗಿ ಗೊತ್ತಾದುವು.

ನಿಟ್ಟೂರು ಶ್ರೀನಿವಾಸರಾವ್

'ಕೋಟೆ ಮನೆ'ಯನ್ನು ಓದಿದಾಗ, ರಾಮರಾಯರ ವ್ಯಕ್ತಿತ್ವದ ಅನೇಕ ಮುಖಗಳು ನನಗೆ ಕಂಡುಬಂದವು. ಜೀವನದಲ್ಲಿ ಎಂತೆಂತಹ ಕಷ್ಟ ಕೋಟಲೆಗಳನ್ನನುಭವಿಸಿ ಅವರು ಮುಂದೆ ಬಂದರು, ಸ್ವಂತ ವ್ಯವಸಾಯದಿಂದ ಸಾಹಿತ್ಯ ಕ್ಷೇತ್ರದಲ್ಲಿ ಎಂತಹ ವಿಶಿಷ್ಟಸ್ಥಾನವನ್ನು ಪಡೆದುಕೊಂಡರು ಇವೆಲ್ಲ ವಿಷಯಗಳು ವಿಶದವಾಗಿ ನನಗೆ ತಿಳಿದು ಬಂದು, ಅವರ ವ್ಯಕ್ತಿತ್ವದ ಬಗ್ಗೆ ನನಗಿದ್ದ ಗೌರವ ಇಮ್ಮಡಿಯಾಯಿತು.

ಈ ಗ್ರಂಥದಲ್ಲಿ ಅನೇಕ ಹಿರಿಯ ಸಾಹಿತಿಗಳು, ವಿದ್ವಾಂಸರು, ರಾಯರ ಆತ್ಮೀಯರು ಮತ್ತು ಬಂಧುಗಳು ರಾಯರ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಈ ಹಿರಿಯ ಸಾಹಿತಿ ಎಷ್ಟೊಂದು ಜನರ ಅಭಿಮಾನವನ್ನು ಗಳಿಸಿಕೊಂಡಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅಷ್ಟೇ ಅಲ್ಲ, ಅವರ ವಿಶಿಷ್ಟ ವ್ಯಕ್ತಿತ್ವಕ್ಕೆ ಈ ಲೇಖನಗಳು ಕನ್ನಡಿ ಹಿಡಿದಂತಿವೆ.

ಡಾ ॥ ವಿ. ದೊರೆಸ್ವಾಮಿ ಅಯ್ಯಂಗಾರ್

ರಾಸ ಪ್ರಕಾಶನ

೫೧೧೮, 'ಕೋಟೆ ಮನೆ', ೪ನೆಯ ಮುಖ್ಯ ರಸ್ತೆ

ಗೋಕುಲ ೩ನೆಯ ಹಂತ, ಮೈಸೂರು ೫೭೦ ೦೦೨